ಅನಾಥ ಮುತ್ತು
ಪ್ರವಾದಿ ಮುಹಮ್ಮದ್(ಸ)

ಮಾಹಿರುಲ್ ಕಾದಿರೀ

ಪರಮ ದಯಾಮಯನೂ ಕೃಪಾಶೀಲನೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪ್ರವಾದಿ ಮುಹಮ್ಮದ್(ಸ) ಅವರ ಕುರಿತು ಬರೆಯಲಾದಷ್ಟು ಈ ಲೋಕದಲ್ಲಿ ಬೇರಾವ ವ್ಯಕ್ತಿಯ ಕುರಿತೂ ಬರೆಯಲಾಗಿಲ್ಲ. ಒಂದು ಪುಟದಿಂದ ಹಿಡಿದು ಸಾವಿರ ಸಾವಿರ ಪುಟಗಳನ್ನು ಮೀರಿದ ಅವರ ಜೀವನ ಚರಿತ್ರೆ, ಅವರ ಬದುಕಿನ ವಿವಿಧ ಮಗ್ಗುಲುಗಳು, ವಿವಿಧ ಘಟನೆಗಳನ್ನೊಳಗೊಂಡ ಕಿರು ಹೊತ್ತಿಗೆ, ಬೃಹತ್ ಗ್ರಂಥಗಳು ಲೋಕದ ನಾನಾ ಭಾಗಗಳಲ್ಲಿ ನಾನಾ ಭಾಷೆಗಳಲ್ಲಿ ಧಾರಾಳ ಲಭ್ಯವಿದೆ. ಆದರೂ ಇನ್ನೂ ಅವರ ಕುರಿತು ಬರೆದು ಮುಗಿದಿಲ್ಲ. ಹೊಸ ಹೊಸ ರೀತಿ, ಹೊಸ ಹೊಸ ಶೈಲಿ, ಹೊಸ ಹೊಸ ದೃಷ್ಟಿಕೋನಗಳಿಂದ ಬೇರೆ ಬೇರೆ ಸಾಹಿತಿಗಳು, ಬರೆಹಗಾರರು ಗ್ರಂಥಕರ್ತರು ಹಾಗೂ ಕವಿಗಳು ಅವರ ಕುರಿತು ಎಷ್ಟೇ ಬರೆದರೂ ಅವರ ಜೀವನ ವೃತ್ತಾಂತ ಮುಗಿಯಿತೆಂದಿಲ್ಲ.

'ಅನಾಥ ಮುತ್ತು' ಎಂಬ ಈ ಗ್ರಂಥವು ಪ್ರವಾದಿ ಮುಹಮ್ಮದ್(ಸ) ಅವರ ಜೀವನದ ಕುರಿತು ಒಂದು ವಿಶಿಷ್ಟವಾದ ಶೈಲಿಯಲ್ಲಿ ಕಾದಂಬರಿಯ ರೂಪದಲ್ಲಿ ಬರೆಯಲ್ಪಟ್ಟ ಕೃತಿಯಾಗಿದೆ. ಈ ಕಾದಂಬರಿ ಸ್ವರೂಪಿ ಗ್ರಂಥ'ವನ್ನು ಓದುವಾಗ ಒಂದು ವಿಶಿಷ್ಟ ರೀತಿಯ ಪ್ರವಾಹ ಓದುಗನ ಮನಮಸ್ತಿಷ್ಕಗಳಲ್ಲಿ ಮೂಡುತ್ತದೆ. ಅದು ಅವನ ಬದುಕಿಗೆ ಒಂದು ಹೊಸ ದಿಕ್ಕನ್ನು ನಿರ್ಣಯಿಸುತ್ತದೆ. ಸನ್ಮಾರ್ಗದ ಸಂಪಾದಕರಾಗಿದ್ದ ದಿ। ಇಬ್ರಾಹೀಮ್ ಸಈದ್‌ರವರು ಖ್ಯಾತ ವಿದ್ವಾಂಸ ಹಾಗೂ ಕವಿ ಮಾಹಿರುಲ್ ಕಾದಿರಿಯವರಿಂದ ರಚಿಸಲ್ಪಟ್ಟ ಇದರ ಮೂಲ ಪ್ರತಿಯನ್ನು ಉರ್ದುವಿನಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಓದಿ, ತನ್ನ ಬದುಕಿಗೆ ಹೊಸ ದಿಕ್ಕನ್ನು ನೀಡಿದ ಗ್ರಂಥವೆಂದು ಬಣ್ಣಿಸಿದ್ದಾರೆ.

ಈ ಕಾದಂಬರಿಯನ್ನು ಓದುತ್ತಾ ಹೋದಂತೆ ಇದರಲ್ಲಿ ಬರುವ ಸನ್ನಿವೇಶಗಳು, ಏರು–ತಗ್ಗುಗಳು, ಭಾವವಿಕಾರ ಇತ್ಯಾದಿಗಳು ಓದುಗನ ಮನಸ್ಸನ್ನು ಮಂತ್ರಮುಗ್ಧಗೊಳಿಸದೆ ಇರುವುದಿಲ್ಲ. ಭಾವನಾತ್ಮಕ ಸನ್ನಿವೇಶಗಳು ಕೆಲವೊಮ್ಮೆ ಓದುಗನ ಕಣ್ಣು ತೇವಗೊಳಿಸುತ್ತದೆ. ಮೂಲ ಲೇಖಕರೇ ಈ ಗ್ರಂಥವನ್ನು ಬರೆಯುವಾಗ ಮತ್ತು ಅದನ್ನು ಓದುವಾಗ ಹಲವೊಮ್ಮೆ ಅತ್ತದ್ದಿದೆಯೆಂದು ಹೇಳಿರುವುದು ಪುಸ್ತಕದ ಮಹತ್ವವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಈ ಗ್ರಂಥವು ಕನ್ನಡ ಜನತೆಯ ಮೇಲೆ ಅದೇ ರೀತಿಯ ಪ್ರಭಾವ ಬೀರಲಿ ಮತ್ತು ಅವರ ಬದುಕಿಗೊಂದು ದಾರಿದೀಪವಾಗಲಿ ಎಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಮುತ್ತು ಹೊಳೆಯುವ ಮುನ್ನ...

ಕಾದಂಬರಿಗಳು ಮತ್ತು ಕಥೆಗಳಿಗೆ ಸ್ವಯಂ ಕಲ್ಪಿತ ವಿಷಯಗಳೇ ಆಧಾರ. ಅದರಲ್ಲಿ ಸಾಹಿತಿಯು ಕಲ್ಪನೆಯ ರಂಗೋಲಿ ಬಿಡಿಸುತ್ತಾನೆ. 'ದುರ್ರೆಯತೀಮ್' (ಅನಾಥ ಮುತ್ತು) ಕೂಡ ಕಾದಂಬರಿಯ ರೂಪದಲ್ಲಿದೆ. ಆದರೆ ಈ ಕಾದಂಬರಿಯ 'ನಾಯಕ' ಸಾಮಾನ್ಯರಲ್ಲ. ಅವರು 'ಪರಿಪೂರ್ಣ ಮಾನವ'ರಾಗಿದ್ದರು. ಅವರಿಗಿಂತ ಉತ್ತಮ ವ್ಯಕ್ತಿ ಈ ಲೋಕದಲ್ಲಿ ಹುಟ್ಟಿ ಬಂದಿಲ್ಲ. ಆ ಮಹಾನ್ ವ್ಯಕ್ತಿತ್ವವು ಸಕಲ ವಿಶ್ವ ಸೃಷ್ಟಿಯ ಸಾರಾಂಶವಾಗಿದ್ದರು, ಸಕಲ ಜೀವಿಗಳ ಅಭಿಮಾನವಾಗಿದ್ದರು ಮತ್ತು ಮಾನವತೆಯ ಗೌರವವಾಗಿದ್ದರು. ಆದ್ದರಿಂದ 'ದುರ್ರೆಯತೀಮ್'ನಲ್ಲಿ, 'ವಮಾ ಯಂತಿಕು ಅನಿಲ್ ಹವಾ. ಇನ್‌ಹುವ ಇಲ್ಲಾ ವಹ್‌ಯುನ್ ಯೂಹಾ'* ಎಂಬ ಪದಕ್ಕೆ ಪೂರಕವಾಗಿಲ್ಲದಂತಹ ಯಾವೊಂದು ಪದವನ್ನೂ ಬಳಸಲಾಗಿಲ್ಲ.

ಈ ಕಾದಂಬರಿಯಲ್ಲಿ ಬರುವ ಘಟನೆಗಳು ಐತಿಹಾಸಿಕ ಆಧಾರ ಮತ್ತು ಸಾಂಪ್ರದಾಯಿಕ ಸಾಕ್ಷ್ಯಗಳನ್ನು ಹೊಂದಿವೆ. ಆದರೆ ವಾಸ್ತವ ಪ್ರಜ್ಞೆಯನ್ನು ಎಲ್ಲೂ ಕಡೆಗಣಿಸಲಾಗಿಲ್ಲ. ನಾನು ಪ್ರತಿಯೊಂದು ವಿಷಯವನ್ನೂ ಬಹಳ ಸೂಕ್ಷ್ಮವಾಗಿ ಆಧಾರ-ಪ್ರಮಾಣ ಸಹಿತ ಬರೆಯಲು ಪ್ರಯತ್ನಿಸಿದ್ದೇನೆ. ಆದರೆ ಕೆಲವು ವಿಷಯಗಳಲ್ಲಿ ಸಂದರ್ಭಾನುಸಾರ ನನ್ನ ಕಲ್ಪಿತ ಮಾತುಗಳನ್ನು ಸೇರಿಸಿದ್ದೇನೆ.

ಉದಾಹರಣೆಗೆ ಐತಿಹಾಸಿಕವಾಗಿ ಸಾಬೀತಾದ ಒಂದು ಘಟನೆ- ಅಬ್ದುಲ್ ಮುತ್ತಲಿಬ್‌ರು 'ನನಗೆ ಹತ್ತು ಮಂದಿ ಪುತ್ರರು ಜನಿಸಿದರೆ ಅವರ ಪೈಕಿ ಒಬ್ಬನನ್ನು ದೇವ ಮಾರ್ಗದಲ್ಲಿ ಬಲಿ ನೀಡುತ್ತೇನೆ' ಎಂದು ಹರಕೆ ಹೊತ್ತಿದ್ದರು. ಈ ಹರಕೆಯನ್ನು ಪೂರ್ತೀಕರಿಸಲು ಅವರು ಮುಂದಾದಾಗ ಅವರ ಪತ್ನಿಯ ತವರು ಮನೆಯವರು ಅವರನ್ನು ವಿರೋಧಿಸಿದರು. ಈ ಘಟನೆಯಲ್ಲಿ ನಡೆದ ಮಾತುಕತೆಯ ವಿವರಣೆಯು ಪ್ರಸ್ತುತ ಕೃತಿಯಲ್ಲಿ ಕಾಲ್ಪನಿಕವಾಗಿದೆ. ಅಂದರೆ ಐತಿಹಾಸಿಕ ಸಾಕ್ಷ್ಯವಿರುವ ಒಂದು ಘಟನೆಯನ್ನು ಕಾದಂಬರಿಯ ರೂಪದಲ್ಲಿ ಪ್ರಸ್ತುತ ಪಡಿಸುವಾಗ ಸ್ವಲ್ಪ ಪೂರಕ ಕಾಲ್ಪನಿಕ ವಿಷಯಗಳ ಸೇರ್ಪಡೆಯೊಂದಿಗೆ ವಿವರಣೆಯು ದೀರ್ಘಗೊಂಡಿದೆ. ಇನ್ನೊಂದರ್ಥದಲ್ಲಿ, ಇಂತಹ ಒಂದು ಸನ್ನಿವೇಶದಲ್ಲಿ ಉದ್ಭವವಾಗುವ ಮಾನಸಿಕ ತುಮುಲ ಮತ್ತು ಭಾವನಾತ್ಮಕ ಚರ್ಚೆಯಲ್ಲಿ ಈ ರೀತಿಯ ಮಾತುಗಳು

* "ಅವರು ತಮ್ಮ ಸ್ವ ಚಿತ್ತದಿಂದ ನುಡಿಯುವುದಿಲ್ಲ. ಇದು ಅವರಿಗೆ ಅವತೀರ್ಣಗೊಳ್ಳುವಂತಹ ಒಂದು 'ದಿವ್ಯವಾಣಿ' ಆಗಿದೆ." (ಪವಿತ್ರ ಕುರ್‌ಆನ್: 53: 3–4)

ಬಂದಿರಬಹುದೆಂದು ಅಂದಾಜಿಸಿ ಸತ್ಯಕ್ಕೆ ಚ್ಯುತಿ ಬಾರದಂತೆ ಸೇರಿಸಿದ್ದೇನೆ.

ಮೊಲೆ ಹಾಲೂಡಿಸುವ ಮಹಿಳೆಯರ ಮಾತುಕತೆಗಳು, ಹಲೀಮಾ ಸಅದಿಯರ ಸಂಭಾಷಣೆ ಮತ್ತು ಅವರ ಯಾತ್ರೆಯ ಸಂದರ್ಭದ ಘಟನೆಗಳ ಕುರಿತು ಐತಿಹ್ಯಗಳ ಆಧಾರದಲ್ಲಿ ಬಾಯ್ದೆರೆಯಾಗಿ ಬಂದಂತಹ ವಿವರಗಳನ್ನು ನೀಡಿದ್ದೇನೆ. ಇದಕ್ಕೂ ಇತಿಹಾಸವೇ ಆಧಾರವಾಗಿದ್ದರೂ ವಿವರಣೆಯಲ್ಲಿ ನನ್ನ ಕಲ್ಪನೆಯೂ ಸೇರಿಬಿಟ್ಟಿದೆ. ಈ ಪ್ರಕಾರದ ವಿವರಣೆ ನೀಡದೆ ಇರುತ್ತಿದ್ದರೆ ಈ ಕಾದಂಬರಿಯು ಕೇವಲ ಚರಿತ್ರೆಯ ಪ್ರಸಕ್ತವಾಗಿ ಉಳಿಯುತ್ತಿತ್ತು.

ಪ್ರವಾದಿತ್ವ ಪ್ರಾಪ್ತಿಯ ಬಳಿಕದ ಘಟನೆಗಳೆಲ್ಲವೂ ನಂಬಲರ್ಹ ಮೂಲಗಳನ್ನು ಆಧರಿಸಿವೆ. ಐತಿಹಾಸಿಕ ಗ್ರಂಥಗಳು ಇದಕ್ಕೆ ಆಧಾರವಾಗಿದೆ. ಈ ಎಲ್ಲ ಜಾಗ್ರತೆಯ ಹೊರತಾಗಿಯೂ ನನ್ನಿಂದ ತಪ್ಪುಗಳು ಸಂಭವಿಸಿರಬಹುದು. ನಾನೂ ಮಾನವನೇ ಹೊರತು, ದೇವಚರನಲ್ಲ ತಾನೇ? ಆದರೆ ಅಲ್ಲಾಹ್ ಹೃದಯದ ಸ್ಥಿತಿಯನ್ನು ಚೆನ್ನಾಗಿ ಬಲ್ಲನು. ನನ್ನಿಂದ ಸಾಧ್ಯವಿರುವಷ್ಟರ ಮಟ್ಟಿಗೆ ಕಾದಂಬರಿಯ ಸ್ವರೂಪವನ್ನು ಕಾಯ್ದುಕೊಂಡೇ ಜಾಗರೂಕತೆಯೊಂದಿಗೆ ಸತ್ಯ ಘಟನೆಯನ್ನು ನಿಮ್ಮ ಮುಂದಿಟ್ಟಿದ್ದೇನೆ.

ನನ್ನ ಹಲವಾರು ಕಥೆ-ಕಾದಂಬರಿಗಳು ಪ್ರಕಟಗೊಂಡಿವೆ. ಆದರೆ ಈ ಕಾದಂಬರಿಯು (ದುರ್ರೆ ಯತೀಮ್) ನನ್ನ ಮಟ್ಟಿಗೆ ಪರಲೋಕದ ಸಂಪತ್ತಾಗಿದೆ ಮತ್ತು ಪುಣ್ಯಕರ್ಮವಾಗಿದೆ. ಅದೆಷ್ಟೋ ಬಾರಿ ನಾನು ಇದನ್ನು ಬರೆಯುತ್ತಲೇ ನನಗರಿವಿಲ್ಲದೆಯೇ ಅತ್ತು ಬಿಟ್ಟಿದ್ದೇನೆ. ಈ ಕಂಬನಿಯೇ ನನ್ನ ಜೀವನದ ಬಂಡವಾಳ ಹಾಗೂ ನನ್ನ ಸುಖ-ಸಂತೋಷದ ಅಮೂಲ್ಯ ಉಪಾಧಿಯಾಗಿದೆ.

ಮಾಹಿರುಲ್ ಕಾದಿರೀ

ಹರಕೆ ತೀರಿಸುವ ದಿನ...

ಅಸ್ತಮಿಸುತ್ತಿರುವ ತಾರೆಗಳ ಗುಂಪಿನ ಕಡೆ ಆರುತ್ತಿರುವ ದೀಪದಿಂದ ಹೊರಡುವ ದಟ್ಟ ಹೊಗೆಯಂತಹ ಮಬ್ಬುಗತ್ತಲು. ಮುಂಬೆಳಕು ಮೂಡುವುದಕ್ಕೆ ಮುಂಚಿನ ಸಮಯ... ಕತ್ತಲು-ಬೆಳಕು ಪರಸ್ಪರ ಚೆಲ್ಲಾಟವಾಡುತ್ತಾ ಇವೆ. ಸೂರ್ಯನು ಮೂಡಣದ ಗವಾಕ್ಷಿಯಿಂದ ಇಣುಕು ಹಾಕುವುದಷ್ಟೇ ಬಾಕಿ. ಚಂದ್ರಮ-ತಾರೆಯರು ರಾತ್ರಿಯ ಪಾಳಿ ಮುಗಿಸಿ ಜಗತ್ತಿನ ಇನ್ನೊಂದು ಬದಿಗೆ ಮುಗ್ಗುಲು ಬದಲಿಸುವ ಹುನ್ನಾರದಲ್ಲಿದ್ದರು. ಅದರೊಂದಿಗೇ ರಾತ್ರಿಯ ಶೀತಲ ಕರಿ ಗಾದಿಯನ್ನು ಮಡಚುವ ಸಮಯವಾಯಿತು. ಅದರ ಮಗ್ಗುಲಿನಲ್ಲಿ ಬೆಳಕು ಹರಿಯಲು ಹವಣಿಸುತ್ತಿತ್ತು.

ಮುಂಜಾನೆಯ ತಣ್ಣಗಿನ ಮಂದ ಮಾರುತವು ದೇಹಕ್ಕೆ ಹಿತ ನೀಡುತ್ತದೆ. ಇಂತಹ ಆಹ್ಲಾದಕರ ವಾತಾವರಣದಲ್ಲಿ ದಿಂಬಿನಿಂದ ತಲೆಯೆತ್ತುವವರು ಬಹಳ ವಿರಳ. ಆ ಸಮಯದಲ್ಲಿ ಹಾಸಿಗೆಯ ಸಿಕ್ಕುಗಳು ನಿದ್ರಾಧೀನನ ರಟ್ಟೆ ಹಿಡಿದು ಹೀಗೆ ಹೇಳುತ್ತಿರುತ್ತವೆ, "ಈ ಅಪರ ವೇಳೆಯಲ್ಲಿ ಏಕಾಏಕಿ ಎದ್ದು ಹೋಗಬೇಡ. ಸೂರ್ಯ ಇನ್ನೂ ಎದ್ದಿಲ್ಲ... ಎಲ್ಲ ಕಡೆ ಅದರ ಬೆಚ್ಚಗಿನ ಪ್ರಕಾಶ ಹರಡಿದ ಮೇಲಷ್ಟೇ ಎದ್ದರಾಗದೇ? ಆರಾಮವಾಗಿ... ಮನದಣಿಯೆ ಮಗ್ಗಲು ಬದಲಿಸು, ಮತ್ತೆ ಮೆಲ್ಲನೆ ದಿಂಬು ಬಿಡದೇನೇ ಮೈಮುರಿದು ಕೋ... ಬೆಚ್ಚಗಿನ ಹಸ್ತಗಳಿಂದ ನಿದ್ರೆ ಮಂಪರಿಯಲ್ಲಿರುವ ಕಂಗಳನ್ನು ಚೆನ್ನಾಗಿ ತಿಕ್ಕು... ಅರೇ! ಎದ್ದೀಯಾ ಜೋಕೆ! ಇನ್ನೂ ಮಲಗಿಕೊಂಡಿರು... ಇದು ಏಳುವ ಸಮಯವೇನು? ರಾತ್ರಿ ಹುಟ್ಟಿದ ಮೊಗ್ಗುಗಳನ್ನು ಕೊಂಚವಾದರೂ ಬಿರಿಯಲು ಬಿಡು... ಇಬ್ಬನಿಯು ಅರೆಬಿರಿದ ಪುಷ್ಪಗಳ ಮುದ್ದು ಮುಖವನ್ನು ತೊಳೆಯಲು ಬಿಡು... ಇರು, ನಿದ್ರೆಯ ಸುಖವೇನೆಂದು ಎಚ್ಚೆತ್ತಾಗಲಷ್ಟೇ ಅರಿವಿಗೆ ಬರುವುದು... ಆ ಸುಖಾನಂದವನ್ನು ಮೊದಲು ಅನುಭವಿಸು... ಈಗಲೇ ಬಿಟ್ಟೇಳಬೇಡ.... ಕಣ್ತೆರೆಯುತ್ತಲೇ ಹಾಸಿಗೆ ಬಿಟ್ಟೇಳುವವರು ನಿದ್ರೆಯ ಪರಮ ಸುಖದಿಂದ ವಂಚಿತರಾಗಿರುತ್ತಾರೆ..."

ಇದು ಮಕ್ಕಾ ನಗರದ ಮುಂಜಾವಿನ ಮಬ್ಬುಗತ್ತಲಾಗಿತ್ತು. ಜನರೆಲ್ಲರೂ ಈ ತಂಗಾಳಿಗೆ ಬೆನ್ನು ಹಾಕಿ ಬೆಚ್ಚನೆಯ ಹಾಸಿಗೆಯಲ್ಲಿ ಮುಖ ಹುದುಗಿಸಿಕೊಂಡಿದ್ದಾರೆ. ರಾತ್ರಿಯ ನೀರವತೆಯಿನ್ನೂ ಕಳೆದಿರಲಿಲ್ಲ. ದೂರದಲ್ಲೆಲ್ಲೋ ಒಂಟೆಗಳ ಕೊರಳಗಂಟೆಯ ನಿನಾದ ಅಲೆ ಅಲೆಯಾಗಿ ತೇಲಿ ಬರುತ್ತಿದೆ... ಮೆಲುವಾದ ಅಸ್ತವ್ಯಸ್ತ ನಿನಾದ.... ಯಾರೋ

ಅನನುಭವಿ ಪೂಜಾರಿಯು ಮಂದಿರದಲ್ಲಿ ಗಂಟೆ ಬಾರಿಸುತ್ತಿರುವಂತಿತ್ತು. ಮಕ್ಕಾ ನಗರದ ಮನೆ-ಮನಗಳಲ್ಲಿ ನಿದ್ರೆಯ ಪ್ರಶಾಂತ ಮೌನ ಆವರಿಸಿದೆ. ಇಂತಹ ಸ್ಥಿತಿಯಲ್ಲಿ ಬನೂ ಹಾಶಿಮ್‌ನ ವಿಶಾಲವಾದ ಮನೆಯ ಮುಂಬಾಗಿಲ ಬಳಿ ಗಂಭೀರ ವ್ಯಕ್ತಿ ಕಪ್ಪು ಚದ್ದರ ಹೊದ್ದು ಗೋಡೆಗೊರಗಿ ನಿಂತಿದ್ದಾರೆ. ಅವರು ಗಾಢ ಆಲೋಚನೆಯಲ್ಲಿ ಬಿದ್ದಿದ್ದಾರೆ. ಹಣೆಯಲ್ಲಿ ಚಿಂತೆಯ ಗೆರೆಗಳು ಮೂಡುತ್ತಿದ್ದು, ಕ್ಷಣಕ್ಕೊಮ್ಮೆ ಹೆಚ್ಚು ಕಡಿಮೆಯಾಗುತ್ತಲಿದೆ. ಚಿಂತೆ ಮತ್ತು ಬೇಸರವು ಅವರ ಕಣ್ಣೆವೆಗಳನ್ನು ಭಾರವಾಗಿಸಿತ್ತು... ಅವರ ಕಣ್ಣಲ್ಲಿ ಒಮ್ಮೆ ಮಿಂಚು ಹರಿದಾಡಿದರೆ, ಮರುಕ್ಷಣವೇ ಅಂಧಕಾರ ಆವರಿಸುತ್ತಿತ್ತು. ಚಿಂತೆಯ ಮರವು ಗೆಲ್ಲು ಬಿಡುತ್ತಾ ವಿಶಾಲವಾಗಿ ಹರಡುತ್ತಿತ್ತು. ಅವರು ಒಮ್ಮೆಲೇ ನೆಟ್ಟಗೆ ನಿಂತರು. ತರುವಾಯ ಹಜಾರದಲ್ಲಿ ಶಥಪಥ ಹಾಕತೊಡಗಿದರು.

ಭೂಮಿಯ ಪರಿಭ್ರಮಣ ಅವ್ಯಾಹತವಾಗಿತ್ತು. ಅಬೂಕುಬೈಸ್ ಗಿರಿಯ ಶಿಖರದಲ್ಲಿ ನಿತ್ಯದಂತೆ ಸೂರ್ಯನ ಹೊಂಗಿರಣವು ಸ್ವರ್ಣಕಾವ್ಯ ಬರೆಯಿತು. ಸುಂದರ ಮುಂಜಾವಿಗೆ ಹಕ್ಕಿಪಿಕ್ಕಿಗಳು ಚಿಲಿಪಿಲಿಯ ಸ್ವಾಗತ ಕೋರಿದವು. ಆಡು-ಕುರಿಗಳು ಮೇ...ಕಾರ ಹಾಡಿದವು... ಒಂಟೆಗಳು ಕೆನೆಯ ತೊಡಗಿದುವು.... ಆದರೆ ಈ ವ್ಯಕ್ತಿ ತಮ್ಮದೇ ಚಿಂತೆಯ ಆಳ ಕಂದರದಲ್ಲಿ ಹೂತುಹೋಗಿದ್ದರು. ಆಲೋಚನೆಯ ಗಾಢತೆಯು ಅವರನ್ನು ಬೆಳ್ಳಂಜಾವಿನ ಮನಮೋಹಕ ಗದ್ದಲದಿಂದ ವಂಚಿತಗೊಳಿಸಿತ್ತು. ಮನೆಮಂದಿಯೆಲ್ಲ ಅವರನ್ನು ಆಶ್ಚರ್ಯಾತಿರೇಕದಿಂದ ನೋಡುತ್ತಿದ್ದಾರೆ. ಏನಾಗಿದೆ? ಬನೂ ಉಮಯ್ಯರೊಂದಿಗೇ ನಾದರೂ ಕಲಹವಾಯಿತೇ? ಉಮಯ್ಯ ಮತ್ತು ಹಾಶಿಮ್ ಮನೆತನದವರ ಒರೆಗಳಿಂದ ಖಡ್ಗ ಹೊರಬರಬೇಕಾದೀತೇ? ಸಿರಿಯದಿಂದ ವ್ಯಾಪಾರಿ ಸರಕು ಹೊತ್ತು ತರುತ್ತಿದ್ದ ಒಂಟೆಗಳು ದೋಚಲ್ಪಡಲಿಲ್ಲ ತಾನೇ? ಹಜ್ಜ್‌ನ ಕಾಲ ಸಮೀಪಿಸುತ್ತಿದೆ... ಬಹುಶಃ ಅದರ ವ್ಯವಸ್ಥೆಯ ಕುರಿತು ಚಿಂತಿಸುತ್ತಿದ್ದಿರಬಹುದೇ? ಅಬ್ದುಲ್ ಮುತ್ತಲಿಬ್‌ರನ್ನು ಇಷ್ಟು ಚಿಂತಿತರಾಗಿ ಯಾರೂ ಹಿಂದೆಂದೂ ಕಂಡಿರಲಿಲ್ಲ... ಇವತ್ತು ಇವರು ದಾರುನ್ನದ್ವಕ್ಕೂ ಭೇಟಿ ನೀಡಿಲ್ಲ... ಕುರೈಶ್ ಸರದಾರರು ಇವರನ್ನು ಕಾಯುತ್ತಿರಬಹುದು... ಎಲ್ಲರೂ ತಂತಮ್ಮದೇ ಅಂದಾಜಿ ನಂತೆ ತರ್ಕಿಸುತ್ತಿದ್ದರೇ ಹೊರತು, ಅಬ್ದುಲ್ ಮುತ್ತಲಿಬ್‌ರೊಡನೆ ಮಾತನಾಡುವ ಧೈರ್ಯ ಯಾರಿಗೂ ಇದ್ದಿರಲಿಲ್ಲ.

ಅಬ್ದುಲ್ ಮುತ್ತಲಿಬ್‌ರು ಹಣೆಯ ಬೆವರನ್ನೊರೆಸಿದರು. ಪದೇಪದೇ ಕೈಯ ಮುಷ್ಟಿ ಬಿಗಿದರು, ಬಿಟ್ಟರು. ತರುವಾಯ ಲುಂಗಿಯ ತುದಿಯನ್ನು ಎತ್ತಿ ಹಿಡಿದು ಹೇಳಿದರು, "ಅಬ್ದುಲ್ಲಾ ಎಲ್ಲಿ? ಅವನನ್ನು ಕರೆಯಿರಿ... ಕಅಬಾ ಗೋಡೆಯ ನೆರಳಲ್ಲಿ ಅವನನ್ನು ಬಲಿ ನೀಡುವ ಹರಕೆಯನ್ನು ಇಂದು ತೀರಿಸಬೇಕಾಗಿದೆ."

ಮನೆ ಮಂದಿಯೆಲ್ಲ ಪರಸ್ಪರ ಮುಖ ನೋಡಿಕೊಂಡರು. ಅಬ್ದುಲ್ ಮುತ್ತಲಿಬ್‌ರ ನಿರ್ಧಾರವನ್ನು ಕೇಳಿ ಒಮ್ಮೆಲೆ ಅವರೆಲ್ಲರ ಮುಖಗಳು ಬಿಳುಚಿಕೊಂಡುವು. ಮೈಯ ಶಕ್ತಿಯೆಲ್ಲ

ಉಡುಗಿಹೋದಂತೆ ಗರಬಡಿಸಿ ನಿಂತರು. ಮನೆಯ ಅಂಗಳದಲ್ಲಿ ಒಂದೆಡೆ ಒಂಟೆಯ ಜೀನುಗಳಿದ್ದುವು. ಅವುಗಳ ಹತ್ತಿರವೇ ಗೋಡೆಯ ಮೇಲೆ ದೊಡ್ಡದೊಂದು ಅಟ್ಟವಿತ್ತು. ಅಲ್ಲಿ ಮಣ್ಣಿನ ಲೋಟಗಳು, ಹಗ್ಗಗಳು, ಹುರಿದ ಧಾನ್ಯದ ಹಿಟ್ಟನ್ನಿಡುವ ಖಾಲಿ ಚೀಲಗಳು, ಲೋಹದ ಯುದ್ಧ ಕವಚ, ತುಂಡಾಗಿ ಬಿದ್ದಿರುವ ಶಿರಸ್ತ್ರಾಣಗಳು ಮತ್ತು ಕೆಲವು ಆಯುಧಗಳಿದ್ದುವು. ಅಬ್ದುಲ್ ಮುತ್ತಲಿಬ್‌ರು ಅಟ್ಟದಿಂದ ಕತ್ತಿಯೊಂದನ್ನು ಎತ್ತಿದರು. ಅದರ ಅಲಗನ್ನು ಮುಟ್ಟಿ ಪರೀಕ್ಷಿಸಿದರು. ಹರಿತವಾಗಿತ್ತು... ಆದರೂ ಲೋಹದ ತುಂಡಿಗೆ ಅದನ್ನು ಉಜ್ಜಿ ಇನ್ನಷ್ಟು ಹರಿತಗೊಳಿಸತೊಡಗಿದರು.

ನೋಡನೋಡುತ್ತಿದ್ದಂತೆಯೇ ಈ ವಿಷಯವು ಕಾಡ್ಗಿಚ್ಚಿನಂತೆ ನಗರವಿಡೀ ಹಬ್ಬಿತು... ಅಬ್ದುಲ್ ಮುತ್ತಲಿಬ್‌ರು, 'ಅಲ್ಲಾಹ್ ನನಗೆ ಹತ್ತು ಪುತ್ರರನ್ನು ಕರುಣಿಸಿದರೆ ಅವರಲ್ಲೊಬ್ಬನನ್ನು ದೇವ ಸಂಪ್ರೀತಿಗಾಗಿ ಬಲಿ ನೀಡುವೆನು' ಎಂದು ಹರಕೆ ಹೊತ್ತಿದ್ದರು... ಇಂದು ಅವರು ಆ ಹರಕೆ ತೀರಿಸುವ ಸಿದ್ಧತೆ ಮಾಡುತ್ತಿದ್ದರೆ.... ಕತ್ತಿಯ ಅಲಗನ್ನು ಹರಿತಗೊಳಿಸುತ್ತಿದ್ದಾರೆ... ಅಬ್ದುಲ್ಲಾರನ್ನು ಕರೆತರಲು ಓರ್ವನನ್ನು ಕಳುಹಿಸಲಾಯಿತು. ಹಾಶ್ಮೀ ಮನೆತನದ ಮಂದಿ ವಚನಬದ್ಧರೂ ನಿಶ್ಚಯದಾರ್ಢ್ಯರೂ ಆಗಿರುತ್ತಾರೆ. ಅಬ್ದುಲ್ ಮುತ್ತಲಿಬ್‌ರಂತೂ ಇಡೀ ಕುರೈಶ್ ಗೋತ್ರದ ಸರದಾರರಾಗಿದ್ದಾರೆ. ಅವರ ನಿರ್ಧಾರವನ್ನು ಬದಲಿಸುವುದು ಕಷ್ಟಸಾಧ್ಯ.

ಸ್ವಲ್ಪ ಹೊತ್ತಿನಲ್ಲಿ ಅಬ್ದುಲ್ಲಾರು ಹಾರಿಸ್, ಅಬೂತಾಲಿಬ್ ಮತ್ತಿತರ ಸಹೋದರರೊಡಗೂಡಿ ತಂದೆಯ ಸನ್ನಿಧಿಗೆ ಬಂದರು. ಅದೇ ಸಮಯಕ್ಕೆ ಅಬ್ದುಲ್ಲಾರ ತಾಯಿಯ ತವರು ಮನೆಯವರೂ ಮೊಮ್ಮಗನ ಬಲಿದಾನದ ಸುದ್ದಿ ಕೇಳಿ ಓಡೋಡಿ ಬಂದರು. ಅಬ್ದುಲ್ಲಾ ಒಂದೆಡೆ ಮೌನವಾಗಿ ನಿಂತಿದ್ದಾರೆ... ಎಲ್ಲರ ದೃಷ್ಟಿಗಳು ಅವರ ಮೇಲೆಯೇ ನೆಟ್ಟಿವೆ... ಅನುಕಂಪದ ದೃಷ್ಟಿಯೊಂದಿಗೆ ಕಾತರದ ನೋಟ! ಯಾರಾದರೂ ಅಬ್ದುಲ್ ಮುತ್ತಲಿಬ್‌ರ ಕೈಯಿಂದ ಕತ್ತಿಯನ್ನು ಕಿತ್ತುಕೊಳ್ಳಬಾರದೇ ಎಂಬ ಕಾತರ. ಜನರ ಅನುಕಂಪದ ನೋಟ ಕಂಡು ಅಬ್ದುಲ್ ಮುತ್ತಲಿಬ್ ಒಂಟೆಯ ಜೀನಿನ ಮೇಲೆ ಕಾಲನ್ನಿಟ್ಟು ಗಂಭೀರವಾಗಿ ಹೇಳಿದರು,

"ನನ್ನನ್ನು ಹಿಮ್ಮೆಟ್ಟಿಸಲು ನೀವೆಲ್ಲ ಇಲ್ಲಿ ಜಮಾಯಿಸಿದ್ದೀರಾ? ಹಾ! ಅನುಕಂಪದ ವಿಚಿತ್ರ ನೋಟ! ಒಬ್ಬ ಕುಲೀನ-ಸಭ್ಯ ವ್ಯಕ್ತಿಯನ್ನು ವಚನ ಪಾಲನೆ ಮತ್ತು ಹರಕೆ ತೀರಿಸುವುದರಿಂದ ತಡೆಯಲಾಗುತ್ತಿದೆ! ನನ್ನ ಹರಕೆಯು ಎಲ್ಲರಿಗೂ ತಿಳಿದಿದೆ... ರಾತ್ರಿ ವೇಳೆ ನಾನು ಚೀಟಿಯನ್ನೆತ್ತಿದ್ದೆ.. ಸಂಪೂರ್ಣ ಜಾಗರೂಕತೆ ಮತ್ತು ಹೊಣೆಗಾರಿಕೆಯ ಪ್ರಜ್ಞೆಯೊಂದಿಗೇ ಚೀಟಿಯೆತ್ತಿದ್ದೆ. ಅಬ್ದುಲ್ಲಾನ ಹೆಸರಿನ ಚೀಟಿ ಬಂದಿದೆ. ಇಂದು ನಾನು ಅವನನ್ನು ಬಲಿ ನೀಡಿ ನನ್ನ ಹರಕೆಯನ್ನು ತೀರಿಸುವೆನು... ಧೈರ್ಯವಿಲ್ಲದವರೂ ಹೇಡಿಗಳೂ ತಂತಮ್ಮ ಚದ್ದರಗಳಿಂದ ಮುಖಮುಚ್ಚಿಕೊಳ್ಳಲಿ... ಬಲಿಯಾಗುವವನ ಚೀರಾಟ ಕೇಳುವ ಶಕ್ತಿಯಿಲ್ಲದವರು ತಂತಮ್ಮ ಕಿವಿಗಳಿಗೆ ಹತ್ತಿ ತುರುಕಿಸಲಿ. ಜನರಿಗೆ ನನ್ನ ಮಗನ ಮೇಲೆ ಮಾತ್ರವೇ ಅನುಕಂಪ...

ನನ್ನ ಸ್ವಾಭಿಮಾನ ಮತ್ತು ಘನತೆಯ ಚಿಂತೆಯಿದ್ದಂತಿಲ್ಲ! ಅದ್ನಾನ್‌ರ ಸಂತಾನವೇ! ನೀವಿಷ್ಟು ಹೇಡಿಗಳಾದಿರಾ? ಅಕಟಾ... ಅಬೂಕುಬೈಸ್‌ನ ಪಾರ್ಶ್ವ ಬಿರಿದು ಅದರಲ್ಲಿ ಸಕಲ ಹೇಡಿಗಳು ನೆಲ ಸಮಾಧಿಯಾಗಬಾರದೇ!"

ಅಬ್ದುಲ್ ಮುತ್ತಲಿಬ್‌ರು ಆಗಾಗ ತಮ್ಮ ಗಡ್ಡವನ್ನು ನೀವುತ್ತಾ ಕೈಯಲ್ಲಿದ್ದ ಕತ್ತಿಯನ್ನು ಹೊರಳಿಸುತ್ತಾ, ಶಪಥ ಹಾಕುತ್ತಿದ್ದಾರೆ... ಹೀಗೆ ತಮ್ಮ ನಿಶ್ಚಯದಾರ್ಢ್ಯವನ್ನು ತೋರ್ಪಡಿಸುತ್ತಿದ್ದಾರೆ... ಅಬ್ದುಲ್ಲಾರ ಮಾತೃ ಸಂಬಂಧಿಗಳೂ ಎಲ್ಲಕ್ಕಿಂತಲೂ ಮಿಗಿಲಾಗಿ ಅಬೂತಾಲಿಬ್‌ರು ಮಧ್ಯ ಪ್ರವೇಶಿಸಿ ಅಬ್ದುಲ್ ಮುತ್ತಲಿಬ್‌ರೊಡನೆ ಹೇಳುತ್ತಾರೆ, "ಆಗಲ್ಲ, ಅಬ್ದುಲ್ಲಾನನ್ನು ಬಲಿ ನೀಡಲು ನಾವು ಬಿಡೆವು. ಮೊದಲು ನಮ್ಮ ಕೊರಳು ಕೊಯ್ಯಿರಿ, ನಂತರ ಅಬ್ದುಲ್ಲಾನನ್ನು!" ಎಲ್ಲರೂ ಹ್ಞೂಂಗುಟ್ಟಿದರು... ಅಬ್ದುಲ್ಲಾರ ಮಾತೃಸಂಬಂಧಿಗಳೂ ಅದನ್ನೇ ಹೇಳಿದರು. ಆದರೆ ತಮ್ಮ ನಿರ್ಧಾರದಲ್ಲಿ ಅಚಲರಾಗಿದ್ದ ಅಬ್ದುಲ್ ಮುತ್ತಲಿಬ್ ಗರ್ಜಿಸಿದರು, "ಇಡೀ ಜಗತ್ತೇ ಎದುರು ನಿಂತರೂ ನನ್ನ ನಿರ್ಧಾರವನ್ನು ಬದಲಿಸಲಾಗದು! ಗಂಡಿನ ವಚನವು ಘನವೂ ತೂಕವುಳ್ಳದ್ದೂ ಆಗಿದೆ. ನಾನು ಈ ತೂಕವನ್ನು ಬಂಧು ಬಳಗದವರ ಮಾತಿಗೆ ಮಣಿದು ಹಗುರಗೊಳಿಸಲಾರೆ! ಅಲ್ಲಾಹನು ನನಗೆ ತನ್ನ ಅನುಗ್ರಹ ದಿಂದ ಹತ್ತು ಪುತ್ರ ಸಂತಾನ ನೀಡಿದ್ದಾನೆ. ಒಬ್ಬ ಮಗನು ಅವನ ಮಾರ್ಗದಲ್ಲಿ ಬಲಿಯಾದರೇನು? ಅದೂ ಅಲ್ಲದೆ ಹರಕೆಯನ್ನು ತೀರಿಸುವುದು ಎಲ್ಲ ಪ್ರೀತಿ-ವಾತ್ಸಲ್ಯ ಮತ್ತು ಸಂಬಂಧಗಳಿಗಿಂತ ಮಿಗಿಲಾದುದಾಗಿದೆ."

ಮಾತಿಗೆ ಮಾತು ಬೆಳೆದು ಉಗ್ರ ಸಂಘರ್ಷದ ವಾತಾವರಣ ಸೃಷ್ಟಿಯಾಯಿತು. ಎರಡೂ ಕಡೆಯಿಂದ ಯಾರೂ ತಮ್ಮ ಮಾತಿನಿಂದ ಹಿಂದೆ ಸರಿಯುವ ಲಕ್ಷಣ ಕಾಣುತ್ತಿರಲಿಲ್ಲ. ಒಂದೆಡೆ ಕೈಯಲ್ಲಿ ಕತ್ತಿ ಹಿಡಿದು ಅಬ್ದುಲ್ ಮುತ್ತಲಿಬ್ ಅಚಲರಾಗಿ ನಿಂತಿದ್ದಾರೆ. ಇನ್ನೊಂದೆಡೆ ಇಡೀ ಪರಿವಾರವು ಅಬ್ದುಲ್ಲಾರ ಬದಲಿಗೆ ಸ್ವಯಂ ಬಲಿಯಾಗಲು ಸಿದ್ಧವಾಗಿದೆ.

"ಯಾಸಯ್ಯಿದುಲ್ ಕುರೈಶ್! ಒಂದು ಮಾತು ಹೇಳಲೇ ಒಪ್ಪುವೆಯಾ?" ಓರ್ವ ವೃದ್ಧ ಸರದಾರರು ತಮ್ಮ ಸೊಂಟದ ಪಾಶವನ್ನು ಸಡಿಲಗೊಳಿಸುತ್ತಾ ಹೇಳಿದರು.

"ನನ್ನಿಂದ ಯಾವುದೇ ರೀತಿಯ ವಾಗ್ದಾನವನ್ನು ಕೇಳಬೇಡಿ. ಹೇಳಲಿಕ್ಕಿರುವುದನ್ನು ನೇರವಾಗಿ ಹೇಳಿಬಿಡಿ" ಅಬ್ದುಲ್ ಮುತ್ತಲಿಬ್ ಕೊಂಚ ತೀಕ್ಷ್ಣವಾಗಿಯೇ ಹೇಳಿದರು.

"ಬನೂ ಆಮಿರ್‌ನ ಮೊಹಲ್ಲದಲ್ಲಿ ಕಣಿ ಹೇಳುವ ಒಬ್ಬಳಿದ್ದಾಳೆ. ಅವಳ ಬಗ್ಗೆ ನಿನಗೆ ತಿಳಿದಿರಬಹುದಲ್ಲವೇ?" ವಯೋವೃದ್ಧರು ಕಣ್ಣು ಕಿರಿದುಗೊಳಿಸುತ್ತಾ ಕೇಳಿದರು.

"ನಾನೇನು? ಇಡೀ ಮಕ್ಕಾ ನಗರಕ್ಕೇ ಗೊತ್ತಿದೆ. ಕಣಿ ಹೇಳುವುದರಲ್ಲಿ ಆಕೆಗೆ ಈಗ ಯಾರೂ ಸರಿಸಾಟಿಯಿಲ್ಲ. ಯಮನ್‌ನಿಂದ ನಜ್ದ್‌ನ ವರೆಗಿನ ಜನರು ಆಕೆಯಲ್ಲಿ ಶಕುನ ಕೇಳಲು ಬರುತ್ತಾರೆ" ಅಬ್ದುಲ್ ಮುತ್ತಲಿಬ್‌ರು ಕತ್ತಿಯನ್ನು ಗೋಡೆಗೆ ಚುಚ್ಚುತ್ತಾ ಹೇಳಿದರು.

"ಅಷ್ಟೇ ಅಲ್ಲ, ಗುಸ್ಸಾನ್ ಮತ್ತು ಸೈಮಾನದ ರಾಜಂದಿರು ಆಕೆಗೆ ಕಾಣಿಕೆ ಮತ್ತು ಉಡುಗೊರೆಗಳನ್ನು ಕಳುಹಿಸುತ್ತಿರುತ್ತಾರೆ. ನಡೆಯಿರಿ, ಆಕೆಯ ಬಳಿ ಹೋಗಿ ಈ ಸಮಸ್ಯೆಗೆ ಪರಿಹಾರ ಕೇಳೋಣ. ಆಕೆ ಹೇಳಿದಂತೆ ಮಾಡೋಣ. ಆಕೆಗೆ ಯಾವುದೇ ರೀತಿಯ ಲಾಲಸೆ ಅಥವಾ ಯಾರದೇ ಭಯವಿಲ್ಲ. ಆಕೆಯ ತೀರ್ಮಾನವು ನಿರ್ಣಾಯಕವಾಗಿರುತ್ತದೆ."

ವಯೋವೃದ್ಧರ ಮಾತು ಕೇಳಿ ಅಬ್ದುಲ್ ಮುತ್ತಲಿಬ್, ಎತ್ತಿ ಹಿಡಿದ ಲುಂಗಿಯ ತುದಿಯ ಮೇಲಿನ ಹಿಡಿತವನ್ನು ಸಡಿಲಿಸಿದರು. ಕಣಿಕಾರಳ ಬಳಿಗೆ ಹೋಗಲು ಅವರು ಸಿದ್ಧರೆಂದೂ ಈ ಸಲಹೆ ಹಿಡಿಸಿತೆಂದೂ ಅದರರ್ಥ.

"ಈ ಕತ್ತಿಯನ್ನು ಮನೆಯಲ್ಲೇ ಬಿಟ್ಟು ಹೋದರಾಗದೇ?" ಓರ್ವ ಸಂಬಂಧಿಯು ಕೊಂಚ ಖಾರವಾಗಿಯೇ ಕೇಳಿದರು.

"ಇಲ್ಲ! ಸಾಧ್ಯವಿಲ್ಲ! ಕಣಿಕಾರಳ ತೀರ್ಮಾನ ಕೇಳುವವರೆಗೆ ಈ ಕತ್ತಿ ಅಬ್ದುಲ್ ಮುತ್ತಲಿಬ್‌ನ ಕೈಯಿಂದ ತಪ್ಪಲಾರದು. ನೀವು ಪ್ರತಿಯೊಂದು ವಿಷಯಕ್ಕೂ ನನ್ನನ್ನು ಒತ್ತಾಯಿಸ ಬೇಡಿ" ಅಬ್ದುಲ್ ಮುತ್ತಲಿಬ್ ಮನೆಯ ಮುಂಬಾಗಿಲಿನಿಂದ ಹೊರಗಡಿಯಿಡುತ್ತಾ ರೇಗಿದರು.

ಬನೂಹಾಶಿಮ್‌ನ ಕೆಲವು ಹಿರಿಯರು ಅಬ್ದುಲ್ ಮುತ್ತಲಿಬ್‌ರನ್ನು ಕಣಿಕಾರಳ ಬಳಿಗೆ ಕರಕೊಂಡು ಹೋದರು. ವಯೋವೃದ್ಧೆಯಾದ ಕಣಿಕಾರಳು... ಕೆದರಿದ ಸಿಕ್ಕುಸಿಕ್ಕಾದ ತಲೆಗೂದಲು, ಧೂಳು ಮೆತ್ತಿದ ಮುಖ, ಅರೆನಗ್ನ ದೇಹ, ಕೊರಳಲ್ಲಿ ಒಂಟೆಯ ಮೂಳೆ ಗಳಿಂದ ಪೋಣಿಸಿದ ರುದ್ರಾಕ್ಷಿ ಮಾಲೆ, ಕೈ-ರಟ್ಟೆ-ಕಾಲುಗಳಲ್ಲಿ ದಪ್ಪ ಲೋಹದ ಬಳೆಗಳು! ಅತಿ ಭಯಾನಕ ಮುಖ! ಕೆಂಪಡರಿದ ಕಣ್ಣುಗಳು, ಸೆಟೆದಿರುವ ಹುಬ್ಬುಗಳು, ನೆರಿಗೆ ಗಟ್ಟಿದ ಅಗಲ ಹಣೆ, ನೀಲಿ ತುಟಿ, ಅಗಲ ದವಡೆ... ಮಹಿಳೆ ಎನ್ನುವುದಕ್ಕಿಂತ ಯಕ್ಷಿಣಿ ಎನ್ನುವುದೇ ಸರಿ! ಈ ರುದ್ರ ರೂಪವು ಆಕೆಯ ಮೇಲೆ ಜನರಲ್ಲಿ ಭಯ ಮಿಶ್ರಿತ ಭಕ್ತಿಯನ್ನು ಹುಟ್ಟಿಸುತ್ತಿತ್ತು. ಲಾತ್ ಮತ್ತು ಉಝ್ಝಾಗಳ ಆರಾಧಕರ ಅಭಿಪ್ರಾಯ ಪ್ರಕಾರ, ಅದೃಶ್ಯದ ವಿಷಯಗಳು ಮುಗ್ಧ ಮುಖಚಹರೆಯುಳ್ಳವರಿಗೆ ತಿಳಿಯಲಾರದು. ಅದಕ್ಕಾಗಿ ಪ್ರತ್ಯೇಕವಾದ ವ್ಯಕ್ತಿತ್ವ ಮತ್ತು ರೂಪ ಹೊಂದಿರಬೇಕಾಗುತ್ತದೆ!

ಎಲ್ಲರೂ ಭಕ್ತಿಯೊಂದಿಗೆ ಕಣಿಕಾರಳ ಸುತ್ತಲೂ ನಿಂತರು. ಆಕೆಯ ಕೈಯಲ್ಲಿ ಇಪ್ಪೆಯೆಣ್ಣೆ ಸವರಿದ ಬೆತ್ತವೊಂದಿತ್ತು. ಅದನ್ನು ನೇರಕ್ಕೆ ಚಾಚಿ ಎಲ್ಲರಿಗೂ ನೆಲದ ಮೇಲೆ ಕುಳಿತು ಕೊಳ್ಳಲು ಸಂಜ್ಞೆ ಮಾಡಿದಳು. ಅಬ್ದುಲ್ ಮುತ್ತಲಿಬ್, ಕೈಯಲ್ಲಿದ್ದ ಕತ್ತಿಯನ್ನು ನೆಲದಲ್ಲಿ ನಾಟಿ ಅದರ ಸನಿಹವೇ ಪದ್ಮಾಸನ ಹಾಕಿ ಕುಳಿತರು. ಕೆಲವರು ಕಣಿಕಾರಳ ಮುಂದೆ ಬಾಗಿದರು. ತರುವಾಯ ಆಕೆಯ ಬಳಿ ವಿಷಯವನ್ನು ಪ್ರಸ್ತಾಪಿಸಲಾಯಿತು. ಆಕೆ ಗಂಭೀರವದನಳಾಗಿ ಆಲಿಸತೊಡಗಿದಳು... ಕಣ್ಣುಗಳು ಮುಚ್ಚಿಕೊಂಡಿದ್ದುವು. ನೋಡುಗರಿಗೆ, ಆಕೆಯ ದೇಹ ಭೂಮಿಯಲ್ಲಿದ್ದರೂ ಆತ್ಮವು ಆಕಾಶ ಲೋಕದಲ್ಲಿ ತೇಲಾಡುತ್ತಿರುವಂತೆಯೂ ಅದೃಶ್ಯದ ಕವಾಟಗಳು ಆಕೆಯ ಅಂತದೃಷ್ಟಿಯ ಮುಂದೆ ತೆರೆದುಕೊಂಡಂತೆಯೂ ಭಾಸ ವಾಗುವ

ರೀತಿಯಲ್ಲಿತ್ತು ಆ ಭಂಗಿ...

"ಯಾವ ರೀತಿಯಿಂದಲಾದರೂ ಅಬ್ದುಲ್ಲಾ ಉಳಿಯಬೇಕು ಎಂದು ನಾವು ಬಯಸುತ್ತೇವೆ. ಮತ್ತೆ..." ಓರ್ವ ಹಾಶ್ಮಿಯ ಮಾತು ಪೂರ್ತಿಯಾಗುವುದಕ್ಕೆ ಮುನ್ನವೇ ಅಬ್ದುಲ್ ಮುತ್ತಲಿಬ್ ಮಧ್ಯದಲ್ಲಿ ತಡೆದು ಕಣಿಕಾರಳನ್ನುದ್ದೇಶಿಸಿ ಹೇಳಿದರು, "ನೀವು ಇವರ ಮಾತಿಗೆ ಕಿವಿಗೊಡಬೇಡಿರಿ... ನಿಮ್ಮ ಹೃದಯ, ಆತ್ಮಸಾಕ್ಷಿ ಮತ್ತು ಎಲ್ಲಕ್ಕೂ ಮಿಗಿಲಾಗಿ ನಿಮ್ಮ ಜ್ಞಾನವು ಏನು ಹೇಳುತ್ತದೋ ಅದನ್ನು ಯಥಾವತ್ ಹೇಳಿಬಿಡಿ."

ಅದನ್ನು ಕೇಳಿ ಕಣಿಕಾರಳು ಗಹಗಹಿಸತೊಡಗಿದಳು. ಆಕೆಯ ಉದ್ದುದ್ದವಾದ ಹಳದಿ ಹಲ್ಲುಗಳು ಆ ಅಟ್ಟಹಾಸವನ್ನು ಇನ್ನಷ್ಟು ಭೀಕರಗೊಳಿಸಿದುವು. ತರುವಾಯ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಆಕೆ ಹೇಳಿದಳು,

"ಹರಕೆ ಇನ್ನೊಂದು ರೀತಿಯಲ್ಲೂ ಸಂದಾಯವಾಗುತ್ತದಲ್ಲವೇ! ಅಬ್ದುಲ್ಲಾನ ಹೆಸರಿನೊಂದಿಗೆ ಒಂಟೆಗಳ ಸಂಖ್ಯೆಯನ್ನೂ ಹಾಕಿ ಚೀಟಿಯೆತ್ತಿರಿ ಮತ್ತು ಅಬ್ದುಲ್ಲಾನ ಹೆಸರೇ ಬಂದರೆ ಒಂಟೆಯ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗಿ. ಯಾವಾಗ ಒಂಟೆಯ ಸಂಖ್ಯೆಯಿರುವ ಚೀಟಿ ಬರುವುದೋ ಆಗ ಅವುಗಳನ್ನು ಬಲಿ ನೀಡಿರಿ. ನಿಮ್ಮ ಹರಕೆಯೂ ತೀರಿದಂತಾಗುತ್ತದೆ."

ಎಲ್ಲರೂ ಸಸಂತೋಷ ಮನೆಗೆ ಮರಳಿದರು. ಚೀಟಿಯೆತ್ತಲು ಮೊತ್ತಮೊದಲು ಹತ್ತು ಒಂಟೆಗಳನ್ನು ಬರೆಯಲಾಯಿತು. ಆದರೆ ಪ್ರತಿಯೊಂದು ಬಾರಿಯೂ ಅಬ್ದುಲ್ಲಾರ ಹೆಸರಿನ ಚೀಟಿಯೇ ಬರುತ್ತಿದ್ದುವು. ಮನೆ ಮಂದಿಯ ಮುಖಗಳು ಬಿಳಿಚಿಕೊಳ್ಳುತ್ತಿದ್ದುವು. ಕೊನೆಗೆ ಒಂಟೆಗಳ ಸಂಖ್ಯೆ ನೂರರಷ್ಟಾದಾಗ, ಒಂಟೆಗಳ ಚೀಟಿ ಎದ್ದಿತು. ಅಬ್ದುಲ್ ಮುತ್ತಲಿಬ್, ನೂರು ಒಂಟೆಗಳನ್ನು ಬಲಿ ನೀಡಿದರು.

ಅಬ್ದುಲ್ಲಾ ಅಂದು ಕತ್ತಿಯ ಬಾಯಿಯಿಂದ ಪಾರಾದರು. ಅವರಿಗೆ ಮರುಜೀವ ದೊರೆಯಿತು. ಅದಕ್ಕಾಗಿ ಕುಟುಂಬಸ್ಥರು ಎಷ್ಟೇ ಖುಷಿಪಟ್ಟರೂ ಕಡಿಮೆಯೇ. ಬಾಲಕಿಯರು ಸಂತೋಷಗಾನ ಹಾಡತೊಡಗಿದರು... ಹುಡುಗರು ಪುಟ್ಟಪುಟ್ಟ ಬಿಲ್ಲು-ಬಾಣಗಳನ್ನು ಹೊತ್ತು ಅಂಗಳಕ್ಕೆ ಆಡಲು ಓಡಿದರು... ಅಬ್ದುಲ್ ಮುತ್ತಲಿಬ್‌ರ ಮನೆಯು ಅತಿಥಿ ಗೃಹವಾಗಿ ಮಾರ್ಪಟ್ಟಿತು... ಸುತ್ತಲೂ ಒಲೆಗಳು, ಬಾಣಲೆಗಳು, ಲೋಟೆಗಳು, ರೊಟ್ಟಿ, ಮಾಂಸದಡುಗೆ... ಕುರೈಶರು ಮಹಾನ್ ಸರದಾರ ಕುಸೈರವರ ಸಂತಾನವಾಗಿದ್ದಾರೆ. ಅಂದಿಗೆ ನೂರಾರು ವರ್ಷಗಳ ಹಿಂದೆ ಅವರು ತಮ್ಮ ಜನರನ್ನು ಸೇರಿಸಿ ಒಂದು ಪ್ರವಚನ ನೀಡಿದ್ದರು, "ಸಾವಿರಾರು ಮೈಲುಗಳ ದೂರದೂರುಗಳಿಂದ ಜನರು ಹರಮ್‌ನ ಸಂದರ್ಶನಕ್ಕಾಗಿ ಯಾತ್ರೆ ಕೈಗೊಳ್ಳುತ್ತಾರೆ, ಅವರ ಆಹಾರ-ಪಾನೀಯದ ವ್ಯವಸ್ಥೆ ಮಾಡುವುದು ನಮ್ಮ ಹೊಣೆ..." ಆ ಪ್ರವಚನವು ನೆರೆದ ಕುಟುಂಬಸ್ಥರ ಹೃದಯದಲ್ಲಿ ಆಳವಾಗಿ ಬೇರೂರಿತ್ತು. ಹೀಗೆ ಕುರೈಶರು ವರ್ಷಂಪ್ರತಿ ಹಣ ಸಂಗ್ರಹಿಸುತ್ತಾರೆ, ಅದರಿಂದ ಹಾಜಿಗಳಿಗೆ ಊಟದ ವ್ಯವಸ್ಥೆ ಮಾಡುತ್ತಾರೆ... ನೀರಿಗಾಗಿ

ಚರ್ಮದ ದೊಡ್ಡ ದೊಡ್ಡ ತೊಟ್ಟಿಗಳನ್ನು ನಿರ್ಮಿಸುತ್ತಾರೆ. ಅಬ್ದುಲ್ ಮುತ್ತಲಿಬ್, ತಮ್ಮ ಪಿತಾಮಹ ಕುಸ್ಯೆರವರ ನೈಜ ಉತ್ತರಾಧಿಕಾರಿಯಾಗಿದ್ದರು. ಅದೇ ಗಾಂಭೀರ್ಯ, ಅದೇ ದೂರದೃಷ್ಟಿ... ಅತಿಥಿ ಸತ್ಕಾರದಲ್ಲೂ ಎತ್ತಿದ ಕೈ. ಅವರ ಆದಾಯವೆಷ್ಟೇ ಇದ್ದರೂ ಸ್ವಂತಕ್ಕೆ ಏನೇನೂ ಉಳಿಯುತ್ತಿರಲಿಲ್ಲ.

ಅಬ್ದುಲ್ಲಾ ಬಲಿಪೀಠದಿಂದ ಕೂದಲೆಳೆಯ ಅಂತರದಲ್ಲಿ ಪಾರಾದರು. ಬಲಿದಾನದ ಹರಕೆಯನ್ನು ಬೇರೊಂದು ರೂಪದಲ್ಲಿ ತೀರಿಸಲಾಯಿತು. ಇಂದಿಗೆ ಸಾವಿರಾರು ವರ್ಷಗಳ ಹಿಂದೆ ಇದೇ ಮಕ್ಕಾ ನಗರದಲ್ಲಿ ಪ್ರವಾದಿ ಇಸ್ಮಾಈಲ್‌ರೊಂದಿಗೆ(ಅ) ಇದೇ ರೀತಿಯ 'ಮಹಾನ್ ಬಲಿದಾನ'ದ ಘಟನೆ ನಡೆದಿತ್ತು. ಇತಿಹಾಸವು ಕೊಂಚ ಬದಲಾವಣೆಯೊಂದಿಗೆ ಅದೇ ಘಟನೆಯನ್ನು ಪುನರಾವರ್ತಿಸಿತು. ಕುಲವದೇ, ಮನೆತನವೂ ಅದುವೇ, ನಗರವೂ ಅದುವೇ.. ಆ ರಹಸ್ಯಗಳ ಮೇಲೆ ಪ್ರಕೃತಿಯು ದೈವಿಕ ಪರದೆಯನ್ನು ಇಳಿಯ ಬಿಟ್ಟಿತ್ತು. ಅವು ಪ್ರಕಟವಾಗುವುದನ್ನು ಸೂರ್ಯ-ಚಂದ್ರಾದಿಗಳೂ ಪ್ರತೀಕ್ಷಿಸುತ್ತಿದ್ದುವು.

ಸಜ್ಜನಿಕೆಯ ಕಂಪು ಬೀರಿದವರು

ಅಬ್ದುಲ್ ಮುತ್ತಲಿಬ್‌ರಿಗೆ ಒಂದಿಬ್ಬರಲ್ಲ, ಹತ್ತು ಪುತ್ರರಿದ್ದರು. ಆದರೆ ಅವರೆಲ್ಲರ ಪೈಕಿ ಅಬ್ದುಲ್ಲಾ ಮಾತ್ರವೇ ಆಕರ್ಷಕ, ಚೆಲುವ ಮತ್ತು ಸುಂದರರಾಗಿದ್ದರು. ಅಬ್ದುಲ್ ಮುತ್ತಲಿಬ್‌ರು ಓರ್ವ ಮಗನನ್ನು ಬಲಿಕೊಡುವೆನೆಂಬ ಹರಕೆಯನ್ನು ತೀರಿಸಲೋಸುಗ ಚೀಟಿಯೆತ್ತಿದಾಗ ಇದೇ ಅಬ್ದುಲ್ಲಾರ ಹೆಸರು ಬಂದಿತ್ತು. ಹಾಗೆ ಅಬೂಲಹಬ್‌ನ ಮುಖವೂ ಕೆಂಪಗಿತ್ತು. ಬೆಂಕಿಯ ಕೆನ್ನಾಲಿಗೆಯಂತೆ. ಅದನ್ನು ನೋಡಿದವರಲ್ಲಿ ಪ್ರೀತಿಯುಕ್ಕುವ ಬದಲು ಭೀತಿಯಾವರಿಸುತ್ತದೆ. ಅಬ್ದುಲ್ಲಾರ ರೂಪದಲ್ಲಾದರೋ ಚಿತ್ತಾಕರ್ಷಕ ಸೌಂದರ್ಯವಿತ್ತು. ಕುರೈಶ್ ಗೋತ್ರದ ಯಾವೊಬ್ಬನಲ್ಲೂ ಅದುವರೆಗೂ ಕಂಡಿರದಂತಹ ವಿಶಿಷ್ಟ ಮೆರುಗು ಅಬ್ದುಲ್ಲಾರ ಹಣೆಯಲ್ಲಿತ್ತು. ವಸ್ತುತಃ ಅವರ ಹಣೆಯಲ್ಲಿ ಹಲವು ಮುಂಜಾವುಗಳ ಹೊಂಗಿರಣಗಳು ಹೂನಲು ಚೆಲ್ಲುವಂತಹ ಹೊಳಪಿತ್ತು.

ಮಕ್ಕಾ ನಗರವು ಬಹುತೇಕ ಅಶ್ಲೀಲತೆ ಮತ್ತು ವ್ಯಭಿಚಾರದಿಂದ ಗಬ್ಬೆದ್ದು ಹೋಗಿತ್ತು. ಆದರೆ ಅಬ್ದುಲ್ಲಾರ ಚಿತ್ತವು ಸಜ್ಜನಿಕೆ ಮತ್ತು ಸತ್ಕರ್ಮದೆಡೆಗೆ ವಾಲಿಕೊಂಡಿತ್ತು. ಕಅಬಾ ಭವನಕ್ಕೆ ಪ್ರದಕ್ಷಿಣೆ ಹಾಕುತ್ತಿರುವ ನಗ್ನ ಸ್ತ್ರೀಯರ ಕಲರವ ಕೇಳುತ್ತಲೇ ಅಬ್ದುಲ್ಲಾ ಬೇರೆಡೆಗೆ ಮುಖ ತಿರುಗಿಸುತ್ತಿದ್ದರು. ಕುರೈಶ್ ಯುವ ಜನರ ಭೋಗ ವಿಲಾಸಗಳಿಂದ ಅವರು ರೇಜಿಗೆ ಪಟ್ಟುಕೊಳ್ಳುತ್ತಿದ್ದರು. ಅವರ ಮಿತ್ರರು ಅವರನ್ನು, "ಅಬ್ದುಲ್ಲಾ ಬಳೆತೊಟ್ಟು, ದುಪ್ಪಟ್ಟಾ ಹೊದ್ದುಕೊಂಡು ಮನೆಯೊಳಗೆ ಕುಳಿತುಕೊಳ್ಳುವುದೇ ಲೇಸು" ಎಂದು ಛೇಡಿಸುತ್ತಿದ್ದರು. ಅವರ ಅಭಿಪ್ರಾಯದಲ್ಲಿ, ಗಂಡೆದೆಯ ಕೆಚ್ಚು ಅಬ್ದುಲ್ ಮುತ್ತಲಿಬ್‌ರ ಈ ಲಜ್ಜಾವಂತ ಪುತ್ರನಲ್ಲಿ ಕಾಣುತ್ತಿಲ್ಲ... ಯೌವನದಲ್ಲಿ ಸನ್ಯಾಸಿಗಳಂತೆ, ವಿರಕ್ತರಂತೆ ಬಾಳುವುದು ಅತಿದೊಡ್ಡ ಮೂರ್ಖತನ ಮತ್ತು ದೌರ್ಭಾಗ್ಯವಾಗಿದೆ... ಇದುವೇ ಮೋಜು ಮಾಡುವ ಮತ್ತು ಆನಂದ ಹೊಂದುವ ಸಮಯವಾಗಿದೆ. ಅಯ್ಯೋ ಪಾಪ! ಅಬ್ದುಲ್ಲಾರ ಯೌವನವೇ!! ಶುಷ್ಕ, ರುಚಿಗೆಟ್ಟ ರಸಾಸ್ವಾದರಹಿತವಾದ... ಹಗಲಿಗಿಂತ ರಾತ್ರಿಯಲ್ಲಿ ಒಬ್ಬಂಟಿತನ... ಈ ತೋಟದಲ್ಲಿ ವಸಂತಾಗಮನವೇ ಆಗಿಲ್ಲವೇನೋ!!

ಒಮ್ಮೆ ಅಬ್ದುಲ್ಲಾ ಮಕ್ಕಾದ ಗಲ್ಲಿಯೊಂದರಲ್ಲಿ ನಡೆದು ಹೋಗುತ್ತಿದ್ದರು... ಬೀದಿಯ ಧೂಳಿನಲ್ಲಿ ಒಂಟೆಗಳ ಹೆಜ್ಜೆಯಚ್ಚುಗಳು ಮೂಡಿದ್ದುವು... ಸ್ವಲ್ಪವೇ ಹೊತ್ತು ಮುಂಚೆ

ಕೆಲವು ಒಂಟೆಗಳು ಅಲ್ಲಿಂದ ಹಾದು ಹೋಗಿದ್ದುದನ್ನು ಸಾರುತ್ತಿದ್ದುವು. ಅಬ್ದುಲ್ಲಾರ ದೃಷ್ಟಿ ಆ ಹೆಜ್ಜೆಯಚ್ಚುಗಳಲ್ಲೇ ನೆಟ್ಟಿತ್ತು. ಅಷ್ಟರಲ್ಲಿ ಒಂದು ಬದಿಯ ಮನೆಯೊಂದರ ಬಾಗಿಲು ತೆರೆದ ಸದ್ದು ಕೇಳಿಸಿತು. ಅಬ್ದುಲ್ಲಾ ಹೊರಳಿ ನೋಡಿದರು. ಓರ್ವ ಸುರಸುಂದರಿಯಾದ ಜವ್ವನೆ ಬಾಗಿಲ ಬಳಿ ನಿಂತು ಅಬ್ದುಲ್ಲಾರೆಡೆಗೇ ನೋಡು ತ್ತಿದ್ದಳು. ಹದಿಹರೆಯ, ಸೌಂದರ್ಯ ಮೇಲಾಗಿ ಹುಡುಗಾಟಿಕೆಯ ಕಂಗಳಲ್ಲಿ ಮೆಚ್ಚುಗೆಯ ನೋಟ! ಯುವತಿ ಅಡಿಯಿಂದ ಮುಡಿ ತನಕ ಆಕರ್ಷಣೆ ಮತ್ತು ಮಾದಕತೆಯ ಪುತ್ಥಳಿಯಾಗಿದ್ದಳು. ಆಕೆ ಮಾದಕ ಸಂಜ್ಞೆಯಿಂದ ಅಬ್ದುಲ್ಲಾರನ್ನು ಹತ್ತಿರಕ್ಕೆ ಕರೆದಳು. ಈ ಸೌಂದರ್ಯವು ಯುವ ಕುದಿ ಹೃದಯವನ್ನು ಪ್ರಣಯ ವಾಂಛೆಯೆಡೆಗೆ ಆಹ್ವಾನ ವನ್ನೀಯುತ್ತಿದೆ... ಮಾದಕತೆಯು ಸ್ವಯಂ ಮುಂದು ವರಿದು ಸತ್ಕರಿಸಬಯಸುತ್ತಿದೆ... ಸ್ವಯಂ ಯುವಕನಾಗಿರುತ್ತಾ ಆ ಮಾದಕ ಸೌಂದರ್ಯ ದೆಡೆಗೆ ಯಾರಾದರೂ ಆಕರ್ಷಿತ ರಾಗದೆ ಉಳಿಯುವುದು ತೀರಾ ವಿರಳ. ಇಂತಹ ವರ್ಣ ರಂಜಿತ ಅವಕಾಶ ಯಾವಾಗಲೂ ಎಲ್ಲಿ ಸಿಗುತ್ತದೆ? ಅಬ್ದುಲ್ಲಾರ ಚಿತ್ತದಲ್ಲಿ ಬಯಕೆ ಕುಡಿಯೊಡೆಯುತ್ತದೆ... ಈ ಸುರ ಸುಂದರಿಯ ಒಂದೇ ಕಣ್ಣೋಟಕ್ಕಾಗಿ ಕುರೈಶ್ ಯುವಕರ ದಂಡೇ ಕಾತರಿಸುತ್ತಿದೆ... ಪ್ರತಿಯೋರ್ವ ಯುವ ಹೃದಯವು ಈಕೆಯ ಕಿಂಚಿತ್ ದರ್ಶನಕ್ಕಾಗಿ ಹಾತೊರೆಯುತ್ತಿದೆ... ಅಂತಹ ಸುಂದರಿ ಸ್ವಯಂ ನಿನ್ನೆಡೆಗೆ ಆಕರ್ಷಿತವಾಗಿದ್ದಾಳೆ... ಅಬ್ದುಲ್ಲಾ! ನೋಡು, ಈ ಅವಕಾಶವನ್ನು ಕೈ ಬಿಡಬೇಡ... ಅದನ್ನು ನಿರ್ಲಕ್ಷಿಸಬೇಡ... ಸೌಂದರ್ಯ ಮತ್ತು ಯೌವನದ ಆಗ್ರಹವನ್ನು ನಿರಾಕರಿಸುವುದು ತರವಲ್ಲ... ಆದರೆ ಭ್ರಷ್ಟ ಚಿತ್ತವನ್ನು ಬದಿಗೆ ತಳ್ಳಿದ ಆತ್ಮಸಾಕ್ಷಿಯು ಮೈಮುರಿಯಿತು. ಲಜ್ಜೆ ಮತ್ತು ಅಭಿಮಾನದ ನರವನ್ನು ಮಿಡಿಯಿತು. ಆ ಮೋಹಿನಿಯ ಮಾದಕ ನಗುವನ್ನೂ ಸ್ವೀಕರಿಸದೆ ಅಬ್ದುಲ್ಲಾ ಮುಂದಡಿಯಿಟ್ಟರು.

ಅಬ್ದುಲ್ಲಾ ತನ್ನ ಸೌಂದರ್ಯಕ್ಕೆ ಮರುಳಾಗಿ ತಕ್ಷಣವೇ 'ಲಬ್ಬೈಕ್' ಹೇಳುವರೆಂದು ಆಕೆ ನಿರೀಕ್ಷಿಸಿದ್ದಳು. ಆದರೆ ತದ್ವಿರುದ್ಧ ಸಂಭವಿಸಿದಾಗ ಆಕೆಯ ಚೆಂಗುಲಾಬಿಯಂಥ ಮೋರೆಯು ವಿವರ್ಣವಾಯಿತು. ಆದರೆ ಆ ಹೆಣ್ಣು ಚತುರೆಯಾಗಿದ್ದಳು. ತಕ್ಷಣವೇ ಸಾವರಿಸಿ ಕೊಂಡ ಆಕೆ, ತನ್ನ ದೇಹಸಿರಿಯೊಂದಿಗೆ ಕೆಂಪು ಒಂಟೆಗಳ ಆಮಿಷವನ್ನೊಡ್ಡಿದಳು. ಆದರೆ ಅಬ್ದುಲ್ಲಾ ಅದಕ್ಕುತ್ತರವಾಗಿ ಈ ಅರ್ಥ ಬರುವ ಚೌಪದಿಯನ್ನು ಹೇಳುತ್ತಾ ಮುಂದುವರಿದರು,

"ನಿಷಿದ್ಧ ಕರ್ಮದಲ್ಲಿ ಬೀಳುವುದಕ್ಕಿಂತ ಮರಣವೇ ಲೇಸು. ಹಲಾಲನ್ನು ನಾನು ಇಷ್ಟಪಡುತ್ತೇನೆ, ಸಂಶಯಬೇಡ... ಆದರೆ ಅದಕ್ಕಾಗಿ ಘೋಷಣೆಯೂ ಅಗತ್ಯ. ನೀನು ಆಕರ್ಷಿಸುತ್ತೀ, ಪುಸಲಾಯಿಸುತ್ತೀ... ಆದರೆ ಸಭ್ಯ ವ್ಯಕ್ತಿ ತನ್ನ ಮಾನ-ಧರ್ಮ ಎರಡನ್ನೂ ಕಾಪಾಡಲು ಬದ್ಧನಾಗಿದ್ದಾನೆ."

ಯುವತಿ ಕಣ್ಣು ಬಾಯಿ ಬಿಟ್ಟು ನೋಡುತ್ತಾ ಇದ್ದು ಬಿಟ್ಟಳು. ಮರುಕ್ಷಣವೇ ಅಲ್ಲಿ ಅಬ್ದುಲ್ಲಾರ ಹೆಜ್ಜೆಯಚ್ಚುಗಳಷ್ಟೇ ಅವಳ ಮುಂದಿನ ಬೀದಿಯ ಧೂಳಲ್ಲಿ ಉಳಿದಿತ್ತು. ವಿಷಯಾಸಕ್ತಿಗೆ ತಣ್ಣೀರೆರಚಿ ಅವರು ಹೊರಟು ಹೋಗಿಯಾಗಿತ್ತು.

ಸೌಭಾಗ್ಯವಂತರ ನೆಂಟಸ್ತಿಕೆ

ಅಬ್ದುಮನಾಫ್‌ರ ಮನೆಗೆ ಬೇಟೆಯ ಮಾಂಸ ಬಂದಿದೆ. ಬಾಣಲೆಯು ಒಲೆಯ ಮೇಲೇರಿದೆ. ಓರ್ವ ವಯಸ್ಸಾದ ಮಹಿಳೆಯು ಕಟ್ಟಿಗೆಯ ಉದ್ದದ ಜಾಲಿ ಸೌಟಿನಿಂದ ಬಾಣಲೆಯ ನೀರನ್ನು ಕಲಕುತ್ತಿದ್ದಾರೆ. ಊಟದ ನಿರೀಕ್ಷೆಯಲ್ಲಿ ಮನೆಮಂದಿಯೆಲ್ಲ ಹಜಾರದ ನೆಲದಲ್ಲಿ ಪವಡಿಸಿದ್ದಾರೆ. ಅವರ ಮುಂದೆ ಮಣ್ಣಿನ ದೊಡ್ಡದೊಡ್ಡ ಲೋಟಗಳನ್ನಿರಿಸಲಾಗಿದೆ.

"ನೀವು ಅಬ್ದುಲ್ ಮುತ್ತಲಿಬ್‌ರ ಮನೆಗೆ ಏನೆಂದು ಉತ್ತರ ಕಳುಹಿಸಿದ್ದೀರಿ?" ಓರ್ವ ವಯೋವೃದ್ಧ ವ್ಯಕ್ತಿ ಪೀಠಿಕೆ ಹಾಕಿದರು.

"ನನಗಂತೂ ಒಪ್ಪಿಗೆಯೇ. ಆದರೆ ಒಂದೆರಡು ದಿನ ಕಳೆಯಲಿ... ನಮ್ಮ ಚಿಕ್ಕಪ್ಪ ನಖ್‌ಲದಿಂದ ಮರಳುವವರಿದ್ದಾರೆ ನಾನು ಅವರೊಡನೆ ಚರ್ಚಿಸಬಯಸುತ್ತೇನೆ... ಹಿರಿಯರ ಸಲಹೆ, ಸೂಚನೆಗಳು ಒಳ್ಳೆಯದಾಗಿರುತ್ತವೆ" ಓರ್ವ ಮಧ್ಯವಯಸ್ಕ ಉತ್ತರಿಸಿದರು.

"ನನ್ನ ಅಭಿಪ್ರಾಯದಲ್ಲಿ ಶುಭಕಾರ್ಯವನ್ನು ವಿಳಂಬಿಸುವುದು ಉಚಿತವಲ್ಲ, ಅಬ್ದುಲ್ ಮುತ್ತಲಿಬ್‌ರ ಮಗ ಅಬ್ದುಲ್ಲಾನಿಗೆ ಮಕ್ಕಾ ನಗರದಲ್ಲಿ ಹುಡುಗಿಯರಿಗೇನೂ ಕಡಿಮೆಯಿಲ್ಲ. ಹೆಣ್ಣು ಹೆತ್ತವರು ತಮ್ಮ ಮಗಳನ್ನು ಅಬ್ದುಲ್ಲಾನಿಗೆ ವರಿಸಿ ಕೊಡಲು ತುದಿಗಾಲಲ್ಲಿ ಕಾದು ನಿಂತಿದ್ದಾರೆ. ಅಬ್ದುಲ್ಲಾನಂತಹ ಹುಡುಗ ಹುಡುಕಿದರೂ ಸಿಗಲಾರ. ಅವನ ಮನೆತನವು ಕುರೈಶರ ಪೈಕಿ ಬಹಳ ಕುಲೀನವಾದುದು. ಅವನ ತಂದೆ ಅಬ್ದುಲ್ ಮುತ್ತಲಿಬ್ ಕುರೈಶರ ನಾಯಕರಾಗಿದ್ದಾರೆ. ಅಲ್ಲ... ಅಮ್ರ್ ಬಿನ್ ಹರಸ್ ಜುರ್ಹಮಿಯು ಮುಚ್ಚಿಸಿದ ಝುಮ್‌ಝುಮ್ ಬಾವಿಯನ್ನು, ಅಲ್ಲಿ ಆ ಹೆಸರಿನ ಬಾವಿಯಿತ್ತೆಂದು ಯಾರಿಗೂ ತಿಳಿದೇ ಇಲ್ಲದಿದ್ದಂತಹ ಪರಿಸ್ಥಿತಿಯಲ್ಲಿ ಅಬ್ದುಲ್ ಮುತ್ತಲಿಬ್‌ರು ತಮ್ಮ ಮಗ ಹಾರಿಸ್‌ರೊಡಗೂಡಿ ಅಗೆದಿದ್ದರು. ಇದಕ್ಕಿಂತ ಹೆಚ್ಚಿನ ಕೀರ್ತಿ ಬೇರೇನಿದೆ ಹೇಳು? ಓ ನನ್ನ ಚಿಕ್ಕಪ್ಪನ ಪುತ್ರನೇ! ತ್ವರೆ ಮಾಡು... ಆಮಿನಳ ಅದೃಷ್ಟ ತಾರೆಯನ್ನು ಬೇಗನೇ ಬೆಳಗಗೊಡು" ವಯೋವೃದ್ಧ ಅರಬ ಅವಸರಿಸಿದರು.

ತೀರ್ಮಾನವಾಯಿತು. ಅಬ್ದುಲ್ ಮುತ್ತಲಿಬ್‌ರ ಮನೆಗೆ ಉತ್ತರ ತಲುಪಿತು- ನಮಗೆ ಸಂಬಂಧ ಒಪ್ಪಿಗೆಯಾಗಿದೆ. ಎರಡೂ ಕಡೆ ಆನಂದ ಲಾಸ್ಯವಾಡಿತು. ಅಬ್ದುಲ್ಲಾ ತನ್ನ ತಂದೆಯ ಪ್ರೀತಿಪಾತ್ರ 'ದಬೀಹಾ' (ಬಲಿಯರ್ಪಿತ) ಪುತ್ರ ಆಗಿದ್ದರು. ಜನರು ಅವರ ಸಜ್ಜನಿಕೆ ಮತ್ತು ಸಾತ್ವಿಕತೆಯ ಆಣೆ ಹಾಕುತ್ತಿದ್ದರು. ಆಮಿನಾ ತನ್ನ ಮನೆಯವರ ಕಣ್ಮಣಿಯಾಗಿದ್ದರು. ಪಾವಿತ್ರ್ಯ ಮತ್ತು ಲಜ್ಜೆಯ ಸಾಕಾರಮೂರ್ತಿಯಾಗಿದ್ದರು. ಅರಬರ ಹೆಣ್ಮಕ್ಕಳು ಜಾತ್ರೆಗಳಲ್ಲಿ ಮೈಚಳಿ ಬಿಟ್ಟು ಓಡಾಡುತ್ತಿದ್ದರು... ಕುರೈಶರ ಯುವ ಕುದಿ ಹೃದಯಗಳ ಬಡಿತವನ್ನು ಏರಿಸಲು ತಮ್ಮ ದೇಣಿಗೆಯನ್ನು ನೀಡುತ್ತಿದ್ದರು... ಅಂತಹವರೆಡೆ ಯಲ್ಲಿ ಆಮಿನಾರ ಸ್ವಭಾವವು ತದ್ವಿರುದ್ಧವಾಗಿತ್ತು... ಲಜ್ಜಾಪೂರ್ಣವಾಗಿತ್ತು. ಆಕೆ ತನ್ನ ನಿಕಟವರ್ತಿಗಳೊಡನೆ ಮಾತನಾಡುವಾಗಲೂ ನಾಚುತ್ತಿದ್ದರು... ತಲೆಯಿಂದ ದುಪ್ಪಟ್ಟಾ ಜಾರಲು ಎಂದೂ ಆಸ್ಪದ

ಕೊಟ್ಟವರಲ್ಲ... ಆಮಿನಾ ನಿಜವಾಗಿಯೂ ಮುದ್ದು ಗೊಂಬೆ ಯಾಗಿದ್ದಾಳೆ ಎಂದು ಕುರೈಶ್ ಸ್ತ್ರೀಯರು ತಮ್ಮಲ್ಲೇ ಆಡಿಕೊಳ್ಳುತ್ತಿದ್ದರು. ಲಜ್ಜಾವತಿ, ಗಂಭೀರವದನೆ, ಸ್ಥಿತಪ್ರಾಜ್ಞೆ, ಇವು ಬಲ್ಲವರು ಆಮಿನರಿಗೆ ನೀಡಿದ ಬಿರುದುಗಳು. ಇತರ ಹುಡುಗಿಯರಲ್ಲಿದ್ದಂತಹ ವಯ್ಯಾರವು ಆಮಿನಾರಿಗೆ ಅನ್ಯವಾಗಿತ್ತು. ಅವರ ಮನೆಮಂದಿ ಅವರನ್ನು ಪ್ರೀತಿಸುತ್ತಿದ್ದುದಷ್ಟೇ ಅಲ್ಲ, ಗೌರವಿಸುತ್ತಲೂ ಇದ್ದರು.

ಅಬ್ದುಲ್ ಮುತ್ತಲಿಬ್‌ರು ಕುರೈಶ್ ಸರದಾರರುಗಳನ್ನು ಜತೆಗೂಡಿಸಿಕೊಂಡು ಅಬ್ದುಲ್ಲಾರ ವಧುವಿನ ಮನೆಗೆ ಹೊರಟರು. ವಧುಗೃಹದವರು ಗಂಡಿನ ಕಡೆಯವರನ್ನು ಆದರಪೂರ್ವಕ ಬರಮಾಡಿಕೊಂಡರು. ಪುಟ್ಟಪುಟ್ಟ ಬಾಲೆಯರು ದಫ್ ಬಾರಿಸುತ್ತಾ ಸ್ವಾಗತ ಗೀತೆ ಹಾಡಿದರು. ಅದರೊಂದಿಗೇ ಅವರ ಗೀತೆಯಲ್ಲಿ ಕಅಬಾಲಯದ ಮಹಾನತೆ, ಕುರೈಶರ ಕುಲಮಹಿಮೆ, ಅಬೂಕುಬೈಸ್‌ನ ಪ್ರಶಂಸೆ, ಒಂಟೆಗಳ ಸಾಂಗತ್ಯದ ವೃತ್ತಾಂತವೂ ಸೇರಿ ಕೊಂಡಿತ್ತು. ಕೆಲವರ ಗೀತೆಯಲ್ಲಿ ಕುರೈಶರ ಪರಾಕ್ರಮವನ್ನೂ ಪ್ರಶಂಸಿಸಲಾಗಿತ್ತು... ಕುರೈಶರ ಖಡ್ಗಗಳ ಅಲಗುಗಳು ರಕ್ತಕುಡಿದು ಮಿನುಗುತ್ತಿವೆ... ಅವರನ್ನು ಎದುರಿಸುವು ದೆಂದರೆ ಭೂಮಿ-ಆಕಾಶಗಳ ವಿರೋಧ ಕಟ್ಟಿಕೊಂಡಂತೆ... ಬಾಲಕಿಯರ ಹಾಡುಗಳಲ್ಲಿ ರಾಗ-ಲಯವಿದ್ದಿರಲಿಲ್ಲ, ಆದರೆ ಅವರ ಧ್ವನಿಯಲ್ಲಿ ವಿಶಿಷ್ಟವಾದ ಆಕರ್ಷಣೆಯಿತ್ತು. ಮನೆಯಿಡೀ ಸಂತೋಷದ ಕಡಲಲ್ಲಿ ಮಿಂದೇಳುತ್ತಿತ್ತು. ಹಿರಿಯರ ಗಂಭೀರವಾದ ಸಂತೋಷಾಚರಣೆಯ ನಡುವೆ ಪುಟ್ಟ ಮಕ್ಕಳ ಕಿಲಕಿಲ, ಕಲರವ ತುಂಬಿಕೊಂಡು ವಾತಾವರಣವಿಡೀ ಮಂದಹಾಸದ ಮಂದಮಾರುತ ಬೀಸುತ್ತಿತ್ತು.

ಅರಬರ ಪುರಾತನ ವಿವಾಹ ಪದ್ಧತಿಯನ್ನು ನೆರವೇರಿಸಲಾಯಿತು. ಅತ್ಯಂತ ಸರಳವಾಗಿ! ಅಬ್ದುಲ್ ಮುತ್ತಲಿಬ್‌ರ ಮಗ ಅಬ್ದುಲ್ಲಾ ಮತ್ತು ವಹಬ್‌ರ ಮಗಳು ಆಮಿನರು ಪರಸ್ಪರ ವಿವಾಹ ಬಂಧದಲ್ಲಿ ಸೇರಿಕೊಂಡರು ಎಂದು ಘೋಷಣೆಯಾಯಿತು. ಜನರು ಅಬ್ದುಲ್ ಮುತ್ತಲಿಬ್‌ರಿಗೆ ಶುಭಾಶಯ ಕೋರಿದರು. ಸಯ್ಯದುಲ್ ಕುರೈಶ್‌ರು ಅಲ್ಲಾಹನಿಗೆ ಕೃತಜ್ಞತೆಯರ್ಪಿಸುವಂತೆ ಆಕಾಶದ ಕಡೆಗೆ ನೋಟ ಬೀರಿದರು.

ಎರಡು ಅದೃಷ್ಟ ನಕ್ಷತ್ರ(ತಾರೆ)ಗಳು ಒಂದುಗೂಡಿದವು...

ಎರಡು ಜೀವಗಳು ಪರಸ್ಪರ ಸಂಗಾತಿಯಾದರು...

ಆಮಿನಾ ತವರಿನಿಂದ ಬೀಳ್ಕೊಂಡು ಪತಿಗೃಹಕ್ಕೆ ತೆರಳಿದರು. ಅದೃಷ್ಟಶಾಲಿ ವಧುವನ್ನು ಮನೆಯ ಹೆಂಗಸರು ಆದರದಿಂದ ಬರಮಾಡಿಕೊಂಡರು. ವಧುವಿಗೆ ಅನುನಯದ ರತ್ನಗಂಬಳಿಯನ್ನು ಹಾಸಿದರು. ವಧೂವರರ ಇಂತಹ ಜೋಡಿಯನ್ನು ಇದುವರೆಗೂ ನಾವು ಕಂಡಿಲ್ಲವೆಂಬುದೇ ಮಕ್ಕಾದ ಹೆಂಗಸರ ಉದ್ಗಾರವಾಗಿತ್ತು. ಪರಸ್ಪರರಿಗೆ ಅನುರೂಪವಾದ ಜೋಡಿ! ಅಬ್ದುಲ್ಲಾ ಸೂರ್ಯಪ್ರಕಾಶವಾಗಿದ್ದರೆ, ಆಮಿನಾ ಚಂದ್ರಕಾಂತೆಯಾಗಿದ್ದರು. ಈರ್ವರೂ ಲಜ್ಜಾವಂತಿಕೆ, ಸಜ್ಜನಿಕೆ, ಸಭ್ಯತೆಯ ಮೂರ್ತರೂಪ... ಪರಸ್ಪರರಿಗೆ ಪೂರಕ...

ಒಬ್ಬರಿಲ್ಲದೆ ಇನ್ನೊಬ್ಬರಿಲ್ಲ ಎಂಬಂತೆ!

ಅಬ್ದುಲ್ ಮುತ್ತಲಿಬ್‌ರು ಆಪ್ತ ಸಂಬಂಧಿಕರಿಗೂ ಮಿತ್ರರಿಗೂ ಆಮಂತ್ರಣ ನೀಡಿದರು. ದೊಡ್ಡದೊಡ್ಡ ಬಾಣಲೆಗಳಲ್ಲಿ ಮಾಂಸದಡುಗೆ ಸಿದ್ಧವಾಗಿತ್ತು... ರೊಟ್ಟಿಯ ತುಂಡುಗಳನ್ನು ನೆನೆಸಿಟ್ಟ ಮಾಂಸದ ಸಾರು! ಇದು ಅರಬರ ಇಷ್ಟದ ತಿಂಡಿ 'ಸರೀದ್' ಆಗಿದೆ. ದೊಡ್ಡದೊಡ್ಡ ಹರಿವಾಣಗಳಲ್ಲಿ ಅದನ್ನು ಬಡಿಸಲಾಯಿತು. ಒಂದೊಂದು ಹರಿವಾಣದ ಸುತ್ತಲೂ ಹತ್ತಿಪ್ಪತ್ತು ಮಂದಿ ಕುಳಿತುಕೊಂಡು ಮೆಲ್ಲತೊಡಗಿದರು. ಗುಂಪುಗೂಡಿದಾಗ ಮಾನವ ಸಹಜವಾಗಿ ತಮಾಷೆ-ಹಾಸ್ಯ-ವಿನೋದವು ನಡೆಯುತ್ತದೆಯಷ್ಟೇ.

"ಈ ಮಾಂಸವನ್ನು ನೋಡಿ! ಯಮನ್‌ನಿಂದ ಲೋಬಾನ, ಸುಗಂಧದ್ರವ್ಯಗಳನ್ನು ಹೊತ್ತು ತಂದ ಒಂಟೆಯ ಮಾಂಸವಿದು!!!"

"ಹೌದೌದು... ಆದ್ದರಿಂದಲೇ ತಾನೇ ಇದು ಇಷ್ಟ ಸುವಾಸನೆಯಿಂದ ಕೂಡಿರುವುದು!"

(ಎಲ್ಲರೂ ಗಹಗಹಿಸುತ್ತಾರೆ.)

"ಅಬೂ ಕಾರಿಅ! ಈ ಮೂಳೆಯನ್ನು ನೋಡಿ! ಖಡ್ಗದಂತೆ ಹರಿತವಾಗಿದೆಯಲ್ಲವೇ... ಇದರ ತಂದೆ-ತಾತಂದಿರು ಯುದ್ಧ ಭೂಮಿಯಲ್ಲಿ ಸೇವೆಗೈಯುತ್ತಿದ್ದಿರಬಹುದು!"

(ಯುವಕರು ನಗತೊಡಗುತ್ತಾರೆ.)

"ಮೆತ್ತಗೆ ಮಾತಾಡು ವಲೀದ್! ಇದು ಅಬ್ದುಲ್ ಮುತ್ತಲಿಬ್‌ರ ಮನೆ! ಕೈಮಾರ ಮಗ ರಝಾಅನ ಮದ್ಯದಂಗಡಿಯಲ್ಲ... ನೆನಪಿರಲಿ."

ಅಬ್ದುಲ್ ಮುತ್ತಲಿಬ್‌ರು ಅಬ್ದುಲ್ಲಾ ಮತ್ತಿತರ ಪುತ್ರರೊಡಗೂಡಿ ಕಅಬಾ ಭವನಕ್ಕೆ ಪ್ರದಕ್ಷಿಣೆ ಬಂದರು... ಕೃತಜ್ಞತಾಪೂರ್ವಕ ಪ್ರದಕ್ಷಿಣೆ! ಅದರಲ್ಲಿ ಪ್ರೀತಿ, ಭಕ್ತಿ ಮತ್ತು ಮನಃ ಶಾಂತಿ ಎಲ್ಲವೂ ಬೆರಕೆಯಾಗಿತ್ತು. ಅದೇ ವೇಳೆ, ಕಅಬಾದ ಛಾವಣಿಯ ಮೇಲಿಂದ ಸುಂದರ ಪಾರಿವಾಳಗಳೂ ವೃತ್ತಾಕಾರವಾಗಿ ಹಾರಾಡುತ್ತಿದ್ದುವು. 'ನಿಮ್ಮ ಸಂತೋಷದಲ್ಲಿ ನಾವೂ ಭಾಗಿಯೆಂದುಕೊಳ್ಳಿರಿ' ಎಂಬ ಸಂದೇಶ ಸಾರುತ್ತಿದ್ದುವು...

ಖ◆◆◆ಙ

ಸಿರಿಯಾದೆಡೆಗೆ...

ಅಬ್ದುಲ್ಲಾರ ನಿಕಾಹ್ ಆಗಿ ಸುಮಾರು ಮೂರು ತಿಂಗಳು ಕಳೆಯಿತು. ಅದೊಂದು ದಿನ... ಅಬ್ದುಲ್ ಮುತ್ತಲಿಬ್‌ರ ಮನೆಯಂಗಳದಲ್ಲಿ ಒಂಟೆಗಳ ಜೀನು ಕಟ್ಟಲಾಗುತ್ತಿದೆ. ಹುರಿದ ಧಾನ್ಯ ತುಂಬಿಸಿದ ಚೀಲಗಳನ್ನೂ ಅವುಗಳಲ್ಲಿ ಹೇರಲಾಗುತ್ತಿದೆ... ಚರ್ಮದ ಚೀಲಗಳಲ್ಲಿ ನೀರು ತುಂಬಿಸಲಾಗುತ್ತಿದೆ.... ಖಡ್ಗಗಳ ಒರೆಗಳನ್ನು ಬದಲಿಸಲಾಗುತ್ತಿದೆ. ಬತ್ತಳಿಕೆಗಳಲ್ಲಿ ಹರಿತವಾದ ಬಾಣಗಳನ್ನು ಜೋಡಿಸಲಾಗುತ್ತಿದೆ. ಇದೆಲ್ಲವೂ ಆತ್ಮ ರಕ್ಷಣಾರ್ಥ. ದೂರದ ನಾಡಿಗೆ ಪ್ರಯಾಣ ಬೆಳೆಸುವಾಗ ಇದೆಲ್ಲ ಅನಿವಾರ್ಯ. ಪರದೇಶಕ್ಕೆ ಹೊರಡುವಾಗ ಎಲ್ಲ ಅರಬರೂ ಹೀಗೆಯೇ ಸರ್ವಸನ್ನದ್ಧರಾಗಿ ಹೋಗುತ್ತಿದ್ದರು.

ಅಬ್ದುಲ್ಲಾ... ನವವಿವಾಹಿತ ಅಬ್ದುಲ್ಲಾ ವ್ಯಾಪಾರ ನಿಮಿತ್ತ ಸಿರಿಯಾಕ್ಕೆ ಯಾತ್ರೆ ಹೊರಟಿದ್ದಾರೆ. ಬಂಧು-ಮಿತ್ರಾದಿಗಳು ಬೀಳ್ಕೊಡಲು ಜಮಾಯಿಸಿದ್ದಾರೆ. ಈ ಯಾತ್ರೆಯಲ್ಲಿ ನಿರ್ಜನ ಮರಳುಗಾಡು, ಭಯಾನಕ ಅರಣ್ಯ ಮತ್ತು ಕ್ಲಿಷ್ಟಕರ ಮಾರ್ಗವನ್ನು ಸಾಗಿ ಹೋಗಬೇಕಾಗಿ ಬರುತ್ತದೆ.

"ಯಾ ಇಬ್ನು ಅಬ್ದುಲ್ ಮುತ್ತಲಿಬ್! ಮದೀನದಿಂದ ಆರು ದಿನಗಳ ಹಾದಿ ಕ್ರಮಿಸಿದ ಬಳಿಕ ದೊರಕುವ ಖರ್ಜೂರ ತೋಪುಗಳಿವೆಯಲ್ಲ... ಅಲ್ಲಿ ಭಾರೀ ಅಪಾಯವಿದೆ. ಯಾತ್ರಾ ತಂಡಗಳು ಹೆಚ್ಚಾಗಿ ಅಲ್ಲಿ ದೋಚಲ್ಪಡುತ್ತವೆ... ಗಿಫ್ಫಾರ್ ಗೋತ್ರದ ಲೂಟಿಕೋರರು ಆ ಪ್ರದೇಶದಲ್ಲಿ ವ್ಯಾಪಕವಾಗಿ ಕ್ಷೋಭೆಯನ್ನು ಹರಡಿದ್ದಾರೆಂದು ಕೇಳಿದ್ದೇವೆ... ಜಾಗರೂಕತೆಯೊಂದಿಗೆ ಹೋಗಬೇಕು" ಓರ್ವ ಹಿರಿಯರು ಕಾಳಜಿ ತುಂಬಿದ ಸ್ವರದಲ್ಲಿ ಹೇಳಿದರು.

ಉತ್ತರವಾಗಿ ಅಬ್ದುಲ್ಲಾ ತಮ್ಮ ಕೈಯಲ್ಲಿದ್ದ ಖಡ್ಗವನ್ನು ನೋಡಿದರು. ಅಂದರೆ ದರೋಡೆಕೋರರು ಎದುರಾದರೆ ನನ್ನ ಈ ಖಡ್ಗವೇ ಸೂಕ್ತ ಉತ್ತರ ನೀಡುವುದು ಎಂದಾಗಿತ್ತು ಅವರ ಇಂಗಿತ. ಹಾಶ್ಮಿ ಮನೆತನದವರು ಧೈರ್ಯ-ಸ್ಥೈರ್ಯದಲ್ಲಿ ಅದ್ವಿತೀಯರು... ಅಪಾಯಗಳು ಅವರನ್ನು ಧೃತಿಗೆಡಿಸುವುದಿಲ್ಲ... ಬನೂ ಹಾಶಿಮ್‌ರ ಖಡ್ಗಗಳು ಅದೆಷ್ಟೋ ಅಪಾಯದ ಕಾಲ ಘಟ್ಟಗಳಲ್ಲಿ ಕಅಬಾವನ್ನು ರಕ್ಷಿಸಿವೆ...

ಅಬ್ದುಲ್ ಮುತ್ತಲಿಬ್‌ರು ಪ್ರಿಯ ಪುತ್ರ ಅಬ್ದುಲ್ಲಾರ ಹಣೆ ಚುಂಬಿಸಿದರು. ಅಬ್ದುಲ್ಲಾರು

ಅಯಾಚಿತವಾಗಿ ತಲೆಬಾಗಿದರು. ಮಗನು ಯಶಸ್ವಿಯಾಗಿ ಮರಳಲಿ ಎಂದು ಅಬ್ದುಲ್ ಮುತ್ತಲಿಬ್‌ರು ಪ್ರಾರ್ಥಿಸಿದರು. ಅವರ ತುಟಿಗಳೊಂದಿಗೆ ನೀಳ ಶ್ವೇತ ಗಡ್ಡವೂ ಕಂಪಿಸಿದುವು. ಅಬ್ಬಾಸ್ ಒಂಟೆಯ ಲಗಾಮನ್ನು ಹಿಡಿದಿದ್ದಾರೆ. ಹಮ್‌ಝಾ, ಒಂದು ಕೈಯಲ್ಲಿ ಜೀನನ್ನು ಒತ್ತಿ ಹಿಡಿದು ರಿಕಾಪಿಗೆ ಕಾಲಿಟ್ಟಿದ್ದ ಅಬ್ದುಲ್ಲಾರಿಗೆ ಆಸರೆ ನೀಡುತ್ತಿದ್ದಾರೆ. ಅಣತಿ ದೂರದಲ್ಲಿ ಆಮಿನಾ, ಕಲ್ಲಿನ ಮೂರ್ತಿಯಂತೆ ನಿಂತು ಪತಿಯೆಡೆಗೆ ಆರ್ದ್ರ ನೋಟ ಬೀರುತ್ತಿ ದ್ದಾರೆ. ಅವರ ಮಟ್ಟಿಗೆ ಪತಿಯಲ್ಲ, ಅವರ ಜೀವನವೇ ದೂರ ಹೋಗುತ್ತಿದೆ. ನಿರ್ಜನವಾದ ಕಾಡು ಮೇಡುಗಳಲ್ಲಿ... ದೂರ ದೂರದವರೆಗೂ ಯಾರೊಬ್ಬ ನರಪಿಳ್ಳೆಯೂ ಕಾಣಸಿಗದಂತಹ ಮರಳುಗಾಡಿನಲ್ಲಿ... ಅಯ್ಯೋ! ಆದರೆ ತನ್ನ ಮನದಾಳದಲ್ಲೇಳುತ್ತಿರುವ ತುಮುಲದ ಅಲೆಯನ್ನು ಯಾರ ಮುಂದೆ ಅನಾವರಣ ಗೊಳಿಸಲಿ? ಒಂಟೆಗೆ ಕಟ್ಟಿದ ಜೀನನ್ನೇ ಕಿತ್ತೆಸೆದು ಪತಿಯನ್ನು ದೂರ ಹೋಗುವುದರಿಂದ ತಡೆಯಲೇ ಎಂದು ಅವರ ಮನ ಹಾತೊರೆಯಿತು.

ಆದರೆ ಆಮಿನಾ ಸ್ವಯಂ ತನ್ನ ಚಿತ್ತವನ್ನು ಸಂತೈಸುತ್ತಾರೆ... ಮನೋ ಸಾಗರದಲ್ಲಿ ಅಲೆಯೆದ್ದಿರುವ ದುಗುಡವನ್ನು ತಿಳಿಯಾಗಿಸಲು ಪ್ರಯತ್ನಿಸುತ್ತಾರೆ. ಒಳಮನ ಹೇಳುತ್ತದೆ... ನಿನ್ನ ಪತಿ ವ್ಯಾಪಾರ ನಿಮಿತ್ತ ಸಿರಿಯಾಕ್ಕೆ ಪ್ರಯಾಣ ಹೊರಟಿದ್ದಾರೆ, ಯುದ್ಧಕ್ಕಲ್ಲ. ಕ್ಷೇಮ ದೊಂದಿಗೇ ಮರಳುವರು... ಕುರೈಶರು ಸದಾ ಯಮನ್, ಸಿರಿಯಾ, ನಜ್ದ್ ಮತ್ತು ಈಜಿಪ್ಟ್‌ಗಳಿಗೆ ಹೋಗಿ ಬರುತ್ತಾ ಇರುತ್ತಾರಷ್ಟೇ... ಕುರೈಶ್ ಪುರುಷರ ಜೀವನವಿಡೀ ಕುದುರೆಯ ಬೆನ್ನ ಮೇಲೋ ಒಂಟೆಯ ಡುಬ್ಬದ ಮೇಲೋ ಕಳೆದು ಹೋಗುತ್ತದೆ... ಐದಾರು ತಿಂಗಳ ಮಟ್ಟಿಗೆ ತಾನೇ ಈ ವಿರಹ? ಅದೇನು ಮಹಾ! ಕಣ್ರೆಪ್ಪೆ ಮಿಟುಕಿಸಿ ದಂತೆ ಅದೂ ಕಳೆದು ಹೋಗುತ್ತದೆ... ಆಮಿನಾ ತನ್ನಷ್ಟಕ್ಕೇ ಸಮಾಧಾನ ಪಟ್ಟುಕೊಳ್ಳುತ್ತಾರೆ.

ಆದರೂ ಅವರ ಹೃದಯವೇಕೋ ಜೋರಾಗಿಯೇ ಬಡಿಯುತ್ತಿದೆ... ಅಬ್ದುಲ್ಲಾನನ್ನು ಮನದಣಿಯೇ ನೋಡಿಕೋ. ಯಾರಿಗೆ ಗೊತ್ತು, ಮುಂದೆ ಇನಿಯನನ್ನು ಮತ್ತೆ ನೋಡುವಿಯೋ ಇಲ್ಲವೋ... ಯಾರೋ ಆಮಿನಾರ ಕಿವಿಯಲ್ಲಿ ಉಸುರಿಸಿದಂತಾಯಿತು!

ಅಬ್ದುಲ್ಲಾ ಕೂಡ ಮನೆಯ ಗೋಡೆಗಳೆಡೆಗೆ ಹತಾಶ ದೃಷ್ಟಿ ಬೀರಿದರು, ಇನ್ನೆಂದೂ ಮರಳಿ ಬರಲಾರೆನೆಂಬ ರೀತಿಯಲ್ಲಿ! ಅವರ ಕಣ್ಣುಗಳಲ್ಲಿ ಶಾಶ್ವತ ಅಗಲಿಕೆಯ ನೋವಿತ್ತು. ಅಲ್ಲಿ ನೆರೆದವರೂ ಗದ್ಗದಿತರಾಗಿದ್ದರು. ಕುರೈಶ್ ಗೋತ್ರದಿಂದ ದಿನಾ ಯಾರಾದರೂ ಯಾತ್ರೆಗೆ ಹೋಗುತ್ತಲೇ ಇರುತ್ತಾರೆ. ಆದರೆ ಇಂದಿನ ಸ್ಥಿತಿಯೇ ಬೇರೆ. ಇಂತಹ ಒಂದು ಯಾತ್ರೆ-ಬೀಳ್ಕೊಡುಗೆ ಹಿಂದೆಂದೂ ನಡೆದಿರಲಿಲ್ಲ. ಇಂತಹ ಅಗಲಿಕೆಯ ದೃಶ್ಯವನ್ನು ಯಾರೂ ಈತನಕ ಕಂಡಿಲ್ಲ.

ಯಾ ರಬ್ಬುಲ್ ಕಅಬಾ! ಅಬ್ದುಲ್ಲಾರನ್ನು ಸಕ್ಷೇಮ ಮರಳಿಸು. ಇಂದು ನಾವು ಅವರ ಬೆನ್ನನ್ನು ಕಾಣುತ್ತಿರುವಂತೆಯೇ, ನಾಳೆ ಅವರ ಮುಖವನ್ನೂ ನೋಡುವಂತಾಗಲಿ- ನೆರೆದ ಪ್ರತಿಯೋರ್ವರೂ ಹೃದಯಾಂತರಾಳದಿಂದ ದೇವನಲ್ಲಿ ಮೌನ ಮೊರೆಯಿಟ್ಟರು.

ಅಬ್ದುಲ್ಲಾ ಮಕ್ಕಾ ನಗರದ ಗಲ್ಲಿಗಳನ್ನು ದಾಟಿ ಹೋಗುತ್ತಿದ್ದಾರೆ... ಮಾರುಕಟ್ಟೆಯ ಕಡೆಯಿಂದ ಒಂದು ತಿರುವಿನಲ್ಲಿ ಮುಳಿಹುಲ್ಲಿನ ಮನೆಯ ಬಳಿ ಕೆಲವು ಮಹಿಳೆಯರು ನಿಂತು ಮಾತನಾಡುತ್ತಿದ್ದರು...

"ಉಮ್ಮುಸಅದ್! ಇದೋ ನೋಡು ಆಮಿರ್‌ರ ಪ್ರೀತಿಪಾತ್ರ ಮಗ ಅಬ್ದುಲ್ಲಾ ಒಂಟೆಯಲ್ಲಿ ವ್ಯಾಪಾರಿ ಸರಕನ್ನು ಹೇರಿ ಹೋಗುತ್ತಿದ್ದಾನೆ."

"ಆತನ ತಂದೆಯ ಹೆಸರು ಅಬ್ದುಲ್ ಮುತ್ತಲಿಬ್ ಎಂದಾಗಿದೆ... ಸಯ್ಯಿದುಲ್ ಕುರೈಶ್! ಪವಿತ್ರ ಕಅಬಾಲಯದ ಮೇಲ್ವಿಚಾರಕ... ಆದರೆ ನೀನು... ನೀನು..."

(ಮಧ್ಯದಲ್ಲೇ ತಡೆಯುತ್ತಾ) "ನಿನಗೊಂದೂ ಗೊತ್ತಿಲ್ಲ, ಹುಹ್! ನೀನು ಗೊಂಬೆಗಳೊಂದಿಗೆ ಆಡಲು ಮತ್ತು ಪದ್ಯ ಕಟ್ಟಿ ಹಾಡಲು ಮಾತ್ರವೇ ಲಾಯಕ್ಕು!! ಇಲ್ಲಿ ಕೇಳು, ಅಬ್ದುಲ್ ಮುತ್ತಲಿಬ್‌ರ ನಿಜನಾಮ ಆಮಿರ್ ಎಂದಾಗಿದೆ, ಅವರ ರೂಢನಾಮ ಶೈಬಾ ತಿಳಿಯಿತಾ?"

"ಧನ್ಯವಾದಗಳು... ನಿನ್ನ ಈ ಉಪಕಾರಕ್ಕೆ! ಲಾತ್, ಹುಬಲ್‌ರೆಲ್ಲರ ಕೃಪೆಯು ನಿನ್ನ ಮೇಲಿರಲಿ!"

"ಮತ್ತೆ... ಮತ್ತೆ ನನ್ನ ಮಗನು ಲಬೀದ್‌ನಂತೆ ಕಾವ್ಯ ರಚನೆಯಲ್ಲಿ ಮಿಂಚಲಿ ಎಂದೂ ಹೇಳು... ಅರೇಬಿಯದಾದ್ಯಂತ ಕೀರ್ತಿ ಹರಡಲಿ, ಉಕಾಝ್ ಮತ್ತು ದುಲ್ ಮಜನ್ನದ ಸಂತೆ ಕಟ್ಟೆಗಳಲ್ಲಿ ಅವನ ಹಾಡುಗಳು ಅನುರಣಿಸುತ್ತಿರಲಿ ಅನ್ನು!"

"ಅದನ್ನು ನಾನು ಮನಸ್ಸಿನಲ್ಲಿಯೇ ಹೇಳಿಯಾಯಿತು ಮಾರಾಯ್ತಿ!"

"ಅದಲ್ಲ... ನಾನು ಏನು ಹೇಳುತ್ತಿದ್ದೇನೆ ಅಂದರೆ, ವಿವಾಹಕ್ಕೆ ಮುಂಚೆ ಅಬ್ದುಲ್ಲಾನ ಹಣೆಯಲ್ಲಿದ್ದಂತಹ ತೇಜಸ್ಸು, ಈಗ ಕಾಣುತ್ತಿಲ್ಲವಲ್ಲ! ಈಗ ಆತನ ಹಣೆಯಲ್ಲಿ ಅದರ ಪ್ರಭಾವ ಮಾತ್ರವೇ ಕಾಣಿಸುತ್ತಿದೆ... ಸೂರ್ಯಾಸ್ತದ ನಂತರ ಅಬೂಕುಬೈಸ್‌ನ ಶಿಖರದಾಚೆ ಸೂರ್ಯಕಿರಣಗಳ ಅಸ್ಪಷ್ಟ ಗೆರೆಗಳು ಕಾಣಿಸುವಂತೆ!" ಮೂರನೆಯಾಕೆ ಅಂದಳು.

"ಹೌದೌದು, ನಿನ್ನ ಮಾತುಗಳಿಗೆ ನನ್ನೀ ದೃಷ್ಟಿಯೂ ಸಾಕ್ಷ್ಯ ವಹಿಸುತ್ತಿದೆ. ನನ್ನ ಅಭಿಪ್ರಾಯವೂ ಅದುವೇ!" ಇನ್ನೋರ್ವ ಮಹಿಳೆ ಹೇಳಿದಳು.

ಅಬ್ದುಲ್ಲರ ಕಿವಿಗಳಿಗೂ ಈ ಮಾತುಗಳು ಸೋಕಿದವು... ಆದರೆ ಅಸ್ಪಷ್ಟವಾಗಿ! ಅರ್ಥಂಬರ್ಥ ಕೇಳಿಸಿತಷ್ಟೇ... ಒಂಟೆಗಳ ಕೊರಳ ಗಂಟೆಯ ನಿನಾದ ಹೆಚ್ಚಾಗತೊಡಗಿತು.

ಆಮಿನಾ ಅದಾಗಲೇ ಮಾಳಿಗೆಯ ಮೇಲೇರಿ ಹೋಗಿದ್ದರು... ಅಬ್ದುಲ್ಲಾ ಕಣ್ಣ ದೃಷ್ಟಿಗೆ ನಿಲುಕುವಷ್ಟು ದೂರ ಸಾಗುವವರೆಗೂ ಒಂಟೆಗಳ ಸಾಲುಗಳನ್ನು ನೋಡುತ್ತಾ ನಿಂತರು. ಒಂಟೆಗಳು ಖರ್ಜೂರದ ತೋಪಿನ ಹಿಂದೆ ಮರೆಯಾಗುವ ತನಕ ಹಾಗೆಯೇ ನಿಂತಿದ್ದು, ಇನ್ನು ಆಚೆಗಿರುವುದು ಗುಡ್ಡ ಬೆಟ್ಟಗಳ ಸಾಲು ಎಂದರಿತು, ಭಾರವಾದ ಹೆಜ್ಜೆಗಳೊಂದಿಗೆ

ಕೆಳಗಿಳಿದು ಬಂದರು... ದುಃಖಿತಪ್ತ ಮನಸ್ಸಿನೊಂದಿಗೆ! ವಿರಹ ವೇದನೆ ಯನ್ನು ಹೊತ್ತುಕೊಂಡು!! ಕಂಬನಿ ಹರಿದ ಗಲ್ಲವನ್ನು ದುಪ್ಪಟ್ಟದ ತುದಿಯಿಂದ ಒರೆಸುತ್ತಾ ಕೆಳಗಿಳಿದರು. ಕೈಗಳು ಯಾಕೋ ನಡುಗುತ್ತಿದ್ದುವು.... ಅಬ್ದುಲ್ಲಾ ಹೊರಟಾ ಯಿತು! ಅವರ ಕಣ್ಣೋಟಗಳ ಛಾಪು ಆಮಿನಾರಿಗೆ ಮನೆಯ ಗೋಡೆಗಳಲ್ಲಿ, ಬಾಗಿಲು-ಪರದೆಗಳಲ್ಲಿ ಖಂಡಿತ ಕಾಣುತ್ತಿದ್ದುವು. ಛಾಪು... ನೆರಳು... ಗೆರೆಗಳು... ಗತನೆನಪುಗಳು... ಇವೆಲ್ಲದರ ಒಂದಿಷ್ಟು ಸಾರಾಂಶವನ್ನು ಮನೆಯಿಡೀ ಆವರಿಸಿರುವ ದುಃಖವು ಹೇಳುತ್ತಿತ್ತು.

ಙ•••ಢ

ನಿರೀಕ್ಷೆಯ ಕ್ಷಣಗಳು

ಆಮಿನಾ ಕಾಯುತ್ತಿದ್ದಾರೆ... ಪತಿ ಎಂದು ಬರುವರೋ ಎಂದು ಒಂದೊಂದು ಕ್ಷಣವನ್ನೂ ಎಣಿಸುತ್ತಿದ್ದಾರೆ. ಮುತ್ತೈದೆಯ, ಅದರಲ್ಲೂ ನವವಧುವಿನ ವಿರಹ ವೇದನೆಯು ಹೃದಯಾರ್ದ್ರಕವಾಗಿರುತ್ತದೆ. ಆಕೆ ಬಲ್ಲವರೊಡನೆ ಕೇಳುತ್ತಾರೆ... ವೇಗವಾಗಿ ಓಡುವ ಒಂಟೆಯು ಸಿರಿಯದಿಂದ ಮಕ್ಕಕ್ಕೆ ಬರಲು ಎಷ್ಟು ದಿನ ತಗಲುತ್ತದೆ? ಅಬ್ದುಲ್ ಮುತ್ತಲಿಬ್‌ರು ಸಿರಿಯಕ್ಕೆ ವ್ಯಾಪಾರ ಯಾಣ ಹೊರಟರೆ, ಅಲ್ಲಿ ಎಷ್ಟು ದಿನ ತಂಗುತ್ತಿದ್ದರು? ಹೀಗೆ ಆಮಿನಾ ತನ್ನ ಮನಸ್ಸನ್ನು ಸಂತೈಸಲು ಪ್ರಯತ್ನಿಸುತ್ತಾರೆ. ವಿರಹ ವೇದನೆಯನ್ನು ಹೋಗಲಾಡಿಸಲು ಜೋಗುಳ ಹಾಡಿ, ಒಬ್ಬಂಟಿತನದ ಪ್ರಜ್ಞೆಯನ್ನು ತಟ್ಟಿ ಮಲಗಿಸಲು ಪ್ರಯತ್ನಿಸುತ್ತಾರೆ. ಸಿರಿಯದಿಂದ ಬಂದವರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವರದಿಯೊಪ್ಪಿಸುತ್ತಿದ್ದರು... ಇಂತಿಂತಹ ಗುಡ್ಡ ಪ್ರದೇಶದಲ್ಲಿ ಅಬ್ದುಲ್ಲಾ ಹೋಗುತ್ತಿರುವುದನ್ನು ಕಂಡೆವು... ಇಂತಿಂತಹ ಕಡೆ ಅಬ್ದುಲ್ಲಾ ತಂಗಿದ್ದರು... ಇಂತಿಂತಹ ಖರ್ಜೂರದ ತೋಟದಲ್ಲಿ ಅಬ್ದುಲ್ಲಾ ತನ್ನ ಒಂಟೆಗಳಿಗೆ ಮೇವು ತಿನ್ನಿಸುತ್ತಿದ್ದರಂತೆ... ಆದರೆ ಯಾರೂ ಅಬ್ದುಲ್ಲಾರ ಮರಳಿಕೆಯ ಬಗ್ಗೆ ಖಾತ್ರಿಯಾಗಿ ಹೇಳುತ್ತಿರಲಿಲ್ಲ.

ಅಬ್ದುಲ್ಲಾ ಮಕ್ಕಾದಿಂದ ಸಿರಿಯಕ್ಕೆ ಪ್ರಯಾಣ ಹೊರಟಿದ್ದ ಹಾದಿಯಲ್ಲೇ ಆಮಿನರ ಪ್ರೇಮಭರಿತ ದೃಷ್ಟಿಯಿತ್ತು... ಅವರು ಮರೆಯಾಗಿದ್ದ ಅದೇ ಖರ್ಜೂರದ ತೋಪಿನೆಡೆಯಿಂದ ಸೂರ್ಯ ಉದಯಿಸಿದಂತೆ ಪ್ರತ್ಯಕ್ಷವಾಗುವರು... ಕೊರಳಲ್ಲಿ ಗಂಟೆ ಕಟ್ಟಿರುವ ಕೆಂಪು ಒಂಟೆ, ಅದರ ಮೇಲೆ ಸುಂದರ ಜೀನು, ನೀರಿನ ಚೀಲ... ಅದರ ಪಟ್ಟಿಯನ್ನು ನಾನು ಕೈಯಾರೆ ಹೊಲಿದಿದ್ದೆನಲ್ಲವೇ... ಮತ್ತೆ ಅವರು! ಕುರೈಶರೆಲ್ಲ ಅವರನ್ನು ಕಂಡು 'ಅಹ್ಲನ್ ವ ಸಹ್ಲನ್' (ಸ್ವಾಗತ... ಸುಸ್ವಾಗತ) ಎಂದು ಹೇಳುವರು... ಅಬ್ದುಲ್ ಮುತ್ತಲಿಬ್‌ರು ಮಗ ಗಳಿಸಿ ತಂದ ದಿರ್ಹಮ್-ದಿನಾರ್‌ಗಳನ್ನು ಸಸಂತೋಷ ಎಣಿಸುವರು...

ಹೀಗೆ ಆಮಿನಾ ಹಗಲುಗನಸು ಕಾಣುತ್ತಾ, ಕಾತರದಿಂದ ಕಾಯುತ್ತಾ... ಹಲವು ತಿಂಗಳುಗಳೇ ಗತಿಸಿದುವು. ಅಬ್ದುಲ್ ಮುತ್ತಲಿಬ್‌ರಿಗೂ ಮಗನ ಆಗಮನ ವಿಳಂಬ ವಾಗುತ್ತಿರುವುದರ ಚಿಂತೆ ಹತ್ತತೊಡಗಿತು. ಹೀಗಿರಲೊಂದು ದಿನ ಸಿರಿಯದಿಂದ ವ್ಯಾಪಾರಿ ತಂಡವೊಂದು ಆಗಮಿಸುತ್ತಿದೆಯೆಂದು ತಿಳಿದು ಬಂತು... ವ್ಯಾಪಾರಿಗಳು ಅತೀವ ಬಳಲಿದ್ದರು.

ಮರುದಿನ ಬೆಳಿಗ್ಗೆ ಅಬ್ದುಲ್ ಮುತ್ತಲಿಬ್‌ರನ್ನು ಭೇಟಿಯಾಗುವೆವೆಂದೂ ಹೇಳಿ ಕಳುಹಿಸಿದರು. ಆದರೆ ಅಬ್ದುಲ್ ಮುತ್ತಲಿಬ್ ತಮ್ಮ ನಿತ್ಯೋಪಯೋಗಿ ಖಡ್ಗವನ್ನು ಎತ್ತಿ ಹೊರಟು, ಆಗಂತುಕರನ್ನು ಸ್ವಯಂ ಭೇಟಿಯಾದರು. ವ್ಯಾಪಾರಿಗಳು ಹೇಳಿದರು, "ಅಬ್ದುಲ್ಲಾ ಸಿರಿಯದಿಂದ ಮರಳಿ ಬರುವಾಗ ಮದೀನದಲ್ಲಿಳಿದರು... ಅನಾರೋಗ್ಯ ದಿಂದಿದ್ದಾರೆ... ನಾವು ಅಲ್ಲಿಂದ ಹೊರಡುವಾಗ ಅವರಿಗೆ ಜ್ವರವಿತ್ತು."

ಆಮಿನಾ, ಮಾವನ ಆಗಮನವನ್ನೇ ನಿರೀಕ್ಷಿಸಿ ಮಾಳಿಗೆಯ ಕಿಟಿಕಿಯಲ್ಲಿ ಕಾತರದಿಂದ ಕುಳಿತಿದ್ದರು. ಯಸ್ರಿಬ್‌ನಿಂದ ಮರಳಿದ ವ್ಯಾಪಾರಿ ತಂಡದಿಂದ ಶುಭವಾರ್ತೆಯನ್ನೇನಾದರೂ ಕೇಳಿ ತಂದಿರಬಹುದು ಎಂದು... ಇತ್ತ ಅಬ್ದುಲ್ ಮುತ್ತಲಿಬ್‌ರ ಮುಖ ಚಹರೆಯಲ್ಲಿ ಚಿಂತೆಯ ಗೆರೆಗಳು ಮೂಡಿದ್ದುವು. ಆದರೆ ಸೊಸೆಯು ಕಾತರದಿಂದ ಕಾಯುತ್ತಿರುವುದನ್ನು ಕಂಡು ಅವರು ಮನದಲ್ಲೇಳುತ್ತಿರುವ ಚಿಂತೆಯ ಅಲೆಗಳನ್ನು ತಹಬಂದಿಗೆ ತರುತ್ತಾ ಗಂಭೀರವಾಗಿ ಹೇಳಿದರು,

"ಸಣ್ಣ ಮಟ್ಟಿನ ಜ್ವರ ಬಂದಿದೆ ಅಬ್ದುಲ್ಲಾನಿಗೆ. ದೀರ್ಘ ಪ್ರಯಾಣ ಅನ್ನುವಾಗ, ಬಿಸಿರಕ್ತದ ಯುವಕರ ದೇಹ ಕೊಂಚ ಕಾವೇರುವುದು ಸಹಜ. ಆದರೆ... ಆದರೆ ಚಿಂತಿಸುವ ಅಗತ್ಯವಿಲ್ಲ. ಅಲ್ಲಿ ಅವನು ನಿಕಟ ಬಂಧುಗಳ ಬಳಿಯೇ ಉಳಕೊಂಡಿದ್ದಾನೆ. ಯಸ್ರಿಬ್‌ನವರು ಸಹಾನುಭೂತಿಯುಳ್ಳವರಾಗಿದ್ದಾರೆ. ಅತಿಥಿ ಸತ್ಕಾರದಲ್ಲಿ ಅವರು ಎತ್ತಿದ ಕೈ. ಅಬ್ದುಲ್ಲಾನನ್ನು ಸತ್ಕರಿಸುವುದರಲ್ಲಿ ಅವರು ಯಾವುದೇ ಕೊರತೆಯನ್ನುಂಟು ಮಾಡಲಾರರು. ನಾನು ನಾಳೆ ಬೆಳಿಗ್ಗೆನೇ ಹಾರಿಸ್‌ನನ್ನು ಯಸ್ರಿಬ್‌ಗೆ ಕಳುಹಿಸುತ್ತೇನೆ. ಅವನು ಅಬ್ದುಲ್ಲಾನನ್ನು ಬಲುಬೇಗನೇ ಕರಕೊಂಡು ಬಂದಾನು."

ಪತಿಯ ಅನಾರೋಗ್ಯ ವಾರ್ತೆಯು ಆಮಿನಾರನ್ನು ಅಧೀರಗೊಳಿಸಿತು... ಅವರಿಗೆ ಅನಾರೋಗ್ಯ ಬಾಧಿಸಿತೇ... ಯಸ್ರಿಬ್‌ನಲ್ಲಿ ತಂಗಿದ್ದಾರೆಯೇ... ಕಿವಿಗೆ ಅಪ್ಪಳಿಸಿದ ಈ ದುಃಖ ವಾರ್ತೆಯು ಆಮಿನರ ಹೃದಯವನ್ನು ಚುಚ್ಚಿದಂತಾಯಿತು. ಭಾರೀ ಆಘಾತ ಎರಗಿದಂತಾಯಿತು. ಆಮಿನರ ಕಣ್ಣುಗಳು ಶುಷ್ಕವಾಗಿದ್ದರೂ ಮನಸ್ಸು ಒಳಗಿಂದೊಳಗೇ ರೋದಿಸುತ್ತಿದೆ. ಅದೇ ಸ್ಥಿತಿಯಲ್ಲಿ ಅವರು ಕೆಳಗಿಳಿದು ಬಂದರು. ಆದರೆ ಅವರ ಹೆಜ್ಜೆಗಳು ದುಃಖಾತಿರೇಕದಿಂದಾಗಿ ಭಾರವಾಗಿವೆ. ಕ್ಷಣಕ್ಕೊಂದರಂತೆ ತರತರದ ಆಲೋಚನೆಗಳೂ ಅವರ ಮನಸ್ಸನ್ನು ಮುತ್ತಿಕೊಳ್ಳುತ್ತಿವೆ. ಒಮ್ಮೆ ಶುಭ ನಿರೀಕ್ಷೆಯು ಗರಿಗೆದರಿದಾಗ, ಅವರ ಕಣ್ಣುಗಳಲ್ಲಿ ಆನಂದದ ಹೊಳಪು ಸೂಸುತ್ತದೆ. ಆದರೆ ಮರುಕ್ಷಣವೇ ಆಶಾಗೋಪುರ ಕುಸಿದು ಬಿದ್ದಂತೆ ಮುಖ ಕಳಾಹೀನವಾಗಿ ಬಿಡುತ್ತದೆ... ನೀಲಾಕಾಶದಲ್ಲಿ ಕರಿ ಮೋಡಗಳು ಆವರಿಸಿದಂತೆ! ಅವರು ಕಲ್ಪನಾ ಲೋಕದಲ್ಲಿ ವಿಹರಿಸುತ್ತಲೂ ಇದ್ದಾರೆ, ವಾಸ್ತವ ಜಗತ್ತಿ ನೆಡೆಗೆ ಹೊರಳಿ ನೋಡುತ್ತಲೂ ಇದ್ದಾರೆ. ನಿರೀಕ್ಷೆಯ ಹಾದಿಗೆ ಒಮ್ಮೆ ಬಿಸಿಲ ಬೆಳಕು ಹಾಯ್ದರೆ ಇನ್ನೊಮ್ಮೆ ಮೋಡದ ಕತ್ತಲು ಆವರಿಸುತ್ತಿತ್ತು.

"ಬೀಬೀ! 'ಇಂಥ' ಸ್ಥಿತಿಯಲ್ಲಿ ದುಃಖಕ್ಕೆ ಬಲಿ ಬೀಳಬಾರದು! ಇಂಥ ಸೂಕ್ಷ್ಮ ಗಳಿಗೆಯಲ್ಲಿ ಸಂತೋಷದಿಂದ ಇರಬೇಕು."

ಸೇವಕಿಯ ಅನುನಯದ ಗದರಿಕೆ ಕೇಳಿ ಆಮಿನಾರ ಮುಖಾರವಿಂದವು ನಾಚಿಕೆ ಯಿಂದ ಕೆಂಪೇರಿತು...

"ಆದರೆ... ಅವರು ಅಸ್ವಸ್ಥರಾಗಿದ್ದಾರೆ... ಪರವೂರಲ್ಲಿ..." ಆಮಿನಾರ ಮಾತನ್ನು ಮಧ್ಯದಲ್ಲೇ ತಡೆದು ಸೇವಕಿ, "ಏನಾಯಿತು... ಆರೋಗ್ಯವಂತರು ತಾನೇ ರೋಗ ಪೀಡಿತರಾಗುವುದು? ಹಾಂ! ಅಷ್ಟಕ್ಕೇ ಬೇಸರಗೊಳ್ಳುತ್ತಾರೇನು? ನನ್ನಣ್ಣನಿಗೆ ಇಂಥ ಜ್ವರ-ಬಾಧೆಗಳನ್ನು ದೂರ ಮಾಡುವ ತಂತ್ರ ಗೊತ್ತು. ನಾನೀಗಲೇ ಹೋಗಿ ಹೇಳುತ್ತೇನೆ. ಅಣ್ಣ ಇಲ್ಲಿ ಮಕ್ಕದಲ್ಲಿ ಕುಳಿತು ಮಂತ್ರ ಪಠಿಸಿ ಯಸ್ರಿಬ್‌ನೆಡೆಗೆ ಊದಿದರೆ ಸಾಕು... ರೋಗ ಮಂಗಮಾಯ! ಅಣ್ಣ ಏನನ್ನಾದರೂ ಕಲ್ಪಿಸಿದರೆ ಸಾಕು... ಲಾತ್, ಹುಬಲ್‌ಗಳೂ ಅವನಿಗೆ ಸಹಾಯ ಮಾಡುತ್ತವೆ ಗೊತ್ತಾ? ಉಝ್ಝಾವಂತೂ ನನ್ನಣ್ಣನ ಮೇಲೆ ವಿಶೇಷ ಕೃಪೆದೋರುತ್ತದೆ!"

ಇತ್ತ, ಅಬ್ದುಲ್ ಮುತ್ತಲಿಬ್‌ರು ಜನರ ವ್ಯಾಜ್ಯಗಳನ್ನು ತೀರಿಸಲು ಮತ್ತು ಪ್ರಮುಖ ವಿಷಯಗಳಲ್ಲಿ ಸಮಾಲೋಚಿಸಲು ದಾರುನ್ನದ್ವಕ್ಕೆ ಹೋದರು. ಸೇವಕಿಯು ರೊಟ್ಟಿ ತಯಾರಿಸಲು ಒಳಹೊಕ್ಕಳು. ಮನೆಯ ಇನ್ನಿತರ ಮಹಿಳೆಯರು ತಂತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡರು. ಆದರೆ ಆಮಿನರ ಚಿತ್ತವು ಯಸ್ರಿಬ್‌ನ ಹಾದಿಯನ್ನೇ ತಡ ಕಾಡುತ್ತಿದೆ. ಅವರಿಗದೊಂದೇ ಧ್ಯಾನ! ಪತಿಯದ್ದೇ ನೆನಪು! ಸಚ್ಚರಿತಳಾದ ಸ್ತ್ರೀಯ ಮಟ್ಟಿಗೆ ಆಕೆಯ ಪತಿಯೇ ಸರ್ವಸ್ವವಾಗಿರುತ್ತಾನೆ.

ಸತ್ಯಪ್ರಕಾಶದ ಉದಯ

ಜೀವನವು ಸ್ವಪ್ನವಾಗಿದೆ ಮತ್ತು ಬಹಳಷ್ಟು ಸ್ವಪ್ನಗಳು ನಿಜವಾಗಿಯೂ ಜೀವನವೇ ಆಗಿ ಬಿಡುತ್ತವೆ. ಆದರೆ ಪ್ರತಿಯೊಬ್ಬರಿಗೂ ಇಂಥ ಸತ್ಯ ಸ್ವಪ್ನಗಳು ಕಾಣಲಾರವು. ಹೆಚ್ಚಿನವರು ಸ್ವಪ್ನಗಳನ್ನು ಕಲ್ಪನೆಗಳ ಕಥಾಗುಚ್ಛವೆಂದೂ ಭ್ರಮೆಯ ಪ್ರತಿಫಲವೆಂದೂ ಹೇಳುತ್ತಾರೆ. ಆದರೆ ಅದೆಲ್ಲವೂ ಅವರವರ ಚಿಂತನೆಯ ಆಳ-ವಿಸ್ತಾರ ಮತ್ತು ಹೃದಯ-ದೃಷ್ಟಿಗಳ ಪರಿಶುದ್ಧತೆಯನ್ನು ಅವಲಂಬಿಸಿದೆ. ಕೆಲವು ಕನಸುಗಳು ಭ್ರಮೆಯ ಗಾಜಿನರಮನೆಯಿಂದ ಹೊರಕ್ಕೆ ಪ್ರತಿಫಲಿಸುತ್ತವೆ. (ಅಂದರೆ ಭ್ರಮೆ-ಕಲ್ಪನೆಯನ್ನು ಮೀರಿದವುಗಳಾಗಿರುತ್ತವೆ.) ವರ್ತಮಾನ ಮತ್ತು ಭವಿಷ್ಯತ್ತಿನ ಬರ್ಝಖ್‌ನಲ್ಲಿ ವಿಹಾರ ಮಾಡಿಸಿ, ಮುಂಬರುವ ದಿನಗಳ-ಘಟನೆಗಳ ಚಿತ್ರಣವನ್ನು ಸ್ಮೃತಿಪಟಲದಲ್ಲಿ ಪ್ರತಿಫಲಿಸಿ ಬಿಡುತ್ತವೆ ಆ ಸ್ವಪ್ನಗಳು. ಅವು ಇತರರು ಎಚ್ಚರದಲ್ಲಿರುವಾಗಿನ ಸ್ಥಿತಿಗಿಂತಲೂ ಹೆಚ್ಚು ಸತ್ಯ ಮತ್ತು ಪರಿಣಾಮಕಾರಿಯಾಗಿರುತ್ತವೆ. ಅಷ್ಟೇ ಅಲ್ಲ, ಪರಿಶುದ್ಧವೂ ಆಗಿರುತ್ತವೆ.

ಈ ಜಗತ್ತಿನಲ್ಲಿ ಬಹಳಷ್ಟು ಜನ ಎಚ್ಚರವಾಗಿರುತ್ತಾರೆಯಾದರೂ ಅವರ ಹೃದಯ ನಿದ್ರಿಸಿರುತ್ತದೆ. ಸ್ವಂತದಲ್ಲೂ ಪ್ರಕೃತಿಯಲ್ಲೂ ಕಾಣುವ ದೃಷ್ಟಾಂತಗಳಿಂದ ಕೂಡ ಅವರಿಗೆ ಸನ್ಮಾರ್ಗದರ್ಶನದ ಕುರುಹು ಕಾಣ ಸಿಗುವುದಿಲ್ಲ. ಭೂತಕಾಲ ಮತ್ತು ವರ್ತಮಾನದ ಭತ್ತ-ಕಣಜಗಳಿಂದ ಅವರಿಗೆ ಭವಿಷ್ಯದ ಕಿಂಚಿತ್ ನೆರಳೂ ಕಾಣುವುದಿಲ್ಲ. ಅವರ ಜೀವನ ವಿಡೀ ಅಜ್ಞಾನದಲ್ಲಿಯೇ ಕಳೆದು ಹೋಗುತ್ತದೆ. ಆದರೆ ಕೆಲವು ಸುದೈವಿ ಆತ್ಮಗಳು ಸ್ವಪ್ನ ಲೋಕದಲ್ಲಿದ್ದೂ ಜಾಗೃತಾವಸ್ಥೆಯ ಅನುಗ್ರಹದಿಂದ ಪುನೀತವಾಗುತ್ತವೆ. ಭವಿಷ್ಯವು ಅವರ ಕಣ್ಣ ಮುಂದೆ ಸ್ವತಃ ಪ್ರಕಟವಾಗಿ ಬಿಡುತ್ತವೆ.

ಆಮಿನಾರಿಗೆ ಸ್ವಪ್ನಗಳು ಕಾಣತೊಡಗುತ್ತವೆ. ವಿಚಿತ್ರ ಮತ್ತು ಸಮೃದ್ಧ ಕನಸುಗಳು! ಒಮ್ಮೆ ಕನಸಿನಲ್ಲಿ ಆಮಿನರ ದೇಹವು ಏಕಾಏಕಿ ಕನ್ನಡಿಯಂತೆ ಪ್ರತಿಫಲಿಸಿತು ಮತ್ತು ದೇಹದ ಕಣಕಣದಿಂದ ತಣ್ಣಗಿನ ಕಿರಣಗಳು ಹೊರಸೂಸತೊಡಗಿದವು. ಅವರ ಕಿವಿಗಳಿಗೆ ಸ್ವರ್ಗದ ಅಪ್ಸರೆಯರು, ಆಕಾಶ ಲೋಕದ ದೇವಚರರು ಮತ್ತು ಪವಿತ್ರ ಆತ್ಮಗಳು ಎಲ್ಲ ಸೇರಿ ಶುಭಾಶಯ ಕೋರುತ್ತಿರುವಂತೆ ಕೇಳಿಸತೊಡಗಿತು. ಮಲಗಿದ್ದಲ್ಲಿಂದಲೇ ಅವರು ಪ್ರಕಾಶ ಪುಂಜದಂತಿರುವ ದೇಹದೊಂದಿಗೇ ಉನ್ನತ ಗಗನಕ್ಕೇರಿದಂತೆ ಕನಸು ಕಂಡರು. ಎತ್ತರದ

ಗುಡ್ಡ-ಬೆಟ್ಟಗಳೆಲ್ಲವೂ ಸಣ್ಣ ಸಣ್ಣ ಮರಳ ದಿಣ್ಣೆಯಂತೆ ಕಂಡವು. ಆಮಿನರ ಪಾದಗಳನ್ನು ನಕ್ಷತ್ರಗಳು ಮುತ್ತಿಕ್ಕುತ್ತಿವೆ... ಮತ್ತು ನಾಲ್ದೆಸೆಗಳಿಂದಲೂ ಉಪಾಸನಾ ಗೀತೆಗಳ ರಾಗಲಹರಿಯೇ ಹರಿಯುತ್ತಿರುವಂತೆ ಅವರಿಗೆ ಭಾಸವಾಗತೊಡಗಿತು.

ಅರಬರ ವಾಡಿಕೆಯಂತೆ ಗೋತ್ರದ ಸ್ತ್ರೀಯರೆಲ್ಲ ಆಮಿನರನ್ನು ಕಾಣಲು ಬರುತ್ತಾರೆ. ಆಗೆಲ್ಲ ಅವರ ಕಣ್ಣಿಗೆ ಚಿತ್ರ-ವಿಚಿತ್ರ ವಸ್ತು/ವಿಷಯಗಳು ಗೋಚರಿಸತೊಡಗುತ್ತವೆ. ಕಲಿಬಾಲಯದಿಂದ ಅಬ್ದುಲ್ಲಾರ ಮನೆಯ ತನಕ ಒಂದು ರೀತಿಯ ಪ್ರಕಾಶವು ಚಪ್ಪರ ಹಾಕಿದಂತೆ ಕಾಣುತ್ತಿತ್ತು. ಕರ್ಪೂರದ ದೀಪಗಳಿಗಿಂತಲೂ ಪ್ರಕಾಶಮಾನವಾದ ಹಣತೆ ಗಳನ್ನು ಬೆಳಕಿನ ಕೈಗಳು ಹಿಡಿದುಕೊಂಡಿರುವಂತೆ ಭಾಸವಾಗುತ್ತಿತ್ತು. ಅದಾದ ಬಳಿಕ ಪರಿಸರದ ಮನೆಗಳಲ್ಲೆಲ್ಲ ಚರ್ಚೆಯಾಗತೊಡಗಿತು- ಆಮಿನರ ಮೇಲೆ ಆಕಾಶದ ದೇವಚರರು ಅನುಗ್ರಹ ವರ್ಷಿಸುತ್ತಿವೆ. ವಹಬ್‌ರ ಮಗಳು... ಅಬ್ದುಲ್ ಮುತ್ತಲಿಬ್‌ರ ಸೊಸೆ, ಅಬ್ದುಲ್ಲಾರ ಜೀವನ ಸಂಗಾತಿ... ಹುಟ್ಟಲಿರುವ ಮಗುವಿನ ತಾಯಿ ಆಮಿನಾ ಸ್ವತಃ ಧ್ರುವತಾರೆ ಮತ್ತು ಬೃಹಸ್ಪತಿ ಗ್ರಹದಂತೆ ಮಿನುಗುತ್ತಿದ್ದಾರೆ.

"ಇಲ್ಲಿ ಕೇಳಿ, ನಕ್ಷತ್ರಗಳು ಭೂಮಿಯೆಡೆಗೆ ಬಾಗುತ್ತಿವೆ. ಇಂದು ಏನಾಗುತ್ತಿದೆ..." ಅಬ್ದುಲ್ಲಾರ ಅತ್ತೆ ಆಶ್ಚರ್ಯ ವ್ಯಕ್ತಪಡಿಸಿದರು.

"ನಾನೂ ಅದನ್ನೇ ಕಾಣುತ್ತಿದ್ದೇನೆ... ಈ ರಾತ್ರಿಯು ಬೆಳಗುತ್ತಿದ್ದಂತಹ ಪ್ರಕಾಶವು ಯಾವ ಹಗಲಿನಲ್ಲಿಯೂ ಇರಲಿಲ್ಲ..." ಓರ್ವ ವೃದ್ಧ ಮಹಿಳೆ ದನಿಗೂಡಿಸಿದರು.

"ಉಮ್ಮು ಮಲ್‌ಬದ್! ಮತ್ತೆ... ಈ ತಂಗಾಳಿ... ಮುಂಜಾವಿನ ಮಂದಮಾರುತ... ಈ ಕತ್ತಲು-ಬೆಳದಿಂಗಳ ಚೆಲ್ಲಾಟ... ಮನೆಯ ಗೋಡೆ-ಬಾಗಿಲುಗಳೂ ಆನಂದದ ಅಮಲಿನಲ್ಲಿ ತೇಲಾಡುತ್ತಿವೆ. ತಾಯಿಫ್‌ನ ಹುಲ್ಲುಗಾವಲು ಮತ್ತು ತೋಟಗಳಲ್ಲಿನ ಸುಂದರ ಮುಂಜಾವುಗಳನ್ನು ನಾನು ಕಂಡಿದ್ದೇನೆ. ಆದರೆ ಇಂದಿನ ಈ ಪ್ರಭಾತವು ಅತಿ ವಿಶಿಷ್ಟವಾಗಿದೆ. ಯಮನಿನ ಸಕಲ ಅತ್ತರುಗಳನ್ನು ಒಗ್ಗೂಡಿಸಿ ಆಕಾಶದಿಂದ ಸಿಂಪಡಿಸಿ ದಂತಹ ಸುಗಂಧವಿದೆ ವಾತಾವರಣದಲ್ಲಿ! ಈ ರಾತ್ರಿ ಎಂದೂ ಮುಗಿಯದಿರುತ್ತಿದ್ದರೆ ಎಷ್ಟು ಚೆನ್ನ!! ನಾವು ಸದಾ ಈ ವಿಶೇಷ ಅನುಭೂತಿಯನ್ನು ಹೊಂದುತ್ತಿದ್ದೆವು!" ಇನ್ನೊಬ್ಬ ಮಧ್ಯವಯಸ್ಕ ಮಹಿಳೆಯು ದುಪ್ಪಟದ ತುದಿಯನ್ನು ಬೆರಳಿಗೆ ಸುತ್ತುತ್ತಾ ಹೇಳಿದರು.

ಕುರೈಶ್ ಗೋತ್ರದವರ ಪೈಕಿ ಬೆಳಗಾತ ಬೇಗನೇ ಏಳುವವರು, ಇಂದು ತಮ್ಮ ಆರಾಧ್ಯರುಗಳ ವಿಗ್ರಹಗಳನ್ನು ಸಂಭಾಳಿಸುವುದರಲ್ಲಿಯೇ ಮಗ್ನರಾಗಿದ್ದಾರೆ. ಆದರೆ ಆ ವಿಗ್ರಹಗಳಾದರೋ ಯಾವ ಕಾರಣಕ್ಕೂ ನೆಟ್ಟಗೆ ನಿಲ್ಲಲು ತಯಾರಿಲ್ಲ... ಯಾಕೋ ಏನೋ, ಅವುಗಳನ್ನು ನೆಟ್ಟಗೆ ನಿಲ್ಲಿಸುವಾಗಲೆಲ್ಲ, ಸಾಷ್ಟಾಂಗವೆರಗಿದಂತೆ ಕವುಚಿ ಬೀಳುತ್ತಿವೆ.

"ಇವತ್ತೇನಾಗಿದೆ ನನ್ನ ಆರಾಧ್ಯರಿಗೆ! ಅರೆ!? ನಿಲ್ಲುವುದೇ ಇಲ್ಲ! ಕವುಚಿ ಬೀಳುತ್ತಿವೆ. ಬಹುಶಃ ನಿದ್ರೆ ಬರುತ್ತಿದೆಯೇನೋ... ಮಲಗಲು ಹವಣಿಸುತ್ತಿವೆ!! ಆದರೆ...! ವಿಗ್ರಹಗಳು

ನಿದ್ರಿಸುವುದಿಲ್ಲವಲ್ಲ! ಎಲ್ಲಾದರೂ ನನ್ನ ಮೇಲೆ ಕೋಪಿಸಿಕೊಂಡಿಲ್ಲ ತಾನೇ? ಸರಿ, ಹಾಗಾದರೆ ನಾನೇ ಸಾಷ್ಟಾಂಗವೆರಗಿ ಕ್ಷಮೆ ಯಾಚಿಸಿ ಬಿಡುತ್ತೇನೆ..." ಓರ್ವ ವೃದ್ಧ ಕುರೈಶಿಯು ವಿಗ್ರಹವನ್ನು ಗೋಡೆಗಾನಿಸಿ, ಅದರ ಮುಂದೆ ಬಾಗಿದರು. ಆದರೆ ತಲೆ ಎತ್ತಿದಾಗ ನೋಡುವುದೇನು? ವಿಗ್ರಹ ಹಠಹಿಡಿದಂತೆ ಮತ್ತೆ ಕವುಚಿ ಬಿದ್ದಿದೆ! ಅಷ್ಟರಲ್ಲಿ ಓರ್ವ ಮಹಿಳೆ ಓಡೋಡುತ್ತಾ ಬಂದು, ಆ ವೃದ್ಧನ ಕೈ ಹಿಡಿದೆಳೆಯುತ್ತಾ ಹೇಳಿದಳು,

"ಚಿಕ್ಕಪ್ಪಾ, ನನ್ನೊಂದಿಗೆ ಬಂದು ನೋಡಿ... ಫರೀಸರ ಆರಾಧ್ಯ ದೈವ, ಝುಹೈರ್‌ನ ಇಷ್ಟದೈವ, ಕುತ್‌ಬೀಸ್‌ರ ಕುಲದೇವತೆ ಮತ್ತೆ... ಮತ್ತೆ... ನನ್ನ ದೇವರುಗಳೆಲ್ಲರ ಹಣೆ ನೆಲಕ್ಕೆ ತಾಗಿಕೊಂಡಿವೆ! ಬಂದು ನೋಡಿ..."

ವೃದ್ಧ ತನ್ನ ಕೈಯನ್ನು ಕೊಡವಿಕೊಳ್ಳುತ್ತಾ ಹೇಳಿದ, "ನಾನು ಸ್ವತಃ ಇದೇ ಚಿಂತೆಯಲ್ಲಿ ಬಿದ್ದಿದ್ದೇನೆ. ನನ್ನ ದೇವರನ್ನು ನೀನು ನೋಡುತ್ತಿಲ್ಲವೇ? ಅದರ ಹಣೆಯಲ್ಲಿ ಮಣ್ಣು ಮೆತ್ತಿದೆ! ನಾನು ನನ್ನ ಆರಾಧ್ಯರನ್ನ ಸಂಭಾಳಿಸುತ್ತೇನೆ, ನೀನು ನಿನ್ನ ದೇವರನ್ನು ರಕ್ಷಿಸು."

❖ ❖ ❖ ❖

ಇತ್ತ ಅಬ್ದುಲ್ ಮುತ್ತಲಿಬ್‌ರ ಮನೆಯಲ್ಲಿ ಆಮಿನರ ಮೇಲೆ ಒಂದು ರೀತಿಯಲ್ಲಿ ವಿಶಿಷ್ಟವಾದ ಅಮಲು ತಲೆಗೆ ಹತ್ತಿದಂತೆ, ನಿದ್ರೆಯ ಜೊಂಪು ಆವರಿಸುತ್ತಿತ್ತು. ಅದೇ ಸ್ಥಿತಿಯಲ್ಲಿ ಅವರ ಕಿವಿಗಳಿಗೆ ಕೆಲವು ಅದೃಶ್ಯ ಮಾತುಗಳು ಕೇಳಲಾರಂಭಿಸಿದವು.

ಇದು ಇಸ್ಮಾಈಲ್ ದಬೀಹುಲ್ಲಾರ ಮಾತೆ ಹಾಜಿರಾ ಆಗಿದ್ದಾರೆ.

ಸ್ವಲ್ಪ ಹೊತ್ತು ನಿಶ್ಯಬ್ದ ಆವರಿಸಿತು. ತರುವಾಯ ಅತ್ಯಂತ ಕರ್ಣಾಕರ್ಷಕ ಧ್ವನಿ ಹೊರಟಿತು.

ಉಮ್ಮು ಅಹ್ಮದ್! ಇಬ್ರಾಹೀಮರ ಪ್ರಾರ್ಥನೆ ಶುಭವಾಗಲಿ.

ಆಮಿನಾ! ಇದು ಈಸಾ ರೂಹುಲ್ಲಾರ ಮಾತೆ ಮರ್ಯಮ್ ಆಗಿದ್ದಾರೆ. ಕನ್ಯಾ ಮರ್ಯಮ!

ಪವಿತ್ರ ನಗರದ ಸಂದೇಶವಾಹಕರ ಪಾವನ ಮಾತೆ! ಮತ್ತೊಂದು ಧ್ವನಿ...

ಉಮ್ಮೆ ಮುಹಮ್ಮದ್! ಮಸೀಹರ ಜನನ ಶುಭವಾಗಲಿ...

ಈಗಿನ್ನೂ ರಾತ್ರಿಯ ಅಂತಿಮ ಜಾವ... ಹಗಲಿನ ಆರಂಭಕ್ಕೆ ಮುನ್ನುಡಿ! ಈ ಎರಡೂ ಸ್ಥಿತಿಗಳಿಗೆ ಈಗ ಸೌಭಾಗ್ಯದ ಪ್ರಕಾಶದೊಂದಿಗೆ ಮಿನುಗಲಿಕ್ಕಿದೆ. ಮುಂಬೆಳಕು ಮೂಡುವುದರಲ್ಲಿತ್ತು... ಹೂ ಗಿಡಗಳ ಅರೆಬಿರಿದ ಮೊಗ್ಗುಗಳಲ್ಲಿ ಇಬ್ಬನಿಯ ಹನಿಗಳು ಮುತ್ತಿನ ಮಾಲೆಯನ್ನು ಹೆಣೆದಿವೆ... ತಂಗಾಳಿಯು ಆ ಮೊಗ್ಗುಗಳ ಸುಗಂಧದಿಂದ ಪ್ರಮತ್ತಗೊಂಡು ಮೈಮುರಿಯುತ್ತಿದೆ... ಸೂರ್ಯೋದಯದ ಸುವಾರ್ತೆ ನೀಡಲು ಹಕ್ಕಿ-ಪಿಕ್ಕಿಗಳು ಚಿಲಿಪಿಲಿಗುಟ್ಟಿದುವು... ವಾತಾವರಣವಿಡೀ ಸುಂದರ ಸ್ವಪ್ನಗಾನದಂತೆ

ಅನುರಣಿಸುತ್ತಿದೆ. ಇವತ್ತು ಸ್ವಯಂ ಸ್ವರ್ಗವೇ ಧರೆಗಿಳಿದು ಬಂದಿದೆ. ಮಿನಾ ಕಣಿವೆ, ಮರ್ವಾದ ಹರಳು ಕಲ್ಲುಗಳು, ಅಬೂಕುಬೈಸ್‌ನ ಶಿಖರ ಮತ್ತು ಅರಫಾತ್ ಮೈದಾನ ಎಲ್ಲೆಡೆ ಶೀತಲ ಪ್ರಕಾಶವು ಆವರಿಸಿ, ಮುದ ನೀಡುತ್ತಿದೆ...

ತಾರೆಗಳು ಮಿನುಗುತ್ತಿವೆ... ಮೊಗ್ಗುಗಳು ಅರಳುತ್ತಿವೆ... ಹೂಗಳು ಕಂಪನ್ನು ಬೀರುತ್ತಿವೆ... ಅಷ್ಟರಲ್ಲಿ ಮನೆಯೊಳಗಿನಿಂದ ಮಹಿಳೆಯರು ಸಂತೋಷಾತಿರೇಕದಿಂದ ಕೂಗಿ ಹೇಳಿದರು,

"ಯಾರಾದರೂ ಹೋಗಿ ಅಬ್ದುಲ್ ಮುತ್ತಲಿಬ್‌ರಿಗೆ ಶುಭಾಶಯ ನೀಡಿರಿ!"

❖ ❖ ❖ ❖

ಸುವಾರ್ತೆ ತಿಳಿದ ಅಬ್ದುಲ್ ಮುತ್ತಲಿಬ್ ಓಡೋಡಿ ಬಂದರು. ಆನಂದ ತುಂದಿಲತೆಯಿಂದಾಗಿ ಅವರ ಪಾದಗಳು ನಡುಗುತ್ತಿದ್ದುವು. ಅಬ್ದುಲ್ ಮುತ್ತಲಿಬ್‌ರ ಹಣೆಯ ನೆರಿಗೆಗಳೆಲ್ಲ ಸಂತೋಷದಿಂದ ಹೊಳೆದುವು. ಆಮಿನಾ ನಾಚುತ್ತಾ, ಚದ್ದರದಿಂದ ಮುಖ ಮುಚ್ಚಿದರು. ಅಬ್ದುಲ್ ಮುತ್ತಲಿಬ್ ಮೊಮ್ಮಗುವಿನ ಹಣೆಗೆ ಹೂಮುತ್ತಿಟ್ಟರು. ಅವರ ಕಣ್ಣುಗಳಿಂದ ಮಿಂಚಿನಂತಹ ಹೊಳಪು ಹರಿಯಿತು.

"ಸಯ್ಯಿದುಲ್ ಕುರೈಶ್! ಇಂತಹ ಅನುಪಮ ಸೌಂದರ್ಯ ನೀವು ಇದುವರೆಗೂ ನೋಡಿರಲಿಕ್ಕಿಲ್ಲ" ಮಹಿಳೆಯರೆಲ್ಲ ಒಂದೇ ಸ್ವರದಲ್ಲಿ ಹೇಳಿದರು.

"ನಿಸ್ಸಂಶಯವಾಗಿಯೂ! ನಾನಷ್ಟೇ ಅಲ್ಲ, ಈ ಇಡೀ ಜಗತ್ತಿನ ಯಾರೂ ಈ ಸೌಂದರ್ಯವನ್ನು ದರ್ಶಿಸಿರಲಿಕ್ಕಿಲ್ಲ. ಸೂರ್ಯ, ಚಂದ್ರ, ನಕ್ಷತ್ರ ಪುಂಜಗಳು, ಕಾಮನ ಬಿಲ್ಲು, ಹೂ, ಮೊಗ್ಗು... ಈ ನವಜಾತ ಶಿಶುವಿನ ಮುಖಾರವಿಂದ ಯಾವುದಕ್ಕೆ ಹೋಲಿಸ ಬೇಕೆಂದೇ ತಿಳಿಯುತ್ತಿಲ್ಲ. ಈತನ ಸುರಸೌಂದರ್ಯದ ಮುಂದೆ ಆ ಎಲ್ಲವುಗಳೂ ಸಪ್ಪೆಯೂ ವಿವರ್ಣವೂ ಆಗಿ ಕಾಣುತ್ತಿವೆ. ಈ ಮಾತುಗಳನ್ನು ನಾನು ಪ್ರೀತಿ-ವಾತ್ಸಲ್ಯ ದಿಂದಾಗಿ ಹೇಳುತ್ತಿಲ್ಲ, ಬದಲು ಇದೊಂದು ವಾಸ್ತವಿಕತೆಯಾಗಿದೆ. ಪ್ರಕೃತಿಯ ಮಾತು... ಅಬ್ದುಲ್ ಮುತ್ತಲಿಬ್‌ನ ಬಾಯಿಯಿಂದ ಹೊರಡುತ್ತಿದೆಯಷ್ಟೇ."

ಅಬ್ದುಲ್ ಮುತ್ತಲಿಬ್‌ರ ಈ ಉತ್ತರದಿಂದ ನೆರೆದಿದ್ದ ಮಹಿಳೆಯರೆಲ್ಲ ತಮ್ಮಲ್ಲೇ ಪಿಸುಪಿಸುವಿಗೆ ಶುರುವಿಟ್ಟರು. ಪ್ರತಿಯೊಬ್ಬರೂ ತನ್ನ ಮನದಾಳದ ಮಾತನ್ನು ಹೊರಗೆಡಹಲು ಹವಣಿಸುತ್ತಿರುವಂತೆ ಕಂಡರು. ಆದರೆ ಯಾವುದೋ ಕಾರಣಕ್ಕೆ ಅವರ ಬಾಯಿ ಕಟ್ಟಿದೆ.

"ಏನು ಮಾತುಕತೆ ನಡೆಯುತ್ತಿದೆ? ಓಹೋ, ಪದ್ಯಹಾಡಲು ಬಯಸುತ್ತೀರೇನು? ನಾನು ಹೊರ ನಡೆಯಲೇ? ಈ ಮುದುಕನ ಮುಂದೆ ದಫ್ ಬಾರಿಸಲು ನಾಚಿಕೆ ಯಾಗುತ್ತಿರಬೇಕು" ಅಬ್ದುಲ್ ಮುತ್ತಲಿಬ್ ಹಾಗೆನ್ನುವಾಗ ಸ್ತ್ರೀಯರು ಹೇಳಿದರು.

"ಓ ಅಬ್ದುಲ್ಲಾರ ತಂದೆಯೇ! ಈ ರಾತ್ರಿಯ ವೇಳೆ ನಾವು ಕಂಡು ಅನುಭವಿಸಿದ

ವಿಷಯಗಳನ್ನು ಜನರ ಮುಂದೆ ಹೇಳಿದರೆ, ಜನರೆಲ್ಲರೂ ಈ ಮಹಿಳೆಯರಿಗೆ ಹುಚ್ಚು ಹಿಡಿದಿದೆಯೆಂದಾರು! ಯಾರೋ ನಮ್ಮ ಮೇಲೆ ಮಾಟ ಮಾಡಿದ್ದಾರೆನ್ನಬಹುದು. ನಮ್ಮ ಮತಿಗೆಟ್ಟಿದೆಯೆಂದೂ ಹೇಳಿಯಾರು! ರಾತ್ರಿಯ ಆ ಸ್ಥಿತಿಯನ್ನು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಅದು ಕಂಡು ಅನುಭವಿಸಬೇಕಷ್ಟೇ ಹೊರತು ಹೇಳುವಂತಹದ್ದಲ್ಲ. ಹೇಳಿದರೂ ಅದಕ್ಕೆ ಸೂಕ್ತ ಪದಗಳು ಸಿಗಲಿಕ್ಕಿಲ್ಲ."

ಅಬ್ದುಲ್ ಮುತ್ತಲಿಬ್ ಹೊರಡಲನುವಾದಾಗ,

"ಇಬ್ನು ಅಬ್ದುಲ್ಲಾ ಎಂದು ಹೇಳಬಹುದೇ ಈ ನವಜಾತನನ್ನು ಹಾಶ್ಮಿಯನ್ನು?"

ಓರ್ವ ಮಹಿಳೆ ಕೇಳಿದರು.

"ಓಹೋ, ಹಾಗೋ? ಹೆಸರು ಸೂಚಿಸಬೇಕೇನು? ಶಹಬ್ಬಾಸ್! ಅಬ್ದುಲ್ಲಾನ ಸುಪುತ್ರ, ಆಮಿನಳ ಕರುಳಕುಡಿಗೆ ನಾವು ಅಹ್ಮದ್ ಎಂದು ಹೆಸರಿಟ್ಟಿದ್ದೇವೆ... ಹಾಂ... ಹಾಗೆಯೇ ಮುಹಮ್ಮದ್ ಅಂತಲೂ ಕರೆಯುವೆವು. ಸಕಲ ಲೋಕವು ನನ್ನ ಈ ಚಂದಿರನಂತಹ ಮೊಮ್ಮಗನನ್ನು ಪ್ರಶಂಸಿಸಬೇಕು."

ಉತ್ತರವಾಗಿ ಮುಂಜಾವಿನ ಆಹ್ಲಾದಕರ ತಂಗಾಳಿ ಸುಂಯ್ಯನೆ ರಾಚಿ ಹೇಳಿತು,

"ಭೂಲೋಕದಲ್ಲಿಯಷ್ಟೇ ಅಲ್ಲ, ಆಕಾಶ ಲೋಕದಲ್ಲೂ ಅವನ ಸ್ವಸ್ತಿಗಾನದ ಭಾವತರಂಗಗಳು ಅನುರಣಿಸಲಿದೆ."

ಅಬ್ದುಲ್ ಮುತ್ತಲಿಬ್‌ರ ಉತ್ತರ ಕೇಳಿ ಆಮಿನಾ ನಸುನಕ್ಕರು. ಅವರ ಮನಸ್ಸಿನಲ್ಲಿ ಸುಪ್ತವಾಗಿದ್ದ ಮಾತನ್ನೇ ಅಬ್ದುಲ್ ಮುತ್ತಲಿಬ್ ಹೇಳಿದ್ದರು!

ഇ◆◆◆ര

ಗತ-ಸ್ವಗತದ ಮೆಲುಕು

ಕಅಬದಿಂದ ಅಣತಿ ದೂರದಲ್ಲಿ... ಗಜ ವರ್ಷದಲ್ಲಿ ಅಬ್ರಹನ ಸೇನೆಯು ಕಅಬವನ್ನು ಧ್ವಂಸಗೊಳಿಸಲು ಬಂದು ಅಂತಿಮವಾಗಿ ತಂಗಿದ್ದ ಸ್ಥಳ... ಆ ಸ್ಥಳದಲ್ಲೀಗ ಕೆಲವು ಅಂಗಡಿಗಳಿವೆ. ಮಣ್ಣಿನ ಗೋಡೆಯಿಂದ ಕಟ್ಟಿದ ಅಂಗಡಿಗಳು! ಕೆಲವೊಂದರಲ್ಲಿ ಸುಟ್ಟ ಇಟ್ಟಿಗೆಗಳ ಗೋಡೆಗಳೂ ಇದ್ದುವು. ಆ ಅಂಗಡಿಗಳಲ್ಲಿ ಗೃಹಬಳಕೆಯ ವಸ್ತುಗಳು ದೊರೆಯುತ್ತವೆ. ಗೋಧಿ ಹಿಟ್ಟು, ಅಕ್ಕಿ, ಹುರಿದ ಧಾನ್ಯದ ಹಿಟ್ಟು, ಉಪ್ಪು, ಇಪ್ಪೆಯೆಣ್ಣೆ, ಹೊಲಿಗೆಯ ಸೂಜಿ, ತರಕಾರಿ, ಹಣ್ಣು ಹಂಪಲುಗಳು ಮತ್ತಿತರ ಹಲವು ಬಗೆಯ ವಸ್ತುಗಳು... ಗ್ರಾಹಕರು ಬರುತ್ತಾರೆ, ದಿನಸಿ ಖರೀದಿಸಿ ಹೋಗುತ್ತಾರೆ.... ವ್ಯಾಪಾರದ ಬಿಡುವಿನಲ್ಲಿ ಅಂಗಡಿ ವ್ಯಾಪಾರಿಗಳು ಮತ್ತವರ ಸಂಗಡಿಗರು ಲೋಕಾಭಿರಾಮವಾಗಿ ಹರಟೆ ಕೊಚ್ಚುವುದರಲ್ಲಿ ತಲ್ಲೀನರಾಗುತ್ತಾರೆ...

"ಗೊತ್ತುಂಟಾ ಉಬೈದ್! ಅಬ್ದುಲ್ ಮುತ್ತಲಿಬ್‌ರು ತಮ್ಮ ಮೊಮ್ಮಗನಿಗೆ ಎರಡು ಹೆಸರುಗಳನ್ನಿಟ್ಟಿದ್ದಾರಂತೆ... ಅಹ್ಮದ್ ಮತ್ತು ಮುಹಮ್ಮದ್" ಓರ್ವ ಕಡುಗಪ್ಪು ವರ್ಣದ ವ್ಯಾಪಾರಿ ಹೇಳಿದ.

"ನಿಜವಾಗಿಯೂ ವಿನೂತನವಾದ ಹೆಸರಾಗಿದೆ. ನಾನು ಕುರೈಶ್ ಜನಾಂಗದ ಇತಿಹಾಸವನ್ನು ಅರಿತಿದ್ದೇನೆ. ಅವರ ವಂಶಾವಳಿ ಮಾತ್ರವಲ್ಲ, ಅದ್ನಾನ್‌ರ ಸ್ಥಿತಿ, ಮುರ್ರಃರ ಆತ್ಮ ಚರಿತ್ರೆ, ಕಿಲಾಬ್‌ರ ಜೀವನ ವೃತ್ತಾಂತ, ಲುವೀಯವರ ಚಾತುರ್ಯ ಮತ್ತು ಕುಸೈಯವರ ಸಾಧನೆ ಎಲ್ಲವನ್ನು ಒಂದೊಂದಾಗಿ ಹೇಳಬಲ್ಲೆ. ಬನೂ ಬಕ್ರ್ ಮತ್ತು ಬನೂ ತುಗ್ಲಬ್‌ರ ನಡುವೆ ಒಂಟೆ ಮೇಯಿಸುವ ಕುರಿತು ಜಗಳವಾದಾಗ ಯಾವ ಗೋತ್ರದ ಎಷ್ಟು ಮಂದಿ ಹತರಾಗಿದ್ದರು ಎಂಬುದೂ ನನಗೆ ತಿಳಿದಿದೆ."

"ನಿಮ್ಮ ಈ ವಿಶೇಷತೆಯಿಂದಾಗಿಯೇ ಬನೂ ಖುಝೈಮಾ ಗೋತ್ರ ಹೆಮ್ಮೆ ಪಟ್ಟುಕೊಳ್ಳುತ್ತಿದೆಯಲ್ಲವೇ" ಅವರೆಡೆಯಿಂದ ಒಬ್ಬ ಹೇಳಿದ. ವಂಶಾವಳಿ ತಜ್ಞ ಮುಗುಳ್ನಗುತ್ತಾನೆ.

"ಜನರ ವಿಷಯವೇನು ಬಂತು? ಉಮಯ್ಯ ಸವಾರಿ ಮಾಡುತ್ತಿರುವ ಕುದುರೆ ಇದೆಯಲ್ಲ, ಅಂಥ ತಳಿಯ ಕುದುರೆ ಎಲ್ಲೆಲ್ಲ ಸಿಗುತ್ತದೆನ್ನುವುದನ್ನೂ ನಾನು ಹೇಳಬಲ್ಲೆ, ಮತ್ತೆ ಈ ಅಬೂ ಸುಫ್‌ಯಾನ್‌ನ ಬಳಿಯಿರುವ ಖಡ್ಗವೆಂಥದ್ದು ಗೊತ್ತುಂಟಲ್ಲ... ಅದನ್ನು ನಜ್ದ್‌ನ

ಆಡಳಿತಗಾರನು ಹರ್ಬ್‌ರಿಗೆ ಯಾವಾಗ ಮತ್ತು ಯಾಕೆ ಕೊಟ್ಟಿದ್ದ ರೆಂಬುದೂ ಗೊತ್ತು. ಇಷ್ಟೇ ಅಲ್ಲ, ಖರ್ಜೂರಗಳ ತಳಿಯನ್ನು ತಿಳಿಸಬಲ್ಲೆ"

"ಹೌದೌದು. ನೀವಂತೂ ಈ ವಿಷಯದಲ್ಲಿ ಪರಿಣತರೇ ಸರಿ. ಇಂತಹ ಕಲೆಯಲ್ಲಿ ಖತ್ತಾಬರು ನಿಮಗೆ ಸರಿಸಾಟಿಯಾಗಿದ್ದರೇ ಏನಾಯಿತು. ಉಳಿದಂತೆ ಮಕ್ಕಾ ನಗರದಾದ್ಯಂತ ನಿಮ್ಮನ್ನು ಮೀರಿಸುವವರಾರೂ ಇರಲಿಕ್ಕಿಲ್ಲ" ಶ್ರೋತೃಗಳೆಡೆಯಿಂದ ಒಂದು ಸ್ವರವೆದ್ದಿತು. ಅಷ್ಟಕ್ಕೇ ಉಬ್ಬಿ ಹೋದ ಆ ವೃದ್ಧರ ಮಾತಿನ ಧಾಟಿಯಲ್ಲಿ ಹೆಮ್ಮೆಯು ಇನ್ನಷ್ಟು ಪ್ರಜ್ವಲಿಸಿತು,

"ಈ ಮುತಾಲ್ಲನ ತೋಟವು ಸ್ವಾದಿಷ್ಟ ಖರ್ಜೂರಗಳಿಗಾಗಿ ಇಡೀ ಹಿಜಾಝ್‌ನಲ್ಲಿ ಖ್ಯಾತಿ ಪಡೆದಿದೆಯಲ್ಲ, ಅದರ ತಳಿಯ ಪ್ರಬೇಧವು ಫುಜ್ಜಾರ್ ಸಮರದಲ್ಲಿ ನಿರ್ನಾಮವಾದ ಖರ್ಜೂರ ತೋಟಕ್ಕೆ ಸೇರುತ್ತದೆ ಗೊತ್ತಾ? ಇನ್ನು ನಿಮಗೆ ಹೈರಾ ಸಾಮ್ರಾಜ್ಯದ ವೃತ್ತಾಂತ ಬೇಕಿದ್ದರೆ ತಿಳಿಸಬಲ್ಲೆನು. ಕಿಬ್ತಿಯರ ಉತ್ಥಾನ-ಪತನದ ಇತಿಹಾಸ ತಿಳಿಸಲೇನು?"

"ತಾತಾ... ಅಬ್ದುಲ್ಲಾರ ನವಜಾತ ಶಿಶುವಿನ ಬಗ್ಗೆ ಮಾತನಾಡುತ್ತಿದ್ದೆವಲ್ಲವೇ..."

ವೃದ್ಧ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟ. ನಿರಂತರ ಮತ್ತು ಗತಿಶೀಲ ಚರ್ಚೆಯು ಅವನನ್ನು ಸುಸ್ತಾಗಿಸಿತ್ತು. ಕೊಂಚ ತಡೆದು ಹೇಳಿದ, "ಈ ಅಹ್ಮದ್ ಮತ್ತು ಮುಹಮ್ಮದ್ ಅನ್ನೋ ಹೆಸರಿದೆಯಲ್ಲ, ಇದುವರೆಗೆ ಯಾವೊಬ್ಬ ಕುರೈಶಿಯೂ ಇಂಥ ಹೆಸರನ್ನಿಟ್ಟಿರಲಿಲ್ಲ ಎಂಬುದನ್ನು ನಾನು ಪ್ರಮಾಣ ಮಾಡಿ ಹೇಳಬಲ್ಲೆ. ಹೊಚ್ಚ ಹೊಸ ನಾಮವಾಗಿದೆ. ಯಾರೂ ಇದುವರೆಗೆ ಊಹಿಸಿರದಿದ್ದ ಹೆಸರು! ಆದರೆಷ್ಟು ಅಪ್ಯಾಯಮಾನ ಈ ಹೆಸರುಗಳು!! ಮನಸ್ಸು-ಹೃದಯ ಈ ಹೆಸರಿನೆಡೆಗೆ ತನ್ನಿಂತಾನೇ ಆಕರ್ಷಿಸಲ್ಪಡುತ್ತಿದೆ!"

ಬಗಲಿನ ಅಂಗಡಿಯಲ್ಲಿ ಓರ್ವ ವಯೋವೃದ್ಧ ಅರಬನು ಹಗ್ಗ ಹುರಿ ಮಾಡುತ್ತಿದ್ದ. ತನ್ನ ಕಾಯಕದಲ್ಲಿರುತ್ತಾ ಎಲ್ಲರ ಮಾತುಕತೆಗಳನ್ನು ಆಲಿಸುತ್ತಿದ್ದ. ಅದುವರೆಗೂ ಸುಮ್ಮನಿದ್ದ ಆತ ಬಾಯಿ ತೆರೆದ,

"ನನ್ನ ಮಲತಾಯಿ ಇಬ್ನು ಅಬ್ದುಲ್ಲಾನನ್ನು ನೋಡಿ ಬಂದಿದ್ದಾಳೆ. ಇಂಥ ಸುಂದರ, ಹಸನ್ಮುಖಿ ಸುಮುಖನನ್ನು ಇದುವರೆಗೂ ಕಂಡಿಲ್ಲೆಂದು ಆಕೆ ಆರಾಧ್ಯ ದೈವಗಳ ಆಣೆ ಹಾಕಿ ಹೇಳುತ್ತಿದ್ದಾಳೆ. ಎಷ್ಟು ನೋಡಿದರೂ ಸಾಕಾಗೊಲ್ಲವಂತೆ. ನೋಡುತ್ತಲೇ ಇದ್ದು ಬಿಡೋಣವೆನ್ನಿಸುತ್ತಿದೆಯಂತೆ! ಇನ್ನು ಅಬ್ದುಲ್ ಮುತ್ತಲಿಬ್‌ರ ಮನೆಯಲ್ಲಿ ದೀಪ ಹಚ್ಚುವ ಅಗತ್ಯವಿಲ್ಲ. ಮುಹಮ್ಮದ್‌ನ ಮುಖವೇ ಬೆಳದಿಂಗಳ ಹಾಗೆ ಕಾಂತಿಯುತ ವಾಗಿಯೆಂದು ಆಕೆ ಹೇಳುತ್ತಾಳೆ."

ದಾರುನ್ನದ್ವದಲ್ಲಿಯೂ ಕುರೈಶ್ ಗಣ್ಯರು ಇದೇ ವಿಷಯದಲ್ಲಿ ಚರ್ಚೆ ನಡೆಸುತ್ತಿದ್ದಾರೆ. ಅವರ ಮಾತುಕತೆ ಹೀಗೆ ಸಾಗುತ್ತಿದೆ...

"ನಗರದ ಮನೆ ಮನೆಯಲ್ಲಿ ಅಬ್ದುಲ್ಲಾನ ಮಗನದ್ದೇ ಚರ್ಚೆ."

"ಹೌದು! ಎಲ್ಲ ಕಡೆ ಇದೇ ಅವಸ್ಥೆ... ಉಮಯ್ಯ ತನಗೆ ಗಂಡು ಮಗು ಹುಟ್ಟಿದ್ದ

ಸಂತೋಷದಲ್ಲಿ ಇಡೀ ಮಕ್ಕಾಕ್ಕೆ ಔತಣ ನೀಡಿದ್ದ. ಆದರೆ ಇಂತಹ ಖ್ಯಾತಿ ಮತ್ತು ಜನಮನ್ನಣೆಯ ಸೌಭಾಗ್ಯ ಆತನಿಗೂ ದಕ್ಕಿರಲಿಲ್ಲ."

"ಇಂದು ಬೆಳಿಗ್ಗೆ ನಾನು ಕಅಬಾಕ್ಕೆ ಪ್ರದಕ್ಷಿಣೆ ಬರುತ್ತಿದ್ದೆ. ಅಷ್ಟರಲ್ಲಿ ಅಬ್ದುಲ್ಲಾನ ಮಗುವಿನ ನೆನಪಾಯಿತು. ಆಗ ನನ್ನ ಕಿವಿಯಲ್ಲಿ 'ಇನ್ನು ಅರೇಬಿಯದ ಇತಿಹಾಸದ ಅತ್ಯಧಿಕ ಪ್ರಕಾಶಮಾನ ಮಾತ್ರವಲ್ಲ ಅನಶ್ವರ ಸಂಪುಟ ತೆರೆಯಲ್ಪಡಲಿದೆ' ಎಂಬ ಅಶರೀರವಾಣಿ ಕೇಳಿಸಿದಂತಾಯಿತು."

"ಮತ್ತೆ ನನಗೆ ಕಂಡ ಕನಸು! ಅಯ್ಯೋ, ನೀವು ಕೇಳದೆ ಇದ್ದರೇನೇ ಚೆನ್ನ... ಕೇಳಿದರೆ ನಿಮಗೆ ದುಃಖವಾಗಬಹುದು..."

ಎಲ್ಲರೂ ಒಕ್ಕೊರಲಿನಿಂದ ಹೇಳಿದರು, "ಇಲ್ಲ ಇಲ್ಲ, ಅದಾಗದು! ಮಾತು ನಾಲಗೆಯ ತನಕ ಬಂತೆಂದರೆ ಅದನ್ನು ಹೇಳಿ ಬಿಡುವುದೇ ಲೇಸು."

"ನಾನು ನಿನ್ನೆ ರಾತ್ರಿ ಕನಸಲ್ಲಿ ಕಂಡಿದ್ದೇನು! ನಾನು ಶರಾಬು ಕುಡಿಯ ಬಯಸುವಾಗ ಯಾರೋ ನನ್ನ ಕೈಯಿಂದ ಲೋಟೆಯನ್ನು ಕಿತ್ತು ಬಿಸಾಡಿದಂತಾಯಿತು. ನನ್ನ ಆರಾಧ್ಯ ಯವೂಕ್‌ಗೆ ಸಾಷ್ಟಾಂಗವೆರಗಲು ಬಾಗಿದಾಗ ಯಾರೋ ನನ್ನನ್ನು ಹಿಡಿದೆತ್ತಿ ನೆಟ್ಟಗೆ ನಿಲ್ಲಿಸಿದರು. ಇನ್ನು ಯಾವುದೇ ವಿಗ್ರಹದ ಪೂಜೆ ನಡೆಯಲಾರದು ಎಂದು ಹೇಳಿದ ಹಾಗಾಯಿತು... (ಕುರೈಶ್ ಸರದಾರರ ಹಣೆಯಲ್ಲಿ ಬೆವರೊಡೆಯತೊಡಗಿತು.) ...ಮತ್ತೆ ನನ್ನ ಪ್ರೇಯಸಿ ಝುಹ್‌ಬಳ ಬಳಿ ಹೋಗಲು ಎದ್ದೆ, ಆದರೆ ಯಾರೋ ನನ್ನನ್ನು ಮಂಚದಿಂದ ಕೆಳಗೆ ಬೀಳಿಸಿದರು. ಇನ್ನು ಇಂಥ ಕುಕೃತ್ಯವನ್ನೆಲ್ಲಾ ಬಿಟ್ಟು ಬಿಡಬೇಕು ಎಂದು ಎಚ್ಚರಿಸಿದ ಹಾಗಾಯಿತು."

ಹುಬ್ಬುಗಳೂ ಬೆಳ್ಳಗಾಗಿದ್ದಂತಹ ಓರ್ವ ವಯೋವೃದ್ಧ ಕುರೈಶಿ ನಡುಗುವ ಸ್ವರದಲ್ಲಿ ಹೇಳಿದರು, "ಕನಸು ಭಯಾನಕವೇ ಸರಿ. ನಾನು ಅನೇಕ ಭೀಕರ ಕಾಳಗಗಳಲ್ಲಿ ಶೌರ್ಯ ಮೆರೆದಿದ್ದೇನೆ. ಎಂದೂ ಯುದ್ಧದಿಂದ ಹಿಮ್ಮೆಟ್ಟಿರಲಿಲ್ಲ. ಆದರೆ ಯಾಕೋ ಏನೋ ಈ ಕನಸಿನ ವಿವರಣೆ ಕೇಳುವಾಗ ಹೃದಯ ಬಡಿತ ನಿಂತು ಹೋದಂತಾಗುತ್ತಿದೆ... (ಕೈಯೆತ್ತಿ) ಓ ಉಝ್ಝಾ ನನ್ನ ಹೃದಯವನ್ನು ಸಂಭಾಳಿಸು... ಓ ಲಾತ್! ನನಗೆ ಧೈರ್ಯ ನೀಡು... ಓ ಮನಾತ್! ನಾವಿದೇನು ಆಲಿಸುತ್ತಿದ್ದೇವೆ? ನಿನ್ನ ದೈವತ್ವದ ವರ್ಚಸ್ಸು ಕುಂದಿ ಹೋಗದಿರಲಿ!"

ಓರ್ವ ಯುವಕ ಆವೇಶ ಭರಿತನಾಗಿ ಸಟೆದು ನಿಂತು ಹೇಳಿದ, "ಎಂಥ ಹೇಡಿತನದ ಮಾತು! ಅಬೂ ಮಿರ್ಜಾನ್! ನಿಮ್ಮ ಮಾತಿನಿಂದ ನಮ್ಮ ಆರಾಧ್ಯರುಗಳ ಅವಹೇಳನದ ಪದಗಳು ಹೊರಡುತ್ತಿವೆ... ನೀವೆಲ್ಲಾದರೂ ನಮ್ಮ ಆರಾಧ್ಯರುಗಳ ಕ್ರೋಧಕ್ಕೆ ಬಲಿ ಯಾದೀರೋ ಎಂದು ನನಗೆ ಆತಂಕವಾಗುತ್ತಿದೆ. ಹುಂ! ಕನಸಿನ ವಿವರ ಕೇಳುವಾಗಲೇ ನಿಮ್ಮ ಧೈರ್ಯ ಉಡುಗಿಹೋಗುತ್ತಿದೆ! ನೀವೇನು ಹೇಳುತ್ತಿದ್ದಿರಿ? ಬನೀ ಕಿನಾನ ಗೋತ್ರದವರೊಂದಿಗೆ ನಡೆದ ಯುದ್ಧದಲ್ಲಿ ನೀವೊಬ್ಬರೇ ಇಪ್ಪತ್ತು ಮಂದಿಯನ್ನು

ಧರೆಗುರುಳಿಸಿದ್ದಿರಂತಲ್ಲವೇ? ನಿಮ್ಮ ಕುದುರೆ ಬಹಳ ಹೊತ್ತಿನ ತನಕ ಶತ್ರುಗಳ ಮೃತ ದೇಹಗಳ ಮೇಲೆ ಓಡಾಡುತ್ತಿತ್ತಂತಲ್ಲವೇ? ಈಗ ಏನು ನಿಮ್ಮ ಆ ಧೈರ್ಯ-ಶೌರ್ಯಕ್ಕೆ ಲಕ್ವಾ ಹೊಡೆಯಿತೇ? ನಿಮ್ಮ ತಲೆಗೂದಲು ಬಿಸಿಲಿಗೆ ಬೆಳ್ಳಗಾಗಿದೆ ಎನ್ನಿಸುತ್ತದೆ! ಆದ್ದರಿಂದಲೇ ಕನಸು-ಕಲ್ಪನೆಗಳಿಗೆ ಇಷ್ಟೊಂದು ಮಹತ್ವ ನೀಡುತ್ತಿದ್ದೀರಿ! ನಾನು ಈಗಷ್ಟೇ... ನ್ಯಾಲವನ್ನು ಪೂಜಿಸಿ ಬರುತ್ತಿದ್ದೇನೆ. ದಾರಿಯಲ್ಲಿ ನನ್ನ ಪ್ರೇಯಸಿ ಗಝಾಲಾ ಸಿಕ್ಕಿದಳು... ಆಕೆ ಮೂರು ಲೋಟ ತೀಕ್ಷ್ಣವಾದ ಶರಾಬನ್ನು ನನಗೆ ಕುಡಿಸಿದಳು. ಬಳಿಕ ಅವಳ ತಂಗಿ ಒಂದು ಪದ್ಯ ಹಾಡಿದಳು,

ಮನದಾಳದ ಬೆಂಕಿ ಮದ್ಯದಿಂದ ತಣಿಯುತ್ತದೆ
ಒಮ್ಮೊಮ್ಮೆ ಮದ್ಯದಿಂದಲೇ ಕಿಡಿ ಹೊತ್ತಿ ಉರಿಯುತ್ತದೆ
ಇದೇ ಉರಿಯುವ ತಣಿಯುವ ಪ್ರಕ್ರಿಯೆಯಲ್ಲಿ
ಜೀವನ ಸುಖ-ಭೋಗಗಳಿಂದ ಕಳೆಯುತ್ತದೆ."

ದಟ್ಟವಾದ ಗಡ್ಡ ಬಿಟ್ಟಿದ್ದ ಓರ್ವ ಕುರೈಶಿ ಸರದಾರ (ಅವರ ತಲೆಗೂದಲು ಕೆದರಿದಂತಿತ್ತು) ಉತ್ತೇಜಿತನಾದಂತೆ ನೇರವಾಗಿ ಕುಳಿತು ಹೇಳ ತೊಡಗಿದರು, "ಕಾವ್ಯ ಲಹರಿಯ ವಿಷಯ ಬಂತು... ನಾನೂ ಒಂದಿಷ್ಟು ಕವನ ಸಾಲುಗಳನ್ನು ವಾಚಿಸಬಯಸುತ್ತೇನೆ. ಆಲಿಸಿರಿ... ಅಬ್ದುಲ್ ಮುತ್ತಲಿಬ್‌ರ ಮಗನ* ಜನನ ವಾರ್ತೆ ಕೇಳಿ ನನಗನ್ನಿಸಿತು, ಅಬ್ದುಲ್ಲಾ ಪರದೇಶದಲ್ಲಿದ್ದಾರೆ. ಅವರ ಮನೆಯಲ್ಲಿ ಬೆಳದಿಂಗಳು ಹುಟ್ಟಿದೆ... ಈ ಸುದ್ದಿ ಅವರಿಗೆ ತಿಳಿದರೆಷ್ಟು ಚೆನ್ನ! ಬನೀ ಹಾಶಿಮ್‌ರು ಮೊದಲಿಂದಲೇ ಕುಲೀನರು, ಗೌರವಾರ್ಹರು. ಆದರಿಂದು ಹೆಮ್ಮೆಯು ಆಗಸದೆತ್ತರವನ್ನೂ ಮೀರಿಸಿದೆ... ಇದು ಎಲ್ಲರಿಗೂ ಪ್ರಾಪ್ತ ವಾಗುವ ಗೌರವವಲ್ಲ. ಅದೃಷ್ಟವಂತರ ಹಕ್ಕು ಇದು."

ಮಕ್ಕಾ ನಗರದಿಂದ ಸ್ವಲ್ಪವೇ ದೂರದಲ್ಲಿ 'ಮರ್‍ರುಝ್ಝಹ್ರಾನ್' ಎಂಬ ಸ್ಥಳವಿದೆ. ಜನಸಾಮಾನ್ಯರ ಬಾಯಿಯಲ್ಲಿ ಅದು ಫಾತಿಮಾ ಕಣಿವೆ ಎಂದೇ ಖ್ಯಾತವಾಗಿದೆ. ಈ ಕಣಿವೆಯಲ್ಲಿ ಐಸ್ ಎಂಬೋರ್ವ ಕ್ರೈಸ್ತ ಸನ್ಯಾಸಿ ವಾಸಿಸುತ್ತಿದ್ದರು. ಐಸ್, ದೇವ ಸಾಮೀಪ್ಯ ಪಡೆಯುವ ಉದ್ದೇಶದಿಂದ ತನ್ನ ಧಾರ್ಮಿಕ ಪರಂಪರೆಯಂತೆ ಜಗತ್ತಿನ ಮೋಹ, ಸಾಂಸಾರಿಕ ಜೀವನದ ಜಂಜಡದಿಂದ ಮುಕ್ತರಾಗಿ ವಿರಕ್ತ ಜೀವನ ನಡೆಸು ತ್ತಿದ್ದರು. ದೊರೆತ ಒಣ ಆಹಾರವನ್ನು ಸೇವಿಸಿ, ದೇವಾರಾಧನೆಯಲ್ಲಿ ತಲ್ಲೀನರಾಗಿರು ತ್ತಿದ್ದರು. ಜನರು ಅವರನ್ನು ಗೌರವಾದರದಿಂದ ಕಾಣುತ್ತಿದ್ದರು. ಅಬ್ದುಲ್ ಮುತ್ತಲಿಬ್ ಕೂಡ ಆಗಾಗ ಐಸ್‌ರ ಬಳಿಗೆ ಹೋಗಿ ಬರುತ್ತಿದ್ದರು.

'ಅರೇಬಿಯಾದ ಸೂರ್ಯ' ಉದಯಿಸಿದಂದೇ ಬೆಳ್ಳಂಬೆಳಗ್ಗೆ ಅಬ್ದುಲ್ ಮುತ್ತಲಿಬ್‌ರು ತಡೆಯಲಾರದ ಸಂತೋಷವನ್ನು ಹೊತ್ತು ಐಸ್‌ರ ಬಳಿಗೆ ಧಾವಿಸಿದ್ದರು. ಐಸ್ ಕುಟೀರದ ಹೊರಗೆ ಇರುವ ಖರ್ಜೂರ ಮರದ ಕೆಳಗೆ ಕೂತು ಜಪ-ತಪದಲ್ಲಿ ಮಗ್ನರಾಗಿದ್ದರು.

* ಅರಬಿ ಭಾಷೆಯಲ್ಲಿ ಮೊಮ್ಮಗನನ್ನು ಮಗನೆಂದೇ ಹೇಳುತ್ತಾರೆ.

"ಇವತ್ತೇನು ದಾಪುಗಾಲಿಡುತ್ತಿದ್ದೀರಿ ಅಬ್ದುಲ್ ಮುತ್ತಲಿಬ್?" ಐಸ್ ಮುಗುಳ್ನಗುತ್ತಾ ಕೇಳಿದರು.

"ಒಂದು ಶುಭವಾರ್ತೆ ತಂದಿದ್ದೇನೆ. ಶುಭವಾರ್ತೆ! ನೀವಂತೂ ಹೆಂಡತಿ, ಮಕ್ಕಳು, ಕುಟುಂಬ ಸಂಬಂಧದಿಂದ ಮುಕ್ತರಾಗಿದ್ದೀರಿ. ನಿಮಗೆ ಅದರ ಕುರಿತೇನು ಗೊತ್ತು? ಆದರೂ ನಿಮಗೆ ಸಂತೋಷವಾಗುವುದು ಖಂಡಿತ" ಅಬ್ದುಲ್ ಮುತ್ತಲಿಬ್ ಮುಂಡಾಸನ್ನು ಸರಿಪಡಿಸುತ್ತಾ ಹೇಳಿದರು.

"ಹೇಳಿ, ಹೇಳಿ! ಸಂತೋಷವು ನಿಮ್ಮನ್ನು ಈ ವೃದ್ಧಾಪ್ಯದಲ್ಲೂ ಯುವಕರನ್ನಾಗಿ ಮಾಡಿದೆ" ಐಸ್ ಆಶ್ಚರ್ಯ ಮಿಶ್ರಿತ ಸಂತೋಷದಿಂದ ನುಡಿದರು.

"ಇಂದು ಬೆಳಿಗ್ಗೆ ಅಬ್ದುಲ್ಲಾನಿಗೆ ಮಗು ಹುಟ್ಟಿತು! ಸುಂದರವಾದ ಗಂಡು ಮಗು! ಅತ್ಯಂತ ಸುಂದರ!! ಇಡೀ ಮಕ್ಕಾದಲ್ಲಿ ಮಗುವಿನ ಸೌಂದರ್ಯದ್ದೇ ಚರ್ಚೆ... ಜನರ ಶುಭಾಶಯ ಸ್ವೀಕರಿಸಿ, ಸ್ವೀಕರಿಸಿ ನನಗೆ ಸುಸ್ತೋ ಸುಸ್ತು!" ಅಬ್ದುಲ್ ಮುತ್ತಲಿಬ್‌ರು ಜುಬ್ಬದ ತೋಳನ್ನು ಮೇಲಕ್ಕೆರಿಸುತ್ತಾ ಹೇಳಿದರು.

"ಮಗುವಿಗೆ ಏನೆಂದು ಹೆಸರಿಟ್ಟಿರಿ?" ಐಸ್ ಸನ್ಯಾಸಿ ಕಣ್ಣರಳಿಸುತ್ತಾ ಕೇಳಿದರು.

"ಮುಹಮ್ಮದ್" (ತುಟಿಗಳ ಮೇಲೆ ನಾಲಗೆ ಚಪ್ಪರಿಸುತ್ತಾ ಯಾವುದೋ ಸಿಹಿಯಾದ ವಸ್ತುವನ್ನು ಚಪ್ಪರಿಸಿದಂತೆ!) ಅಬ್ದುಲ್ ಮುತ್ತಲಿಬ್ ಉತ್ತರಿಸಿದರು.

"ಈಗ ನನ್ನ ಶುಭಾಶಯವನ್ನು ಸ್ವೀಕರಿಸಿರಿ. ನಾನು ಬಹಳಷ್ಟು ಬಾರಿ ನಿಮಗೆ ಹೇಳಿದ ಮಾತು ನೆನಪುಂಟಾ? ಅದುವೇ ಈ ಮಗು! ಕೇಳಿ, ಈ ಮಗುವನ್ನು ನಾನು ಮೂರು ಕಾರಣಗಳಿಂದ ಗುರುತಿಸಿದೆ. ಒಂದನೆಯದಾಗಿ ನಿನ್ನೆ ರಾತ್ರಿ ಇದುವರೆಗೆ ಕಂಡಿಲ್ಲದಂತಹ ಒಂದು ನಕ್ಷತ್ರ ಉದಿಸಿತ್ತು. ಎರಡನೆಯದಾಗಿ ಮಗು ಹುಟ್ಟಿದ್ದು ಸೋಮವಾರದ ಮುಂಜಾವಿನಲ್ಲಿ. ಮೂರನೆಯದಾಗಿ ಮಗುವಿಗೆ ಮುಹಮ್ಮದ್ ಎಂಬ ಹೆಸರಿಟ್ಟಿದ್ದು! ನಿಮ್ಮ ಅದೃಷ್ಟಕ್ಕೆ ಹೆಮ್ಮೆ ಪಡಿರಿ ಅಬ್ದುಲ್ ಮುತ್ತಲಿಬ್! ಬನೂ ಹಾಶಿಮ್ ಗೋತ್ರವನ್ನು ಇತಿಹಾಸ ಇನ್ನೆಂದೂ ಮರೆಯಲಾರದು. ಆಹ್! ಅವನು ಉನ್ನತ ಸ್ಥಾನಮಾನದಲ್ಲಿ ಗಾಂಭೀರ್ಯ ಮೆರೆಯುವುದನ್ನು ಕಾಣಲು ನೀವು ಬದುಕಿರುತ್ತಿದ್ದರೆ!"

ವೈಧವ್ಯದ ದುಃಖವಾರ್ತೆ!

ಆಮಿನರ ಮನಸ್ಸಿನಲ್ಲಿ ನೂರಾರು ಆಸೆಗಳು ಚಿಗುರುತ್ತಲಿವೆ... ಅಬ್ದುಲ್ಲಾ ಬಂದು ತನ್ನ ಕಣ್ಮಣಿಯನ್ನು ಕಂಡು ಎಷ್ಟು ಸಂತೋಷಪಡುವರು! ಅವರ ಸುಂದರ ಮುಖಾರವಿಂದವು ನನ್ನ ಕರುಳಕುಡಿಯ ಹಣೆ ಚುಂಬಿಸಿ ಇನ್ನಷ್ಟು ಪ್ರಜ್ವಲಿಸುವುದು. ಅವರು ಕೇಳುವರು, "ಏನು ಹೆಸರಿಟ್ಟಿರುವಿ ನನ್ನ ಪುಟ್ಟನಿಗೆ?" ನಾನು ನಾಚಿಕೊಳ್ಳುತ್ತಾ, "ಅಹ್ಮದ್ ಮತ್ತು ಮುಹಮ್ಮದ್" ಎನ್ನುವೆನು. ಅವರು ಇನ್ನಷ್ಟು ಸಂತೋಷಪಡುವರು. ಏಕೆಂದರೆ ಈ ಹೆಸರುಗಳಲ್ಲಿ ಒಂದು ವಿಶಿಷ್ಟವಾದ ರಾಗಲಯ ಮತ್ತು ವಿಚಿತ್ರವಾದ ರಸಾಸ್ವಾದವಿದೆ. ಮತ್ತೆ ನಾನು ಮುನಿಸು ತೋರುವೆನು, "ನೀವು ಯಾತ್ರೆಯಲ್ಲಿ ಇಷ್ಟು ಸಮಯ ತೆಗೆದು ಕೊಂಡದ್ದೇಕೆ? ಮಕ್ಕಾದಿಂದ ಸಿರಿಯಕ್ಕೆ ಹೊರಟ ಇತರ ವ್ಯಾಪಾರಿ ತಂಡಗಳು ಯಾವಾಗಲೋ ಮರಳಿ ಬಂದಿವೆ." ಅವರು ಹೇಳುವರು, "ಉಮ್ಮು ಮುಹಮ್ಮದ್! ನಾನು ಯಸ್ರಿಬ್‌ನಲ್ಲಿ ರೋಗ ಪೀಡಿತನಾಗಿದ್ದೆ. ನಿನ್ನ ನಿಕಟ ಸಂಬಂಧಿಗಳಾದ ಬನೂ ನಜ್ಜಾರ್‌ರ ಬಳಿಯೇ ತಂಗಿದ್ದೆ. ಗುಣಮುಖನಾಗುತ್ತಲೇ ಧಾವಿಸಿ ಬಂದೆ." ಆಗ ನಾನು ಹೇಳುವೆನು, "ಅನಾರೋಗ್ಯ ಪೀಡಿತರಾದಾಗ ನಿಮ್ಮ ಶುಶ್ರೂಷೆ ಮಾಡಲು ನನ್ನಿಂದಾಗಲಿಲ್ಲವಲ್ಲ ಎಂಬ ಬೇಸರ ನನ್ನನ್ನು ಯಾವಾಗಲೂ ಕಾಡಬಹುದು. ನಿಮಗೆ ಜ್ವರ ಬಾಧಿಸಿತ್ತು ಎಂದು ತಿಳಿದಾಗ ನಾನು ತುಂಬಾ ಕಳವಳಗೊಂಡಿದ್ದೆ. ಯಾ ಅಬೂ ಮುಹಮ್ಮದ್! ನನ್ನ ಬಾಹುಗಳಿಗೆ ರೆಕ್ಕೆ ಬರಲಿ ಮತ್ತು ನಾನು ಹಾರಿಕೊಂಡು ಯಸ್ರಿಬ್‌ಗೆ ತಲಪುವಂತಾಗಲಿ ಎಂದು ನನ್ನ ಮನಸ್ಸು ಹಾತೊರೆಯುತ್ತಿತ್ತು. ಬನೂ ಹಾಶಿಮ್ ಮನೆತನದ ಮಹಿಳೆಯರು ಒಬ್ಬಂಟಿಯಾಗಿ ಯಾತ್ರೆ ಕೈಗೊಳ್ಳುವುದಿಲ್ಲವೆಂದು ನಿಮಗೆ ತಿಳಿದೇ ಇದೆಯಲ್ಲ. ಹಾಗಿಲ್ಲದಿರುತ್ತಿದ್ದರೆ ನಾನು ವೇಗವಾಗಿ ಸಂಚರಿಸುವ ಒಂಟೆಯನ್ನೇರಿ ಯಸ್ರಿಬ್ ತಲಪಿಯೇ ತೀರುತ್ತಿದ್ದೆ."

ಆಮಿನಾರ ಒಂದೊಂದು ಕ್ಷಣವೂ ಅಬ್ದುಲ್ಲಾರ ಪ್ರತೀಕ್ಷೆಯಲ್ಲಿಯೇ ಕಳೆದು ಹೋಗುತ್ತಿದೆ. ಅವರು(ಅಬ್ದುಲ್ಲಾ) ಈಗ ಯಸ್ರಿಬ್‌ನಿಂದ ತನ್ನ ಒಂಟೆಗಳ ಮಂದೆ ಯೊಂದಿಗೆ ಹೊರಟಿರಬಹುದು... ಅವರ ಒಂಟೆಯಾದರೋ ಅತಿವೇಗಿಯಾಗಿದೆ... ಗಾಳಿಯನ್ನೂ ಸೀಳಿ ಓಡುತ್ತದೆ... ಜನರು ಇಪ್ಪತ್ತು ದಿನಗಳಲ್ಲಿ ಯಸ್ರಿಬ್‌ನಿಂದ ಮಕ್ಕಾಗೆ ತಲಪುತ್ತಾರಾದರೆ, ಅವರು ಹತ್ತೇ ದಿನಗಳಲ್ಲಿ ತಲಪುವರು... ಅವರು ಇದೋ ಬಂದರು... ಬಂದೇ ಬಿಟ್ಟರು...

ಮುಂಬಾಗಿಲಲ್ಲಿ ಕೇಳಿಸುತ್ತಿರುವುದು ಅವರದೇ ಹೆಜ್ಜೆ ಸಪ್ಪಳ... ಹೀಗೆ ಆಮಿನಾ ಪ್ರತಿಕ್ಷಣವೂ ಹಗಲುಗನಸಿನಲ್ಲಿ ಮುಳುಗಿರುತ್ತಿದ್ದರು.

"ಯಸ್ರಿಬ್‌ನಿಂದ ವ್ಯಾಪಾರಿ ತಂಡ ಆಗಮಿಸಿದೆ. ಅಬ್ದುಲ್ ಮುತ್ತಲಿಬ್‌ರು ಆ ತಂಡದವರನ್ನು ಸಂಧಿಸಿ ಬರುತ್ತಿದ್ದಾರೆ" ಓರ್ವಳು ಹುಡುಗಿ ಓಡೋಡಿ ಬರುತ್ತಾ ಹೇಳಿದಳು,

"ಏನು? ಏನಂದಿ! ವ್ಯಾಪಾರಿ ತಂಡ ಬಂತೇ...? ಮತ್ತೆ... ಅವರು ಬರಲಿಲ್ಲವೇ?" ಆಮಿನರ ಬಾಯಿಯಿಂದ ಒಂದೊಂದು ಪದ ತಡೆತಡೆದು ಹೊರಟಿತು. ಅಷ್ಟರಲ್ಲಿ ಅಬ್ದುಲ್ ಮುತ್ತಲಿಬ್‌ರು ಆಗಮಿಸಿದರು. ಮುಖ ಬಾಡಿದೆ, ಕೂದಲು ಕೆದರಿದೆ, ಹಣೆಯಲ್ಲಿ ಬೆವರ ಹನಿ ಸಾಲುಗಟ್ಟಿದೆ... ಮುಂಡಾಸು ತಲೆಗೆ ಅರ್ಧಂಬರ್ಧ ಸುತ್ತಿ ಕೊರಳಲ್ಲಿ ನೇತಾಡುತ್ತಿದೆ... ಈ ಸ್ಥಿತಿ ಕಂಡು ಆಮಿನರಿಗೆ ಆತಂಕವಾಯಿತು.

ಅರಬರಿಗೆ ಸುತ್ತು ಬಳಸಿ ಮಾತನಾಡುವ ಅಭ್ಯಾಸವಿಲ್ಲ. ಅಬ್ದುಲ್ ಮುತ್ತಲಿಬ್ ಒಳಬರುತ್ತಲೇ ಹೇಳಿದರು, "ಆಮಿನಾ! ನೀನು ವಿಧವೆಯಾದೆ... ಮುಹಮ್ಮದ್ ಅನಾಥನಾದ... ಅಬ್ದುಲ್ಲಾ ಇಹಲೋಕ ತ್ಯಜಿಸಿದ... ಎರಡೂವರೆ ತಿಂಗಳು ಕಳೆಯಿತು... ಅಯ್ಯೋ! ಕಣ್ಣು ಮುಚ್ಚುವುದಕ್ಕೆ ಮುಂಚೆ ತನ್ನ ಸುರಸುಂದರ ಕರುಳಕುಡಿಯನ್ನು ನೋಡುತ್ತಿದ್ದರೆ... ಆದರೆ ವಿಧಿಯನ್ನು ಬದಲಿಸುವುದು ಯಾರಿಂದಲೂ ಸಾಧ್ಯವಿಲ್ಲ!"

ಆಮಿನಾರ ಹೃದಯ ಬಿರಿದಂತಾಯಿತು. ಅಬ್ದುಲ್ ಮುತ್ತಲಿಬ್ ಎದುರಲ್ಲಿ ಇದ್ದಷ್ಟು ಹೊತ್ತು ಅವರು ಕಣ್ಣೀರನ್ನು ತಡೆದಿದ್ದರು... ಸ್ವಾಭಿಮಾನವು ಭಾವನೆಯನ್ನು ತಡೆಹಿಡಿದಿತ್ತು. ಮಾವ ಹೊರಟು ಹೋದಂತೆಯೇ ಆಮಿನಾರ ಕಂಗಳಿಂದ ಧಾರಾಕಾರವಾಗಿ ಕಂಬನಿ ಹರಿಯಿತು. ತರುವಾಯ ನೆರೆಕರೆಯ ಮಹಿಳೆಯರು ಸಂತಾಪ ಸೂಚಿಸಲು ಆಗಮಿಸಿದರು. ಈ ಹೊಸ ದುಃಖದೊಂದಿಗೆ ಹಳೆಯ ಗಾಯಗಳು ಸ್ವಯಂ ಹಸಿಯಾಗ ತೊಡಗಿದುವು. ಕುರೈಶಿ ಮಹಿಳೆಯರು ತಮ್ಮ ಮನದಾಳದ ನೋವನ್ನು ಹೇಳುತ್ತಾ ಅಳತೊಡಗಿದರು:

"ಅಬ್ದುಲ್ಲಾಹ್! ನಿನ್ನ ಸಜ್ಜನಿಕೆಯ ಚರ್ಚೆ ಪ್ರತಿಯೋರ್ವರ ಮಾತಿನಲ್ಲಿದೆ. ನಿನ್ನ ಸೌಂದರ್ಯದ ಖ್ಯಾತಿಯು ಮಕ್ಕಾದ ಗಲ್ಲಿಗಲ್ಲಿಗಳಲ್ಲಿದೆ. ಅಬ್ದುಲ್ಲಾ! ವಿಶಾಲ ಹೃದಯಿ ಅಬ್ದುಲ್ಲಾ! ಸಭ್ಯ-ಸ್ವಾಭಿಮಾನಿ ಅಬ್ದುಲ್ಲಾ! ಬನೂ ಹಾಶಿಮ್ ಗೋತ್ರದವರು ನಿನ್ನ ಅಕಾಲ ಮರಣಕ್ಕೆ ದುಃಖತಪ್ತರಾಗಿದ್ದಾರೆ. ಅಯ್ಯೋ, ಮಕ್ಕಾದ ಚಂದ್ರವೇ... ಯಸ್ರಿಬ್‌ನ ಮರಳಲ್ಲಿ ಮರೆಯಾಯಿತೇ! ಹಜ್ಜ್‌ಗಾಗಿ ಹೊರನಾಡಿನಿಂದ ಜನಸಾಗರ ಹರಿದು ಬಂದಾಗ ಅವರ ಆರೈಕೆ ಇನ್ನು ಯಾರು ಮಾಡುವರು? ಅಬ್ದುಲ್ಲಾ, ನಿನ್ನ ವೃದ್ಧ ತಂದೆಯ ಬೆಳ್ಳಿ ಗಡ್ಡವು ಕಣ್ಣೀರಲ್ಲಿ ತೋಯ್ದಿದೆ... ಆಮಿನಾ ವಿಧವೆಯಾದಳು! ಅವಳ ವೈಧವ್ಯವನ್ನು ನೋಡಲು ನಮ್ಮಿಂದಾಗುವುದಿಲ್ಲ. ಎಂಥಾ ಅವಘಡ! ದುಃಖಾತಿರೇಕದಿಂದ ಅವಳು ಬಳಲಿ ಬೆಂಡಾಗಿದ್ದಾಳೆ... ಮತ್ತೆ ನಿನ್ನ... ಅಹ್ಮದ್... ಮುಹಮ್ಮದ್..."

(ಬಿಕ್ಕಳಿಕೆ... ನಿರಂತರ ಬಿಕ್ಕಳಿಕೆ! ಬಹುಶಃ ವೇದನೆಯ ಸಂವೇದನೆಯು ದುಃಖತಪ್ತ

ಕೊರಳನ್ನು ಹಿಚುಕಿದಂತಹ ಸ್ಥಿತಿ... ಅವರಲ್ಲಿ ಮುಂದಕ್ಕೆ ಮಾತನಾಡಲು ಸಾಧ್ಯವಾಗಲಿಲ್ಲ.)

ಆಮಿನಾ ಮೌನವ್ರತಧಾರಿಯಂತಿದ್ದರು. ದೇಹ ನಿಶ್ಚಲವಾಗಿತ್ತು. ಜೀವ ಹಾರಿ ಹೋಗಿದೆಯೇನೋ ಎಂದು ಸಂಶಯಿಸುವಂತಹ ತಾಟಸ್ಥ್ಯ. ಅಳುವಿನ ಒಂದೇ ಒಂದು ಶಬ್ದವಿಲ್ಲ. ಸೂಕ್ಷ್ಮವಾಗಿ ಆಲಿಸಿದರೆ ಬಿಕ್ಕಳಿಕೆಯ ಸಣ್ಣ ಸಪ್ಪ ಕೇಳಿಸೀತು... ಅಷ್ಟೇ. ಹನಿಗೂಡಿದ ಕಂಗಳಿಂದ ಅಬ್ದುಲ್ಲಾರ ಕೊನೆಯ ಗುರುತಾದ ಅನಾಥ ಮಗುವನ್ನೇ ತದೇಕ ಚಿತ್ತದಿಂದ ನೋಡುತ್ತಿದ್ದಾರೆ...

...ಬಹಳಷ್ಟು ದುಃಖವನ್ನು ಉಲ್ಲೇಖಿಸಲು ಸಾಧ್ಯವಿಲ್ಲ. ಹೃದಯದ ಹಲವು ನೋವುಗಳ ಮಾತುಗಳು ಪದವನ್ನು ತಡಕಾಡಿ ವಿವಶವಾಗಿ ಮರೆಯಾಗಿ ಬಿಡುತ್ತವೆ. ಆಮಿನರ ದುಃಖವೂ ಅಂತಹದೇ ಆಗಿತ್ತು. ದುಃಖತಪ್ತ ತಾಟಸ್ಥ್ಯ, ದುಃಖಾತಿರೇಕ ತುಂಬಿದ ಮೌನ, ದುಃಖಾಶ್ರುಭರಿತ ಕಂಗಳು ಆಮಿನರ ಮನಸ್ಸಿನ ಭಾವನೆಗಳನ್ನು ಪ್ರತಿಬಿಂಬಿಸು ತ್ತಿದ್ದವು. ಅಯ್ಯೋ! ಹರೆಯದ ವೈಧವ್ಯವೇ! ಪತಿಯ ಅಕಾಲಿಕ ಮರಣವು ಮನದ ಸುಖ ಶಾಂತಿಯನ್ನೇ ಕದಡಿಬಿಟ್ಟಿತು.

ಹಲೀಮಾರ ಮಡಿಲಲ್ಲಿ

ಆಮಿನರ ಕಂದನಿಗೆ ಮೊಲೆಹಾಲೂಡಿಸುವ ಸೌಭಾಗ್ಯವು ಮೊದಲಿಗೆ ಅಬೂಲಹಬ್‌ನ ದಾಸಿ ಸೌಬಿಯಾಳಿಗೆ ದೊರೆತಿತ್ತು. ತರುವಾಯ ಅರಬ್ ಸಂಪ್ರದಾಯದಂತೆ ಮಕ್ಕಾದ ನವಜಾತ ಶಿಶುಗಳಿಗೆ ಹಾಲೂಡಿಸಲು ಮಕ್ಕಾ ಪರಿಸರದ ಗ್ರಾಮಗಳಿಂದ ದಾದಿಯರು ಆಗಮಿಸ ತೊಡಗಿದರು. ಈ ವಿಷಯದಲ್ಲಿಯೂ ಲೌಕಿಕ ಮಾಯೆ ಆವರಿಸಿಕೊಂಡಿತ್ತು. ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಹಣ-ಸಂಪತ್ತಿನ ಲಾಲಸೆ ತುಂಬಿಕೊಂಡಿರುತ್ತಿತ್ತು. ಲಾಭದ ಆಸೆ, ಬಡ್ಡಿ-ಮಾರ್ಬಡ್ಡಿಯ ಆಕಾಂಕ್ಷೆ! ಅರೇಬಿಯದ ದಾದಿಯರೂ ಈ ಭಾವನೆಯಿಂದ ಮುಕ್ತರಾಗಿರಲಿಲ್ಲ. ಅವರ ಹೃದಯದಲ್ಲಿಯೂ ಹೊಟ್ಟೆಯ ಕಾವನ್ನು ತಣಿಸುವ ಆಗ್ರಹವಿತ್ತು. ಮಕ್ಕಾ ನಗರಕ್ಕೆ ಅವರು ಅದೇ ಉದ್ದೇಶದಿಂದ ಬರುತ್ತಿದ್ದರು. ಸಿರಿವಂತ ಕುಟುಂಬದ ಶಿಶುಗಳನ್ನು ಪೋಷಿಸಲು ಪಡೆದು, ಬಹುಮಾನ-ಪಾರಿತೋಷಕ ಗಳನ್ನು ಗಳಿಸುವುದೇ ಅವರ ಗುರಿಯಾಗಿತ್ತು. ಎಲ್ಲರೂ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಕುಟುಂಬದ ಶಿಶುಗಳನ್ನೇ ಪಡೆದುಕೊಂಡರು. ಅದರಲ್ಲೂ ತಂದೆ ಬದುಕಿರುವ ಶಿಶುಗಳನ್ನು!

ಈ ಲೋಕವು ಬಾಹ್ಯಕ್ಕೆ ಗೋಚರಿಸುವುದನ್ನು ಮಾತ್ರ ನೋಡುವ ಸಂಕುಚಿತ ದೃಷ್ಟಿಯುಳ್ಳವರಿಂದಲೇ ತುಂಬಿಕೊಂಡಿದೆ. ಜನರು ಸಿಪ್ಪೆಗೇ ಜೀವ ಬಿಡುತ್ತಾರೆ. ತಿರುಳನ್ನು ಗಳಿಸುವುದು ಬಿಡಿ, ಅದರ ಸನಿಹಕ್ಕೆ ತಲಪುವ ಪ್ರಯತ್ನವನ್ನೂ ಮಾಡುವುದಿಲ್ಲ. ಹೂ-ಪುಷ್ಪಗಳ ಬಾಹ್ಯ ಬಣ್ಣಕ್ಕೇ ಎಲ್ಲರೂ ಮಾರು ಹೋಗುತ್ತಾರೆ. ಆದರೆ ಅವುಗಳ ಸುಗಂಧದ ಪರದೆಯನ್ನು ಸರಿಸಿ, ಅದರ ಹಿಂದೆ ಏನಾದರೂ ಯುಕ್ತಿ ಇದೆಯೋ ಇಲ್ಲವೋ ಎಂಬುದನ್ನು ಅವಲೋಕಿಸಲು ಹೋಗುವುದಿಲ್ಲ. ಲಾಲಸೆ ಮತ್ತು ವಾಂಛೆಯು ದೃಷ್ಟಿಗಳಿಗೆ ಪರದೆಯನ್ನು ಇಳಿಸಿ ಬಿಟ್ಟಿದೆ. ವಾಸ್ತವಿಕತೆಯನ್ನು ಈ ಅಲ್ಪಮತಿಗಳು ಅರಿತೇ ಇರು ವುದಿಲ್ಲ. ಕೇವಲ ಮೇಲ್ಮೈಯ ಸೌಂದರ್ಯಾರಾಧನೆ! ಆಂತರಿಕ ಸೌಂದರ್ಯದ ಪರಿವೆ ಇರುವುದೇ ಇಲ್ಲ... ಕೇವಲ ಮಾತಿನ ಓಘಕ್ಕೆ ಮಾರುಹೋಗುತ್ತಾರೆ. ಅರ್ಥ-ತಾತ್ಪರ್ಯ ವನ್ನರಿಯುವ ಗೋಜಿಗೆ ಹೋಗಲಾರರು.

ಅರೇಬಿಯದ ಆ ದಾದಿಯರು... ಸಂಕುಚಿತ ದೃಷ್ಟಿಯ ದುರದೃಷ್ಟವಂತೆಯರು! ಶ್ರೀಮಂತರ ಮನೆಯ ಕಡೆಯೇ ಸುಳಿದಾಡುತ್ತಿದ್ದರು. ಅಬ್ದುಲ್ ಮುತ್ತಲಿಬ್‌ರ ಮನೆಗೆ

ಬರಲು ಹಿಂಜರಿದರು. ಅಬ್ದುಲ್ಲಾರ ಅನಾಥಮುತ್ತಿನ ಕಡೆಗೆ ಯಾರ ಗಮನವೂ ಹರಿಯಲಿಲ್ಲ... ತಂದೆಯಿಲ್ಲದ ಮಗುವನ್ನು ಪಡೆದರೆ ನಮಗೆ ಏನು ಸಿಕ್ಕೀತು ಎಂಬ ಆಲೋಚನೆ ಯಿಂದ; ವಿಧವೆ ತಾಯಿ ಸ್ವಯಂ ದುಃಖಿತರಾಗಿ, ಕಳವಳಕ್ಕೀಡಾಗಿದ್ದು ನಮಗೇನು ನೀಡಿಯಾರು... ಅಬ್ದುಲ್ ಮುತ್ತಲಿಬ್‌ರವರು ಕುರೈಶರ ಸರದಾರರಾಗಿದ್ದಾರೆ ಮತ್ತು ಕಅಬಾಲಯದ ಮೇಲ್ವಿಚಾರಕರಾಗಿದ್ದಾರೆ. ಎಲ್ಲ ಸರಿಯೇ... ಎಲ್ಲರೂ ಅವರನ್ನು ಗೌರವಿಸುತ್ತಾರೆ... ಆದರೆ ಕೊಡುಗೈ ದಾನಿಯಾಗಿರುವ ಅವರ ಬಳಿ ಉಳಿಯುವುದಾದರೂ ಏನು? ನೂರರ ಆದಾಯವಿದ್ದರೆ ಇನ್ನೂರರ ಖರ್ಚು! ಯಾವಾಗ ನೋಡಿದರೂ ಮನೆಯಲ್ಲಿ ಯಾತ್ರಿಕರಿಗೆ ಆತಿಥ್ಯ ನೀಡುತ್ತಿರುತ್ತಾರೆ. ಹಜ್ಜ್‌ನ ಸಂದರ್ಭದಲ್ಲಂತೂ ಅಬ್ದುಲ್ ಮುತ್ತಲಿಬ್ ಸಂಪೂರ್ಣ ಬರಿದಾಗಿ ಬಿಡುತ್ತಾರೆ. ಇಡೀ ವರ್ಷದ ಆದಾಯವನ್ನು ಹಾಜಿಗಳ ಸೇವೆಯಲ್ಲಿ ಅರ್ಪಿಸಿ ಬಿಡುತ್ತಾರೆ... ಹೀಗೆ ದಾದಿಯರು ಅಪಾರ ಬಹುಮಾನ/ಪಾರಿತೋಷಕಗಳೊಂದಿಗೆ ಮಕ್ಕಾ ನಗರದ ಶ್ರೀಮಂತ ಶಿಶುಗಳನ್ನು ಕೊಂಡು ಹೋಗುತ್ತಾರೆ.

"ಅಬ್ದುಲ್ ಉಝ್ಝಾ ನನಗೆ ಇಪ್ಪತ್ತು ದಿನಾರ ಮತ್ತು ಇನ್ನೂರು ದಿರ್ಹಮ್ ನೀಡಿದರು" ಓರ್ವ ದಾದಿ ಬಹಳ ಹೆಮ್ಮೆಯಿಂದ ಹೇಳಿದಳು.

"ನನಗೆ ಈ ಮಗುವಿನ ಮಾವಂದಿರು ಪ್ರತ್ಯೇಕ ಇನಾಮು ನೀಡಿದ್ದಾರೆ. ಚಿಕ್ಕಪ್ಪನದು ವಿಶೇಷ ಉಡುಗೊರೆ ಬೇರೆಯೇ ದೊರೆತಿದೆ! ಮಗುವಿನ ಅಪ್ಪನಂತೂ ನನ್ನಂತಹ ಬಡವಳನ್ನೂ ಸಿರಿವಂತಳನ್ನಾಗಿ ಮಾಡಿದರು. ದಿರ್ಹಮ್ ಮತ್ತು ದೀನಾರ್‌ಗಳ ಥೈಲಿ ಗಳನ್ನು ಹೇರಿಕೊಂಡೇ ಹೋಗುತ್ತಿದ್ದೇನೆ" ಎರಡನೆಯವಳು ಹೇಳಿದಳು.

"ಇದು... ಇದು ನೋಡಿ ಯಮನಿನ ಚದ್ದರಗಳು, ಬೆಳ್ಳಿಯ ಹಾರ ಮತ್ತು ಇದೋ ಬೆಲೆಬಾಳುವ ಕಡಗ... ಮತ್ತೆ... ನಾನು ಹೊರಡುವಾಗ ಅಬೂರಿಫಾದ ತನ್ನ ಆರಾಧ್ಯ ದೈವವನ್ನು ಮುಟ್ಟಿ, 'ನನ್ನ ಮಗುವನ್ನು ಸುರಕ್ಷಿತವಾಗಿ ಮರಳಿ ತಂದಾಗ ನಿನ್ನ ಮನಸ್ಸಿನ ಆಗ್ರಹವನ್ನೆಲ್ಲಾ ತೀರಿಸುವೆನು' ಎಂದು ಹೇಳಿದ್ದಾರೆ. ಹ್ಞಾ! ನನ್ನ ಮಟ್ಟಿಗೆ ಅನುಗ್ರಹಗಳ ಸುರಿಮಳೆ!!" ಮೂರನೆಯವಳು ಹೇಳಿದರು.

"ಈ ಮುದ್ದು ಕಂದನ (ಕೈಯಲ್ಲಿದ್ದ ಮಗುವಿನೆಡೆಗೆ ನೋಡುತ್ತಾ) ತಾತ ಒಂದು ಒಂಟೆಯ ಮೇಲೆ ಸಾಮಾನುಗಳನ್ನು ಹೇರಿ ಕಳುಹಿಸಿದ್ದಾರೆ. ಖರ್ಜೂರ, ಆಹಾರ ಧಾನ್ಯ, ತೈಲ, ಹುರಿದ ಧಾನ್ಯ, ಪಾತ್ರೆ, ಬಟ್ಟೆ, ಬರೆ... ಏನಿದೆ, ಏನಿಲ್ಲ! ನಾನು ಹೊರಡುವಾಗ ಅವರು ಹೇಳಿದ್ದರು, 'ಹಜ್ಜ್ ಸಂದರ್ಭದಲ್ಲಿ ನಿನ್ನ ಯಾರಾದರೂ ಸಂಬಂಧಿಯನ್ನು ಇಲ್ಲಿಗೆ ಕಳುಹಿಸು... ಒಂದೆರಡು ಒಂಟೆಗಳು ಮತ್ತು ಹತ್ತಿಪ್ಪತ್ತು ಆಡುಗಳನ್ನು ಕಳುಹಿಸಿಕೊಡುತ್ತೇನೆ' ಎಂದು..." ನಾಲ್ಕನೆಯವಳು ಹೇಳಿದಳು.

"ಆದರೆ ಪಾಪ ಹಲೀಮಾ!" ಐದನೆಯವಳು ಲೊಚಗುಟ್ಟುತ್ತಾ ತನ್ನ ಮಾತನ್ನು ಅರ್ಧದಲ್ಲಿ ನಿಲ್ಲಿಸಿದಳು. ಬಳಿಕ ಮುಂದುವರಿದು, "ಹೌದು, ನನಗೆ ಹಲೀಮಳ ಬಗ್ಗೆ ಮರುಕವುಂಟಾಗುತ್ತಿದೆ!

ಯಾವುದೇ ಸಿರಿವಂತ ಕುಟುಂಬದ ಮಗು ಆಕೆಗೆ ದೊರೆತಿಲ್ಲ. ಅಬ್ದುಲ್ ಮುತ್ತಲಿಬ್‌ರ ಮನೆಗೆ ಹೋಗಿದ್ದಾಳೆ... ಅಬ್ದುಲ್ಲಾನ ಅನಾಥ ಮಗುವನ್ನು ಪಡೆಯಲು! ಅಲ್ಲಿ ಅವಳಿಗೆ ಏನು ತಾನೇ ದೊರೆತೀತು? ಹೆಚ್ಚೆಂದರೆ ಎಂಟ್ಹತ್ತು ಬೊಗಸೆ ಖರ್ಜೂರ ಮತ್ತು ಒಂದೆರಡು ಚೀಲ ಹುರಿದ ಧಾನ್ಯ... ಅಷ್ಟೇ! ಅನಾಥ ಮಗುವಿಗೆ ಹಾಲೂಡಿಸುವುದರಿಂದ ನಷ್ಟದ ಹೊರತು ಇನ್ನೇನೂ ದಕ್ಕದು. ಆಮಿನಳ ಬಳಿ ದುಆದ ಹೊರತು ಬೇರೇನಿದೆ? ಆದರೆ ಕೇವಲ ದುಆದಿಂದ ಯಾರದೇ ಹೊಟ್ಟೆ ತುಂಬಲಾರದಷ್ಟೇ. ಯಾರೇ ಆದರೂ ದುಆ ಮಾಡುವುದರ ಬದಲು ಒಂದು ದಿರ್ಹಮ್ ಆದರೂ ಕೊಟ್ಟು ಬಿಡುವುದು ಒಳ್ಳೆಯದು" ಎಂದು ಹೆಮ್ಮೆ ಮತ್ತು ಅನುಕಂಪ ಮಿಶ್ರಿತ ಪದಗಳಲ್ಲಿ ಹೇಳಿದಳು. ಆಕೆಯ ಒಂಟೆ ಕೆನೆಯಿತು.

ಬನೀ ಸಅದ್ ಬಿನ್ ಬಕರ್ ಗೋತ್ರದ ದಾದಿ ಹಲೀಮಾ ಬಹಳ ನಿರಾಶರೂ ದುಃಖಿತರೂ ಆಗಿದ್ದರು. ಅಯ್ಯೋ... ಶ್ರೀಮಂತ ಕುಟುಂಬಗಳ ಮಕ್ಕಳನ್ನೆಲ್ಲ ಇತರ ದಾದಿಯರು ಪಡೆದುಕೊಂಡು ಹೋದರಲ್ಲ... ನನ್ನ ಹಣೆಯಲ್ಲಿ ಅನಾಥ ಮಗುವಿಗೆ ಹಾಲೂಡಿಸುವುದೆಂದು ಬರೆದಿದೆಯೇನೋ... ಅಲ್ಲಿ, ಶೈಮಾಳ(ಮಗಳ) ತಂದೆ ಕೋಪ ಗೊಂಡು ನನ್ನನ್ನು ಜರೆಯಬಹುದು... 'ವಾಹ್! ಒಳ್ಳೇ ಮಗುವನ್ನು ತಂದಿದ್ದೀ! ಅದರ ಮನೆಯವರಿಗೆ ದಿರ್ಹಮ್-ದೀನಾರ ಕೊಡುವ ಸಾಮರ್ಥ್ಯ ದೂರದ ಮಾತು; ನಾಲ್ಕೈದು ಬೊಗಸೆ ಧಾನ್ಯ ನೀಡಲೂ ಸಾಧ್ಯವಿರಲಾರದು' ಎಂದೆಲ್ಲ ಹೇಳಬಹುದು. ಅದನ್ನು ನಾನು ತೆಪ್ಪಗೆ ಕೇಳಿಸಿ ಕೊಳ್ಳಬೇಕಷ್ಟೇ... ಉತ್ತರಿಸಲು ನನ್ನಿಂದ ಸಾಧ್ಯವಿಲ್ಲ ತಾನೇ...

ಹಲೀಮಾ... ಚಿಂತಿತರಾಗಿದ್ದ ಹಲೀಮಾ ಬಹಳ ಖೇದದೊಂದಿಗೆ ಅಬ್ದುಲ್ ಮುತ್ತಲಿಬ್ ಮನೆಗೆ ತಲಪುತ್ತಾರೆ. ಅಬ್ದುಲ್ಲಾರ ಮಗು ನಿದ್ರಿಸುತ್ತಿತ್ತು... ಮುಖಾರವಿಂದ ದಿಂದ ತೆಳುವಾದ ಪ್ರಕಾಶ ಕಿರಣವು ಹೊರಸೂಸುತ್ತಿತ್ತು. ಬೆಳದಿಂಗಳಿಗಿಂತಲೂ ಹೆಚ್ಚು ಚಿತ್ತಾಕರ್ಷಕ ಮತ್ತು ಮನಸೂರೆಗೊಳ್ಳುವಂತಹ ರೂಪ. ಹಲೀಮಾ ಸದ್ದಾಗದಂತೆ ಮಗುವಿನ ಬಳಿಗೆ ಹೆಜ್ಜೆ ಹಾಕಿದರು ಮತ್ತು ಮಗುವಿನ ಎದೆಯ ಮೇಲೆ ಮೃದುವಾಗಿ ಕೈಯಾಡಿಸಿದರು. ಮಗು ಕಣ್ಣು ತೆರೆಯಿತು. ಮುಗುಳ್ನಗುತ್ತಾ ಹಲೀಮರನ್ನೇ ದಿಟ್ಟಿಸಿತು... ಹಲೀಮಾ ನೂರಾರು ನವಜಾತ ಶಿಶುಗಳನ್ನು ಕಂಡಿದ್ದರು ಮತ್ತು ಹಲವದಕ್ಕೆ ಮೊಲೆಹಾಲು ಕುಡಿಸಿದ್ದರು. ಆದರೆ ಈ ಅನಾಥ ಮಗುವಿನ ಸ್ಥಿತಿಯೇ ಭಿನ್ನವಾಗಿದೆ. ಅದರ ಮುಗುಳ್ನಗುವಿನಲ್ಲಿ ಮನಃಶಾಂತಿಯ ಸಂದೇಶವಿತ್ತು. ಸಮಾಧಾನ ಮತ್ತು ಪ್ರೀತಿಯ ಕರೆಯಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಘನತೆ ಮತ್ತು ಗಾಂಭೀರ್ಯ ಸಮ್ಮಿಳಿತವಾಗಿತ್ತು. ಅರೆ! ಇಷ್ಟು ಸಣ್ಣ ಮಗುವಿನಲ್ಲಿ... ಸಣ್ಣ ಮಕ್ಕಳು ಮುಗುಳ್ನಗುವುದು ಸಾಮಾನ್ಯವಾದ ವಿಚಾರವೇ... ಆದರೆ ಅಬ್ದುಲ್ಲಾರ ಈ ಅನಾಥನ ಮುಗುಳ್ನಗುವಿನಲ್ಲಿ ಒಂದು ರೀತಿಯ ಉದ್ದೇಶ ಮತ್ತು ಸಂದೇಶ ಪುಟಿಯುತ್ತಿತ್ತು... ಮುಗುಳ್ನಗು ಸ್ವತಃ ಏನನ್ನೋ ಹೇಳುತ್ತಿತ್ತು ಮತ್ತು ಮೌನ ದೃಷ್ಟಿಯು ಮತ್ತೇನನ್ನೋ ನುಡಿಯುತ್ತಿತ್ತು.

"ಹಲೀಮಾ, ಈ ಮಗುವನ್ನು ಅನಾಥನೆಂದು ಭಾವಿಸಿ ಚಿಂತಿಸಬೇಡ. ಅಲ್ಲಾಹನಾಣೆ!

ಇವನು ಜಗತ್ತಿನಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿ ವಿರಾಜಮಾನನಾಗುವವನಿದ್ದಾನೆ" ಆಮಿನರು ಹಲೀಮರೊಡನೆ ಹೇಳಿದರು.

"ಬೀಬಿ, ನಿಜ ಹೇಳಲೇ...? ಈ ಕ್ಷಣದ ವರೆಗೆ ನಾನು ಬಹಳ ಖೇದ ಪಟ್ಟು ಕೊಳ್ಳುತ್ತಲೇ ಇದ್ದೆ. ಗಳಿಗೆಗೊಮ್ಮೆ ಪರಿತಪಿಸುತ್ತಿದ್ದೆ. ಯಾವುದಾದರೂ ಶ್ರೀಮಂತ ಕುಟುಂಬದ ಮಗುವನ್ನು ಪಡೆಯಲಾಗಲಿಲ್ಲವಲ್ಲಾ ಎಂದು! ನನ್ನ ದುರದೃಷ್ಟವನ್ನು ನಾನು ಹಳಿಯುತ್ತಿದ್ದೆ... ಆದರೆ ನಿನ್ನ ಪುಟ್ಟ ಕಂದನ ಮುಗುಳ್ನಗು ನನ್ನೆಲ್ಲ ಚಿಂತೆಯನ್ನೂ ಆವಿಯನ್ನಾಗಿಸಿತು. ಮಗುವಿನ ಒಂದು ನೋಟವೇ ನನ್ನ ದುಃಖವನ್ನು ಅಳಿಸಿಬಿಟ್ಟಿತು. ಉಮ್ಮು ಮುಹಮ್ಮದ್! ನನ್ನ ಹೃದಯದಲ್ಲೇಳುತ್ತಿರುವ ಭಾವತರಂಗಗಳನ್ನು ಪದಗಳಲ್ಲಿ ಪ್ರಕಟಿಸಲು ನನ್ನಿಂದ ಸಾಧ್ಯವಿಲ್ಲ. ನನ್ನ ಮನಸ್ಸಿಗೆ ಇಂದಿನಂತೆ ಹಿಂದೆಂದೂ ಇಷ್ಟು ಸಂತೋಷವಾಗಿರಲಿಲ್ಲ. ವಹಬ್‌ರ ಮಗಳೇ, ನಿನಗೆ ಸ್ವತಃ ತಿಳಿದಿಲ್ಲ! ನಿನ್ನ ಮಗುವಿನ ಒಂದು ಮುಗುಳ್ನಗು ನನ್ನನ್ನು ಏನು ಮಾಡಿತೆಂದು ನಿನಗೆ ತಿಳಿಯಲಾರದು! ಇಂದಿನದ ಕ್ಕಿಂತ ಉತ್ತಮವಾದ ಪ್ರಭಾತವು ನನ್ನ ಜೀವಮಾನದಲ್ಲೆಂದೂ ಉದಯಿಸಿರಲೇ ಇಲ್ಲ."

ಆಮಿನಾ ಮುಗುಳ್ನಗುತ್ತಾರೆ.

ಆಮಿನರ ಕರುಳಕುಡಿಯನ್ನು ಎತ್ತಿ ಹಲೀಮಾ ಹೊರಡುತ್ತಾರೆ. ವಿಧವೆ ತಾಯಿ ತನ್ನ ಅನಾಥ ಮುತ್ತಿನ ಹಣೆಗೆ ಹೂಮುತ್ತನ್ನಿಡುತ್ತಾರೆ. ಮಮತೆಯ ಹೊಂಗಳೆಯು ಚಂದಿರ ನಂಥ ಹಣೆಯಲ್ಲಿ ಪಡಿಮೂಡಿತು... ಮಾತೆಯ ಕಣ್ಣೆವೆಗಳು ಆರ್ದ್ರಗೊಂಡುವು. ಮುಗ್ಧ ಅನಾಥ ಮಗು ಬೇರ್ಪಡುವಾಗ ಆಮಿನರಲ್ಲಿ ಪತಿಯ ಅಗಲಿಕೆಯ ನೋವು ಮರುಕಳಿಸಿತು. ಒಂದು ದುಃಖವು ಇನ್ನೊಂದು ವೇದನೆಯ ಸ್ಮರಣೆಗೆ ಹೇತುವಾಯಿತು.

ವೃದ್ಧ ಅಬ್ದುಲ್ ಮುತ್ತಲಿಬ್‌ರು ಮೊಮ್ಮಗುವನ್ನು ಪ್ರೀತಿ ಪೂರ್ವಕ ಬೀಳ್ಕೊಟ್ಟರು. ಮಕ್ಕಾದ ಗುಡ್ಡಗಾಡುಗಳ ತನಕ ಹಲೀಮರ ಒಂಟೆಯ ಜತೆ ಅಬ್ದುಲ್‌ಮುತ್ತಲಿಬ್‌ರೂ ಹೆಜ್ಜೆ ಹಾಕಿದರು. ತರುವಾಯ ಗದ್ಗದಿತವಾಗಿ ಹೇಳಿದರು,

"ಹಲೀಮಾ! ಅನಾಥ ಮಗುವೆಂದು ಭಾವಿಸಿ ಪಾಲನೆಯಲ್ಲಿ ಕೊರತೆಯನ್ನು ತೋರಬೇಡ. ಅಲ್ಲಾಹನಾಣೆ! ಕುರೈಶ್ ಗೋತ್ರದಲ್ಲಿ ಇಂಥ ಸೌಭಾಗ್ಯವಂತ ಮತ್ತು ಸರ್ವಾಂಗೀಕೃತ ಮಗು ಇದುವರೆಗೂ ಹುಟ್ಟಿರಲಿಲ್ಲ. ಕಣಿ ಹೇಳುವವರು, ಸನ್ಯಾಸಿಗಳು ಮತ್ತು ಪುರೋಹಿತರು ಒಂದು ದಿನ ಇಡೀ ಜಗತ್ತು ಮುಹಮ್ಮದ್‌ನ ಮುಂದೆ ತಲೆಬಾಗುವ ಕಾಲ ಬರಲಿದೆ ಯೆಂದು ನನ್ನೊಡನೆ ಹೇಳಿದ್ದಾರೆ."

ಉತ್ತರವಾಗಿ ಹಲೀಮಾ ಹೇಳುತ್ತಾರೆ,

"ಸಯ್ಯಿದುಲ್ ಕುರೈಶ್! ನೀವು ನೆಮ್ಮದಿಯಿಂದಿರಿ. ಅಲ್ಲಾಹನಿಚ್ಛಿಸಿದರೆ ನಿಮ್ಮ ಮೊಮ್ಮಗುವಿನ ಕಿವಿಗೆ ಕೂಡಾ ವಾತಾವರಣದ ಬಿಸಿ ತಾಗಲಾರದು. ನಾನು ಸ್ವಯಂ ಕಷ್ಟಪಟ್ಟಾದರೂ ಈ ಮಗುವನ್ನು ಸುಖದ ಸುಪ್ಪತ್ತಿಗೆಯಲ್ಲಿಟ್ಟು ಬೆಳೆಸುವೆನು. ನಿಮ್ಮ ಮೊಮ್ಮಗ

ಮುಹಮ್ಮದ್‌ನ ಹೊಟ್ಟೆ ತುಂಬದ ಹೊರತು ನನ್ನ ಮಗಳು ಶೈಮಾಳ ಬಾಯಿಗೆ ಮೊಲೆ ಹಾಲು ಸೋಂಕಲಾರದು. ಈ ಮಾತನ್ನು ನಾನು ಪೂರ್ಣ ವಿಶ್ವಾಸ ಮತ್ತು ಹೊಣೆಗಾರಿಕೆಯೊಂದಿಗೆ ಹೇಳುತ್ತಿದ್ದೇನೆ. ಅಬ್ದುಲ್ ಮುತ್ತಲಿಬ್‌ರೇ! ಅಲ್ಲಾಹನನ್ನು ಸಾಕ್ಷ್ಯವಿರಿಸಿ ಹೇಳುತ್ತಿದ್ದೇನೆ. ಯಾ ಅಬೂ ಅಬ್ದುಲ್ಲಾ, ನನ್ನ ಮೇಲೆ ಭರವಸೆಯಿರಿಸಿರಿ."

ಹಲೀಮಾ ಸಂತೋಷದಿಂದ ಹೊರಟರು. ಒಂಟೆಯು ಮರಳುಗಾಡಿನಲ್ಲಿ ಪಯಣ ಆರಂಭಿಸಿತು. ಹಲೀಮಾ ಗಳಿಗೆಗೊಮ್ಮೆ ಅನಾಥ ಮುತ್ತಿನೆಡೆಗೆ ನೋಡುತ್ತಿದ್ದಾರೆ ಮತ್ತು ಆಗಾಗ ಮಗುವಿನ ಹಣೆಗೆ ಹೂಮುತ್ತನ್ನಿಡುತ್ತಾ ಹೇಳುತ್ತಿದ್ದಾರೆ,

"ಓ ಮುಹಮ್ಮದ್, ಹೇ ಅಹ್ಮದ್, ಅಬ್ದುಲ್ಲಾರ ಅನಾಥಮುತ್ತೇ! ಆಮಿನಳ ಕರುಳಕುಡಿಯೇ! ಅಬ್ದುಲ್ ಮುತ್ತಲಿಬ್‌ರ ಮುದ್ದಿನ ಮೊಮ್ಮಗುವೇ! ಏನು ನನ್ನನ್ನು ಹಾಗೆ ನೋಡುತ್ತೀಯಾ? ಮೊದಲೇ ಪರಿಚಯ ಇರುವ ಹಾಗೆ!? ನಿನ್ನನ್ನು ನೋಡಿದಾಗಿನಿಂದ ನನ್ನ ಮಕ್ಕಳನ್ನೇ ಮರೆತುಬಿಟ್ಟಿದ್ದೇನೆ... ನೀನು ನನ್ನ ಮಮತೆಯಾಗಿ ಬಿಟ್ಟಿದ್ದೀಯಾ... ಅಬ್ದುಲ್ಲಾರ ಮಗನೇ! (ಮಗು ಮುಗುಳ್ನಗುತ್ತದೆ) ಓಹೋ, ಮುಗುಳ್ನಕ್ಕು 'ಹಲೀಮಾ ನೀನು ಸತ್ಯವನ್ನೇ ಹೇಳಿದಿ' ಎಂದು ನನ್ನ ಮಾತನ್ನು ಪುಷ್ಟೀಕರಿಸುತ್ತಿದ್ದೀಯಾ ಮರೀ! ನಿನ್ನ ಒಂದು ಮುಗುಳ್ನಗುವೇ ನನ್ನ ಅಂಧಕಾರಮಯ ಜೀವನದಲ್ಲಿ ಪ್ರಕಾಶವನ್ನು ಹರಡಿತಲ್ಲ! ಓಹ್ ಮುಹಮ್ಮದ್! ಮತ್ತೆ... ಅರೆ... ಇದೇನು...? ನನ್ನ ಈ ದುರ್ಬಲ ಕಾಲಿನ ಒಂಟೆಯು ಗಾಳಿಯಲ್ಲಿ ಹಾರಾಡುತ್ತಿದೆ... ಈ ವೇಗ! (ನಾಲ್ಕು ಕಡೆ ನೋಟ ಬೀರುತ್ತಾ) ಇದೇನಾಗುತ್ತಿದೆ! ಖರ್ಜೂರದ ಒಣ ಗೆಲ್ಲುಗಳಲ್ಲಿಂದ ಏಕಾಏಕಿ ಪ್ರಕಾಶ ಕಿರಣ ಹೊರ ಸೂಸುತ್ತಿದೆ! ಅರೆ! ಗುಡ್ಡ-ಬೆಟ್ಟಗಳ ಬಂಡೆಗಲ್ಲುಗಳು ಬಾಗುತ್ತಿವೆ... ಮತ್ತೆ ಈ ರಸ್ತೆ!? ಯಾರೋ ದೇವಚರ ಬಂದು ನಕ್ಷತ್ರಗಳನ್ನು ಕುಟ್ಟಿಹರಡಿ ಬಿಟ್ಟಂತಿದೆ! ದೊಡ್ಡವನಾದ ಮೇಲೆ ಮುಹಮ್ಮದ್, ನೀನು ಏನಾಗಲಿದ್ದೀಯೋ ನಾಕಾಣೆ! ಆ ವೇಳೆ ನಿನ್ನ ಈ ದಾದಿ ಹಲೀಮಳನ್ನು ಮರೆತು ಬಿಡಬಾರದಪ್ಪ... ಆದರೆ ನಾನಿದೇನು ಬುದ್ಧಿಯಿಲ್ಲದವಳ ಹಾಗೆ ಮಾತನಾಡುತ್ತಿದ್ದೇನೆ? ನೀನೆಲ್ಲಿ ನನ್ನನ್ನು ಮರೆಯುತ್ತೀ? ನಿನ್ನ ಬಾಯಿಯಿಂದ ಪ್ರೀತಿ-ವಿಶ್ವಾಸದ ಸುಗಂಧ ಸೂಸುತ್ತಿದೆ ಯಲ್ಲ... ಈ ಸುಂದರ ನಯನಗಳಲ್ಲಿ ಅಪ್ಯಾಯಮಾನತೆ ತುಳುಕುತ್ತಿದೆಯಲ್ಲ... ನನಗಾದರೋ... ಮುಹಮ್ಮದ್! ನಿನ್ನ ಹೆಗಲ ಮೇಲೆ ಜಗತ್ತಿನಾದ್ಯಂತದ ಮಾನವೀಯ ಅನುಕಂಪದ ಭಾರವಿರುವಂತೆ ಕಾಣುತ್ತಿದೆ..."

ಹಲೀಮರ ಒಂಟೆ ತೀವ್ರಗತಿಯಲ್ಲಿ ಸಾಗುತ್ತಿದೆ. ಒಂಟೆಯ ಸಾರಥಿಯು ಸ್ವಯಂ ಅದರ ವೇಗಕ್ಕೆ ಆಶ್ಚರ್ಯಪಟ್ಟುಕೊಳ್ಳುತ್ತಿದ್ದಾನೆ. ಕಳೆದ ರಾತ್ರಿ... ನಕ್ಷತ್ರಗಳು ಮಿನುಗುತ್ತಿದ್ದುವು... ತಂಗಾಳಿಯ ಮಡಿಲಲ್ಲಿ ಜಾಲಿಮರದ ಗೆಲ್ಲುಗಳು ಉಯ್ಯಾಲೆ ತೂಗುತ್ತಿದ್ದುವು... ಈ ಸ್ಮರಣೆಯಿಂದ ಉಲ್ಲಸಿತನಾದ ಸಾರಥಿಯು ಕವನ ವಾಚನಗೈಯಲು ಅಣಿಯಾದ. ಆದರೆ ಅವನಿಗೆ ಇಂದೇಕೋ ಶರಾಬು, ಅಮಲು ಮತ್ತು ವಿಷಯಾಸಕ್ತಿಗೆ ಸಂಬಂಧಿಸಿದ

ಕವನ ಸಾಲುಗಳು ನೆನಪಾಗುತ್ತಿಲ್ಲ! ಮೋಡಿ ಮಾಡುವ ದ್ವಂದ್ವಾರ್ಥದ ಪದ್ಯಗಳಾವುದೂ ಅವನಿಗೆ ಎಷ್ಟೇ ಪ್ರಯತ್ನಿಸಿದರೂ ನೆನಪಾಗಲೊಲ್ಲದು! ಅವನ ಸ್ಮರಣ ಕೇಂದ್ರದಿಂದ ಕಾಮ ವಿಕಾರ ಕೆರಳಿಸುವ ಹಾಡುಗಳೆಲ್ಲವನ್ನೂ ಯಾರೋ ತಿಕ್ಕಿ ತೊಳೆದು ಶುಭ್ರಗೊಳಿಸಿದಂತಹ ಅನುಭವ! ಹಿಜಾಝಿ ಶ್ರುತಿಯಲ್ಲಿ ಆತ ಹಾಡಿದ ಪದ್ಯದ ಭಾವಾರ್ಥ:

"ಬರ್ಕುಲ್ ಗುಮಾದ್‌ನ ಖರ್ಜೂರ ತೋಟದಲ್ಲಿ... ತೈಮಾದ ಸರದಾರರು ಕೆಂಪು ಒಂಟೆಗಳಲ್ಲಿ ವಿಹರಿಸುವಾಗ... ಅವರೊಡನೆ ಹೇಳಿರಿ- ಸಭ್ಯತೆಯ ಒಂದು ಕಣವು ಸ್ವರ್ಣ-ಬೆಳ್ಳಿಯ ಪರ್ವತಗಳಿಗಿಂತಲೂ ಘನವಾದುದು... ಯಮನಿನ ಕೆಂಪು ರತ್ನಗಂಬಳಿಗಿಂತ... ಸಜ್ಜನ ವ್ಯಕ್ತಿಯ ಹಸ್ತಸ್ಪರ್ಶವಾದ ಕಂಬಳಿಯ ತೇಪೆ ಉತ್ತಮ... ಈ ಮಾತನ್ನು ಪ್ರತಿ ಮುಂಜಾನೆ ಉದಿಸುವ ಸೂರ್ಯ ನನ್ನಲ್ಲಿ ಅರುಹುತ್ತಿರುತ್ತಾನೆ...

ಪ್ರಯತ್ನಿಸಿದರೆ ಈಡನ್ ದ್ವೀಪದ ಕಡಲಾಳದ ಮುತ್ತನ್ನು ಪಡೆಯಬಹುದು... ಆದರೆ ಸೌಭಾಗ್ಯ ಯಾವುದೇ ಪ್ರಯತ್ನದಿಂದ ಗಳಿಸುವಂತಹದ್ದಲ್ಲ... ಪ್ರತಿಯೊಂದು ಅದೃಷ್ಟದ ಪುಟಗಳಲ್ಲಿ ಸೌಭಾಗ್ಯದ ಗೆರೆಗಳಿರುವುದಿಲ್ಲ... ಅದು ಪ್ರಕೃತಿಯ ಕೊಡುಗೆಯಾಗಿದೆ ಮತ್ತು ಉನ್ನತ ಆಕಾಶಗಳಿಂದ ಇಳಿದು ಬರುವ ಅನುಗ್ರಹವಾಗಿದೆ."

ಕವನ ವಾಚಿಸುತ್ತಾ ಸಾರಥಿಯು ಹಲೀಮರೆಡೆಗೆ ಹೊರಳಿ ಹೇಳುತ್ತಾನೆ,

"ಉಮ್ಮು ಶೈಮಾ! ನೀನು ಯಾವುದಾದರೂ ಕವನ ಸಾಲುಗಳನ್ನು ವಾಚಿಸು. ನಿನ್ನ ಗೋತ್ರವು ವಾಕ್ಚಾತುರ್ಯಕ್ಕೆ ಹೆಸರುವಾಸಿಯಾಗಿದೆಯಲ್ಲವೇ... ನಮ್ಮಂತಹ ಅರಬರು ಮಾತುಗಾರಿಕೆಯಲ್ಲಿ ನಿಮಗೆ ಶಿಷ್ಯರು ಎಂದೆಂದಿಗೂ!"

ಹಲೀಮಾ ಮುಗುಳ್ನಕ್ಕು ಉತ್ತರಿಸುತ್ತಾರೆ,

"ನನಗಂತೂ ಒಂದೇ ಕಾವ್ಯ ನೆನಪಿರುವುದು... ಮುಹಮ್ಮದ್... ಮುಹಮ್ಮದ್... ಅಹ್ಮದ್... ಅಹ್ಮದ್... ಈ ಹೆಸರಿಗಿಂತ ಹೆಚ್ಚು ಸಿಹಿಯಾದ ಪದವನ್ನು ಇಡೀ ಅರೇಬಿಯದ ಕವಿಗಳ ಸಕಲ ಕಾವ್ಯ ರಚನೆಗಳನ್ನು ಸೇರಿಸಿದರೂ ಕಾಣಸಿಗಲಾರದು. ಅಬ್ದುಲ್ ಫತಹ್‌ರ ಬಗ್ಗೆ ಬನೂ ಸಅದ್ ಗೋತ್ರದ ಹೆಣ್ಮಕ್ಕಳು ಪದ್ಯ ಕಟ್ಟಿ ಹಾಡಿದ ಬಳಿಕ ನನ್ನೊಡನೆ ಏನಾದರೂ ಹಾಡಲು ಹೇಳಿದರೆ ನಾನು 'ಮುಹಮ್ಮದ್' ಅಂತ ಹೇಳಿ ಸುಮ್ಮನಾಗುವೆನು. ಈ ಒಂದು ಹೆಸರೇ ಅವರ ಎಲ್ಲ ಪದ್ಯಗಳಿಗೆ ಉತ್ತರವಾಗುವುದು. ಓ ನನ್ನ ವಾಹನದ ಸಾರಥಿಯೇ! ನೀನು ಕವನ ಹಾಡುತ್ತಲಿರು... ನನ್ನನ್ನು ಮಾತನಾಡಿಸ ಬೇಡ... ಇದೋ ನೋಡು ಮುಹಮ್ಮದ್ ಮುಗುಳ್ನಗುತ್ತಿದ್ದಾನೆ!" (ಹಲೀಮರ ತುಟಿಗಳು ಆನಂದದಿಂದ ಬಿರಿಯುತ್ತದೆ.)

ದಾರಿಯುದ್ದಕ್ಕೂ ಮರ-ಗಿಡಗಳು, ಮರಳ ದಿಣ್ಣೆಗಳು, ಕಲ್ಲು-ಬಂಡೆಗಳು... ಅಷ್ಟೇ ಅಲ್ಲ, ಗಾಳಿಗೆ ಹಾರಾಡುತ್ತಿರುವ ಒಣ ಎಲೆಗಳು ಎಲ್ಲವೂ ಹಲೀಮರಿಗೆ ಶುಭಾಶಯ ಕೋರುತ್ತಾ ಹೀಗೆ ಹೇಳಿದಂತಾಯಿತು.

"ಹಲೀಮಾ! ಸೌಭಾಗ್ಯವಂತೆ ಹಲೀಮಾ! ಸಮೃದ್ಧಿಯ ಉಡುಗೊರೆಯನ್ನು ಸ್ವೀಕರಿಸು! ನೀನು ಯಾರನ್ನು ಕೊಂಡು ಹೋಗುತ್ತಿರುವಿಯೆಂದು ನಿನಗೆ ತಿಳಿದಿದೆಯೇ? ಇನ್ನು ಜಗತ್ತಿನಲ್ಲಿ ಯಾರಿಗಾದರೂ ಅನುಗ್ರಹ ಮತ್ತು ಮಾರ್ಗದರ್ಶನ ಪ್ರಾಪ್ತವಾಗುವುದಿದ್ದರೆ ಅದು ಇವರ ಮುಖಾಂತರವೇ ದೊರೆಯುವುದು. ಇವರ ಹೆಜ್ಜೆ ಗುರುತುಗಳಲ್ಲಿ 'ಸನ್ಮಾರ್ಗವನ್ನು ರೂಪಿಸಲಾಗುವುದು. ಕೈಸರ್ ಮತ್ತು ಕಿಸ್ರಾರ ಕಿರೀಟಗಳು ಇವರ ಗುಲಾಮರ ಕಾಲಡಿಗೆ ಬಂದು ಬೀಳುವುವು. ಮಾರ್ಗದರ್ಶನದ ಯಾವೆಲ್ಲ ದೀವಟಿಗೆಗಳು ಈ ಲೋಕದಲ್ಲಿ ಬೆಳಕು ಹರಿಸಿವೆಯೋ, ಅವೆಲ್ಲವುಗಳ ಒಟ್ಟು ಪ್ರಕಾಶವು ಈ ಸನ್ಮಾರ್ಗ ರಶ್ಮಿಯಲ್ಲಿ ಮೇಳೈಸಿ 'ಮಿಶ್ಕಾತುಲ್ ಅಬದ್' (ಸ್ಥಾಯಿ ಪ್ರಕಾಶ ಸ್ಥಂಭ) ಆಗಿ ಬಿಡುವುದು. ಅದರ ಬೆಳಕು ಎಂದೆಂದಿಗೂ ಮಂದವಾಗಲಾರದು. ಹಲೀಮಾ! ಸಾಮ್ರಾಟರು ಮತ್ತು ಆಳರಸರ ಹೆಸರು ಅಳಿದು ಹೋಗಲಿದೆ... ಆದರೆ ಅಬ್ದುಲ್ಲಾರ ಅನಾಥ ಮುತ್ತಿನೊಡನೆ ನಿನ್ನ ಹೆಸರು ಇತಿಹಾಸದಲ್ಲಿ ಸದಾ ಸ್ಮರಣೀಯವಾಗಿ ಉಳಿಯಲಿದೆ. ಯಾವಾಗಲೆಲ್ಲ ಮುಹಮ್ಮದ್‌ರ ಚಾರಿತ್ರ್ಯ ಉಲ್ಲೇಖಿಸಲ್ಪಡುವುದೋ ಆವಾಗಲೆಲ್ಲಾ ಜನರು, ಅವರಿಗೆ ಹಲೀಮಾ ಸಅದಿಯ್ಯ ಮೊಲೆಹಾಲು ಕುಡಿಸಿದ್ದರೆಂದು ನೆನಪಿಸುವರು. ಓಹೋ, ಶಾಶ್ವತವಾಗಿ ಬಿಟ್ಟಿತಲ್ಲ ನಿನ್ನ ಹೆಸರು ಹಲೀಮಾ! ಬನೀ ಸಅದ್‌ನ ಅನಾಮಿಕ ದಾದಿ, ನಿನಗೆ ಶಾಶ್ವತ ಕೀರ್ತಿ ಪ್ರಾಪ್ತವಾಯಿತು! ಕುರೈಶ್‌ನ ದೊಡ್ಡ ದೊಡ್ಡ ಶ್ರೀಮಂತರು ನಿನ್ನನ್ನು ಬಂಗಾರದೊಂದಿಗೆ ತೂಗಿ ಕಳುಹಿಸ ಬಹುದಿತ್ತು... ಆದರೆ ಈ ಅನಾಥಮುತ್ತುವಿನ ಕಾರಣವಾಗಿ ನಿನಗೆ ದೊರೆಯುವ ಸೌಭಾಗ್ಯವನ್ನು ಬೇರೆ ಯಾರು ತಾನೇ ದೊರಕಿಸಿಕೊಡಬಲ್ಲರು?"

ಅನುಗ್ರಹಗಳ ಸುರಿಮಳೆ!

ಹಲೀಮಾ ತನ್ನ ಊರು ತಲುಪಿದಾಗ, ಅವರ ಒಂಟೆಯ ವೇಗವನ್ನು ಕಂಡು ಕೇರಿಯ ಜನರೆಲ್ಲ ಕೌತುಕ ಪಟ್ಟರು. ಒಬ್ಬಾಕೆ ಮಾಳಿಗೆ ಮನೆಯ ಗವಾಕ್ಷಿಯಿಂದ ಇಣುಕು ಹಾಕಿ ಹೇಳಿದಳು,

"ಈ ಹಲೀಮಾ ಇಲ್ಲಿಂದ ಹೊರಡುವಾಗ ಅತ್ಯಂತ ಬಡಕಲಾದ ಒಂಟೆಯ ಮೇಲೆ ಸವಾರಳಾಗಿದ್ದಳು. ಆ ಒಂಟೆಗೆ ನೆಟ್ಟಗೆ ನಡೆಯಲೂ ಆಗುತ್ತಿರಲಿಲ್ಲ. ತೀರಾ ದುರ್ಬಲ ವಾದ, ಹೊಟ್ಟೆ ಡುಬ್ಬಕ್ಕೆ ಹತ್ತಿಕೊಂಡಂತಿದ್ದ ಸಣಕಲು ಒಂಟೆ... ಒಂದೊಂದೇ ಮೂಳೆಯು ಎಣಿಸಲು ಸಿಗುತ್ತಿತ್ತು... ಯಾರಾದರೂ ಜೋರಾಗಿ ಊದಿದರೂ ಮುರಿದು ಬೀಳಬಹುದು ಎಂಬಂತಿತ್ತು. ಈ ಅರೆಸತ್ತ ಎಲುಬಿನ ಹಂದರದ ಮೇಲೆ ಸವಾರಳಾಗಿ ಹಲೀಮಾ ಹೇಗೆ ಮಕ್ಕಾ ತಲಪುತ್ತಾಳೋ ಎಂದೇ ಎಲ್ಲರೂ ನಕ್ಕಿದ್ದರು. ನಾವಾದರೋ ಇಂತಿಂತಹ ಪ್ರದೇಶದಲ್ಲಿ ಹಲೀಮಳ ಒಂಟೆಯು ಮುಗ್ಗರಿಸಿ ಬಿದ್ದು ಪ್ರಾಣ ಬಿಟ್ಟಿತೆಂಬ ವಾರ್ತೆ ಕೇಳಲು ಕಾತರರಾಗಿದ್ದೆವು. ಆದರೆ ಇಲ್ಲಿ ಬೇರೆಯೇ ದೃಶ್ಯ ನೋಡಲು ಸಿಗುತ್ತಿದೆ! ಈ ಒಂಟೆಗೇನು ರೆಕ್ಕೆ ಬಂತೇ!? ಗಾಳಿಯಲ್ಲಿ ತೇಲಾಡುತ್ತಿದೆ... ಮಕ್ಕಾದ ಜಾಲಿಮರದ ಎಲೆಗಳನ್ನು ತಿಂದು ಈ ಕೃಶದೇಹಿಯಲ್ಲಿ

ಯೌವನ ಮರುಕಳಿಸಿತೇ!"

ಉತ್ತರವಾಗಿ ಹಲೀಮಾ ಮುಗುಳ್ನಕ್ಕು ಹೇಳಿದರು,

"ಸಹೋದರಿ! ಇದೆಲ್ಲವೂ ಈ ಅನಾಥ ಮಗುವಿನ ಕಾರಣದಿಂದಾದ ಸಮೃದ್ಧಿ! ಅಲ್ಲಾಹನಾಣೆ! ನಮ್ಮ ಗೋತ್ರ ಮತ್ತು ಪ್ರದೇಶದ ಅದೃಷ್ಟ ಬದಲಾಗಲಿದೆ."

ಒಂಟೆಯು ಹಲೀಮರ ಮನೆ ಬಾಗಿಲ ಬಳಿ ಕುಳಿತುಕೊಂಡಿತು. ಹಲೀಮಾ ಬಲು ಜಾಗರೂಕತೆಯಿಂದ ಅಬ್ದುಲ್ಲಾರ ಮಗುವನ್ನು ಹಿಡಿದು ಇಳಿದರು. ಅಷ್ಟರಲ್ಲಿ ಹಲೀಮರ ಪತಿ ಆಗಮಿಸಿದರು. ಬಹಳ ಆನಂದದೊಂದಿಗೆ ಹೇಳಿದರು,

"ನೀನು ಇದುವರೆಗೆ ಎಲ್ಲಿದ್ದೆ ಉಮ್ಮು ಶೈಮಾ! ನಿನ್ನ ಒಂಟೆಯು ದಾರಿ ಮಧ್ಯೆ ಕೈಕೊಟ್ಟಿರಬಹುದೆಂದೇ ಭಾವಿಸಿದ್ದೆ. ಆದರೆ ಇದೇನು? ಯಾತ್ರೆಯಿಂದ ಬಲ ಪಡೆದುಕೊಂಡು ಬಂದಿದೆ! ಹ್ಞಾಂ... ಒಂದು ಮಾತು... ನೀನು ಹೋದಾಗಿನಿಂದ ನಮ್ಮ ಆಡುಗಳು ಹಾಲು ಕೊಡುವುದನ್ನು ನಿಲ್ಲಿಸಿ ಬಿಟ್ಟವು... ಇದುವರೆಗೂ ಹಾಲೇ ಬಂದಿರ ದಂತೆ ಅವೆಲ್ಲವುಗಳ ಕೆಚ್ಚಲುಗಳು ಬರಿದಾಗಿ ಬಿಟ್ಟವು. ಸಂಕಷ್ಟ ಒಂದೇ... ಎರಡೇ... ಏನು ಹೇಳಲಿ? ಈ ಬಾರಿ ನಮ್ಮ ಹೊಲ-ಗದ್ದೆಗಳು ತನ್ನಿಂತಾನೇ ಒಣಗಲು ತೊಡಗಿವೆ. ಫಸಲಿಗೆ ಇದೇ ರೀತಿ ಬಾಧಿಸುತ್ತಿದ್ದರೆ ನಾವು ತಿನ್ನುವುದೇನು ಎಂದು ಎಲ್ಲರೂ ಚಿಂತಿತರಾಗಿದ್ದಾರೆ."

ಹಲೀಮರು ಮಗುವನ್ನು ಪತಿಯ ಕೈಗಿಡುತ್ತಾ ಹೇಳಿದರು,

"ಶೈಮಾಳ ತಂದೆಯೇ! ನೀವಿದೇನು ಲೌಕಿಕ ವೃತ್ತಾಂತಗಳನ್ನು ಹೇಳಲು ತೊಡಗಿದಿರಿ... ಈ ಮಗುವನ್ನು ಹಿಡಿದೆತ್ತಿಕೊಳ್ಳಿರಿ... ಹಾಶಿಮ್ ಮನೆತನದ ಕಣ್ಮಣಿ, ಸಯ್ಯಿದುಲ್ ಕುರೈಶ್ ಅಬ್ದುಲ್ ಮುತ್ತಲಿಬ್‌ರ ಮೊಮ್ಮಗು, ಅಬ್ದುಲ್ಲಾರ ಅನಾಥಮುತ್ತು, ಆಮಿನರ ಕರುಳ ಕುಡಿ. ಈ ಮಗು! ಈ ಮಗುವಿನ ಹೆಸರು ಕೇಳಿದರೆ ನೀವು ಆನಂದದಿಂದ ತೇಲಾಡುವಿರಿ... (ಸ್ವಲ್ಪ ಮೌನದ ಬಳಿಕ) ಅಹ್ಮದ್... ಮತ್ತು ಮುಹಮ್ಮದ್ ಅಂತಲೂ ಹೆಸರಿದೆ! ಇದರಿಂದಾಗಿ ಎಲ್ಲ ಸಂಕಷ್ಟಗಳೂ ನೀಗುವುವು. ದಾರಿಯುದ್ದಕ್ಕೂ ಇದರ ಪ್ರಕಾಶ ಕಿರಣ ದಿಂದ ಪರಿಸರ ಜಗಮಗಿಸುತ್ತಿತ್ತು!"

ಹಲೀಮರ ಪತಿ ಮಗುವನ್ನು ಮುದ್ದಿಸಿದರು ಮತ್ತು ಅದರ ಅನುಪಮ ಸೌಂದರ್ಯ ಕಂಡು ಆಶ್ಚರ್ಯ ಚಕಿತರಾದರು. ಬಹಳ ಹೊತ್ತು ಮಗುವನ್ನೇ ತದೇಕಚಿತ್ತದಿಂದ ನೋಡುತ್ತಾ ಇದ್ದು ಬಿಟ್ಟರು. ತರುವಾಯ ಹೇಳಿದರು, "ನಿನಗೆ ಹಸಿವಾಗಿರಬಹುದಲ್ಲವೇ ಉಮ್ಮು ಶೈಮಾ! ನಿನಗಾಗಿ ಎಲ್ಲಿಂದಲಾದರೂ ಹಾಲು ತರುತ್ತೇನೆ. ನಮ್ಮ ಆಡುಗಳಾದರೋ... "ಎನ್ನುತ್ತಾ ಅವರು ತಮ್ಮ ಆಡುಗಳ ಹಟ್ಟಿಯತ್ತ ದೃಷ್ಟಿ ಹಾಯಿಸಿದರು." ಅರೇ! ಇದೇನು!? ಸೊರಗಿದ ಕೆಚ್ಚಲುಗಳು ತುಂಬಿ ತುಳುಕುತ್ತಿವೆ!"

ಅವರು ಹಟ್ಟಿಗೆ ಧಾವಿಸಿದರು ಮತ್ತು ಪಾತ್ರೆಯೊಂದನ್ನು ಇರಿಸಿ ಹಾಲು ಕರೆಯ ತೊಡಗಿದರು. ಹಾಲು ಪಾತ್ರೆಯಿಡೀ ತುಂಬಿಕೊಂಡಿತು. "ನಾನು ಕನಸು ಕಾಣುತ್ತಿಲ್ಲ ತಾನೇ...

ಉಮ್ಮುಶೈಮಾ! ಇದಾದರೋ ಜಾದೂ ನಡೆಯುತ್ತಿರುವಂತಿದೆ!" ಹಲೀಮರ ಪತಿ ಆನಂದಾಶ್ಚರ್ಯದಿಂದ ಉದ್ಗರಿಸಿದರು.

"ಇದು ಈ ಮಗುವಿನ ಅನುಗ್ರಹದ ಪ್ರಾರಂಭವಷ್ಟೇ. ಇನ್ನು ಏನೇನೆಲ್ಲಾ ಸಂಭವಿಸುತ್ತದೆ ಎಂಬುದನ್ನು ನೋಡುತ್ತಾ ಇರಿ... ಸಂಕಷ್ಟಗಳೆಲ್ಲವೂ ಇನ್ನು ದೂರ ವಾಗಲಿವೆ... ಈ ಮಗುವನ್ನು ನೋಡುವಾಗ ದೊರೆಯುವ ಆನಂದದ ಮುಂದೆ ಇಡೀ ಲೋಕದ ಸಂತೋಷ ಗಳೆಲ್ಲವೂ ಸಪ್ಪೆ ಎಂದೇ ಹೇಳಬಲ್ಲೆ. ಆಹಾ! ನಾನು ನನ್ನ ಅದೃಷ್ಟಕ್ಕೆ ಹೆಮ್ಮೆ ಪಡಲೇ ಅಥವಾ ನಿಮಗೆ ಶುಭಾಶಯ ಕೋರಲೇ?"

ಹಲೀಮಾ ಅತ್ಯಂತ ಮುದ್ದಿನಿಂದ ಅನಾಥಮುತ್ತಿನ ಪಾಲನೆ-ಪೋಷಣೆಯಲ್ಲಿ ತೊಡಗಿದರು. ಹೌದು ಪೋಷಿಸಿದರು! ಆ ಮೂಲಕ ಸ್ವಯಂ ತನ್ನ ಅದೃಷ್ಟ ಮತ್ತು ಬಾಳುವೆಯ ಪೋಷಣೆ ಮಾಡಿದರು. ಹಲೀಮರ ಮಡಿಲಲ್ಲಿ ಉಭಯ ಲೋಕಗಳ ಅನುಗ್ರಹ ಸಂಪತ್ತು ತುಂಬಿಕೊಂಡಿತು. ಚಂದ್ರ-ತಾರೆಗಳ ಪ್ರಕಾಶ ಕಿರಣಗಳು ಹಲೀಮರ ಮನೆಗೆ ಪ್ರದಕ್ಷಿಣೆ ಹಾಕುತ್ತಿದ್ದುವು. ಸಅದ್ ಗೋತ್ರದ ಅದೃಷ್ಟ ತಾರೆಯು ಇಂದು ಪ್ರಖರವಾಗಿ ಮಿನುಗುತ್ತಿದೆ. ಅಲ್ಲಾಹ್ ಅವರ ಅದೃಷ್ಟವನ್ನು ಬದಲಾಯಿಸಿ ಬಿಟ್ಟನು.

ಬೆಳಗಾತ ಬನೂ ಸಅದ್ ಗೋತ್ರದ ರೈತರು ತಮ್ಮ ಹೊಲಗದ್ದೆಗಳಿಗೆ ತಲುಪಿದಾಗ ಆಶ್ಚರ್ಯ ಕಾದಿತ್ತು... ಒಣಗಿದ ಗಿಡಗಳು ಮತ್ತು ಸೊರಗಿ ಬಾಡಿದ್ದ ಗೆಲ್ಲುಗಳಲ್ಲಿ ಏಕಾಏಕಿ ಜೀವಕಳೆ ತುಂಬಿಕೊಂಡಂತಿದ್ದವು. ಒಣ ಗದ್ದೆಗಳು ಪೈರು-ಪಚ್ಚೆಯಿಂದ ಕಂಗೊಳಿಸುತ್ತಿದ್ದುವು. ಯಾರೋ ಬಂದು ಅವುಗಳ ಮೇಲೆ ಅಮೃತ ಸಿಂಚನ ಮಾಡಿ ದಂತಿತ್ತು ಅಲ್ಲಿನ ದೃಶ್ಯ! ಜನ ಆನಂದೋಲ್ಲಾಸದಿಂದ ಓಡೋಡಿ ಬಂದು ಹೇಳಿದರು, "ಸಹೋದರರೇ! ಯಾರಿಗಾದರೂ ಸುಸ್ಪಷ್ಟ ಜಾದೂ ಮತ್ತು ಪವಾಡಗಳನ್ನು ನೋಡ ಬೇಕಿದ್ದರೆ, ನಮ್ಮೊಡನೆ ಕಾಡಿನ ಕಡೆಗೆ ಬನ್ನಿರಿ. ಒಣಗಿದ, ಒಡೆದ ಗದ್ದೆಗಳೆಲ್ಲವೂ ಹಸಿರಿನಿಂದ ಕಂಗೊಳಿಸುತ್ತಿವೆ. ಫಸಲಿನಲ್ಲಿ ಇಂಥ ಸೌಂದರ್ಯ ಇದುವರೆಗೂ ಕಂಡಿಲ್ಲ. ವಸಂತದ ಕೃಪೆ ಇದಕ್ಕೆ ಮುಂಚೆ ಹೀಗೆ ವರ್ಷಿಸಿರಲಿಲ್ಲ. ತೋಟ-ಗದ್ದೆಗಳೆಲ್ಲ ನಳನಳಿಸುತ್ತಿವೆ. ಹೊಸ ಚಿಗುರುಗಳು ಮತ್ತು ಗೆಲ್ಲುಗಳ ಬೆಳವಣಿಗೆ ನೋಡಿದರೆ ಕೆಲವೇ ಕ್ಷಣಗಳಲ್ಲಿ ತೆನೆ-ಫಲಗಳು ಬಿಡುವುದೋ ಎಂದೆನಿಸುತ್ತಿದೆ! ರಾತ್ರಿ ಬೆಳಗಾಗುವುದರೊಳಗೆ ಇದೇನು ನಡೆದಿದೆ!? ಮಳೆಯ ಒಂದು ಹನಿಯೂ ಮೋಡಗಳಿಂದ ತೊಟ್ಟಿಕ್ಕಿದ್ದಿಲ್ಲ... ಅರೆ! ಧಾರಾಕಾರ ಮಳೆ ಬಂದಾಗಲೂ ಅದರ ಪ್ರಭಾವ ಕೊನೆಯಲ್ಲಿ ತಾನೇ ಕಾಣುವುದು... ಇದನ್ನೆಲ್ಲ ನೋಡಿದರೆ ಬನೂ ಸಅದ್ ಗೋತ್ರದ ಬೆಳೆ ಕೊಯ್ಲಿಗೆ ಅರೇಬಿಯಾದ ಇತರ ಯಾರೂ ಸಾಟಿಯಾಗಲಾರರು ಎಂದು ಭಾಸವಾಗುತ್ತದೆ.!"

ಜನರೆಡೆಯಲ್ಲೆಲ್ಲ ಇದೇ ಚರ್ಚೆ. ಜಗತ್ತಿನ ಚಳಿ-ಬಿಸಿಲ ಕಾಲದ ಹಲವಾರು ಕ್ರಾಂತಿಗಳನ್ನು ಕಂಡು ಅನುಭವಿಸಿದ್ದ ಹಿರಿ ತಲೆಗಳು ಹೇಳಿದವು, "ರಾತ್ರೋರಾತ್ರಿ ಒಣ ಬೆಳೆಗಳು ಜೀವ ತುಂಬಿ ಹಸಿರಿನಿಂದ ಕಂಗೊಳಿಸುವುದನ್ನು ನಾವು ಇದುವರೆಗೂ ಕಂಡಿಲ್ಲ.

ಬಹುಶಃ ನಮ್ಮ ಆರಾಧ್ಯರುಗಳು ನಮ್ಮ ಮೇಲೆ ಕೊಂಚ ಹೆಚ್ಚೇ ಕೃಪೆ ತೋರುತ್ತಿವೆ. ಅದರ ಕೃಪಾಕಟಾಕ್ಷ ಮತ್ತು ಆಶೀರ್ವಾದದಿಂದಲೇ ಈ ಎಲ್ಲ ಹಸಿರು ತೋರಣ ಗದ್ದೆಗಳಲ್ಲಿ...!"

"ಆದರೆ ಈ ಆರಾಧ್ಯರುಗಳು ನೂರಾರು ವರ್ಷಗಳಿಂದ ನಮ್ಮೊಂದಿಗಿವೆ. ಆರು ವರ್ಷಗಳ ಹಿಂದೆ ಬರಗಾಲ ಬಾಧಿಸಿದಾಗ ಈ ಆರಾಧ್ಯರುಗಳು ನಮ್ಮೆಡೆಗೆ ಕೃಪೆ ಬೀರಿದ್ದುವೇನು?" ಓರ್ವ ಮಧ್ಯವಯಸ್ಕ ವ್ಯಕ್ತಿ ಕೇಳಿದ. ಆತನ ಮಾತು ಮುಗಿಯುತ್ತಿದ್ದಂತೆಯೇ ಹಲೀಮರ ಪತಿ ಹೆಮ್ಮೆಯಿಂದ ಹೇಳಿದರು,

"ನೀವೆಲ್ಲ ಬುದ್ಧಿ ಮತ್ತು ಊಹೆಯಾಧಾರದಲ್ಲಿ ಮಾತನಾಡುತ್ತಿದ್ದೀರಿ... ಅಷ್ಟೇ. ವಾಸ್ತವ ಏನೆಂದು ನಿಮಗೆ ತಿಳಿದಿಲ್ಲ. ನಾನು ಹೇಳುತ್ತೇನೆ... ಇಲ್ಲಿ ಕೇಳಿ... ಶೈಮಾಳ ತಾಯಿ ಮಕ್ಕಾದಿಂದ ಅಬ್ದುಲ್ಲಾರ ಮಗುವನ್ನು ಹಾಲೂಡಿಸಲು ಕರೆ ತಂದಿದ್ದಾಳೆ. ಆ ಅನಾಥಮುತ್ತಿನ ಹೆಸರು ಮುಹಮ್ಮದ್ ಎಂದಾಗಿದೆ! ಆ ಅನುಗ್ರಹೀತ ಶಿಶು ನಮ್ಮ ಮನೆಗೆ ಬಂದಾಗಿನಿಂದ ಸಮೃದ್ಧಿ ಮತ್ತು ದೇವಕೃಪೆಯು ನಮ್ಮಲ್ಲಿ ವರ್ಷಿಸತೊಡಗಿದೆ. ನನ್ನ ಆಡುಗಳ ಕೆಚ್ಚಲು ಒಣಗಿ ಹೋಗಿತ್ತು. ಆದರೆ ನಿನ್ನೆ ರಾತ್ರಿಯಿಂದ ಅವುಗಳ ಕೆಚ್ಚಲಲ್ಲಿ ಹಾಲಿನ ಒರತೆಯೇ ಹರಿಯುತ್ತಿದೆ. ಆ ಮಗುವಿನ ಸಮೃದ್ಧಿಯ ವೃತ್ತಾಂತವನ್ನು ನೀವು ಹಲೀಮಳ ಮಾತಿನಲ್ಲೇ ಕೇಳಿದರೆ ಚೆನ್ನ! ದಾರಿಯುದ್ದಕ್ಕೂ ಪ್ರಕಾಶ ಹರಡುತ್ತಿತ್ತಂತೆ ಆಕೆ ಮಕ್ಕಾದಿಂದ ಬರುವಾಗ!! ಈ ನಮ್ಮ ಹೊಲಗದ್ದೆಗಳು ರಾತ್ರಿ ಬೆಳಗಾಗುವುದರೊಳಗೆ ಹಸಿರಿನಿಂದ ಕಂಗೊಳಿಸುತ್ತಿವೆಯಲ್ಲ... ಅವು ಅಬ್ದುಲ್ಲಾರ ಈ ಅನಾಥಮುತ್ತುವಿನ ಕೃಪೆಯಿಂದಲೇ ಆಗಿದೆ! ನೀವು ಬಂದು ಮುಹಮ್ಮದ್‌ನನ್ನು ಒಂದು ಬಾರಿ ನೋಡಿ, ಇಂತಹ ಪ್ರಕಾಶಪುಂಜ ಮತ್ತು ಮನಸೂರೆಗೊಳ್ಳುವಂತಹ ಮುಖವನ್ನು ನಾವು ಇದು ವರೆಗೂ ನೋಡಿಲ್ಲ ಎಂದೇ ನೀವೆಲ್ಲ ಹೇಳುವಿರಿ."

ಹಾಶ್ಮೀ ಮನೆತನದ ಮೊಗ್ಗು!

ಹಲೀಮಾ ತನ್ನ ಮೊಲೆ ಹಾಲಿನೊಂದಿಗೆ ಪ್ರೀತಿ-ಮಮತೆಯನ್ನು ಬೆರೆಸುತ್ತಾ ಆಮಿನಾರ ಕರುಳ ಕುಡಿಗೆ ಕುಡಿಸಿದರು. ಅವರು ತಮ್ಮೆಲ್ಲ ಗಮನ ಮತ್ತು ಮಮತೆಯನ್ನು ಈ ಅನಾಥಮುತ್ತಿಗಾಗಿಯೇ ಮೀಸಲಿಟ್ಟರು. ಮಗುವಿನ ಸಣ್ಣ ಮಟ್ಟಿನ ಕಳವಳವನ್ನೂ ಅವರಿಂದ ನೋಡಲಾಗುತ್ತಿರಲಿಲ್ಲ. ಗಂಟೆಗಟ್ಟಲೆ ಎದೆಗವುಚಿಕೊಂಡು ನಡೆದಾಡುತ್ತಿದ್ದರು, ತೊಟ್ಟಿಲಲ್ಲಿಟ್ಟು ತೂಗುತ್ತಿದ್ದರು ಮತ್ತು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಪದ್ಯ ಕಟ್ಟಿ ಹಾಡುತ್ತಿದ್ದರು.

"ನಿದ್ರೆಯು ಕಣ್ಣಾಲಿಗಳಲ್ಲಿ ಸೇರಿ ಆರಾಮವೆನಿಸುತ್ತದೆ... ಅದೇ ಆರಾಮದ ತೆಕ್ಕೆಯಿಂದ ಜೀವನವು ಎಚ್ಚರಗೊಂಡು ಮೈಮುರಿಯುತ್ತಾ ಎದ್ದು ನಿಲ್ಲುತ್ತದೆ... ಹೆಚ್ಚಿನವರು ಕಣ್ಣು ಮುಚ್ಚಿದಂತೆಯೇ ಅವರ ಹೃದಯಗಳೂ ನಿದ್ರಿಸುತ್ತವೆ... ಕೆಲವರ ಕಣ್ಣು ನಿದ್ರಿಸಿದರೂ ಹೃದಯ ಎಚ್ಚರವಾಗಿರುತ್ತದೆ..."

ಎರಡು ವರ್ಷಗಳ ತರುವಾಯ ಆಮಿನರ ಅನಾಥಮುತ್ತುವಿನ ಹಾಲು ಬಿಡಿಸಲಾಯಿತು.

ಹಲೀಮಾ ಮಗುವನ್ನು ಆಮಿನರ ಬಳಿಗೆ ಕರಕೊಂಡು ಬಂದರು. ಆಮಿನರ ಸಂತೋಷಕ್ಕೆ ಪಾರವೇ ಇಲ್ಲ. ಸುದೀರ್ಘ ಅಗಲಿಕೆಯ ಬಳಿಕ ತಮ್ಮ ಕಣ್ಮಣಿಯನ್ನು ಕಾಣುತ್ತಿದ್ದಾರೆ. ಮಮತೆಯು ಕಣ್ಣಲ್ಲಿ ಒರತೆಯಾಗಿ ಹರಿಯಿತು... ಸುಪ್ತವಾಗಿದ್ದ ಜೀವನೋತ್ಸಾಹವು ಪುನಃ ಮೈಮುರಿಯಿತು... ಅಬ್ದುಲ್ ಮುತ್ತಲಿಬ್‌ರು ಮೊಮ್ಮಗುವನ್ನು ಮುದ್ದಿಸತೊಡಗಿದರು ಮತ್ತು ಹೃದಯ ತುಂಬಿ ಹೇಳಿದರು,

"ಇಂದು ಅಬ್ದುಲ್ಲಾ ಇರುತ್ತಿದ್ದರೆ, ತನ್ನ ಮುದ್ದು ಮಗುವನ್ನು ಕಂಡು ಎಷ್ಟು ಸಂತೋಷ ಪಡುತ್ತಿದ್ದ! ಆದರೆ ಈ ಮಗುವಿನ ವಿಧಿಯಲ್ಲಿ ಅನಾಥತೆಯ ಬರೆಯೆಳೆಯಲಾಗಿದೆ. ಆದರೇನು? ಹಣೆಯಲ್ಲಿ ಬರೆದದ್ದು ಆಗಿಯೇ ತೀರಬೇಕಲ್ಲ!"

ಆ ದಿನಗಳಲ್ಲಿ ಮಕ್ಕಾ ನಗರದಾದ್ಯಂತ ಮಹಾಮಾರಿ ಹರಡಿತ್ತು. ಒಂದೊಂದು ಮನೆಯಿಂದಲೂ ಹಲವು ಮಂದಿ ರೋಗದಿಂದ ಕಣ್ಣು ಮುಚ್ಚಿದ್ದರು. ನಗರವಿಡೀ ವ್ಯಾಕುಲ ಗೊಂಡಿತ್ತು... ಬೇರೆ ದಿಕ್ಕುಗಾಣದೆ ಭಯಭೀತಗೊಂಡಿತ್ತು... ಪ್ರತಿಯೋರ್ವನ ಮುಂದೆ ಮರಣದ ನೆರಳು ಆವರಿಸಿರುವಾಗ ಭಯಭೀತಗೊಳ್ಳುವುದು ಸ್ವಾಭಾವಿಕವೇ ತಾನೇ? ಈಗ ಮರಣ ನನ್ನನ್ನು ಹಿಡಿಯಿತು... ಇದೋ ಕಣ್ಣು ಕತ್ತಲಿಡುತ್ತಿದೆ... ಪ್ರತಿಯೊಬ್ಬನೂ ಇದೇ ಗುಂಗಿನಲ್ಲಿದ್ದ! ಯಾರಿಗಾದರೂ ಸಣ್ಣ ಮಟ್ಟಿನ ಪೆಟ್ಟು ತಾಗಿದರೂ ಹ್ಹಾ! ಮರಣ ಬಂದೇ ಬಿಟ್ಟಿತು ಎಂದು ಥರಗುಟ್ಟುವಂತಹ ಅವಸ್ಥೆ! ಇನ್ನು ಜೀವನದ ಕೊನೆಯ ಹಂತವೂ ಮುಗಿಯಿತು... ಕೊನೆಯುಸಿರು... ಮತ್ತೆ ಮರಣ... ನಂತರ ಮಣ್ಣು... ಕತ್ತಲ ಗೋರಿ! ಸಂಶಯ-ಆತಂಕವು ಜೀವಂತ-ಆರೋಗ್ಯವಂತರನ್ನೂ ರೋಗಿಗಳಿಗಿಂತ ಹೆಚ್ಚು ನಿತ್ರಾಣ ಗೊಳಿಸಿಬಿಟ್ಟಿತು.

ನಗರದ ಹೊರವಲಯದಲ್ಲಿ ಹೊಸ ಹೊಸ ಗೋರಿಗಳೇ ಎಲ್ಲೆಲ್ಲೂ ಕಾಣುತ್ತಿದ್ದುವು! ಮರಣದ ದೇವಚರರಿಗೆ ಮಕ್ಕಾವಾಸಿಗಳು ಬಹಳ ಇಷ್ಟವಾಗಿರುವಂತೆ ಕಂಡಿತೇನೋ! ಕಂಡಕಂಡಲ್ಲಿ ಮರಣದ ಚೀತ್ಕಾರ! ಮಕ್ಕಾವಾಸಿಗಳು ತಮ್ಮ ಆರಾಧ್ಯ ವಿಗ್ರಹಗಳ ಮುಂದೆ ಬಹಳ ಕೈಮುಗಿದರು, ಸಾಷ್ಟಾಂಗ ಎರಗಿದರು, ಹರಕೆ ಹೊತ್ತರು, ಕಾಣಿಕೆ ಅರ್ಪಿಸಿದರು, ಅತ್ತೂ ಕರೆದೂ ಗೋಳಾಡಿದರು, ನೆಲಕ್ಕೆ ಹಣೆ ಬಡಿದರು... ಆದರೆ ಮಹಾಮಾರಿಯ ಪ್ರಭಾವ ಕಡಿಮೆಯಾಗಲಿಲ್ಲ... ರೋಗ-ರುಜಿನ ಇನ್ನೂ ವಿಸ್ತಾರವಾಗಿ ಹರಡುತ್ತಾ ಸಾಗಿತು. ಕೆಲವು ಯುವ ಹೃದಯಗಳು ತಲ್ಲಣಗೊಂಡು ಸಿಡಿಮಿಡಿಗುಟ್ಟತೊಡಗಿದುವು- ಈ ವಿಗ್ರಹಗಳಿಗಾಗಿ ನಾವು ಜೀವದ ಹಂಗು ತೊರೆಯುತ್ತಿದ್ದೆವು. ಆದರೆ ಇವುಗಳ ಹೃದಯ ಯಾವ ರೀತಿಯಲ್ಲೂ ಕರಗದಂತಹ ಕಠಿಣ ಕಲ್ಲು! ದುಃಖ, ನೋವು, ಸಂಕಷ್ಟಗಳನ್ನು ನೀಗಿಸದ ಆರಾಧ್ಯರುಗಳು ಯಾವ ಪುರುಷಾರ್ಥಕ್ಕೆ? ನಮ್ಮ ಸಾಷ್ಟಾಂಗಗಳಿಗೆ ಸಣ್ಣ ಪ್ರತಿಕ್ರಿಯೆ ಯಾದರೂ ಕಾಣಬೇಕಲ್ಲ!

ಮಹಾಮಾರಿಯ ಪ್ರಾಬಲ್ಯ ಕಂಡು ಆಮಿನರು ತಮ್ಮ ಕರುಳಕುಡಿಯನ್ನು ಪುನಃ ಹಲೀಮರೊಂದಿಗೇ ಮರಳಿ ಕಳುಹಿಸಿದರು. ಬಳಿಕ ಮೂರು ವರ್ಷ ಹಲೀಮರಿಗೆ ಮತ್ತೆ

ಅನಾಥಮುತ್ತನ್ನು ಸಾಕುವ ಅನುಗ್ರಹ ಪ್ರಾಪ್ತವಾಯಿತು. ಬನೂ ಸಅದ್ ಗೋತ್ರವು ಮಾತುಗಾರಿಕೆಯಲ್ಲಿ ಬಹಳ ಪ್ರಸಿದ್ಧವಾಗಿತ್ತು. ಈ ಗೋತ್ರಜರಲ್ಲಿ ಖ್ಯಾತ ಕವಿಗಳೂ ಘನ ಭಾಷಣಕಾರರೂ ಬಹಳಷ್ಟಿದ್ದರು. ಬನೂ ಸಅದ್ ಗೋತ್ರದ ಹೊಲ-ಗದ್ದೆಗಳಲ್ಲಿ ಧಾನ್ಯ-ತರಕಾರಿಗಳ ಬದಲಿಗೆ ಮಾತುಗಾರಿಕೆ ಬೆಳೆಯುತ್ತದೆ ಎಂಬ ಮಾತು ಇಡೀ ಅರೇಬಿಯದಲ್ಲೇ ಪ್ರಸಿದ್ಧವಾಗಿದೆ. ಆದರೆ ಮುಹಮ್ಮದ್‌ರ(ಸ) ಸರಳ ಸ್ವಚ್ಛ ಮಾತುಗಳನ್ನು ಆಲಿಸಿ ದವರೆಲ್ಲರೂ ಆಶ್ಚರ್ಯ ಚಕಿತರಾಗುತ್ತಿದ್ದರು. ಇಷ್ಟು ಸಣ್ಣ ಪ್ರಾಯದಲ್ಲೇ ಇಂಥ ಮಾತಿನ ಪವಾಡವಿದ್ದರೆ, ಬೆಳೆದು ಯುವಕರಾದ ಮೇಲೆ ಸ್ವಯಂ ಮಾತಿನ ಮೋಡಿ ಮತ್ತು ಸುಂದರ ಮಾತುಗಳಿಗೆ ಆ ತುಟಿಗಳ ಮೇಲೆಯೇ ಹೆಮ್ಮೆಯೆನಿಸಬಹುದು!

ಮುಹಮ್ಮದ್‌ರು ತಮ್ಮ ಸಾಕು ತಾಯಿ ಹಲೀಮರ ಆಡುಗಳ ಹಾಲು ಕುಡಿಯುವಾಗ ತನ್ನ ಸ್ತನಪಾನ ಸಂಬಂಧಿ ಸೋದರಿಗೂ ಒಂದು ಪಾಲು ಬಿಟ್ಟು ಬಿಡುತ್ತಿದ್ದರು. ಆಡಿನ ಒಂದು ಕೆಚ್ಚಲಿಗೆ ಬಾಯಿ ಹಾಕಿದರೆ ಇನ್ನೊಂದರೆಡೆಗೆ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಬಾಲ್ಯದಲ್ಲೇ ಇಂತಹ ನ್ಯಾಯ-ಸಮಾನತೆಯನ್ನು ಕಂಡು ಹಲೀಮರ ಮನೆಯ ಮಂದಿ ಕೌತುಕ ಪಡುತ್ತಿದ್ದರು... ಬೆಳೆದು ದೊಡ್ಡವನಾದ ಮೇಲೆ ಅಬ್ದುಲ್ಲಾರ ಈ ಅನಾಥಮುತ್ತು ಇಡೀ ಜಗತ್ತನ್ನೇ ನ್ಯಾಯ ಮತ್ತು ಒಳಿತಿನೆಡೆಗೆ ಕೊಂಡೊಯ್ಯಬಲ್ಲನೆಂದು ಅವರು ಆಡಿಕೊಳ್ಳುತ್ತಿದ್ದರು. ಈ ಮಗು ಮುಂದೆ ಖ್ಯಾತಿ ಮೆರೆಯಲಿದೆ... ಆಮಿನಾ ಹೇಳಿದ್ದು ಸತ್ಯವೇ! ಆ ಸನ್ಮಾನ್ಯ ಮಾತೆಯ ಕನಸು ಒಂದೊಂದಾಗಿ ನನಸಾಗಲಿದೆ.

ಬಹಳ ಕಾಲದ ತನಕ ಹಲೀಮರ ಮನೆಯು ಅನುಗ್ರಹ ಮತ್ತು ಸಮೃದ್ಧಿಯಲ್ಲಿ ಮಿಂದೇಳುತ್ತಿತ್ತು. ಮುಹಮ್ಮದ್‌ರ ಅನುಗ್ರಹದಿಂದಾಗಿ ಅವರ ಎಲ್ಲ ಸಂಕಷ್ಟಗಳು ದೂರವಾಗ ಹತ್ತಿದುವು. ಹಾಶ್ಮೀ ಮನೆತನದ ಈ ಮೊಗ್ಗು ನಮ್ಮಲ್ಲೇ ಅರಳಲಿ, ಈ ಅನುಗ್ರಹ ನಮ್ಮಿಂದ ಅಗಲಿ ಹೋಗದಿರಲಿ ಎಂದೇ ಮನೆಯವರೆಲ್ಲರೂ ಹೃದಯಾಂತರಾಳ ದಿಂದ ಪ್ರಾರ್ಥಿಸುತ್ತಿದ್ದರು. ಆದರೆ ಅದು ಸಾಧ್ಯವಾಗುವ ಮಾತಲ್ಲ. ಪ್ರಕೃತಿಯು ಆ ಅನುಗ್ರಹವನ್ನು ಜಗತ್ತಿನಾದ್ಯಂತ ಪಸರಿಸುವ ಉದ್ದೇಶವನ್ನು ಹೊಂದಿತ್ತು. ಆ ದಿವ್ಯ ಪ್ರಕಾಶವು ಯಾವುದೋ ಒಂದು ಮೂಲೆಗೆ ಸೀಮಿತವಾಗಲು ಇರುವಂತಹದ್ದಾಗಿರಲಿಲ್ಲ. ಇಡೀ ಜಗತ್ತು ಹಾಗೂ ಸಪ್ತಗಗನಗಳಲ್ಲಿ ಹರಡಲಿಕ್ಕಾಗಿಯೇ ಅದು ಬೆಳಗಿತ್ತು. ಈ ಪ್ರಕಾಶದಿಂದ ಪೂರ್ವ-ಪಶ್ಚಿಮಗಳು ಜಗಮಗಿಸಲಿವೆ... ಈ ಅನುಗ್ರಹ ವರ್ಷವು ಹುಲ್ಲುಗಾವಲಿನಿಂದ ಬರಡು ನೆಲದ ವರೆಗೂ ಸುರಿಯಲು ಸಿದ್ಧವಾಗಿತ್ತು.

ಮುಹಮ್ಮದ್‌ರಿಗೆ ಐದು ವರ್ಷ ಪ್ರಾಯವಾದಾಗ, ಅವರನ್ನು ಹಲೀಮಾ ಮಕ್ಕಾ ನಗರಕ್ಕೆ ಕರತಂದು ತಾಯಿಯ ಮಡಿಲಿಗೊಪ್ಪಿಸಿದರು... ದುಃಖ-ಆನಂದದ ಸಮ್ಮಿಶ್ರಭಾವ... ಹೌದು, ಆಮಿನರಲ್ಲಿ ಮಗನನ್ನು ಸಂಧಿಸಿದ ಆನಂದಭಾಷ್ಪ... ಹಲೀಮರಲ್ಲಿ ವಿರಹದ ಕಂಬನಿ! ಒಬ್ಬರ ತುಟಿಯಲ್ಲಿ ಮುಗುಳ್ನಗು, ಇನ್ನೊಬ್ಬರ ಕಂಗಳಲ್ಲಿ ದುಃಖಾಶ್ರು... ಈ ಖುಷಿಯೂ

ಅನುಗ್ರಹೀತವಾಗಿತ್ತು, ಆ ದುಃಖವೂ ಸಮೃದ್ಧವಾಗಿತ್ತು... ಏಕೆಂದರೆ ಅವರೆಡರ ಸಂಬಂಧವು ಒಂದೇ ಅಸ್ತಿತ್ವದೊಂದಿಗೆ ಇತ್ತು. ಬೀಬಿ ಹಲೀಮಾ ತನ್ನ ಆಶೆ-ಆಕಾಂಕ್ಷೆಗಳ ರಾಶಿಯನ್ನೇ ಬಾಲಕ ಮುಹಮ್ಮದ್‌ರ ಸುತ್ತಲೂ ಹರಡಿ ಬಿಟ್ಟು ನಾಡಿಗೆ ಮರಳಿದರು. ಮನೆಗೆ ತಲುಪಿದಾಗ ಗೋಡೆ, ಬಾಗಿಲು, ಕಿಟಕಿಗಳೆಲ್ಲವೂ ಅವರಿಗೆ ಕಳಾಹೀನವಾಗಿ ಕಂಡುವು. ಮನೆಯಿಡೀ ಪಾಳು ಬಿದ್ದಂತೆ ಕಾಣತೊಡಗಿತು...

ഇ◆◆◆ര

ದುಃಖದ ಕಟ್ಟೆಯೊಡೆದಾಗ...

ಅಬ್ದುಲ್ಲಾ ನಿಧನರಾಗಿ ಏಳು ವರ್ಷಗಳು ಸಂದು ಹೋದುವು. ಅಬ್ದುಲ್ ಮುತ್ತಲಿಬ್‌ರು ಮುಗ್ಧ ಮತ್ತು ಸರಳ ಸ್ವಭಾವಿಯಾದ ಸೊಸೆಯನ್ನು ಸಂತೋಷವಾಗಿಡಲು ಬಹಳಷ್ಟು ಶ್ರಮಿಸಿದರು. ಆದರೆ ವೈಧವ್ಯವೆಂಬುದು ಸ್ವಯಂ ಒಂದು ಸ್ಥಾಯಿ ದುಃಖ ಸ್ಥಿತಿಯಾಗಿದೆ. ಯಾವುದೇ ಸದ್ವರ್ತನೆ ಅಥವಾ ಮನಸ್ಸಿಗೆ ಮುದ ನೀಡುವಂತಹ ವ್ಯವಹಾರವು ಈ ದುಃಖವನ್ನು ದೂರಮಾಡಲಾರದು. ಆಮಿನಾರಿಗೆ ಜೀವನದಲ್ಲಿ ತನ್ನ ಏಕೈಕ ಕರುಳಕುಡಿಯಿಂದಷ್ಟೇ ಬೆಳಕಿನ ಕಿರಣ ಕಾಣುತ್ತಿತ್ತು. ಅವರು ತಮ್ಮ ಅನಾಥ ಮುತ್ತನ್ನು ನೋಡುತ್ತಾ, ಉಣ್ಣಿಸುತ್ತಾ, ಆಟವಾಡಿಸುತ್ತಾ ತನ್ನ ದುಃಖ ಮರೆಯಲು ಯತ್ನಿಸುತ್ತಿದ್ದರು. ಕೆಲವೊಮ್ಮೆ ಅವರ ಕಣ್ಣಲ್ಲಿ ಕಂಬನಿ ಜಿನುಗುತ್ತಿರುವಂತೆಯೇ ತುಟಿ ಗಳಲ್ಲಿ ಮುಗುಳ್ನಗು ಅರಳುತ್ತಿರುವ ಸ್ಥಿತಿಯೂ ಎದುರಾಗುತ್ತಿತ್ತು. ದುಃಖವು ಯುವ ಪತಿ ಪರವೂರಿನಲ್ಲಿ ಇಹಲೋಕ ತ್ಯಜಿಸಿ ಪರವೂರಲ್ಲೇ ದಫನರಾದುದಕ್ಕಾಗಿತ್ತು. ಸಂತೋಷವು ಮುಹಮ್ಮದ್‌ನಂತಹ ಮಗ ತನಗುಂಟಾಗಿರುವುದಕ್ಕಾಗಿತ್ತು.

ಆಮಿನರ ತವರ ಸಂಬಂಧಿಗಳು ಯಸ್ರಿಬ್‌ನಲ್ಲಿದ್ದರು. ಅವರನ್ನು ಅಗಲಿ ವರ್ಷಗಳೇ ಸಂದು ಹೋಗಿವೆ. ಪ್ರಯಾಣ ಹೊರಟರೆ ದುಃಖದ ಭಾರವು ಕಡಿಮೆಯಾಗುತ್ತದಂತೆ... ಅಲ್ಲದೆ ಯಸ್ರಿಬ್‌ಗೆ ಹತ್ತಿರವಿರುವ ಅಬ್ವಾ ಎಂಬ ಪ್ರದೇಶದಲ್ಲಿ ಅಬ್ದುಲ್ಲಾರ ಗೋರಿಯಿದೆ... ಋತುಮಾನಗಳ ಏರುಪೇರಿನ ಹೊರತಾಗಿಯೂ ಅಲ್ಲಿ ಗೋರಿ ಉಳಿದಿದ್ದರೆ, ಸಂದರ್ಶಿಸಿ ದಂತೆಯೂ ಆಗುತ್ತದೆ. ಈ ಎಲ್ಲ ಕಲ್ಪನೆ, ನಿರೀಕ್ಷೆಗಳನ್ನು ಹೊತ್ತು ಆಮಿನಾ ಯಸ್ರಿಬ್‌ನೆಡೆಗೆ ಪ್ರಯಾಣ ಬೆಳೆಸುತ್ತಾರೆ. ಜತೆಯಲ್ಲಿ ಉಮ್ಮು ಐಮನ್ ಮತ್ತು ಕಣ್ಮಣಿ ಅನಾಥಮುತ್ತು ಇದ್ದರು.

ಯಾವ ಶಿಶುವಿನ ಸೌಭಾಗ್ಯವು ಹಲೀಮರ ದಾರಿಯುದ್ದಕ್ಕೂ ಅನುಗ್ರಹ ವರ್ಷಿಸುತ್ತಿತ್ತೋ, ಆ ಮಗುವಿನ ಸೌಭಾಗ್ಯವು ತನ್ನ ವಿಧವೆ ತಾಯಿಯ ಪ್ರಯಾಣದಲ್ಲೂ ಅನುಗ್ರಹಗಳ ಸುರಿಮಳೆಗೆರೆಯದಿದ್ದೀತೇ?

ಅಬ್ದುಲ್ಲಾರ ಅನಾಥಮುತ್ತುವಿನ ಈ ಯಸ್ರಿಬ್ ಯಾತ್ರೆಯು ಹಿಜ್ರತ್‌ನ ಮುನ್ನುಡಿಯಂತಿತ್ತು. ಪ್ರಕೃತಿಯು ಮಾನವೇತಿಹಾಸದ ಅತ್ಯಂತ ಮಹತ್ವಪೂರ್ಣ ಘಟನೆಗೆ ಈಗಲೇ

ಸಿದ್ಧತೆ ನಡೆಸುತ್ತಿದೆ.

ಆಮಿನಾ, ಯಸ್ರಿಬ್‌ಗೆ ತಲುಪಿದಾಗ ಅವರ ಆಪ್ತ ಬಂಧುಗಳು ಆದರಪೂರ್ವಕ ಬರಮಾಡಿಕೊಂಡರು. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಯಸ್ರಿಬ್ ನಿವಾಸಿಗಳು ಮೊದಲಿನಿಂದಲೇ ಅತಿಥಿ ಸತ್ಕಾರದಲ್ಲಿ ಎತ್ತಿದ ಕೈ. ಆದರೆ ಬನೂ ನಜ್ಜಾರ್ ಗೋತ್ರದವ ರಂತೂ ಈ ಔದಾರ್ಯದಲ್ಲಿ ಎಲ್ಲರನ್ನೂ ಮೀರಿಸಿದ್ದರು. ಹೊರನಾಡಿನಿಂದ ಬರುವ ಯಾತ್ರಿಕರಿಗಾಗಿ ಬಹಳಷ್ಟು ತ್ಯಾಗ ಮಾಡಲೂ ಸಿದ್ಧರು. ಆಮಿನರಂತೂ ಅವರದೇ ಗೋತ್ರದ ಹೆಣ್ಮಗಳು. ಆದ್ದರಿಂದ ಮನಬಿಚ್ಚಿ ಸತ್ಕರಿಸಿದರು, ಉಪಚರಿಸಿದರು, ಪ್ರೀತಿಯ ಕಡಲಲ್ಲಿ ಮಿಂಯಿಸಿದರು...

ಆಮಿನರನ್ನು ಹಿರಿಯ ಸ್ತ್ರೀಯರೆಲ್ಲ ಆಲಿಂಗಿಸಿದರು. ಅನಾಥಮುತ್ತನ್ನೆತ್ತಿ ತಲೆನೇವರಿಸಿದರು. ಸ್ತ್ರೀಯರು ಸ್ವಭಾವತಃ ಮೃದು ಸ್ವಭಾವಿಯಾಗಿರುತ್ತಾರಷ್ಟೇ. ಸೂಕ್ಷ್ಮ ಸಂವೇದಿಯೂ ಆಗಿರುತ್ತಾರೆ. ಇದಂತೂ ದುಃಖದ ಸನ್ನಿವೇಶವಾಗಿತ್ತು. ಓರ್ವ ವಿಧವೆ ಮತ್ತು ಅನಾಥ ಮಗುವನ್ನು ಅವರು ಬರಮಾಡಿಕೊಳ್ಳುತ್ತಿದ್ದಾರಲ್ಲವೇ... ಎಲ್ಲರ ಕಂಗಳೂ ಮಂಜಾಗಿದ್ದುವು. ಆ ಕಂಬನಿಯಲ್ಲಿ ಆಪ್ತೇಷ್ಟರ ಆಗಮನದ ಆನಂದಬಾಷ್ಪವೂ ಸಮ್ಮಿಳಿತ ವಾಗಿತ್ತು. ಈ ಒಂದು ಸಂವೇದನೆಯಿಂದಾಗಿ ಅವರ ಕಣ್ಣೀರು ಜೀವಕಳೆ ಪಡೆದು ಕಂಗೊಳಿಸುತ್ತಿತ್ತು. ದುಃಖದ ಕಂಬನಿಯಾದರೋ ಕೇವಲ ಮಂಜಾಗಿರುತ್ತದಲ್ಲವೇ...

ಅನಾಥಮುತ್ತಿನ ಘನತೆ-ಗಾಂಭೀರ್ಯ ಕಂಡು ಎಲ್ಲರಿಗೂ ಸಂತೋಷ ಮತ್ತು ಆಶ್ಚರ್ಯ ಒಟ್ಟೊಟ್ಟಿಗೇ ಆಗುತ್ತಿತ್ತು! ಮೊಹಲ್ಲದಾದ್ಯಂತ ಜನರ ಬಾಯಿಯಿಂದ ತಂಗಾಳಿ ಯಂತೆ ಒಂದು ಮಾತು ಚರ್ಚೆಯಾಗಿ ಬೀಸತೊಡಗುತ್ತದೆ... ಮಕ್ಕಾ ನಗರದ ಬನೂ ಹಾಶಿಮ್ ಗೋತ್ರದ ಬಾಲಕ ಬಂದಿದ್ದಾನೆ... ಆತನ ಹಣೆಯಲ್ಲಿ ಸೌಭಾಗ್ಯದ ಸೂರ್ಯ ಉದಯಿಸುತ್ತಿರುವಂತೆ ಕಾಣುತ್ತದೆ... ಆತನ ಮಾತಿನ ಆಕರ್ಷಣೆಯೋ... ಹಾಶ್ಮೀ ತೋಟದ ಆ ಬುಲ್‌ಬುಲ್‌ನ ಕಲರವ ಹೀಗೆಯೇ ಸಾಗುತ್ತಿರಲಿ ಎಂದೇ ಎಲ್ಲರ ಮನ ಹಾತೊರೆಯುತ್ತದೆ...

ಯಸ್ರಿಬ್‌ನ ಮಕ್ಕಳು ಹೇಳಿಕೊಳ್ಳುವಂತಹ ಪ್ರಜ್ಞಾವಂತಿಕೆ, ಗಾಂಭೀರ್ಯವುಳ್ಳವರೇನೂ ಅಲ್ಲ. ಅವರ ಪೈಕಿ ಪರಸ್ಪರ ಕೆಟ್ಟ ಬಯ್ಗುಳವನ್ನಾಡುವಂತಹ ಮಕ್ಕಳೂ ಇದ್ದರು. ಪರಸ್ಪರ ಹೊಡೆದಾಡಿಕೊಳ್ಳುವವರೂ ಇದ್ದರು. ಒಬ್ಬನ ಕೈ ಇನ್ನೊಬ್ಬನ ಕೊರಳ ಪಟ್ಟಿ... ಒಬ್ಬ ಮರಳನ್ನೆತ್ತಿ ಎಸೆದರೆ, ಇನ್ನೊಬ್ಬ ಕಲ್ಲುಗಳನ್ನೆಸೆಯುತ್ತಾನೆ. ಆದರೆ ಬಾಲಕ ಮುಹಮ್ಮದ್ ಇಂತಹ ಯಾವುದೇ ಕೃತ್ಯದ ಹತ್ತಿರವೂ ಸುಳಿಯುತ್ತಿರಲಿಲ್ಲ. ಆದರೆ ಯಾರಾದರೊಬ್ಬ ಹುಡುಗ ಬಾಣ ಬಿಡುವ ಅಭ್ಯಾಸದಲ್ಲಿ ನಿರತನಾಗಿದ್ದರೆ ಈ ಅನಾಥಮುತ್ತು ಆತನಿಗೆ ಸಾಥ್ ನೀಡುತ್ತಿದ್ದ ಮತ್ತು ಬನೂ ಅದಿಯುಬ್ನು ನಜ್ಜಾರ್‌ನ ಕೆರೆಯಲ್ಲಿ ಈಜುವುದರಲ್ಲಿ ಮಗ್ನನಾಗಿರುತ್ತಿದ್ದ.

ಹೀಗೆ ಒಂದು ತಿಂಗಳು ಯಸ್ರಿಬ್‌ನಲ್ಲಿ ತಂಗಿದ್ದ ಆಮಿನಾ ಮಕ್ಕಾ ನಗರಕ್ಕೆ ಮರಳುತ್ತಾರೆ.

ದಾರಿಯಲ್ಲಿ ಅಬ್ವಾ ಎಂಬ ಪ್ರದೇಶದಲ್ಲಿ ಅವರು ತಂಗುತ್ತಾರೆ. ತಂಗಬೇಕಾಗುತ್ತದೆ. ಏಕೆಂದರೆ ಪ್ರೀತಿಯ ಪತಿಯ ಗೋರಿಯು ಅಲ್ಲೇ ಇರುವುದು. ವಿರಹ ವೇದನೆಯು ಅವರನ್ನು ಬರಸೆಳೆದು ನಿಲ್ಲಿಸಿತು... ಪತಿಯ ಗೋರಿಯನ್ನೊಮ್ಮೆ ನೋಡಿ ಕೊಂಡು ಹೋಗು... ಇನ್ನು ಮತ್ತೆ ಇಲ್ಲಿಗೆ ಬರುವ ಭಾಗ್ಯ ಇರುವುದೋ ಇಲ್ಲವೋ ಯಾರಿಗೆ ಗೊತ್ತು? ಆಮಿನಾ ಆತ್ಮದ ಕರೆಗೆ ಓಗೊಟ್ಟರು. ಆದರೆ ಅಷ್ಟರಲ್ಲಾಗಲೇ ಅವರು ಹೊಸ ನಾಡು, ಹೊಸ ನೀರು ಮತ್ತು ಯಾತ್ರೆಯ ಬಳಲಿಕೆಯಿಂದಾಗಿ ನಿತ್ರಾಣಗೊಂಡಿದ್ದರು. ಮೇಲಾಗಿ ಹೃದಯದಂತರಾಳದಲ್ಲಿ ಸುಪ್ತವಾಗಿದ್ದ ದುಃಖವು ಕಟ್ಟೆಯೊಡೆದು ಒಣಗಿದ ಗಾಯವೆಲ್ಲ ಹಸಿಯಾದುವು. ಇದೆಲ್ಲವೂ ಆಮಿನರನ್ನು ರೋಗದ ರೂಪತಾಳಿ ಕಾಡ ತೊಡಗಿದುವು.

ಆಮಿನಾರ ಅನಾರೋಗ್ಯವು ದಿನೇ ದಿನೇ ಹೆಚ್ಚುತ್ತಿತ್ತು. ಆ ಕಾಲದಲ್ಲಿ ಅಬ್ವಾ ಮಾತ್ರವಲ್ಲ, ಅರೇಬಿಯದಾದ್ಯಂತ ಆರೋಗ್ಯ ಕೇಂದ್ರಗಳ ರಿವಾಜಿದ್ದಿರಲಿಲ್ಲ. ಏನಿದ್ದರೂ ಕುಲ ವೈದ್ಯರುಗಳು ನೀಡುವ ಬೇರು-ನಾರುಗಳ ಚಿಕಿತ್ಸೆ ಮತ್ತು ಕಣಿ ಹೇಳುವವರ ಅಥವಾ ಪುರೋಹಿತರುಗಳ ಮಂತ್ರ-ತಂತ್ರ-ತಾಯಿತಗಳನ್ನೇ ಅವಲಂಬಿಸಬೇಕಾಗುತ್ತಿತ್ತು. ಇನ್ನು ಆ ಪರವೂರಿನಲ್ಲಿ ಆಮಿನರ ಶುಶ್ರೂಷೆ ಯಾರು ತಾನೇ ಮಾಡುವರು? ಇದ್ದದು ಒಬ್ಬರೇ... ಉಮ್ಮು ಐಮನ್... ಯಾತ್ರೆಯಾದ್ಯಂತ ಆಮಿನರ ಆರೈಕೆ, ಶುಶ್ರೂಷೆಯಲ್ಲಿ ಅವರು ತೊಡಗಿಕೊಂಡಿದ್ದರು. ಅವರ ಸಾಂಗತ್ಯವು ಆಮಿನಾರಲ್ಲಿ ಚೈತನ್ಯ ಮೂಡಿಸುತ್ತಿತ್ತು. ಹೀಗೆ ಅನಾರೋಗ್ಯ ಪೀಡಿತರಾದ ಆಮಿನರ ಆರೈಕೆ-ಶುಶ್ರೂಷೆಯಲ್ಲಿ ಉಮ್ಮು ಐಮನ್‌ರು ಕೊಂಚವೂ ಕೊರತೆಯನ್ನು ಮಾಡಿರಲಿಲ್ಲ.

ರೋಗಗಳೆಲ್ಲವೂ ಮೊದಮೊದಲು ಸಾಮಾನ್ಯವೇ ಆಗಿರುತ್ತವೆ. ಆದರೆ ಕ್ರಮೇಣ ಜಟಿಲವಾಗತೊಡಗುತ್ತವೆ ಮತ್ತು ಸಮಸ್ಯೆಗಳನ್ನು ಹುಟ್ಟಿಸುತ್ತವೆ. ಕೊನೆಗೆ ಈ ಜಟಿಲತೆಗಳ ಜಾಡಿನಿಂದ ಮರಣದ ದೇವಚರ ಏಕಾಏಕಿ ಬಂದು ನಿಲ್ಲುತ್ತಾರೆ ಮತ್ತು ಕೂಗಿ ಕರೆದು ಹೇಳುತ್ತಾರೆ, "ಓ ಬಾ ರೋಗಿ! ನಿನ್ನ ಸಮಯ ಮುಗಿಯಿತು. ನಿನ್ನ ಜೀವನದ ಗ್ರಂಥವನ್ನು ಬರೆದು ಮುಗಿಸಲಾಗಿದೆ. ಇನ್ನು ಅದರಲ್ಲಿ ಒಂದೇ ಒಂದು ಅಕ್ಷರವನ್ನು ಸೇರಿಸಲಾಗದು. ನಿನ್ನ ಅನ್ನ-ನೀರು ಈ ಲೋಕದಲ್ಲಿ ಮುಗಿಯಿತು..."

ಆದರೆ ಮಾನವ ಆಸೆ-ಆಕಾಂಕ್ಷೆಗಳ ಪುತ್ಥಳಿಯಾಗಿದ್ದಾನೆ. ಆತನು ತನ್ನ ಕೊನೆಯ ಕ್ಷಣದ ವರೆಗೂ ಹತಾಶನಾಗುವುದಿಲ್ಲ. ಮರಣ ಸಂಕಟ ಬಾಧಿಸಿದಾಗಲೂ ಜೀವನದ ಬಗೆಗಿನ ಮೋಹ ಕುಂದುವುದಿಲ್ಲ. ಯಾರಿಗೆ ಗೊತ್ತು... ಹೋದ ಜೀವ ಮರಳಿ ಬರಲೂಬಹುದು ಎನ್ನುವ ಕಾತರ!

ಬೀಬಿ ಆಮಿನರಿಗೆ ತನ್ನ ಮರಣಕ್ಕಿಂತಲೂ ತನ್ನ ಬಳಿಕ ತನ್ನ ಕರುಳಕುಡಿಯನ್ನು ಯಾರು ನೋಡಿಕೊಳ್ಳುವರೆಂಬ ಚಿಂತೆಯೇ ಹೆಚ್ಚಾಗಿತ್ತು. ಹುಟ್ಟುವುದಕ್ಕೆ ಮುಂಚೆಯೇ ತಂದೆಯ ಆಶ್ರಯ ಹೊರಟು ಹೋಗಿತ್ತು... ಈಗ ಕೊಂಚ ಬುದ್ಧಿ ಬಲಿಯುತ್ತಿದ್ದಂತೆಯೇ ತಾಯಿ

ಮರಣ ಸಂಕಟದಲ್ಲಿದ್ದಾರೆ. ಈ ಜಗತ್ತಿನಲ್ಲಿ ಪ್ರತಿಯೊಂದು ಮಗುವಿಗೂ ಮಾತಾಪಿತರ ಆಶ್ರಯವೇ ಪ್ರಮುಖವಾಗಿರುತ್ತದೆ. ಅವರ ಪ್ರೀತಿ-ಮಮತೆಯನ್ನಾಧರಿಸಿಯೇ ಮಕ್ಕಳು ಬೆಳೆಯುತ್ತಾರೆ. ಇತರ ಸಂಬಂಧಿಕರು, ನಿಕಟ ಬಂಧುಗಳು ಎಷ್ಟೇ ಸಹಾನುಭೂತಿ ತೋರಿದರೂ ಮಾತಾಪಿತರ ಪ್ರೀತಿಗೆ ಸಮಾನವಾಗಲಾರದು. ಇದೇ ದುಃಖವು ಆಮಿನಾರನ್ನು ಕೊನೆಯ ಕ್ಷಣಗಳಲ್ಲಿ ಕಾಡುತ್ತಿತ್ತು.

ಉಮ್ಮು ಐಮನ್‌ರು ಆಮಿನರನ್ನು ಸಮಾಧಾನಿಸುತ್ತಿದ್ದರು, ಅವರಲ್ಲಿ ಧೈರ್ಯ ತುಂಬುತ್ತಿದ್ದರು, "ಉಮ್ಮು ಮುಹಮ್ಮದ್! ನೀವಿಷ್ಟು ಹತಾಶಳಾಗುವುದು ಬೇಡ... ನೀವು ಬಲುಬೇಗನೇ ಗುಣಮುಖರಾಗುವಿ... ಅನಾರೋಗ್ಯದಿಂದಿರುವಾಗ ಹೆಚ್ಚು ಚಿಂತಿಸು ವುದು ಒಳ್ಳೆಯದಲ್ಲರಿ. ಆರೋಗ್ಯವಂತರೇ ರೋಗಪೀಡಿತರಾಗುವುದಲ್ಲವೇ? ಮತ್ತು ರೋಗಿಗಳು ಗುಣಮುಖರಾಗುತ್ತಾರೆ ಕೂಡಾ! ಪ್ರಯಾಣದ ವೇಳೆ ಮನೆಯಂತಹ ಸೌಕರ್ಯ ವಿರುವುದಿಲ್ಲವಷ್ಟೇ. ಯಾತ್ರೆ ಹೊರಟಾಗ ನೀರು ಬದಲಾಗುತ್ತದಲ್ಲವೇ... ಒಂದೊಂದು ಕಡೆ ಒಂದೊಂದು ರೀತಿಯ ನೀರು... ಕೆಲವೆಡೆ ಕಲ್ಲು ಸಕ್ಕರೆ ಬೆರೆಸಿದಂತಹ ಸಿಹಿ... ಇನ್ನು ಕೆಲವೆಡೆ ಉಪ್ಪು ಮಿಶ್ರಿತ ನೀರು... ಇದುವೇ ನಿಮ್ಮ ಅನಾರೋಗ್ಯಕ್ಕೆ ಕಾರಣ, ಬೇರೇನಲ್ಲ! ಓ ಉಮ್ಮು ಮುಹಮ್ಮದ್! ನಿಮ್ಮ ಮುಖದಲ್ಲಿ ಆರೋಗ್ಯ ಸುಧಾರಿಸುವ ಲಕ್ಷಣ ಗೋಚರಿಸುತ್ತಿದೆ... ಇನ್ನು ನಾಲ್ಕೈದು ದಿನದಲ್ಲಿ ಗುಣಮುಖರಾಗುವಿರಿಯೆಂದೇ ಭಾವಿಸಿ..."

ಒಂದೆರಡು ದಿನದಲ್ಲಿ ಆಮಿನರ ಮುಖದಲ್ಲಿ ಲವಲವಿಕೆ ಕಾಣಿಸಿಕೊಳ್ಳತೊಡಗಿತು... ಎಲ್ಲವೂ ಸರಿಯಾಯಿತೆಂದು ಭಾವಿಸುವಷ್ಟು! ರೋಗ ಗುಣಮುಖವಾಗುವುದು ಒಂದು ರೀತಿಯಲ್ಲಿ ಶುಶ್ರೂಷೆ ಮಾಡುವವರನ್ನು ವಂಚಿಸುವಂತಿರುತ್ತದೆ... ಇದಂತೂ ಅತ್ಯಂತ ವೇದನಾಜನಕವಾಗಿರುತ್ತದೆ... ಅತ್ತ ರೋಗಿ ಈಗ ಗುಣಮುಖನಾಗುತ್ತಿದ್ದಾನೆ ಎಂದು ಭಾವಿಸಿದರೆ, ಇತ್ತ ಮರಣವು ಸದ್ದಿಲ್ಲದೆ ಬಂದು ಬಿಟ್ಟಿರುತ್ತದೆ. ಬೀಬಿ ಆಮಿನರ ಆರೋಗ್ಯ ಪುನಃ ಹದಗೆಡತೊಡಗಿತು. ಅವರು ತಮ್ಮ ಕರುಳ ಕುಡಿಯ ತಲೆನೇವರಿಸಿದರು... ಕೊನೆಯದಾಗಿ! ಏನೋ ಹೇಳಲು ಹವಣಿಸಿದರು. ಆದರೆ ಮರಣ ಸಂಕಟವು ಅವರ ನಾಲಗೆಯನ್ನು ಹೊರಳದಂತೆ ಮಾಡಿತು. ತರುವಾಯ ಆಮಿನಾ ಮಗ್ಗುಲು ಬದಲಿಸಿದರು ಮತ್ತು ಬಾಲಕ ಮುಹಮ್ಮದ್ ಪರವೂರಿನಲ್ಲಿ ತಾಯಿಯ ಆಶ್ರಯದಿಂದಲೂ ವಂಚಿತರಾದರು. ಅಂದಿಗೆ ಏಳು ವರ್ಷಗಳ ಹಿಂದೆ ಪತಿ ಅಬ್ದುಲ್ಲಾ ದಫನರಾದ ಅಬ್ವಾದಲ್ಲೇ ಆಮಿನರೂ ದಫನರಾದರು. ನಿಜಾರ್ಥದಲ್ಲಿ ಪ್ರೀತಿಯು ತನ್ನ ಅಂತ್ಯವನ್ನು ಒಂದೇ ಕಡೆ ಕಂಡುಕೊಂಡಿತು.

ಇದು ಬಾಲಕ ಮುಹಮ್ಮದ್ ತನ್ನ ಜೀವನದಲ್ಲಿ ಕಂಡ ಮೊತ್ತ ಮೊದಲ ಮರಣವಾಗಿತ್ತು! ಅದೂ ಎಂಥ ಹೃದಯವಿದ್ರಾವಕ ಮರಣವಾಗಿತ್ತು ಅಂತೀರಿ!? ಮಾತೆಯಿಂದ ಶಾಶ್ವತ ವಿಯೋಗದ ಆಘಾತ... ಅದೂ ಎಲ್ಲಿ? ಪರವೂರಲ್ಲಿ! ಬಂಧು-ಬಳಗದಿಂದ ದೂರ... ವಿವಶ ಮತ್ತು ಅನಾಥ ಮರಣ! ಆಮಿನಾ ಮಕ್ಕಾ ನಗರದಲ್ಲಿ ಮರಣ ಹೊಂದಿರುತ್ತಿದ್ದರೆ

ಸಾವಿರಾರು ಮಂದಿ ಸಂತಪ್ತರು ಅವರ ಜನಾಝದಲ್ಲಿ ಶಾಮೀಲಾಗುತ್ತಿದ್ದರು. ಪ್ರತಿಯೊಂದು ಮನೆಯಿಂದಲೂ ಅಳುವವರು ಬರುತ್ತಿದ್ದರು. ಆದರೆ ಇಲ್ಲಿ? ಉಮ್ಮು ಐಮನ್‌ರ ಹೊರತು ಕಣ್ಣೀರಿಳಿಸುವವರು ಬೇರಾರೂ ಇದ್ದಿರಲಿಲ್ಲ. ಬಾಲಕ ಮುಹಮ್ಮದ್ ಅಳುತ್ತಿರುವುದನ್ನು ಕಂಡು ಉಮ್ಮು ಐಮನ್ ಬಹಳಷ್ಟು ಸಮಾಧಾನ ಪಡಿಸಲು ಯತ್ನಿಸಿದರು. ಆದರೆ ಅನಾಥ ಮಗುವಿನ ಮಟ್ಟಿಗೆ ತಾಯಿಯ ಮರಣವು ಅತ್ಯಂತ ನೋವಿನ ಸಂಗತಿಯಾಗಿರುತ್ತದೆ... ಅದು ಅನುಭವಿಸಿದವರಿಗೇ ಗೊತ್ತು!

ಕೆಲವೇ ದಿನಗಳ ತರುವಾಯ ಉಮ್ಮು ಐಮನ್‌ರು ಅನಾಥ, ತಬ್ಬಲಿ ಮಗುವಿನೊಂದಿಗೆ ಮಕ್ಕಾ ನಗರ ಪ್ರವೇಶಿಸಿದರು. ಅಬ್ದುಲ್ ಮುತ್ತಲಿಬ್ ಸೊಸೆ ಮತ್ತು ಮೊಮ್ಮಗನ ಆಗಮನವನ್ನೇ ಕಾತರದಿಂದ ಕಾಯುತ್ತಿದ್ದರು. ಮೊಮ್ಮಗ ಬಂದನಾದರೂ ಸೊಸೆ ಬರಲಿಲ್ಲ, ಬರಲಾಗಲಿಲ್ಲ... ಮರಣವು ಅವರನ್ನು ಬರಲು ಬಿಟ್ಟಿರಲಿಲ್ಲ. ಅಬ್ವಾದ ಮಣ್ಣಿನಲ್ಲಿ ಮಣ್ಣಾಗಿ ಹೋಗಿದ್ದರು. ಆಮಿನರ ಯಸ್ರಿಬ್ ಪ್ರಯಾಣವು ಪರಲೋಕ ಯಾತ್ರೆಯಾಗಿ ಪರಿಣಮಿಸಿತ್ತು... ಮರಣಕ್ಕೇನು, ಒಂದು ನೆಪ ಬೇಕಾಗಿತ್ತು... ಬನೂ ಹಾಶಿಮ್ ಮನೆತನದ ಮಹಿಳೆಯರೆಲ್ಲರ ಶೋಕವು ಕಣ್ಣೀರ ಕೋಡಿಯಾಗಿ ಹರಿಯಿತು.

"ಸಯ್ಯಿದುಲ್ ಕುರೈಶ್! ಮುಹಮ್ಮದ್‌ನಿಗೆ ಇನ್ನು ನಿಮ್ಮ ಹೊರತು ಬೇರೆ ಯಾರೂ ಇಲ್ಲ..." ಉಮ್ಮು ಐಮನ್ ಅಳುಕುತ್ತಾ ಹೇಳಿದರು.

"ಉಮ್ಮು ಐಮನ್! ನಾನು ಅಬ್ದುಲ್ಲಾನ ಕಣ್ಮಣಿ ಆಮಿನಳ ಕರುಳಕುಡಿಯನ್ನು ಆಶ್ರಯಹೀನನಾಗಿ ಬಿಟ್ಟು ಬಿಡುವೆನೆಂದು ಭಾವಿಸಿದ್ದೀಯಾ? ಮುಹಮ್ಮದ್ ನನ್ನ ಜೀವಕ್ಕಿಂತಲೂ ಹೆಚ್ಚು! ಹಮ್‌ಝಾ, ಅಕೀಲ್, ಅಬೂತಾಲಿಬ್, ಹಾರಿಸ್, ಅಬೂ ಲಹಬ್ ಮತ್ತು ಅಬ್ಬಾಸ್ ನನ್ನ ಮಕ್ಕಳೇ. ಆದರೂ ಕಲಬಾದ ಒಡೆಯನಾಣೆ! ಮುಹಮ್ಮದ್ ನನಗೆ ಅವರೆಲ್ಲರಿಗಿಂತಲೂ ಹೆಚ್ಚು ಪ್ರಿಯನಾಗಿದ್ದಾನೆ. ನೀನು ನನ್ನ ಈ ಪ್ರೀತಿ, ಮಮತೆಯನ್ನು ಅಂದಾಜಿಸಲಾರೆ ಉಮ್ಮು ಐಮನ್! ಹೃದಯವನ್ನು ಹೊರತೆಗೆದು ತೋರಿಸಲಾಗುತ್ತಿದ್ದರೆ ನಿನಗೆ ಅದರ ಅರಿವು ಮೂಡಿಸುತ್ತಿದ್ದೆ!"

ಪ್ರಕೃತಿಯು ಯಾರನ್ನಾದರೂ ಪರೀಕ್ಷಿಸಬಯಸಿದರೆ, ಆತನನ್ನು ಪರೀಕ್ಷೆಗಳ ಕುಲುಮೆಯಲ್ಲಿ ಬೇಯಿಸುತ್ತದೆ, ದುಃಖ-ಸಂಕಷ್ಟಗಳ ಮುಳ್ಳು ಹಾದಿಯಲ್ಲಿ ನಡೆಸುತ್ತದೆ... ಮೊದಲು ದುಃಖದ ತಾಪದಿಂದ ಹೃದಯವನ್ನು ಮಿದುಗೊಳಿಸುತ್ತದೆ. ಏಕೆಂದರೆ ಆ ಮಿದುತ್ವಕ್ಕೆ ಅನ್ಯರ ದುಃಖದಲ್ಲಿ ಪಾಲುಗೊಳ್ಳಲಿಕ್ಕಿದೆ. ಬಳಿಕ ದುರಂತಗಳು ಸ್ವಭಾವಕ್ಕೆ ಮೆರುಗನ್ನು ನೀಡುತ್ತವೆ. ಜಗತ್ತಿನ ಮಹಾನ್ ವ್ಯಕ್ತಿಗಳನ್ನು ಸುಖ-ಭೋಗದಿಂದ ಉದ್ದೇಶ ಪೂರ್ವಕವಾಗಿ ದೂರವಿಡಲಾಗುತ್ತದೆ. ವಾಸ್ತವದಲ್ಲಿ ಸಂಕಷ್ಟ-ಪೀಡನೆಯ ಬಾನಿನಲ್ಲಿಯೇ ಉನ್ನತ ವ್ಯಕ್ತಿತ್ವಗಳ ಸೂರ್ಯೋದಯವಾಗುತ್ತದೆ. ಇದುವೇ ಪ್ರಕೃತಿಯ ಸ್ವಭಾವ, ನೀತಿ ಹಾಗೂ ಯುಕ್ತಿಯಾಗಿದೆ.

ಮಾತೆಯ ನಿಧನವಾಗಿ ಸುಮಾರು ಒಂದು ವರ್ಷದ ಬಳಿಕ ಅನಾಥಮುತ್ತನ್ನು

ಪೋಷಿಸುತ್ತಿದ್ದ ಅಬ್ದುಲ್ ಮುತ್ತಲಿಬ್ ಇಹಲೋಕಕ್ಕೆ ವಿದಾಯ ಕೋರಿದರು. ಅವರಿಗೆ ತಮ್ಮ ಕೊನೆಗಾಲದಲ್ಲಿ ಕಾಡುತ್ತಿದ್ದ ಒಂದೇ ಒಂದು ಕೊರತೆಯೆಂದರೆ, ನನ್ನ ಬಳಿಕ ಈ ಅನಾಥ ತಬ್ಬಲಿಯನ್ನು ಯಾರು ನೋಡಿಕೊಳ್ಳುವರು ಎಂಬುದಾಗಿತ್ತು. ಅಯ್ಯೋ! ಇನ್ನೂ ಒಂದಿಷ್ಟು ಕಾಲ ನಾನು ಬದುಕಿರುತ್ತಿದ್ದರೆ... ಕನಿಷ್ಠ ಮುಹಮ್ಮದ್ ತನ್ನ ಕಾಲ ಮೇಲೆ ನಿಲ್ಲುವ ವರೆಗಾದರೂ...

ಅಬ್ದುಲ್ ಮುತ್ತಲಿಬ್‌ರ ಈ ಆಗ್ರಹ ಕಂಡು ಪ್ರಕೃತಿ ಮುಗುಳ್ನಕ್ಕು ಹೇಳಿತು, "ಓ ಇಬ್ನು ಹಾಶಿಮ್! ಮುಹಮ್ಮದ್‌ನನ್ನು ಅಸಹಾಯಕನೆಂದು ಭ್ರಮಿಸಿ ಕೊರಗುತ್ತಿದ್ದೀಯಾ? ಅವನನ್ನು ಅನಾಥನೆಂದು ಭಾವಿಸಿ ಅಳುತ್ತಿರುವೆಯಾ? ಓ ವೃದ್ಧ ಸರದಾರನೇ! ಈ ಅನಾಥನಾದರೋ ಅನಾಥರ ಸಂರಕ್ಷಕನಾಗಲಿದ್ದಾನೆ... ಗುಲಾಮರ ವಿಮೋಚಕನಾಗಲಿದ್ದಾರೆ... ಜಗತ್ತಿನ ಸಕಲ ಆಶ್ರಯಗಳಿಂದ ವಂಚಿತರಾಗಿರುವವರಿಗೆಲ್ಲ ಆಶ್ರಯದಾತನಾಗಲಿದ್ದಾನೆ... ಇವನ ಒಂದು ಸಂಜ್ಞೆಯಿಂದ ಚಂದ್ರ-ನಕ್ಷತ್ರಾದಿಗಳು ಪರಿಭ್ರಮಣಗೊಳ್ಳಲಿವೆ... ಅಬ್ದುಲ್ ಮುತ್ತಲಿಬ್! ಸಮಾಧಾನದೊಂದಿಗೆ ಜೀವ ತೆರು... ಮುಹಮ್ಮದ್‌ನ ಬಗ್ಗೆ ಚಿಂತಿಸದಿರು... ಆತನ ಆಶ್ರಯಕ್ಕೆ ಅಲ್ಲಾಹನೇ ಸಾಕು!"

ಅನಾಥಮುತ್ತಿನ ಮುಖಾರವಿಂದವು ಬಾಡಿತ್ತು... ಆದರೆ ದುಃಖದ ಸನ್ನಿವೇಶದಲ್ಲಿಯೂ ಆ ಪಾವನ ಮುಖವು ಆಗಷ್ಟೇ ಬೆಳ್ಳಂಜಾವ ಮಂಜಿನಲ್ಲಿ ಮಿಂದೆದ್ದ ಅರೆಬಿರಿದ ಮೊಗ್ಗಿನಂತೆ ಕಂಗೊಳಿಸುತ್ತಿತ್ತು. ದುಃಖದ ತಾಪವು ಪಾವನ ಆತ್ಮಗಳ ಮುಖವನ್ನು ಕಳೆಗುಂದಿಸುವುದಿಲ್ಲ, ಬದಲು ಇನ್ನಷ್ಟು ಕಂಗೊಳಿಸುವಂತೆ ಮಾಡುತ್ತದೆ.

ಪ್ರಕೃತಿಯ ತರಬೇತಿಯಲ್ಲಿ...

ಅಬ್ದುಲ್ ಮುತ್ತಲಿಬ್‌ರ ನಿಧನಾನಂತರ ಬಾಲಕ ಮುಹಮ್ಮದ್‌ರ ಪೋಷಣೆಯ ಹೊಣೆಯನ್ನು ಚಿಕ್ಕಪ್ಪ ಅಬೂ ತಾಲಿಬ್ ವಹಿಸಿಕೊಂಡರು. ಅನಾಥ ಮಕ್ಕಳನ್ನು ಅವರ ನಿಕಟ ಸಂಬಂಧಿಗಳು ಕೇವಲ ತೋರಿಕೆಗಾಗಿ ಪೋಷಿಸುತ್ತಾರೆ, ನಿಜವಾದ ಪ್ರೀತಿ ಸಹಾನುಭೂತಿ ಯಾರಿಗೂ ಇರುವುದಿಲ್ಲ ಎಂದು ಕುರೈಶರ ಭಾವನೆಯಾಗಿತ್ತು. ಆದರೆ ಅಬೂತಾಲಿಬ್‌ರು ಬಂಧುಗಳ ಈ ಆಶಂಕೆಯನ್ನು ತಪ್ಪೆಂದು ಸಾಬೀತುಪಡಿಸಿದರು. ನಂತರದ ಘಟನೆಗಳು ಜನರ ಊಹನೆಗಳೆಲ್ಲವನ್ನೂ ಒಂದೊಂದಾಗಿ ಸುಳ್ಳಾಗಿಸತೊಡಗಿದವು. ಅಬೂ ತಾಲಿಬ್‌ರು ಅನಾಥ ಮುತ್ತಿನ ಮಟ್ಟಿಗೆ ನಿಜವಾದ ಸಂರಕ್ಷಕರಾಗಿ ಸಾಬೀತುಗೊಂಡರು. ಅವರ ಹೃದಯ ದಲ್ಲಿ ಮೊದಲೇ ಸೋದರ ಪುತ್ರನ ಮೇಲೆ ಅಪಾರ ಮಮತೆಯಿತ್ತೆಂದೂ ತಂದೆ (ಅಬ್ದುಲ್ ಮುತ್ತಲಿಬ್) ಬದುಕಿದ್ದಷ್ಟು ಕಾಲ ಅದನ್ನು ತೋರ್ಪಡಿಸುವ ಅವಕಾಶ ಸಿಕ್ಕಿರಲಿಲ್ಲವೆಂದೂ ಇದರಿಂದ ತಿಳಿಯಬಹುದಾಗಿದೆ. ಈಗ ತಂದೆಯ ಆಶ್ರಯ ಹೊರಟು ಹೋದ ನಂತರ ಸೋದರ ಪುತ್ರನ ಮೇಲಿನ ಪ್ರೀತಿಯು ಪೋಷಣೆಯ ರೂಪದಲ್ಲಿ ಮೈಮುರಿದು ಎದ್ದು ನಿಂತಂತಾಯಿತು.

ಅಬೂತಾಲಿಬ್‌ರು ಪ್ರೀತಿ-ಮಮತೆಯ ಕಣ್ಣೀರಿನಿಂದ ಬಾಲಕ ಮುಹಮ್ಮದ್‌ರ ಮುಖದಲ್ಲಿದ್ದ ಅನಾಥತೆಯ ಧೂಳನ್ನು ತೊಳೆದರು. ಸರ್ವ ವಿಧದಲ್ಲೂ ಸಹಾನುಭೂತಿ ಯಿಂದ ನೋಡಿಕೊಂಡರು. ಸೋದರ ಪುತ್ರನ ಸಂತೋಷಕ್ಕಾಗಿ ಇರುವ ಎಲ್ಲ ಸೌಲಭ್ಯ ಗಳನ್ನೂ ಬಳಸಿದರು. ತಮ್ಮ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಯನ್ನು ಧಾರೆಯೆರೆದು ಪೋಷಿಸಿದರು. ಅಬ್ದುಲ್ಲಾರ ಅನಾಥಮುತ್ತು ಕೊಂಚವೂ ಬೇಸರಗೊಳ್ಳುವುದನ್ನು ಅಬೂತಾಲಿಬ್‌ರಿಂದ ನೋಡಲು ಸಾಧ್ಯವಾಗುತ್ತಿರಲಿಲ್ಲ. ಅನಾಥ ಮುತ್ತಿನ ಕಾಲಿಗೆ ಸಣ್ಣ ಮುಳ್ಳು ಚುಚ್ಚಿದರೂ ಅದರ ನೋವನ್ನು ಅಬೂತಾಲಿಬ್‌ರ ಹೃದಯ ಅನುಭವಿಸುತ್ತಿತ್ತು. ಅಬೂತಾಲಿಬ್‌ರ ಈ ಅವಸ್ಥೆಯನ್ನು ಕಂಡು ಮಕ್ಕಾವಾಸಿಗಳು ತಮ್ಮಲ್ಲೇ ಆಡಿಕೊಳ್ಳ ತೊಡಗಿದರು... ಅಬೂತಾಲಿಬ್, ಸಯ್ಯದುಲ್ ಕುರೈಶ್ ಅಬ್ದುಲ್ ಮುತ್ತಲಿಬ್‌ರ ಮಗನಲ್ಲವೇ? ಅಷ್ಟೇ ಅಲ್ಲ, ನಿಜವಾದ ಉತ್ತರಾಧಿಕಾರಿಯೂ ಹೌದು. ಅಂತಹವರಿಂದ ಮಾತ್ರ ಈ ರೀತಿಯ ಸಭ್ಯ ಸೌಜನ್ಯವನ್ನು ನಿರೀಕ್ಷಿಸಲು ಸಾಧ್ಯವಷ್ಟೇ. ಅದೂ ಅಲ್ಲದೆ

ಮುಹಮ್ಮದ್, ಅಬೂತಾಲಿಬ್‌ರಿಗೆ ಅನ್ಯನೇನೂ ಅಲ್ಲವಲ್ಲ, ಅಬೂತಾಲಿಬ್‌ರದೇ ರಕ್ತ ಸಂಬಂಧಿ... ಅದೂ ಮಗು ಕೂಡಾ ಎಂತಹ ಮಗು!? ಅನ್ಯರೂ ಕಂಡರೆ ಆತನನ್ನು ಪ್ರೀತಿ, ಗೌರವದಿಂದ ಕಾಣುತ್ತಾರೆ... ಈ ಅನಾಥನ ಆರೈಕೆಯ ಮೂಲಕ ಅಬೂತಾಲಿಬ್‌ರಂತೂ ಸೌಭಾಗ್ಯದ ಭಂಡಾರವನ್ನೇ ಶೇಖರಿಸುತ್ತಿದ್ದಾರೆ...

ಅರಬರ ಜೀವನವು ತೀರಾ ಸರಳವಾಗಿತ್ತು. ಸಂಸ್ಕೃತಿ-ನಾಗರಿಕತೆಗಳ ಔಪಚಾರಿಕತೆ ಯಿಂದ ಅವರು ಸಂಪೂರ್ಣ ಅಜ್ಞರಾಗಿದ್ದರು. ಶ್ರೀಮಂತ ಮನೆತನದ ಮಕ್ಕಳೂ ಕೂಡಾ ಕಾಡುಗಳಿಗೆ ಹೋಗಿ ಒಂಟೆ-ಆಡುಗಳನ್ನು ಮೇಯಿಸುತ್ತಾರೆ. ಕುರುಬ ವೃತ್ತಿಯು ಅರಬರ ಅಚ್ಚು ಮೆಚ್ಚಿನ ಹವ್ಯಾಸವಾಗಿತ್ತು. ಅದು ಅವರ ಮಟ್ಟಿಗೆ ಗೌರವಾರ್ಹವೂ ಆಗಿತ್ತು. ಕೌಮಾರ್ಯದಲ್ಲಿ ಮುಹಮ್ಮದ್‌ರೂ ಆಡುಗಳನ್ನು ಮೇಯಿಸಿದರು. ವಿಧಿಯು ಜಾಲಿಮರಗಳ ಪ್ರತಿಯೊಂದು ಎಲೆ-ಚಿಗುರನ್ನುದ್ದೇಶಿಸಿ ಹೇಳುತ್ತಿತ್ತು, "ಇಂದು ಈ ಕಣಿವೆಗಳಲ್ಲಿ ಆಡುಗಳನ್ನು ಮೇಯಿಸುತ್ತಿರುವ ಈ ಹುಡುಗ ನಾಳೆ ಮಾನವೀಯತೆಯ ಸಂರಕ್ಷಣೆಯ ಹೊಣೆ ವಹಿಸಲಿದ್ದಾನೆ. ಈ ಕುರಿಗಾಹಿ ಹುಡುಗ ವಾಸ್ತವದಲ್ಲಿ ಮಾನವೀಯತೆಯ ಮಾರ್ಗದರ್ಶಕನಾಗಿದ್ದಾನೆ. ಯಾರು ಈತನ ಆಶ್ರಯದಲ್ಲಿ ಬಂದು ಸೇರುವರೋ ಅವರು ಖಂಡಿತ ವಿಜಯಿಗಳಾಗುವರು ಮತ್ತು ಯಾರು ಈತನ ಪಕ್ಷದಿಂದ ಅಥವಾ ಸಂಘಟನೆ ಯಿಂದ ಹೊರಗುಳಿಯುವರೋ ಅವರ ಪಾಲಿಗೆ ದುರದೃಷ್ಟ ಮತ್ತು ಪಥಭ್ರಷ್ಟತೆಯೇ ವಿಧಿಯಾಗಿ ಬಿಡುತ್ತದೆ."

ಅರಬರು ಮೊದಲೇ ನಾಗರಿಕತೆಯನ್ನು ಬಲ್ಲವರಲ್ಲ, ಮಕ್ಕಳು ಜನರೊಡನೆ ಬೆರೆಯುವ ಸಂಸ್ಕೃತಿಯನ್ನು ಇತರರನ್ನು ನೋಡಿ ಕಲಿಯುತ್ತಿದ್ದರು. ಹಾಗಾಗಿ ಪ್ರಕೃತಿಯು ಮುಹಮ್ಮದ್‌ರ ಬಾಲ್ಯವನ್ನು ಕಾಡುಗಳಲ್ಲಿ ಮೂಕ ಪ್ರಾಣಿಗಳೊಂದಿಗೆ ಕಳೆಯುವಂತಹ ವ್ಯವಸ್ಥೆಯನ್ನು ಮಾಡಿತು. ಅನಾಥಮುತ್ತಿನ ಚಾರಿತ್ರ್ಯದಲ್ಲಿ ಸಮಾಜದ ನೆರಳೂ ಬೀಳು ವುದನ್ನು ಸರ್ವ ಲೋಕಗಳ ಸೃಷ್ಟಿಕರ್ತನು ಇಷ್ಟಪಡಲಿಲ್ಲ. ಮುಹಮ್ಮದ್‌ರ ವಿಧಿಯಲ್ಲಿ ಪ್ರಕೃತಿಯು ತನ್ನದೇ ಆದ ಛಾಪನ್ನು ಒತ್ತುತ್ತಿತ್ತು. ಏಕೆಂದರೆ ಸರ್ವಶಕ್ತನಾದ ಒಡೆಯನು ಮುಹಮ್ಮದ್‌ರನ್ನು ಜನರಿಂದ ಕಲಿಯಲಿಕ್ಕಲ್ಲ ಬದಲಾಗಿ ಜನರಿಗೆ ಕಲಿಸಲಿಕ್ಕಾಗಿ ಕಳುಹಿಸಿದ್ದನು. ಅನಾಥಮುತ್ತು 'ಉಮ್ಮಿ' (ಅನಕ್ಷರಸ್ಥ) ಆಗಿದ್ದರು. ಆದರೆ ಅಲ್ಲಾಹನಿಂದ ನೇರ ಶಿಕ್ಷಣ ದೊರೆಯುತ್ತಿತ್ತು! ಪ್ರಕೃತಿಯು ಯಾವುದೇ ಮಧ್ಯವರ್ತಿ ಅಥವಾ ಮಾಧ್ಯಮ ಇಲ್ಲದೆ ಸ್ವಯಂ ತರಬೇತಿಯ ಹೊಣೆ ವಹಿಸಿತ್ತು... ಅನಾಥಮುತ್ತಿಗೆ ನೇರವಾಗಿ ಪರಲೋಕದಿಂದ ಅನುಗ್ರಹಗಳು ವರ್ಷಧಾರೆಯಾಗಿ ಸುರಿಯುತ್ತಿತ್ತು.

ಪ್ರತಿಯೊಂದು ಜನಾಂಗ ಮತ್ತು ದೇಶದ ಮಕ್ಕಳು ಯಾವಾಗಲೂ ತುಂಟರಾಗಿರುತ್ತಾರೆ. ಇದಂತೂ ಅರಬರ ಮಕ್ಕಳು. ಹಿರಿಯರು ಮಾತು ಮಾತಿಗೆ ಜಗಳಾಡುವವರಾಗಿದ್ದಾರೆ. ಒಬ್ಬರ ಒಂಟೆಯು ಇನ್ನೊಬ್ಬರ ಹುಲ್ಲುಗಾವಲಿಗೆ ನುಗ್ಗಿದರೆ ಸಾಕು, ಖಡ್ಗಗಳು ಒರೆಯಿಂದ ಹೊರಬರುತ್ತವೆ. ಇಂತಹವರ ಮಕ್ಕಳು ಜಗಳಗಂಟಿಗಳಾಗದಿರುತ್ತಾರೆಯೇ? ಆದರೆ ಅನಾಥಮುತ್ತಿನ ಪ್ರಕೃತಿ ಬೇರೆಯೇ ಆಗಿತ್ತು. ಆ ಅಜ್ಞಾನದ ಕತ್ತಲ ಕೂಪದಲ್ಲಿ ಅದೊಂದೇ

ಬೆಳಕಿನ ದೀಪವಾಗಿತ್ತು, ಆ ಮುಳ್ಳುಗಾಡಿನಲ್ಲಿ ಅದೊಂದೇ ಚೆಂಡು ಮಲ್ಲಿಗೆ ಹೂ ಅರಳಿ ಕೊಂಡಿತ್ತು. ಇತರ ಮಕ್ಕಳೊಡನೆ ಆಡುವುದನ್ನು ಮುಹಮ್ಮದ್‌ರ ಚಿತ್ತವು ಇಷ್ಟಪಡುತ್ತಿರಲಿಲ್ಲ. ಯಾರಾದರೂ ಕೆಟ್ಟ ಮಾತುಗಳನ್ನಾಡುತ್ತಿದ್ದರೆ, ಅವರು ದೂರ ಹೋಗುತ್ತಿದ್ದರು. ಕೆಟ್ಟ ಪದ ಕೇಳುವುದನ್ನೂ ಅವರು ಸಹಿಸುತ್ತಿರಲಿಲ್ಲ. ಹೆಚ್ಚೆಂದರೆ ಸಂಗಡಿಗರಾದ ಕುರುಬ ಹುಡುಗರೊಂದಿಗೆ ಬಯಲಲ್ಲಿ ಸ್ವಯಂ ಬೆಳೆದ ಜೋರೆ ಹಣ್ಣಿನ ಮರದಿಂದ ಹಣ್ಣು-ಕಾಯಿ ಕಿತ್ತು ತಿನ್ನುತ್ತಿದ್ದರು. ಆದರೆ ಆಗಲೂ ಸಮಾನತೆ ಮತ್ತು ಘನತೆಯನ್ನು ಕಾಪಾಡುತ್ತಿದ್ದರು.

ಕುರೈಶರಲ್ಲಿ ಅನಾಥಮುತ್ತಿನ ಈ ವಿಶಿಷ್ಟ ಗುಣಸ್ವಭಾವವು ಚರ್ಚಾವಿಷಯ ವಾಗುತ್ತಿತ್ತು. "ಇಲ್ನೋಡಿ, ಈ ಅಬ್ದುಲ್ಲಾನ ಮಗ ಮುಹಮ್ಮದ್‌ನಂತೂ ದೇವಚರರಂತಹ ಸ್ವಭಾವ ಹೊಂದಿದ್ದಾನೆ. ನಾನು ಇದುವರೆಗೂ ಆತನನ್ನು ಇತರರೊಂದಿಗೆ ಜಗಳ ಕಾಯುವುದನ್ನು ಬಿಡಿ, ಕೆಟ್ಟ ಮಾತುಗಳನ್ನಾಡುವುದನ್ನೂ ಕಂಡಿಲ್ಲ."

"ಅರೆ ನೀವು ಜಗಳಾಡುವ ಬಗ್ಗೆ ಹೇಳುತ್ತಿದ್ದೀರಲ್ಲ, ನಾನಂತೂ ಆ ಮುಗ್ಧ ಹುಡುಗನನ್ನು ಕಿಲಕಿಲ ನಕ್ಕದ್ದನ್ನೇ ಕಂಡಿಲ್ಲ. ಕೇವಲ ಹೂವಿನಂತಹ ಮುಗುಳ್ನಗು! ಗಲ್ಲಿಗಳಲ್ಲಿ ದೃಷ್ಟಿ ಕೆಳಗಿರಿಸಿ ನಡೆಯುತ್ತಾನೆ. ಕುರೈಶ್ ಜನರೇ! ಈ ಹುಡುಗ ಮುಂದೆ ಬಹಳ ದೊಡ್ಡ ವ್ಯಕ್ತಿಯಾಗಲಿದ್ದಾನೆ. ಅದರ ಕುರುಹುಗಳು ನನಗೆ ಕಾಣುತ್ತಿವೆ, ತಿಳಿಸುತ್ತಿವೆ, ಹೇಳುತ್ತಿವೆ... ಆತನಿಂದಾಗಿ ನಮ್ಮಂಥ ಮರಳುಗಾಡಿನ ಅಲೆಮಾರಿಗಳ ಅದೃಷ್ಟ ತಾರೆ ಮಿನುಗಲಿದೆಯೆಂದರೆ ಅಬ್ಬಾ! ಕಾದು ನೋಡಿ, ಅರಬರ ಘನತೆ, ಗಾಂಭೀರ್ಯದ ಬಗ್ಗೆ ಈಜಿಪ್ಟ್, ಇರಾನ್ ನವರೂ ಅಸೂಯೆ ಪಡಲಿದ್ದಾರೆ!"

ಓರ್ವ ವೃದ್ಧ ಅರಬ ಹೇಳತೊಡಗಿದ, "ಜನರೇ!... ಬಾಲಕ ಮುಹಮ್ಮದ್‌ನ ಬಿಲ್ಲುಗಾರಿಕೆಗೆ ನಮ್ಮ ಯಾವ ಯುವ ಯೋಧನೂ ಸಾಟಿಯಾಗಲಾರ. ಆತನ ಗುರಿ ತಪ್ಪುವುದೇ ಇಲ್ಲ! ಕುದುರೆಯ ಮೇಲೇರಿದಾಗಲಂತೂ ಆತ, ಉಕಾಝ್ ಮತ್ತು ದುಲ್‌ಮಜನ್ನದ ಕುದುರೆ ಓಟದ ಸ್ಪರ್ಧೆಯಲ್ಲಿ ನಜ್ದ್ ಮತ್ತು ಹಿಜಾಝ್‌ನ ಹೆಸರಾಂತ ಸವಾರರನ್ನೂ ಸೋಲಿಸುವಂತೆ ಕಾಣುತ್ತಾನೆ!!"

ಕಅಬಾಲಯದ ಪರದೆಯಿಂದ ತೇಪೆ ಹಚ್ಚಿದ ಬಟ್ಟೆಯನ್ನು ಧರಿಸಿದ್ದಂತಹ ನೀಳ ಗಡ್ಡದ ವ್ಯಕ್ತಿ ಹೇಳಿದ, "ನಾನಂತೂ ಅದಕ್ಕಿಂತಲೂ ವಿಶಿಷ್ಟವಾದ ವಿಷಯವನ್ನು ಆಲಿಸಿದ್ದೇನೆ. (ಏನು... ಏನು... ಎಂದು ನೆರೆದಿದ್ದವರೆಲ್ಲರೂ ಒಕ್ಕೊರಳಿನಿಂದ ಕೇಳಿದರು.) ನನ್ನ ಕಿರಿಯ ಪುತ್ರ ಘರ್ಝ್ಲ್ ಹೇಳುತ್ತಿದ್ದ... ಅವನ ಮಾತನ್ನು ಅಮಾರಃರ ಸೋದರಿ ಪುತ್ರ, ಅಸ್‌ಅಸ್ ಕೂಡ ಪುಷ್ಟೀಕರಿಸಿದ್ದ... (ಏನು ಹೇಳಿ... ಪುನಃ ಒಂದಿಬ್ಬರಿಂದ ಕಾತರದ ಪ್ರಶ್ನೆ ಹೊರಟಿತು.) ಅದು... ಮುಹಮ್ಮದ್ ಯಾವುದಾದರೂ ಮರದ ಅಡಿಯಿಂದ ಹಾದು ಹೋಗುವಾಗ ಆ ಮರದ ಗೆಲ್ಲುಗಳು ಬಾಗುತ್ತವಂತೆ! ಕಲ್ಲುಗಳಿಂದ ಸಲಾಮ್ ಹೇಳಿ ದಂತಹ ಶಬ್ದ ಹೊರಡುತ್ತವಂತೆ!"

ಓರ್ವ ಉತ್ಸಾಹೀ ಯುವಕ ನೆಟ್ಟಗೆ ಕೂತು, "ನಿಮ್ಮ ಮಾತುಗಳೆಲ್ಲವೂ ಬಹಳ ಆಕರ್ಷಕವಾಗಿ ಕಾಣುತ್ತಿವೆ. ಆದರೆ ಬನ್ನಿ, ಒಂದೊಂದು ಲೋಟ ಮದಿರೆಯನ್ನು ಸವಿಯೋಣ, ಆನಂದವು ದ್ವಿಗುಣಗೊಂಡೀತು" ಎಂದು ಬಿಟ್ಟ.

ಆ ಯುವಕನ ಮಾತು ಕೇಳಿ ಗಂಭೀರ ಚರ್ಚೆಯಲ್ಲಿ ತಲ್ಲೀನರಾಗಿದ್ದ ಬಹಳಷ್ಟು ಮಂದಿ ಗಹಗಹಿಸಿದರು. ವಾತಾವರಣದಲ್ಲಿ ನಗುವಿನ ಅಲೆ ಎದ್ದಿತು. ಆದರೆ ಗಂಭೀರ ಪ್ರಕೃತಿಯ ಕೆಲವು ಮಂದಿಗೆ ಆತನ ಈ ಹಾಸ್ಯವು ರುಚಿಸಲಿಲ್ಲ. ಅವರಂತೂ, ಚರ್ಚೆಯು ಇನ್ನೂ ಮುಂದುವರಿದಿದ್ದರೆ ಚೆನ್ನಾಗಿತ್ತೆಂದು ಆಶಿಸುತ್ತಿದ್ದರು.

ಬಹೀರಾ ಹೇಳಿದ ಸತ್ಯ

ಅಬೂತಾಲಿಬ್ ಉಪಜೀವನಕ್ಕಾಗಿ ವ್ಯಾಪಾರ ಮಾಡುತ್ತಿದ್ದರು. ವರ್ಷಕ್ಕೊಮ್ಮೆ ಸಿರಿಯಕ್ಕೆ ಹೋಗಿ ಬರುತ್ತಿದ್ದರು. ಮಕ್ಕಾದಿಂದ ವ್ಯಾಪಾರಿ ಸರಕುಗಳನ್ನು ಕೊಂಡು ಹೋಗಿ ಸಿರಿಯಾದಲ್ಲಿ ಮಾರುತ್ತಿದ್ದರು, ಅಲ್ಲಿಂದ ಮರಳುವಾಗ ಅಲ್ಲಿಯ ವಸ್ತುಗಳನ್ನು ಖರೀದಿಸಿ ತರುತ್ತಿದ್ದರು. ಅದನ್ನು ಮಕ್ಕಾದಲ್ಲಿ ಮಾರುತ್ತಿದ್ದರು. ಈ ವ್ಯಾಪಾರದಲ್ಲಿ ಅವರಿಗೆ ಬಹಳಷ್ಟು ಲಾಭ ದೊರೆಯುತ್ತಿತ್ತು. ಆದರೆ ಅವರ ಕುಟುಂಬ ಬಹಳ ದೊಡ್ಡದಿತ್ತು. ಮೇಲಾಗಿ ಕೊಡುಗೈ ದಾನಿಯೂ ವಿಶಾಲ ಹೃದಯಿಯೂ ಆಗಿದ್ದರು. ಅಬ್ದುಲ್ ಮುತ್ತಲಿಬ್‌ರಂತಹ ಹೃದಯ ವೈಶಾಲ್ಯ ಮೆರೆಯುತ್ತಿದ್ದ ಮೇರು ನಾಯಕರ ಮಗ ಅಂದ ಮೇಲೆ ಅಬೂತಾಲಿಬ್‌ರಲ್ಲೂ ಆ ಗುಣ ರಕ್ತಗತವಾಗಿರಲೇ ಬೇಕಲ್ಲವೇ? ಹಾಗಾಗಿ ಗಳಿಸಿದ ಲಾಭವು ಉಳಿಸಲು ಸಾಧ್ಯ ವಾಗುತ್ತಿರಲಿಲ್ಲ.

ಬಾಲಕ ಮುಹಮ್ಮದ್‌ರಿಗೆ 12 ವರ್ಷ ಪ್ರಾಯವಾಗಿತ್ತು. ಅಬೂ ತಾಲಿಬ್ ಸಿರಿಯಕ್ಕೆ ಹೊರಡುವ ಸಿದ್ಧತೆ ನಡೆಸುತ್ತಿದ್ದರು. ಅವರಿಗೆ ಅನಾಥ ಸೋದರ ಪುತ್ರನ ಮೇಲೆ ಅಪಾರ ಪ್ರೀತಿ-ಮಮತೆಯಿತ್ತು. ಆದರೆ ಈ ಯಾತ್ರೆಯಲ್ಲಿ ಸೋದರ ಪುತ್ರನನ್ನು ಕರೆದುಕೊಂಡು ಹೋಗುವುದು ಉಚಿತವಲ್ಲವೆಂದು ಅವರು ಭಾವಿಸಿದರು. ದೂರದೂರಿನ ದೀರ್ಘವಾದ ಪ್ರಯಾಣ... ಮೇಲಾಗಿ ಮಕ್ಕಳ ಮನರಂಜಿಸಬಲ್ಲಂಥ ಗಿಡ-ಮರಗಳು, ನದಿ-ಬೆಟ್ಟಗಳ ದೃಶ್ಯಗಳು ಈ ಯಾತ್ರೆಯಲ್ಲಿ ಕಾಣ ಸಿಗುವುದಿಲ್ಲ. ಕೇವಲ ಮರಳು ತುಂಬಿದ ಬಟಾ ಬಯಲು... ದೂರದೂರದ ತನಕ ಜನ ವಸತಿಯ ಸಣ್ಣ ಕುರುಹೂ ಇಲ್ಲ... ದಾರಿಯಲ್ಲೆಲ್ಲೂ ನೀರಿನ ಹನಿಯೂ ಕಾಣ ಸಿಗದು. ಅದರ ಜೊತೆಗೇ, ಅಬೂತಾಲಿಬ್‌ರನ್ನು ಇನ್ನೊಂದು ಗುಮಾನಿಯೂ ಕಾಡಿತ್ತು... ಸಿರಿಯದ ಪ್ರಯಾಣವು ಸಹೋದರ ಅಬ್ದುಲ್ಲಾನಿಗೇ ಅನುಕೂಲಕರ ವಾಗಿರಲಿಲ್ಲ. ಹಾಗಿರುತ್ತಾ, (ವೈರಿಗಳ ಬಾಯಿಗೆ ಮಣ್ಣು ಬೀಳಲಿ) ಬಾಲಕ ಮುಹಮ್ಮದ್‌ನಿಗೂ ಅಂತಹುದೇ ಸಂಕಷ್ಟ ಎದುರಾದರೆ! ಆಗಲೇ ವಿವಾಹಿತನಾಗಿದ್ದ ಅಬ್ದುಲ್ಲಾ ಕೂಡ ನವವಧುವನ್ನು ಬಿಟ್ಟು ಸಿರಿಯಕ್ಕೆ ಹೋಗುವಾಗ ಚೆನ್ನಾಗಿಯೇ ಇದ್ದರಲ್ಲವೇ? ಆದರೆ ಪರದೇಶದ ಹವೆಯೇ ಪ್ರತಿಕೂಲವಾಯಿತಲ್ಲ! ಮುಹಮ್ಮದ್‌ನಿಗೆ ಈಗಿನ್ನೂ ಮೀಸೆಯೇ ಮೊಳೆತಿಲ್ಲ... ಆದ್ದರಿಂದ

ಅನಾಥಮುತ್ತನ್ನು ಸಿರಿಯಕ್ಕೆ ಕರಕೊಂಡು ಹೋಗಲು ಅಬೂತಾಲಿಬ್‌ರ ಮನಸ್ಸು ಒಪ್ಪಲಿಲ್ಲ.

ಅವರು ಮನೆಯಿಂದ ವ್ಯಾಪಾರಕ್ಕಾಗಿ ಸರ್ವಸನ್ನದ್ಧರಾಗಿ ಹೊರಟು ನಿಂತಾಗ, ಮುಹಮ್ಮದ್ ಓಡೋಡಿ ಬಂದು ಚಿಕ್ಕಪ್ಪನಿಗೆ ಅಂಟಿಕೊಂಡರು. ಹೀಗೆ ಮಮತೆಯು ಇತರೆಲ್ಲ ಲೆಕ್ಕಾಚಾರಗಳನ್ನು ಮೆಟ್ಟಿ ನಿಂತಿತು. ಅನಾಥ ಮುತ್ತಿನ ಮುಖದಲ್ಲಿ ಕಳವಳವನ್ನು ನೋಡಲು ಚಿಕ್ಕಪ್ಪ ಎಲ್ಲಿ ತಯಾರಿದ್ದಾರೆ? ಎಳೆಯ ಪ್ರಯಾಣಿಕನನ್ನೂ ಒಟ್ಟಿಗೆ ಸೇರಿಸಿ ಹೊರಟರು...

ಅಬೂತಾಲಿಬ್‌ರ ಸಣ್ಣದಾದ ವ್ಯಾಪಾರಿ ತಂಡವು ಮಕ್ಕಾದಿಂದ ಸಿರಿಯದೆಡೆಗೆ ಸಾಗತೊಡಗಿತು. ದಾರಿಯುದ್ದಕ್ಕೂ ಸೋದರ ಪುತ್ರನನ್ನು ಸಂಭಾಳಿಸಬೇಕಾಗುತ್ತದೆಂದು ಅಬೂತಾಲಿಬ್ ಭಾವಿಸಿದ್ದರು. ಆದರೆ ಮುಹಮ್ಮದ್‌ರಾದರೋ ಸ್ವಯಂ ತನ್ನನ್ನು ಸಂಭಾಳಿಸಿದ್ದಷ್ಟೇ ಅಲ್ಲ, ಚಿಕ್ಕಪ್ಪನಿಗೂ ಸಹಾಯ ಮಾಡತೊಡಗಿದರು... ಅತ್ಯಂತ ಸೌಜನ್ಯ ಪೂರ್ವಕವಾಗಿ ಸೇವೆಯನ್ನು ಕರ್ತವ್ಯವೆಂದು ಭಾವಿಸಿ ವ್ಯವಹರಿಸಿದರು. ಈ ಸ್ನೇಹ ಪೂರ್ವಕ ಸೇವೆಯು ಅಬೂತಾಲಿಬ್‌ರಿಗೆ ಬಹಳ ಅನುಕೂಲಕರವಾಗಿ ಪರಿಣಮಿಸಿತು.

ಈ ಯಾತ್ರೆಯಲ್ಲಿ ವಿಭಿನ್ನ ಹಂತ, ಕಣಿವೆ ಮತ್ತು ರಸ್ತೆಗಳನ್ನು ದಾಟಲಿಕ್ಕಿತ್ತು. ಕೆಲವೆಡೆ ಎತ್ತ ನೋಡಿದರೂ ಮರಳುಗಾಡು, ಇನ್ನು ಕೆಲವೆಡೆ ಕಲ್ಲು-ಬಂಡೆಗಳ ಹಾದಿ ಮತ್ತು ಗುಡ್ಡ-ಬೆಟ್ಟಗಳ ಕಡಿದಾದ ರಸ್ತೆ, ಒಂದೆರಡು ಕಡೆ ಖರ್ಜೂರದ ತೋಟ ಮತ್ತು ಪಚ್ಚೆಪೈರು ಕಾಣಸಿಕ್ಕಿತ್ತು... ಒಂದೆಡೆ ಕೆರೆಯ ಬಳಿ ಬೆಳಗಾದರೆ, ಇನ್ನೊಂದೆಡೆ ಮರುಭೂಮಿಯಲ್ಲಿ ರಾತ್ರಿಯಾಗುತ್ತಿತ್ತು. ಮತ್ತೊಂದೆಡೆ ಆರಾಮದಾಯಕ ಯಾತ್ರೆಯಾದರೆ, ಮಗದೊಂದೆಡೆ ಬಹಳ ಕಠಿಣ ಪರಿಸ್ಥಿತಿ ಮತ್ತು ಸಂಕಷ್ಟದ ಯಾನ ನಡೆಸಬೇಕಾಗಿ ಬಂತು. ಅಬ್ದುಲ್ಲಾರ ಅನಾಥಮುತ್ತು ಇದೇ ಪ್ರಥಮವಾಗಿ ಹಿಜಾಝ್ ಪರಿಸರದಿಂದ ಹೊರಗಿನ ಯಾತ್ರೆ ಕೈಗೊಳ್ಳುತ್ತಿದ್ದಾರೆ. ದೀರ್ಘ ಮತ್ತು ಸಂಕಷ್ಟಮಯ ಪ್ರಯಾಣದಲ್ಲಿ ಯಾವಾಗಲೂ ಮಕ್ಕಳು ಹಿರಿಯರ ಪಾಲಿಗೆ ಒಂದು ಹೊರೆಯಾಗಿಯೇ ಪರಿಣಮಿಸುತ್ತಾರೆ. ಆದರೆ ಅನಾಥಮುತ್ತಿನ ಪ್ರಜ್ಞಾವಂತಿಕೆಯು ಸಹಯಾತ್ರಿಕರ ಮಟ್ಟಿಗೆ ಒಂದು ಪವಾಡಸದೃಶ ಸಮಾಧಾನವನ್ನು ತಂದುಕೊಟ್ಟಿತು.

ಬಸ್ರಾ ಸಿರಿಯದ ಪ್ರಮುಖ ಪಟ್ಟಣಗಳಲ್ಲಿ ಒಂದು. ಅದರ ಹತ್ತಿರದ ಒಂದು ಗ್ರಾಮದಲ್ಲಿ ಪುರಾತನ ಇಗರ್ಜಿಯೊಂದಿತ್ತು. ಪರಿಸರದ ಜನರೆಲ್ಲ ಅದನ್ನು ಪಾವನ ಗೃಹವೆಂದು ಭಾವಿಸುತ್ತಿದ್ದರು. ಆ ಇಗರ್ಜಿಯಲ್ಲಿಯೇ ಬಹೀರಾ ಎಂಬ ಕ್ರೈಸ್ತ ಸನ್ಯಾಸಿ ಇದ್ದರು. ಬಹೀರಾರಿಗೆ ಕ್ರೈಸ್ತರಲ್ಲಿ ಬಹಳ ಗೌರವ ಮತ್ತು ವಿಶೇಷ ಆದರವಿತ್ತು. ಯಹೂದಿಗಳಲ್ಲೂ ಅವರು ವಿದ್ವಾಂಸರ ಸ್ಥಾನಮಾನವನ್ನು ಹೊಂದಿದ್ದರು.

ಇಂಜೀಲ್ ಅಲ್ಲದೆ, ತೌರಾತ್‌ನ ಅಧ್ಯಯನವನ್ನೂ ಅವರು ಮಾಡಿದ್ದಾರೆ. ದೇವಗ್ರಂಥಗಳ ಅಧ್ಯಯನದಿಂದ ಮುಂಬರುವ ಪ್ರಕಾಶಕಿರಣ ಮತ್ತು ಆಗತವಾಗಲಿರುವ ಸತ್ಯ ಪ್ರವಾದಿಯ ಬಗ್ಗೆ ಚೆನ್ನಾಗಿ ಅರಿತುಕೊಂಡಿದ್ದರು.

ಅಬೂತಾಲಿಬ್‌ರು ಅದೇ ಇಗರ್ಜಿಯ ಹತ್ತಿರವೇ ತಮ್ಮ ಒಂಟೆಗಳನ್ನು ಕಟ್ಟಿ ಡೇರೆ

ಹಾಕಿದರು. ಚಿಕ್ಕಪ್ಪ ಮತ್ತು ಸೋದರ ಪುತ್ರ ಈರ್ವರೂ ಒಂದು ಮರದ ನೆರಳಲ್ಲಿ ಹುಲ್ಲು ಹಾಸಿನ ಮೇಲೆ ಪವಡಿಸಿದರು. ಬಹೀರ ಇಗರ್ಜಿಗೆ ಮರಳುತ್ತಿದ್ದಾಗ ಹತ್ತಿರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ವ್ಯಾಪಾರಿ ತಂಡವನ್ನು ಕಂಡು ಒಮ್ಮೆ ನಿಂತು ಬಿಟ್ಟರು. ಅವರ ಕಣ್ಣುಗಳು ಬಾಲಕ ಮುಹಮ್ಮದ್‌ರನ್ನೇ(ಸ) ತದೇಕ ಚಿತ್ತದಿಂದ ದಿಟ್ಟಿಸುತ್ತಿದ್ದುವು. ಆ ನೋಟ ದೊಂದಿಗೆ ಸ್ಮೃತಿ ಪಟಲದಲ್ಲಿ ಮೂಡುತ್ತಿದ್ದ ಚಿತ್ರಗಳೆಲ್ಲವೂ ತೇಲಿ ಬರತೊಡಗಿದವು.

ಅನಾಥಮುತ್ತು ಮೌನವಾಗಿದ್ದರು. ಅವರನ್ನು ದಿಟ್ಟಿಸುತ್ತಿದ್ದ ಬಹೀರಾ ಮೆಲ್ಲನೆ ಹತ್ತಿರಕ್ಕೆ ಸರಿದರು. ಅವರ ವೃದ್ಧ ಕಂಗಳಲ್ಲಿ ಸಂತೋಷದ ಮಿಂಚು ಹರಿಯಿತು. ಸುದೀರ್ಘ ಸಮಯ ಕಾತರದಿಂದ ಕಾಯುತ್ತಿದ್ದ ವಾಸ್ತವದ ಬೆಳಕು ದೃಷ್ಟಿ ಗೋಚರ ವಾದಂತೆ ಭಾಸವಾಯಿತು. ತಮ್ಮ ಎಲ್ಲ ಸ್ಥಾನಮಾನವನ್ನು ಮರೆತು ನೆಲದಲ್ಲಿ ಕೂತು ಹೇಳಿದರು, "ನಾನು ಬಹಳ ವರ್ಷ ತೌರಾತ್ ಮತ್ತು ಇಂಜೀಲ್‌ಗಳ ಅಧ್ಯಯನ ನಡೆಸಿದ್ದೇನೆ. ಅದರಲ್ಲಿ ನಾನು ಕಂಡುಕೊಂಡ ಜ್ಞಾನದ ಆಧಾರದಲ್ಲಿ ಸತ್ಯಪ್ರಕಾಶ ಉದಯ ವಾಗಲಿದೆ ಎಂದು ತಿಳಿದಿದ್ದೇನೆ. ಅದರ ಎಲ್ಲ ಲಕ್ಷಣಗಳನ್ನು ನಾನು ಈ ಬಾಲಕನಲ್ಲಿ ಕಾಣುತ್ತಿದ್ದೇನೆ. ಈತನಿಗೆ ಪ್ರವಾದಿತ್ವ ದೊರೆಯುವುದಕ್ಕೆ ಮುಂಚೆಯೇ ನಾನು ಅದನ್ನು ಈಗಲೇ ದೃಢಪಡಿಸುತ್ತಿದ್ದೇನೆ. ಏಕೆಂದರೆ ಆ ಕಾಲದ ವರೆಗೆ ನಾನು ಬದುಕಿರುವೆನೋ ಇಲ್ಲವೋ ತಿಳಿಯದು."

ಕ್ರೈಸ್ತ ಇತಿಹಾಸಕಾರರು ತಮ್ಮ ಸಾಂಪ್ರದಾಯಿಕ ಇಸ್ಲಾಮ್ ವಿರೋಧಿ ಧೋರಣೆ ಯಿಂದಾಗಿ ಪ್ರಸ್ತುತ ಘಟನೆಯನ್ನು ತಿರುಚಿ ಬರೆದಿದ್ದಾರೆ. ಸುಳ್ಳು ಮತ್ತು ಕಪೋಲ ಕಲ್ಪಿತ ವರದಿಗಳನ್ನೇಸತ್ಯವೆಂಬಂತೆ ಬಿಂಬಿಸಿದ್ದಾರೆ. ಪಾಶ್ಚಾತ್ಯ ಇತಿಹಾಸಕಾರರ ಈ ಪಕ್ಷಪಾತ ಮತ್ತು ಮೋಸ-ವಂಚನೆಯ ಕಾರಣದಿಂದಾಗಿಯೇ ಇಸ್ಲಾಮಿನ ನೈಜ ಚಿತ್ರಣವು ಯುರೋಪಿಯನ್ನರ ಮುಂದೆ ಅನಾವರಣಗೊಂಡಿರಲಿಲ್ಲ. ಅವರು ತಮ್ಮದೇ ಇತಿಹಾಸಜ್ಞರ ಮಾತುಗಳನ್ನು ಚಾಚೂ ತಪ್ಪದೆ ನಂಬಿದರು ಮತ್ತು ಆ ಕೆಟ್ಟು ಹೋದ ಬಾವಿಯಿಂದ ಹೊರಗಿನ ಪ್ರಪಂಚವನ್ನು ನೋಡುವ ಗೋಜಿಗೇ ಹೋಗಿರಲಿಲ್ಲ. ಪರಿಣಾಮವಾಗಿ ಅವರ ಸಮಾಜದಲ್ಲಿ ಇಸ್ಲಾಮ್ ಮತ್ತು ದೇವ ಸಂದೇಶವಾಹಕರ(ಸ) ಕುರಿತಾಗಿ ಸುಳ್ಳು ಮತ್ತು ಅಸಂಬದ್ಧ ವಿಷಯಗಳೇ ಪ್ರಚಲಿತಗೊಂಡವು. ಇಂದಿಗೂ ಆ ವಿಷವು ಯುರೋಪಿಯನ್ನರ ನರನಾಡಿಗಳಲ್ಲಿ ರಕ್ತದೊಂದಿಗೇ ಸಂಚರಿಸುತ್ತಲಿದೆ.

❖ ❖ ❖ ❖

ಹಲವು ತಿಂಗಳುಗಳು ಕಳೆದ ಬಳಿಕ ಅಬೂತಾಲಿಬ್‌ರು ತಮ್ಮ ಎಳೆಯ ಸಹಯಾತ್ರಿಕನೊಂದಿಗೆ ಮಕ್ಕಾ ನಗರಕ್ಕೆ ಮರಳಿದರು. ಇಷ್ಟು ದೀರ್ಘ ಮತ್ತು ಕ್ಲಿಷ್ಟಕರ ಯಾತ್ರೆಯಿಂದ ಕ್ಷೇಮವಾಗಿ ಮರಳಿದ ಕಾರಣ ಬಂಧುಮಿತ್ರರಲ್ಲಿ ಸಂತೋಷದ ಮಿಂಚು ಹರಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅಬೂತಾಲಿಬ್‌ರ ಬಹಳ ದಿನಗಳಂತೂ ಜನರ ಭೇಟಿ ಮತ್ತು ಯಾತ್ರಾನುಭವವನ್ನು ವಿವರಿಸುವುದರಲ್ಲೇ ಕಳೆದು ಹೋದವು.

ಭೇಟಿಯಾಗಲು ಬರುವವರ ಪೈಕಿ ಒಬ್ಬೊಬ್ಬರು ಒಂದೊಂದು ರೀತಿಯ ಪ್ರಶ್ನೆ ಗಳನ್ನು ಹೊತ್ತು ತರುತ್ತಿದ್ದರು.

"ಸಿರಿಯದ ಗಡಿ ತಲುಪುವುದಕ್ಕೆ ಮೂರು ದಿನ ಮುಂಚೆ ಒಂದು ಕೆರೆ ಸಿಗುತ್ತದಲ್ಲ. ಅದು ಈಗಲೂ ಹಾಗೆಯೇ ಉಂಟಾ ಅಥವಾ ಬತ್ತಿದೆಯಾ?"

"ಅಬೂತಾಲಿಬ್, ನನ್ನ ಒಂಟೆಯು ಉರ್ರೈಝುದ ಕಣಿವೆಯಲ್ಲಿ ಕಳೆದುಹೋಗಿತ್ತು. ಎಲ್ಲಾದರೂ ಆ ಪರಿಸರದಲ್ಲಿ ಒಂಟೆಯು ಅಲೆದಾಡುತ್ತಿದ್ದುದನ್ನು ಕಂಡಿದ್ದೀರಾ?"

ಒಬ್ಬರು ಕುರಿಯ ಉಣ್ಣೆಯ ಬೆಲೆಯನ್ನು ವಿಚಾರಿಸಿ ದರು. ಇನ್ನೊಬ್ಬರು ಸಿರಿಯಾದ ಮಾರುಕಟ್ಟೆಯ ಸ್ಥಿತಿಗತಿಯನ್ನು ಕೇಳಿದರು. ಮತ್ತೊಬ್ಬ ಹೇಳಿದ, "ಮುಂದಿನ ಬಾರಿ ನೀವು ಸಿರಿಯಕ್ಕೆ ಹೊರಡುವಾಗ ಒಂದು ಒಂಟೆಯಲ್ಲಿ ಆಹಾರಧಾನ್ಯಗಳನ್ನು ಹೇರಿ ಕಳುಹಿಸುವೆನು. ನಿಮ್ಮ ಪ್ರಯತ್ನ ಮತ್ತು ಕೌಶಲ್ಯದಿಂದ ಉತ್ತಮ ಬೆಲೆಗೆ ಮಾರಾಟವಾದೀತು."

ಅಬೂತಾಲಿಬ್, ಹಸನ್ಮುಖಿ ಮತ್ತು ವಿಶಾಲ ಹೃದಯಿಯಾಗಿದ್ದರು. ಎಲ್ಲರ ಪ್ರಶ್ನೆಗಳಿಗೂ ಸಮಾಧಾನದಿಂದ ಉತ್ತರ ನೀಡುತ್ತಿದ್ದರು. ಒಂದು ಕ್ಷಣಕ್ಕೂ ಕಟುವಾದ ಉತ್ತರ ನೀಡಲುದ್ಯುಕ್ತರಾಗಿರಲಿಲ್ಲ. ಇತರ ಸರದಾರರಾಗಿದ್ದರೆ, ಯಾವಾಗಲೋ ಕೋಪಿಸಿ ಕೊಳ್ಳುತ್ತಿದ್ದರು.

ಜಗತ್ತು, ಕಣ್ಣು ಮಿಟುಕಿಸುವುದರಲ್ಲಿ ಎಲ್ಲಿಂದೆಲ್ಲಿಗೋ ಸಾಗಿ ಬಿಟ್ಟಿರುತ್ತದೆ. ಕಾಲದ ವೇಗವು ಬಹುಶಃ ಬೆಳಕಿನ ವೇಗಕ್ಕಿಂತಲೂ ಹೆಚ್ಚು ಗತಿಶೀಲವಾದದ್ದು. ಇತ್ತ ದಿನ ಬೆಳಗಾದಂತೆಯೇ ಸೂರ್ಯ ನೆತ್ತಿಗೇರಿ ಮಧ್ಯಾಹ್ನವಾಗುತ್ತದೆ... ಹಾಗೆಯೇ ಅಸ್ತಮಾನ ದೊಂದಿಗೆ ಮಬ್ಬುಗತ್ತಲು ಆವರಿಸಿ ಬಿಡುತ್ತದೆ... ಅದರ ಬೆನ್ನಿಗೇ ಗಾಢಾಂಧಕಾರದ ರಾತ್ರಿಯು ತನ್ನೆಲ್ಲ ಸೌಂದರ್ಯದೊಂದಿಗೆ ಆವರಿಸಿ, ಬಳಿಕ ಮತ್ತದೇ ಪ್ರಭಾತದ ಬೆಳ್ಳಿ ರೇಖೆಯೆಡೆಗೆ ಸಾಗುತ್ತದೆ... ಪುನಃ ಸೂರ್ಯನ ಉದಯಾಸ್ತಮಾನ ಪ್ರಕ್ರಿಯೆ ಮುಂದುವರಿಯುತ್ತದೆ.

ಸೃಷ್ಟಿ ರಹಸ್ಯ ನಗುತಿದೆ, ಭೇದಿಸುವವರಾರು?

ಬೆಳಗು-ಬೈಗುಗಳ ಪರಿಭ್ರಮಣವ ತಡೆಯುವವರಾರು?

ಈ ಉದಯಾಸ್ತ ಮತ್ತು ಬಿಸಿಲು-ನೆರಳ ಕಣ್ಣಾ ಮುಚ್ಚಾಲೆಯಾಟದ ನಡುವೆಯೇ ಮಾನವನು ಶಿಶುವಿನಿಂದ ಬಾಲಕ, ಬಾಲಕನಿಂದ ಯುವಕ, ಯುವಕನಿಂದ ಮುದುಕನಾಗಿ ಪರಿವರ್ತಿತನಾಗುತ್ತಾನೆ. ಹಾಗೆ ನೋಡಿದರೆ ಒಂದು ತಿಂಗಳ ಅವಧಿಯೂ ಬಹಳವೆನಿಸುತ್ತದೆ. ಆದರೆ ವಾಸ್ತವದಲ್ಲಿ ವರ್ಷಗಳು, ಯುಗಗಳು ಸಮಯದ ಓಟದೊಂದಿಗೇ ಕಳೆದು ಹೋಗುತ್ತವೆ. ಬಹಳ ಕಡಿಮೆ ಮಂದಿ ಮಾತ್ರವೇ ಕಾಲದ ಗತಿಯನ್ನು ಅರಿಯುವ ಜ್ಞಾನವನ್ನು ಹೊಂದುತ್ತಾರೆ. ಮಾತಾಪಿತರು ತಮ್ಮ ಮಕ್ಕಳು ಬೆಳೆಯುವುದನ್ನು ಕಂಡು ಸಂತಸಪಡುತ್ತಾರೆ. ವಾಸ್ತವದಲ್ಲಿ ಜೀವನದ ಪ್ರತಿಯೊಂದು ಕ್ಷಣವೂ ಮುಂದೆ ಸಾಗುತ್ತಿದ್ದಂತೆಯೇ ಮಾನವನನ್ನು ಮರಣಕ್ಕೆ ನಿಕಟಗೊಳಿಸುತ್ತಿರುತ್ತದೆ. ಜೀವಕ್ಕೆ ಅನಿವಾರ್ಯವಾದ ಶ್ವಾಸವು ಜೀವನವನ್ನು

ಮರಣದೆಡೆಗೆ ಕೊಂಡೊಯ್ಯುತ್ತಿರುತ್ತದೆ. ಈ ಹುಟ್ಟುಹಬ್ಬಾಚರಣೆ ಮತ್ತು ಸಂತೋಷ ಕೂಟಗಳೆಲ್ಲವೂ ವಾಸ್ತವದಲ್ಲಿ ಮರಣವನ್ನು ಸ್ವಾಗತಿಸುವ ಪ್ರಕ್ರಿಯೆಗಳಾಗಿವೆ. ಮಾನವನು ತನ್ನೆಲ್ಲ ಪ್ರಜ್ಞೆ, ಅರಿವಿನ ಹೊರತಾಗಿಯೂ ಎಂತೆಂತಹ ಮೋಸದ ಬಲೆಯಲ್ಲಿ ಬಿದ್ದು ಬಿಡುತ್ತಾನೆ!

ಮಾನವ ಸಹಜಗುಣವು ಎಲ್ಲವನ್ನೂ ಮರೆಸುತ್ತದೆ.

ಅನ್ಯಥಾ ಒಂದೊಂದು ಶ್ವಾಸವೂ ಮರಣವ ನೆನಪಿಸುತ್ತದೆ.

ಅದೇನಿದ್ದರೂ ಜೀವನದ ಬೆಳವಣಿಗೆಯೆನ್ನಿ, ಮರಣದೆಡೆಗಿನ ಪಯಣವೆನ್ನಿ; ಪ್ರಕೃತಿಯು ಬಾಲಕನನ್ನು ಯುವಕನಾಗಿಯೂ ಯುವಕನನ್ನು ಮುದುಕನಾಗಿಯೂ ಮಾರ್ಪಡಿಸುತ್ತಲೇ ಇರುತ್ತದೆ. ವಿಶ್ವ ವ್ಯವಸ್ಥೆಯೂ ಅದರ ಆಧಾರದಲ್ಲೇ ಕಾರ್ಯಾಚರಿಸುತ್ತಲಿದೆ.

ಅನುಪಮ ಸೌಂದರ್ಯ

ಪ್ರಕೃತಿ ನಿಯಮದಂತೆ ಅಬ್ದುಲ್ಲಾರ ಅನಾಥಮುತ್ತು ಯೌವನಕ್ಕೆ ಕಾಲಿಟ್ಟರು. ದೈಹಿಕವಾಗಿ ಅತ್ಯಂತ ಆರೋಗ್ಯವಂತರಾಗಿದ್ದರು. ಕಟ್ಟುಮಸ್ತಾದ ಅಂಗರಚನೆ, ಅನುಪಮ ಸೌಂದರ್ಯದ ಜೀವಂತ ಉದಾಹರಣೆಯಾಗಿದ್ದರು. ಕೆಂಪು ಮಿಶ್ರಿತ ಗೌರವರ್ಣ, ಮನಸೂರೆ ಗೊಳಿಸುವ ಸುಂದರ ಕಪ್ಪು ಕಂಗಳು, ಅಗಲ ಹಣೆ, ಮಧ್ಯಮ ಎತ್ತರ... ಒಟ್ಟಿನಲ್ಲಿ ಸೌಂದರ್ಯದ ಸೋಪಾನ ಹಾಗೂ ಮೋಹಕತೆಯ ಪರಾಕಾಷ್ಠೆ ಎನ್ನಬಹುದಾದಂತಹ ರೂಪ. ಯಾರಾದರೊಬ್ಬರ ಮೈಕಟ್ಟಿನ ಕುರಿತು ಹೆಚ್ಚೆಂದರೆ, ಅತಿ ಸುಂದರ ಕಾಯ ಎನ್ನಬಹುದಷ್ಟೇ. ಆದರೆ ಮುಹಮ್ಮದ್‌ರ ಪರಿಪೂರ್ಣ ಕಾಯವು ಯಾವುದೇ ಉಪಮೆಗೆ ನಿಲುಕದಂತಹುದು.

ಎಂಥ ರೂಪ ಅವರದು ಬಲ್ಲಿರೇನು?

ಅವರಿಗೆ ಸಾಟಿಯಾಗಿ ಅವರೇ ಅಲ್ಲವೇನು?

ದಾಸವಾಳ-ಕೆಂಗುಲಾಬಿ, ಜಾಜಿ-ಮಲ್ಲಿಗೆ-ಸುಗಂಧಿ-ಶ್ವೇತ ಗುಲಾಬಿ, ಸುಗಂಧ ಹುಲ್ಲು-ನರ್ಗಿಸ್ ಹೂ,* ಸೂರ್ಯ, ಚಂದ್ರ, ಯಮನಿನ ಕೆಂಪು ರತ್ನ, ಈಡನ್ನಿನ ಅಮೂಲ್ಯ ಮುತ್ತು, ತಾರ್ತಾರಿ ಕಸ್ತೂರಿ, ಪನ್ನಂಬರ, ಮುಂಜಾವಿನ ಮಂಜುಹನಿ, ಅರೆಬಿರಿದ ಮೊಗ್ಗು ಇವೆಲ್ಲವೂ ಮಾನವರ ಸೌಂದರ್ಯ ಕುರಿತಾದಂತಹ ವಿಶೇಷಣಗಳಾಗಿವೆ. ಆದರೆ ಮುಹಮ್ಮದ್‌ರ ಸೌಂದರ್ಯದ ವರ್ಣನೆಗೆ ಈ ಎಲ್ಲ ವಿಶೇಷಣಗಳು... ಅಪೂರ್ಣವಾಗಿವೆ ಮತ್ತು ಅವರ ರೂಪಕ್ಕೆ ಹೋಲಿಕೆಯಾಗದಂತಹವುಗಳಾಗಿವೆ.

ಮುಸ್ತಫಾರ ಮುಖಾರವಿಂದ
ಪರಿಪೂರ್ಣ ದರ್ಪಣವೇ ಸರಿ
ಇಲ್ಲವದಕೆ ಸಾಟಿ ನಮ್ಮ ನಿಮ್ಮ
ಸ್ವಪ್ನ ಕಲ್ಪನೆಯೂ ಸೇರಿ.

ಕಾವ್ಯ ಲಹರಿ, ಕಲಾ ಸಾಹಿತ್ಯವೆಲ್ಲದರ ರಾಗ-ಲಯ-ತಾಳ ಸೌಂದರ್ಯ ಅಂತ್ಯಗೊಳ್ಳುವೆಡೆಯಿಂದ ಮುಹಮ್ಮದ್‌ರ ಸೌಂದರ್ಯ ವಿಶೇಷತೆಯ ಆರಂಭವಾಗುತ್ತದೆ.

* ಒಂದು ಸುಗಂಧ ಮರದ ಹೂ. ಅದರ ಆಕಾರ ಮಾನವರ ಕಣ್ಣಿನಂತಿದೆ. (ಅನು)

ಮುಹಮ್ಮದ್! ಅವರಿಗೆ ಅವರೆ ಸಾಟಿಯಾಗಿದ್ದಾರೆ.

ಉಭಯ ಲೋಕದ ಕನ್ನಡಿ ಹಿಡಿದು ತಂದೆ

ನಿಮಗೆ ಉಪಮೆ ನೀವೇ ಸರಿ ಎಂದೆ

ಪ್ರಕೃತಿಯು ಮುಹಮ್ಮದ್‌ರನ್ನು 'ಪರಿಪೂರ್ಣ ಮಾನವ'ನನ್ನಾಗಿ ಮಾಡಿದೆ. ಅದಕ್ಕಾಗಿ ಅಂತರ್ಯ ಮಾತ್ರವಲ್ಲ, ಬಾಹ್ಯವೂ ಸುಂದರವಾಗಿರಬೇಕಾದುದು ಪ್ರಾಕೃತಿಕ ಬೇಡಿಕೆಯಾಗಿದೆ. ಅಂದರೆ, ಚಾರಿತ್ರ್ಯ ಅತ್ಯುತ್ತಮವಿರುವಂತೆಯೇ ದೈಹಿಕ ಸೌಂದರ್ಯವೂ ಅದರಂತೆಯೇ ಇರಬೇಕಾಗುತ್ತದೆ. ಮನಸ್ಸಿನಿಂದ ದೃಷ್ಟಿಯ ತನಕ, ಆತ್ಮದಿಂದ ದೇಹದ ತನಕ ಮತ್ತು ಅಡಿಯಿಂದ ಮುಡಿ ತನಕ ಅನುಪಮ ಸೌಂದರ್ಯ, ಅತ್ಯುಚ್ಛ ಪರಿಶುದ್ಧತೆ, ಅನುಗ್ರಹೀತ ಚಿತ್ತಾಕರ್ಷಣೆ ಇರಬೇಕಾದುದು ಅನಿವಾರ್ಯವಲ್ಲವೇ? ಏಕೆಂದರೆ,

ತುಂಬಿದ ಸಭೆಯಲ್ಲಿ ಜ್ಞಾನ ಚಕ್ಷುಗಳಿರುತ್ತಾರೆ

ಬಹುಸಂಖ್ಯೆಯಲ್ಲಿ ಪ್ರೇಕ್ಷಕರೂ ಇರುತ್ತಾರೆ.

ಪರಿಪೂರ್ಣ ಮಾನವರು ಚಾರಿತ್ರ್ಯ-ಸೌಂದರ್ಯ, ರೂಪ-ಆತ್ಮ ಮತ್ತು ಅಂತರ್ಯ-ಬಾಹ್ಯ ದೃಷ್ಟಿಯಲ್ಲಿ ಅಂತಿಮ ಮಾನದಂಡವಾಗಬೇಕಾಗುತ್ತದೆ. ಮುಹಮ್ಮದ್, ಆ ನಿಟ್ಟಿನಲ್ಲಿ ಸರಿಯಾದ ಉಪಮೆಯಾಗಿದ್ದಾರೆ.

ಅನಾಥ ಮುತ್ತು ಯೌವನಾವಸ್ಥೆ ಕಳೆದು ವೃದ್ಧಾಪ್ಯದ ಹೊಸ್ತಿಲಲ್ಲಿದ್ದ ಸಂದರ್ಭ. ಒಮ್ಮೆ, ಜಾಬಿರ್ ಬಿನ್ ಸಮ್ರಃ ಎಂಬ ಸಹಾಬಿಯು ಅವರನ್ನು ಕೆಂಬಣ್ಣದ ಜುಬ್ಬ ಧರಿಸಿದ್ದ ಅವಸ್ಥೆಯಲ್ಲಿ ಕಂಡರು. ಅದು ಬೆಳದಿಂಗಳ ರಾತ್ರಿಯಾಗಿತ್ತು. ಆಗಸದಲ್ಲಿ ಚಂದ್ರ ಸಂಪೂರ್ಣ ಪ್ರಕಾಶವನ್ನು ಹರಡಿಕೊಂಡಿತ್ತು. ಜಾಬಿರ್, ಬಹಳ ಹೊತ್ತು ಅರೇಬಿಯಾದ ಚಂದ್ರದ ಮುಂದೆ ಹುಣ್ಣಿಮೆ ಚಂದ್ರನನ್ನು ಹೋಲಿಸಿ ನೋಡಿದರು. ಕೊನೆಗೆ ಅವರಿಗನ್ನಿಸಿದ್ದನ್ನು ನಾಲಗೆಯು ಉಚ್ಚರಿಸಿತು, "ಈ ವೃದ್ಧಿಸುವ ಮತ್ತು ಕ್ಷಯಿಸುವ ಚಂದ್ರವು ಮುಹಮ್ಮದ್‌ರ ಪರಿಪೂರ್ಣ ಸೌಂದರ್ಯಕ್ಕೆ ಎಂದಿಗೂ ಸಾಟಿಯಾಗಲಾರದು."

ಬೆಳದಿಂಗಳೂ ಹರಡಿದೆ, ಹೂದೋಟವೂ ಎದ್ದು ನಿಂತಿದೆ!

ನಿಮ್ಮ ಪ್ರಕಾಶಮಾನತೆಯೆದುರು ಯಾವ ದೀಪ ನಿಂತಿದೆ?

ಅಲ್ಲಾಮಾ ಇಕ್ಬಾಲರಿಂದ 'ಮಜ್‌ದೂಬೆ ಫಿರಂಗಿ' (ಉನ್ಮತ್ತ ಆಂಗ್ಲೇಯ) ಎಂದು ಕರೆಯಲ್ಪಟ್ಟಿದ್ದ ಪ್ರಖ್ಯಾತ ಜರ್ಮನ್(ಅಲ್ಮಾನಿಯನ್) ಕವಿ ನೇಸ್ಟೆಯು ತನ್ನ ಇಡೀ ಜೀವನ 'ಪರಿಪೂರ್ಣ ಮಾನವ'ನ ಹುಡುಕಾಟದಲ್ಲಿಯೇ ಕಳೆದಿದ್ದನು. ಆ 'ಪರಿಪೂರ್ಣ ಮಾನವ'ನ ಜನ್ಮ ಯಾವಾಗಲೋ ಆಗಿ ಹೋಗಿದೆಯೆಂದೂ ಪ್ರಕೃತಿಯ ಚಿತ್ರಕಾರನು, ಆ ಮಹಾನ್ ಕಲೆಯನ್ನು ತನ್ನೆಲ್ಲ ಕೈ ಚಳಕ, ಚೆಲುವು ಮತ್ತು ಕಲಾ ಕೌಶಲ್ಯವನ್ನು ಬಳಸಿ ರಚಿಸಿದ್ದಾನೆ ಎಂದೂ ಯಾರಾದರೂ ನೇಸ್ಟೆಗೆ ಹೇಳುತ್ತಿದ್ದರೆ! ಈ ಲೋಕದಲ್ಲಿ ಯುಗಯುಗಾಂತರಗಳಿಂದ

ಮಾನವ ಜನ್ಮ ತಳೆಯುತ್ತಿದ್ದಾನೆ ಮತ್ತು ಜನನ ಪ್ರಕ್ರಿಯೆ ಮುಂದುವರಿಯುತ್ತಲೂ ಇದೆ. ಆದರೆ 'ಪರಿಪೂರ್ಣ ಮಾನವ' ಅಂತ ಒಬ್ಬರೇ ಹುಟ್ಟಿ ಬಂದಿದ್ದಾರೆ. ವಿಶಿಷ್ಟ ಸೌಂದರ್ಯ ಮತ್ತು ಉನ್ನತ ಚಾತುರ್ಯವು ಅವರೊಂದಿಗೆ ಪರಿಪೂರ್ಣ ಗೊಂಡಿತ್ತು. ಇನ್ನು ಜಗತ್ತಿನಲ್ಲಿ ಯಾರಿಗಾದರೂ ಔನ್ನತ್ಯ ಮತ್ತು ಪ್ರಗತಿ ಸಿಗುವುದಿದ್ದರೂ ಇದೇ 'ಪರಿಪೂರ್ಣ ಮಾನವ' ಮತ್ತು ಸತ್ಯದ ವಾಹಕರ ಚಾರಿತ್ರ್ಯದ ಹೆಜ್ಜೆ ಗುರುತುಗಳಲ್ಲಿ ನಡೆದರೆ ಮಾತ್ರ ಸಿಗುವುದು.

ಅಜ್ಞಾನದ ದಿಗಂತದಲ್ಲಿ

ಮುಹಮ್ಮದ್ ಬಿನ್ ಅಬ್ದುಲ್ಲಾ ಹರೆಯಕ್ಕೆ ಕಾಲಿರಿಸಿದ ಕಾಲ. ಜಗತ್ತಿನಾದ್ಯಂತ ಕೆಡುಕು, ಹೊಲಸು, ಉಚ್ಚ-ನೀಚತೆ, ಅನೈತಿಕತೆ ಮತ್ತು ದೇವ ನಿರ್ಭಯತೆ ವ್ಯಾಪಕ ವಾಗಿತ್ತು. ಜ್ಞಾನ, ಧ್ಯಾನ, ವೇದಾಂತದ ಸುಂದರ ದೀಪ ಹೊತ್ತಿದ್ದಂತಹ ಭಾರತ ಉಪಭೂಖಂಡದಲ್ಲಿ ಹಾವು, ಅರಳಿ ಮರ, ಗೋಳಿ ಮರಗಳ ಆರಾಧನೆ ನಡೆಯುತ್ತಿತ್ತು. ಚೀನವು ಕನ್‌ಫ್ಯೂಶಿಯಸ್‌ನ ಊಹನಾಧಾರಿತ ತತ್ವಶಾಸ್ತ್ರದಲ್ಲಿಯೇ ಸಿಕ್ಕಿಹಾಕಿಕೊಂಡಿತ್ತು. ಈಜಿಪ್ಟ್ ಮತ್ತು ಗ್ರೀಸ್‌ಗಳಲ್ಲಿ ದೇವತೆಯರು ಹಾಗೂ ದೇವಚರರನ್ನು ಅಲ್ಲಾಹನಿಗೆ ಸಹಭಾಗಿಗಳೆಂದು ಭಾವಿಸಲಾಗುತ್ತಿತ್ತು. ಹಾಗೆಯೇ ಪಾಶ್ಚಾತ್ಯರು ಅಜ್ಞಾನಾಂಧಕಾರದಲ್ಲಿ ಮುಳುಗಿದ್ದರು. ಮಾತ್ರವಲ್ಲ, ಅರೆ ಪಾಶವೀಯತೆ ತುಂಬಿದ ಜೀವನ ಸಾಗಿಸುತ್ತಿದ್ದರು.

ಅರೇಬಿಯದ ಸ್ಥಿತಿಯೂ ಅಷ್ಟೇ. ಅಲ್ಲಾಹನ ಇಷ್ಟಾಮಿತ್ರ ಪ್ರವಾದಿ ಇಬ್ರಾಹೀಮ್ ರವರು(ಅ) ತಮ್ಮ ಆಜ್ಞಾನುಸಾರಿ, ವಿನೀತ ಪುತ್ರ ಪ್ರವಾದಿ ಇಸ್ಮಾಈಲ್‌ರೊಡಗೂಡಿ(ಅ) ಏಕದೇವನ ಆರಾಧನೆಗಾಗಿ ಪವಿತ್ರ ಗೇಹವನ್ನು ನಿರ್ಮಿಸಿದ್ದರು. ಆ ಮೂಲಕ ಏಕದೇವತ್ವದ ಘೋಷಣೆಯನ್ನು ನಾಲ್ದೆಸೆಗೂ ಹರಡಿದ್ದರು. ಅಂತಹ ಪವಿತ್ರ ಗೃಹದಲ್ಲಿ ನಂತರದ ದಿನಗಳಲ್ಲಿ ಕಲ್ಲಿನಿಂದ ಕೆತ್ತಲಾದ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಯಿತು. ಇಲ್ಲಿಯ ವರೆಗೆ ತಲಪುವಾಗ, ಅರಬ್ ಇತಿಹಾಸದ ಒಂದು ಹಿನ್ನೆಲೆಯ ಘಟನಾವಳಿಗಳನ್ನು ಕಾಗದದಲ್ಲಿ ನಮೂದಿಸಲು ಲೇಖನಿಯು ಹಾತೊರೆಯುತ್ತಿದೆ...

ಪ್ರವಾದಿ ಇಸ್ಮಾಈಲ್‌ರು(ಅ), ಮಕ್ಕಾದಲ್ಲಿ ಬಂದು ನೆಲೆಸಿದ ಬನೂ ಜುರ್ಹುಮ್ ಗೋತ್ರದವರೊಡನೆ ನೆಂಟಸ್ತಿಕೆ ಬೆಳೆಸಿದರು. ತರುವಾಯ ಅವರ(ಅ) ಸಂಬಂಧಿಕರು ಕಅಬಾಲಯದ ಮೇಲ್ವಿಚಾರಕರಾದರು. ಬಹಳ ಕಾಲದ ತನಕ ಅವರು ಈ ಗೌರವಾನ್ವಿತ ಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಆದರೆ ಕ್ರಮೇಣ, ಕಾಲದ ಹೊಡೆತಕ್ಕೆ ಹಲವಾರು ಬದಲಾವಣೆಗಳುಂಟಾದವು. ಪರಿಸ್ಥಿತಿಗಳು ಪಲ್ಲಟಗೊಂಡವು, ಕಅಬಾದ ಇತಿಹಾಸವು ಗತ ಪುಟಗಳನ್ನು ಮಡಚಿಬಿಟ್ಟಿತು. ಮಕ್ಕಾದ ಓರ್ವ ನಿವಾಸಿ ರಬೀಅ (ಆತನನ್ನು ಇತಿಹಾಸದಲ್ಲಿ ಅಮ್ರ್ ಬಿನ್ ಹಯ್ಯ್ ಎಂದು ಗುರುತಿಸಲಾಗುತ್ತದೆ) ಎಂಬಾತನು ಪ್ರಭಾವ ಬೀರತೊಡಗಿದನು.

ಆತ ಶ್ರೀಮಂತನಾಗಿದ್ದ ಕಾರಣ, ಹಲವಾರು ಹಿಂಬಾಲಕರನ್ನು ಸಂಪಾದಿಸಿದ್ದನು. ತನ್ನ ಮನೆತನದವರಲ್ಲದೆ, ಇತರ ಗೋತ್ರದ ಮಂದಿಯನ್ನೂ ಆತ ತನ್ನೊಡನೆ ಸೇರಿಸಿಕೊಂಡಿದ್ದನು. ಹೀಗೆ ಆತ ಬನೂಜುರ್ಹುಮ್ ಗೋತ್ರದ ವಿರುದ್ಧ ಸಮರ ಸನ್ನಾಹ ನಡೆಸತೊಡಗಿದನು.

ಬನೂ ಜುರ್ಹುಮ್ ಗೋತ್ರದವರಿಗೆ ಈ ಎಲ್ಲ ಸಂಚಿನ ಬಗ್ಗೆ ಅರಿವಿದ್ದಿರಲಿಲ್ಲ. ಹಾಗಾಗಿ ಅವರ ಮೇಲೆ ಏಕಾಏಕಿ ಆಕ್ರಮಣ ನಡೆದಾಗ, ಅವರಿಗೆ ಕಾಲಡಿಯ ನೆಲವು ಬಿರಿದಂತಹ ಅನುಭವವಾಯಿತು. ಅವರನ್ನು ಕಅಬಾ ಪರಿಸರದಿಂದ ಹೊರದಬ್ಬಲಾಯಿತು. ಹೀಗೆ ಜುರ್ಹುಮ್‌ರ ಸಂತಾನದಿಂದ ಈ ಉನ್ನತ ಪದವಿಯನ್ನು ಅಮ್ರ್ ಬಿನ್ ಹಯ್ಯ್ ಕಸಿದು ಸ್ವಯಂ ಕಅಬಾಲಯದ ಮೇಲ್ವಿಚಾರಕನೆಂದು ಘೋಷಿಸಿದನು. ತರುವಾಯ ಧಾರ್ಮಿಕ ನೇತೃತ್ವವೂ ಅವನಿಗೇ ಪ್ರಾಪ್ತವಾಯಿತು.

ಮಕ್ಕಾ ನಿವಾಸಿಗಳ ಮಟ್ಟಿಗೆ ಸಿರಿಯಾ ದೇಶವು ವ್ಯಾಪಾರ ಕೇಂದ್ರವಾಗಿತ್ತು. ಮಕ್ಕಾದಿಂದ ವ್ಯಾಪಾರಿ ತಂಡಗಳು ಖರೀದಿ-ಮಾರಾಟದ ಉದ್ದೇಶದಿಂದ ಸದಾ ಸಿರಿಯ ದೆಡೆಗೆ ಪ್ರಯಾಣ ಬೆಳೆಸುತ್ತಿದ್ದುವು. ಬನೂ ಜುರ್ಹುಮ್‌ರ ವೈರಿ ಅಮ್ರ್ ಬಿನ್ ಹಯ್ಯ್ ಓರ್ವ ವರ್ತಕನಾಗಿದ್ದ. ಒಮ್ಮೆ ಆತ ಸಿರಿಯಕ್ಕೆ ಹೋಗಿದ್ದಾಗ, ಅಲ್ಲಿ ಕೆಲವು ಜನರು ವಿಗ್ರಹಗಳಿಗೆ ಸಾಷ್ಟಾಂಗ ವೆರಗುತ್ತಿದ್ದುದನ್ನೂ ಕೆಲವರು ಕೈಕಟ್ಟಿ ನಿಂತಿರುವುದನ್ನೂ ಕಲ್ಲಿನ ವಿಗ್ರಹಗಳನ್ನು ಭಕ್ತಿ ಭಾವದೊಂದಿಗೆ ಚುಂಬಿಸುವುದನ್ನೂ ಕಂಡನು. ಈ ಒಂದು ಹೊಸ ಕರ್ಮ ವಿಧಾನವು ಆತನಿಗೆ ಬಹಳ ಇಷ್ಟವಾಯಿತು.

ಆತ ಅಲ್ಲಿನ ನಿವಾಸಿಗಳನ್ನು ಕರೆದು ಕೇಳಿದ, "ಇದು ನೀವು ಏನು ಮಾಡುತ್ತಿರುವಿರಿ?"

ಸಿರಿಯಾ ನಿವಾಸಿಗಳೆಂದರು, "ನಾವು ನಮ್ಮ ದೇವಂದಿರನ್ನು ಆರಾಧಿಸುತ್ತಿದ್ದೇವೆ."

"ಆರಾಧಿಸುವುದೇ!? ಅದೂ ಈ ಕಲ್ಲಿನ ಮೂರ್ತಿಗಳನ್ನೇ?ನೀವಿದೇನು ಹೇಳುತ್ತಿದ್ದೀರಿ?" ಅಮ್ರ್ ಆಶ್ಚರ್ಯ ಚಕಿತನಾಗಿ ಪ್ರಶ್ನಿಸಿದ.

"ನಮ್ಮ ಆರಾಧ್ಯರುಗಳನ್ನು ಮತ್ತು ಇಷ್ಟಾರ್ಥ ಸಿದ್ಧಿಗಳನ್ನು ಕಲ್ಲಿನ ಮೂರ್ತಿಗಳೆಂದು ಹೇಳಿ ಅವಮಾನಿಸಬೇಡಿರಿ" ಸಿರಿಯನ್ನರು ಆಕ್ಷೇಪಿಸಿದರು.

"ಈ ಆರಾಧನೆಯಿಂದ ನಿಮಗೇನು ಲಾಭವಿದೆ?" ಅಮ್ರ್ ಕೇಳಿದ.

"ಅದೊಂದು ದೊಡ್ಡ ಕತೆ. ಅದಕ್ಕೆ ಪುರುಸೊತ್ತಿನ ಅಗತ್ಯವಿದೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ನಮ್ಮ ಈ ಆರಾಧ್ಯರುಗಳು ಕಷ್ಟ ಕಾಲದಲ್ಲಿ ನಮಗೆ ನೆರವಾಗುತ್ತವೆ. ಶತ್ರುಗಳೊಂದಿಗೆ ರಕ್ತರಂಜಿತ ಯುದ್ಧವಾದಾಗ ನಾವು ಈ ಆರಾಧ್ಯರುಗಳನ್ನು ಕೂಗಿ ಕರೆದಿದ್ದೆವು. ಕ್ಷಣ ಮಾತ್ರದಲ್ಲಿ ಯುದ್ಧದ ಚಿತ್ರಣವೇ ಬದಲಾಗಿತ್ತು. ವಿಜಯ ಮತ್ತು ದೇವ ಸಹಾಯ ನಮಗೆ ಪ್ರಾಪ್ತವಾಯಿತು. ಅವರದೇ ಕೃಪೆಯಿಂದಾಗಿ ನಮ್ಮಲ್ಲಿ ಮಳೆ ಬರುತ್ತವೆ ಮತ್ತು ಬರಗಾಲ ದೂರವಾಗುತ್ತದೆ. ಈ ಆರಾಧ್ಯರುಗಳು ರೋಗಿಗಳಿಗೆ ಆರೋಗ್ಯ ಕರುಣಿಸುತ್ತವೆ...

ಮತ್ತು..."

ಸಿರಿಯನ್ ವಿಗ್ರಹಾರಾಧಕರ ಮಾತನ್ನು ಅರ್ಧದಲ್ಲೇ ತುಂಡರಿಸುತ್ತಾ ಅಮ್ರ್ ಆತುರದಿಂದ ಹೇಳಿದ,

"ಹಾಗಾದರೆ ಜನರೇ! ಇವುಗಳ ಪೈಕಿ ನಾಲ್ಕೈದು ಆರಾಧ್ಯರುಗಳನ್ನು ನನಗೆ ಕೊಡಿ. ನಮ್ಮ ನಾಡಿನಲ್ಲಿ ಆಗಾಗ ಬರಗಾಲ ಬಾಧಿಸುತ್ತಲೇ ಇರುತ್ತದೆ ಮತ್ತು ಶತ್ರುಗಳೊಂದಿಗೆ ಯುದ್ಧಗಳು ನಡೆಯುತ್ತಲಿರುತ್ತವೆ. ನಾನು ಮಕ್ಕಾದಿಂದ ಹೊರಡುವಾಗ ಅಲ್ಲಿ ಭಯಂಕರ ಬರಗಾಲ ಬಾಧಿಸಿತ್ತು. ನಿಮ್ಮ ಈ ಕೃಪೆಯಿಂದಾಗಿ ನಮಗೆ ಒಳಿತಾಗಬಹುದು."

ಅಮ್ರ್‌ನ ಬೇಡಿಕೆಯನ್ನು ಮನ್ನಿಸಿ ಸಿರಿಯನ್ನರು ಕೆಲವು ವಿಗ್ರಹಗಳನ್ನು ಆತನ ಕೈಯಲ್ಲಿರಿಸಿದರು.

ಮಕ್ಕಾ ನಿವಾಸಿಗಳಿಗೆ ಅದುವರೆಗೆ ವಿಗ್ರಹಾರಾಧನೆಯು ಅಪರಿಚಿತವಾಗಿತ್ತು. ಅವರ ಕರ್ಣ ಪರದೆಗೆ ಸದಾ ಏಕದೇವತ್ವದ ಲಹರಿ ಮಾತ್ರವೇ ಸೋಂಕುತ್ತಿತ್ತು. ಆದರೆ ಅಮ್ರ್ ಬಿನ್ ಹಯ್ಯ್, ಸಿರಿಯದಿಂದ ಮರಳುತ್ತಲೇ ನಗರದಲ್ಲಿ ವಿಗ್ರಹದ ಪ್ರಚಾರ ಕಾರ್ಯಕ್ಕೆ ಶುರುವಿಟ್ಟ, "ನಾನು ಸಿರಿಯದ ದೊಡ್ಡದೊಡ್ಡ ಶ್ರೀಮಂತರು, ಸರದಾರರು, ವಿದ್ವಾಂಸರು ಮತ್ತು ಸನ್ಯಾಸಿಗಳು ಎಲ್ಲರೂ ವಿಗ್ರಹಾರಾಧನೆ ಮಾಡುವುದನ್ನು ಕಂಡಿದ್ದೇನೆ."

ಆ ವಿಗ್ರಹಗಳ ಕಥೆಗಳಿಗೆ ಉಪ್ಪು-ಖಾರ ಸೇರಿಸಿ ಹೇಳತೊಡಗಿದ, "ನಾನು ಕಣ್ಣಾರೆ ನೋಡಿ ಬಂದಿದ್ದೇನೆ... ಆಕಾಶ ಶುಭ್ರವಾಗಿತ್ತು... ಮೇಲಾಗಿ ಉರಿಯುವ ಬಿಸಿಲು. ಅಷ್ಟರಲ್ಲಿ ಸಿರಿಯದ ಓರ್ವ ಸರದಾರನು, ವಿಗ್ರಹದ ಮುಂದೆ ಸಾಷ್ಟಾಂಗವೆರಗುತ್ತಾ, ಮಳೆ ಸುರಿಸಲು ಪ್ರಾರ್ಥಿಸಿದ. ಅಷ್ಟೇ, ಇಲ್ಲಿ ಆತ ಸಾಷ್ಟಾಂಗದಿಂದ ತಲೆಎತ್ತಿದ, ಅಲ್ಲಿ ದಟ್ಟ ಮೋಡ ತುಂಬಿ ಧಾರಾಕಾರ ಮಳೆ ಸುರಿಯಿತು."

ಮಕ್ಕಾ ನಿವಾಸಿಗಳು ಪರಸ್ಪರ ಮುಖ ನೋಡಿ ಮುಗುಳ್ನಗುತ್ತಾರೆ. ಅಮ್ರ್ ಬಿನ್ ಹಯ್ಯ್ ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡು ಹುಡುಕಿದನೆಂಬ ಸಂತೃಪ್ತಿಯಿತ್ತು ಅವರ ಮುಖದಲ್ಲಿ...

ಅಮ್ರ್ ಮುಂದುವರಿಸಿದ, "ನಾನು ಬಹಳಷ್ಟು ಕಾಡಿಬೇಡಿ ನಿಮಗಾಗಿ ಈ ವಿಗ್ರಹ ಗಳನ್ನು ತಂದಿದ್ದೇನೆ. ಇವುಗಳನ್ನು ಆರಾಧಿಸುವ ಮೂಲಕ ನಮ್ಮೆಲ್ಲರ ಸಂಕಷ್ಟಗಳು ನೀಗುವವು. ಇನ್ನು ನಾವು ಬಯಸಿದಾಗಲೆಲ್ಲ, ಮಳೆ ಸುರಿಯುವುದು ಮತ್ತು ಆಗ್ರಹಿಸಿ ದ್ದೆಲ್ಲವೂ ಪೂರೈಸಲ್ಪಡುವುದು..."

ಹೊಟ್ಟೆಯ ಹಸಿವು, ದೇಹದ ಹಸಿವು ಮತ್ತು ವಿಶ್ರಾಂತ ಜೀವನದ ಆಸೆಯು ಬಹಳ ಕೆಟ್ಟದಾಗಿರುತ್ತದೆ. ಅಮ್ರ್‌ನ ಮಾತುಗಳು ಮಕ್ಕಾ ನಿವಾಸಿಗಳ ಮನಸ್ಸಿಗೆ ನಾಟಿದುವು. ಹೀಗೆ ಮಕ್ಕಾದಲ್ಲಿ ವಿಗ್ರಹಾರಾಧನೆ ಪ್ರಾರಂಭಗೊಂಡಿತು... ಮಕ್ಕಾ ನಗರವು ಇಡೀ ಅರೇಬಿಯದ

ಕೇಂದ್ರವಾಗಿತ್ತು. ಹಜ್ಜ್‌ನ ವೇಳೆ ನಾಡಿನ ಮತ್ತು ಪರಿಸರದ ಜನರು ಮಕ್ಕಾ ನಗರ ಸಂದರ್ಶಿಸುತ್ತಾರೆ. ಮಕ್ಕಾ ನಿವಾಸಿಗಳು ವಿಗ್ರಹಪೂಜೆ ಮಾಡುತ್ತಿರುವುದನ್ನು ಕಂಡು ಆಗಂತುಕರಲ್ಲಿಯೂ ಆಸಕ್ತಿ ಹುಟ್ಟಿತು. ಕ್ರಮೇಣ ಅರೇಬಿಯದಾದ್ಯಂತದ ಸಕಲ ಗೋತ್ರ ಗಳಲ್ಲೂ ವಿಗ್ರಹಾರಾಧನೆ ಹರಡಿತು. ಪರಿಸ್ಥಿತಿಯು ಕಅಬಾ ಭವನದೊಳಗೂ ವಿಗ್ರಹಗಳನ್ನು ಪ್ರತಿಷ್ಠಾಪಿಸುವವರೆಗೆ ಮುಟ್ಟಿತು. ಕಅಬಾದ ಗೋಡೆಗಳ ಮೇಲೂ ಚಿತ್ರವಿಚಿತ್ರ ಚಿತ್ರಗಳನ್ನು ರಚಿಸಲಾಯಿತು. ಜಿದ್ದತ್ ಅಥವಾ ಬಿದ್‌ಅತ್(ನವೀನಾಚಾರ)ಗಳೆಡೆಗೆ ಬಲು ಬೇಗನೇ ಆಕರ್ಷಿತನಾಗುವುದು ಮಾನವನ ಅತಿದೊಡ್ಡ ದೌರ್ಬಲ್ಯವಾಗಿದೆ. ವಾಸ್ತವದಲ್ಲಿ ಬಹಳಷ್ಟು ನವೀನ ವಿಷಯಗಳು ಅತಿದೊಡ್ಡ ಪಥಭ್ರಷ್ಟತೆಯಾಗಿದ್ದು ಮಾನವ ಸಮಾಜದ ಮಟ್ಟಿಗೆ ನಷ್ಟಕಾರಕ ಮಾತ್ರವಲ್ಲ ಆತ್ಮಹತ್ಯೆಗೆ ಸಮನಾಗಿದೆ.

ಶಿರ್ಕ್ ಹರಡಲಾರಂಭಿಸಿದಾಗ ಮಕ್ಕಾದ ಪ್ರತಿಯೊಂದು ಮನೆಯೂ ವಿಗ್ರಹಾಲಯ ವಾಗಿ ಮಾರ್ಪಟ್ಟಿತು. ಗೋತ್ರ, ಮನೆತನಕ್ಕಷ್ಟೇ ಅಲ್ಲ, ಒಬ್ಬೊಬ್ಬ ವ್ಯಕ್ತಿಗೂ ತನ್ನದೇ ಪ್ರತ್ಯೇಕ ವಿಗ್ರಹ ಹುಟ್ಟಿಕೊಂಡಿತ್ತು. ಅಜ್ಞಾನ ಮತ್ತು ಮೂಢನಂಬಿಕೆಯ ಪರಮಾವಧಿ ನೋಡಿ... ಪ್ರಯಾಣದ ವೇಳೆ ಕಲ್ಲಿನ ವಿಗ್ರಹಗಳನ್ನು ಜತೆಗಿರಿಸಲು ಕಷ್ಟವಾಗುವ ಕಾರಣ, ಹಲವರು ಹುರಿದ ಧಾನ್ಯದ ಹುಡಿಯಿಂದ ತಯಾರಿಸಿದ ವಿಗ್ರಹಗಳನ್ನು ಕೊಂಡೊಯ್ಯುತ್ತಾರೆ, ಅವುಗಳನ್ನು ಪೂಜಿಸುತ್ತಾರೆ, ಯಾತ್ರೆಯ ವೇಳೆ ಅಗತ್ಯ ಕಂಡರೆ ಅದೇ ಧಾನ್ಯದ ಮೂರ್ತಿಯನ್ನು ನೀರಿನಲ್ಲಿ ಕಲಸಿ ಕುಡಿಯುತ್ತಾರೆ.

ತಲೆ ಬುರುಡೆಯಲ್ಲಿ ಮದ್ಯ ಕುಡಿಯುತ್ತಿದ್ದವರ ಮಧ್ಯೆ...

ಇತ್ತ ಯಮನ್‌ನಲ್ಲಿಯೂ ಬಹುದೇವಾರಾಧನೆ ವ್ಯಾಪಕವಾಗಿತ್ತು. ಹುಮೈರ್‌ರ ಗೋತ್ರ ಸೂರ್ಯಾರಾಧನೆ ಮಾಡುತ್ತಿತ್ತು. ಕಿನಾನ ಗೋತ್ರಕ್ಕೆ ಚಂದ್ರ ಆರಾಧ್ಯವಾಗಿತ್ತು. ಅದೇ ರೀತಿ ಇತರ ಗೋತ್ರಗಳು ಮತ್ತು ಪ್ರದೇಶಗಳಲ್ಲಿ ಕುಜಗ್ರಹ, ಧ್ರುವ ನಕ್ಷತ್ರಗಳ ಪೂಜೆ ನಡೆಯುತ್ತಿತು. ಕಣಿ, ಮಾಟ ಮಂತ್ರ, ಜಾದೂಗಾರಿಕೆ ಇತ್ಯಾದಿಗಳೆಲ್ಲವೂ ವ್ಯಾಪಕ ಪ್ರಚಾರ ಗಿಟ್ಟಿಸಿದ್ದುವು. ಜನರ ಮನ-ಮಸ್ತಿಷ್ಕದಲ್ಲಿ ಶಿರ್ಕ್ ಸಂಪೂರ್ಣವಾಗಿ ಆವರಿಸಿ ಬಿಟ್ಟಿತ್ತು. ಏಕದೇವಾರಾಧನೆಯ ಕಲ್ಪನೆಯೇ ಮಾಯವಾಗಿತ್ತು. ವರಕ ಬಿನ್ ನೌಫಲ್‌ರಂತಹ ಬೆರಳೆಣಿಕೆ ಯಷ್ಟು ಮಂದಿ ಜ್ಞಾನಚಕ್ಷುಗಳಾದ ದೇವಭಕ್ತರ ಹೊರತು ಇಡೀ ಅರೇಬಿಯಾ ನಾಡು ಸನ್ಮಾರ್ಗದ ಬೆಳಕಿನಿಂದ ಸಂಪೂರ್ಣ ವಂಚಿತವಾಗಿತ್ತು. ಈ ದೇವಭಕ್ತಿ ಮತ್ತು ದೇವ ಸಾಮಿಪ್ಯದಿಂದ ವಂಚಿತರಾಗುವುದುಂಟಲ್ಲ, ಅದು ಮಾನವನ ಅತಿದೊಡ್ಡ ದುರದೃಷ್ಟ ಹಾಗೂ ಅಧಃಪತನವಾಗಿದೆ.

ಇದು ಅರೇಬಿಯದ ಆಚಾರ ಮತ್ತು ನಂಬಿಕೆಯ ಸ್ಥಿತಿಯಾಗಿತ್ತು. ಇನ್ನು ನೈತಿಕತೆಯ ವಿಷಯ... ದೇವಭಕ್ತಿ, ಪರಲೋಕ ವಿಶ್ವಾಸ ಮತ್ತು ದೇವಶಿಕ್ಷೆಯ ಕಲ್ಪನೆಯೇ ಇಲ್ಲ

ದಂತಹ ಒಂದು ಜನಾಂಗವು ಅನೈತಿಕ ಮತ್ತು ಪಾಪಮಯವಾಗಿ ಬಿಡುವುದರಲ್ಲಿ ಸಂದೇಹವಿಲ್ಲ. ಜೀವನವೆಂದರೆ ತಿಂದುಂಡು ತೇಗಿ ಸುಖಿಸುವುದು ಮತ್ತು ಮರಣ ಬಂದಾಗ ಸತ್ತು ಬಿಡುವುದು, ನಂತರ ಪುನರ್ ಜೀವನ ಅಥವಾ ವಿಚಾರಣೆಯೇನೂ ಇರದು, ಇರುವುದೊಂದೇ ಇಹಜೀವನ ಎಂಬಂತಹ ಭಾವನೆಯೇ ಜೀವನದ ಬುನಾದಿಯಾಗಿದ್ದರೆ, ಅಂತಹ ಕಡೆ ಸಚ್ಚಾರಿತ್ರ್ಯ ಮತ್ತು ಸತ್ಕರ್ಮವಿರುವುದರ ಬದಲು ಅನೈತಿಕತೆ ಮತ್ತು ದುಷ್ಕರ್ಮ ತುಂಬಿಕೊಳ್ಳುತ್ತದೆ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

ಅರಬರು ಅಪಾರ ಧೈರ್ಯವಂತರಾಗಿದ್ದರು. ಆದರೆ ಅವರ ಧೀಮಂತಿಕೆಯೆಲ್ಲವೂ ರಕ್ತಪಾತ ಮತ್ತು ಯುದ್ಧಗಳಲ್ಲಿಯೇ ವ್ಯಯವಾಗುತ್ತಿತ್ತು. ಒಬ್ಬನ ಒಂಟೆಯು ಇನ್ನೊಬ್ಬನ ಹುಲ್ಲುಗಾವಲಿನೊಳಗೆ ಹೊಕ್ಕರೆ, ಅದೊಂದೇ ನೆಪವಾಗಿ ರಕ್ತಪಾತವಾಗುತ್ತಿತ್ತು. ಕುದುರೆ ಓಟ ಸ್ಪರ್ಧೆ ಆರಂಭವಾಗುವ ಹೊತ್ತಿಗೆ ಯಾರಾದರೂ ಕುದುರೆಯು ನಿರ್ಧರಿತ ಜಾಗ ದಿಂದ ಕೊಂಚ ಎದುರಾಗಿ ನಿಂತು ಬಿಟ್ಟರೆ, ಖಡ್ಗಗಳು ಒರೆಯಿಂದ ಹೊರಬರುತ್ತಿದ್ದುವು ಮತ್ತು ಆಟದ ಮೈದಾನದ ಹುಲ್ಲುಹಾಸು ಕೆಂಬಣ್ಣ ಪಡೆಯುತ್ತಿತ್ತು. ಹೀಗೆ ಈ ಜಗಳವು ಪ್ರತೀಕಾರದ ರೂಪ ತಾಳಿ ವರ್ಷಗಟ್ಟಲೆ ನಿರಂತರ ಯುದ್ಧವಾಗಿ ಪರಿಣಮಿಸುತ್ತಿತ್ತು.

ಅರಬರ ಮಟ್ಟಿಗೆ ರಕ್ತಪಾತ, ಕೊಲೆ-ಸುಲಿಗೆಗಳು ಒಂದು ಆಟ ವಿನೋದವಾಗಿತ್ತು. ಅವರ ದೃಷ್ಟಿಯಲ್ಲಿ ಮಾನವ ಜೀವಕ್ಕೆ ಎಳ್ಳು ಕಾಳಿನಷ್ಟೂ ಬೆಲೆಯಿದ್ದಿರಲಿಲ್ಲ. ಅವರಿಗೆ ಈ ಕಾರ್ಯವು ಮರದ ರೆಂಬೆಗಳನ್ನು, ಬೆಳೆದ ಹುಲ್ಲುಗಳನ್ನು ಕಡಿದು ಹೊಸಕಿದಷ್ಟೇ ಸಲೀಸಾಗಿತ್ತು. ಅವರ ಕ್ರೌರ್ಯದ ಪರಮಾವಧಿ ನೋಡಿರಿ- ಪರಸ್ಪರರ ಕೊರಳು ಕೊಯ್ದರೂ ಯಾವುದೇ ರೀತಿಯ ಪಶ್ಚಾತ್ತಾಪ ಲವಲೇಶವೂ ಅವರ ಮುಖದಲ್ಲಿ ಗೋಚರಿಸುವುದಿಲ್ಲ. ಮಾನವ ದೇಹವು ಅವರ ಮಟ್ಟಿಗೆ ಮಣ್ಣಿನ ಗೊಂಬೆಗಳಾಗಿವೆ. ಮನ ಬಂದಾಗ ಕಡಿದರು, ಹೊಸಕಿ ಬಿಟ್ಟರು.

ಮದ್ಯಪಾನವು ಅವರ ಸ್ವಭಾವದಲ್ಲಿ ಸೇರಿತ್ತು. ನಿತ್ಯ ಶರಾಬು ಕುಡಿದು ನೃತ್ಯ ಗಾಯನ-ಸಂಗೀತದಲ್ಲಿ ಮದೋನ್ಮತ್ತರಾಗಿರುತ್ತಿದ್ದರು. ಪಾನಪಾತ್ರೆ ಅವರ ಜೀವವಾಗಿತ್ತು. ಆ ಕಾಲದ ಓರ್ವ ಕವಿಗೆ ಮರಣದಂಡನೆ ಶಿಕ್ಷೆ ವಿಧಿಸಲ್ಪಟ್ಟಾಗ, ಆತನೊಡನೆ, 'ನೀನು ಯಾವ ರೀತಿ ವಧಿಸಲ್ಪಡಲು ಬಯಸುತ್ತೀ'ಯೆಂದು ವಿಚಾರಿಸಲಾಯಿತು. ಆಗ ಆತ, 'ನಾನು ಕಂಠಪೂರ್ತಿ ಕುಡಿದು ಸಂಪೂರ್ಣ ಪ್ರಮತ್ತನಾಗಿದ್ದ ವೇಳೆ, ನನ್ನ ರಕ್ತನಾಳಗಳನ್ನು ಹರಿತವಾದ ಆಯುಧದಿಂದ ಕತ್ತರಿಸಿ ಬಿಡಿರಿ. ರಕ್ತವು ಹೊರಹರಿದು ಅದರೊಂದಿಗೇ ನನ್ನ ಜೀವ ಹರಿದುಹೋಗಲಿ' ಎಂದು ತನ್ನ ಆಗ್ರಹವನ್ನು ವ್ಯಕ್ತಪಡಿಸಿದ್ದ. ಅರಬರ ಪೈಕಿ ಕೆಲವು ವಿಘ್ನ ಸಂತೋಷಿಗಳು ತಾವು ಕೊಂದ ಶತ್ರುಗಳ ತಲೆಬುರುಡೆಯಲ್ಲಿ ಬಹಳ ಹೆಮ್ಮೆಯಿಂದ ಶರಾಬು ಕುಡಿದು ಪ್ರಮೋದದಲ್ಲಿ ತೇಲಾಡುತ್ತಿದ್ದರು.

ಜೂಜಾಟವು ಅಂದಿನ ಅರಬರ ಆಸಕ್ತಿದಾಯಕ ಹವ್ಯಾಸವಾಗಿತ್ತು. ಕೊಳ್ಳೆ, ಲೂಟಿ, ಕಳ್ಳತನ, ಅಪ್ರಾಮಾಣಿಕತೆ, ವಂಚನೆ, ವಚನಭ್ರಷ್ಟತೆ ಮತ್ತು ಸುಳ್ಳು ಮಾತು ಸೃಷ್ಟಿಸುವುದನ್ನು ಅವರು ಕಲೆಗಾರಿಕೆಯೆಂದು ಬಗೆಯುತ್ತಿದ್ದರು. ಪರಸ್ಪರರಿಗೆ ಮೋಸ ಮಾಡುತ್ತಿದ್ದರು. ಸುಳ್ಳು ಆಣೆ ಹಾಕುತ್ತಿದ್ದರು. ಒಮ್ಮೆ ವಾಗ್ದಾನ ಮಾಡಿ ಕ್ಷಣಮಾತ್ರದಲ್ಲಿ ಉಲ್ಲಂಘಿಸುತ್ತಿದ್ದರು, ವ್ಯಾಪಾರಿ ತಂಡಗಳನ್ನು ಕೊಳ್ಳೆ ಹೊಡೆಯುತ್ತಿದ್ದರು, ಅನಾಥರ ಸೊತ್ತನ್ನು ಕಬಳಿಸುತ್ತಿದ್ದರು... ಅಷ್ಟಾಗಿಯೂ ಅವರು ತಮ್ಮನ್ನು ಜಗತ್ತಿನಾದ್ಯಂತದ ಗೌರವಾನ್ವಿತ ಮತ್ತು ಸಭ್ಯ ಜನರೆಂದು ಹೇಳಿಕೊಳ್ಳುತ್ತಿದ್ದರು!

ಅವರು ಸ್ವಾಭಿಮಾನಿಗಳಾಗಿದ್ದರು. ಆದರೆ ಆ ಸ್ವಾಭಿಮಾನವು ಕ್ರೌರ್ಯ ಮತ್ತು ನಿರ್ದಯತೆಯ ಪರಮಾವಧಿಗೆ ತಲುಪಿ ಬಿಡುತ್ತಿತ್ತು. ಹೆಣ್ಣು ಮಕ್ಕಳ ಮದುವೆ ಮಾಡಿಸುವುದು ತಮ್ಮ ಮಟ್ಟಿಗೆ ಕಳಂಕ ಎಂದೇ ಭಾವಿಸುತ್ತಿದ್ದರು. ಪ್ರಕೃತಿ ನಿಯಮದೊಂದಿಗೆ ಅವರು ನಿರಂತರ ಸಂಘರ್ಷಿಸುತ್ತಿದ್ದರು; ಹೆಣ್ಣು ಮಗು ಹುಟ್ಟಿದ ಕೂಡಲೇ ಅದನ್ನು ಜೀವಂತ ಹೂಳಿಬಿಡುತ್ತಿದ್ದರು. ಸಾವಿರಾರು ಮುಗ್ಧ ಜೀವಗಳು ಈ ಅಜ್ಞಾನಜನ್ಯ ಪ್ರತಿಷ್ಠೆ, ಕ್ರೂರ ಸ್ವಾಭಿಮಾನಕ್ಕೆ ಬಲಿಯಾಗಿದ್ದುವು. ತಾಯಂದಿರು ತಮಗೆ ಹೆಣ್ಣು ಹುಟ್ಟಿದ ತಕ್ಷಣ ಅದನ್ನು ಅಡಗಿಸಿಡಲು ಯತ್ನಿಸುತ್ತಿದ್ದರು. ಆದರೆ ಆ ನಿರ್ದಯಿಗಳು ತಾಯಂದಿರ ಮಡಿಲಿ ನಿಂದ ಹೆಣ್ಣು ಶಿಶುಗಳನ್ನು ಕಿತ್ತುಕೊಂಡು ಹೂತು ಬಿಡುತ್ತಿದ್ದರು. ಮಮತೆ ಅದನ್ನು ಅಸಹಾಯಕವಾಗಿ ನೋಡುತ್ತಾ ಇದ್ದು ಬಿಡುತ್ತಿತ್ತು.

ಅರಬರ ಜಾತ್ರೆಗಳಲ್ಲಿ ಆಟ, ವಿನೋದ, ಅಶ್ಲೀಲ ಮಾತು, ಅಸಭ್ಯ ಕಾವ್ಯ ರಚನೆಗಳೆಲ್ಲವೂ ಪ್ರದರ್ಶಿತವಾಗುತ್ತಿದ್ದುವು. ಅವರ ಮಟ್ಟಿಗೆ ಅವರ ಕವನಗಳು 'ಹಾಸ್ಯ ರಚನೆ'ಗಳೂ 'ಪ್ರಗತಿಪರ ಸಾಹಿತ್ಯ'ವೂ ಆಗಿರುತ್ತಿದ್ದುವು! ಲೈಂಗಿಕತೆಯ ಅಶ್ಲೀಲ ವ್ಯಾಖ್ಯಾನ, ಕಾಮಾಸಕ್ತಿಯನ್ನು ಕೆರಳಿಸುವ ಕಲ್ಪನಾ ಲಹರಿ, ಅನೈತಿಕತೆ ಮತ್ತು ನಗ್ನತೆಯ ವಿವರಣೆ... ಒಟ್ಟಿನಲ್ಲಿ, ಏಕಾಂತದಲ್ಲಿ ನಡೆಯುವಂತಹ, ಸಭೆಯಲ್ಲಿ ಹೇಳಲಾಗದ ಖಾಸಗಿ ವಿಷಯಗಳು! ಸಭ್ಯತೆಯು ಕ್ಷಣಮಾತ್ರಕ್ಕೂ ಸಹಿಸಲಾರದಂತಹ ಸಂಗತಿಗಳು! ಇನ್ನು ಕೆಲವು ಗಂಭೀರವಾಗಿರುವಂತಹ ಕಾವ್ಯ ರಚನೆಗಳು... ಅವು ಕುಲ-ಗೋತ್ರಗಳ ಮಹಿಮೆಯನ್ನು ಪ್ರಸ್ತಾಪಿಸುವಂತಿದ್ದುವು ಮತ್ತು ಗೋತ್ರಗಳ ನಡುವೆ ವೈರದ ಕಿಡಿಯನ್ನು ಎಂದಿಗೂ ಆರದಂತೆ ನೋಡಿಕೊಳ್ಳುವಂತಿದ್ದುವು. ಅವರ ಸಮರ ಗೀತೆಗಳು ಪಕ್ಷಪಾತ ಮತ್ತು ಕುಲ ವೈರವನ್ನು ಉದ್ದೀಪಿಸುವಂತಿದ್ದುವು. ಅವರ ಗೀತೆಗಳಲ್ಲಿ ವೈರ ವಿದ್ವೇಷದ ಬೆಂಕಿಯುಗುಳ ಲ್ಪಡುತ್ತಿದ್ದುವು.

ಅನೈತಿಕತೆಯು ಅರಬರಲ್ಲಿ ಸಾಮಾನ್ಯವಾಗಿತ್ತು. ಕಾಮಾಸಕ್ತಿಯ ಪ್ರಕಟಣೆಯಲ್ಲಿ ಅವರು ಆದ್-ಸಮೂದ್ ಜನಾಂಗವನ್ನು ಮೀರಿಸಿದ್ದರು. ಮಹಿಳೆಯು

ಅವರಿಗೆ ದೇಹೇಚ್ಛೆಯ ಶಮನಕ್ಕಾಗಿರುವ ವಸ್ತುವಾಗಿದ್ದಳು. ಗುಪ್ತ ಅನೈತಿಕ ಸಂಬಂಧದಿಂದ ಹಿಡಿದು ಮುಕ್ತ ವ್ಯಭಿಚಾರದ ವರೆಗೂ ಅವರ ಸಮಾಜದಲ್ಲಿ ವ್ಯಾಪಕ ಮಾರುಕಟ್ಟೆಯಿತ್ತು. ಮಲ ತಾಯಂದಿರೂ ಅವರ ಲೈಂಗಿಕ ವಾಂಛೆಗೆ ಬಲಿಯಾಗುತ್ತಿದ್ದರು. ಇಂತಹ ಎಲ್ಲ ಅಸಭ್ಯತೆ, ಅಶ್ಲೀಲತೆಯ ಕುರಿತು ನಾಚಿಕೆ ಪಡುವ ಬದಲು ಅವರು ಹೆಮ್ಮೆಪಟ್ಟು ಕೊಳ್ಳುತ್ತಿದ್ದರು. ಕೆಡುಕುಗಳು ಅವರ ಸ್ವಭಾವ-ಪ್ರಕೃತಿಯಾಗಿ ಬಿಟ್ಟಿತ್ತು. ಅವರ ಅಂತರಂಗ-ಬಹಿರಂಗವೆಲ್ಲವೂ ಅನೈತಿಕತೆಯಿಂದ ತುಂಬಿ ಹೋಗಿತ್ತು. ಮಾನ-ಮರ್ಯಾದೆಯ ಮೌಲ್ಯವನ್ನರಿಯುವಂತಹ ಸಾಮರ್ಥ್ಯವೇ ಅವರಲ್ಲಿ ಉಳಿದಿರಲಿಲ್ಲ. ಮಾನವ ರೂಪದ ಮೃಗ, ಪಿಶಾಚಿಯಾಗಿ ಮಾರ್ಪಟ್ಟಿದ್ದರು! ಶೈತಾನನಾದರೋ ಒಂದು ಸಜ್ಜಾವನ್ನು ನಿರಾಕರಿಸಿದ್ದ... ಆದರಿವರು ತಮ್ಮ ಇಡೀ ಜೀವನ ನಿರಾಕರಣೆ-ನಾಸ್ತಿಕತೆ ಮತ್ತು ದುರಾಚಾರ-ಪಾಪಗಳಲ್ಲಿಯೇ ಕಳೆಯುತ್ತಿದ್ದರು.

೩೦•••೦೩

ಯೌವನ

ಇಂತಹ ಪಾಪಮಯ, ಕಡುಕೆಟ್ಟ ಸಮಾಜ ಹಾಗೂ ಅನೈತಿಕತೆ ತುಂಬಿದ ಪರಿಸರದಲ್ಲಿ ಅನಾಥಮುತ್ತು ಯೌವನಾವಸ್ಥೆಗೆ ಕಾಲಿಡುತ್ತಾರೆ. ಹೆಜ್ಜೆಹೆಜ್ಜೆಗೂ ಕ್ಷೋಭೆಗಳ ಜಂಗುಳಿ, ಕೆಡುಕುಗಳ ಸಂದಣಿ, ಚಿತ್ತಾಕಾಂಕ್ಷೆಯ ಗುಂಪುಗಾರಿಕೆ ಹಾಗೂ ಎಲ್ಲ ತರದ ದೇಹೇಚ್ಛೆ ಗಳಿಗೆ ಸಕಲ ಸವಲತ್ತು ಸಮಾಜದಲ್ಲಿತ್ತು. ಮದ್ಯದಂಗಡಿಯೂ ಇತ್ತು. ದೇಹಕ್ಕೆ ಹಸಿವಾದರೆ ಅದನ್ನು ತಣಿಸುವ 'ರಹಸ್ಯ ತಾಣ'ಗಳೂ ಇದ್ದುವು... ಜುಗಾರಿ ಅಡ್ಡೆಗಳಿಗೋ ಯಾವುದೇ ಕೊರತೆಯಿದ್ದಿರಲಿಲ್ಲ. ಹಾಗೆಯೇ ನಾಟ್ಯ-ಗಾಯನದ ಸಮಾರಂಭಗಳೂ ಹೇರಳವಾಗಿದ್ದುವು! ಅಲ್ಲಿ ಅಶ್ಲೀಲತೆಯ ಅಡ್ಡೆಗಳೂ ಇದ್ದುವು, ಅನೈತಿಕತೆಯ ಕೇಂದ್ರ ಗಳೂ ಇದ್ದುವು. ಎತ್ತ ಹೋದರೂ ಕೆಡುಕಿನ ಜಾಲಗಳೇ ಹರಡಿಕೊಂಡಿದ್ದುವು ಮತ್ತು ದುರಾಚಾರಗಳ ವ್ಯಾಪಾರವೇ ನಡೆಯುತ್ತಿತ್ತು. ಅಲ್ಲಿ ಎತ್ತ ನೋಡಿದರೂ ಹಿರಿಯ-ಕಿರಿಯ, ಸ್ತ್ರೀ-ಪುರುಷರೆನ್ನದೆ ಎಲ್ಲರೂ ಒಂದೇ ವರ್ಣ ಧರಿಸಿದ್ದರು.

ಇಂತಹ ವಾತಾವರಣದಲ್ಲಿ ಅಬ್ದುಲ್ಲಾರ ಅನಾಥಮುತ್ತು, ಮುಹಮ್ಮದ್(ಸ) ದೇವನಿಷ್ಠೆ, ಪರಿಶುದ್ಧತೆ, ಸಜ್ಜನಿಕೆ, ನೈತಿಕತೆಯೊಂದಿಗೆ ತಾರುಣ್ಯಕ್ಕೆ ಅಡಿಯಿಡುತ್ತಾರೆ. ಆ ಹಂತಕರು, ಲೂಟಿಕೋರರು ಮತ್ತು ಕ್ರೂರಿಗಳ ನಡುವೆ ಅವರೊಬ್ಬರೇ ಶಾಂತಿ- ಸಂಧಾನದ ಮಧ್ಯಸ್ಥಿಕೆದಾರರಾಗಿದ್ದರು. ಕಳ್ಳರು, ಸುಳ್ಳರು ಮತ್ತು ದಗಾಕೋರರ ನಡುವೆ ಅವರೊಬ್ಬರೇ ವಚನಪಾಲಕರೂ ಸತ್ಯಸಂಧರೂ ಪ್ರಾಮಾಣಿಕರೂ ಆಗಿದ್ದರು. ಜೂಜು ಕೋರರು, ಮದ್ಯವ್ಯಸನಿಗಳು, ವ್ಯಭಿಚಾರಿಗಳು ಮತ್ತು ದುರಾಚಾರಿಗಳ ಮಧ್ಯೆ ಏಕೈಕ ಧರ್ಮನಿಷ್ಠ, ದೇವಭಕ್ತ ಮತ್ತು ಸಚ್ಚಾರಿತ್ರ್ಯವಂತರಾಗಿದ್ದರವರು. ಯಾರಾದರೊಬ್ಬರ ಸಜ್ಜನಿಕೆಯ ಬಗ್ಗೆ ಅತ್ಯಧಿಕವಾಗಿ ಬಣ್ಣಿಸಿದರೂ, ಆ ಎಲ್ಲ ಬಣ್ಣನೆಗೂ ಮಿಗಿಲಾಗಿದ್ದರು ಅನಾಥಮುತ್ತು. ಮಾನವೀಯತೆಯ ಅತಿ ಶ್ರೇಷ್ಠ, ಅತ್ಯುನ್ನತ ಸ್ಥಾನವಾಗಿ ನಾವು ಯಾವುದನ್ನು ಕಲ್ಪಿಸುತ್ತೇವೋ, ಅದೆಲ್ಲಕ್ಕಿಂತಲೂ ಮಿಗಿಲಾದ ಶ್ರೇಷ್ಠ ವ್ಯಕ್ತಿತ್ವವಾಗಿತ್ತು ಮುಹಮ್ಮದ್‌ರದ್ದು.

ಜಗತ್ತಿನಾದ್ಯಂತದ ಅಂಧಕಾರದ ಮಧ್ಯೆ ಅದೊಂದೇ ಪ್ರಕಾಶ ಕಿರಣವಾಗಿತ್ತು. ಕಾಲದ ಮುಳ್ಳುಗಂಟಿಗಳ ನಡುವೆ ಅದೊಂದೇ ವ್ಯಕ್ತಿತ್ವ ಗುಲಾಬಿಯ ಪಕಳೆಯಾಗಿ

ಕಂಪನ್ನು ಬೀರುತ್ತಿತ್ತು. ಭೂಮಿಯ ಕಸಕಡ್ಡಿ ಮತ್ತು ಕಲ್ಲು ಬಂಡೆಗಳೆಡೆಯಲ್ಲಿ ಅನಾಥಮುತ್ತು ಇಬ್ಬನಿಯಾಗಿ ಮಕರಂದದ ಗಂಧದೊಡಗೂಡಿ ಹೊಳೆಯುತ್ತಿತ್ತು. ಸಮಾಜದ ಪ್ರತಿ ಪಾತ್ರೆಯಲ್ಲಿ ಮದ್ಯ ಹಾಗೂ ಹಾಲಾಹಲ ತುಂಬಿಕೊಳ್ಳುತ್ತಿದ್ದಾಗ ಅದೊಂದೇ ಜೀವನ ಪಾತ್ರೆಯಲ್ಲಿ ಅಮೃತ ತುಂಬಿ ತುಳುಕುತ್ತಿತ್ತು. ಸಾಮಾನ್ಯ ಕಲ್ಲು-ದಿಣ್ಣೆಗಳ ನಡುವೆ ಅದೊಂದೇ ಮಾರ್ಗದರ್ಶನದ ಪ್ರಕಾಶ ಗೋಪುರವಾಗಿತ್ತು. ಮಾತಿನ ಓಘದಲ್ಲಿ ಕೇವಲ ಸತ್ಯಸಂಧತೆಯೇ ಮೈವೆತ್ತಂತಿದ್ದ ಉಪದೇಶಕ ಅನಾಥಮುತ್ತು ಮಾತ್ರವೇ ಇದ್ದರು.

ಕುರೈಶ್ ಸರದಾರರ ಮಧ್ಯೆ ಚರ್ಚೆ ನಡೆಯುತ್ತಿರುತ್ತದೆ...

"ಈ ಅಬ್ದುಲ್ಲಾನ ಮಗ ಮುಹಮ್ಮದ್ ಕನ್ಯಾ ಸ್ತ್ರೀಗಳಿಗಿಂತಲೂ ಹೆಚ್ಚು ಲಜ್ಜಾವಂತನಾಗಿದ್ದಾನೆ! ದಾರಿಯಲ್ಲಿ ನಡೆಯುವಾಗ ನೋಡಿದಿರಾ? ದೃಷ್ಟಿ ಕೆಳಗಿರಿಸಿದ ಗಂಭೀರ ನಡಿಗೆ!"

"ಸಹೋದರರೇ! ಈ ಯುವಕ ಬೆಳೆದು ಮುಂದೆ ಏನಾಗಲಿದ್ದಾನೋ... ಇಂತಹ ಸಭ್ಯ, ಸತ್ಯಸಂಧ, ಸಚ್ಚಾರಿತ್ರ್ಯವಂತನನ್ನು ನಾನೆಂದೂ ಕಂಡಿಲ್ಲ, ಕೇಳಿಯೂ ಇಲ್ಲ. ಜನರೇ! ಯಾರಿಗಾದರೂ ವಾಗ್ದಾನವಿತ್ತರೆ... ನಂತರ ಭೂಮಿ ಬಿರಿಯಲಿ, ಆಕಾಶವೇ ಕಳಚಿ ಬೀಳಲಿ... ಈತ ವಾಗ್ದಾನ ಮುರಿದವನಲ್ಲ!"

"ಶರಾಬು ಮತ್ತು ಮನರಂಜನೆಯ ತಾಣಗಳು ದೂರದ ಮಾತು... ನೃತ್ಯ-ಗಾಯನ ಸಭೆಗಳಲ್ಲಿಯೂ ಆತನನ್ನು ಯಾರೂ ಕಂಡಿರಲಿಲ್ಲ. ಆದರೆ ಆತ ಐಹಿಕ ಜೀವನದ ಸಂಬಂಧ ಕಡಿದುಕೊಂಡ ಸನ್ಯಾಸಿಯಲ್ಲವೆಂಬುದೂ ಸೋಜಿಗ! ಆತ ಮಾರುಕಟ್ಟೆಗಳಿಗೆ ಹೋಗಿ ಕ್ರಯ-ವಿಕ್ರಯ ಮಾಡುತ್ತಾನೆ, ಸಾಲ ಪಡೆಯುತ್ತಾನೆ, ಜನರ ಅಮಾನತನ್ನು ಜೋಪಾನವಾಗಿಡುತ್ತಾನೆ... ಸಿರಿಯಾ ದೇಶದ ವರೆಗಿನ ಮಾರುಕಟ್ಟೆಗಳಲ್ಲಿ ಆತನನ್ನು ವರ್ತಕನೆಂದೇ ಗುರುತಿಸಲಾಗುತ್ತದೆ... ಆದರೆ! ಆತನ ಪ್ರತಿಯೊಂದು ಕಾರ್ಯದಲ್ಲೂ ಅತ್ಯಂತ ಸತ್ಯಸಂಧತೆ, ಪ್ರಾಮಾಣಿಕತೆ ಮತ್ತು ನ್ಯಾಯವಂತಿಕೆಯನ್ನು ನಾವು ಕಾಣುತ್ತೇವೆ!"

(ಓರ್ವ ಯುವಕ) "ನಮ್ಮ ಆರಾಧ್ಯ ದೈವಗಳ ಕೃಪಾಕಟಾಕ್ಷ ಮುಹಮ್ಮದ್‌ನ ಮೇಲಿದೆ. ಆದ್ದರಿಂದಲೇ ಆತನಲ್ಲಿ ಇಷ್ಟೆಲ್ಲ ಒಳ್ಳೆಯ ಗುಣಗಳು ಮೇಳೈಸಿವೆ!"

(ಓರ್ವ ವಯೋವೃದ್ಧ) "ಆದರೆ ಹುಡುಗಾ! ಮುಹಮ್ಮದ್‌ನನ್ನು ಇದುವರೆಗೂ ಯಾವುದೇ ವಿಗ್ರಹದ ಬಳಿ ಹೋಗುವುದನ್ನು ಯಾರೂ ಕಂಡಿಲ್ಲವಲ್ಲ! ಅವನಂತೂ ನಮ್ಮ ಆರಾಧ್ಯ ದೈವಗಳೊಂದಿಗೆ ಯಾವುದೇ ಸಂಬಂಧವಿಲ್ಲದವನಂತೆ ದೂರವೇ ಉಳಿದು ಬಿಟ್ಟಿದ್ದಾನೆ. ವಿಶ್ವಾಸವಿಲ್ಲದ ಮಂದಿಯ ಮೇಲೆ ಈ ಆರಾಧ್ಯ ಮೂರ್ತಿಗಳು ಎಂಥ ಕೃಪೆ ತೋರಿಯಾವು?"

(ಬತ್ತಲಿಕೆ ಹಿಡಿದು ಪರೀಕ್ಷಿಸುತ್ತಿದ್ದ ಓರ್ವ ಕುರೈಶಿ) "ಅಬ್ದುಲ್ಲಾನ ಪುತ್ರನಲ್ಲಿ ಇತರೆಲ್ಲ ಒಳಿತುಗಳಿವೆ. ಆದರೆ ಆತ ಲಾತ್, ಮನಾತ್, ನಸ್ರ್, ಹುಬಲ್ ಮತ್ತು ನಮ್ಮ ಇತರ ದೇವಂದಿರ ಮೇಲೆ ವಿಶ್ವಾಸವಿರಿಸುವುದಿಲ್ಲವೆಂಬ ಒಂದೇ ಒಂದು ಕೊರತೆಯಿದೆ."

ಇತರೆಲ್ಲ ಮಾನವರಿಗೆ ಅಲಕ್ಷ್ಯ, ಪ್ರಮಾದ ಮತ್ತು ತಪ್ಪುಗಳನ್ನೆಸಗುವಂತಹ ಅವಕಾಶವಿದೆ. ಆದರೆ 'ಪರಿಪೂರ್ಣ ಮಾನವ'ನನ್ನು ತೃಣಮಾತ್ರದ ಪ್ರಮಾದ ಮತ್ತು ಅಣುಗಾತ್ರದ ಏರಿಳಿತದಿಂದ ರಕ್ಷಿಸಲಾಗುತ್ತದೆ. ಪ್ರಕೃತಿಯು ಸ್ವಯಂ ಅವರಿಗೆ ತರಬೇತಿ ನೀಡುತ್ತದೆ. ಪ್ರಥಮತಃ ಅವರನ್ನು ಸಜ್ಜನ, ಸಮಗ್ರ, ಪುನೀತ ಮತ್ತು ನ್ಯಾಯವಂತನನ್ನಾಗಿ ರೂಪಿಸಲಾಗುತ್ತದೆ. ಆದ್ದರಿಂದ ಯಾವುದೇ ಅರೋಚಕ ಮಾತು ಅವರ ಕನಸು ಮನಸ್ಸಿನಲ್ಲಿಯೂ ಹುಟ್ಟುವುದಿಲ್ಲ. ಒಂದು ವೇಳೆ ಅವರಿಂದ ಏನಾದರೂ ಸಣ್ಣ ಪ್ರಮಾದವಾಗುವ ಲಕ್ಷಣ ಕಂಡರೂ ದೇವಯುಕ್ತಿಯು ಅದನ್ನು ಕಾರ್ಯರೂಪಕ್ಕೆ ಬರದಂತೆ ನೋಡಿಕೊಳ್ಳುತ್ತದೆ.

ಮುಹಮ್ಮದ್‌ರ(ಸ) ಹದಿಹರೆಯದ ಒಂದು ಘಟನೆ- ಮಕ್ಕಾದ ಹದಿವಯಸ್ಕರೆಲ್ಲ ಕಲ್ಪಿತ ಕಥೆಗಳನ್ನು ಕೇಳುವ-ಹೇಳುವ ಪರಿಪಾಠವನ್ನಿಟ್ಟು ಕೊಂಡಿದ್ದರು. ಅಂತಹ ಸಭೆಗಳಿಗೆ ವ್ಯಾಪಕ ಖ್ಯಾತಿಯಿತ್ತು. ಒಮ್ಮೆ ಅನಾಥಮುತ್ತು ಕೂಡ ಮಿತ್ರರ ಒತ್ತಾಯಕ್ಕೆ ಕಟ್ಟು ಬಿದ್ದು ಪೇಟೆಗೆ ಹೋದರು. ಅಲ್ಲಿ ಹೋಗಿ ಏನು ನೋಡುತ್ತಾರೆ... ಯಾರದೋ ಮದುವೆಯ ಸಮಾರಂಭವಾಗಿತ್ತದು. ನೃತ್ಯ-ಗಾಯನ ಜೋರಾಗಿಯೇ ಇತ್ತು. ಕೊಳಲ ನಾದಕ್ಕೆ ಜನ ತಲೆದೂಗುತ್ತಾ ಇದ್ದರು. ಇದಂತೂ ಅತ್ಯಂತ ಲಘುವಾದ ಮತ್ತು ನಿಷ್ಪ್ರಯೋಜಕ ಮನರಂಜನೆಯಾಗಿತ್ತು. ಅನಾಥಮುತ್ತು ಆ ಮದುವೆ ಮನೆಯೊಳಗಡಿಯಿಟ್ಟರು. ಅಲ್ಲಿ ಒಂದು ಮೂಲೆಯಲ್ಲಿ ಕೂತವರಿಗೆ ಗಾಢ ನಿದ್ರೆ ಆವರಿಸಿತು. ಪದ್ಯ, ನಾದ ಒಂದೂ ಕೇಳದಂತಹ ಗಾಢ ನಿದ್ರೆ... ರಾತ್ರಿಯಾಗಿ, ಬೆಳಗು ಮೂಡಿ, ಸೂರ್ಯಕಿರಣ ಮುಖಕ್ಕೆ ರಾಚಿದಾಗಲೇ ಎಚ್ಚರವಾದದ್ದು. ಎದ್ದು ಕಣ್ತೆರೆದು ನೋಡುವಾಗ ವಾದ್ಯ-ವಾಲಗ ತಂಡವು ಯಾವಾಗಲೋ ಜಾಗ ಖಾಲಿ ಮಾಡಿಯಾಗಿತ್ತು.

ಮುಹಮ್ಮದ್‌ರ(ಸ) ಯೌವನವು ಬೆಳದಿಂಗಳಿಗಿಂತ ಉಜ್ವಲವೂ ಪುಷ್ಪಗಳಿಗಿಂತ ನಿರ್ಮಲವೂ ಆಗಿತ್ತು. ಪ್ರಕೃತಿಯು ಅವರ ಚಾರಿತ್ರ್ಯದಲ್ಲಿ ಅಣುಗಾತ್ರದ ಪ್ರಮಾದದ ಕಲೆಯನ್ನೂ ತಗುಲಲು ಬಿಟ್ಟಿರಲಿಲ್ಲ. ಅವರು ಸಜ್ಜನಿಕೆಯ ಅಂತಿಮ ಮಾನದಂಡವಾಗಿದ್ದರು. ಸಚ್ಚಾರಿತ್ರ್ಯದ ಸೋಪಾನವಾಗಿದ್ದರು. ಅವರನ್ನು ತಾತ್ವಿಕವಾಗಿ ವಿರೋಧಿಸುತ್ತಿದ್ದವರೂ ಅವರ ಸಚ್ಚಾರಿತ್ರ್ಯವನ್ನು ಕೊಂಡಾಡುತ್ತಿದ್ದರು. ಮುಹಮ್ಮದ್‌ರ(ಸ) ಯಾವನೇ ಶತ್ರು, ಅವರ ಚಾರಿತ್ರ್ಯದ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದನ್ನು ಇತಿಹಾಸ ಕಂಡಿಲ್ಲ. ಕಡು ವೈರಿಗಳು ಅವರ ಸಂದೇಶವನ್ನು ಸುಳ್ಳಾಗಿಸಿದರು. ಇಡೀ ಅರೇಬಿಯವನ್ನು ಅವರ ವಿರುದ್ಧ ಎತ್ತಿ ಕಟ್ಟಿದರು. ಆದರೆ ಯಾವೊಬ್ಬನಿಗೂ ಅವರ ಜೀವನ ಮತ್ತು ವ್ಯಕ್ತಿತ್ವದಲ್ಲಿ ಯಾವುದೇ ಸುಳ್ಳಾರೋಪ ವನ್ನೂ ಹೊರಿಸಲು ಸಾಧ್ಯವಾಗಿರಲಿಲ್ಲ.

ಮುಹಮ್ಮದ್‌ರ(ಸ) ಸತ್ಯಸಂಧತೆ, ಪ್ರಾಮಾಣಿಕತೆ, ನ್ಯಾಯವಂತಿಕೆಯಿಂದ ಪ್ರಭಾವಿತವಾಗಿ

ಜನಾಂಗದ ಮಂದಿ ಅವರಿಗೆ 'ಅಮೀನ್' ಎಂಬ ಬಿರುದು ನೀಡಿದ್ದರು. ಎಲ್ಲರೂ ಅವರನ್ನು ಗೌರವಿಸುತ್ತಿದ್ದರು. ಮುಹಮ್ಮದ್‌ರ(ಸ) ಶ್ರೇಷ್ಠತೆಯನ್ನು ಅರಿತ ಹಿರಿಯ ಕುರೈಶ್ ಸರದಾರರುಗಳೂ ಅವರನ್ನು ಗೌರವಿಸಲು ನಿರ್ಬಂಧಿತರಾಗುತ್ತಿದ್ದರು. ಅವರು ಎತ್ತಲಿನಿಂದ ಹಾದುಹೋದರೂ ಜನರಾಡಿಕೊಳ್ಳುತ್ತಾರೆ... "ನೋಡಿ, ಅಬ್ದುಲ್ಲಾನ ಸತ್ಯಸಂಧ, ದೇವಭಕ್ತ ಸುಪುತ್ರ ಹೋಗುತ್ತಿದ್ದಾನೆ!" ತರುವಾಯ ಅವರನ್ನು ಪ್ರಶಂಸಿಸಲಾಗುತ್ತದೆ ಅವರಲ್ಲಿ ಇಂತಿಂತಹ ವಿಶೇಷತೆಗಳಿವೆ, ಇಂತಿಂತಹ ಶ್ರೇಷ್ಠತೆಯಿದೆ!

ಕಲಹಕ್ಕೆ ಬಿತ್ತು ಪೂರ್ಣವಿರಾಮ

ಒಮ್ಮೆ ಮಕ್ಕಾದ ಪರಿಸರ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯಿತು. ಜಡಿಮಳೆ! ಹಲವು ದಿನಗಳ ತನಕ ವರ್ಷಧಾರೆ ಸುರಿಯಿತು... ಕವಿದ ಮೋಡ ಚದುರುವ ಲಕ್ಷಣವೇ ಗೋಚರಿಸುತ್ತಿರಲಿಲ್ಲ. ಪರಿಣಾಮವಾಗಿ ಮಕ್ಕಾ ನಗರದಲ್ಲಿ ಭೀಕರ ನೆರೆ ದಾಳಿಯಿಟ್ಟಿತು. ಗಲ್ಲಿಗಲ್ಲಿಗಳಲ್ಲಿ ಕಾಲುವೆಗಳಂತೆ ನೀರು ಹರಿಯತೊಡಗಿತು. ಅನೇಕ ಮನೆಗಳು ನೆಲಸಮವಾದುವು. ಮಕ್ಕಾ ನಿವಾಸಿಗಳು ತೀವ್ರ ಸಂಕಷ್ಟಕ್ಕೆ ಗುರಿಯಾದರು. ಕಅಬಾ ಭವನವೂ ನೆರೆಹಾವಳಿಗೆ ತುತ್ತಾಯಿತು. ಕಅಬಾಲಯಾದ ಗೋಡೆ ಜರಿದು ಬಿತ್ತು. ಅದರೊಂದಿಗೇ ಹಜರುಲ್ ಅಸ್ವದ್ ಕೂಡಾ ಕಳಚಿ ಬಿತ್ತು.

ಕಅಬಾಲಯವನ್ನು ಅರೇಬಿಯದ ಸಕಲರೂ ಗೌರವಿಸುತ್ತಿದ್ದರು. ವಿಗ್ರಹಾರಾಧನೆ ಯಲ್ಲಿನ ಅಮಿತ ಆಸಕ್ತಿ ಮತ್ತು ಭಕ್ತಿ ಭಾವದ ಹೊರತಾಗಿಯೂ ಅಲ್ಲಾಹನ ಭವನದ ಮೇಲಿನ ಗೌರವಾದರವು ಅವರ ಮನಮಸ್ತಿಷ್ಕಗಳಿಂದ ದೂರವಾಗಿರಲಿಲ್ಲ. ಅವರಿಗೆ ತಮ್ಮ ಮನೆ, ವಿಹಾರಗೃಹ, ಜಾನುವಾರುಗಳ ಹಟ್ಟಿಗಳ ದುರಸ್ತಿಗಿಂತಲೂ ಕಅಬಾಲಯದ ದುರಸ್ತಿಯೇ ಪ್ರಮುಖ ವಿಷಯವಾಯಿತು. ಎಲ್ಲರೂ ಆದರಾಸಕ್ತಿ ಮತ್ತು ಭಕ್ತ್ಯುತ್ಸಾಹದೊಂದಿಗೆ ಈ ಸತ್ಕಾರ್ಯದಲ್ಲಿ ಪಾಲ್ಗೊಂಡರು. ಹರೆಯಕ್ಕೆ ಕಾಲಿಟ್ಟಿದ್ದ ಮುಹಮ್ಮದ್‌ರೂ(ಸ) ಕುರೈಶರೊಂದಿಗೆ ಕಲ್ಲುಗಳನ್ನು ಹೊತ್ತು ತಂದು ಕಅಬಾಲಯದ ಗೋಡೆ ಕಟ್ಟುವವರಿಗೆ ನೆರವಾಗುತ್ತಿದ್ದರು.

ಕಅಬಾಲಯದ ಗೋಡೆ ನಿರ್ಮಿಸಿಯಾದ ಮೇಲೆ, ಹಜರುಲ್ ಅಸ್ವದನ್ನು ನಿಲ್ಲಿಸುವ ಪ್ರಶ್ನೆಯೆದ್ದಿತು. ಪ್ರತಿಯೊಬ್ಬರೂ ಈ ಪವಿತ್ರ ಕರಿಶಿಲೆಯನ್ನು ಪ್ರತಿಷ್ಠಾಪಿಸುವ ಗೌರವಕ್ಕೆ ಹಾತೊರೆದರು. ಮಾತಿಗೆ ಮಾತು ಬೆಳೆದು, ಗೋತ್ರಗಳ ಘನತೆ-ಮೇಲ್ಮೆಯ ಚರ್ಚೆ ಶುರುವಾಯಿತು. ಒಬ್ಬ ಹೇಳಿದ, "ಅಬ್ರಹನು ಕಅಬಾಲಯದ ಮೇಲೆ ಆನೆಗಳ ಸೇನೆಯೊಂದಿಗೆ ಆಕ್ರಮಣ ನಡೆಸಿದಾಗ, ನಾನು ಮತ್ತು ನನ್ನ ತಂದೆ ಕಅಬಾಲಯದ ರಕ್ಷಣೆಯಲ್ಲಿ ಮುಂಚೂಣಿ ಯಲ್ಲಿದ್ದೆವು. ಆದ್ದರಿಂದ ಹಜರುಲ್ ಅಸ್ವದನ್ನು ಪ್ರತಿಷ್ಠಾಪಿಸುವ ಹಕ್ಕು ನನಗೇ ಸೇರಿದ್ದು." ಇನ್ನೊಬ್ಬ ಹೇಳಿದ, "ಫುಜ್ಜಾರ್ ಯುದ್ಧದಲ್ಲಿ ನನ್ನ ಗೋತ್ರದ ಜನರು ಜೀವದ ಹಂಗು ತೊರೆದು ಹೋರಾಡದಿರುತ್ತಿದ್ದರೆ, ಕುರೈಶರು ತಮ್ಮ ಘನತೆ, ಗೌರವ, ಆದರಗಳನ್ನೆಲ್ಲಾ ಕಳೆದುಕೊಳ್ಳುತ್ತಿದ್ದರು." ಮತ್ತೊಬ್ಬ ಹೇಳಿದ, "ನನ್ನ ತಾತ ಎರಡು ಬಾರಿ ಎಲ್ಲಾ ಹಾಜಿಗಳಿಗೆ

ಅನ್ನಸಂತರ್ಪಣೆ ಮಾಡಿದ್ದರು. ಅದರಿಂದಾಗಿ ಅವರ ಎಲ್ಲ ಆಸ್ತಿ-ಸಂಪತ್ತು ಅತಿಥಿ ಸತ್ಕಾರದಲ್ಲಿ ಕರಗಿಹೋಗಿತ್ತು." ಮಗದೊಬ್ಬ ಖಡ್ಗ ಸರಿಪಡಿಸುತ್ತಾ ಹೇಳಿದ, "ವರ್ಷಗಳಿಂದ ಊದುಕಡ್ಡಿ, ಲೋಬಾನ, ಸುಗಂಧ ದ್ರವ್ಯಗಳನ್ನು ನಮ್ಮ ಗೋತ್ರದ ಮಂದಿಯೇ ಉರಿಸುತ್ತಿರುವುದಲ್ಲವೇ?"

ಜನರಲ್ಲಿ ಆವೇಶ ಉಕ್ಕಿ ಹರಿಯತೊಡಗಿತು. ಕೆಲವು ಮಂದಿ ಕಿಡಿಗೇಡಿಗಳು ಅರಬ್ ಸಂಪ್ರದಾಯದಂತೆ ರಕ್ತಪಾತಕ್ಕೆ ಕೈ ಹಚ್ಚಿಯೇ ಬಿಟ್ಟರು. ಒಂದೋ ನಾವು ಕಅಬಾ ಗೋಡೆಯ ಮೇಲೆ ಕರಿಶಿಲೆಯನ್ನು ಪ್ರತಿಷ್ಠಾಪಿಸುವೆವು, ಇಲ್ಲವೇ ಹೋರಾಡಿ ಮಡಿಯು ವೆವು... ಇನ್ನು ಈ ಮಾತನ್ನು ನಮ್ಮ ಖಡ್ಗವೇ ತೀರ್ಮಾನಿಸಲಿದೆ... ಯಾರಲ್ಲಿ ಬಲವಿರು ವುದೋ, ಅವರೇ ಪ್ರತಿಷ್ಠಾಪನೆಯ ಗೌರವಕ್ಕೆ ಪಾತ್ರರಾಗುವರು... ಎಂಬಿತ್ಯಾದಿ ಶಪಥಗಳೇ ಅವರೆಲ್ಲರ ಬಾಯಿಯಿಂದ ಹೊರಡುತ್ತಿದ್ದುವು.

ಕಲಹ ನಾಲ್ಕು ದಿನಗಳ ತನಕ ಮುಂದುವರಿಯಿತು. ಐದನೆಯ ದಿನ, ಕುರೈಶರ ಪೈಕಿ ವಯೋವೃದ್ಧರಾಗಿದ್ದ ಅಬೂ ಉಮಯ್ಯ ಬಿನ್ ಮುಗೀರಾ ಜನರನ್ನು ಕರೆದು ಹೇಳಿದರು, "ಮೂರ್ಖ ಜನರೇ! ನಿಯಂತ್ರಣ ಮೀರಬೇಡಿರಿ! ಪವಿತ್ರ ಹರಮ್ ನೆಲವನ್ನು ರಕ್ತದಿಂದ ತೋಯಿಸಿ ಬಿಡುವ ಹುಚ್ಚು ಆವೇಶ ಬಿಟ್ಟು ಬಿಡಿ. ಇಲ್ಲಿ ಖಡ್ಗವೆತ್ತಿದರೆ ಮತ್ತೆ ಕೆಳಗಿಳಿಸಲು ಸಾಧ್ಯವಾಗದು. ಯುದ್ಧದ ಕೆನ್ನಾಲಿಗೆಯು ಯುಗಗಳನ್ನು ಕರಟಿಸಿ ಬಿಟ್ಟೀತು! ಪ್ರತಿಯೊಂದು ಸಮಸ್ಯೆ ಖಡ್ಗವೇ ಪರಿಹಾರವೆಸಗಲು ಸಾಧ್ಯವಿಲ್ಲ. ಅದರ ಇತರ ನಿವಾರಣೋಪಾಯಗಳೂ ಇವೆ."

ಜನರೆಲ್ಲ ಒಕ್ಕೊರಲಿನಿಂದ ಕೇಳಿದರು, "ಹಾಗಾದರೆ ಸರಿ, ನಾವು ಏನು ಮಾಡಬೇಕೆಂದು ನೀವೇ ಹೇಳಿ." ಅಬೂ ಉಮಯ್ಯ ಹೇಳಿದರು, "ಸಮಸ್ಯೆಯನ್ನು ರಾಜಿ ಪಂಚಾಯಿತಿಕೆಯಲ್ಲಿ ಇತ್ಯರ್ಥಗೊಳಿಸೋಣ. ಆದರೆ ಮಧ್ಯಸ್ಥಿಕೆದಾರ ಯಾರಾಗಬೇಕೆಂಬುದೂ ಪುನಃ ಕಲಹಕ್ಕೆ ಕಾರಣವಾಗಬಹುದು. ಅದಕ್ಕೆ ಪರಿಹಾರವನ್ನು ನಾನೇ ಕಂಡು ಹುಡುಕಿ ದ್ದೇನೆ. ಅದೇನೆಂದರೆ, ನಾಳೆ ಬೆಳಿಗ್ಗೆ ಯಾರು ಮೊತ್ತ ಮೊದಲು ಕಅಬಾಲಯ ಪ್ರವೇಶಿಸುತ್ತಾರೋ, ಅವರನ್ನೇ ತೀರ್ಪುಗಾರನನ್ನಾಗಿ ಅಂಗೀಕರಿಸೋಣ. ಆತ ಹೇಗೆ ತೀರ್ಮಾನ ಕೈಗೊಳ್ಳುತ್ತಾರೋ ಅದನ್ನು ಶಿರಸಾ ಪಾಲಿಸೋಣ."

ಎಲ್ಲರೂ ಗೋಣಾಡಿಸಿದರು, "ಸರಿ, ನಮಗೆ ಒಪ್ಪಿಗೆಯಿದೆ" ಎನ್ನುತ್ತಾ ಎಲ್ಲರೂ ಚದುರಿದರು. ಸೂರ್ಯ ಅಸ್ತಮಿಸಿದ... ರಾತ್ರಿಯಾವರಿಸಿತು... ತರುವಾಯ ಪ್ರಭಾತದ ಬೆಳ್ಳಿ ರೇಖೆ ಪೂರ್ವದಿಗಂತದಲ್ಲಿ ಮೂಡಿತು. ಬೆಳಕು ಹರಿಯಲಾರಂಭವಾಗುತ್ತಿದ್ದಂತೆಯೇ ಮುಹಮ್ಮದ್ ಬಿನ್ ಅಬ್ದುಲ್ಲಾ ಕಅಬಾಲಯ ಪ್ರವೇಶಿಸುತ್ತಿರುವುದನ್ನು ಜನರು ಕಂಡರು. ಹೀಗೆ ಎಲ್ಲರೂ ಸೇರಿ, "ನೀವೇ ಮಧ್ಯಸ್ಥಿಕೆದಾರ. ನಿಮ್ಮ ತೀರ್ಪನ್ನು ನಾವು ಶಿರಸಾ ಪಾಲಿಸುವೆವು" ಎಂದು ಹೇಳಿ ಮುಹಮ್ಮದ್‌ರ(ಸ) ಮುಖವನ್ನೇ ದಿಟ್ಟಿಸತೊಡಗಿದರು. ಅರೆ ಬಿರಿದ ಕೆಂದಾವರೆಯಂಥ ಆಧರಗಳ ಚಲನೆಯು ಯಾರ ಪಕ್ಷದಲ್ಲಿ ತೀರ್ಪು ನೀಡುವುದೋ ಎಂದು ಕಾತರಿಸತೊಡಗಿದರು. ಎಲ್ಲರ ಮುಖದಲ್ಲೂ ನಿರೀಕ್ಷೆಯೂ ಇತ್ತು, ನಿರಾಶೆಯೂ ಇತ್ತು.

ಇಂತಹ ಸಂದರ್ಭಗಳಲ್ಲಿ ಚಿತ್ರದ ಪ್ರಖರ ಮತ್ತು ಅಂಧಕಾರ ಮಗ್ಗುಲುಗಳೆರಡೂ ಕಣ್ಣ ಮುಂದೆ ಅನಾವರಣಗೊಳ್ಳುತ್ತಿರುತ್ತವೆ.

ಮುಹಮ್ಮದ್‌ರು(ಸ) ಕಅಬಾಲಯದ ನೆಲದ ಮೇಲೆ ತಮ್ಮ ಚದ್ದರವನ್ನು ಹರಡಿದರು. ಕುರೈಶರು ಆಶ್ಚರ್ಯದೊಂದಿಗೆ ನೋಡುತ್ತಾ ನಿಂತರು, ಚದ್ದರವನ್ನು ನೆಲದಲ್ಲಿ ಹಾಸುವುದರ ಇಂಗಿತವೇನೆಂದು ತಿಳಿಯದೆ! ಅದರಲ್ಲಿ ಹೆಸರುಗಳನ್ನು ಬರೆದು ಚೀಟಿಯೆತ್ತ ಲಾಗುವುದೇ? ಅಥವಾ ಆ ಚದ್ದರದ ಮೂಲಕ ಯಾವುದೋ ಕ್ಲಿಷ್ಟಕರ ವ್ಯಾಯಾಮ ಮಾಡಲು ಹೇಳಿ, ಅದರಲ್ಲಿ ಯಶಸ್ಸು ಹೊಂದಿದವರಿಗೆ ಕರಿಶಿಲೆ ಪ್ರತಿಷ್ಠಾಪಿಸುವ ತೀರ್ಪು ನೀಡಲಾಗುವುದೇ? ಏನಾಗುತ್ತದೋ ನೋಡೋಣ.

ಮುಹಮ್ಮದ್‌ರು(ಸ) ಕರಿಶಿಲೆಯನ್ನೆತ್ತಿ ಚದ್ದರದ ಮೇಲಿರಿಸಿದರು. ತರುವಾಯ, "ಎಲ್ಲ ಗೋತ್ರಗಳ ಒಬ್ಬೊಬ್ಬ ವ್ಯಕ್ತಿ ಚದ್ದರದ ಅಂಚನ್ನು ಹಿಡಿಯಿರಿ. ಹೀಗೆ ಹಜರುಲ್ ಅಸ್ವದನ್ನು ಸ್ವಸ್ಥಾನದಲ್ಲಿರಿಸಿದ ಗೌರವ ಎಲ್ಲರಿಗೂ ಸಮಾನವಾಗಿ ಪ್ರಾಪ್ತವಾಗುವುದು" ಎಂದು ತೀರ್ಪಿತ್ತರು. ಅದನ್ನು ಕೇಳಿ ಪ್ರತಿಯೊಂದು ಗೋತ್ರದ ಒಬ್ಬೊಬ್ಬ ಸರದಾರ ಮುಂದೆ ಬಂದು ಹಜರುಲ್ ಅಸ್ವದ್ ಇರಿಸಿದ ಚದ್ದರವನ್ನೆತ್ತಿದರು ಮತ್ತು ಈ ರೀತಿಯಾಗಿ ಎಲ್ಲರೂ ಒಟ್ಟುಗೂಡಿ ಕಅಬಾ ಗೋಡೆಯಲ್ಲಿ ಹಜರುಲ್ ಅಸ್ವದನ್ನು ನಿಲ್ಲಿಸಿದರು.

ಮುಹಮ್ಮದ್‌ರ(ಸ) ಈ ತೀರ್ಪಿನಿಂದ ಎಲ್ಲರೂ ಸಂತುಷ್ಟರಾದರು. ಒರೆಯಿಂದ ಹೊರಬಂದಿದ್ದ ಖಡ್ಗಗಳು ಸ್ವಸ್ಥಾನ ಸೇರಿದವು. ಒಂದು ದೊಡ್ಡ ರಕ್ತಪಾತವು ತಪ್ಪಿ ಹೋಯಿತು. ಎಲ್ಲರೂ ಮುಹಮ್ಮದ್‌ರ(ಸ) ಧೀಮಂತಿಕೆ, ಸಮಯಪ್ರಜ್ಞೆ, ಜಾಣ್ಮೆಯನ್ನು ಕೊಂಡಾಡಿದರು. ಮಕ್ಕಾ ನಗರದಾದ್ಯಂತ ಈ ಸಂಧಾನಕರ ತೀರ್ಪಿನದ್ದೇ ಚರ್ಚೆ. ಇಬ್ನು ಅಬ್ದುಲ್ಲಾರ ಜಾಣ್ಮೆಯಿಂದಾಗಿ ರಕ್ತಪಾತವಾಗುವುದು ತಪ್ಪಿತು. ಅನ್ಯಥಾ ಖಡ್ಗಗಳ ಹೊಳಪು ಈ ಕಲಹವನ್ನು ಬನೂ ಬಕರ್ ಮತ್ತು ಬನೂ ತುಗ್‌ಲಬ್‌ರ ಭೀಕರ ಯುದ್ಧದ ರಕ್ತ ಪಾತವನ್ನೂ ಮೀರಿಸು ವುದರಲ್ಲಿತ್ತು. ಹೀಗೆ ಮುಹಮ್ಮದ್(ಸ) ಕೇವಲ ಸಭ್ಯ, ಧರ್ಮನಿಷ್ಠ, ಪ್ರಾಮಾಣಿಕ ಮತ್ತು ಸತ್ಯಸಂಧರಾಗಿರುವುದು ಮಾತ್ರವಲ್ಲ, ಅವರು ನ್ಯಾಯ ತೀರ್ಮಾನ ಕೈಗೊಳ್ಳುವ ಹಾಗೂ ಪರಸ್ಪರರ ಜಗಳವನ್ನು ತಪ್ಪಿಸುವ ಸಾಮರ್ಥ್ಯ ವನ್ನೂ ಹೊಂದಿದ್ದಾರೆ ಎಂಬುದನ್ನೂ ಮಕ್ಕಾವಾಸಿಗಳು ಕಂಡುಕೊಂಡರು.

ಞ◆◆◆ಡ

ಸಿರಿಯಾ ಪಯಣದಿಂದ ದಾಂಪತ್ಯ ಬಂಧನಕ್ಕೆ

ಬಾಲಕ ಮುಹಮ್ಮದ್‌ರನ್ನು ಚಿಕ್ಕಪ್ಪ ಅಬೂತಾಲಿಬ್ ಸಾಕುತ್ತಿದ್ದರಷ್ಟೇ. ಆದರೆ ಮುಹಮ್ಮದ್... ಅಬ್ದುಲ್ಲಾರ ಅನಾಥಮುತ್ತು... ಇತರ ಹುಡುಗರಂತೆ ಆಟ-ವಿನೋದ ಗಳಲ್ಲಿ ಬಾಲ್ಯವನ್ನು ಕಳೆಯಲಿಲ್ಲ. ಚಿಕ್ಕಪ್ಪ ತನ್ನನ್ನು ಪೋಷಿಸುವುದಕ್ಕೆ ಪ್ರತಿಯಾಗಿ, ಅವರ ಆಡುಗಳನ್ನು ಕಾಡುಮೇಡುಗಳಲ್ಲಿ ಹಗಲಿಡೀ ಮೇಯಿಸಿ ತರುತ್ತಿದ್ದರು. ಬೆಳೆದು ಯುವಕರಾದಾಗ, ತನ್ನ ಕಾಲ ಮೇಲೆ ನಿಂತುಕೊಳ್ಳಲು ಮತ್ತು ಇಹಲೋಕ ಜೀವನದ ಬಾಳುವೆಗಾಗಿ ಅತ್ಯಂತ ಗೌರವಯುತ ಜೀವನಾಧಾರವಾದ ವ್ಯಾಪಾರವನ್ನು ಕೈಗೊಳ್ಳ ತೊಡಗಿದರು. ಮುಹಮ್ಮದ್ ಶುದ್ಧಹಸ್ತರೂ ಪ್ರಾಮಾಣಿಕರೂ ಆಗಿದ್ದಾರಷ್ಟೇ. ವ್ಯಾಪಾರಕ್ಕೆ ಸಂಬಂಧಿಸಿ, ಯಾರೊಂದಿಗಾದರೂ ವ್ಯವಹಾರ ಕುದುರಿಸಿದರೆ ಅಥವಾ ಮಾತುಕೊಟ್ಟರೆ, ನಂತರ ಭೂಮಿ-ಆಕಾಶ ಒಂದಾಗಿ ಬಿಡಲಿ ಅಥವಾ ವ್ಯಾಪಾರದಲ್ಲಿ ಎಂಥ ನಷ್ಟವೇ ಸಂಭವಿಸಲಿ, ಅವರು ಕೊಟ್ಟ ಮಾತಿಗೆ ತಪ್ಪಿದವರಲ್ಲ. ಅಂತಹ ಒಂದು ಕಲ್ಪನೆಯೇ ಅವರ ಕನಸು ಮನಸಿನಲ್ಲಿ ಹುಟ್ಟಿದ್ದಿಲ್ಲ. ಯಾರೊಂದಿಗಾದರೂ ಸರಕನ್ನು ಖರೀದಿಸುವು ದಿದ್ದರೆ ತೀರ್ಮಾನವನ್ನು ಮಾರುವವರ ಮರ್ಜಿಗೇ ಬಿಡುತ್ತಿದ್ದರು. ಆತ ಕೊಂಚ ಕಡಿಮೆ ಅಳೆದೋ ತೂಗಿಯೋ ಕೊಟ್ಟರೆ ಮರುಮಾತನಾಡದೆ ಪಡಕೊಳ್ಳುತ್ತಿದ್ದರು. ಆದರೆ ಸ್ವಯಂ ಮಾರುವಾಗ ಸರಕಿನ ತಟ್ಟೆಯನ್ನು ಭಾರವಾಗಿ ತೂಗಿಸಿಯೇ ಮಾರುತ್ತಿದ್ದರು. ವರ್ತಕರಲ್ಲಿ ಅವರ ಪ್ರಾಮಾಣಿಕತೆ ಮತ್ತು ವ್ಯವಹಾರ ಪ್ರಜ್ಞೆಯ ಬಗ್ಗೆ ಸದಾ ಚರ್ಚೆ ನಡೆಯುತ್ತಿ ರುತ್ತದೆ... ವ್ಯಾಪಾರ-ವ್ಯವಹಾರದಲ್ಲಿ ಜಗತ್ತು ಒಂದೊಂದು ಪೈಸೆಗೂ ಜೀವ ಬಿಡುತ್ತಿ ರುವಾಗ, ಪ್ರತಿಯೋರ್ವನೂ ತನ್ನ ಲಾಭಕ್ಕಾಗಿ ಎಂಥ ತಪ್ಪು ದಾರಿಗೆ ಇಳಿಯಲೂ ಹೇಸದಿರುವಾಗ, ವ್ಯಾಪಾರಾಭಿವೃದ್ಧಿಗಾಗಿ ನಿತ್ಯ ನೂತನ ಸಂಚುಗಳನ್ನು ಹುಟ್ಟು ಹಾಕುತ್ತಿರು ವಾಗ, ಈ ಇಬ್ನು ಅಬ್ದುಲ್ಲಾ ವಿಶಾಲಹಸ್ತ ವರ್ತಕರಾಗಿದ್ದಾರೆಂಬುದೇ ಎಲ್ಲರ ಅಭಿಪ್ರಾಯ ವಾಗಿತ್ತು. ವ್ಯಾಪಾರದಲ್ಲಿ ಹೃದಯ ವೈಶಾಲ್ಯ ಮೆರೆಯುವ ಬೇರೊಬ್ಬರನ್ನು ಆಗಿನ ಕಾಲವು ಕಂಡಿದ್ದಿಲ್ಲ.

ಖುವೈಲಿದ್‌ರ ಮಗಳು ಖದೀಜಾ, ಅತ್ಯಂತ ಸಭ್ಯಳಾದ ಶ್ರೀಮಂತ ವಿಧವೆ ಯಾಗಿದ್ದರು. ನೌಕರರು ಮತ್ತು ನಿಕಟ ಸಂಬಂಧಿಗಳು ಅವರ ವ್ಯಾಪಾರವನ್ನು ನೋಡಿಕೊಳ್ಳುತ್ತಿದ್ದರು. ಯುವ ವರ್ತಕ ಮುಹಮ್ಮದ್‌ರ ಪ್ರಾಮಾಣಿಕತೆ ಮತ್ತು ಸತ್ಯ ಸಂಧತೆಯ ಬಗ್ಗೆ ತಿಳಿದು

ಕೊಂಡಾಗ ಖದೀಜರು, ತನ್ನ ವ್ಯಾಪಾರಿ ಸರಕನ್ನು ಸಿರಿಯಕ್ಕೆ ಕೊಂಡು ಹೋಗಿ ಮಾರು ವಂತೆ ಸಂದೇಶ ಕಳುಹಿಸುವ ಮೂಲಕ ಮುಹಮ್ಮದ್‌ರೊಡನೆ ವಿನಂತಿಸಿದರು. ನನಗೆ ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸವಿದೆಯೆಂದೂ ನಿಮ್ಮ ಒಪ್ಪಿಗೆಯು ನನ್ನಂಥ ವಿಧವೆಯ ಮೇಲೆ ಬಹಳ ಉಪಕಾರವಾದೀತು ಎಂದೂ ಹೇಳಿ ಕಳುಹಿಸಿದರು. ಮುಹಮ್ಮದ್‌ರು ಒಪ್ಪಿಗೆ ಸೂಚಿಸಿದರು. ಕೆಲವೇ ದಿನಗಳಲ್ಲಿ ಖದೀಜರ ವ್ಯಾಪಾರಿ ತಂಡವು ಮುಹಮ್ಮದ್‌ರ ಸುಪುರ್ದಿಯಲ್ಲಿ ಸಿರಿಯದೆಡೆಗೆ ಸಾಗಿತು... ಈ ಒಂದು ಸಣ್ಣ ವ್ಯಾಪಾರಿ ತಂಡದಲ್ಲಿ ಅವರೊಡನೆ ಖದೀಜರ ಸಂಬಂಧಿ ಖಿರ್ಝ್ಯಿಮ ಮತ್ತು ಗುಲಾಮ ಮೈಸರ ಕೂಡ ಇದ್ದರು.

ಆ ಹಾದಿ... ಮುಹಮ್ಮದ್‌ರ ತಂದೆ ಅಬ್ದುಲ್ಲಾರೂ ಹಾದು ಹೋಗಿದ್ದ ಆ ಹಾದಿಯಲ್ಲಿ ಅವರ ಹೆಜ್ಜೆ ಗುರುತುಗಳನ್ನು ಬದಲಾಗುತ್ತಿದ್ದ ಕಾಲವು ಅಳಿಸಿ ಹಾಕಿತ್ತು. ಆದರೆ ಅತ್ತಲಿನಿಂದ ಹಾದು ಹೋಗುವಾಗ, ತಂದೆಯ ಮೇಲಿನ ಪ್ರೀತಿಯಿಂದ ಮುಹಮ್ಮದ್‌ರಿಗೆ ಅನಿರ್ವಚನೀಯ ಅನುಭೂತಿಯುಂಟಾಗುತ್ತಿತ್ತು...

ಹೋ! ಇಲ್ಲಿಂದ ಯಾರೋ ಹಾದು ಹೋಗಿದ್ದರು!

ಪ್ರೀತಿಯ ಸೆಳೆ ಎಂತಹುದು!? ಅದು ಗತವನ್ನು ವರ್ತಮಾನವಾಗಿಯೂ ವರ್ತಮಾನ ವನ್ನು ಭವಿಷ್ಯವಾಗಿಯೂ ಬದಲಾಯಿಸುತ್ತದೆ. ಮುಹಮ್ಮದ್‌ರಲ್ಲುಂಟಾಗಿದ್ದ ಅನುಭೂತಿಯು ಗತ ಘಟನೆಗಳನ್ನು ಮೆಲುಕು ಹಾಕುವಂತೆ ಪ್ರೇರೇಪಿಸಿತು. ಅಬ್ದುಲ್ಲಾರ ಯೌವನಾವಸ್ಥೆಯ ಮರಣ, ಆಮಿನರ ಕಿರಿ ವಯಸ್ಸಿನ ವೈಧವ್ಯ, ಪ್ರೀತಿಯ ಮೌನ ರೋದನವು ಒಂಟೆಗಳ ಗಂಟೆನಾದದಲ್ಲಿ ತೇಲಿ ಹೋಗಿತ್ತು.

ಇದೇ ದಾರಿಯಲ್ಲಿ ಅನಾಥಮುತ್ತು ಹನ್ನೆರಡರ ಹರೆಯದಲ್ಲಿ, ಚಿಕ್ಕಪ್ಪ ಅಬೂತಾಲಿಬ್‌ರೊಂದಿಗೆ ಸಿರಿಯಕ್ಕೆ ಹೊರಟಿದ್ದರು. ಅವೇ ಕಣಿವೆಗಳು, ಅವೇ ಗುಡ್ಡ-ತಪ್ಪಲುಗಳು ಮತ್ತವೇ ಕಾಡು-ಮೇಡುಗಳನ್ನು ಈಗ ದಾಟಿ ಹೋಗುತ್ತಿದ್ದಾರೆ. ಆದರೆ ಕಾಲದ ಪರಿಭ್ರಮಣದೊಂದಿಗೆ ಹುಟ್ಟುತ್ತಿದ್ದ ಬಿರುಗಾಳಿಗೆ ಮರಳ ಕಣಗಳ ಸ್ಥಾನ ಪಲ್ಲಟವಾಗಿತ್ತು... ಕೆಲವೆಡೆ ದಾರಿಯ ದಿಕ್ಕೂ ಬದಲಾಗಿ ಬಿಟ್ಟಿತ್ತು. ಗುರಿಯ ಗುರುತು ಗಳೂ ವ್ಯತ್ಯಸ್ತವಾಗಿದ್ದುವು. ಹನ್ನೆರಡು-ಹದಿಮೂರು ಸಂವತ್ಸರಗಳಲ್ಲಿ ಇಂತಹ ಬದಲಾವಣೆ ಸ್ವಾಭಾವಿಕವೇ. ಅದು ಅಗತ್ಯ ಕೂಡ!

ಇದು ಅನಾಥಮುತ್ತಿನ ಇಪ್ಪತ್ತೈದರ ಹರೆಯ. ಹೊಣೆಗಾರಿಕೆ, ಪ್ರಜ್ಞಾವಂತಿಕೆ, ದೂರದರ್ಶಿತ್ವದ ಸೂರ್ಯ ಏರುಗತಿಯಲ್ಲಿದ್ದಂತಹ ಕಾಲ! ವ್ಯಾಪಾರಿ ತಂಡ ಹೊರಡುತ್ತಿತ್ತು... ತನ್ನ ಗಮ್ಯದೆಡೆಗೆ! ಈ ತಂಡವು ಅಮಾವಾಸ್ಯೆಯ ಕಾರಿರುಳಲ್ಲೂ ಗತಿಶೀಲವಾಗಿತ್ತು ಹಾಗೂ ಹುಣ್ಣಿಮೆಯ ಬೆಳದಿಂಗಳಲ್ಲೂ ಗುರಿಯೆಡೆಗೆ ಗಮಿಸುತ್ತಿತ್ತು... ಕೆಲವೆಡೆ ಬಿಸಿಲ ಬೇಗೆಯನ್ನೂ ಸಹಿಸಿತು ಹಾಗೂ ನೆರಳ ಆನಂದವನ್ನೂ ಅನುಭವಿಸಿತು... ಕೆಲವೆಡೆ ಧೂಳು ಮೆತ್ತಿದ, ಒಣಗಿದ, ಸತ್ವಹೀನ ಮುಳ್ಳುಗಂಟಿಗಳ ಹೊರತು ದೂರದೂರದವರೆಗೂ ಮರ ಗಿಡಗಳ ದರ್ಶನ ಭಾಗ್ಯವಿಲ್ಲದಂತಹ ಬಯಲು ಪ್ರದೇಶ; ಇನ್ನು ಕೆಲವೆಡೆ ಖರ್ಜೂರದ

ತೋಪ್ರುಗಳ ಆಹ್ಲಾದಕರ ದೃಶ್ಯ ವೈಭವ! ಮತ್ತೆ ಕೆಲವೆಡೆ ಹೊಲಗದ್ದೆಗಳ ಸುಂದರ ತೆನೆಗಳು ತೊನೆದಾಡುವ ಚುಂಬಕ ದೃಶ್ಯಕಾವ್ಯ!! ಖದೀಜಾ ಬಿಂತಿ ಖುವೈಲಿದ್‌ರ ಸಂಬಂಧಿ ಖುಝೈಮ ಮತ್ತು ಗುಲಾಮ ಮೈಸರ, ಯಾತ್ರೆಯಾದ್ಯಂತ ಹಲವು ವಿಶಿಷ್ಟ ದೃಷ್ಟಾಂತಗಳಿಗೆ ಸಾಕ್ಷಿ ಯಾಗುತ್ತಿದ್ದರು. ಹೆಜ್ಜೆ ಹೆಜ್ಜೆಗೂ ಸಮೃದ್ಧಿ-ಅನುಗ್ರಹಗಳ ವರ್ಷಧಾರೆ! ಅವರು ಅದು ವರೆಗೂ ಕಂಡಿಲ್ಲದಂತಹ ಘಟನಾವಳಿಗಳಿಗೂ ಪ್ರಭಾವಳಿಗಳಿಗೂ ಒಳಗಾದರು. ಅವರ ಆಶ್ಚರ್ಯ, ಕೌತುಕಗಳು ಹೆಜ್ಜೆಗೊಂದರಂತೆ ಸೇರಿಕೊಳ್ಳುತ್ತಿದ್ದುವು... ಮುಹಮ್ಮದ್ ವಿಶ್ರಾಂತಿಗೆಂದು ಒಣ ಮರದಡಿಯಲ್ಲಿ ಪವಡಿಸಿದಾಗ, ಆ ಮರ ಕ್ಷಣ ಮಾತ್ರದಲ್ಲಿ ಹಸಿಯಾಗಿ ಹಸಿರೆಲೆಗಳಿಂದ ಅಲಂಕೃತವಾಗತೊಡಗಿತು. ಅದೇ ಪ್ರದೇಶದಲ್ಲಿ ನಸ್ತೂರ್ ಎಂಬೋರ್ವ ಕ್ರೈಸ್ತ ಸನ್ಯಾಸಿಯಿದ್ದರು. ಆತ ಹೇಳಿದರು, "ಮುನ್ಸೂಚನೆ ಮತ್ತು ಪಾವನ ವ್ಯಕ್ತಿತ್ವಗಳ ಭವಿಷ್ಯವಾಣಿಗಳ ಆಧಾರದಲ್ಲಿ ಪ್ರಕಟವಾಗುವಂತಹ ವಾಸ್ತವಿಕಾಂಶಗಳನ್ನು ಹೇಳುವಲ್ಲಿ ನಾನು ವಿಳಂಬ ಮಾಡುವವನಲ್ಲ. ಈ ಒಣ ಮರದಡಿಯಲ್ಲಿ ವಿಶ್ರಾಂತಿ ಪಡೆಯಲು ಓರ್ವ ಲೋಕೋದ್ಧಾರಕ ಬರಲಿದ್ದಾನೆಂದೂ ಆತ ಅಲ್ಲಿ ಪವಡಿಸುತ್ತಲೇ ಮರ ಆತನ ಕೃಪೆಯಿಂದಾಗಿ ಹಸಿರಿನಿಂದ ತುಂಬಿಕೊಳ್ಳುವುದೆಂದೂ ನಾನು ಓದಿ ತಿಳಿದಿದ್ದೇನೆ." ಆ ಸನ್ಯಾಸಿಯ ಕೈಯಲ್ಲಿ ಇಂಜೀಲ್‌ನ ಕೆಲವು ಪುಟಗಳಿದ್ದುವು. ಅವುಗಳನ್ನು ಓದಿ ಹೇಳುತ್ತಾ ಆತ ಮಾತನಾಡುತ್ತಿದ್ದರು.

ಖದೀಜರ ವ್ಯಾಪಾರಿ ಸರಕಿನಲ್ಲಿ ಊಹಿಸಿದ್ದಕ್ಕಿಂತಲೂ ಹೆಚ್ಚು ಲಾಭವುಂಟಾಯಿತು. ಮುಹಮ್ಮದ್‌ರು ಆ ಎಲ್ಲ ಹಣವನ್ನು ಒಂದಿಷ್ಟೂ ಏರುಪೇರು ಮಾಡದೆ ಖದೀಜರ ಕೈಗಿತ್ತರು. ಈ ಪ್ರಾಮಾಣಿಕತೆಯಿಂದ ಖದೀಜರು ಬಹಳ ಪ್ರಭಾವಿತರಾದರು. ಮಕ್ಕಾ ನಗರದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿ ಕೊಡು-ಕೊಳ್ಳುವಿಕೆಯಲ್ಲಿ, ತೂಕಳತೆಗಳಲ್ಲಿ, ಖರೀದಿ-ಮಾರಾಟ ಗಳಲ್ಲಿ ನಿತ್ಯ ಜಗಳಗಳು, ವಂಚನೆಗಳು ನಡೆಯುತ್ತಿರುವುದನ್ನು ಖದೀಜ ಅರಿತಿದ್ದರು. ಪ್ರತಿಯೋರ್ವನೂ ಇತರರ ಸಂಪತ್ತನ್ನು ಅನ್ಯಾಯವಾಗಿ ಕಬಳಿಸಲು ಹವಣಿಸುತ್ತಿದ್ದ... ಜನರು ವಾಗ್ದಾನ-ಒಪ್ಪಂದ ಮಾಡುತ್ತಲೂ ಇದ್ದರು, ಮುರಿಯುತ್ತಲೂ ಇದ್ದರು... ಅಂತಹ ಜನರ ಮಧ್ಯೆ ಮುಹಮ್ಮದ್‌ರಂತಹ ಸತ್ಯಸಂಧ, ಪ್ರಾಮಾಣಿಕ ಮತ್ತು ನ್ಯಾಯನಿಷ್ಠ ವ್ಯಾಪಾರಿಯನ್ನು ಕಾಣುವುದು ಆಶ್ಚರ್ಯಜನಕ ಮಾತ್ರವಲ್ಲ, ಅದೊಂದು ಪವಾಡವೇ ಸರಿ!

ಖುಝೈಮ ಮತ್ತು ಮೈಸರ ಒಕ್ಕೊರಳಿನಿಂದ ಖದೀಜರಿಗೆ ವ್ಯಾಪಾರಿ ಯಾತ್ರೆಯ ಅನುಭವಗಳ ಸುರುಳಿಯನ್ನು ಬಿಚ್ಚಿಡತೊಡಗಿದರು... "ಇದುವರೆಗೂ ಯಾರೂ ಕಂಡು ಕೇಳರಿಯದಂತಹ ಪವಾಡಗಳನ್ನು ನಾವು ಮುಹಮ್ಮದ್‌ರೊಂದಿಗಿನ ಪ್ರಯಾಣದಲ್ಲಿ ಕಂಡೆವು! ಅಮಾವಾಸ್ಯೆಯ ಗಾಢಾಂಧಕಾರದ ರಾತ್ರಿಯಲ್ಲಿ ಮುಹಮ್ಮದ್‌ರ ಕಾರಣವಾಗಿ ಬೆಳದಿಂಗಳಂತಹ ಬೆಳಕು ಚೆಲ್ಲಿತ್ತು! ಒಣಗಿ ಸೊರಗಿದ್ದ ಮರದ ಕೆಳಗೆ ಮುಹಮ್ಮದ್ ಕುಳಿತದ್ದೇ ತಡ, ಒಣ ರೆಂಬೆಗಳಲ್ಲಿ ಯಾರೋ ಅಮೃತ ಸಿಂಚನಗೈದಂತೆ ಜೀವ ಕಳೆ ತುಂಬಿ ಹಸಿರಿನಿಂದ ನಳನಳಿಸತೊಡಗಿತು. ಪವಾಡಗಳು ಒಂದೆರಡೇನು? ಅಬ್ಬಾ! ನಾವು ಪ್ರಯಾಣದುದ್ದಕ್ಕೂ

ಅವರೊಂದಿಗೆ ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದೆವು. ಮೇಲಾಗಿ ಮುಹಮ್ಮದರಾದರೋ... ಇಷ್ಟೆಲ್ಲಾ ಸಮೃದ್ಧಿ ಹೊಂದಿದ್ದಾಗಿಯೂ ಅತ್ಯಂತ ಸ್ನೇಹಮಯಿ, ವಿನಯಶೀಲ, ದಯಾಳು ಮತ್ತು ಸಹಾನುಭೂತಿಯುಳ್ಳವರಾಗಿದ್ದಾರೆ. ಪ್ರಯಾಣದಲ್ಲಿ ನಮಗೆ ಯಾವುದೇ ರೀತಿಯ ತೊಂದರೆಯುಂಟಾಗದಂತೆ ನೋಡಿಕೊಂಡರು. ಎಲ್ಲ ಕೆಲಸಗಳನ್ನೂ ಸ್ವತಃ ಆಸಕ್ತಿ ವಹಿಸಿ ಮಾಡುತ್ತಿದ್ದರು. ಇಂತಹ ದಯಾಳು ಸಹಯಾತ್ರಿಕ ಎಲ್ಲರಿಗೂ ದೊರೆಯಲಾರರು. ಅವರ ಪರಿಶುದ್ಧತೆ ಮತ್ತು ಸತ್ಯನಿಷ್ಠೆಯನ್ನು ಬಣ್ಣಿಸಲಂತೂ ಪದಗಳೇ ಸಿಗುತ್ತಿಲ್ಲ... ಸಿರಿಯದ ಮಹಿಳೆಯರು ಬಹಳ ಸುಂದರಿಯರಾಗಿರುತ್ತಾರೆ. ಅವರ ಮೋಹಕ ಸೌಂದರ್ಯದ ಖ್ಯಾತಿಯು ದೂರ ದೂರದವರೆಗೂ ಚರ್ಚಿತವಾಗಿದೆ. ಆದರೆ ಮುಹಮ್ಮದ್‌ರಾದರೋ ಸಿರಿಯದ ಮಾರುಕಟ್ಟೆ, ಗಲ್ಲಿ, ಬೀದಿಗಳಲ್ಲಿ ನಡೆಯುವಾಗ ಎಂದೂ ಅತ್ತಿತ್ತ ಕಣ್ಣೆತ್ತಿ ನೋಡಿದ್ದನ್ನೂ ನಾವು ಕಂಡಿಲ್ಲ. ಅವರ ವ್ಯಕ್ತಿತ್ವವಾದರೋ ಲಜ್ಜೆ, ಸ್ವಾಭಿಮಾನ, ಗಾಂಭೀರ್ಯದ ಪುತ್ಥಳಿಯಾಗಿತ್ತು! ಈ ಜಗತ್ತು ಎಲ್ಲಿಯ ವರೆಗಿದೆ ಮತ್ತು ಎಷ್ಟು ದೊಡ್ಡದಿದೆಯೆಂದು ನಮಗೆ ತಿಳಿದಿಲ್ಲ. ನಾವು ಅರೇಬಿಯ ಮತ್ತು ಸಿರಿಯ ಇವೆರಡೇ ದೇಶಗಳನ್ನು ಕಂಡಿದ್ದೇವೆ. ಈ ದೇಶಗಳಲ್ಲಿ ಮುಹಮ್ಮದ್‌ರಂತಹ ಸಭ್ಯ, ಧರ್ಮನಿಷ್ಠ ಮತ್ತು ಸೌಭಾಗ್ಯವಂತ ವ್ಯಕ್ತಿಯನ್ನು ನಾವು ಕಂಡಿಲ್ಲವೆಂದು ಪ್ರಮಾಣ ಮಾಡಿ ಹೇಳುತ್ತೇವೆ. ಈ ಅರೇಬಿಯದ ಅಜ್ಞಾನಿಗಳು ತಮ್ಮ ಕಾವ್ಯಗಳು, ಧೀಮಂತಿಕೆ ಮತ್ತು ಕುಲ ಮಹಿಮೆಯ ಬಗ್ಗೆ ಜಂಭ ಕೊಚ್ಚಿಕೊಳ್ಳುತ್ತಲೇ ಸತ್ತು ಮಣ್ಣಾಗಿ ಹೋಗುತ್ತಾರೆ. ವಾಸ್ತವದಲ್ಲಿ ಅವರ ಮಟ್ಟಿಗೆ ಮುಹಮ್ಮದ್ ಕುರೈಶಿ ಅಲ್ ಹಾಶಿಮಿಯವರೇ ಎಲ್ಲಕ್ಕಿಂತ ಮಿಗಿಲಾದ ಹೆಮ್ಮೆಯಾಗಿದ್ದಾರೆ."

ಮಕ್ಕಾದ ಪ್ರತಿಯೋರ್ವ ವ್ಯಕ್ತಿಯೂ ಮುಹಮ್ಮದ್‌ರ ಚಾರಿತ್ರ್ಯ ಮತ್ತು ಸಜ್ಜನಿಕೆಯಿಂದ ಪ್ರಭಾವಿತನಾಗಿದ್ದ. ಖದೀಜರಿಗೆ, ಅವರ ಪ್ರಾಮಾಣಿಕತೆಯ ಸಾಕ್ಷಾತ್ ದರ್ಶನವು ವ್ಯಾಪಾರ-ವಹಿವಾಟಿನ ಮೂಲಕವಾಯಿತು. ಬಳಿಕ ಖುಝೈಮಾ ಮತ್ತು ಮೈಸರರ ದೃಕ್‌ಸಾಕ್ಷ್ಯದಿಂದಾಗಿ, ಅವರ ವಿಶ್ವಾಸವು ಇನ್ನಷ್ಟು ದೃಢವೂ ಅದರ ಪ್ರಭಾವವನ್ನು ಮತ್ತಷ್ಟು ಗಾಢವೂ ಆಗಿ ಮಾರ್ಪಟ್ಟಿತು. ಖದೀಜಾ ವಿಧವೆಯಾಗಿದ್ದರಷ್ಟೇ. ಅವರ ಬಾಳನ್ನು ಒಬ್ಬಂಟಿತನ ಕಾಡುತ್ತಿತ್ತು. ಸದಾ ಗಂಭೀರ ಮತ್ತು ದುಃಖತಪ್ತರಾಗಿರು ತ್ತಿದ್ದರು... ಬಾಡಿದ, ಸೊರಗಿದ ಸಂವೇದನೆಗಳು. ಆದರೆ ಮುಹಮ್ಮದ್‌ರ ಬಗ್ಗೆ ತಿಳಿದು ಕೊಂಡಾಗ ಅವರಲ್ಲಿ ಆಶಾಕಿರಣ ಮೊಳೆತು, ಒಮ್ಮೆಲೆ ಚಿಗುರಿಕೊಂಡು ಮನ-ಮಸ್ತಿಷ್ಕ ಒಂದಾಗಿ ಹೇಳಿದುವು, 'ಖದೀಜಾ! ನೋಡು, ಮುಹಮ್ಮದ್‌ರಂತಹ ಸಭ್ಯ, ಗೌರವಾನ್ವಿತ ಮತ್ತು ಸಜ್ಜನ ವ್ಯಕ್ತಿ ಇಡೀ ಮಕ್ಕಾ ನಗರದಲ್ಲಿ ಬೇರೆ ಯಾರೂ ಸಿಗಲಾರ... ಅವರ ಬಳಿಗೆ ಪರಿಶುದ್ಧವಾದ ಸಂದೇಶವನ್ನು ಕಳುಹಿಸು... ಮಕ್ಕಾದಲ್ಲಿ ಯುವಕರಿಗೆ ಮತ್ತು ಶ್ರೀಮಂತರಿಗೆ ಯಾವುದೇ ಕೊರತೆಯಿಲ್ಲ... ಆದರೆ ನಿನ್ನ ಕುಲೀನತೆಗೂ ಆ ದುರಾಚಾರಿಗಳಿಗೂ ಯಾವ ಹೋಲಿಕೆ? ಮುಹಮ್ಮದ್ ನಿನ್ನ ಸಂದೇಶವನ್ನು ಸ್ವೀಕರಿಸಿದರೆ ನಿನ್ನ ಅದೃಷ್ಟವು ಖುಲಾಯಿಸಿದಂತೆಯೇ ಸರಿ!'

ತಡಮಾಡದೆ ಖದೀಜಾ, ಮುಹಮ್ಮದ್‌ರಿಗೆ ವಿವಾಹದ ಪ್ರಸ್ತಾಪವನ್ನು ಕಳುಹಿಸಿದರು. ಅದನ್ನು ಮುಹಮ್ಮದ್‌ರು ಒಪ್ಪಿದರು. ಅವರು ತಮ್ಮ ಚಿಕ್ಕಪ್ಪಂದಿರಾದ ಅಬೂತಾಲಿಬ್, ಹಮ್‌ಝಾ ಮತ್ತಿತರ ನಿಕಟ ಬಂಧುಗಳೊಡಗೂಡಿ ಖದೀಜರ ಮನೆಗೆ ತೆರಳಿದರು. ಅಲ್ಲಿ ಅದಾಗಲೇ ಔತಣದ ವ್ಯವಸ್ಥೆ ಮಾಡಲಾಗಿತ್ತು. ಖದೀಜರ ಬಂಧುಗಳು ಅಲ್ಲಿ ಮುಹಮ್ಮದ್‌ರ ಆಗಮನವನ್ನು ಕಾಯುತ್ತಿದ್ದರು. ಅಬೂತಾಲಿಬ್‌ರು ಖುತ್ಬಾ (ಪ್ರವಚನ) ನೀಡಿದರು. ಆ ಖುತ್ಬಾದಲ್ಲಿ ಅವರು ಮೊತ್ತಮೊದಲು ಸೃಷ್ಟಿಕರ್ತನ ಸ್ತುತಿ ವಚನಗಳನ್ನು ಪಠಿಸಿದರು. ನಂತರ ಹೇಳಿದರು, "ಇಡೀ ಕುರೈಶ್ ಗೋತ್ರದಲ್ಲಿ ಮುಹಮ್ಮದ್‌ನಿಗೆ ಸಾಟಿಯಾದ ಬೇರೊಬ್ಬ ವ್ಯಕ್ತಿಯಿಲ್ಲ, ಯಾರೂ ಸಭ್ಯತೆ ಮತ್ತು ಸಜ್ಜನಿಕೆಯಲ್ಲಿ ನನ್ನ ಪ್ರಾಮಾಣಿಕ ಮತ್ತು ಸತ್ಯಸಂಧ ಸೋದರ ಪುತ್ರನಿಗೆ ಸಾಟಿ ಯಾಗಲಾರ. ಸಂಪತ್ತು-ಐಶ್ವರ್ಯಗಳೇನೂ ಅವನ ಬಳಿ ಇಲ್ಲದಿದ್ದರೇನು ಬಂತು? ಈ ಸಂಪತ್ತು, ಹಣ, ಅಂತಸ್ತುಗಳೆಲ್ಲವೂ ಇಂದು ಬರುತ್ತವೆ, ನಾಳೆ ಹೋಗುತ್ತವೆ. ಅದೊಂದು ಬಿಸಿಲು ನೆರಳಿನಂತೆ! ಇಂದು ಒಬ್ಬನ ಬಳಿ ಇದ್ದರೆ ನಾಳೆ ಇನ್ನೊಬ್ಬನ ಬಳಿಯಿರುತ್ತದೆ. ಸಂಪತ್ತಿನ ಬಗ್ಗೆ ಯಾವುದೇ ನಿರೀಕ್ಷೆ-ಭರವಸೆಯನ್ನಿರಿಸಲಾಗದು. ನಿಜವಾದ ಸೌಭಾಗ್ಯವು ವ್ಯಕ್ತಿಯ ಸಭ್ಯತೆಯಾಗಿದೆ. ಅದು ಎಂದೆಂದಿಗೂ ಬಾಕಿ ಯುಳಿದಿರುತ್ತದೆ."

ಮುಹಮ್ಮದ್-ಖದೀಜರ ನಿಕಾಹ್ ನೆರವೇರಿತು. ಇದು ಅನಾಥಮುತ್ತಿನ ಜೀವನದ ಸಂಪೂರ್ಣ ಭಿನ್ನವಾದ ಒಂದು ಕಾಲಘಟ್ಟವಾಗಿದೆ. ಖದೀಜಾ ಅತ್ಯುತ್ತಮ ಜೀವನ ಸಂಗಾತಿಯಾಗಿ ಸಾಬೀತಾದರು. ಸುಶೀಲೆ, ಅನುಸರಣಶೀಲೆ, ವಿನಯವಂತೆ, ಪತಿಯ ಸುಖ-ದುಃಖಗಳಲ್ಲಿ ಸಹಭಾಗಿ, ಎಲ್ಲ ರೀತಿಯಲ್ಲೂ ಸಹವರ್ತಿಯಾಗಿದ್ದರು. ಅವರು ಯಾವುದೇ ವಿಷಯದಲ್ಲೂ ಮುಹಮ್ಮದ್‌ರೊಂದಿಗೆ ಭಿನ್ನಾಭಿಪ್ರಾಯ ತೋರಿದವರಲ್ಲ. ಅವರ ಗುಣ-ಸ್ವಭಾವದಲ್ಲಿ ಪ್ರೀತಿ ಮತ್ತು ವಿಶ್ವಾಸ ಮೇಳೈಸಿತ್ತು. ಖದೀಜರೂ ಮುಹಮ್ಮದ್‌ರನ್ನು ನಿರೀಕ್ಷೆಗಿಂತಲೂ ಹೆಚ್ಚು ಹಿತಚಿಂತಕರಾಗಿ ಸಹಾನುಭೂತಿಯುಳ್ಳವರಾಗಿ ಕಂಡರು. ಅವರ ಬಗ್ಗೆ ಖದೀಜಾ ನಿಕಾಹ್‌ಗೆ ಮುಂಚೆ ಎಷ್ಟು ಸಜ್ಜನರೆಂದು ಭಾವಿಸಿದ್ದರೋ, ನಿಕಾಹ್‌ನ ಬಳಿಕ ಅದಕ್ಕಿಂತಲೂ ಹೆಚ್ಚು ಸಜ್ಜನರೂ ಧರ್ಮನಿಷ್ಠರೂ ಆಗಿ ಕಂಡುಕೊಂಡರು. ಅವರ ಬಹಿರಂಗವಷ್ಟೇ ಅಲ್ಲ, ಅಂತರಂಗವೂ ಅತ್ಯಂತ ಸಜ್ಜನಿಕೆ, ವಿನಯವಂತಿಕೆ ಮತ್ತು ಲಜ್ಜೆಯಿಂದ ಕೂಡಿತ್ತು. ಮಕ್ಕಾ ನಗರದ ಸಕಲ ಮಹಿಳೆಯರೂ ಖದೀಜರಿಗೆ ಮುಹಮ್ಮದ್ ರಂತಹ ಜೀವನ ಸಂಗಾತಿ ದೊರೆತ ಬಗ್ಗೆ ಈರ್ಷ್ಯೆಯನ್ನು ಹೊಂದಿದರು. ಆದರೆ ಈರ್ಷ್ಯೆಯನ್ನಿರಿಸುವುದರಿಂದ ಏನು ಪ್ರಯೋಜನ? ಆಗುವುದು ಮತ್ತು ಆಗಬೇಕಾದದ್ದು ಆಗಿಯೇ ತೀರಿತಲ್ಲ? ಅಷ್ಟೇ ಅಲ್ಲ, ಯಾರದೇ ಅದೃಷ್ಟದಲ್ಲಿರುವ ಅನುಗ್ರಹಗಳನ್ನು ಈರ್ಷ್ಯೆಯಿಂದ ಕಸಿಯಲಾಗದು ತಾನೇ? ಅದೇನಿದ್ದರೂ ಖದೀಜರ ಮಟ್ಟಿಗೆ ಜಗತ್ತಿನ ಅತ್ಯುತ್ತಮ ಸಂಗಾತಿ ದೊರೆಯುವರೆಂದು ವಿಧಿಲಿಖಿತ ತೀರ್ಪಾಗಿತ್ತು. ಅದೂ ಅಲ್ಲದೆ, ಈ ವಿಧಿಯನ್ನು ಬರೆದ

ಬಳಿಕ ಪ್ರಕೃತಿಯ ಲೇಖನಿ ಒಣಗಿ ಬಿಟ್ಟಿತ್ತು. ಮತ್ತೆಂದೂ ಬದಲಾಗ ದಂತಹ ವಿಧಿಬರಹ! ಯಾವ ಕಾರಣಕ್ಕೂ!!

ಖದೀಜರ ಸಾಂಗತ್ಯದಿಂದ ಮುಹಮ್ಮದ್‌ರಿಗೂ ಸಂತೃಪ್ತಿ ದೊರೆಯಿತು. ಅವರ ದಾಂಪತ್ಯವು ವೈಮನಸ್ಸು ಮತ್ತು ಅಸ್ವಾರಸ್ಯದಿಂದ ಮುಕ್ತವಾಗಿತ್ತು. ಉಭಯತ್ರರೂ ಪರಸ್ಪರರ ಪಾಲಿಗೆ ಹಿತಚಿಂತಕರೂ ಸಹಾನುಭೂತಿಯುಳ್ಳವರೂ ನೈಜ ಜೀವನ ಸಂಗಾತಿ ಗಳೂ ಆಗಿದ್ದರು. ಪ್ರಶಾಂತ, ಸಮಾಧಾನದ ಮತ್ತು ಒಲವಿನ ಜೀವನ. ದಾಂಪತ್ಯ, ವೈವಾಹಿಕ ಜೀವನದ ಸ್ವಾರಸ್ಯವೇ ಒಲವಿನಲ್ಲಿರುತ್ತದೆ ಹಾಗೂ ಪರಸ್ಪರ ಹಿತಚಿಂತನೆ ಮತ್ತು ಪರಸ್ಪರರಿಗಾಗಿ ಒಳಿತನ್ನು ಬಯಸುವುದರಲ್ಲಿದೆ. ಇದಿಲ್ಲದಿರುತ್ತಿದ್ದರೆ ಸ್ವರ್ಗ ಸದೃಶ ಮನೆಯೂ ನರಕ ವಾಗುತ್ತದೆ. ಪತಿಯ ಅನುಸರಣೆಯು ಗುರಿಯೆಡೆಗಿನ ಪಯಣದ ಮೂಲ ಬುನಾದಿಯಾಗಿದೆ ಮತ್ತು ಪತ್ನಿಯೊಂದಿಗಿನ ಸಹಾನುಭೂತಿಯು ವೈವಾಹಿಕ ಬದುಕಿನ ಜೀವಾಳವಾಗಿದೆ. ಈ ಸಮತೋಲನ ಇಲ್ಲದ ಕಡೆ ದಾಂಪತ್ಯ ಜೀವನವು ಅಲ್ಲೋಲ ಕಲ್ಲೋಲವಾಗುವುದು ನಿಶ್ಚಿತ. ಮುಹಮ್ಮದ್ ಮತ್ತು ಖದೀಜರ ಜೀವನವು ಈ ಸಮತೋಲನದ ಅತ್ಯುತ್ತಮ ಮಾದರಿಯಾಗಿದೆ.

ಸತ್ಯದ ಪೀಠಿಕೆಯಾರಂಭ

ಯಾವ ಉನ್ನತ ಧ್ಯೇಯದ ಪ್ರಚಾರ ಹಾಗೂ ಪರಿಪೂರ್ಣತೆಗಾಗಿ ಮುಹಮ್ಮದ್ ರನ್ನು(ಸ) ಈ ಭೂಮಿಗೆ ಕಳುಹಿಸಲಾಗಿತ್ತೋ ಅದು ಪ್ರಕಟವಾಗುವ ಸಮಯ ಸನ್ನಿಹಿತ ವಾಗುತ್ತಿದೆ... ಮಾನವೇತಿಹಾಸದ ಅಂತಿಮ ಮತ್ತು ಅತಿ ಪ್ರಖರ ಪ್ರಕಾಶ ಮಾನವಾದ ಪುಟವನ್ನು ತಿರುಗಿಸಲು ಪ್ರಕೃತಿಯ ಕರಗಳು ಚಲಿಸುವುದಷ್ಟೇ ಬಾಕಿ... ಅಂಧಕಾರವು ಸ್ವಯಂ ಕಂಪಿಸುತ್ತಾ ಮುದುಡಿಕೊಳ್ಳತೊಡಗಿತು... ಬೆಳಕಿಗಾಗಿ ಜಾಗ ತೊರೆಯುವ ರೀತಿಯಲ್ಲಿ! ಕೆಡುಕುಗಳು ಬೆವೆತು ಮುದ್ದೆಯಾಗ ಹತ್ತಿದುವು... ಒಳಿತುಗಳ ಯುಗದಾರಂಭಕ್ಕಾಗಿ! ಅಜ್ಞಾನದ ಮಬ್ಬುಗತ್ತಲು ಚೆಲ್ಲಾಪಿಲ್ಲಿಯಾಗತೊಡಗಿತು... ಸನ್ಮಾರ್ಗದರ್ಶನದ ಕ್ರಾಂತಿ ನಕ್ಷತ್ರ ಭೂ ಲೋಕದತ್ತ ಇಣುಕು ಹಾಕ ತೊಡಗಿರುವುದನ್ನು ಕಂಡು! ಒಟ್ಟಿನಲ್ಲಿ ಪ್ರಪಂಚದ ಕಣಕಣವೂ ದಿವ್ಯ ಬದಲಾವಣೆಯನ್ನು ಅನುಭವಿಸುತ್ತಿತ್ತು.

ಲೋಕವು ಪೂರ್ಣ ಯೌವನಕ್ಕೆ ತಲುಪಿದಾಗ,

ಸನ್ಮಾರ್ಗ ಉದಿಸಿತಾಗ, ಜಗಮಗಿಸಿತು ಜಗ!

ಎಂಬ ಸಂದೇಶವು ವಾಯುಮಂಡಲದಲ್ಲಿ ಪ್ರತಿಧ್ವನಿಸಿದಂತಾಯಿತು.

ಮುಹಮ್ಮದ್, ಚಿಂತನೆ ಮತ್ತು ದೇವ ಧ್ಯಾನದಲ್ಲಿ ಹೆಚ್ಚಾಗಿ ತಲ್ಲೀನರಾಗ ತೊಡಗಿದರು. ಮಕ್ಕಾ ನಗರದಿಂದ ಕೊಂಚ ದೂರ ಹಿರಾ ಎಂಬೊಂದು ಗುಹೆಯಿತ್ತು. ಅವರು ಹುರಿದ ಧಾನ್ಯದ ಹುಡಿ ಮತ್ತು ನೀರನ್ನು ತೆಗೆದುಕೊಂಡು ಗುಹೆ ಪ್ರವೇಶಿಸಿದರೆ, ಹಲವು ದಿನಗಳ ವರೆಗೆ ಅಲ್ಲೇ ದೇವಧ್ಯಾನ, ಜಪ-ತಪಗಳಲ್ಲಿ ಮುಳುಗಿ ಬಿಡುತ್ತಿದ್ದರು. ಚಿತ್ತದ ಈ ಸಂಸ್ಕರಣೆ ಮತ್ತು ಧ್ಯಾನವು ಯಾವುದೋ ದಿವ್ಯ ಸಾಕ್ಷಾತ್ಕಾರವನ್ನು ನಿರೀಕ್ಷಿಸುತ್ತಿತ್ತು. ಮನ-ಮಸ್ತಿಷ್ಕವು ಯಾವುದೋ ದಿವ್ಯ ಸಂದೇಶವನ್ನು ಕಾತರಿಸುತ್ತಿತ್ತು. ಮನಸ್ಸು ಅವ್ಯಕ್ತವಾದ ವ್ಯಾಕುಲತೆಗೆ ತುತ್ತಾಗುತ್ತಿತ್ತು. ಇದೇ ನಿರೀಕ್ಷೆ, ಕಾತರ, ವ್ಯಾಕುಲಚಿತ್ತತೆಯನ್ನು ಪವಿತ್ರ ಕುರ್‌ಆನ್ ದಾರಿಗಾಣದ್ದಕ್ಕೆ ಹೋಲಿಸಿದೆ. ಪಾವನ ಹೃದಯದ ವ್ಯಾಕುಲತೆಯು ಹಗಲು ರಾತ್ರಿ ಹೆಚ್ಚುತ್ತಲಿತ್ತು. ಆಹಾರ-ಪಾನೀಯ ಸೇವಿಸುತ್ತಿದ್ದರೂ ಆಧ್ಯಾತ್ಮಿಕವಾದ ಹಸಿವು-ದಾಹ ದೊಂದಿಗೆ ದೇವ ಧ್ಯಾನವು ಗುಹೆಯ ಏಕಾಂತತೆಯಲ್ಲಿ ನಿರಂತರ ಜಾರಿ ಯಲ್ಲಿರುತ್ತಿತ್ತು. ದಿವ್ಯ ದೃಷ್ಟಿಯ

ನಿರೀಕ್ಷೆಯು ನಲ್ವತ್ತು ವರ್ಷಗಳಿಂದ ಇಣುಕುತ್ತಿತ್ತು. ಆದರೆ ಪೂರ್ಣ ಪ್ರಮಾಣದಲ್ಲಿ ದೃಷ್ಟಿ ಗೋಚರ ಆಗಿರಲಿಲ್ಲ. ಹೃದಯದ ಹೂಗುಚ್ಛವು ದಿವ್ಯ ಮಂದ ಮಾರುತದ ಸ್ಪರ್ಶಕ್ಕೆ ಹಾತೊರೆಯುತ್ತಿತ್ತು. ದೃಷ್ಟಿಯು ಆಗಾಗ ಆಕಾಶದೆಡೆಗೆ ಹೊರಳುತ್ತಿತ್ತು ಹಾಗೂ ಶಿರವು ಸಾಷ್ಟಾಂಗಕ್ಕೆ ಉರುಳುತ್ತಿತ್ತು.

ನಿರೀಕ್ಷೆ... ನಿರಂತರ ಪ್ರತೀಕ್ಷೆ... ಹಿರಾಗುಹೆಯ ಅಂಧಕಾರದಲ್ಲಿ ಏಕಾಏಕಿ ಪ್ರಕಾಶ ಕಿರಣ ಪ್ರಜ್ವಲಿಸಿತು. ಗೌರವಾರ್ಹ ದೇವಚರ ದೇವನ ಸಂದೇಶದೊಂದಿಗೆ ಪ್ರಕಟಗೊಂಡರು. ದಿವ್ಯ ವಚನಗಳ ಒಂದೊಂದು ಪದವನ್ನೂ ಸಾವಕಾಶವಾಗಿ ಮುಹಮ್ಮದ್‌ರ(ಸ) ಬಾಯಿ ಯಿಂದ ಓದಿಸಿದರು. ಆ ಸರ್ವ ಪ್ರಥಮ ದಿವ್ಯವಾಣಿಯಲ್ಲಿ ಸೃಷ್ಟಿಕರ್ತನ ನಾಮದೊಂದಿಗೆ ಮಾನವನ ಸೃಷ್ಟಿಯ ಉಲ್ಲೇಖವಿತ್ತು. ಈ ಮೂಲಕ ಮಾನವರ ದೇವನೊಂದಿಗಿನ ಮುರಿದು ಹೋದ ಸಂಬಂಧ ಪುನಃ ಜೋಡಿಸುವುದಕ್ಕಾಗಿ ಅಬ್ದುಲ್ಲಾರ ಪುತ್ರ ಮುಹಮ್ಮದ್‌ರಿಗೆ(ಸ) ಪ್ರವಾದಿತ್ವವನ್ನು ವಹಿಸಿಕೊಡಲಾಯಿತು. ಇದೇ ಉನ್ನತೋದ್ದೇಶದ ಈಡೇರಿಕೆಗಾಗಿಯೇ ತಾನೇ ಅನಾಥಮುತ್ತು ಜನ್ಮ ತಾಳಿದ್ದು.

ಯಾರಾದರೂ ಸಾಮಾನ್ಯ ಆಡಳಿತಗಾರ ಅಥವಾ ಅಧಿಕಾರಿಯ ಆದೇಶವನ್ನು ಕೇಳಿದಾಗ ಮತ್ತು ಸಂದೇಶವನ್ನು ಓದಿದಾಗ ನಮ್ಮ ಹೃದಯವು ಕಳವಳಗೊಳ್ಳುತ್ತದೆ. ಆದರೆ ಇದಂತೂ ಭೂಮ್ಯಾಕಾಶಗಳ ಒಡೆಯನಾದ ಅಲ್ಲಾಹನಿಂದ ಬಂದ ಸಂದೇಶ ವಾಗಿತ್ತು. ಯಾರ ಪ್ರಭುತ್ವ ಮತ್ತು ಶಕ್ತಿಯು ಇಡೀ ಪ್ರಪಂಚವನ್ನು ಆವರಿಸಿಕೊಂಡಿದೆಯೋ ಯಾರ ಕೈಯಿಂದ ಸಕಲ ಜೀವರಾಶಿಯ ವಿಧಿಯು ಬರೆಯಲ್ಪಟ್ಟಿದೆಯೋ ಆ ಏಕೈಕ ಸೃಷ್ಟಿಕರ್ತನ ಕಡೆಯಿಂದ ದಿವ್ಯವಾಣಿ ಅವತೀರ್ಣಗೊಂಡಿತು. ಅವನು ಇಚ್ಛಿಸಿದರೆ ಭೂಮಿಯಲ್ಲಿ ನಾಟಿಕೊಂಡಿರುವ ಗುಡ್ಡ ಪರ್ವತಗಳು ಹೊಗೆಯೆದ್ದಂತೆ ಹಾರಿಹೋಗ ಬಹುದು, ಮೊರೆಯುವ ಸಮುದ್ರ ಮರುಭೂಮಿಯಾಗಿ ಮಾರ್ಪಟ್ಟೀತು, ತಣ್ಣಗೆ ಮಿನುಗುವ ನಕ್ಷತ್ರಗಳು ಬೆಂಕಿಯುಗುಳಬಹುದು. ಅಂತಹ ಪ್ರತಾಪಶಾಲಿ ಪ್ರಭುವಿನ ಸಂದೇಶ ಬಂದಾಗ ಸ್ವಾಭಾವಿಕವಾಗಿಯೇ ಮನಸ್ಸಿನಲ್ಲಿ ಒಲವು ಹುಟ್ಟುವುದರೊಂದಿಗೆ ಭೀತಿಯೂ ಆವರಿಸಿ ಬಿಡುವುದು. ಇದುವೇ ಮಾನವೀಯ ಪ್ರಕೃತಿ. ಪ್ರವಾದಿ ಮುಹಮ್ಮದ್‌ರ(ಸ) ಹೃದಯವು ದೇವಭಯದಿಂದ ಕಂಪಿಸದೆ ಇರಲಿಲ್ಲ.

ಈ ಸಂದೇಶವು ಮುಹಮ್ಮದ್‌ರ(ಸ) ಹೊರತು, ಯಾವುದಾದರೂ ಪರ್ವತದ ಮೇಲೆ ಅವತೀರ್ಣವಾಗುತ್ತಿದ್ದರೆ, ಅದು ಭೀತಿಯಿಂದ ನುಚ್ಚುನೂರಾಗಿ ಬಿಡುತ್ತಿತ್ತು. ಅದರ ಹೊಣೆಭಾರವನ್ನು ಹೊರಲು ಪ್ರತಾಪಿ ಮನಸ್ಸಿನ ಅಗತ್ಯವಿದೆ. ಅದು ಮುಹಮ್ಮದ್‌ರಲ್ಲಿತ್ತು. ಅಲ್ಲಿ ಕೇವಲ ಜಿಬ್ರೀಲ್‌ರಿದ್ದರು(ಅ)... ಅಲ್ಲಾಹನ ವಾಣಿಯಿತ್ತು... ದಿವ್ಯ ಪ್ರಕಾಶವಿತ್ತು, ಅರೇಬಿಯದ ಆ ಪ್ರವಾದಿಯಿದ್ದರು... ಹಿರಾಗುಹೆಯಿತ್ತು... ಅಲ್ಲಿನ ಘಟನೆಯ ಕುರಿತು ನಾನೆಂತು ಬಣ್ಣಿಸಲಿ? ನಮ್ಮ ಮನಸ್ಸಿಗೆ ಅನುಭವವಾಗದಿರುವ ಮತ್ತು ನಾವು ಕಣ್ಣಾರೆ ಕಾಣದಿರುವಂತಹ ಸನ್ನಿವೇಶವನ್ನು ನಮ್ಮ ಮಾತಿನಲ್ಲಿ ವಿವರಿಸುವುದಾದರೂ ಹೇಗೆ? ದೇವವಚನ

ಅವತೀರ್ಣದ ಅವಸ್ಥೆಯನ್ನು, ಅದು ಯಾರ ಮೇಲೆ ಅವತೀರ್ಣವಾಯಿತೋ ಅವರೇ ಚೆನ್ನಾಗಿ ಬಣ್ಣಿಸಬಲ್ಲರಷ್ಟೇ. ಈ ಒಂದು ಘಟ್ಟದಲ್ಲಿ ಪದಗಳು ಯಾವುದೇ ಕೆಲಸಕ್ಕೆ ಬಾರವು. ವಿವರಣೆ-ಉಲ್ಲೇಖದ ಗಂಟಲು ಕಟ್ಟಿದಾಗ, ಬಾಯಿ ಮೂಕವಾಗುತ್ತದೆ ಮತ್ತು ಲೇಖನಿಯು ಕಂಪಿಸತೊಡಗುತ್ತದೆ.

ನಾವು ಹೆಚ್ಚೆಂದರೆ ಇಷ್ಟು ಹೇಳಬಲ್ಲೆವು- ಹಿರಾಗುಹೆಯ ಅದೃಷ್ಟ ಖುಲಾಯಿಸಿತು. ಅಲ್ಲಿನ ಕಣಕಣದಲ್ಲೂ ತೂರ್ ಪರ್ವತದ ದಿವ್ಯ ಜ್ಯೋತಿಯ ಪ್ರಕಾಶವು ಪ್ರತಿಫಲಿಸಿತು. ಅಲ್ಲಿನ ಮೂಲೆ ಮೂಲೆಗಳಲ್ಲಿ ತೇಜಸ್ಸು ಹೊರ ಹೊಮ್ಮತೊಡಗಿತು. ಆದರೆ ಇವೆಲ್ಲವೂ ಕೇವಲ ಔಪಚಾರಿಕ ವರ್ಣನೆಯಾಗಿದೆ... ಇದು ಯಾರಿಗೂ ಬಳಸಲ್ಪಡಬಹುದಾದಂತಹ ಪದಗಳು. ಪ್ರವಾದಿ ಮುಹಮ್ಮದ್‌ರಿಗೆ(ಸ) ಎದುರಾದಂತಹ ದಿವ್ಯ ಪ್ರಭೆ ಮತ್ತು ಸ್ಥಿತಿಗೆ ಈ ಔಪಚಾರಿಕ ವರ್ಣನೆಗಳು ಸರಿ ಹೊಂದಲಾರವು. ನಮ್ಮ ಪ್ರಜ್ಞೆ ಮತ್ತು ಬುದ್ಧಿಗೆ ನಿಲುಕದಂತಹ ಆ ದಿವ್ಯ ದರ್ಶನ ಮತ್ತು ಅವಸ್ಥೆಯನ್ನು ಬಣ್ಣಿಸುವುದಾದರೂ ಹೇಗೆ? ತತ್ವಶಾಸ್ತ್ರವೂ ಆ ಘಟ್ಟದಲ್ಲಿ ಆಶ್ಚರ್ಯಕ್ಕೀಡಾಗುತ್ತದೆ, ಪ್ರಜ್ಞೆಯ ದೃಷ್ಟಿಯಲ್ಲಿ ಅವ್ಯಕ್ತ ಹೊಳಪುಂಟಾಗುತ್ತದೆ ಮತ್ತು ಮನಸ್ಸು ದಿಗ್ಭ್ರಾಂತಗೊಳ್ಳುತ್ತದೆ. ಈ ಸ್ಥಾನವು ಪರಮ ಪಾವನ ಹಾಗೂ ಅತ್ಯುನ್ನತವಾಗಿದೆ. ಅಲ್ಲಿ ಕೇವಲ ಪರಿಶುದ್ಧ ವಿಶ್ವಾಸದ ಹಣತೆಗಳ ಬೆಳಕಿನಿಂದ ಮಾತ್ರವೇ 'ಸಿರಾತುಲ್ ಮುಸ್ತಕೀಮ್' ಕಾಣಸಿಗುತ್ತದೆ. ಅವಿಶ್ವಾಸ, ಸಂಶಯ ಮತ್ತು ಗೊಂದಲಗಳ ಕಾಲು ಅಲ್ಲಿ ಊರಲೇ ಸಾಧ್ಯವಿಲ್ಲ. ರೊಟ್ಟಿ ಮತ್ತು ಹೊಟ್ಟೆಗಿಂತ ಆಚೆಗಿನದನ್ನು ನೋಡಲು ಸಿದ್ಧರಿಲ್ಲದಂತಹ ಸಂಕುಚಿತ ಮನಸ್ಕರು, ಆ ದಿವ್ಯ ದರ್ಶನದ ಸ್ಥಿತಿ ಮತ್ತು ರಹಸ್ಯಗಳನ್ನು ಹೇಗೆ ತಾನೇ ಗ್ರಹಿಸಬಲ್ಲರು? ಅದರ ಮೇಲೆ ವಿಶ್ವಾಸ ತಾಳಬೇಕಾದರೆ ಕಾರ್ಲ್ ಮಾರ್ಕ್ಸ್ ಮತ್ತು ಸ್ಟಾಲಿನ್‌ರ ಮಿದುಳಲ್ಲ, ಬದಲಾಗಿ ಅಬೂಬಕರ್-ಅಲೀ-ಬಿಲಾಲ್‌ರಂತಹ ಆಜ್ಞಾನುಸಾರಿ ಹೃದಯಗಳ ಅಗತ್ಯವಿದೆ.

ಮುಹಮ್ಮದುರ್ರಸೂಲುಲ್ಲಾಹ್(ಸ) ಹಿರಾ ಗುಹೆಯಿಂದ ನೇರವಾಗಿ ಮನೆಯ ಕಡೆಗೆ ಧಾವಿಸಿದರು. ಮನೆ ತಲುಪುವಷ್ಟರಲ್ಲಿ ಅವರ ಹಣೆಯಲ್ಲಿ ಬೆವರಿನ ಮುತ್ತುಗಳು ಮಿನುಗುತ್ತಿದ್ದವು. ದೇವಭಯದಿಂದಾಗಿ ಮುಖವು ಬಿಳುಚಿಕೊಂಡಿತ್ತು. ಒಳಗೆ ಕಾಲಿಡುತ್ತಲೇ ಖದೀಜರನ್ನುದ್ದೇಶಿಸಿ ಹೇಳಿದರು,

"ನನಗೆ ಹೊದಿಸಿರಿ, ನನಗೆ ಚದ್ದರ ಹೊದಿಸಿರಿ."

ಖದೀಜಾ, ಕೂಡಲೇ ಒಳಗೋಡಿ, ಚದ್ದರ ತಂದು ಪತಿಗೆ ಹೊದಿಸಿದರು. ಅನಾಥಮುತ್ತು(ಸ) ನಡೆದ ಘಟನೆಯೆಲ್ಲವನ್ನೂ ಜೀವನ ಸಂಗಾತಿಗೆ ತಿಳಿಸಿದರು. ವೃತ್ತಾಂತವನ್ನು ಕೇಳಿದಾಗ ಖದೀಜರ ಮನಸ್ಸು ಕೊಂಚವೂ ಸಂಶಯ ತುಂಬಿದ ಆಶ್ಚರ್ಯ ವನ್ನು ಪ್ರಕಟಿಸಲಿಲ್ಲ. ಬದಲಾಗಿ ಹೇಳಿದರು, "ನಿಮ್ಮ ವ್ಯಕ್ತಿತ್ವವು ಒಳಿತುಗಳ ಸಮಾಹಾರ ವಾಗಿದೆ. ದೇವನು ನಿಮ್ಮ ಕೈ ಬಿಡಲಾರನು." ತರುವಾಯ ಅವರು ಪತಿಯನ್ನು ವರಕ ಬಿನ್ ನೌಫಲ್‌ರ

ಬಳಿಗೆ ಕರಕೊಂಡು ಹೋದರು. ವರಕ ಓರ್ವ ಕ್ರೈಸ್ತ ಸನ್ಯಾಸಿಯಾಗಿದ್ದರು. ಆತ ಹೇಳಿದರು, "ಅದು ಬನೀ ಇಸ್ರಾಈಲ್ ಜನಾಂಗಕ್ಕೆ ಬಂದಂತಹ ಎಲ್ಲ ಪ್ರವಾದಿಗಳ ಬಳಿಗೆ ದೇವಸಂದೇಶ ಹೊತ್ತು ತರುತ್ತಿದ್ದ ಪವಿತ್ರಾತ್ಮವಾಗಿದ್ದಾರೆ. ಮುಹಮ್ಮದ್! ನಾನು ನಿಮಗೆ ಶುಭಾಶಯಗಳನ್ನು ಕೋರುತ್ತಿದ್ದೇನೆ."

ಸಂತೋಷ-ದುಃಖ, ಒಲವು-ಭೀತಿ ಈ ಎಲ್ಲ ಸ್ಥಿತಿಗಳನ್ನು ಮನಸ್ಸು ಒಂದು ಹೊರೆಯೆಂಬಂತೆ ಭಾವಿಸುತ್ತದೆ. ಅದನ್ನು ಇತರರ ಮುಂದೆ ಪ್ರಕಟಗೊಳಿಸುವಾಗಲಷ್ಟೇ ಅದು ಹಗುರವಾಗಿ ಹೋಗುತ್ತದೆ. ಇದು ಮಾನವನ ಸಹಜ ಸ್ವಭಾವ. ಈ ಕಾರ್ಯಕಾರಣ ಜಗತ್ತಿನಲ್ಲಿರುತ್ತಾ ಪ್ರವಾದಿವರ್ಯರ(ಸ) ಸ್ವಭಾವದಲ್ಲಿಯೂ ಇದೇ ಪ್ರಕೃತಿ ನಿಯಮ ಕಾರ್ಯಾಚರಿಸಿತು. ಪ್ರಕೃತಿಯೂ ಬಹುಶಃ ಈ ಮೂಲಕ ಪ್ರವಾದಿತ್ವದ ಮೊದಲ ದಿನವೇ ಸ್ತ್ರೀಯ ಸ್ಥಾನಮಾನವನ್ನು ಉನ್ನತಗೊಳಿಸಬಯಸಿತ್ತು. ಅಂದರೆ ದೇವವಾಣಿಯ ಅವತೀರ್ಣಾರಂಭ, ಜಿಬ್ರೀಲರ ಆಗಮನ ಮತ್ತು ಪ್ರವಾದಿತ್ವ ದೌತ್ಯದ ಪ್ರಥಮ ಅಂಗೀಕಾರವನ್ನು ಅಬಲೆಯಾದ ಮಹಿಳೆಯ ಬಾಯಿಯಿಂದ ಆಗಬೇಕು ಮತ್ತು ಆಕೆಯ ಪ್ರೀತಿ ತುಂಬಿದ ಸಾಂತ್ವನದಿಂದ ಭಯಾಶಂಕೆಯು ತೊಲಗಿ (ದೌತ್ಯದೆಡೆಗಿನ) ಒಲವು ಹುಟ್ಟಿ ಬರಲಿ ಎಂದಾಗಿದ್ದಿರಬಹುದು. ಅಲ್ಲಾಹನ ಹೆಸರು ಮತ್ತು ಸಂದೇಶದ ಭಯವು ಸ್ವಯಂ ಒಂದು ದೃಢೀಕರಣವಾಗಿದೆ. ಈ ಒಂದು ಸರಳವಾದ ಮಾತನ್ನು ಇತರ ಸಾಮಾನ್ಯ ದೃಢೀಕರಣಕ್ಕೆ ಸಮೀಕರಿಸಿ ಸಂಶಯ, ಗೊಂದಲಗಳ ಬಾಗಿಲನ್ನು ತೆರೆಯುವಂತಹ ವ್ಯಕ್ತಿಯು ವಾಸ್ತವದಲ್ಲಿ ಮಾನವ ಪ್ರಕೃತಿಯ ಸೂಕ್ಷ್ಮತೆ ಹಾಗೂ ವ್ಯಕ್ತಿಯ ಸ್ವಭಾವ-ಗುಣಗಳ ಬಗ್ಗೆ ಅಜ್ಞನಾಗಿದ್ದಾನೆ ಎನ್ನಬಹುದು. ಜನರು ಘಟನೆ-ವೃತ್ತಾಂತಗಳನ್ನು ತಮ್ಮ ವೈಯಕ್ತಿಕ ನಿಲುವಿನ ಅಳತೆಗೋಲಿನಲ್ಲಿ ಅಳೆಯ ಬಯಸುತ್ತಾರೆ. ಆ ವೃತ್ತಾಂತವು ಅವರ ಅಳತೆಗೋಲಿಗೆ ನಿಲುಕದೆ ಇದ್ದರೆ, ಇಡೀ ಘಟನೆಯನ್ನು ನಿರಾಕರಿಸ ತೊಡಗುತ್ತಾರೆ. ಕಾರಣ-ಆಕ್ಷೇಪ, ತಿದ್ದುಪಡಿಯ ತಪ್ಪು ಧೋರಣೆಗಳು ಮತ್ತು ಚಿಂತನೆ, ದೃಷ್ಟಿಕೋನದ ವೈಕಲ್ಯಗಳು!

ಖ◆◆◆ಙ

ಸತ್ಯದ ಘೋಷಣೆ

ಸತ್ಯದ ಘೋಷಣೆ, ಸತ್ಯದ ಪ್ರಕಟಣೆ ಮತ್ತು ಸತ್ಯ ಸಂದೇಶದ ಪ್ರಚಾರವು ಒಳಿತು ಹಾಗೂ ಸನ್ಮಾರ್ಗಕ್ಕಾಗಿ ನಿಯೋಗಿಸಲ್ಪಟ್ಟ ಪ್ರವಾದಿತ್ವ ದೌತ್ಯದ ಬುನಾದಿಯಾಗಿದೆ. ಅನಾಥಮುತ್ತು(ಸ) ಇದೇ ಕಾರ್ಯಭಾರಕ್ಕಾಗಿ ನೇಮಿಸಲ್ಪಟ್ಟಿದ್ದಾರೆ. ಈ ಕರ್ತವ್ಯವು ಒಂದೆಡೆ ಪ್ರಮುಖ ಮತ್ತು ಉನ್ನತವಾಗಿರುವಂತೆಯೇ ಇನ್ನೊಂದೆಡೆ ಅಷ್ಟೇ ಸೂಕ್ಷ್ಮ ಮತ್ತು ಕ್ಲಿಷ್ಟಕರವಾಗಿದೆ. ಇಲ್ಲಿ ಹೆಜ್ಜೆಹೆಜ್ಜೆಗೂ ಸಂಕಷ್ಟಗಳು, ಅಡೆತಡೆಗಳು ಮತ್ತು ವಿರೋಧಗಳನ್ನು ಎದುರಿಸಬೇಕಾಗುತ್ತದೆ. ಪ್ರವಾದಿವರ್ಯರು(ಸ) ನಡೆಯುವ ಹಾದಿಯಲ್ಲಿ ಮುಳ್ಳುಗಂಟಿಗಳನ್ನು ಹರಡಲಾಗುತ್ತದೆ... ತಲೆಯ ಮೇಲೆ ಕಸಕಡ್ಡಿಗಳನ್ನು ಸುರಿಯಲಾಗುತ್ತದೆ... ಸತ್ಯಸಂದೇಶದ ಘೋಷಣೆಗೆ ಪ್ರತಿಯಾಗಿ ಬೈಗುಳವನ್ನು ಆಲಿಸಬೇಕಾಗುತ್ತದೆ ಮತ್ತು ಕಲ್ಲುಗಳ ಸುರಿಮಳೆಗೆ ಮೈಕೈ ಗಾಯಗೊಂಡು ರಕ್ತ ಕೂಡ ಹರಿಯುತ್ತದೆ. ಲೌಕಿಕ ವ್ಯಾಮೋಹಿಯೋ ಆಸೆ-ಆಕಾಂಕ್ಷೆಯುಳ್ಳವನೋ ಆಗಿದ್ದರೆ ಇಂತಹ ಸಂಕಷ್ಟಗಳಿಂದ ಭೀತನಾಗಿ ಯಾವಾಗಲೋ ಕಾರ್ಯರಂಗದಿಂದ ಪಲಾಯನ ಮಾಡುತ್ತಿದ್ದ... ನಾನೇಕೆ ಸುಖಾಸುಮ್ಮನೆ ಜೀವವನ್ನು ಪಣಕ್ಕೊಡ್ಡಲಿ... ಜನರು ಸತ್ಯದ ಮಾರ್ಗದಲ್ಲಿ ಬರಲು ತಯಾರಿಲ್ಲದಿದ್ದರೆ ಅವರಿಗೇ ಹೋಯಿತು... ನಾನೇಕೆ ಕಷ್ಟ-ಕೋಟಲೆಗಳನ್ನೆದುರಿಸಬೇಕು... ಎಂಬುದಷ್ಟೇ ಆತನ ಆಲೋಚನೆಯಾಗಿ ಬಿಡುತ್ತಿತ್ತು.

ಆದರೆ ತನ್ನ ಸಂದೇಶವಾಹಕರ ಹೃದಯದಲ್ಲಿ ಅಲ್ಲಾಹನು ಸಹನೆ, ದೃಢತೆ, ಸ್ಥೈರ್ಯ ಮತ್ತು ದೇವನಿಷ್ಠೆಯ ವಿಶಿಷ್ಟ ಶಕ್ತಿ-ಸಾಮರ್ಥ್ಯಗಳನ್ನಿರಿಸಿದ್ದಾನೆ.ಯಾವುದೇ ವಿರೋಧವು ಅವರನ್ನು ಸತ್ಯಸಂದೇಶದ ಪ್ರಚಾರದಿಂದ ತಡೆಯಲು ಶಕ್ತವಾಗಲಾರದು. ಅವರ ಹಾದಿಯಲ್ಲಿ ಕಷ್ಟ ಕೋಟಲೆಗಳ ಬಂಡೆಗಲ್ಲುಗಳೇ ಎದುರಾಗುತ್ತವೆ. ಆದರೆ ಅವರು ದೃಢಚಿತ್ತತೆಯಿಂದ ಅವೆಲ್ಲವುಗಳನ್ನೂ ಮೆಟ್ಟಿ ಚೂರುಚೂರು ಮಾಡಿ ಮುಂದಡಿಯಿಡುತ್ತಾರೆ. ಖಡ್ಗದ ಅಲಗು, ಭರ್ಜಿಯ ಮೊನೆ ಮತ್ತು ಬಾಣಗಳ ತುದಿ ಯಾವುದೂ ಆ ದೇವ ಸಂದೇಶವಾಹಕರನ್ನು ಸತ್ಯಪ್ರಚಾರ ಮತ್ತು ಬೋಧನೆಯಿಂದ ತಡೆಯಲಾರದು. ಖಡ್ಗದೇಟಿಗೆ ದೇಹದಿಂದ ರಕ್ತ ಸುರಿಯುತ್ತಿದ್ದರೂ ಅವರ ನಾಲಗೆಯು ದೇವ ಸಂದೇಶವನ್ನು ಉಚ್ಚರಿಸುತ್ತಿರುವುದು.

ಮುಹಮ್ಮದ್‌ರ(ಸ) ಪ್ರವಾದಿತ್ವ ಲಬ್ಧಿಯ ವೇಳೆ ಪರಿಸರವು ಅತ್ಯಂತ ಅಜ್ಞಾನಾಂಧಕಾರ ದಲ್ಲಿ ಮುಳುಗಿತ್ತು... ಸಮಾಜದಲ್ಲಿ ಕೀಳು ಮಟ್ಟದ ಕೆಡುಕುಗಳು ವ್ಯಾಪಿಸಿದ್ದುವು. ಯುಗ ಯುಗಾಂತರಗಳ ಕೆಡುಕುಗಳು ಅಲ್ಲಿ ಬೇರುಬಿಟ್ಟಿದ್ದುವು. ಯುದ್ಧೋನ್ಮಾದವು ಜನರಿಗೆ ಅಭ್ಯಾಸವಾಗಿ ಬಿಟ್ಟಿತ್ತು. ಎಲ್ಲಿಯೂ ಸತ್ಯದ ಪ್ರಕಾಶ ಕಾಣದೆ ಅಂಧಕಾರ ಕವಿದಿತ್ತು. ಇಂತಹ ಪರಿಸ್ಥಿತಿಯಲ್ಲಿ ಸಮಾಜ ಸುಧಾರಣೆಯ ಧೈರ್ಯ ತೋರಲು ಓರ್ವ ದೇವ ಪ್ರವಾದಿಯಿಂದ ಮಾತ್ರವೇ ಸಾಧ್ಯವಿತ್ತು. ಆ ಪಾವನ ವ್ಯಕ್ತಿತ್ವಕ್ಕೆ ದೇವ ಸಹಾಯ ಮತ್ತು ಮಾರ್ಗದರ್ಶನ ಖಂಡಿತ ಪ್ರಾಪ್ತವಾಗಿರುತ್ತದೆ.

ಅನಾಥಮುತ್ತು(ಸ) ಅದೊಂದು ದಿನ ಸಫಾ ಬೆಟ್ಟವನ್ನೇರುತ್ತಾರೆ... ತರುವಾಯ ಜನರನ್ನು ಕೂಗಿ ಕರೆಯುತ್ತಾರೆ... ಒಂದು ವಿಶೇಷ ಮತ್ತು ಪ್ರಮುಖ ಘೋಷಣೆಯನ್ನು ಪ್ರಕಟಿಸುವ ರೀತಿಯಲ್ಲಿ! ಯಾರೆಲ್ಲ ಆ ಕರೆಯನ್ನು ಆಲಿಸಿದರೋ ಅವರು ಸಫಾ ಬೆಟ್ಟದೆಡೆಗೆ ಧಾವಿಸಿ ಬಂದರು. ಜನರು ಪರಸ್ಪರ ಹೇಳಿಕೊಂಡರು, "ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಯಾಕಿಂದು ಸಫಾ ಬೆಟ್ಟದ ಬಳಿಯಿಂದ ಜನರನ್ನು ಕರೆಯುತ್ತಿದ್ದಾರೋ... ಸರಿ, ವಿಷಯ ವೇನೆಂದು ಹೋಗಿ ನೋಡೋಣ." ಅತ್ತ ಸತ್ಯಸಂಧ ಮತ್ತು ಪ್ರಾಮಾಣಿಕ ಅನಾಥಮುತ್ತು(ಸ)... ಸತ್ಯವಂತಿಕೆ, ಮತ್ತು ಸ್ಥಿರತೆ-ಗಾಂಭೀರ್ಯದಲ್ಲಿಅದ್ವಿತೀಯರಾಗಿರುವ ಪ್ರವಾದಿವರ್ಯರು(ಸ) ಒಂದು ವಿಶೇಷ ಮತ್ತು ಪ್ರಮುಖವಾದ ಸಂಗತಿಯ ಘೋಷಣೆಗೆ ಅಣಿಯಾಗಿ ನಿಂತಿದ್ದಾರೆ.

ಒಬ್ಬೊಬ್ಬರಾಗಿ ಬಂದು... ಸಫಾದ ಸುತ್ತಲೂ ಜನಸಾಗರಸೇರಿತು. ಅವರಲ್ಲಿ ಜೀವನದಲ್ಲಿ ಅನೇಕ ಚಳಿ-ಬಿಸಿಲುಗಳನ್ನು ಅನುಭವಿಸಿದ್ದ ವೃದ್ಧರಿದ್ದರು. ಅನನುಭವಿಗಳಾದ ಯುವಕರಿದ್ದರು... ಆದರೆ ಅವರ ಮನದಲ್ಲಿ ಸ್ಫೂರ್ತಿ ಮತ್ತು ಹೃದಯದಲ್ಲಿ ಹುಮ್ಮಸ್ಸಿತ್ತು. ಜೀವನದ ಆರಂಭ ಘಟ್ಟದಲ್ಲಿರುವ ಮಕ್ಕಳೂ ಇದ್ದರು... ಮುಹಮ್ಮದ್(ಸ) ಇಷ್ಟು ವ್ಯವಸ್ಥಿತವಾಗಿ ಸಫಾ ಬೆಟ್ಟವನ್ನೇರಿ ಕರೆಯುತ್ತಿದ್ದಾರೆಂದರೆ, ಯಾವುದೋ ಶತ್ರು ಶಕ್ತಿಯ ಆಕ್ರಮಣದ ಸುದ್ದಿ ಮುಟ್ಟಿಸಲು ಇರಬೇಕು ಎಂದು ಭಾವಿಸಿದ ಹಲವರು, ಬರಿಗೈಯಲ್ಲಿ ಹೋಗುವುದು ತರವಲ್ಲವೆಂದುಕೊಂಡು ಆಯುಧಧಾರಿಗಳಾಗಿಯೇ ಹೊರಟರು. ಯಾರೋ ಅಂಗಡಿ ಬದಿಯಲ್ಲಿ ಖರ್ಜೂರ ತಿನ್ನುತ್ತಿದ್ದವರು, ಅದೇ ಸ್ಥಿತಿಯಲ್ಲಿ ಹೊರಟು ಬಂದಿದ್ದರು... ಕೈಯಲ್ಲಿ ಖರ್ಜೂರ ಮತ್ತು ಬಾಯಿಯಲ್ಲಿ ಸಿಹಿ ಅಂಟು ಹಾಗೆಯೇ ಇತ್ತು... ಹಿರಿಯರನ್ನು ಅನುಕರಿಸುತ್ತಾ ಮಕ್ಕಳೂ ಹೊರಟು ಬಂದರು...

ಮುಹಮ್ಮದುರ್ರಸೂಲುಲ್ಲಾಹ್(ಸ) ಅತ್ಯಂತ ಗಾಂಭೀರ್ಯ ಮತ್ತು ಹೊಣೆಗಾರಿಕೆಯ ಪ್ರಜ್ಞೆಯೊಂದಿಗೆ ಸಫಾ ಬೆಟ್ಟದ ಶೃಂಗದಲ್ಲಿ ನಿಂತಿದ್ದರು. ಅವರ ಸುತ್ತಲೂ ಕುರೈಶ್ ಜನತೆ ಜಮಾಯಿಸಿತ್ತು. ಎಲ್ಲರ ದೃಷ್ಟಿಯೂ ಮುಹಮ್ಮದ್‌ರ(ಸ) ಮೇಲಿತ್ತು... ಏನು ಹೇಳಲಿಕ್ಕಿ ದ್ದಾರೋ ಎಂಬ ಕಾತರ! ಇದಕ್ಕೆ ಮುಂಚೆ ಮುಹಮ್ಮದ್‌ರು(ಸ) ಹೀಗೆ ಜನರನ್ನು ಸೇರಿಸಿರಲಿಲ್ಲ. ಇದಂತೂ ತೀರಾ ಹೊಸದಾದ ಸಂಗತಿಯಾಗಿದೆ! ಬಹುಶಃ ಯಾವುದೋ ಪ್ರಮುಖ ಸಂಗತಿಯ

ಕಡೆಗೆ ಸೂಚನೆ ನೀಡಲಿಕ್ಕಿದ್ದಿರಬಹುದು. ಜನರೆಲ್ಲರೂ ಕಿವಿ ನಿಮಿರಿಸಿ ನಿಂತಿದ್ದರು.

ಅಲ್ಲಾಹನ ಸಂದೇಶವಾಹಕರು(ಸ) ಕೇಳಿದರು,

"ನೋಡಿ, ನಾನು ಬೆಟ್ಟದ ತುದಿಯಲ್ಲಿ ನಿಂತಿರುವೆನು. ನೀವೆಲ್ಲ ಇದರ ಕೆಳಗಡೆ ಇದ್ದೀರಿ. ನಾನು ಬೆಟ್ಟದ ಎರಡೂ ಬದಿಯನ್ನು ನೋಡುತ್ತಿದ್ದೇನೆ. ಒಂದು ವೇಳೆ... ಶಸ್ತ್ರ ಸಜ್ಜಿತ ಸೇನೆಯೊಂದು ಮಕ್ಕಾ ನಗರವನ್ನು ಆಕ್ರಮಿಸಲು ಧಾವಿಸಿ ಬರುತ್ತಿದೆ ಎಂದು ನಾನು ಹೇಳಿದರೆ, ನೀವು ನಂಬುವಿರಾ?"

ಜನ ಒಕ್ಕೊರಲಿನಿಂದ ಹೇಳಿದರು,

"ಖಂಡಿತವಾಗಿಯೂ... ನಾವು ನಿಮ್ಮ ಮಾತನ್ನು ನಂಬುವೆವು. ನಿಮ್ಮಷ್ಟು ಪ್ರಾಮಾಣಿಕ, ಸತ್ಯಸಂಧ ವ್ಯಕ್ತಿಯನ್ನು ಬೇರೆಲ್ಲೂ ಕಂಡಿಲ್ಲ."

ಜನರ ಗುಂಪಿನಲ್ಲಿ ಕಳವಳ ಹೆಚ್ಚುತ್ತಲಿತ್ತು. ಮುಹಮ್ಮದ್(ಸ) ಏನನ್ನು ಹೇಳ ಬಯಸುತ್ತಾರೋ ಅದನ್ನು ಬೇಗ ಹೇಳಿಬಿಡಲಿ ಎಂದು ಜನ ತವಕಪಡುತ್ತಿದ್ದರು. ಶಸ್ತ್ರಸಜ್ಜಿತ ಸೇನೆಯ ಆಕ್ರಮಣ ಭೀತಿಯು ಅವರಲ್ಲಿ ಆವರಿಸತೊಡಗಿತ್ತು. ಮುಹಮ್ಮದ್‌ರ(ಸ) ಬಾಯಿಯಿಂದ ಕುರೈಶರು ಅದುವರೆಗೂ ಸುಳ್ಳು ಮಾತನ್ನು ಕೇಳಿರಲಿಲ್ಲವಷ್ಟೇ. ಪ್ರತಿಯೊಬ್ಬನೂ ಪ್ರವಾದಿವರ್ಯರ(ಸ) ಸತ್ಯವಂತಿಕೆಯನ್ನು ಅರಿತವನಾಗಿದ್ದ. ಮುಹಮ್ಮದ್(ಸ) ಎಂದೂ ಯಾವುದೇ ಸುಳ್ಳು ಮಾತನ್ನು ಸೃಷ್ಟಿಸಿ ಹೇಳಲಾರರು ಎಂದೇ ಜನರು ನಂಬಿದ್ದರು. ಖಂಡಿತ ವಾಗಿಯೂ ಹಲ್ಲೆಕೋರರ ತಂಡವು ಮಕ್ಕಾ ನಗರದ ಮೇಲೆ ಆಕ್ರಮಣ ಮಾಡಲು ಧಾವಿಸುತ್ತಿರಬಹುದು. ಇನ್ನು ಮುಹಮ್ಮದ್(ಸ) ಆ ದಾಳಿಕೋರರಿಂದ ರಕ್ಷಣೆ ಪಡೆಯುವ ಯಾವುದಾದರೂ ಉಪಾಯವನ್ನು ಸೂಚಿಸಬಹುದು. ಅವರು ಕೇವಲ ಸತ್ಯಸಂಧರೂ ಪ್ರಾಮಾಣಿಕರೂ ಆಗಿರುವುದಷ್ಟೇ ಅಲ್ಲ, ಜತೆಗೆ ಧೀಮಂತರೂ ಶಕ್ತಿವಂತರೂ ಆಗಿದ್ದಾರೆಂಬುದು ಜನರಿಗೆ ಗೊತ್ತು.

ತರುವಾಯ ಪ್ರವಾದಿವರ್ಯರು(ಸ) ಹೇಳಿದರು, "ಇದು ನಿಮಗೆ ಒಂದು ವಿಷಯ ವನ್ನು ಸ್ಪಷ್ಟಪಡಿಸಲಿಕ್ಕಾಗಿ ನೀಡಿದ ಉದಾಹರಣೆಯಷ್ಟೇ. ಕೇಳಿರಿ, ಮರಣವು ನಿಮ್ಮನ್ನು ಆವರಿಸಲಿದೆ... ನಿಮಗೆ ಅಲ್ಲಾಹನ ಮುಂದೆ ಹಾಜರಾಗಲಿಕ್ಕಿದೆ. ಕುರೈಶ್ ಜನರೇ! ನೀವು ಯಾವ ರೀತಿ ಈ ಲೋಕ ಮತ್ತು ಇಲ್ಲಿನ ವಸ್ತುಗಳನ್ನು ನೋಡುತ್ತಿದ್ದೀರೋ ಅದೇ ರೀತಿ ನಾನು ಪರಲೋಕದ ಸ್ಥಿತಿಗತಿಗಳನ್ನು ಕಾಣುತ್ತಿದ್ದೇನೆ."

ವಿಗ್ರಹಾರಾಧಕರ ಮಟ್ಟಿಗೆ ಇದೊಂದು ಅನೂಹ್ಯವಾದಂತಹ ಸಂದೇಶವಾಗಿತ್ತು. ಪರಲೋಕವೆನ್ನುವುದೊಂದಿದೆ ಮತ್ತು ಇಹಲೋಕದಲ್ಲಿನ ಕರ್ಮಗಳಿಗೆ ಅಲ್ಲಿ ವಿಚಾರಣೆ ನಡೆಯಲಿದೆ ಎಂಬ ಮಾತು ಅವರ ಮನ-ಮಸ್ತಿಷ್ಕದಲ್ಲಿ ಸುಳಿದಿರಲೇ ಇಲ್ಲ. ಅವರ ಕವಿಗಳೂ ಅವರ ಮನಸ್ಸಿನಲ್ಲಿ ಹುಟ್ಟಿಸಿರುವ ಭಾವನೆಯೇ ಬೇರೆಯದಾಗಿತ್ತು...

ಮಣ್ಣಲ್ಲಿ ಮಣ್ಣಾಗಿ ಹೋದ ಮೇಲೆ
ಮತ್ತೆ ಎದ್ದೇಳುವುದೆಂದರೆ...
ವಿಚಿತ್ರವಲ್ಲವೇ? ಇದು
ಹುಚ್ಚುತನದ ಮಾತಲ್ಲವೇ?

ಹೇಸರಗತ್ತೆಯ ಮೇಲೆ ಕುಳಿತಿದ್ದ ಅಬೂಲಹಬ್, ತನ್ನ ಕೈಯಲ್ಲಿದ್ದ ಖರ್ಜೂರದ ಸೋಗೆಯಿಂದ ನೆಲಕ್ಕೆ ಬಡಿದು ಧೂಳೆಬ್ಬಿ ಸುತ್ತಾ ಕಿರುಚಿದ, "ಇಷ್ಟೆಲ್ಲಾ ಜನರನ್ನು ಕರೆದು ಸೇರಿಸಿ ಅವರಿಗೆ ತೊಂದರೆ ನೀಡಿದ್ದು ಈ ಮಾತನ್ನು ಹೇಳಲಿಕ್ಕೇನು?"

ಜನರೆಲ್ಲ ತಂತಮ್ಮ ಮನೆಗಳೆಡೆಗೆ ತೆರಳಿದರು. ಪರಸ್ಪರ ಚರ್ಚೆಯಲ್ಲಿ ಮುಳುಗಿರುತ್ತಾ...

"ಇಬ್ನು ಅಬ್ದುಲ್ಲಾನಿಗೇನಾಗಿದೆ ಇವತ್ತು? ಏಕಾಏಕಿ ಜನರನ್ನೆಲ್ಲಾ ಸೇರಿಸಿ, ಇದು ವರೆಗೂ ನಾವು ಕೇಳಿರದಂತಹ ಮಾತನ್ನು ಹೇಳಿದನಲ್ಲ!" ಓರ್ವ ವೃದ್ಧ ಉದ್ಗರಿಸಿದರು.

"ಹಾಗಾದರೆ ಮುಹಮ್ಮದ್‌ರನ್ನು(ಸ) ಸುಳ್ಳುಗಾರನೆನ್ನುತ್ತೀರಾ? ಅವರ ಬಾಯಿಯಿಂದ ಎಂದೂ ಅಂತಿಂತಹ ಮಾತನ್ನು ನಾವು ಆಲಿಸಿದ್ದೇ ಇಲ್ಲ!" ಇನ್ನೊಬ್ಬ ವ್ಯಕ್ತಿ ಹೇಳಿದ.

"ನಾನು ಮುಹಮ್ಮದ್‌ನನ್ನು ಸುಳ್ಳನೆಂದಿಲ್ಲವಲ್ಲ. ಅವನ ಮೇಲೆ ಯಾರಾದರೂ ಸುಳ್ಳಾರೋಪ ಹೊರಿಸಬಲ್ಲರೇ? ಆತನಾದರೋ ಸತ್ಯವಂತರಲ್ಲಿ ಸತ್ಯವಂತನಾಗಿದ್ದಾನೆ. ಆದರೆ ಸಹೋದರಾ! ಬಹುಶಃ ಆತನಿಗೆ ಮಾನಸಿಕವಾಗಿ ಏನಾದರೂ ತೊಂದರೆಯಾಗಿರ ಬಹುದು... ಅಥವಾ ಪ್ರೇತಬಾಧೆಯುಂಟಾಗಿರಬಹುದು. ಬನೂಹಾಶಿಮ್‌ನ ಶತ್ರುಗಳ ಪೈಕಿ ಯಾರಾದರೂ ಮಾಟ ಮಾಡಿಸಿರಲಿಕ್ಕೂ ಸಾಕು. ಅದರ ಕಾರಣವಾಗಿಯೋ ಏನೋ ಅಬ್ದುಲ್ ಮುತ್ತಲಿಬ್‌ರ ಈ ಸಭ್ಯ ಪ್ರಾಮಾಣಿಕ ಮೊಮ್ಮಗ ತಲೆ-ಬುಡವಿಲ್ಲದ ಮಾತನ್ನಾಡುತ್ತಿದ್ದಾನೆ" ವೃದ್ಧ ತನ್ನ ಮಾತನ್ನು ಸಮರ್ಥಿಸಿದ.

ಒಂದೊಂದು ಬಾಯಿಗೆ ಒಂದೊಂದು ಮಾತು. ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್ ಪೈಗಂಬರರ(ಸ) ಸತ್ಯಸಂದೇಶ ಮತ್ತು ಘೋಷಣೆಯ ಬಗ್ಗೆ ಚರ್ಚೆ-ತರ್ಕಗಳು ನಡೆಯುತ್ತಿವೆ. ಊಹನೆಗಳು, ತಪ್ಪುಕಲ್ಪನೆಗಳು, ಅಭಿಪ್ರಾಯ ಭೇದಗಳು... ಕೆಲವೊಂದು ಮಂದಿಯ ಬಾಯಿಯಿಂದ ಸತ್ಯಪರವಾದ ಮಾತುಗಳೂ ಹೊರಡುತ್ತಿತ್ತು... "ಸಹೋದರರೇ! ಇಷ್ಟೊಂದು ಸಭ್ಯ ಮತ್ತು ಸತ್ಯವಂತರಾದ ವ್ಯಕ್ತಿಯ ಮಾತನ್ನು ತಮಾಷೆಯಲ್ಲಿ ತೇಲಿ ಬಿಡುವುದು ತರವಲ್ಲ. ಅವರು ಏನನ್ನಾದರೂ ಗ್ರಹಿಸಿಯೇ ಆ ಮಾತನ್ನು ಹೇಳಿರಬೇಕು. ಎಲ್ಲ ರೀತಿಯಲ್ಲೂ ಉತ್ತಮರಾಗಿರುವ ವ್ಯಕ್ತಿಯನ್ನು ಹುಚ್ಚನೆಂದೋ ಪ್ರೇತಬಾಧಿತನೆಂದೋ ಹೇಳಿಬಿಡುವುದು ಬುದ್ಧಿವಂತರಿಗೆ ಶೋಭೆ ತರದು. ದುಡುಕಿನ ತೀರ್ಮಾನವು ಎಂದೂ ಸರಿಯಾಗಿರದು. ವಾಸ್ತವಿಕತೆಗಳನ್ನು ಪರಿಶೀಲಿಸುವುದು ಒಳಿತಲ್ಲವೇ..."

ಬಹಿರಂಗ ಸಂದೇಶ ಪ್ರಚಾರ

ಸಫಾ ಬೆಟ್ಟದಲ್ಲಿ ಸತ್ಯದ ಘೋಷಣೆಯಾದ ಬಳಿಕ ದೇವ ಸಂದೇಶವಾಹಕರು(ಸ) ಬಹಿರಂಗವಾಗಿ ಸಂದೇಶ ಪ್ರಚಾರದಲ್ಲಿ ತೊಡಗಿದರು. ಗಲ್ಲಿ-ಕೇರಿಗಳಲ್ಲಿ, ಮಾರುಕಟ್ಟೆಗಳಲ್ಲಿ, ಕೂಡುರಸ್ತೆಗಳಲ್ಲಿ ಎಲ್ಲೆಂದರಲ್ಲಿ ದೇವನ ಸಂದೇಶವನ್ನು ಜನರಿಗೆ ತಲುಪಿಸಲು ತೊಡಗಿದರು. ಮಕ್ಕಾ ನಗರವಷ್ಟೇ ಅಲ್ಲ, ಇಡೀ ಅರೇಬಿಯದ ಜನರಿಗೆ ಈ ಸಂದೇಶವು ಸಂಪೂರ್ಣ ಅಜ್ಞ ಮತ್ತು ಅನೂಹ್ಯವಾಗಿತ್ತು. ಜನರು ಒಳಿತು ಮತ್ತು ಸನ್ಮಾರ್ಗದ ಮಾತುಗಳಿಗೆ ಬೆದರುತ್ತಿದ್ದರು. ಸಾಂಪ್ರದಾಯಿಕ ಪೂರ್ವಗ್ರಹ್ಯ ಮತ್ತು ಪಿತ್ರಾರ್ಜಿತ ವಿಶ್ವಾಸಾಚಾರಗಳು ಸತ್ಯಸಂದೇಶವನ್ನು ಅಂಗೀಕರಿಸುವುದರಿಂದ ತಡೆಯುತ್ತಿತ್ತು... ಎಲ್ಲಾದರೂ ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಹೇಳುವ ಮಾತುಗಳಿಗೆ ಬಲಿಬಿದ್ದು ತಂದೆ-ತಾತಂದಿರ ಧರ್ಮ-ಆಚಾರಗಳನ್ನು ಬಿಟ್ಟೀಯಾ ಜೋಕೆ! ನಿನ್ನ ಹಾಗೆ ಪೂರ್ವಜರು ಮೂರ್ಖರೇನೂ ಆಗಿರಲಿಲ್ಲ... ನಿನಗಿಂತ ಎಷ್ಟೋ ಪಟ್ಟು ಯುಕ್ತಿವಂತರೂ ವಿಚಾರ ವಂತರೂ ಆಗಿದ್ದರು... ಅವರು ಚಿಂತನ-ಮಂಥನ ಮಾಡಿಯೇ ಈ ಹಾದಿಯನ್ನು ಅಂಗೀಕರಿಸಿದ್ದರು. ನಮ್ಮ ಆರಾಧ್ಯರುಗಳು ಯುಗಯುಗಾಂತರಗಳಿಂದ ನಮ್ಮ ಬೇಡಿಕೆ ಗಳನ್ನು ಈಡೇರಿಸುತ್ತಿವೆ. ಕಷ್ಟ ಕಾಲದಲ್ಲಿ ನೆರವಾಗಿವೆ. ಅವುಗಳಿಂದ ಮುಖ ತಿರುಗಿ ಸುವುದು ಉಪಕಾರಗೇಡಿತನವಾಗಿದೆ. ಧೀಮಂತರ ಬಾಯಿಯಿಂದ ಹೊರಟ ಮಾತು ಮತ್ತೆ ಬದಲಾಗದು. ಯಾರನ್ನಾದರೂ ಮಹಾನರೆಂದೋ ಆರಾಧ್ಯರೆಂದೋ ಹೇಳಿದರೆ ಅವರ ಮಹಾನತೆ, ಗೌರವವನ್ನು ಜೀವನಾಂತ್ಯದವರೆಗೂ ಕಾಪಾಡಿಕೊಂಡಿರಬೇಕಾಗುತ್ತದೆ... ಈ ಎಲ್ಲ ಊಹನೆಯಾಧಾರಿತ ತರ್ಕಗಳು ಪ್ರವಾದಿವರ್ಯರು(ಸ) ನೀಡಿದ ಸಂದೇಶಗಳನ್ನು ಹೃದಯ ದೊಳಗೆ ಇಳಿಯುವುದರಿಂದ ತಡೆಯುತ್ತಿತ್ತು.

ಆದಾಗಿಯೂ ಕೆಲವು ಮಂದಿ ಅನುಗ್ರಹೀತರು ಸತ್ಯಸಂದೇಶವನ್ನು ಅಂಗೀಕರಿಸಿ ಕೃತಾರ್ಥರಾದರು. ಸತ್ಯವಿಶ್ವಾಸವನ್ನು ಪ್ರಥಮವಾಗಿ ಹೊಂದಿದ ಶ್ರೇಯಃ ಮತ್ತು ಇಸ್ಲಾಮನ್ನು ಜೀವನವಾಗಿ ಅಂಗೀಕರಿಸುವ ಸೌಭಾಗ್ಯ ಯಾರಿಗೆಲ್ಲ ದೊರೆಯಿತು ನೋಡೋಣ.

1. ಸ್ವತಂತ್ರ ಪುರುಷರ ಪೈಕಿ ಮೊತ್ತಮೊದಲ ವಿಶ್ವಾಸಿ ಅಬೂಬಕರ್ ಬಿನ್ ಕುಹಾಫಾ.
2. ಸ್ವತಂತ್ರ ಸ್ತ್ರೀಯರ ಪೈಕಿ ಮೊತ್ತಮೊದಲ ವಿಶ್ವಾಸಿನಿ ಖದೀಜಾ ಬಿಂತಿ ಖುವೈಲಿದ್.
3. ಮಕ್ಕಳ ಪೈಕಿ ಮೊತ್ತ ಮೊದಲ ವಿಶ್ವಾಸಿ ಅಲೀ ಬಿನ್ ಅಬೂತಾಲಿಬ್.
4. ಸೇವಕರ ಪೈಕಿ ಮೊತ್ತಮೊದಲ ವಿಶ್ವಾಸಿ ಝೈದ್ ಬಿನ್ ಹಾರಿಸ.
5. ಗುಲಾಮರ ಪೈಕಿ ಮೊತ್ತಮೊದಲ ವಿಶ್ವಾಸಿ ಬಿಲಾಲ್ ಹಬಶೀ.

ಹಿರಾ ಗುಹೆಯಲ್ಲಿ ಪವಿತ್ರಾತ್ಮ ಜಿಬ್ರೀಲರ ಆಗಮನಾರಂಭವಾಗಿತ್ತು. ಅವರು ಅಲ್ಲಾಹನ ಸಂದೇಶವನ್ನು ಹೊತ್ತು ಕಾಲಕಾಲಕ್ಕೆ ಪ್ರವಾದಿವರ್ಯರ(ಸ) ಸನ್ನಿಧಿಗೆ ಬರುತ್ತಲೇ ಇದ್ದರು. ಅಲ್ಲಾಹ್ ತನ್ನ ದಾಸರಿಗೆ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನ ನೀಡುತ್ತಲೇ ಇದ್ದ. ಒಂದು ದಿನ

ಸುಸ್ಪಷ್ಟ ಸಾಕ್ಷ್ಯ ಮತ್ತು ಪ್ರಕಾಶಮಾನ ದೃಷ್ಟಾಂತಗಳೊಂದಿಗೆ ದೇವಾದೇಶವಾಯಿತು, "ನಿಮ್ಮ ಅತ್ಯಂತ ನಿಕಟ ಸಂಬಂಧಿಕರಿಗೆ ಎಚ್ಚರಿಕೆ ನೀಡಿರಿ." (ಪವಿತ್ರ ಕುರ್‌ಆನ್: 26: 14) ಈ ಆದೇಶದ ಪಾಲನೆಗಾಗಿ ಅನಾಥಮುತ್ತು(ಸ) ತಮ್ಮ ನಿಕಟ ಬಂಧುಗಳನ್ನು ಔತಣಕ್ಕಾಗಿ ಆಹ್ವಾನಿಸಿದರು. ಸರಳವಾದ ಆಹಾರ... ದಾಕ್ಷಿಣ್ಯ ಮತ್ತು ತೋರಿಕೆಯಿಂದ ಮುಕ್ತವಾದಂತಹ, ಆದರೆ ಸಂಪೂರ್ಣ ಆದರಾತಿಥ್ಯ ಮತ್ತು ಉಪಚಾರದೊಂದಿಗೆ ಔತಣಕೂಟ ಜರಗಿತು. ಆ ಕೂಟದಲ್ಲಿ ಹಾಶಿಮ್ ಮನೆತನದವರ ಹೊರತು ಬೇರೆ ಯಾರೂ ಇದ್ದಿರಲಿಲ್ಲ. ಊಟವಾದ ನಂತರ ಅನಾಥಮುತ್ತು(ಸ) ತಮ್ಮ ಉದ್ದೇಶವನ್ನು ಪ್ರಕಟಿಸಲು ಉದ್ಯುಕ್ತರಾದರು. ಆದರೆ ಭಾರೀ ಚಾಣಾಕ್ಷಮತಿಯಾಗಿದ್ದ ಅಬೂಲಹಬ್, ಸೋದರ ಪುತ್ರ ಮುಹಮ್ಮದ್ ನಮ್ಮನ್ನು ವಿನಾಕಾರಣ ಔತಣ ನೀಡಿ ಸತ್ಕರಿಸುತ್ತಿಲ್ಲವೆಂದು ಮೊದಲೇ ಊಹಿಸಿದ್ದ... ಮದುವೆಯಲ್ಲ, ಸಂತೋಷದ ಸುದ್ದಿಯಿಲ್ಲ, ಯಾವುದೇ ಹಬ್ಬದಾಚರಣೆಯೂ ಇಲ್ಲ... ಈ ಔತಣ ಬೇರೆ ಯಾವುದೋ ಉದ್ದೇಶಕ್ಕಾಗಿತ್ತು... ಮುಹಮ್ಮದ್‌ನಿಗಾದರೋ ಇತ್ತಿತ್ತಲಾಗಿ ಒಂದೇ ಧ್ಯಾನ... ದೇವನೊಬ್ಬನೇ ಎಂದು ಭಾವಿಸಿರಿ, ವಿಗ್ರಹಾರಾಧನೆಯನ್ನು ತೊರೆಯಿರಿ, ಒಳಿತುಗಳನ್ನೆಸಗಿರಿ, ಕೆಡುಕುಗಳಿಂದ ದೂರವಿರಿ, ನೀವೆಲ್ಲರೂ ಒಂದು ದಿನ ದೇವನ ಮುಂದೆ ಹಾಜರಾಗಲಿದ್ದೀರಿ, ಆ ದಿನಕ್ಕಾಗಿ ಸಿದ್ಧತೆ ನಡೆಸಿರಿ ಇತ್ಯಾದಿ... ಇಂದೂ ಕೂಡ ಖಂಡಿತವಾಗಿಯೂ ಇದೇ ಮಾತುಗಳನ್ನು ಆಡಲಿದ್ದಾನೆ... ಎಂದೆಲ್ಲ ಲೆಕ್ಕ ಹಾಕಿದ ಅಬೂಲಹಬ್, ಯಾರಿಗೂ ಬಾಯಿ ತೆರೆಯಲೂ ಅವಕಾಶ ನೀಡದೇ ತನ್ನ ಮಾತುಗಾರಿಕೆ ಯನ್ನು ತೇಲಿ ಬಿಟ್ಟ. ಪ್ರವಾದಿವರ್ಯರಿಗೆ(ಸ) ಯಾವೊಂದು ಮಾತನ್ನು ಆಡಲೂ ಅವಕಾಶ ಅಂದು ದೊರೆಯಲಿಲ್ಲ.

ಪ್ರವಾದಿವರ್ಯರು(ಸ) ಮರುದಿನವೂ ನಿಕಟ ಬಂಧುಗಳಿಗೆ ಔತಣ ನೀಡಿದರು. ಆ ಸಂದರ್ಭದಲ್ಲಿ ಅವರಿಗೆ ಇಸ್ಲಾಮಿನ ಉದಾತ್ತ ಸಂದೇಶದ ಪರಿಚಯ ಮಾಡಿಕೊಟ್ಟರು. ಸತ್ಯದ ಸಂದೇಶ ನೀಡಿದರು. ಈ ಸತ್ಯಪ್ರಚಾರದಲ್ಲೂ ಸಾರ್ವಜನಿಕ ಸಂದೇಶಪ್ರಚಾರದಲ್ಲೂ ಯಾವುದೇ ವ್ಯತ್ಯಾಸವಿದ್ದಿರಲಿಲ್ಲ. ಅನಾಥಮುತ್ತು(ಸ) ಯಾವ ಮಾತನ್ನು ಇತರರಿಗೆ ಹೇಳುತ್ತಿದ್ದರೋ ಅದೇ ಮಾತನ್ನು ತಮ್ಮ ಬಂಧುಗಳಿಗೂ ಹೇಳಿದರು. ಸಿರಿವಂತರ ಸಭೆಗಳಿರಲಿ, ಬಡಜನರ ಗುಂಪಿರಲಿ, ಎಲ್ಲೆಡೆ ಪ್ರವಾದಿವರ್ಯರ(ಸ) ಸಂದೇಶ ಒಂದೇ ಆಗಿದ್ದಿತ್ತು. ಯಾವ ರೀತಿ ತಂಗಾಳಿಯು ಬಡವ-ಬಲ್ಲಿದರನ್ನು ಏಕಪ್ರಕಾರ ಸೋಂಕುತ್ತದೋ, ಯಾವ ರೀತಿ ಮಳೆಯ ಹನಿಗಳು ಶ್ರೀಮಂತರ ಮತ್ತು ಹಸಿದವರ ಗದ್ದೆಗಳಿಗೆ ಏಕಪ್ರಕಾರ ಸುರಿಯುತ್ತವೋ ಮತ್ತು ಯಾವ ರೀತಿ ಬೆಳದಿಂಗಳು ಸಿರಿವಂತರ ಮಹಲುಗಳಿಗೂ ಬಡವರ ಗುಡಿಸಲುಗಳಿಗೂ ಸಮಾನವಾಗಿ ತಂಪನ್ನೀಯುತ್ತದೋ ಅದೇ ರೀತಿ ಪ್ರವಾದಿವರ್ಯರ(ಸ) ಸತ್ಯಸಂದೇಶವು ಯಾವುದೇ ಭಿನ್ನತೆ ಮತ್ತು ವಿಶೇಷತೆಯನ್ನು ಅಂಗೀಕರಿಸುವುದಿಲ್ಲ.

ಸತ್ಯನಿಷೇಧದಾರಂಭ!

ಜನಾಂಗೀಯವಾದ, ಕುಲ ಮಹಿಮೆ, ಪೂರ್ವಿಕ ವಿಶ್ವಾಸಾಚಾರಗಳು, ತಥಾಕಥಿತ ಕಲ್ಪನೆಗಳು ಇತ್ಯಾದಿ ಸತ್ಯಸ್ವೀಕಾರದ ಹಾದಿಯಲ್ಲಿ ತಡೆಗಲ್ಲಾಗಿ ಪರಿಣಮಿಸುತ್ತವೆ. ದೊಡ್ಡ ದೊಡ್ಡ ಬುದ್ಧಿಜೀವಿಗಳೂ ಕೂಡ ಬಹಳ ಹಿಂದಿನಿಂದ ನಡೆದು ಬರುತ್ತಿರುವುದನ್ನೇ ಸರಿಯೆಂದೂ ಸಹ್ಯವೆಂದೂ ಭಾವಿಸುವಂತಹ ಮೌಢ್ಯಕ್ಕೆ ಬಲಿಯಾಗುತ್ತಾರೆ. ಜನರು ಸತ್ಯವನ್ನು ತಂದೆ-ತಾತಂದಿರ ಮೇಲಿನ ಪ್ರೀತಿಯ ಮಾನದಂಡದಲ್ಲಿ ಅಳೆಯಬಯಸುತ್ತಾರೆ. ಮಾನವನ ಈ ನೈಸರ್ಗಿಕ ದೌರ್ಬಲ್ಯವೇ ಸತ್ಯವನ್ನು ಒಪ್ಪುವುದಕ್ಕೆ ತಡೆಯಾಗಿ ನಿಲ್ಲುತ್ತದೆ. ಸಕಲ ಸುಧಾರಕರು ಮತ್ತು ಸತ್ಯಸಂದೇಶವಾಹಕರು ಇಂತಹ ಪ್ರತಿರೋಧವನ್ನು ಖಂಡಿತ ಎದುರಿಸಿದ್ದಾರೆ.

ಪ್ರವಾದಿ ಇಬ್ರಾಹೀಮರು(ಅ) ತೌಹೀದ್‌ನ ಘೋಷಣೆಯನ್ನು ಮೊಳಗಿಸಿದಾಗ, ಸೂರ್ಯ-ಚಂದ್ರ-ವಿಗ್ರಹಗಳನ್ನು ಪೂಜಿಸುವವರು ವಿರೋಧಿಸಿದ್ದರು... ಏನು, ಆಝರನ ಈ ಹುಡುಗ, ನಮ್ಮ ಪೂರ್ವಿಕರಿಗಿಂತಲೂ ಹೆಚ್ಚು ತಿಳುವಳಿಕೆಯುಳ್ಳವನಾಗಿ ಬಿಟ್ಟನೇ? ದೊಡ್ಡ ದೊಡ್ಡ ಸ್ಥಾನದಲ್ಲಿರುವವರೇನು ತಿಳಿಗೇಡಿಗಳೇ? ಯುಗಯುಗಾಂತರಗಳಿಂದ ನಾವು ಯಾವ ಹಾದಿಯಲ್ಲಿ ನಡೆಯುತ್ತಿದ್ದೇವೋ ಅದನ್ನು ಇಬ್ರಾಹೀಮನ(ಅ) ಒಂದು ಮಾತಿಗೆ ಬಿಟ್ಟು ಬಿಡಬೇಕೇನು? ಜನಾಂಗದ ಮಂದಿಯೆಲ್ಲರೂ ಪ್ರವಾದಿ ಇಬ್ರಾಹೀಮರನ್ನು(ಅ) ಅಣಕಿಸಿದರು. ಅವರ ಸಂದೇಶವನ್ನು ಸುಳ್ಳಾಗಿಸಿದರು. ಅವರ ಮನೆಮಂದಿಯೂ ಈ ವಿರೋಧದಲ್ಲಿ ಮುಂಚೂಣಿಯಲ್ಲಿದ್ದರು. ಪ್ರವಾದಿ ಮೂಸಾರೊಂದಿಗೂ(ಅ) ಇದೇ ಸಂಭವಿಸಿತ್ತು. ಆ ಜನಾಂಗದ ದೇವನಾಗಿ ಮೆರೆಯುತ್ತಿದ್ದ ಫಿರ್‌ಔನ್‌ನು ಮೂಸಾರನ್ನು(ಅ) ಉಗ್ರವಾಗಿ ವಿರೋಧಿಸಿದನು. ಆ ಜನಾಂಗಕ್ಕೆ ಅರಸ ಪೂಜೆಯ ರೋಗ ಬಡಿದಿತ್ತು. ಅವರ ಪ್ರಕಾರ ಅರಸೊತ್ತಿಗೆಯ ವಾರಸುದಾರನೇ ದೇವತ್ವದ ವಾದಿಯಾಗಿ ಬಿಡುತ್ತಾನೆ. ಅರಸರು ಗಳಿಗೆ ಜನರು ಸಾಷ್ಟಾಂಗವೆರಗುತ್ತಿದ್ದರು. ರಾಜಕೀಯ ದರ್ಪದ ಮುಂದೆ ಮಣಿದ ಆ ಜನ ಅರಸನನ್ನು ದೇವಾಂಶ ಸಂಭೂತನೆಂದಲ್ಲ, ಬದಲಾಗಿ ಸ್ವಯಂ ದೇವನೆಂದೇ ಭಾವಿಸುತ್ತಿದ್ದರು.

ಅಂತ್ಯ ಪ್ರವಾದಿ ಮುಹಮ್ಮದ್‌ರನ್ನು(ಸ) ಎದುರಿಸಿದ ಜನಾಂಗವು ಈ ವಿಷಯದಲ್ಲಿ

ಗತ ಜನಾಂಗಗಳಿಗಿಂತ ಎಷ್ಟೋ ಪಟ್ಟು ಮುಂದಿತ್ತು. ತಮ್ಮ ಪರಂಪರಾಗತ ವಿಶ್ವಾಸಾಚಾರಗಳಿಗೆ ಎದುರಾಗಿ ಸತ್ಯದ ಮಾತುಗಳು ಹೊರಟಾಗ ಅದನ್ನು ಆ ಜನಾಂಗದ ಮಂದಿ ತೀವ್ರವಾಗಿ ವಿರೋಧಿಸಿದರು. ಪ್ರವಾದಿವರ್ಯರ(ಸ) ಚಿಕ್ಕಪ್ಪ ಅಬೂಲಹಬ್ ಇಸ್ಲಾಮ್ ವಿರೋಧಿಗಳ ಪೈಕಿ ಮುಂಚೂಣಿಯಲ್ಲಿದ್ದ. ಆ ನತದೃಷ್ಟನು ಹಗಲೂ ರಾತ್ರಿ ಪ್ರವಾದಿವರ್ಯರನ್ನು(ಸ) ಹಿಂಬಾಲಿಸುವುದನ್ನೇ ತನ್ನ ಕಾಯಕವನ್ನಾಗಿ ಮಾಡಿಕೊಂಡಿದ್ದ. ಪ್ರವಾದಿವರ್ಯರು(ಸ) ಹೋದ ಕಡೆಯೆಲ್ಲ ಈತನೂ ಹೋಗುತ್ತಿದ್ದ ಅಥವಾ ಅಲ್ಲಿ ಹಾಜರಿರು ತ್ತಿದ್ದ. ಪ್ರವಾದಿವರ್ಯರು(ಸ) ಜನರಿಗೆ ತಿಳಿ ಹೇಳಿದಾಗ, ಸತ್ಯದ ಉಪದೇಶ ನೀಡಿದ್ದಾಗ, ಒಳಿತಿನ ಆದೇಶ ನೀಡಿದಾಗ ಅಬೂಲಹಬ್ ಹೇಳುತ್ತಿದ್ದ, "ಕುರೈಶ್ ಜನರೇ! ಅಬ್ದುಲ್ಲಾನ ಈ ಸುಪುತ್ರನ ಮಾತಿಗೆ ಮರುಳಾಗಿ ನಿಮ್ಮ ಪೂರ್ವಿಕ ಧರ್ಮವನ್ನು ಬಿಟ್ಟು ಬಿಟ್ಟೀರಾ! ಈ ನನ್ನ ಸೋದರ ಪುತ್ರ ಧರ್ಮಭ್ರಷ್ಟನಾಗಿ ಬಿಟ್ಟಿದ್ದಾನೆ. ನಮ್ಮ ಕಷ್ಟಕಾಲಗಳಲ್ಲಿ ನೆರ ವಾಗಿರುವಂತಹ ನಮ್ಮ ಆರಾಧ್ಯರುಗಳನ್ನು ಬಿಟ್ಟುಬಿಡುವುದಾದರೂ ಹೇಗೆ? ಯುಗ ಯುಗಾಂತರಗಳಿಂದ ನಮ್ಮ ಪೂರ್ವಜರು ಪೂಜಿಸುತ್ತಾ ಬಂದಿದ್ದ ವಿಗ್ರಹಗಳನ್ನು ಈ ಒಬ್ಬ ವ್ಯಕ್ತಿ ಹೇಳಿದ ಮಾತ್ರಕ್ಕೆ ತೊರೆದು ಬಿಡಲು ಸಾಧ್ಯವೇನು? ಸಾಧ್ಯವಿಲ್ಲ! ಸರ್ವಥಾ ಸಾಧ್ಯವಿಲ್ಲ! ನಾನು ಬದುಕಿರುವ ತನಕ ಲಾತ್, ಮನಾತ್, ನಸ್ರ್ ಮತ್ತು ಹುಬಲ್‌ಗಳ ಘನತೆಗೆ ಕುಂದುಂಟಾಗಲು ಬಿಡಲಾರೆ. ಇನ್ನು ಈ ಮುಹಮ್ಮದ್... ಪರಲೋಕದ ಯಾತನೆಯ ಬಗ್ಗೆ ಜನರನ್ನು ಹೆದರಿಸುತ್ತಿದ್ದಾನಲ್ಲ, ಆ ಪರಲೋಕ ಎಂದರೇನೆಂದೇ ಅರ್ಥವಾಗುತ್ತಿಲ್ಲ! ಸತ್ತು ಮಣ್ಣಾಗಿ ಹೋದ ಬಳಿಕ ಪುನಃ ಯಾರಾದರೂ ಜೀವಂತ ವಾಗುತ್ತಾರೆಯೇ? ತಿಳಿಗೇಡಿತನದ ಮಾತಿದು! ಜನರೇ, ನೂರರಲ್ಲಿ ಒಂದು ಮಾತು ಹೇಳಲೇ? ನಾವು ಕಣ್ಣಾರೆ ಕಾಣದಂತಹ ವಿಷಯಗಳನ್ನು ಹೇಗೆ ತಾನೇ ನಂಬಲು ಸಾಧ್ಯ? ಈತ ದೇವನೊಡನೆ ನಮ್ಮ ಮಾತುಕತೆ ನಡೆಸಿ ಕೊಟ್ಟರೆ ಈತನ ಮಾತನ್ನು ಒಪ್ಪಿಕೊಳ್ಳ ಬಹುದಷ್ಟೇ. ಅಥವಾ ಈ ಇಬ್ನು ಅಬ್ದುಲ್ಲಾ ದೇವನ ವತಿಯಿಂದ ನೇಮಿಸಲ್ಪಟ್ಟವನಾಗಿ ದ್ದಾನೆಂದೂ ಜಗತ್ತಿನ ಎಲ್ಲ ಜನರೂ ಈತನನ್ನು ಅಂಗೀಕರಿಸಬೇಕೆಂದೂ ಆಕಾಶದಿಂದ ಅಶರೀರವಾಣಿಯಾದರೂ ಕೇಳಿಸಲಿ."

ಒಬ್ಬ ಅಬೂಲಹಬನೆಂದಲ್ಲ, ಬಹುತೇಕ ಕುರೈಶರೆಲ್ಲರೂ ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಪ್ರಶ್ನಿಸುತ್ತಿದ್ದರು... ದೇವನು ನೇಮಿಸಿದ ಪ್ರವಾದಿಯೇನು ಈತ? ಇವನಾದರೋ ನಮ್ಮಂತೆಯೇ ತಿನ್ನುತ್ತಾನೆ, ಕುಡಿಯುತ್ತಾನೆ ಮತ್ತು ಮಾರುಕಟ್ಟೆಗಳಲ್ಲಿ ಸಂಚರಿಸುತ್ತಾನೆ. ಈತನಿಗೂ ನಮ್ಮ ಹಾಗೆ ಹೆಂಡತಿ-ಮಕ್ಕಳಿದ್ದಾರೆ, ಲೌಕಿಕ ಅಗತ್ಯಗಳು ಈತನಿಗೂ ಇವೆ... ಪ್ರವಾದಿತ್ವದ ಹೊಣೆಯಂತೂ ಮಕ್ಕಾ ಅಥವಾ ತಾಯಿಫ್‌ನ ಯಾರಾದರೂ ಸಿರಿವಂತ ವ್ಯಕ್ತಿಗೆ ನೀಡಬೇಕಾಗಿತ್ತು. ಈ ಅಬ್ದುಲ್ಲಾನ ಮಗನ ಮನೆಯಲ್ಲಿ ಕುಳಿತುಕೊಳ್ಳಲು ಸರಿಯಾದ ಚಾಪೆಯೂ ಇಲ್ಲ. ಹಲವು ದಿನಗಳವರೆಗೆ ಆತನ ಮನೆತನದಲ್ಲಿ ಹಸಿವೇ ರಾರಾಜಿಸುತ್ತಿರುತ್ತದೆ. ಇಂತಹ ಬಡ ನಿರ್ಗತಿಕನನ್ನು ಪ್ರವಾದಿಯೆಂದು ಅಂಗೀಕರಿಸಿದರೆ ನಮಗೇನು ದಕ್ಕೀತು? ಮುಹಮ್ಮದ್‌ನನ್ನು ತಮ್ಮ ನಾಯಕನನ್ನಾಗಿ ಅಂಗೀಕರಿಸಿದವರ ಅವಸ್ಥೆಯೇನು? ಬಡತನ,

ದಾರಿದ್ರ್ಯ ಮತ್ತು ಹಸಿವೇ ಮೈವೆತ್ತಂತಹವರು! ಕೆಲವರ ಬಳಿಯಂತೂ ಮೈಮುಚ್ಚಲೂ ಬಟ್ಟೆಯಿಲ್ಲದಂತಹ ದುಃಸ್ಥಿತಿ! ಇನ್ನು ನಾವೂ ಮುಹಮ್ಮದ್ ನೊಂದಿಗೆ ಸೇರಿಕೊಂಡು ಅವರಂತೆಯೇ ಆಗಬೇಕೇನು? ಅದೂ ಅಲ್ಲದೆ, ಇಬ್ನು ಅಬ್ದುಲ್ಲಾನ ವಿಶ್ವಾಸವನ್ನು ಒಪ್ಪುವುದೆಂದರೆ ಇಡೀ ಕುರೈಶ್ ಗೋತ್ರದ ದ್ವೇಷವನ್ನು ಕಟ್ಟಿಕೊಂಡಂತೆಯೇ ಸರಿ! ಈ ವ್ಯಾಪಾರವಾದರೋ ತೀರ ದುಬಾರಿಯಾಗಿದೆ... ಅಲ್ಲಲ್ಲ, ಅತ್ಯಂತ ನಷ್ಟಕರವಾದುದಾಗಿದೆ.

ಅವರು ಪರಸ್ಪರ ಹೀಗೂ ಆಡಿಕೊಳ್ಳುತ್ತಿದ್ದರು... "ಮುಹಮ್ಮದ್(ಸ) ನಿಶ್ಚಯ ವಾಗಿಯೂ ಸತ್ಯಸಂಧ, ಪ್ರಾಮಾಣಿಕ ಮತ್ತು ವಚನ ಪಾಲಕನಾಗಿದ್ದಾನೆಂಬುದರಲ್ಲಿ ಸಂಶಯವಿಲ್ಲ. ನಮ್ಮ ನಡುವೆ ಆತನ ನಲ್ವತ್ತು ವರ್ಷಗಳು ಉರುಳಿವೆ. ಇದುವರೆಗೂ ಆತನಿಂದ ಕೆಟ್ಟ ಮಾತು ಹೊರಟಿದ್ದಿಲ್ಲ. ಆತನ ಚಾರಿತ್ರ್ಯದ ಮೇಲೆ ಯಾರೂ ಯಾವುದೇ ಆರೋಪ ಹೊರಿಸಲಾರ. ಇಂತಹ ಸಭ್ಯ, ಧರ್ಮನಿಷ್ಠ ಮತ್ತು ಸತ್ಯವಂತ ಇಡೀ ಅರೇಬಿಯಾದಲ್ಲೇ ಕಾಣಸಿಗಲಾರ. ಮಕ್ಕಾದ ಗಲ್ಲಿಗಳು, ಕುಬೈಸ್‌ನ ಶೃಂಗ, ಸಫಾದ ಬಂಡೆಗಳು ಹಾಗೂ ಕಲಬಾದ ಮಿಹ್ರಾಬ್‌ಗಳೆಲ್ಲವೂ ಮುಹಮ್ಮದ್ ಬಿನ್ ಅಬ್ದುಲ್ಲಾನ ಸಜ್ಜನಿಕೆಗೆ ಸಾಕ್ಷ್ಯ ವಹಿಸುತ್ತಿವೆ. ಅವರ ಇದುವರೆಗಿನ ಮಾತುಗಳೆಲ್ಲವೂ ಉತ್ತಮವೇ ಆಗಿದ್ದಿತು. ಪ್ರಶಂಸನೀಯ ಮತ್ತು ಅತ್ಯುನ್ನತ ಮಾತುಗಳು! ಆದರೆ ಕೆಲವು ದಿನಗಳಿಂದೀಚೆಗೆ ಯಾಕೋ ಆತ ನಮ್ಮ ಆರಾಧ್ಯ ದೈವಗಳನ್ನು ಹೀಗಳೆಯತೊಡಗಿದ್ದಾನೆ. ಅದು ಮಾತ್ರ ನಮಗೆ ಎಳ್ಳಷ್ಟು ಹಿಡಿಸುತ್ತಿಲ್ಲ."

"ಆದರೆ ಮುಹಮ್ಮದನಾದರೋ ಮೊದಲಿನಿಂದಲೇ ನಮ್ಮ ಆರಾಧ್ಯರುಗಳ ವಿರೋಧಿಯೇ ಆಗಿದ್ದ" ಒಬ್ಬ ಕುರೈಶಿ ವಯೋವೃದ್ಧ ಹೇಳಿದ.

"ಇಲ್ಲ, ಹಾಗೇನಿಲ್ಲ" ಇನ್ನೋರ್ವ ಹೇಳಿದ.

"ಅರೇ ನೀವು ಇನ್ನೂ ಸದ್ಭಾವನೆಯ ಮಬ್ಬುಗತ್ತಲಲ್ಲೇ ಅಲೆದಾಡುತ್ತಿದ್ದೀರಿ ಮತ್ತು ಕ್ಷಮಿಸಿ, ನೀವು ಸಂಕುಚಿತ ದೃಷ್ಟಿಕೋನದವರೇನೋ! ಒಮ್ಮೆ ಮುಹಮ್ಮದ್‌ನ ಜೀವನದ ಗತ ದಿನಗಳನ್ನು ಅವಲೋಕಿಸಿ ನೋಡಿ, ವಸ್ತುಸ್ಥಿತಿ ನಿಮ್ಮ ಕಣ್ಣ ಮುಂದಕ್ಕೆ ಬರುವುದು. ಆಗ ನಾನು ಸತ್ಯ ಹೇಳುತ್ತಿದ್ದೇನೆಂದು ನಿಮಗೆ ಮನವರಿಕೆಯಾಗುವುದು" ವಯೋವೃದ್ಧ ಮರು ನುಡಿದ.

"ಹಾಗಾದರೆ ಅಂತಹದ್ದೇನಿದೆ ಹೇಳಿ, ನೀವಂತೂ ನಿಕಾಹ್ ಮಾಡುವಾಗ ಶರತ್ತು ಗಳನ್ನಿರಿಸಿ ದಂತೆ ಆಡುತ್ತಿದ್ದೀರಿ" ಎರಡನೆಯವ ಹೇಳಿದ.

"ವ್ಯಕ್ತಿಯ ಆಲೋಚನೆಗಳನ್ನು ಆತನ ಕೃತ್ಯ, ಚಾರಿತ್ರ್ಯ ಮತ್ತು ಜೀವನ ವಿಧಾನ ದಿಂದ ತಿಳಿದುಕೊಳ್ಳಲಾಗುತ್ತದೆ. ನೀವೆಂದಾದರೂ ಮುಹಮ್ಮದ್‌ನನ್ನು ಬಾಲ್ಯದಲ್ಲಿಯೂ ಯಾವುದಾದರೂ ವಿಗ್ರಹದ ಮುಂದೆ ಬಾಗುವುದನ್ನು ಕಂಡಿದ್ದೀರಾ? (ಇನ್ನೊಬ್ಬನು ನಕಾರಾತ್ಮಕವಾಗಿ ತಲೆಯಾಡಿಸಿದ) ಯೌವನಾವಸ್ಥೆಯಲ್ಲಿಯೂ ಸಫಾ ಬೆಟ್ಟದಲ್ಲಿ ಘೋಷಣೆ

ಮಾಡುವ ವರೆಗೆ ಎಂದಾದರೂ ಆತನನ್ನು ವಿಗ್ರಹದೆಡೆಗೆ ಗಮನ ಹರಿಸಿದ್ದನ್ನಾದರೂ ಕಂಡಿದ್ದೀರಾ? (ಪುನಃ ನಕಾರಾತ್ಮಕ ಪ್ರತಿಕ್ರಿಯೆ) ಅದರರ್ಥ ಮುಹಮ್ಮದ್ ಈಗ ಬಹಿರಂಗ ವಾಗಿ ಘೋಷಿಸಿದ್ದಾನಷ್ಟೇ. ಆದರೆ ವ್ಯಾವಹಾರಿಕವಾಗಿ ಆತ ಬಹಳ ಹಿಂದಿನಿಂದಲೂ ವಿಗ್ರಹಾ ರಾಧನೆಗೆ ವಿರೋಧಿಯಾಗಿದ್ದ. ನಿಮಗೆ ತಿಳಿದಿಲ್ಲದಿದ್ದರೆ ಸರಿ, ಹೇಳುತ್ತೇನೆ... ಝೈದ್ ಬಿನ್ ಅಮ್ರ್ ಬಿನ್ ನಫೀಲನು ಒಮ್ಮೆ ಮುಹಮ್ಮದ್‌ನಿಗೆ ಔತಣ ನೀಡಿದ್ದ. ಮಾಂಸದಡುಗೆ ಯನ್ನು ಆತನ ಮುಂದಿಟ್ಟಾಗ ಹೇಳಿದ್ದೇನು ಗೊತ್ತೇ? 'ವಿಗ್ರಹ ಮತ್ತು ಗೋರಿಗಳಿಗೆ ಅರ್ಪಿಸಿದ ಮಾಂಸವನ್ನು ನಾನು ತಿನ್ನುವುದಿಲ್ಲ. ಅಲ್ಲಾಹನ ಹೆಸರೆತ್ತಿ ಕೊಯ್ದ ಮಾಂಸವನ್ನಷ್ಟೇ ತಿನ್ನುತ್ತೇನೆ' ಎಂದು ಬಿಟ್ಟ! ಈತ ಎಂದಾದರೊಂದು ದಿನ ಖಂಡಿತ ತನ್ನ ನಿಜ ಬಣ್ಣವನ್ನು ಬಯಲು ಮಾಡುತ್ತಾನೆಂದು ನಾವು ಆಗಲೇ ಅಂದಾಜಿಸಿದ್ದೆವು. ಅಷ್ಟೇ ಅಲ್ಲ, ಈ ಇಬ್ನು ಅಬ್ದುಲ್ಲಾನಂತೂ ನಮ್ಮ ರೀತಿ-ರಿವಾಜು, ಸಮಾಜ ಮತ್ತು ಜಾತ್ರೆಗಳಿಗೂ ವಿರೋಧವಿದ್ದ. ಕಳೆದು ಹೋದ ದಿನಗಳಲ್ಲಿ ಎಂತೆಂತಹ ಜಾತ್ರೆಗಳು ಜರುಗಿದ್ದುವೆನ್ನಿ. ಹಸೀನ್‌ನ ದಾಸಿ ರಿಫಾದಳ ನೃತ್ಯ ಗಾಯನಕ್ಕೆ ತೊಂಭತ್ತು ತುಂಬಿದವರೂ ಹುಚ್ಚೆದ್ದಿದ್ದರು. ಬಿಂತು ಆಸಿಮ್‌ಳ ದಫ್ ನೃತ್ಯವಂತೂ ನಮ್ಮ ರಾತ್ರಿಯ ನಿದ್ರೆಯನ್ನೇ ಕಸಿದು ಬಿಟ್ಟಿದೆ. ಇಡೀ ಮಕ್ಕಾ ನಗರವೇ ಆ ಸಭೆಗಳಲ್ಲಿ ಭಾಗಿಯಾಗಿದ್ದುವು. ಆದರೆ ಮುಹಮ್ಮದ್‌ನ ನೆರಳೂ ಅತ್ತ ಸುಳಿದಿರಲಿಲ್ಲ. ಮದ್ಯಪಾನವು ನಮ್ಮಂಥ ಅರಬರ ಸಾಂಪ್ರದಾಯಿಕ ಹವ್ಯಾಸವಾಗಿದೆಯಲ್ಲವೇ. ನಾವು ಮದ್ಯವನ್ನು ಬಿಟ್ಟು ಒಂದು ರಾತ್ರಿಯನ್ನೂ ಕಳೆಯಲಾರೆವು. ಆದರೆ ಅಬ್ದುಲ್ಲಾನ ಪುತ್ರ ಮುಹಮ್ಮದ್‌ನನ್ನು ಎಂದೂ ಯಾವುದೇ ಮದ್ಯದ ಸಮಾರಂಭಗಳಲ್ಲಿ ಕಂಡದ್ದಿಲ್ಲ. ನಾನು ನನ್ನ ಆರಾಧ್ಯರುಗಳ ಆಣೆಹಾಕಿ ಹೇಳಬಲ್ಲೆ- ಮುಹಮ್ಮದ್‌ನು ಇಂದಿನವರೆಗೂ ಮದ್ಯದ ಲೋಟೆಯನ್ನು ಮುಟ್ಟಿದ್ದಿಲ್ಲ. ಹಾಗಿರುವಾಗ ಇದರಿಂದ ಎಂತಹ ವ್ಯಾಖ್ಯಾನವನ್ನು ಪಡೆಯಲಾದೀತು? ನೀವೇ ಹೇಳಿ."

ನೆರೆದವರೆಲ್ಲರೂ ಒಕ್ಕೊರಲಿನಿಂದ ಹೌದೆಂದರು. ವೃದ್ಧ ಮುಂದುವರಿಸಿದ, "ಎರಡು ಮತ್ತು ಎರಡು ಒಂಟೆಗಳು ಸೇರಿ ನಾಲ್ಕು ಒಂಟೆಗಳಾಗುತ್ತವೆ. ಅದಕ್ಕಿಂತ ಕಡಿಮೆಯೋ ಹೆಚ್ಚೋ ಆಗಲಾರದು. ಹಾಗೆಯೇ ಮುಹಮ್ಮದ್ ನಮ್ಮ ಧರ್ಮ, ಸಂಸ್ಕೃತಿ, ನಾಗರಿಕತೆ ಮತ್ತು ವಾತಾವರಣದ ವಿರೋಧಿಯಾಗಿದ್ದಾನೆ ಎಂಬುದೂ ಅಷ್ಟೇ ಸತ್ಯ. ಆತನಿಗೆ ನಮ್ಮ ಸಂಸ್ಕೃತಿಯು ಹಿಡಿಸುತ್ತಿಲ್ಲ. ಆತನ ಜೀವನವು ನಮ್ಮ ಜೀವನಕ್ಕಿಂತ ತೀರಾ ಭಿನ್ನವಾಗಿದೆ. ತಮ್ಮವರೊಂದಿಗೆ ಇದ್ದುಕೊಂಡೂ ಪರಕೀಯರಂತಿರುವುದು ವಿರೋಧವಲ್ಲವೇ? ವಿಮುಖತೆ ಯಲ್ಲವೇ? ದ್ವೇಷ ಸಾಧನೆಯಲ್ಲವೇ?"

ಆಗಲೂ ಎಲ್ಲರೂ 'ನೀವು ಹೇಳುವುದು ಸರಿ' ಎಂಬಂತೆ ತಲೆಯಾಡಿಸಿದರು.

❖ ❖ ❖ ❖

ಹ. ಸಯ್ಯಿದಿನಾ ಮುಹಮ್ಮದರ್‌ರಸೂಲುಲ್ಲಾಹ್(ಸ) ತೌಹೀದ್‌ನ (ಲಾಇಲಾಹ ಇಲ್ಲಲ್ಲಾಹ್‌ನ) ಘೋಷಣೆ ಮೊಳಗಿಸಿದಾಗ ಸತ್ಯನಿಷೇಧದ ಗೋಡೆಗಳು ಕಂಪಿಸಿದುವು. ಎಲ್ಲೆಲ್ಲ ಈ ಕಲಿಮದ ಪ್ರತಿಧ್ವನಿ ತಲುಪಿತೋ ಅಲ್ಲೆಲ್ಲ ಶಿರ್ಕ್, ಅಕ್ರಮದ ಪೈಶಾಚಿಕ ಶಕ್ತಿಗಳು ಥರಗುಟ್ಟಿದವು. ಅಬೂಜಹಲ್ ಮತ್ತು ಅಬೂಲಹಬ್ ಕೆರಳಿದರು- ಇದು ನಮ್ಮ ಸಂಸ್ಕೃತಿಯ ಅವಹೇಳನವಾಗಿದೆಯೆಂದರು. ಅಬೂಸುಫಿಯಾನ್ ಕೂಡ ಅದನ್ನು ತಮ್ಮ ಸರದಾರಿಕೆಗೆ ಎದುರಾದ ಸವಾಲೆಂದೇ ಭಾವಿಸಿದರು. ಕುಲ-ಗೋತ್ರ ಮತ್ತು ವರ್ಣಭೇದದ ವಕ್ತಾರರು ಕಂಪಿಸಿದರು- ಇದು ನಮ್ಮ ಕುಲಮಹಿಮೆ ಮತ್ತು ವರ್ಗ ಮೇಲ್ಮೆಗೆ ಬಿದ್ದ ಹೊಡೆತವೆಂದರು. ಕಣಿ ಹೇಳುವವರು, ಸನ್ಯಾಸಿಗಳು, ಮಾಟಗಾರರು, ಪುರೋಹಿತರು ಮತ್ತು ಪೂಜಾರಿಗಳೆಲ್ಲರೂ ಬೆವರಿದರು- ನಮ್ಮ ಧಾರ್ಮಿಕ ಶ್ರೇಷ್ಠತೆಯನ್ನು ಈ ಏಕದೇವತ್ವದ ಘೋಷಣೆಯು ಅಪಾಯಕ್ಕೀಡು ಮಾಡಿದೆಯೆಂದರು. ಚಿತ್ತದ ದಾಸರು ಮತ್ತು ಚಿತ್ತಾಕಾಂಕ್ಷೆಯ ಅನುಚರರು ಭಯಭೀತರಾದರು- ವಿಷಯಲಂಪಟತೆಯ ವಿರುದ್ಧ ಆಂದೋಲನ ಪ್ರಾರಂಭವಾಯಿತೆಂದರು. ನಮ್ಮ ಲೈಂಗಿಕ ಆಸ್ವಾದನೆಗಳ ಎಲ್ಲ ಆಧಾರವೂ ಮುರಿದು ಬೀಳಲಿದೆ ಮತ್ತು ಸುಖಲೋಲುಪ ಜೀವನವು ಸತ್ವಹೀನವಾಗಿ ಬಿಡುವುದು ಎಂದು ಭಾವಿಸಿ ಭಯಪಟ್ಟರು. ಯಾರು ಎಷ್ಟು ಹೆಚ್ಚು ಕೆಡುಕುಗಳಲ್ಲಿ ಮುಳುಗಿದ್ದರೋ ಯಾರು ಸಜ್ಜನಿಕೆಯಿಂದ ಎಷ್ಟು ದೂರವಿದ್ದರೋ ಅವರು ಅಷ್ಟೇ ಅಧಿಕ ಭೀತಿಗೊಳಗಾದರು. ನೈಜ ಆರಾಧ್ಯನ ನಾಮಸ್ಮರಣೆಯಾಗುತ್ತಲೇ ಮಿಥ್ಯ ಆರಾಧ್ಯರುಗಳು ಮತ್ತು ತೋರಿಕೆಯ ದೈವತ್ವಗಳು ಎಲ್ಲವೂ ಕಂಪಿಸಿಹೋದುವು.

ಮಕ್ಕಾದ ಕುರೈಶರು, ಯಮನ್, ಸಿರಿಯಾ ಮತ್ತಿತರ ದೇಶಗಳಿಗೆ ವ್ಯಾಪಾರ ನಿಮಿತ್ತ ಹೋಗುತ್ತಿದ್ದರು. ಅಲ್ಲೆಲ್ಲ ಮುಹಮ್ಮದ್‌ರ(ಸ) ಪ್ರವಾದಿತ್ವ ಮತ್ತು ಅವರ ಸಂದೇಶದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ಕೇಳುಗರು ಆಲೋಚನೆಗೆ ಬೀಳುತ್ತಿದ್ದರು. 'ಈ ಕ್ರಾಂತಿಯು ನಮ್ಮತ್ತಲೇ ಧಾವಿಸಿ ಬರುತ್ತಿದೆ, ಇದರಿಂದ ಹೊರಗುಳಿಯಲು ನಮ್ಮಿಂದ ಸಾಧ್ಯವಿಲ್ಲ' ಎಂದು ಅವರ ಹೃದಯಗಳು ನುಡಿಯುತ್ತಿದ್ದುವು.

ಎಲ್ಲ ರೀತಿಯ ವಿರೋಧ, ಅಸಂತೋಷ ಮತ್ತು ಕಷ್ಟಕಾರ್ಪಣ್ಯಗಳ ಹೊರತಾಗಿಯೂ ದೇವ ಸಂದೇಶವಾಹಕರು(ಸ) ಸತ್ಯದ ಪ್ರಚಾರದಲ್ಲಿ ಮಗ್ನರಾಗಿದ್ದರು. ಎಂತಹ ವಿರೋಧಕ್ಕೂ ಅವರ ನಿಶ್ಚಯದಾರ್ಢ್ಯದಲ್ಲಿ ಕೊಂಚವೂ ಸಡಿಲ ಮಾಡಲು ಸಾಧ್ಯವಾಗಲಿಲ್ಲ. ಸಹನೆ, ದೃಢತೆ ಮತ್ತು ಸತ್ಯವಂತಿಕೆಗೆ ಅವರ ಜೀವನವು ಒಂದು ಉದಾಹರಣೆಯಂತಿತ್ತು. ಹಾಗಾಗಿ ಆ ಎಲ್ಲ ವಿರೋಧದ ಅಲೆಗಳು ಯಾವುದೇ ಪ್ರಭಾವ ಬೀರದೆ ಹೋದುವು. ಪ್ರವಾದಿತ್ವದ ದೀಪವು ಬಿರುಗಾಳಿಯ ನಡುವೆ ಇದ್ದೂ ಪ್ರಜ್ವಲಿಸುತ್ತಿತ್ತು. ಸತ್ಯದ ಗಿಡವು ಆಮ್ಲದಲ್ಲಿ ಮುಳುಗಿದ್ದರೂ ಹಸಿರು ತುಂಬಿ ಬೆಳೆಯುತ್ತಿತ್ತು. ಪ್ರವಾದಿತ್ವಕ್ಕೆ ಈ ಮೊದಲೇ ಯಶಸ್ಸು ಮತ್ತು ದೇವ ಸಹಾಯವು ವಿಧಿಸಲ್ಪಟ್ಟಿದೆಯಲ್ಲವೇ.

ಕುರೈಶರು ತೀವ್ರತರವಾಗಿ ವಿರೋಧಿಸುತ್ತಿದ್ದರೇನೋ ಸರಿ. ಆದರೂ ಅವರು ಮಾನಸಿಕ

ಆಘಾತ ಮತ್ತು ತಲ್ಲಣಗಳಿಗೊಳಗಾಗುತ್ತಿದ್ದರು. ಅವರ ಆತ್ಮಸಾಕ್ಷಿಯು ಆಗಾಗ ಅವರನ್ನು ಎಚ್ಚರಿಸುತ್ತಿತ್ತು... "ಮೂರ್ಖರೇ! ಯಾರನ್ನು ನೀವು ಬಾಲ್ಯದಿಂದಲೂ ಸತ್ಯವಂತನಾಗಿ ಕಂಡಿದ್ದಿರೋ ಯಾರ ಬಾಯಿಯಿಂದ ಇದುವರೆಗೂ ಒಂದು ಕೆಟ್ಟ ಅಥವಾ ಸುಳ್ಳು ಮಾತನ್ನು ಕೇಳಿರಲಿಲ್ಲವೋ ಆ ವ್ಯಕ್ತಿಯನ್ನು ಇಂದು ಯಾವ ಆಧಾರದಲ್ಲಿ ಸುಳ್ಳುಗಾರ ಎಂದು ಹೇಳುವಿರಿ? ಒಬ್ಬ ವ್ಯಕ್ತಿ ನಲ್ವತ್ತು ವರ್ಷಗಳ ಕಾಲ ಸತ್ಯವನ್ನೇ ನುಡಿಯುತ್ತಿದ್ದವನು ಏಕಾಏಕಿ ಸುಳ್ಳು ಹೇಳಲು ಸಾಧ್ಯವೇ? ಅದೂ ಯಾವುದೇ ಲೌಕಿಕ ಲಾಭ ಅಥವಾ ವೈಯಕ್ತಿಕ ಪ್ರಯೋಜನಕ್ಕಾಗಿಯಲ್ಲವೆಂದು ತಿಳಿದಿದ್ದೂ ಯಾಕೀ ವಿರೋಧ? ಆತ ನಿಮ್ಮಿಂದ ಸಂಪತ್ತು ಬಯಸುತ್ತಿಲ್ಲ, ಸರದಾರಿಕೆಯ ಆಕಾಂಕ್ಷೆಯನ್ನಿಟ್ಟಿಲ್ಲ, ರಾಜಪಟ್ಟವನ್ನೂ ಕೇಳುತ್ತಿಲ್ಲ. ಕೇವಲ ಏಕದೇವತ್ವದ ಆಧಾರದಲ್ಲಿ ನಿಮ್ಮೆಲ್ಲರನ್ನೂ ಒಟ್ಟುಗೂಡಿಸಲು ಬಯಸುತ್ತಿದ್ದಾನೆ!"

ಆದರೆ ತಂದೆ-ತಾತಂದಿರ ವಿಶ್ವಾಸ ಮತ್ತು ಗೋತ್ರದ ರೀತಿ-ರಿವಾಜುಗಳ ನೆನಪು ಅಡ್ಡ ಬಂದು ಆತ್ಮಸಾಕ್ಷಿಯ ಕರೆಯು ಕ್ಷೀಣವಾಗಿ ಬಿಡುತ್ತಿತ್ತು.

ಕೊನೆಗೆ ಕುರೈಶರೆಲ್ಲ ಒಟ್ಟು ಸೇರಿ ಪ್ರವಾದಿ ಮುಹಮ್ಮದ್‌ರೊಡನೆ(ಸ) ಹೀಗೆ ಆಗ್ರಹ ವ್ಯಕ್ತಪಡಿಸುತ್ತಾರೆ:

1. ನೀವು ದೇವನ ನೈಜ ಪ್ರವಾದಿಯೆಂದಾಗಿದ್ದರೆ, ದೇವನು ನಿಮ್ಮ ಎಲ್ಲ ಮಾತುಗಳನ್ನೂ ಕೇಳುತ್ತಾನೆಂದಿದ್ದರೆ... ಮಕ್ಕಾ ನಗರದ ಮುಂಭಾಗದಲ್ಲಿ ಆವರಣ ಗೋಡೆಯಂತೆ ಇರುವ ಗುಡ್ಡ ಬೆಟ್ಟಗಳಿವೆಯಲ್ಲ, ಅದು ನಗರವನ್ನು ಇತರೆಡೆಗಳಿಗೆ ಕಾಣದಂತೆ ಮರೆ ಮಾಚಿದೆ. ನೀವು ದೇವನೊಡನೆ ಹೇಳಿ ಬೆಟ್ಟ ಸಾಲುಗಳನ್ನು ಅಲ್ಲಿಂದ ತೆರವುಗೊಳಿಸಿ ನಮ್ಮ ನಗರವನ್ನು ಪರಿಸರಕ್ಕೆ ಮುಕ್ತಗೊಳಿಸುವಂತೆ ಮಾಡಿ.

2. ಇರಾಕ್ ಮತ್ತು ಸಿರಿಯದ ಜನರು ಎಷ್ಟು ಸೌಭಾಗ್ಯವಂತರು! ಅವರ ನಾಡಿನಲ್ಲಿ ನದಿಗಳು ಹರಿಯುವುದರಿಂದ ನಗರಗಳು ಹಸಿರಿನಿಂದ ಕಂಗೊಳಿಸುತ್ತಿವೆ. ನೀವು ನಿಮ್ಮ ದೇವನೊಡನೆ ಹೇಳಿ ನಮ್ಮಲ್ಲೂ ಕೆಲವು ಕಾಲುವೆಗಳನ್ನಾದರೂ ಹರಿಸುವಂತೆ ಮಾಡಿ.

3. ಜೀವನ-ಮರಣವು ದೇವನ ಕೈಯಲ್ಲಿದೆಯೆನ್ನುತ್ತಾ ತಿರುಗುತ್ತೀರಲ್ಲ, ಹಾಗಿದ್ದರೆ ದೇವನಲ್ಲಿ ಹೇಳಿ ನಮ್ಮ ತಂದೆ-ತಾತಂದಿರನ್ನು ಪುನಃ ಜೀವಂತಗೊಳಿಸುವಂತೆ ಮಾಡಿ. ಹ್ಞಾಂ... ಒಂದು ಮಾತು, ನಮ್ಮ ಪೂರ್ವಜರ ಪೈಕಿ ಕುಸ್ಸೈ ಬಿನ್ ಕಿಲಾಬ್‌ರನ್ನು ಯಾವ ರೀತಿಯಿಂದಲಾದರೂ ಪುನಃ ಜೀವಂತಗೊಳಿಸಿರಿ. ಕುಸ್ಸೈ ನಮ್ಮ ಮಹಾನ್ ಸರದಾರರಾಗಿದ್ದರು. ಅವರು ಕುರೈಶ್ ಗೋತ್ರದ ಘನತೆಗೆ ವಿಶೇಷ ಮೆರುಗು ನೀಡುವಂತೆ ಮಾಡಿದ್ದರು. ಅವರು ಸತ್ಯಸಂಧರೂ ಆಗಿದ್ದರು. ನಾವು ಕುಸ್ಸೈಯೊಡನೆ ನಿಮ್ಮ ಬಗ್ಗೆ ವಿಚಾರಿಸುತ್ತೇವೆ ಅಷ್ಟೇ. ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ನಿಜವಾಗಿಯೂ ದೇವನ ದೂತರೇ ಎಂದು ಕೇಳುವೆವು. ಕುಸ್ಸೈ ಸುಳ್ಳು ಹೇಳಲಾರರು. ವಾಸ್ತವಿಕಾಂಶಗಳನ್ನೂ ಘಟನಾವಳಿಗಳನ್ನೂ ಅವರು ಯಥಾವತ್ ಪ್ರಕಟಪಡಿಸುವರು. ಕುಸ್ಸೈಯವರಂತಹ ಸಭ್ಯ ವ್ಯಕ್ತಿ ತನ್ನ ಸಂತಾನಕ್ಕೆ ಎಂದೂ ಮೋಸ

ಮಾಡಲಾರರು.

4. ಇನ್ನೊಂದು ವಿಷಯ, ಮುಹಮ್ಮದ್(ಸ)! ಜೀವನಾವಶ್ಯಕತೆಗಳನ್ನು ಈಡೇರಿಸಲು ನೀವು ಸ್ವತಃ ಮಾರುಕಟ್ಟೆಗಳಿಗೆ ಹೋಗುತ್ತೀರಿ. ಆಹಾರ ಧಾನ್ಯಗಳನ್ನು ಸ್ವಯಂ ಹೊತ್ತು ಕೊಂಡು ತರುತ್ತೀರಿ. ಜೀವನಾಧಾರಕ್ಕಾಗಿ ನೀವೂ ಬಹಳಷ್ಟು ತ್ರಾಸಪಡುತ್ತೀರಿ. ನಿಮ್ಮ ಆರ್ಥಿಕ ಸ್ಥಿತಿಯೂ ಉತ್ತಮವಾಗಿಲ್ಲ. ನಿಮ್ಮ ಮನೆಯೂ ಗಟ್ಟಿಮುಟ್ಟಾಗಿಲ್ಲ. ಸೆಖೆಯಲ್ಲಿ ಆರಾಮವಿಲ್ಲದ ಮತ್ತು ಚಳಿಯಲ್ಲಿ ರಕ್ಷಣೆ ಪಡೆಯಲಾಗದ ಸ್ಥಿತಿ... ಹಾಗಿರುವಾಗ ನಿಮಗೆ ದೇವನಲ್ಲಿ ಬೇಡಿಕೊಳ್ಳಬಹುದಲ್ಲವೇ- ನನ್ನನ್ನು ಪ್ರವಾದಿಯನ್ನಾಗಿ ಮಾಡಿ ಕಳುಹಿಸಿದ ಓ ಸರ್ವಶಕ್ತನೇ, ನನಗಾಗಿ ಒಂದು ಭವ್ಯ ಬಂಗಲೆಯನ್ನು ಸೃಷ್ಟಿಸಿಕೊಡು... ನನ್ನ ಸುತ್ತಮುತ್ತ ಚಿನ್ನ-ಬೆಳ್ಳಿಗಳನ್ನೂ ತುಂಬಿಸು ಮತ್ತು ನನಗಾಗಿ ವಿಹಾರಕ್ಕೆಂದು ಸುಂದರ ತೋಟವನ್ನು ನಿರ್ಮಿಸು. ಹಾಗೆಯೇ, ನಿಮ್ಮ ದೇವನೊಡನೆ, ನಿಮಗಾಗಿ ಒಬ್ಬ ದೇವಚರನನ್ನು ಇಳಿಸಲೂ ಪ್ರಾರ್ಥಿಸಿರಿ. ಆತ ಬಂದು ಜನರೊಡನೆ, "ಈ ವ್ಯಕ್ತಿ ಹೇಳುವ ಮಾತುಗಳೆಲ್ಲವೂ ಸತ್ಯ ವಾಗಿದೆ!" ಎಂದು ಹೇಳಲಿ.

ಕುರೈಶರ ಈ ಬೇಡಿಕೆಗಳೆಲ್ಲವೂ ಅವರ ಭ್ರಮೆ ಮತ್ತು ಸಂಕುಚಿತ ದೃಷ್ಟಿಕೋನವನ್ನು ಸಂಪೂರ್ಣವಾಗಿ ವ್ಯಕ್ತಪಡಿಸುತ್ತವೆ. ಅವರ ಮನಮಸ್ತಿಷ್ಕಗಳಲ್ಲಿ ಲೌಕಿಕ ಆಡಂಬರ ಮತ್ತು ಸುಖಲೋಲುಪತೆಯೇ ಆವರಿಸಿಕೊಂಡಿತ್ತು. ದೊಡ್ಡ ದೊಡ್ಡ ಭವ್ಯ ಬಂಗಲೆಗಳು, ಚಿನ್ನ-ಬೆಳ್ಳಿಯ ರಾಶಿ ಮತ್ತು ಸುಂದರವಾದ ತೋಟಗಳನ್ನೇ ಸರ್ವಸ್ವವೆಂದು ಅವರು ಭಾವಿಸಿದ್ದರು. ಮಾನವೀಯ ಸಭ್ಯತೆಯ ಮೌಲ್ಯವನ್ನು ಅವರು ಅರಿತಿರಲೇ ಇಲ್ಲ. ವ್ಯಕ್ತಿ ಗೌರವ, ಸಭ್ಯತೆ, ಸತ್ಯಸಂಧತೆ ಮತ್ತು ಮಾನವೀಯ ಔನ್ನತ್ಯಕ್ಕಾಗಿ ಬಂಗಲೆಗಳ ವೈಭವವೋ ಐಶ್ವರ್ಯದ ರಾಶಿಯೋ ಅಗತ್ಯವೇ ಅಲ್ಲ ಎಂಬುದು ಕುರೈಶರು ಅರಿತಿರಲಿಕ್ಕಿಲ್ಲ. ಅಥವಾ ಅರಿತಿದ್ದರೂ ಬೇಕೆಂತಲೇ ತಿಳಿಯದಂತೆ ನಟಿಸುತ್ತಿರಬಹುದು. ವಸ್ತುತಃ ಸಂಪತ್ತು-ವೈಭವದ ಮಾನದಂಡ ದಲ್ಲಿ ಮಾನವನ ಶ್ರೇಷ್ಠತೆಯನ್ನು ಅಳೆಯುವುದು ಅತಿದೊಡ್ಡ ಮೌಢ್ಯ ಮತ್ತು ಮೂರ್ಖತನ ವಾಗಿದೆ. ಸತ್ಯದ ದೀವಟಿಕೆಯು ಮೊದಮೊದಲು ಹರುಕು ಮುರುಕು ದುರ್ಬಲ ಗುಡಿಸಲು ಗಳಲ್ಲಿಯೇ ಬೆಳಗಿ ಪ್ರಕಾಶ ಬೀರುತ್ತವೆಂಬುದು ಪ್ರಕೃತಿಯ ನೀತಿಯಾಗಿದೆ.

ಕುರೈಶರ ಬೇಡಿಕೆಗಳಿಗೆ ದೇವ ಸಂದೇಶವಾಹಕರು(ಸ) ಹೀಗೆ ಉತ್ತರಿಸುತ್ತಾರೆ, "ನಾನು ಅಂತಹ ವಿಷಯಗಳಿಗಾಗಿ ನೇಮಿಸಲ್ಪಟ್ಟವನಲ್ಲ. ನಾನು ಸೃಷ್ಟಿಕರ್ತನೊಂದಿಗೆ ಅಂತಹ ಬೇಡಿಕೆ ಗಳನ್ನು ಸರ್ವಥಾ ಇಡಲಾರೆ. ನನಗೆ ಅಲ್ಲಾಹನು, ಅವನ ಅನುಗ್ರಹಗಳ ಸುವಾರ್ತೆ ನೀಡುವವನಾಗಿಯೂ ಅವನ ಶಿಕ್ಷೆಯ ಬಗ್ಗೆ ಎಚ್ಚರಿಕೆ ಕೊಡುವವನಾಗಿಯೂ ಮಾಡಿ ಕಳುಹಿಸಿದ್ದಾನೆ. ನೀವು ನನ್ನ ಮಾತನ್ನು ಅನುಸರಿಸಿದಿರೆಂದಾದರೆ ಇಹಪರಗಳೆರಡರಲ್ಲೂ ನಿಮಗೇ ಪ್ರಯೋಜನವಿದೆ. ಅನ್ಯಥಾ ನಾನು ಸಹನೆ ವಹಿಸುವೆನು ಮತ್ತು ಅಲ್ಲಾಹನ ತೀರ್ಮಾನವನ್ನು ನಿರೀಕ್ಷಿಸುವೆನು."

ಮುಹಮ್ಮದುರ್ರಸೂಲುಲ್ಲಾಹ್‌ರ(ಸ) ಬಾಯಿಯಿಂದ ಇಂಥ ಮಾತುಗಳನ್ನು ಕೇಳಿ ಕುರೈಶರು ಆಶ್ಚರ್ಯಾತಿರೇಕದಿಂದ ಪರಸ್ಪರ ಮುಖ ನೋಡಿಕೊಂಡರು. ಕೊಂಚ ಸಮಯ ಕಳೆದು ಹೇಳಿದರು,

"ನಿಮಗೆ ನಿಮ್ಮ ಸತ್ಯವಂತಿಕೆಯ ಬಗ್ಗೆ ಅಷ್ಟು ಅಹಂಕಾರವಿದ್ದರೆ ಮತ್ತು ದೇವನ ಬಗ್ಗೆ ಹೆಮ್ಮೆಯಿದ್ದರೆ ಆಕಾಶದ ಒಂದು ತುಂಡು ನಮ್ಮ ಮೇಲೆ ಬಂದು ಬೀಳುವಂತೆ ಮಾಡಿ."

ಉತ್ತರವಾಗಿ ಅನಾಥಮುತ್ತು(ಸ) ಹೇಳಿದರು, "ಅಲ್ಲಾಹನಿಚ್ಛಿಸಿದರೆ ಹಾಗೆ ಮಾಡ ಬಲ್ಲನು." ಅದನ್ನು ಕೇಳಿ ಜನರು ಹೇಳಿದರು, "ನೀವು ಹಾಗೆ ಮಾಡುವ ತನಕ ನಾವು ನಿಮ್ಮ ಮೇಲೆ ವಿಶ್ವಾಸವನ್ನಿರಿಸಲಾರೆವು" ರಸೂಲುಲ್ಲಾಹ್(ಸ) ಹೇಳಿದರು, "ಅದು ಅಲ್ಲಾಹನ ಕೈಯಲ್ಲಿದೆ. ಅವನು ಬಯಸಿದರೆ ಹಾಗೆ ಆಗಿಯೇ ತೀರುವುದು."

ಉಮರ್‌ರ(ರ) ಸತ್ಯ ಸ್ವೀಕಾರದ ನಂತರ

ಮಕ್ಕಾವಾಸಿಗಳು ಕಠೋರ ಹೃದಯಿಗಳೂ ಅಂತಃಕರಣಹೀನರೂ ಆಗಿದ್ದರು. ಅವರ ಹೃದಯದ ಜಾಗದಲ್ಲಿ ಕಲ್ಲು ಪ್ರತಿಷ್ಠಾಪಿಸಲ್ಪಟ್ಟಿದೆಯೆಂದರೂ ಅತಿಶಯೋಕ್ತಿಯಾಗಲಾರದು. ಆದರೆ ಕೆಲವು ಕಲ್ಲುಗಳ ಬಿರುಕಿನಿಂದ ನೀರು ಒಸರುತ್ತದೆ ಎಂಬುದೂ ವಾಸ್ತವ. ಕೆಲವದರಲ್ಲಿ ಯಂತೂ ನೀರಿನ ಒರತೆಯೇ ಕಾರಂಜಿಯಾಗಿ ಚಿಮ್ಮುತ್ತದೆ. ಆದರೆ ಕುರೈಶರ ಹೃದಯ ಗಳಿಗೆ ಆ ಭಾಗ್ಯವೂ ಇದ್ದಿರಲಿಲ್ಲ. ಬುದ್ಧಿವಾದವನ್ನು ಆಲಿಸುವಷ್ಟು ಸೌಜನ್ಯವನ್ನು ಅವರು ತೋರುತ್ತಿರಲಿಲ್ಲ. ಸತ್ಯದ ಮಾರ್ಗದರ್ಶನವನ್ನು ಕಂಡು ಅವರ ಅಂತಃಕರಣಹೀನ ಹೃದಯವು ತದ್ವಿರುದ್ಧವಾಗಿ ಭೀತಿಗೊಳಗಾಗುತ್ತಿತ್ತು. ಏಕೆಂದರೆ ಅವರ ಹೃದಯಗಳಿಗೆ ಬೀಗ ಜಡಿಯ ಲಾಗಿತ್ತು... ಅವರು ಕಣ್ಣಿದ್ದೂ ಕುರುಡರಾಗಿದ್ದರು... ಕಿವಿಯಿದ್ದೂ ಕಿವುಡರಾಗಿದ್ದರು... ಅವರ ಮನಸ್ಸುಗಳಲ್ಲಿ ಪ್ರಜ್ಞೆ ಮತ್ತು ಚಿಂತನೆಯ ಸಾಮರ್ಥ್ಯವೇ ಇಲ್ಲವಾಗಿತ್ತು. ಮೂರ್ಖತನದ ಪುತ್ಥಳಿಗಳಾಗಿದ್ದ ಅವರು ಅಜ್ಞಾನಾಂಧಕಾರದ ಕಾಯಂ ನಿವಾಸಿಗಳಾಗಿದ್ದರು.

ಅನಾಥಮುತ್ತು, ಆ ಜನರಿಗೆ ತರತರವಾಗಿ ತಿಳಿ ಹೇಳಿದರು. ಅತ್ಯುತ್ತಮ ರೀತಿಯಲ್ಲಿ ಅವರಿಗೆ ಬೋಧನೆ ನೀಡಿದರು. ದೇವಯಾತನೆಯ ಕುರಿತು ಬಹಳಷ್ಟು ಬಾರಿ ಅವರನ್ನು ಎಚ್ಚರಿಸಿದರು. "ಈ ಲೋಕದ ಜೀವನವು ಕೆಲವೇ ದಿನಗಳದ್ದಾಗಿದೆ. ಮರಣದ ಬಳಿಕ ಅಲ್ಲಾಹನು ಪ್ರತಿಯೊಂದು ಸೃಷ್ಟಿಯನ್ನೂ ಪುನಃ ಜೀವಂತಗೊಳಿಸುವನು. ಆ ಪುನರುತ್ಥಾನ ದಿನದಂದು ಪ್ರತಿಯೋರ್ವ ಮಾನವನಿಗೂ ತನ್ನ ಕರ್ಮಗಳ ಲೆಕ್ಕಾಚಾರ ನೀಡಲಿಕ್ಕಿದೆ. ವಿಗ್ರಹಾರಾಧಕರು, ಸತ್ಯನಿಷೇಧಿಗಳು ಮತ್ತು ಧರ್ಮಭ್ರಷ್ಟರಿಗಾಗಿ ಅಲ್ಲಾಹನು ನರಕವನ್ನು ಸೃಷ್ಟಿಸಿಟ್ಟಿದ್ದಾನೆ. ಅಲ್ಲಿ ಅಂತಹವರಿಗೆ ಭಯಾನಕ ಯಾತನೆ ನೀಡಲಾಗುತ್ತದೆ..." ಇತ್ಯಾದಿ ವಿಷಯಗಳ ಬಗ್ಗೆ ಎಚ್ಚರಿಕೆ ನೀಡಿದರು. ಗತ ಜನಾಂಗಗಳು ವಿನಾಶವಾದ ವೃತ್ತಾಂತಗಳನ್ನೂ ತಿಳಿಸಿದರು. "ಗತ ಜನಾಂಗಗಳ ಭವ್ಯ ಮನೆಗಳೂ ಗುರುತು ಸಿಗಲಾರದಂತೆ ಸರ್ವನಾಶವಾಗಿ ಹೋಗಿವೆ. ಅಲ್ಲಾಹನ ಯಾತನೆಯು ಯಾರ ಮೇಲೆ ಎರಗಿತ್ತೋ ಅವರನ್ನು ಬೇರಾವ ಶಕ್ತಿಯಿಂದಲೂ ರಕ್ಷಿಸಲು ಸಾಧ್ಯವಾಗಲಿಲ್ಲ. ಚಂಡಮಾರುತದ ಒಂದು ಹೊಡೆತವೋ ಸಿಡಿಲಿನ ಒಂದು ಭೀಕರ ಸದ್ದೋ... ಅಷ್ಟೇ ಇಡೀ ಜನಾಂಗ ಇದ್ದಲ್ಲಿಂದಲೇ ಸತ್ತು ಮಣ್ಣಾಗಿ ಹೋಗಿದೆ."

ಒಳಿತು ಮತ್ತು ಮಾರ್ಗದರ್ಶನದ ಆ ಮಾತುಗಳನ್ನು ಕುರೈಶರು ಹಾಸ್ಯ, ಅಣಕ

ಗಳಲ್ಲಿ ತೇಲಿಸಿಬಿಟ್ಟರು. ಕೆಲವರು, "ಅಬ್ದುಲ್ಲಾರ ಪುತ್ರ ಮುಹಮ್ಮದ್‌ನ(ಸ) ಮೇಲೆ ಯಾರೋ ಮಾಟ ಮಾಡಿದ್ದಾರೆ" ಎಂದರು. ಇನ್ನು ಕೆಲವರು ಪ್ರವಾದಿವರ್ಯರ(ಸ) ಮೇಲೆ ಅವತೀರ್ಣ ವಾಗುತ್ತಿದ್ದ ದೇವ ವಚನಗಳನ್ನು ಉನ್ನತ ದರ್ಜೆಯ ಕಾವ್ಯ ಲಹರಿಯೆಂದರು. ಅದರಲ್ಲಿ ಭವಿಷ್ಯ ಕಥನಗಳೂ ಸೇರಿಕೊಂಡಿವೆಂದು ಅವರು ಹೇಳಿಕೊಂಡರು. ಸತ್ಯದ ಸೂರ್ಯ ಉದಯಿಸಿಯಾಗಿದೆ. ಆದರೆ ಆ ಹೃದ್ರುಗ್ನರುಡರು ಅದರ ಬೆಳಕನ್ನು ಕಾಣುವಲ್ಲಿ ವಿಫಲರಾದರು.

ಕುರೈಶ್ ಸತ್ಯನಿಷೇಧಿಗಳು ಅನಾಥಮುತ್ತು(ಸ) ಮತ್ತವರ ಸಂದೇಶದ ವಿರೋಧದಲ್ಲಿ ಕಠೋರರೂ ಅಸಭ್ಯರೂ ಆಗಿ ಮಾರ್ಪಟ್ಟರು. ಆದರೆ ಈ ವೈರದ ಹೊರತಾಗಿಯೂ ಅವರ ಮನಸ್ಸು ಒಳಗಿಂದೊಳಗೇ ಭೀತಿಗೊಳಗಾಗಿತ್ತು... ಸತ್ಯದ ಈ ವಾಣಿಯನ್ನು ಯಾರಿಂದಲೂ ದಮನಿಸಲಾಗದು, ಈ ಸತ್ಯ ಸಂದೇಶದಲ್ಲಿ ಅಸಾಮಾನ್ಯ ಶಕ್ತಿಯು ಅಡಗಿದೆ, ಈ ವಿರೋಧಗಳು ಅದನ್ನು ಎಂದಿಗೂ ತಡೆಯಲಾರವು ಎಂದು ಅವರ ಅಂತರಾತ್ಮವು ಹೇಳುತ್ತಿತ್ತು. ಇನ್ನೊಂದೆಡೆ ಪ್ರವಾದಿವರ್ಯರ(ಸ) ಅನುಯಾಯಿಗಳು ಮರ್ದನ, ಹಿಂಸೆಗಳನ್ನು ಸಹಿಸಿಯೂ ಸತ್ಯವಿಶ್ವಾಸ ದಿಂದ ವಿಚಲಿತರಾಗುತ್ತಿರಲಿಲ್ಲ. ಅವರು ತಮ್ಮ ನಿರ್ಧಾರದಲ್ಲಿ ಅತ್ಯಂತ ನಿಷ್ಕಳಂಕರೂ ಅಸಾಮಾನ್ಯ ರೀತಿಯಲ್ಲಿ ಅಚಲರೂ ಆಗಿ ಮಾರ್ಪಟ್ಟಿದ್ದರು. ಇಂತಹ ಹುಮ್ಮಸ್ಸು ಇರುವ ಮಂದಿ ಎಂದೂ ವಿಫಲರಾಗಲಾರರು.

ಸತ್ಯ ಪ್ರಕಾಶದ ಕಿರಣವು ಮೊದಮೊದಲು ಹೆಚ್ಚು ಪ್ರಖರವಾಗಿರಲಿಲ್ಲ. ಸತ್ಯವು ಮೆಲ್ಲಮೆಲ್ಲನೆ ಪ್ರಭಾವ ಬೀರುತ್ತಿತ್ತು. ಆದರೆ ಯಾವ ಮನಸ್ಸಿನಲ್ಲಿ ಸತ್ಯವು ಮನೆ ಮಾಡಿತ್ತೋ ಆ ಮನಸ್ಸನ್ನು ತನ್ನೆಡೆಗೆ ಸೆಳೆಯಲು ಲೋಕದ ಎಂತಹ ಶಕ್ತಿಗೂ ಸಾಧ್ಯವಾಗಿಲ್ಲ. ಸತ್ಯವನ್ನು ಸ್ವೀಕರಿಸಿದ ವ್ಯಕ್ತಿ ಲೌಕಿಕವಾದ ಎಲ್ಲ ಲಾಭ ಮತ್ತು ಸವಲತ್ತುಗಳನ್ನು ನಿರಾಕರಿಸಿ ಅಲ್ಲಾಹ್ ಮತ್ತು ಸಂದೇಶವಾಹಕರಲ್ಲಿ(ಸ) ಅನುರಕ್ತನಾಗಿ ಬಿಡುತ್ತಾನೆ. ಆತನ ಜೀವನವು ಸರ್ವ ಸಂಪೂರ್ಣವಾಗಿ ದೇವನಿಗೆ ಅರ್ಪಿತ (ಇಸ್ಲಾಮ್) ಆಗಿ ಮಾರ್ಪಡುತ್ತದೆ. ಇಸ್ಲಾಮಿನ ಸೇವೆಯಲ್ಲಿ ಆತ ಇತರೆಲ್ಲ ವಸ್ತು/ವಿಷಯಗಳಿಂದಲೂ ವಿಮುಖನಾಗಿ ಬಿಡುತ್ತಾನೆ. ಅಂದಿನ ಆರಂಭದ ಸತ್ಯವಿಶ್ವಾಸಿಗಳು (ಸಾಬಿಕೂನಲ್ ಅವ್ವಲೂನ್) ಕೇವಲ ಬೆರಳೆಣಿಕೆಯಷ್ಟಿದ್ದರು. ಹಿಟ್ಟಿನಲ್ಲಿರುವ ಉಪ್ಪಿನ ಪ್ರಮಾಣದಷ್ಟು ಮಂದಿ. ಆದರೆ ಇಸ್ಲಾಮಿಗಾಗಿ ಎಲ್ಲ ತರದ ತ್ಯಾಗ ಬಲಿದಾನಗಳಿಗೂ ಅವರು ಸದಾ ಸಿದ್ಧರಿದ್ದರು.

ಆ ಬೆರಳೆಣಿಕೆಯ 'ಸಾಬಿಕೂನಲ್ ಅವ್ವಲೂನ್'ರ ಪೈಕಿ ಉಮರ್ ಬಿನ್ ಖತ್ತಾಬ್‌ರೂ ಒಬ್ಬರಾಗಿದ್ದರು. ಸತ್ಯಸ್ವೀಕಾರಕ್ಕೆ ಮುಂಚೆ ಅವರೂ ಇಸ್ಲಾಮಿನ ಕಡು ವೈರಿಗಳಲ್ಲಿ ಗಣಿಸಲ್ಪಡುತ್ತಿದ್ದರು. ಒಂದು ದಿನ ಅವರು ಸಮಸ್ಯೆಯನ್ನು ನಿವಾರಿಸಲು ಮುಹಮ್ಮದ್‌ರನ್ನು ಕೊಂದು ಬಿಡುವುದೇ ಸೂಕ್ತವೆಂದು ಭಾವಿಸಿ ಖಡ್ಗವನ್ನೆತ್ತಿ ಹೊರಟಿದ್ದರು. ಅವರ ಧೀಮಂತಿಕೆ, ಪ್ರತಾಪದೆದುರು ದೊಡ್ಡ ದೊಡ್ಡ ಧೀರ ಯೋಧರೂ ಎದೆಗುಂದುತ್ತಿದ್ದರು. ಉಮರ್‌ರ ಈ ನಡೆಯಿಂದ ಕುರೈಶಿ ಸತ್ಯನಿಷೇಧಿಗಳು

ಬಹಳ ಸಂತೋಷಪಟ್ಟರು. ಉಮರ್‌ರ ಖಡ್ಗದಿಂದ ಮುಹಮ್ಮದ್‌ರಿಗೆ ರಕ್ಷಣೆಯಿಲ್ಲ... ಇಬ್ನು ಖತ್ತಾಬ್‌ರ ಖಡ್ಗವು ಒರೆಯಿಂದ ಹೊರಬಂದ ಮೇಲೆ ಶತ್ರುವಿನ ರಕ್ತದಲ್ಲಿ ಮಿಂದ ಮೇಲೆಯೇ ಒರೆಗೆ ಮರಳುತ್ತದೆನ್ನುವುದು ಶತಃಸಿದ್ಧ... ಉಮರ್ ತನ್ನ ಉದ್ದೇಶವನ್ನು ಈಡೇರಿಸದೆ ಮರಳಲಾರರು... ನಮ್ಮ ಆರಾಧ್ಯರುಗಳ ಅನುಗ್ರಹವು ಅವರ ಮೇಲಿದೆ... ಮುಹಮ್ಮದ್ ಯಾವಾಗಿನಿಂದ ನಮ್ಮ ಆರಾಧ್ಯರುಗಳ ಅವಹೇಳನ ಮಾಡುತ್ತಲಿದ್ದಾನೆ... ಇನ್ನು ಆತನಿಗೆ ಅದರ ಶಿಕ್ಷೆ ದೊರೆತೇ ತೀರುವುದು... ಎಂಬಿತ್ಯಾದಿಯಾಗಿ ಸತ್ಯನಿಷೇಧಿಗಳು ಮನಸ್ಸಲ್ಲೇ ಮಂಡಿಗೆ ತಿನ್ನುತ್ತಿದ್ದರು.

ಉಮರ್‌ರ ಮುಖದಲ್ಲಿ ರೋಷ ಕುದಿಯುತ್ತಿರುವುದು ಕಂಡು ಸತ್ಯನಿಷೇಧಿಗಳ ತುಟಿಯಂಚಿನಲ್ಲಿ ವಿಕಟ ನಗು ಲಾಸ್ಯವಾಡತೊಡಗಿತು. ಅಬೂಜಹಲ್ ಆನಂದಾತಿರೇಕ ದಿಂದ ಸಂಯಮವನ್ನೇ ಕಳಕೊಂಡಿದ್ದ. ಉತ್ಬಾನ ಕಣ್ಣಲ್ಲಿ ಸಂತೋಷದ ಮಿಂಚು ಹರಿದಾಡುತ್ತಿತ್ತು. ಅಬೂಲಹಬ್‌ನ ಪೈಶಾಚಿಕ ಮನಸ್ಸು ವಿಕಟಾಟ್ಟಹಾಸಗೈಯ ತೊಡಗಿತು... ಇನ್ನು ಅಬ್ದುಲ್ಲಾನ ಪುತ್ರ ಕೊನೆಯುಸಿರೆಳೆಯಲು ಹೆಚ್ಚು ಸಮಯವಿಲ್ಲ... ಆತನ ಕೊಲೆಯಾದೊಡನೆ ಆತನು ತಂದ 'ನೂತನ ಧರ್ಮ'ವು ಸಂಪೂರ್ಣವಾಗಿ ಅಳಿದು ಬಿಡುವುದು...

ಇತ್ತ ಉಮರ್ ತಮ್ಮ ತೋಳ್ಬಲದ ಮೇಲೆ ಅಪಾರ ಭರವಸೆಯೊಂದಿಗೆ ಮುನ್ನುಗ್ಗುತ್ತಿದ್ದಾರೆ. ಮುಹಮ್ಮದ್ ಬಿನ್ ಅಬ್ದುಲ್ಲಾರ ಸಂಗಾತಿಗಳ ಪೈಕಿ ಯಾರೂ ನನ್ನನ್ನು ಎದುರಿಸುವಷ್ಟು ಛಾತಿಯನ್ನು ಹೊಂದಿಲ್ಲ... ಅವರು ದಾಪುಗಾಲಿಡುತ್ತಾ ಸಾಗುತ್ತಿದ್ದಾರೆ. ಅಷ್ಟರಲ್ಲಿ ದಾರಿ ಮಧ್ಯೆ ಓರ್ವ ಸಹಾಬಿ ಎದುರಾದರು. ಅವರು ನಿಲ್ಲಿಸಿ ಸಂಗತಿಯೇನೆಂದು ತಿಳಿದುಕೊಂಡರು. ಆಗವರು ಹೇಳಿದರು, "ಉಮರ್! ಮೊದಲು ನಿಮ್ಮ ಮನೆಯವರನ್ನು ವಿಚಾರಿಸಿಕೊಳ್ಳಿ. ನಿಮ್ಮ ಸಹೋದರಿ ಮತ್ತು ಭಾವ ಇಸ್ಲಾಮ್ ಸ್ವೀಕರಿಸಿಯಾಗಿದೆ!"

ಇದು ತಿಳಿಯುತ್ತಲೇ ಉಮರ್‌ರ ಹೆಜ್ಜೆ ಸಹೋದರಿಯ ಮನೆಯೆಡೆಗೆ ತಿರುಗಿತು. ಅತೀವ ರೋಷದಿಂದ ಕಣ್ಣು ಕೆಂಪಡರಿದೆ. ಸತ್ಯನಿಷೇಧದ ಉಳಿವಿಗಾಗಿ ಉಕ್ಕಿದ ಕೋಪದ ತಾಪದಿಂದ ಅವರ ಹಣೆಯು ಕೆಂಡದಂತೆ ಕೆಂಪಾಗಿ ಬಿಟ್ಟಿದೆ. ಸಹೋದರಿ ಪವಿತ್ರ ಕುರ್‌ಆನ್ ಪಠಣದಲ್ಲಿ ಮಗ್ನರಾಗಿದ್ದರು. ಮನೆಬಾಗಿಲು ಮುಚ್ಚಿಕೊಂಡಿತ್ತು. ಉಮರ್ ಬಾಗಿಲು ಬಡಿದರು. ಜತೆಗೆ ಸಹೋದರಿಯನ್ನು ಕೂಗಿ ಕರೆದರು. ಸಹೋದರಿ ಪವಿತ್ರ ಕುರ್‌ಆನಿನ ಹಾಳೆಗಳನ್ನು ಅಡಗಿಸಿಟ್ಟು ಬಂದು ಬಾಗಿಲು ತೆರೆದರು.

"ಹೇಳು ಏನು ಓದುತ್ತಿದ್ದೆ?" ಉಮರ್ ಗರ್ಜಿಸಿದರು.

ಸಹೋದರಿ ಮಾತು ಬದಲಿಸಲು ಪ್ರಯತ್ನ ಪಟ್ಟರಾದರೂ ರೋಷಾಕುಲರಾದ ಉಮರ್ ಸಹೋದರಿಯನ್ನು ಹೊಡೆಯತೊಡಗಿದರು. ರಕ್ಷಿಸಲು ಬಂದ ಭಾವನ

ಮೇಲೂ ಹರಿಹಾಯ್ದರು. ಆಗ ಸಹೋದರಿ ಸೆಟೆದು ನಿಂತು ಹೇಳಿದರು, "ಉಮರ್! ನಾನು ಸತ್ಯವಿಶ್ವಾಸ ಸ್ವೀಕರಿಸಿ ಮುಸ್ಲಿಮಳಾಗಿದ್ದೇನೆ. ಇನ್ನು ನನ್ನ ಹೃದಯದಿಂದ ಈಮಾನನ್ನು ತೆಗೆದು ಹಾಕಲು ಸಾಧ್ಯವಿಲ್ಲ. ನನ್ನನ್ನು ಕೊಂದರೂ ಸರಿಯೆ."

ಈ ಉತ್ತರ ಕೇಳಿ ಉಮರ್ ಇನ್ನಷ್ಟು ಕೋಪಗೊಳ್ಳುವ ಬದಲು ಆಶ್ಚರ್ಯ ಕ್ಕೀಡಾದರು. ಆಲೋಚನೆಗೆ ಬಿದ್ದರು... ಇದೆಂಥ ಅಮಲು!? ಗಾಯಗೊಂಡು ರಕ್ತ ಸುರಿದರೂ ಇಳಿದು ಹೋಗಲೊಲ್ಲದೇ? ಇಳಿಯುವುದೇನು, ಈ ಅಮಲು ಇನ್ನಷ್ಟು ಏರಿದಂತಿದೆಯಲ್ಲ!! ಉಮರ್ ಆಶ್ಚರ್ಯಾತಿರೇಕವನ್ನು ಅದುಮಿಡುತ್ತಾ ತಂಗಿಯೊಡನೆ ಹೇಳಿದರು, "ನಾನು ಬರುವಾಗ ಓದುತ್ತಿದ್ದೆಯಲ್ಲ, ಅದನ್ನು ಇನ್ನೊಮ್ಮೆ ಓದು." ಸಹೋದರಿ ಪವಿತ್ರ ಕುರ್‌ಆನಿನ ವಚನಗಳನ್ನು ಓದಿ ಕೇಳಿಸಿದರು. ಅದರ ಒಂದೊಂದು ಪದವೂ ಉಮರ್‌ರ ಕಠೋರ ಹೃದಯದಾಳಕ್ಕಿಳಿದು ಅದನ್ನು ಮೆತ್ತಗಾಗಿಸತೊಡಗಿತು. ಉಮರ್‌ರ ಕಣ್ಣುಗಳು ಅವರಿಗರಿವಿಲ್ಲದೆಯೇ ಮಂಜಾಗತೊಡಗಿದುವು. ದೇವವಾಣಿಯು ಉಮರ್‌ರ ವಿಧಿಯನ್ನೇ ಬದಲಾಯಿಸಿಬಿಟ್ಟಿತು. ಈಮಾನಿನ ಮಂದಮಾರುತವು ಬೀಸ ತೊಡಗಿದಾಗ ಸತ್ಯನಿಷೇಧದ ಮಿಣುಗು ದೀಪವು ತನ್ನಿಂತಾನೇ ಆರಿಹೋಯಿತು.

ಉಮರ್ ಈಗ ಮೊದಲಿಗಿಂತ ವೇಗವಾಗಿ ಧಾವಿಸುತ್ತಾ ದೇವಸಂದೇಶವಾಹಕರ(ಸ) ಸನ್ನಿಧಿಯಲ್ಲಿ ಹಾಜರಾದರು. ಅನಾಥಮುತ್ತು(ಸ), ಉಮರ್‌ರ(ರ) ಚದ್ದರವನ್ನು ಹಿಡಿದೆಳೆ ಯುತ್ತಾ ಮುಗುಳ್ನಕ್ಕರು. ಉಮರ್(ರ) ಮರುಮಾತಿಲ್ಲದೆ ಸತ್ಯವಚನ ಪಠಿಸಿದರು. ಏಕಾಏಕಿ ಸಹಾಬಿಗಳು ಮೊಳಗಿಸಿದ ತಕ್ಬೀರ್ ಮಕ್ಕಾದ ಕಣಿವೆಗಳಲ್ಲಿಡೀ ಪ್ರತಿಧ್ವನಿಸಿತು. ಮುಹಮ್ಮದುರ್‍ರಸೂಲುಲ್ಲಾಹ್‌ರ(ಸ) ಒಂದು ಮುಗುಳ್ನಗು ಉಮರ್‌ರಿಗೆ ಎಲ್ಲವನ್ನೂ ದೊರಕಿಸಿಕೊಟ್ಟಿತು... ಮಾರ್ಗದರ್ಶನ, ಅನುಗ್ರಹ, ಸಮೃದ್ಧಿ, ಮೋಕ್ಷ ಹಾಗೂ ದೇವಭಕ್ತರಾದ ಸತ್ಯಪರರಿಗೆ ದೊರೆಯಬಹುದಾದಂತಹ ಎಲ್ಲವೂ... ಮುಹಮ್ಮದ್ ರನ್ನು(ಸ) ವಧಿಸುವ ಇರಾದೆಯೊಂದಿಗೆ ಹೊರಟಿದ್ದ ಉಮರ್(ರ) ಕೆಲವೇ ಕ್ಷಣಗಳ ಅಂತರದಲ್ಲಿ ಮುಹಮ್ಮದ್‌ರ(ಸ) ವಿನೀತ ಅನುಯಾಯಿಯಾಗಿ ಮಾರ್ಪಟ್ಟಿದ್ದಾರೆ. ಅಡಿಯಿಂದ ಮುಡಿ ತನಕ ಬದಲಾಗಿ ಬಿಟ್ಟಿದ್ದಾರೆ.

ಉಮರ್ ಮರಳಿ ಬರುವುದನ್ನೇ ಕುರೈಶ್ ಸತ್ಯನಿಷೇಧಿಗಳು ಕಾಯುತ್ತಿದ್ದರು... ಅವರು ಬಂದು ತನ್ನ ಉದ್ದೇಶ ಈಡೇರಿತೆಂದು ಹೇಳುವರು... ನಾವು ಎಲ್ಲ ಸೇರಿ ಲಾತ್, ಹುಬಲ್‌ಗಳಿಗೆ ಜೈಕಾರ ಹಾಕುವೆವು... ಅದರ ಜತೆಯಲ್ಲೇ ಖದೀಜರ ರೋದನ, ಅಬೂಬಕರ್‌ರ ಹೃದಯ ವಿದ್ರಾವಕ ಚೀರಾಟ, ಅಲೀಯ ಮನಕರಗಿಸು ವಂತಹ ಗೋಳಾಟ, ಬಿಲಾಲ್‌ರ ನರಳಾಟವನ್ನು ಆಲಿಸುವೆವು... ಅಬೂತಾಲಿಬ್‌ರ ಮನೆಯಲ್ಲಿ ಶೋಕಾಚರಿಸ ಲಾಗುವುದು... ಮುಸ್ಲಿಮರು ದುಃಖಾತಿರೇಕದಿಂದ ಎದೆಬಡಿದು ಅಳುವರು... ಹ್ಹಾ! ನಮ್ಮ ಆರಾಧ್ಯದೈವಗಳ ಅವಹೇಳನವನ್ನು ಎಷ್ಟು ಸಮಯದಿಂದ

ಸಹಿಸುತ್ತಿದ್ದೇವೆ ನಾವು! ಸಹನೆಗೂ ಒಂದು ಮಿತಿಯಿದೆ... ಇಬ್ನು ಖತ್ತಾಬ್‌ರ ಕುಲಾಭಿಮಾನವು ಕೊನೆಗೂ ನಮಗೆ ಯಶಸ್ಸನ್ನು ದೊರಕಿಸಿಕೊಟ್ಟಿತು... ಅನ್ಯಥಾ ಈ ಲೋಕಕ್ಕೆ ನಮ್ಮನ್ನು ಹೀಯಾಳಿಸಲು ನೆಪ ಸಿಗುತ್ತಿತ್ತು. ಓಹೋ, ಒಬ್ಬ ವ್ಯಕ್ತಿಯನ್ನು ಕೊಲ್ಲಲಾರದಷ್ಟು ಕುರೈಶರು ಹೇಡಿಗಳಾಗಿ ಬಿಟ್ಟರೇ ಎಂದು!

ಆದರೆ ಪ್ರಕೃತಿಯು ಅವರ ತಲೆಬುಡವಿಲ್ಲದ ಆಲೋಚನೆಗಳನ್ನು ಕಂಡು ನಕ್ಕು ಹೇಳುತ್ತಿತ್ತು, "ಓ ಮೂರ್ಖರೇ! ನೀವು ನಿಮ್ಮ ಮನಸ್ಸನ್ನು ಸಾಂತ್ವನಿಸುತ್ತಿರುವ ಈ ಮರಳ ಸೌಧವಿದೆಯಲ್ಲ, ಅದು ಬಲುಬೇಗನೇ ಉರುಳಿ ಬೀಳಲಿದೆ. ನಿಮ್ಮ ಆಶೆ-ಆಕಾಂಕ್ಷೆಗಳ ತೋಟವು ಪಾಳು ಬೀಳಲಿಕ್ಕೆ ಇರುವುದಷ್ಟೇ ಹೊರತು ಹಸಿರು ತುಂಬಿ ತುಳುಕಲಿಕ್ಕಲ್ಲ. ನಿಮ್ಮ ಕುಲ ಮಹಿಮೆಯು ಲಜ್ಜಿತವಾಗಿ ಹೋಗುವುದು. ನೀವು ನಿಮ್ಮ ಬಹುಸಂಖ್ಯೆಯ ಬಗ್ಗೆ ಅಹಂಕಾರ ಪಡಬೇಡಿರಿ, ಮುಹಮ್ಮದ್‌ರ(ಸ) ವಿರುದ್ಧದ ಹೋರಾಟವು ಸ್ವಯಂ ಅಲ್ಲಾಹನ ವಿರುದ್ಧ ನಡೆಸುವ ಹೋರಾಟವಾಗಿದೆ. ನಿಮ್ಮನ್ನು ನೀವು ಶಕ್ತರೆಂದೂ ಮುಸ್ಲಿಮರನ್ನು ಬಲಹೀನರೆಂದೂ ಬಗೆದು ಗರ್ವಪಡಬೇಡಿರಿ. ಜಯಾಪಜಯಗಳು ಅಲ್ಲಾಹನ ಕೈಯಲ್ಲಿರುವುದು.

ಉಮರ್(ರ) ಸತ್ಯಸ್ವೀಕರಿಸಿದ ಬಳಿಕ ಸೀದಾ ಕಅಬಾ ಭವನದೆಡೆಗೆ ಸಾಗಿದರು. ಕುರೈಶ್ ಸತ್ಯ ನಿಷೇಧಿಗಳೊಡನೆ ಸೆಣಸಾಡಿಯೇ ಅಲ್ಲಿ ನಮಾಝ್ ನಿರ್ವಹಿಸಿದರು. ಸತ್ಯನಿಷೇಧಿಗಳು ಆಶ್ಚರ್ಯಕ್ಕೀಡಾದರು... ಬೆರಳು ಕಚ್ಚಿಕೊಂಡರು... ಇದೇನು ಸಂಭವಿಸಿತು ಎಂದು ದುಃಖಾತಿರೇಕದಿಂದ ಚಡಪಡಿಸಿದರು... ಮೂರ್ತಿಗಳನ್ನು ಪೂಜಿಸುತ್ತಿದ್ದ ಉಮರ್ ಏಕಾಏಕಿ ದೇವನ ಮುಂದೆ ಸಾಷ್ಟಾಂಗವೆರಗುವುದೇ!? ಮುಹಮ್ಮದ್‌ರ(ಸ) ವೈರಿ ಅವರ ಗುಲಾಮನಾಗಿ ಬಿಟ್ಟನೇ? ಯಾರ ಖಡ್ಗದ ಮೇಲೆ ನಮಗೆ ಅಪಾರ ನಿರೀಕ್ಷೆಯಿತ್ತೋ, ಆ ಖಡ್ಗವಿನ್ನು ಇಸ್ಲಾಮಿಗಾಗಿ ಝಳಪಿಸಲ್ಪಡುವುದೇ? ಇಬ್ನು ಖತ್ತಾಬ್ ಮುಸ್ಲಿಮರಾಗುವುದು ನಮ್ಮ ಪಾಲಿಗೆ ಬಹುದೊಡ್ಡ ಹೊಡೆತವಾಗಿದೆ... ನಮ್ಮ ಬಲಗೈಯೇ ತುಂಡರಿಸಿ ಹೋದಂತಹ ನಷ್ಟ! ಉಮರ್‌ರ ಇಂತಹ ತಿಳಿಗೇಡಿತನ ಮತ್ತು ಪುಕ್ಕಲುತನವನ್ನು ನಾವು ನಿರೀಕ್ಷಿಸಿರಲಿಲ್ಲ... ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ(ಸ) ದೃಷ್ಟಿ ಮತ್ತು ನಾಲಗೆಯಲ್ಲಿ ಅದೆಂತಹ ಮೋಡಿಯಿದೆ? ಹೋದ ವ್ಯಕ್ತಿ ಅವರ ಅನುಯಾಯಿಯಾಗಿಯೇ ಮರಳುತ್ತಾನಲ್ಲ!!

ದೂರು, ಬೆದರಿಕೆ ಹೊತ್ತು ತಂದರು

ಉಮರ್, ಹಮ್‌ಝಾರಂತಹ ವೀರ ಕಲಿಗಳು ಮುಸ್ಲಿಮರಾಗುತ್ತಿರುವುದನ್ನು ಕಂಡು ಮಕ್ಕಾವಾಸಿಗಳ ವೈರ-ವಿರೋಧ ಮತ್ತಷ್ಟು ತೀವ್ರವಾಯಿತು. ಅವರ ಕೋಪ ಎಲ್ಲೆ ಮೀರತೊಡಗಿತು. ಅವರು ಪರಸ್ಪರ ಚರ್ಚಿಸತೊಡಗಿದರು- ಒಂದು ವೇಳೆ ಇಸ್ಲಾಮಿನ ಪ್ರಗತಿಯು ಇದೇ ಗತಿಯಲ್ಲಿದ್ದರೆ ಇಡೀ ಮಕ್ಕಾ ನಗರವೇ ತನ್ನ ಪೂರ್ವಿಕ ಧರ್ಮವನ್ನು ತೊರೆದುಬಿಟ್ಟೀತು! ಲಾತ್, ಹುಬಲ್‌ಗಳ ಮುಂದೆ ಬಹುಶಃ ಯಾವ ಹಣೆಯೂ ಸಾಷ್ಟಾಂಗವೆರಗದು! ಇದನ್ನು ಇನ್ನು ಸಹಿಸುವುದು ಸಾಧ್ಯವಿಲ್ಲ. ಇದನ್ನು ಆದಷ್ಟು ಬೇಗ ತಡೆಯಬೇಕು!

ಎಲ್ಲರೂ ಒಂದಾಗಿ ಅಬೂತಾಲಿಬ್‌ರ ಬಳಿ ಬಂದರು. ಕೆಂಪೇರಿದ ಮುಖ, ಆವೇಶ ಭರಿತ ಭಂಗಿ, ಕೋಪದಿಂದ ಕೆಂಡದಂತಾಗಿರುವ ಕಣ್ಣು... ಒಬ್ಬರ ಕೊರಳಲ್ಲಿ ಖಡ್ಗ ನೇತಾಡುತ್ತಿದೆ. ಇನ್ನೊಬ್ಬರ ಕೈಯಲ್ಲಿ ಈಟಿ ಮಿರ ಮಿರ ಮಿಂಚುತ್ತಿದೆ, ಮತ್ತೊಬ್ಬರ ಭುಜದಲ್ಲಿ ಬಾಣ ಜೋತಾಡುತ್ತಿದೆ! ಒಟ್ಟಿನಲ್ಲಿ ನಾವು ಸಮರಕ್ಕೆ ಸಿದ್ಧವಾಗಿದ್ದೇವೆ, ನಮ್ಮ ಬಳಿ ಅಧಿಕಾರ-ಪ್ರತಾಪವಿದೆ, ಯುದ್ಧ ಸಲಕರಣೆಗಳಿವೆ, ಜನಬಲವೂ ಇದೆ; ನಾವು ಯುದ್ಧ ಕಹಳೆಯೂದಿದರೆ, ಮಕ್ಕಾದ ಗಲ್ಲಿ-ಕೇರಿಗಳಲ್ಲಿ ರಕ್ತದ ಹೊಳೆಯೇ ಹರಿದೀತು ಎಂದು ಬಿಂಬಿಸುವುದಾಗಿತ್ತು ಅವರ ಉದ್ದೇಶ...

ಅವರೆಲ್ಲರೂ ಒಕ್ಕೊರಲಿನಿಂದ ಅಬೂತಾಲಿಬ್‌ರನ್ನುದ್ದೇಶಿಸಿ ಹೇಳಿದರು:

ಅಬೂತಾಲಿಬ್! ನಾವು ನಿಮ್ಮನ್ನು ಗೌರವಿಸುತ್ತೇವೆ. ಈ ಗೌರವ-ಪ್ರೀತಿಯ ಕಾರಣ ವಾಗಿಯೇ ನಾವು ಇದುವರೆಗೆ ಯಾವುದೇ ಪ್ರತಿರೋಧವನ್ನೊಡ್ಡಿರಲಿಲ್ಲ. ನಿಮ್ಮ ಸೋದರ ಪುತ್ರ ಮುಹಮ್ಮದ್ ಇಂದು ಸರಿಯಾದಾನು, ನಾಳೆ ಸರಿಯಾದಾನು ಎಂದು ಬಹಳಷ್ಟು ಸಡಿಲತೆಯನ್ನು ಬಿಟ್ಟೆವು. ಆದರೆ ಆತನ ಚಟುವಟಿಕೆಗಳು ದಿನೇ ದಿನೇ ಹೆಚ್ಚುತ್ತಲೇ ಇದೆ. ನಾವು ಎಷ್ಟರ ತನಕ ನಮ್ಮ ಆರಾಧ್ಯರುಗಳ ಅವಹೇಳನವನ್ನು ಸಹಿಸಬೇಕು ಹೇಳಿ? ನಮ್ಮ ಕಷ್ಟಗಳನ್ನು ಪರಿಹರಿಸಿದ, ನಮ್ಮ ಮೇಲೆ ಅನುಗ್ರಹ-ಕೃಪೆ ವರ್ಷಿಸಿದ ದೇವರುಗಳ ಮೇಲಿನ ವಿಶ್ವಾಸ-ಶ್ರದ್ಧೆಯನ್ನು ನಾವು ಇಬ್ನು ಅಬ್ದುಲ್ಲಾನ ಮಾತಿಗೆ ಬಲಿ ನೀಡಬೇಕೇನು? ಅದಂತೂ ಆಗದ ಮಾತು! ಖಂಡಿತ ಅಸಾಧ್ಯ!! ನೋಡಿ, ಅಬೂತಾಲಿಬ್! ನೀವು ಪ್ರಜ್ಞಾವಂತರು, ಸ್ವಾಭಿಮಾನಿ ಕೂಡ. ಸ್ವತಃ ನಿಮಗೂ ಈ ಮಾತುಗಳು ಇಷ್ಟವಾಗಿರಲಾರದು. ನಾವು ಮೂರು ಶರತ್ತುಗಳೊಂದಿಗೆ ನಿಮ್ಮ ಬಳಿಗೆ ಬಂದಿದ್ದೇವೆ-

1. ನಿಮ್ಮ ಸೋದರ ಪುತ್ರನೊಡನೆ, ನಮ್ಮ ಆರಾಧ್ಯರುಗಳ ಅವಹೇಳನ ಮಾಡದಂತೆ ಹೇಳಿರಿ. ಅಥವಾ

2. ನೀವು ಮುಹಮ್ಮದ್‌ನ ಮೇಲಿನ ಆಶ್ರಯವನ್ನು ಬಿಟ್ಟು ಆತನನ್ನು ನಮಗೆ ವಹಿಸಿಕೊಡಿರಿ. ಅಥವಾ

3. ಕೊನೆಯದಾಗಿ ನಮ್ಮ ವಿರುದ್ಧ ಯುದ್ಧಕ್ಕೆ ಸಿದ್ಧರಾಗಿರಿ.

... ಇಲ್ಲಿ ಕೇಳಿ, ಅಬೂತಾಲಿಬ್! ಇದು ನಮ್ಮ ಕೊನೆಯ ಮತ್ತು ಖಂಡಿತವಾದ ತೀರ್ಮಾನವಾಗಿದೆ. ನಾವು ನಮ್ಮ ಎಲ್ಲ ಗೋತ್ರ ವೈರ ಮತ್ತು ಕುಲದ್ವೇಷಗಳ ಹೊರತಾಗಿಯೂ ಈ ಒಂದು ಉದ್ದೇಶದಲ್ಲಿ ಒಂದಾಗಿದ್ದೇವೆ. ನಿಮಗೆ ಈ ಶರತ್ತುಗಳ ಪೈಕಿ ಯಾವುದು ಒಪ್ಪಿಗೆಯೆಂಬುದನ್ನು ಚೆನ್ನಾಗಿ ಆಲೋಚಿಸಿ ಹೇಳಿರಿ. ನಿಮ್ಮಂತಹ ಹಿರಿಯರು ಲೋಕಜ್ಞಾನಿಗಳೂ ಅನುಭವಿಗಳೂ ಪ್ರಜ್ಞಾವಂತರೂ ಆಗಿರುತ್ತಾರೆ ಎಂದು ನಾವು ಭಾವಿಸುತ್ತೇವೆ. ನೀವು ಯುಕ್ತಿವಂತಿಕೆಯನ್ನು ಪ್ರದರ್ಶಿಸುವಿರೆಂದು ಆಶಿಸುತ್ತೇವೆ. ನಿಮ್ಮ ಮೇಲಿನ ಪ್ರೀತಿ-ಸಹಾನುಭೂತಿ ಹೊಂದಿದ ಗೌರವಾದರದಿಂದಾಗಿ ನಾವು ಬಹಳ

ಸುಲಭ ಮತ್ತು ಹಗುರವಾದ ಶರತ್ತುಗಳನ್ನು ನಿಮ್ಮ ಮುಂದಿಟ್ಟಿದ್ದೇವೆ. ನಮ್ಮ ಯುವ ಜನರು ಈ ಶರತ್ತುಗಳನ್ನು ವಿರೋಧಿಸುತ್ತಿದ್ದಾರೆ. ಅವರಂತೂ ಬನೂ ಹಾಶಿಮ್‌ರೊಡನೆ ತಕ್ಷಣ ಯುದ್ಧ ಘೋಷಿಸಿ ಬಿಡಿರೆಂದು ಒತ್ತಾಯಿಸುತ್ತಿದ್ದಾರೆ. ಆದರೆ ನಾವೇ, ಒಳ್ಳೆಯ ಮಾತಿನಲ್ಲಿ ಕೆಲಸ ನಡೆಯುವುದಾದರೆ ಅದೇ ಉತ್ತಮವೆಂದು ಹೇಳಿ ಅವರನ್ನು ಸಮಾಧಾನ ಪಡಿಸಿದೆವು. ಈ ರೀತಿಯಾಗಿ ನಿಮ್ಮ ಮುಂದೆ ಬಂದು ನಿಂತಿದ್ದೇವೆ...

ಕುರೈಶರ ಈ ಮಾತುಗಳನ್ನು ಕೇಳಿ ಅಬೂತಾಲಿಬ್ ಚಿಂತೆಗೀಡಾದರು. ಅವರು ಹೊರಟು ಹೋದ ಬಳಿಕವೂ ಅಬೂತಾಲಿಬ್ ಬಹಳ ಹೊತ್ತಿನ ತನಕ ಆಲೋಚನೆಯಲ್ಲಿ ಮುಳುಗಿದ್ದರು... ಎಂತಹಾ ಧರ್ಮಸಂಕಟ! ಪ್ರೀತಿಯ ಸೋದರ ಪುತ್ರನನ್ನು ಆ ನಿರ್ದಯಿ, ಕಟುಕರ ಕೈಗೊಪ್ಪಿಸಲು ಮನಸ್ಸು ಒಪ್ಪುತ್ತಿಲ್ಲ. ಅದೇ ವೇಳೆ ಮುಹಮ್ಮದ್‌ನನ್ನು ಹತ್ತಿರ ಮಾಡಿದರೆ ಸಾವಿರಾರು ಮಂದಿಯ ವೈರ ಕಟ್ಟಿಕೊಂಡಂತಾಗುತ್ತದೆ. ಏನು ಮಾಡಲಿ? ಈ ಜನರು ನಿಜವಾಗಿಯೂ ಯುದ್ಧಕ್ಕೆ ಅಣಿಯಾದರೆ, ಬನೂ ಹಾಶಿಮ್ ಮನೆತನದ ಬೆರಳೆಣಿಕೆಯ ಮಂದಿ ಅವರನ್ನು ಎದುರಿಸುವುದಾದರೂ ಹೇಗೆ? ಸಾವಿರಾರು ಖಡ್ಗಗಳು ನಮ್ಮ ಮೇಲೆ ಎರಗಬಹುದು. ನಮ್ಮ ಮನೆತನವೇ ನಿರ್ನಾಮವಾಗಿ ಬಿಡಬಹುದು. ನೂರಿನ್ನೂರು ಮಂದಿಯಾಗಿದ್ದರೆ ಎದುರಿಸಬಹುದಿತ್ತು. ಆದರೆ ಸಾವಿರಾರು ಮಂದಿಯ ಆಕ್ರಮಣವನ್ನು ಎದುರಿಸುವುದು ಅಸಾಧ್ಯದ ಮಾತು. ಈ ಮಂದಿ ಸಣ್ಣ ಪುಟ್ಟ ವಿಷಯಕ್ಕೆಲ್ಲ ಕಾಲು ಕೆರೆದು ಜಗಳಕ್ಕೆ ನಿಲ್ಲುವವರು... ಕಲಹವೇರ್ಪಟ್ಟರೆ, ನೆಲವು ರಕ್ತದಿಂದ ತೋಯದೆ ವಿರಮಿಸುವ ವರಲ್ಲ... ಮೇಲಾಗಿ ಇಂದಿನದು ಅವರ ಪೂರ್ವಿಕ ಧರ್ಮ-ವಿಶ್ವಾಸಕ್ಕೆ ಸಂಬಂಧಿಸಿದ ಮಾತು! ಅದಕ್ಕಂತೂ ಅವರು ಜೀವದ ಹಂಗೂ ತೊರೆದು ಹೋರಾಡುವರು!! ಅಬೂತಾಲಿಬ್‌ರ ಮನ-ಮಸ್ತಿಷ್ಕಗಳು ವಿಚಿತ್ರ ತೊಳಲಾಟ ದಲ್ಲಿ ಬಿದ್ದುವು. ಒಮ್ಮೆ ಅವರ ಮುಂದೆ ಸತ್ಯದ ಪ್ರಕಾಶಮಾನ ದೀಪ್ತಿ ಬೆಳಗಿದರೆ ಮರುಕ್ಷಣವೇ ಅದರ ಹಿಂದಿನ ಕರಾಳ ಮತ್ತು ಭಯಾನಕವಾದ ಕತ್ತಲ ಮಗ್ಗುಲು ಧೈರ್ಯಗುಂದಿಸುತ್ತದೆ.

ಅಬೂತಾಲಿಬರು ಸೋದರ ಪುತ್ರ ರಸೂಲುಲ್ಲಾಹ್‌ರನ್ನು(ಸ) ಕರೆದು ಹೇಳಿದರು, "ನಿನ್ನ ಜನಾಂಗದವರು ನನ್ನ ಬಳಿಗೆ ಅಹವಾಲು ಹೊತ್ತು ಬಂದಿದ್ದರು. ನೀನು ನನ್ನ ಮೇಲೆ ಕರುಣೆ ತೋರು. ಅಷ್ಟು ಮಂದಿಯನ್ನು ಎದುರು ಹಾಕಿಕೊಳ್ಳುವ ಸಾಮರ್ಥ್ಯ ನನ್ನಲ್ಲಿಲ್ಲ." ಆಗ ದೇವಸಂದೇಶವಾಹಕರು(ಸ) ಅತ್ಯಂತ ಸಮಾಧಾನ ಮತ್ತು ನಿರ್ಭಯ ದೊಂದಿಗೆ ಹೇಳಿದರು,

"ನಾನು ನಿಮ್ಮ ಬೆಂಬಲದ ಆಧಾರದಲ್ಲಿ ಈ ಕಾರ್ಯವನ್ನೆಸಗುತ್ತಿರುವೆನೆಂದು ಬಹುಶಃ ನೀವು ಭಾವಿಸುತ್ತಿರಬಹುದು. ಚಿಕ್ಕಪ್ಪಾ! ಹಾಗಲ್ಲ, ನನ್ನ ದೇವನೇ ನನಗೆ ಸಹಾಯಕ ಮತ್ತು ಬೆಂಬಲಿಗನಾಗಿದ್ದಾನೆ. ನನ್ನ ಆರಾಧ್ಯನು ಈ ದೌತ್ಯ ವಹಿಸಲು ನನಗೆ ಆದೇಶಿಸಿದ್ದಾನೆ. ಆದ್ದರಿಂದ ಈ ಆಂದೋಲನ ತನ್ನ ಅಂತಿಮ ಹಂತವನ್ನು ತಲಪುವ ವರೆಗೆ ನಾನು ಕೈಕಟ್ಟಿ ಕುಳಿತುಕೊಳ್ಳುವವನಲ್ಲ! ನಿಮ್ಮ ಬೆಂಬಲವು ಸ್ವತಃ ನಿಮ್ಮ

ಸೌಭಾಗ್ಯವಾಗಿದೆ. ಅನ್ಯಥಾ ದೇವಸಹಾಯ ಮತ್ತು ಬೆಂಬಲವು ನನಗೆ ಸಾಕು. ಒಂದು ವೇಳೆ ಈ ಜನರು ನನ್ನ ಒಂದು ಕೈಯಲ್ಲಿ ಸೂರ್ಯ ಮತ್ತು ಇನ್ನೊಂದು ಕೈಯಲ್ಲಿ ಚಂದ್ರನನ್ನು ತಂದಿರಿಸಿದರೂ ನನ್ನ ಕರ್ತವ್ಯ ನಿರ್ವಹಣೆಯಿಂದ ನಾನು ಹಿಂದೆ ಸರಿಯುವವನಲ್ಲ."

ಈ ಉತ್ತರ ಕೇಳಿ ಅಬೂತಾಲಿಬ್‌ರ ಕಂಗಳಲ್ಲಿ ಅಪ್ರಯತ್ನವಾಗಿ ಕಂಬನಿ ಧಾರೆಯಾಗಿ ಹರಿಯಿತು. ತರುವಾಯ ಹೇಳಿದರು, "ಸೋದರ ಪುತ್ರಾ! ನೀನು ನಿನ್ನ ಕೆಲಸವನ್ನು ಮುಂದುವರಿಸು. ಕಅಬಾದ ದೇವನಾಣೆ! ನನ್ನ ಜೀವ ಇರುವ ವರೆಗೂ, ನನ್ನ ಮೂಗು ಶ್ವಾಸೋಚ್ಛ್ವಾಸ ನಡೆಸುತ್ತಿರುವವರೆಗೂ ಈ ಜನರು ನಿನ್ನ ಕೂದಲನ್ನೂ ಕೊಂಕಿಸಲಾರರು!"

ಕಲ್ಲುಗಳ ಸುರಿಮಳೆ

ಮಕ್ಕಾ ನಗರದಿಂದ ಕೆಲವು ಮೈಲುಗಳ ದೂರದಲ್ಲಿ ತಾಯಿಫ್ ಪಟ್ಟಣವಿದೆ. ಹಚ್ಚ ಹಸುರು ತೋಟಗಳು, ತೊನೆದಾಡುವ ಹೊಲಗದ್ದೆಗಳು ಮತ್ತು ದಟ್ಟ ಖರ್ಜೂರ ತೋಪುಗಳಿಗೆ ಹೆಸರುವಾಸಿಯಾದ ನಗರವಾಗಿದೆ ತಾಯಿಫ್. ಹಿಜಾಝ್‌ನ ಕಾಶ್ಮೀರ ವೆಂಬ ಹೆಗ್ಗಳಿಕೆಗೆ ಅದು ಪಾತ್ರವಾಗಿದೆ. ಬಿರು ಬೇಸಿಗೆಯ ಸಮಯದಲ್ಲಿ ಹಿಜಾಝ್‌ನ ಶ್ರೀಮಂತರೆಲ್ಲ ಬಿಸಿ ಹವೆಯ ಉರಿಯಿಂದ ತಪ್ಪಿಸಲೋಸುಗ ತಾಯಿಫ್‌ಗೆ ಹೋಗಿ ತಂಗುತ್ತಿದ್ದರು. ತಾಯಿಫ್‌ನ ಆಸುಪಾಸಿನಲ್ಲಿರುವ ಪ್ರದೇಶವು ಅತ್ಯಂತ ಫಲವತ್ತಾದ ಭೂಮಿಯನ್ನು ಹೊಂದಿದೆ. ಹಣ್ಣು ಹಂಪಲು ಮತ್ತು ತರಕಾರಿಗಳು ಅಲ್ಲಿ ಹೇರಳವಾಗಿ ಬೆಳೆಯಲಾಗುತ್ತದೆ.

ಅನಾಥಮುತ್ತು(ಸ) ಸತ್ಯ ಸಂದೇಶದ ಪ್ರಚಾರಕ್ಕಾಗಿ ಕಾಲ್ನಡಿಗೆಯಲ್ಲಿ ತಾಯಿಫ್‌ಗೆ ಹೊರಟರು. ಅಲ್ಲಿನ ಅತಿದೊಡ್ಡ ಶ್ರೀಮಂತ ಅಬ್ದು ಯಾಲೈಲ್‌ಗೆ ಇಸ್ಲಾಮಿನ ಸಂದೇಶ ವನ್ನಿತ್ತರು. ತರುವಾಯ ಉಪದೇಶ ನೀಡಿದರು. ಅದರಲ್ಲಿ ದೇವನ ಮಹಾನತೆ, ವಿಗ್ರಹಾ ರಾಧನೆಯ ಅಪ್ರಸ್ತುತತೆ, ಕೆಡುಕುಗಳಿಂದ ದೂರವುಳಿಯಲು ತಾಕೀತು ಮತ್ತು ಒಳಿತಿನ ಜೀವನ ಸಾಗಿಸಲು ಕರೆ ಅಡಕವಾಗಿತ್ತು. ಅತ್ಯಂತ ಮಧುರವಾದ ರೀತಿಯಲ್ಲಿ, ಮೆತ್ತಗಿನ ಪದಗಳಲ್ಲಿ, ಮನಸೂರೆಗೊಳಿಸುವಂತಹ ಉಪದೇಶವಾಗಿತ್ತದು! ಆದರೆ ತಾಯಿಫ್‌ನ ಮಂದಿ ಮಕ್ಕಾವಾಸಿಗಳಿಗಿಂತ ಕಡಿಮೆ ಕ್ರೂರಿಗಳಾಗಿರಲಿಲ್ಲ. ಆ ಜನರು ತಮ್ಮ ಗುಲಾಮ ರನ್ನೂ ಗಲ್ಲಿಯ ಪುಂಡ-ಪೋಕರಿಗಳನ್ನೂ ಪ್ರವಾದಿವರ್ಯರ(ಸ) ವಿರುದ್ಧ ಛೂ ಬಿಟ್ಟರು. ಸಾರ್ವಜನಿಕವಾಗಿಯೇ ಪ್ರವಾದಿವರ್ಯರನ್ನು(ಸ) ಬಯ್ಯಲಾಯಿತು, ನಿಂದಿಸಲಾಯಿತು, ಕಲ್ಲಿನ ಸುರಿಮಳೆಗೆರೆಯಲಾಯಿತು. ತತ್ಪರಿಣಾಮವಾಗಿ ಪ್ರವಾದಿವರ್ಯರ(ಸ) ಪಾವನ ದೇಹವು ರಕ್ತದಿಂದ ತೋಯ್ದು ಹೋಯಿತು.

ಅದು ಅತ್ಯಂತ ಕರುಣಾಜನಕ ಸ್ಥಿತಿಯಾಗಿತ್ತು. ನೆತ್ತಿಯ ಮೇಲಿದ್ದ ಸೂರ್ಯನ ಪ್ರಕಾಶ ಕಿರಣಗಳಿಂದ ರಕ್ತ ಹರಿಯಿತು... ಗೋಡೆ ಬಾಗಿಲುಗಳೆಲ್ಲ ಥರಥರ ನಡುಗಿ ದುವು... ಭೂಮಿಯ ಒಡಲಿನಿಂದ ವೇದನಾಜನಕ ಕೂಗು ಹೊರಟಿತು... ಕಲ್ಲು-ಮರಗಳು ದೇವನಲ್ಲಿ ಮೊರೆಯಿಟ್ಟವು... ಒಂದೆಡೆ ಜಗತ್ತಿನ ಅತಿಶ್ರೇಷ್ಠ ಮಾನವ,

ಲೋಕಾನುಗ್ರಹಿ ಹಾಗೂ ಸತ್ಯಸಂದೇಶದ ಪ್ರಚಾರಕರಾದ ದೇವ ಪ್ರವಾದಿ ಒಳಿತಿನ ಮಾತುಗಳನ್ನಾಡುತ್ತಿದ್ದಾರೆ; ಜನರನ್ನು ಅಂಧಕಾರದಿಂದ ಪ್ರಕಾಶದೆಡೆಗೆ ಆಹ್ವಾನಿಸುತ್ತಿದ್ದಾರೆ... ಇನ್ನೊಂದೆಡೆ ಅದಕ್ಕುತ್ತರ ವಾಗಿ ಕಲ್ಲುಗಳನ್ನೆಸೆಯಲಾಗುತ್ತಿದೆ! ಅನಾಥ ಮುತ್ತು, ದೇಹಕ್ಕಾದ ಗಾಯದಿಂದ ಬಸವಳಿದು ನೆಲಕ್ಕೆ ಬೀಳುತ್ತಾರೆ... ಸೇವಕ ಅವರ ರಟ್ಟೆ ಹಿಡಿದು ಆಸರೆ ನೀಡಿ ನಿಲ್ಲಿಸುತ್ತಾರೆ. ಅವರು ಮುಂದಕ್ಕಡಿಯಿಡುತ್ತಾರೆ. ಆದರೆ ಆ ದುರುಳರು ಬೆಂಬಿಡದೆ ಇನ್ನಷ್ಟು ಕಲ್ಲುಗಳ ಸುರಿಮಳೆಗೆರೆಯುತ್ತಾರೆ. ಎಲ್ಲಿಯ ವರೆಗೆಂದರೆ, ಅನಾಥಮುತ್ತು(ಸ) ನೋವು ತಾಳಲಾರದೆ ಮತ್ತೊಮ್ಮೆ ನೆಲದಲ್ಲಿ ಕುಳಿತು ಬಿಡುತ್ತಾರೆ. ಅವರ ಈ ಸ್ಥಿತಿಯನ್ನು ಕಂಡು ತಾಯಿಫ್‌ನ ಪುಂಡಪೋಕರಿಗಳು ಕೇಕೆ ಹಾಕಿ ಕುಣಿಯುತ್ತಾರೆ. ಸೇವಕ ಝೈದ್ ಬಿನ್ ಹಾರಿಸ್(ರ), ಪ್ರವಾದಿವರ್ಯರನ್ನು(ಸ) ಕಲ್ಲೇಟಿನಿಂದ ರಕ್ಷಿಸಲು ಅಡ್ಡ ನಿಲ್ಲುತ್ತಾರೆ. ಆಗ ಅವರ ಹಣೆಗೂ ಕಲ್ಲೇಟು ತಾಗಿ ರಕ್ತ ಚಿಮ್ಮಿ ಬರುತ್ತದೆ.

ಮರಣ ಮತ್ತು ಯಾತನೆಯ ದೇವಚರರು ಪ್ರವಾದಿವರ್ಯರ(ಸ) ಬಾಯಿಂದ ತಾಯಿಫ್‌ನವರಿಗೆ ಶಾಪ ಹೊರಡುವುದನ್ನೇ ಕಾಯುತ್ತಿದ್ದಾರೆ. ಅತ್ತ ಅವರು ಶಾಪ ಹಾಕಿದರೆ, ಇತ್ತ ದೇವಾದೇಶವಾಗುವುದು... ಆಗ ನಾವು ತಾಯಿಫೆಂಬ ಆ ಸುಭಿಕ್ಷ ನಾಡನ್ನು ಧೂಳೀಪಟ ಮಾಡಿ ಬಿಡುವೆವು... ದೇವ ಸಂದೇಶವಾಹಕರ(ಸ) ಮೈಯಿಂದ ಹರಿದ ರಕ್ತದ ಒಂದೊಂದು ಬಿಂದುವಿಗೂ ಪ್ರತೀಕಾರ ಪಡೆಯುವೆವು... ಒಂದೊಂದು ಕೆಟ್ಟ ಬಯ್ಗುಳಕ್ಕೂ ಉತ್ತರ ನೀಡುವೆವು... ಈ ತಾಯಿಫ್ ವಾಸಿಗಳ ಸ್ಥಿತಿಯನ್ನು ಆದ್, ಸಮೂದ್‌ಗಳಿಗಾದ ಸ್ಥಿತಿಗಿಂತಲೂ ಹೇಯವಾಗಿಸಿ ಬಿಡುವೆವು. ಲೋಕನಾಯಕರ ಅವಹೇಳನವೇನು ಸಾಮಾನ್ಯ ಅಪರಾಧವೇ? ಆದರೆ ಲೋಕಾನುಗ್ರಹಿಯ(ಸ) ಸತ್ಯೋಚ್ಚಾರಕ ನಾಲಗೆಯಿಂದ ಒಂದೇ ಒಂದು ಶಾಪದ ಪದ ಹೊರಡಲಿಲ್ಲ. ಆ ಅಕ್ರಮ-ದೌರ್ಜನ್ಯಕ್ಕೆ ತನ್ನ ಸೃಷ್ಟಿಕರ್ತನಲ್ಲಿ ಒಂದೇ ಒಂದು ಪದ ದೂರಲಿಲ್ಲ. ಬದಲಾಗಿ ಸಹನೆ, ಸ್ಥೈರ್ಯ ಮತ್ತು ದೇವನಲ್ಲಿ ಭರವಸೆಯ ಆದರ್ಶ ಗುಣವನ್ನು ಅವರು ಪ್ರದರ್ಶಿಸಿದರು. ಅಂತಹ ಗುಣ ಅವರ ಹಿಂದಿನ ಮತ್ತು ಮುಂದಿನ ಯಾವುದೇ ಕಾಲದಲ್ಲೂ ಪ್ರಕಟಗೊಂಡದ್ದಿಲ್ಲ.

ತಾಯಿಫ್‌ನವರು ತಮ್ಮ ಕೃತ್ಯಕ್ಕೆ ಬಹಳ ಸಂತೋಷಪಟ್ಟರು. ನಮ್ಮ ಆರಾಧ್ಯರುಗಳ ಅವಹೇಳನಕ್ಕೆ ನಾವು ಸರಿಯಾದ ಪ್ರತೀಕಾರವನ್ನೇ ಪಡೆದೆವು ಎಂದುಕೊಂಡರು. ಅವರು ತಮ್ಮ ಅಪರಾಧಕ್ಕೆ ಪಶ್ಚಾತ್ತಾಪ ಪಡುವುದರ ಬದಲು ಇನ್ನಷ್ಟು ಬೀಗಿದರು. "ಇವನೆಂಥ ಪ್ರವಾದಿ! ಸಣ್ಣ ಸಣ್ಣ ಹೈಕಳು ಅವಮಾನಿಸಿ, ಕಲ್ಲೆಸೆದರೂ ಅವನ ದೇವನು ಕನಿಷ್ಠ ರಕ್ಷಿಸಲೂ ಬಂದಿಲ್ಲ... ಅವನ ಸಹಾಯಕ್ಕೆ ಯಾವೊಬ್ಬ ದೇವಚರರನ್ನೂ ಇಳಿಸಿಲ್ಲವಲ್ಲ" ಎಂದು ಅವರು ಪರಸ್ಪರ ಹೇಳತೊಡಗಿದರು. ಇವೆಲ್ಲ ಅವರ ಊಹನೆ ಮತ್ತು ತಪ್ಪು

ಧಾರಣೆಗಳಾಗಿದ್ದುವು. ಮಿಥ್ಯಶಕ್ತಿಗಳು ಸದಾ ಇಂತಹ ಮೋಸದ ಮಾತುಗಳಿಂದ ಸಂತೋಷಪಡುತ್ತ ಬಂದಿವೆ.

ಅನಾಥಮುತ್ತು ತಾಯಿಫ್‌ನಿಂದ ಮರಳಿದರು. ಕಾಲುಗಳೆರಡೂ ಗಾಯದಿಂದ ಜರ್ಝರಿತವಾಗಿದ್ದುವು. ತಾಯಿಫ್‌ನ ತಣ್ಣನೆಯ ಶೀತಲ ಗಾಳಿಯಿಂದಾಗಿ ಗಾಯದಲ್ಲಿ ಉರಿಯೇಳುತ್ತಿತ್ತು. ಜತೆಗೆ ದಾರಿಯ ಧೂಳು ಗಾಯವನ್ನು ಇನ್ನಷ್ಟು ಹದಗೆಡಿಸುತ್ತಿತ್ತು. ಹೂವಿನಂತಹ ದೇಹಕಮಲದಲ್ಲಿ ಗಾಯಗಳನ್ನು ಹೊತ್ತು ಅವರು ಮಕ್ಕಾ ತಲುಪಿದರು. ಮಕ್ಕಾದ ಸತ್ಯನಿಷೇಧಿಗಳು ಪ್ರವಾದಿವರ್ಯರ(ಸ) ಪ್ರತಿಯೊಂದು ಚಲನವಲನವನ್ನು ಗಮನಿಸುತ್ತಿದ್ದರು. ಇವತ್ತೇನು ಹೇಳಿದರು? ಯಾರನ್ನು ಸಂಧಿಸಿದರು? ಯಾರ ಮೇಲೆಲ್ಲ ಪ್ರಭಾವ ಬೀರಿದರು? ತಾಯಿಫ್‌ನ ಘಟನೆಯನ್ನು ತಿಳಿದು ಅವರು ಬಹಳ ಸಂತಸ ಪಟ್ಟರು. ತಾಯಿಫ್‌ವಾಸಿಗಳ ದೌರ್ಜನ್ಯವನ್ನು ಬಹಳವಾಗಿ ಕೊಂಡಾಡಿದರು. ಮಕ್ಕಾದ ಯುವಕರು ಕುರೈಶ್ ಸತ್ಯನಿಷೇಧಿಗಳನ್ನು ಉದ್ದೇಶಿಸಿ ಹೇಳಿದರು, "ನೋಡಿ, ನಿಮಗಿಂತ ತಾಯಿಫ್‌ನ ಹುಡುಗರೇ ವಾಸಿ. ಅವರು ಹೇಗೆ ಅಬ್ದುಲ್ಲಾರ ಪುತ್ರ ಮುಹಮ್ಮದ್‌ರನ್ನು ಬಹಿರಂಗವಾಗಿ ಅವಮಾನಿಸಿ ಹೊಡೆದರು! ಯಾರನ್ನೂ ಅವರ ಮಾತಿಗೆ ಕಿವಿಗೊಡದಂತೆ ತಡೆದರು!!"

ದುಃಖದ ವರ್ಷ

ಈ ಎಲ್ಲ ವಿರೋಧ ಮತ್ತು ಹಗೆತನದ ಹೊರತಾಗಿಯೂ ಮುಸ್ಲಿಮರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇತ್ತು. ಮೇಲಾಗಿ, ಸತ್ಯವನ್ನು ಸ್ವೀಕರಿಸಿದವನು ಸ್ವಯಂ ಸತ್ಯ ಸಂದೇಶ ಪ್ರಚಾರಕನಾಗಿಯೂ ಮಾರ್ಗದರ್ಶನದ ಮೂರ್ತರೂಪವಾಗಿಯೂ ಮಾರ್ಪಡುತ್ತಾನೆ. ಹೀಗೆ ಮಕ್ಕಾದ ಗಾಢಾಂಧಕಾರದಲ್ಲಿ ಇಸ್ಲಾಮಿನ ಪ್ರಕಾಶವು ತನ್ನದೇ ಗತಿಯಲ್ಲಿ ಹರಡುತ್ತಲಿತ್ತು. ಇಸ್ಲಾಮಿನ ಈ ಪ್ರಗತಿಯನ್ನು ಕಂಡು ಕುರೈಶ್ ಸತ್ಯನಿಷೇಧಿಗಳು ಚಡಪಡಿಸುತ್ತಿದ್ದರು... ಹಾ! ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ(ಸ) ಸಂದೇಶ ಪ್ರಚಾರವನ್ನು ಯಾವ ರೀತಿಯಲ್ಲೂ ತಡೆಯಲಾಗುತ್ತಿಲ್ಲವಲ್ಲ! ಈ ಗಿಡವಂತೂ ವಿರೋಧಗಳ ಬಿರುಗಾಳಿ ಬೀಸಿದಷ್ಟೂ ಬುಡ ಗಟ್ಟಿಯಾಗುತ್ತಲೂ ಹರಡುತ್ತಲೂ ಇದೆ! ಅಷ್ಟೇ ಅಲ್ಲ, ಈ ಧರ್ಮದಲ್ಲಿ ಅದೆಂತಹ ಆಸ್ವಾದವಿದೆಯೋ!? ಅದನ್ನು ಅಂಗೀಕರಿಸಿದವನು ಮತ್ತೆ ತಿರುಗಿ ನೋಡುತ್ತಿಲ್ಲವಲ್ಲ!! ಮುಸ್ಲಿಮರು ಅಲ್ಲಲ್ಲಿ ಬಹಿರಂಗವಾಗಿಯೇ ಪೆಟ್ಟು ತಿನ್ನುತ್ತಿದ್ದಾರೆ, ಗಾಯಗೊಳ್ಳುತ್ತಿದ್ದಾರೆ, ಅವರ ಮನೆ ಮಂದಿ ಅವರಿಗೆ ಆಹಾರ-ವಸ್ತ್ರ ನೀಡದೆ ಸತಾಯಿಸುತ್ತಾರೆ... ಆದರೆ ಅವರಾದರೋ ಎಷ್ಟೇ ಸಂಕಷ್ಟ ಸಹಿಸಬೇಕಾಗಿ ಬಂದರೂ ಮುಹಮ್ಮದ್‌ರ(ಸ) ಧ್ಯಾನದಲ್ಲೇ ಮುಳುಗಿರುತ್ತಾರಲ್ಲ!

ಕುರೈಶ್ ಸರದಾರರು ಪುನಃ ಸಭೆ ಸೇರಿದರು. ಯಾತಕ್ಕಾಗಿ? ಯಾರಲ್ಲಾದರೂ ಔತಣವಿತ್ತೇ? ಯಾರಾದರೂ ಅರಸ ಅಥವಾ ಸಾಮ್ರಾಟನ ಬಳಿ ರಾಯಭಾರಿಗಳನ್ನು ಕಳುಹಿಸುವ ತಯಾರಿಯೇ? ವರ್ತಕ ತಂಡದ ಪ್ರಯಾಣ ಸಿದ್ಧತೆಯೇ? ಅಲ್ಲ, ಅದಾವುದೂ ಅಲ್ಲ. ದೇವ ಸಂದೇಶವಾಹಕರಾದ ಮುಹಮ್ಮದ್‌ರ(ಸ) ಸರ್ವನಾಶಕ್ಕಾಗಿ, ಅವರ ಸಂದೇಶವನ್ನು ನಿಷ್ಕ್ರಿಯಗೊಳಿಸುವ ಕುರಿತು ಸಮಾಲೋಚಿಸಲಿಕ್ಕಾಗಿ ಅದಕ್ಕಾಗಿ ಕಾರ್ಯ ಪ್ರವೃತ್ತರಾಗುವ ಸಲುವಾಗಿ ಈ ಸಭೆಯನ್ನು ಆಯೋಜಿಸಲಾಗಿದೆ. ಬಹಳಷ್ಟು ಚಿಂತನೆ, ಚರ್ಚೆ, ವಾಗ್ವಾದದ ತರುವಾಯ ಕೊನೆಗೆ ಒಂದು ತೀರ್ಮಾನಕ್ಕೆ ಬರಲಾಯಿತು- ಮುಹಮ್ಮದ್‌ರನ್ನು ಅವರ ಕುಟುಂಬ ಸಮೇತ ನಿರ್ದಿಷ್ಟ ಜಾಗದಲ್ಲಿ ದಿಗ್ಬಂಧಿಸಿ, ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹೇರುವುದು. ಅವರ ಆಹಾರ-ಪಾನೀಯಕ್ಕೆ ತಡೆಯೊಡ್ಡಲಾದರೆ ಅವರು ಹಸಿವು-ದಾಹದಿಂದ

ಕಂಗೆಟ್ಟು ನಮ್ಮ ಶರತ್ತುಗಳನ್ನು ಒಪ್ಪಲೂಬಹುದು. ಜನಾಂಗದ ಒತ್ತಡವು ವಾಸ್ತವದಲ್ಲಿ ಅಸಹನೀಯವಾಗಿರುತ್ತದೆ. ಎಂತೆಂತಹವರನ್ನೂ ಸರಿದಾರಿಗೆ ತರುತ್ತದೆ.

ಸರ್ವ ಗೋತ್ರಗಳ ಪರವಾಗಿ ಮನ್ಸೂರ್ ಬಿನ್ ಇಕ್ರಿಮಾ ಒಂದು ಕರಾರು ಪತ್ರವನ್ನು ಬರೆದರು:

"ಎಲ್ಲಿಯ ವರೆಗೆ ಬನೂ ಹಾಶಿಮ್ ಮನೆತನದವರು ಅಬ್ದುಲ್ಲಾರ ಪುತ್ರ ಮುಹಮ್ಮದ್‌ರನ್ನು(ಸ) ವಧಿಸಲು ನಮ್ಮ ವಶಕ್ಕೆ ಒಪ್ಪಿಸುವುದಿಲ್ಲವೋ ಅಲ್ಲಿಯ ವರೆಗೆ ಬನೂ ಹಾಶಿಮ್‌ರೊಡನೆ ಯಾವುದೇ ಲಗ್ನ ಸಂಬಂಧವನ್ನಿರಿಸಲಾಗದು, ಅವರೊಡನೆ ವ್ಯಾಪಾರ-ವಹಿವಾಟು ನಡೆಸಲಾಗದು, ಅವರೊಡನೆ ಮಾತನ್ನಾಡಲಾಗದು ಹಾಗೂ ಆ ಕುಟುಂಬ ದವರ ಬಳಿಗೆ ಆಹಾರ-ಪಾನೀಯವನ್ನು ಕೊಂಡೊಯ್ಯಲೂ ಬಿಡಲಾಗದು."

ಈ ಕರಾರನ್ನು ಒಂಟೆಯ ಚರ್ಮದಲ್ಲಿ ಬರೆದು ಮಕ್ಕಾ ನಗರ ವಾಸಿಗಳಿಗೆಲ್ಲರಿಗೂ ತಿಳಿಯುವ ಹಾಗೆ ಕಅಬಾದ ಗೋಡೆಯಲ್ಲಿ ತೂಗು ಹಾಕಲಾಯಿತು. ಈ ಕರಾರನ್ನು ಓದಿದ ವ್ಯಕ್ತಿ ಇನ್ನೊಬ್ಬನಿಗೆ ತಿಳಿಸಿದ. ಆತ ಮತ್ತೊಬ್ಬನಿಗೆ... ಹೀಗೆ ಬನೂ ಹಾಶಿಮ್‌ರೊಡನೆ ಬೆರೆಯುವುದು, ವ್ಯವಹರಿಸುವುದು, ಅವರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವುದು ಒಂದು ಅಪರಾಧವಾಗಿದ್ದು ಸಕಲ ಗೋತ್ರಗಳ ಸರದಾರರೆಲ್ಲ ಈ ಕರಾರಿನಲ್ಲಿ ಪಾಲ್ಗೊಂಡಿದ್ದಾರೆ ಮತ್ತು ಅದನ್ನು ಪಾಲಿಸುವುದು ಪ್ರತಿಯೋರ್ವನ ಕರ್ತವ್ಯವೆಂದು ಮಕ್ಕಾ ನಗರದಾದ್ಯಂತ ಪ್ರಚಾರವಾಯಿತು.

ಅಬೂತಾಲಿಬ್‌ರು ತಮ್ಮ ಕುಟುಂಬಿಕರನ್ನು ಕರಕೊಂಡು 'ಅಬೂತಾಲಿಬ್ ಕಣಿವೆ' ಯಲ್ಲಿ ಆಶ್ರಯ ಪಡೆದರು. ಇದು ಒಂದು ರೀತಿಯ ದಿಗ್ಬಂಧನವಾಗಿತ್ತು. ಆ ಕುಟುಂಬದ ಯಾವೊಬ್ಬ ಸದಸ್ಯನೊಡನೆಯೂ ಕುರೈಶರು ಮಾತನಾಡುತ್ತಿರಲಿಲ್ಲ. ಅಷ್ಟೇ ಅಲ್ಲ, ಯಾರಾದರೂ ಬನೂ ಹಾಶಿಮ್‌ರ ಮೇಲೆ ಕನಿಕರ ಪಟ್ಟು ಅವರಿಗೆ ಆಹಾರ ಒದಗಿಸದಂತೆ ತಡೆಯಲು ನಗರದ ಮುಖ್ಯ ಬೀದಿಗಳಲ್ಲಿ ಪಹರೆಗೆ ಜನರನ್ನು ನಿಲ್ಲಿಸಲಾಯಿತು. ಅಬೂತಾಲಿಬ್ ಕಣಿವೆಯಿಂದ ಬರುವ ಜನರ ಚಲನವಲನಗಳ ಮೇಲೆ ಕಣ್ಣಿರಿಸಲಾಯಿತು.

ಅನಾಥಮುತ್ತು(ಸ) ಹಾಗೂ ಅವರ ಸಂಗಾತಿಗಳು(ರ) ಹಲವಾರು ದಿನಗಳ ಕಾಲ ಹೊಟ್ಟೆಗೆ ಹಿಟ್ಟಿಲ್ಲದೆ ಕಳೆದರು. ಸಹಾಬಿಗಳು ಹಸಿವೆ ತಾಳಲಾರದೆ ಎಲೆಗಳನ್ನು ತಿಂದು ಜೀವ ಉಳಿಸುತ್ತಿದ್ದರು. ಓರ್ವ ಸಹಾಬಿಗೆ ಗಲ್ಲಿಯಾಚೆ ಒಣಗಿದ ಚರ್ಮ ದೊರೆಯಿತು. ಅದನ್ನು ಅವರು ನೀರಿನಲ್ಲಿ ನೆನೆಸಿ ಹಾಕಿದರು. ಅದು ಚೆನ್ನಾಗಿ ಮೆತ್ತಗಾದಾಗ ಗಂಟಲಿ ಗಿಳಿಸಿದರು. ಹಾಶ್ಮಿ ಮನೆತನದ ಪುಟ್ಟ ಕಂದಮ್ಮಗಳು ಹಸಿವೆ ತಾಳಲಾರದೆ ಅಳಲಾರಂಭಿ ಸಿದರೆ, ಅದನ್ನು ಕೇಳಿ ಮಕ್ಕಾದ ಸತ್ಯನಿಷೇಧಿಗಳು ಕೇಕೆ ಹಾಕಿ ಸಂತೋಷಪಡುತ್ತಿದ್ದರು. ಕುರೈಶ್ ಗೋತ್ರಗಳು ಕರಾರನ್ನು ಪಾಲಿಸುವ ಮೂಲಕ ಜನಾಂಗೀಯ ಮೇಲ್ಮೆಯನ್ನು ಇನ್ನಷ್ಟು ಉನ್ನತಗೊಳಿಸಿದರೆಂದು ಅವರು ಪರಸ್ಪರ ಅಭಿನಂದಿಸಿದರು. ಒಂದು ವೇಳೆ ನಾವು ಹೀಗೆಯೇ ಒಗ್ಗಟ್ಟಾಗಿ ಇದ್ದರೆ,

ಹಾಶಿಮ್ ಮನೆತನದ ಮಂದಿ ವಿವಶರಾಗಿ ನಮ್ಮ ಮುಂದೆ ಮಂಡಿಯೂರುವರು... ಸಾಮಾಜಿಕ ಬಹಿಷ್ಕಾರದ ಪೆಟ್ಟು ಅಷ್ಟು ತೀವ್ರ ವಾಗಿರುತ್ತದೆ! ಇನ್ನೆಷ್ಟು ದಿನಾಂತ ಅವರು ಆ ಸಂಕಷ್ಟವನ್ನು ಸಹಿಸಿಯಾರು? ಇನ್ನು ಅಬೂತಾಲಿಬ್‌ರು ತಮ್ಮ ಶ್ವೇತ ಗಡ್ಡವನ್ನು ಮುಷ್ಟಿಯಲ್ಲಿ ಹಿಡಿದು, "ನೋಡಿ ಸೋದರರೇ! ನನ್ನ ಪರಿವಾರದವರನ್ನು ಕ್ಷಮಿಸಿ ಬಿಡಿ. ಇದೋ ಅಬ್ದುಲ್ಲಾನ ಪುತ್ರ ಮುಹಮ್ಮದ್‌ನನ್ನು(ಸ) ನಿಮ್ಮ ವಶಕ್ಕೊಪ್ಪಿಸು ತ್ತಿದ್ದೇನೆ. ಇನ್ನು ನೀವು ಇವನನ್ನು ಬೇಕಿದ್ದರೆ ಕೈದಿಯಾಗಿರಿಸಬಹುದು ಅಥವಾ ವಧಿಸ ಬಹುದು" ಎಂದು ಹೇಳುವ ಆ ದಿನ ದೂರವಿಲ್ಲ... ಹೀಗೆ ಕುರೈಶ್ ಸರದಾರರ ಹಗಲುಗನಸು ಎಣೆಯಿಲ್ಲದೆ ಸಾಗುತ್ತಿತ್ತು.

ಇದೇ ಸ್ಥಿತಿಯಲ್ಲಿ ಮೂರು ವರ್ಷ ಕಳೆದು ಹೋಯಿತು. ಚಿಂತಾಕ್ರಾಂತ ಬನೂಹಾಶಿಮ್‌ರ ಮೇಲಿನ ಸಂಕಷ್ಟಗಳು ಎಲ್ಲೆ ಮೀರಿದ್ದುವು. ಮಕ್ಕಾದಂತಹ ತುಂಬು ನಗರದಲ್ಲಿ ಹಾಶಿಮ್ ಮನೆತನದವರು ಅಪರಿಚಿತರಂತೆ ಮಾತ್ರವಲ್ಲ, ಅಸ್ಪೃಶ್ಯರಂತೆಯೂ ಕೈದಿಗಳಂತೆಯೂ ಜೀವಿಸ ತೊಡಗಿದರು. ಅಸಹಾಯಕ ಮತ್ತು ನಿರ್ಗತಿಕ ಜೀವನ! ಅಂತಹ ಜೀವನಕ್ಕಿಂತ ಮರಣವೇ ಲೇಸೆಂದು ಭಾವಿಸುವಂತಹ ಸ್ಥಿತಿ! ಕುರೈಶರು ಅನಾಥ ಮುತ್ತು(ಸ), ಅವರ ಸಹಾಬಿಗಳು ಮತ್ತು ಹಾಶಿಮ್ ಮನೆತನದ ಮಂದಿಗೆ ಒಂದೊಂದು ತುತ್ತಿಗೂ ತತ್ವಾರಪಡುವಂತೆ ಮಾಡಿದ್ದರು. ಆದರೆ ಮುಸ್ಲಿಮರ ದೃಢವಿಶ್ವಾಸದಲ್ಲಿ ಎಳ್ಳಷ್ಟೂ ಬದಲಾವಣೆ ಕಾಣಲಿಲ್ಲ. ಹಸಿವು-ದಾಹ ಸಹಿಸಲಸಾಧ್ಯವಾದರೂ ಅವರ ನಾಲಗೆಗಳು ದೇವಸ್ತುತಿಯಲ್ಲಿ ಚಲಿಸುತ್ತಿದ್ದುವು. ಅವರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಯುಕ್ತಿಯ ಜಾಡಿನಲ್ಲಿ ಒಪ್ಪಂದ ಮಾಡಲು ಸಿದ್ಧರಾಗುತ್ತಿದ್ದರು. ಆದರೆ ಇಲ್ಲಿ ಮರಣ ಬಂದರೂ ಸರಿ, ಸತ್ಯವಿಶ್ವಾಸದಿಂದ ಹಿಂಜರಿಯಲು ಯಾರೂ ಸಿದ್ಧರಾಗಲಿಲ್ಲ. ಹೀಗೆ ಸಂಕಷ್ಟಮಯ ಮೂರು ಸಂವತ್ಸರಗಳು ಕಳೆದು ಹೋದುವು. ಆದರೆ ಕುರೈಶ್ ಸತ್ಯನಿಷೇಧಿಗಳ ಸಾಮಾಜಿಕ ಬಹಿಷ್ಕಾರದ ಮಹಾ ಹೊಡೆತವೂ ಲಘುವಾಗಿ ಕಂಡಿತು.

ಮೊದಲೇ ವೃದ್ಧಾಪ್ಯದಿಂದ ನಿಶ್ಶಕ್ತರಾಗಿದ್ದ ಅಬೂತಾಲಿಬ್, ಬಹಿಷ್ಕಾರದ ದುಃಖ ದಿಂದ ತೀರಾ ಸೊರಗಿ ಹೋದರು. ಸೋದರ ಪುತ್ರನಿಗೆ ಬೆಂಬಲ ನೀಡಿದ ಕಾರಣವಾಗಿ ಇಡೀ ಜನಾಂಗದ ವೈರ ಕಟ್ಟಿಕೊಳ್ಳಬೇಕಾಗಿ ಬಂತು. ಮುದಿಯಾದ ಬಲಹೀನ ಮೂಳೆಗಳು ದುಃಖದ ಭಾರಹೊತ್ತು ಸವೆದು ಹೋಗಿದ್ದುವು... ಇನ್ನೆಷ್ಟು ಸಹಿಸಿಯಾರು? ಒಂದು ದಿನ ಅವರು ಅನಾರೋಗ್ಯಕ್ಕೆ ತುತ್ತಾದರು. ಅನಾಥಮುತ್ತು(ಸ) ತನ್ನ ಪ್ರೀತಿಯ ಚಿಕ್ಕಪ್ಪನನ್ನು ಕಾಣಲು ಹೋದರು. ಅಬೂತಾಲಿಬ್ ಹೇಳಿದರು,

"ಸೋದರ ಪುತ್ರಾ! ನಿನ್ನನ್ನು ತನ್ನ ಸಂದೇಶವಾಹಕನಾಗಿ ಕಳುಹಿಸಿರುವ ಆ ದೇವನಲ್ಲಿ ನನ್ನ ಆರೋಗ್ಯಕ್ಕಾಗಿ ಪ್ರಾರ್ಥಿಸಲಾರೆಯಾ?"

ಚಿಕ್ಕಪ್ಪನಿಂದ ಈ ಆಗ್ರಹ ಹೊರಡುವುದನ್ನೇ ಕಾಯುತ್ತಿದ್ದವರಂತೆ ಅನಾಥ ಮುತ್ತು(ಸ) ಕೈಯೆತ್ತಿ ಪ್ರಾರ್ಥಿಸಿದರು. ಆ ಪ್ರಾರ್ಥನೆಯನ್ನು ಸ್ವಾಗತಿಸಲು ದೇವಕಾರುಣ್ಯವೂ ಧಾವಿಸಿ

ಬಂತು... ಅಬೂತಾಲಿಬ್ ಸ್ವಸ್ಥರಾದರು. ಅವರಲ್ಲಿ ಚೈತನ್ಯ ತುಂಬಿತು. ದೇಹದಲ್ಲಿ ಯಾರೋ ಹೊಸ ಜೀವ ತುಂಬಿಸಿದಂತೆ ಲವಲವಿಕೆಯಿಂದ ಎದ್ದು ಹೇಳಿದರು, "ಸೋದರ ಪುತ್ರಾ! ದೇವನು ನಿನ್ನ ಮಾತನ್ನು ಬಹಳವಾಗಿ ಕೇಳುತ್ತಾನೆ!"

ಸಂದೇಶವಾಹಕರ(ಸ) ದೌತ್ಯಪ್ರಜ್ಞೆ ಪುನಃ ಜಾಗೃತವಾಯಿತು.

"ಚಿಕ್ಕಪ್ಪಾ! ನೀವೂ ದೇವನ ಮಾತನ್ನು ಕೇಳಿದರೆ... ಮತ್ತು ಅವನ ಆದೇಶವನ್ನು ಪಾಲಿಸಿದರೆ, ದೇವನೂ ನಿಮ್ಮ ಮಾತನ್ನು ಕೇಳುವನು."

ಕೆಲವು ದಿನಗಳ ತನಕ ಸ್ವಸ್ಥರಾಗಿದ್ದ ಅಬೂತಾಲಿಬ್ ಪುನಃ ರುಗ್ಣಶಯ್ಯೆಯಲ್ಲಿ ಬಿದ್ದರು. ಜೀವನದ ಸೂರ್ಯ ಅಸ್ತಮಿಸುವ ಸೂಚನೆ ನೀಡುತ್ತಿತ್ತು. ವೃದ್ಧಾಪ್ಯದ ಜಾಡಿನಲ್ಲಿ ಮರಣವು ಇಣುಕು ಹಾಕುತ್ತಿತ್ತು. ಶ್ವಾಸವು ಈಗಲೋ ಆಗಲೋ ಎಂಬಂತೆ ಕ್ಷೀಣವಾಗ ಹತ್ತಿತು. ಮತ್ತದೇ ಉಕ್ತಿಯ ಪುನರಾವರ್ತನೆ- ಜಗತ್ತಿನಲ್ಲಿ ಯಾವುದೇ ರೋಗಕ್ಕೆ ಚಿಕಿತ್ಸೆ ಮಾಡಬಹುದು. ಆದರೆ ಮರಣಕ್ಕೆ ಮದ್ದಿಲ್ಲ! ಈ ಒಂದು ಘಟ್ಟಕ್ಕೆ ತಲುಪಿದ ಬಳಿಕ ಪ್ರತಿಯೋರ್ವನೂ ವಿವಶನಾಗಿ ಬಿಡುತ್ತಾನೆ. ಈ ಹಾದಿಯಲ್ಲಿ ಪ್ರಕೃತಿಯು ರಾಜ-ಪ್ರಜೆ, ಪಂಡಿತ-ಪಾಮರ ಎಂಬ ಭೇದವಿಲ್ಲದೆ ಸರ್ವರೊಡನೆಯೂ ಏಕಪ್ರಕಾರ ವ್ಯವಹರಿಸುತ್ತದೆ. ಮರಣದ ದೇವಚರರು ಗುಡಿಸಲಿಗೆ ಹೊಕ್ಕಷ್ಟೇ ಸಲೀಸಾಗಿ ಬಲಿಷ್ಠ ಕೋಟೆಯೊಳಗೂ ನುಗ್ಗುತ್ತಾರೆ. ಮಲಕುಲ್ ಮೌತ್‌ರ ಪ್ರಹಾರವನ್ನು ತಡೆಯುವ ವಿದ್ಯೆ ಯಾರಿಗೂ ಗೊತ್ತಿಲ್ಲ. ಅವರ ಮುಷ್ಟಿಯಿಂದ ಯಾರ ಕೊರಳೂ ಮುಕ್ತವಾಗಿಲ್ಲ.

ಅಬೂತಾಲಿಬ್‌ರ ರೋಗವು ತೀವ್ರವಾಯಿತು. ಮಕ್ಕಾದ ಸಾಂಪ್ರದಾಯಿಕ ಚಿಕಿತ್ಸೆಯೂ ಸಾಕಷ್ಟಾಯಿತು. ಆದರೆ ಪ್ರಕೃತಿಯು ಅವರ ಜೀವನದ ಕ್ಷಣಗಳಿಗೆ ಅಂತಿಮ ಮೊಹರನ್ನು ಒತ್ತಿಯಾಗಿತ್ತು. ಕೊನೆಗೂ ವೃದ್ಧ ಅಬೂತಾಲಿಬ್‌ರು ಕೊನೆಯುಸಿರೆಳೆದು ಶಾಶ್ವತ ನಿದ್ರೆಗೆ ಶರಣಾದರು. ಮುಹಮ್ಮದುರ್ರಸೂಲುಲ್ಲಾಹ್‌ರಿಗೆ(ಸ) ತಮ್ಮ ಅತಿ ಪ್ರೀತಿಯ ಚಿಕ್ಕಪ್ಪನವರ ಮರಣದಿಂದ ಸ್ವಾಭಾವಿಕವಾಗಿಯೇ ದುಃಖವಾಯಿತು. ಆದರೆ ಕುರೈಶ್ ಸತ್ಯನಿಷೇಧಿಗಳ ಮನೆಗಳಲ್ಲಿ ಆನಂದೋಲ್ಲಾಸದ- ದೀಪಗಳು ಹೊತ್ತಿದುವು. ಇಂದು ಮುಹಮ್ಮದ್‌ನ(ಸ) ಅತಿದೊಡ್ಡ ಆಧಾರ ಇಲ್ಲವಾಯಿತು ಎಂದು ಸಂತೋಷಾಚರಿಸಲಾಯಿತು. ಅಬೂತಾಲಿಬ್‌ರ ಬೆಂಬಲವೇ ಇದುವರೆಗೆ ಅಬ್ದುಲ್ಲಾರ ಪುತ್ರನಿಗೆ(ಸ) ಗುರಾಣಿಯಾಗಿತ್ತು. ಅದನ್ನೀಗ ಮರಣವು ಕಸಿಯಿತು, ಆ ಆಧಾರವೂ ಕುಸಿಯಿತು... ಚಿಕ್ಕಪ್ಪನ ಮರಣದಿಂದ ಮುಹಮ್ಮದ್(ಸ) ಸೋತು ಹೋಗಿರಬಹುದು ಮತ್ತು ಅವರಲ್ಲಿ ಮೊದಲಿನಂತೆ ಹುಮ್ಮಸ್ಸಿರಲಾರದು. ಒಂದು ವೇಳೆ, ಹಿಂದಿನಂತೆಯೇ ತನ್ನ ಚಟುವಟಿಕೆಗಳನ್ನು ಮುಂದುವರಿಸಿದರೆ, ನಾವು ಉಗ್ರ ಪ್ರತಿಹೋರಾಟ ನಡೆಸುವೆವು. ಹ್ಞ... ಅಬೂತಾಲಿಬ್‌ರ ಮೇಲಿನ ಗೌರವದಿಂದಾಗಿ ನಾವು ಅಬ್ದುಲ್ಲಾರ ಪುತ್ರನನ್ನು ಸ್ವಲ್ಪ ಸಡಿಲ ಬಿಟ್ಟೆವು... ಇನ್ನು ಅವರೊಡನೆ ಯಾವುದೇ ರೀತಿಯ ರಿಯಾಯಿತಿ, ಕ್ಷಮೆಯ ಧೋರಣೆಯನ್ನು ತೋರಲಾಗದು. ಅವರ ಯಾವುದೇ ಮಾತನ್ನೂ ಕಡೆಗಣಿಸ ಲಾಗದು.

ಚಿಕ್ಕಪ್ಪನ ಪ್ರೀತಿಯು ಮುಹಮ್ಮದ್‌ರಿಗೆ ಧೈರ್ಯ ನೀಡುತ್ತಿತ್ತು. ಆ ಧೈರ್ಯವೂ ಈಗ ಇಲ್ಲವಾಯಿತು.

ಇದು ಅವರ ಸಂಕುಚಿತ ದೃಷ್ಟಿಕೋನವಷ್ಟೇ ಆಗಿತ್ತು. ಪ್ರಕೃತಿಯು ಅವರ ಮಾತುಗಳಿಗೆ ನಕ್ಕು ಹೇಳಿತು, "ಮೂರ್ಖರೇ! ಮುಹಮ್ಮದ್‌ರ(ಸ) ಭರವಸೆಯು ಅಬೂತಾಲಿಬ್‌ರ ಮೇಲಿದ್ದುದಲ್ಲ, ಬದಲಾಗಿ ಅಲ್ಲಾಹನ ಮೇಲೆ ಇದೆ. ಅಬೂತಾಲಿಬ್ ಕೊನೆಯುಸಿರೆಳೆದಿದ್ದಾರೆ. ಆದರೆ ಅಲ್ಲಾಹ್ ಚಿರಂತನನು. ಇನ್ನು ನಿಮ್ಮ ಕಣ್ಣುಗಳು ಅಬೂತಾಲಿಬ್‌ರ ಮರಣದಿಂದಾಗಿ ಮುಹಮ್ಮದ್(ಸ) ದುಃಖಿತಪ್ತರಾಗಿರುವುದನ್ನು ಕಂಡಿರಬಹುದೇನೋ ಸರಿ; ಆದರೆ ಈ ದುಃಖ-ದುಮ್ಮಾನವು ಆಧಾರ ಕಳಚಿ ಹೋಯಿತೆಂದಾಗಿರಲಿಲ್ಲ. ಬದಲಾಗಿ ಅದಂತೂ ಹೃದಯ ಸಾಮೀಪ್ಯ, ರಕ್ತಸಂಬಂಧ, ನಿಕಟ ಸಂಪರ್ಕ ಮತ್ತು ಸ್ವಾಭಾವಿಕ ಬಾಂಧವ್ಯಕ್ಕೆ ಸಂಬಂಧಪಟ್ಟ ದುಃಖವಾಗಿದೆ. ನೀವು ಮುಹಮ್ಮದ್‌ರ(ಸ) ದುಃಖವನ್ನು ಲೌಕಿಕ ಮತ್ತು ಸ್ವಾರ್ಥಪರ ದುಃಖಕ್ಕೆ ಹೋಲಿಸುವ ತಪ್ಪನ್ನೆಸಗುತ್ತಿದ್ದೀರಿ. ನೆನಪಿಡಿ! ಚೆನ್ನಾಗಿ ತಿಳಿಯಿರಿ! ಮುಹಮ್ಮದ್‌ರಿಗೆ(ಸ) ಇಹಲೋಕದಲ್ಲಿ ಯಾವುದೇ ಆಧಾರ ಅಥವಾ ಶಿಫಾರಸಿನ ಅಗತ್ಯ ಖಂಡಿತ ಇಲ್ಲ. ಅವರನ್ನು ತನ್ನ ಪ್ರವಾದಿಯಾಗಿ ಕಳುಹಿಸಿದ ಸರ್ವಶಕ್ತನೇ ಅವರ ಸಂರಕ್ಷಕ, ಮೇಲ್ವಿಚಾರಕ ಮತ್ತು ಅತಿದೊಡ್ಡ ಆಧಾರವಾಗಿದ್ದಾನೆ. ನಿಮ್ಮ ಇಹಲೋಕದ ಆಧಾರ ಏನಿದ್ದರೂ ಹಸಿ ನೂಲಿಗಿಂತಲೂ ದುರ್ಬಲವಾದುದು. ಸಣ್ಣ ಮಟ್ಟಿನ ಏರುಪೇರಾದರೂ ಆಧಾರವು ಒಂದೋ ಛಿದ್ರವಾಗಿ ಹೋಗುತ್ತದೆ ಇಲ್ಲವೇ ಮುರಿದು ಬೀಳುತ್ತದೆ. ಆದರೆ ಅಲ್ಲಾಹನ ಆಧಾರವು ಎಂದಿಗೂ ಮುರಿಯಲಾರದು. ದುಃಖ-ಸಂಕಷ್ಟಗಳೆಲ್ಲವೂ ಆ ಸಂಬಂಧ ಮತ್ತು ಆಧಾರಗಳನ್ನು ಇನ್ನಷ್ಟು ಸುದೃಢ ಗೊಳಿಸುತ್ತವೆ.

ದುಃಖದಿಂದ ಹೃದಯದಲ್ಲಿ ಒಂದು ವಿಶಿಷ್ಟ ಮೃದುತ್ವ ಹುಟ್ಟುತ್ತದೆ. ಆದ್ದರಿಂದಲೇ ಜಗತ್ತಿನ ಸುಧಾರಣೆಗೆ ನೇಮಿಸಲ್ಪಟ್ಟವರನ್ನು ದುಃಖ, ಸಂಕಷ್ಟ ಮತ್ತು ಕಠಿಣ ಪರೀಕ್ಷೆಗಳಿಗೆ ಒಡ್ಡುವುದು ಅಲ್ಲಾಹನ ಚರ್ಯೆಯಾಗಿದೆ. ಸುಖೋಪಭೋಗ ಮತ್ತು ವಿಲಾಸೀ ವಾತಾವರಣವು ಮಾರ್ಗದರ್ಶನ ಮತ್ತು ಸುಧಾರಣೆಯ ಪಾವನ ಗಿಡದ ಪಾಲಿಗೆ ಪ್ರತಿಕೂಲವಾಗಿ ಪರಿಣಮಿಸುತ್ತವೆ. ಸ್ವಯಂ ದುಃಖ-ಸಂಕಷ್ಟಗಳನ್ನು ಅನುಭವಿಸಿದಾತನೇ ಇತರರ ದುಃಖ-ದುಮ್ಮಾನವನ್ನು ಅರ್ಥ ಮಾಡಬಲ್ಲನು. ಹಸಿವಿನ ತೀವ್ರತೆಯನ್ನು ಹೊಟ್ಟೆಗೆ ಹಿಟ್ಟಿಲ್ಲದವರೊಡನೆ ಕೇಳಿರಿ, ಈ ಉದರೋಪಾಸಕರು ಅದನ್ನು ಹೇಗೆ ಅರ್ಥೈಸಿಕೊಟ್ಟಾರು? ಕಾಲಿನ ಹಿಮ್ಮಡಿಯ ಚರ್ಮವೂ ಒಡೆಯದಿದ್ದವನಿಂದ ಸಂಕಷ್ಟಭರಿತ ಯಾತ್ರೆಯ ಅನುಭವ ಹೇಗೆ ತಿಳಿಯುವಿರಿ?

ಅಬೂತಾಲಿಬ್‌ರ ಮರಣದಿಂದಾದ ದುಃಖವಿನ್ನೂ ಮಾಸಿರಲಿಲ್ಲ; ಪ್ರವಾದಿವರ್ಯರ(ಸ) ಪ್ರೀತಿಪಾತ್ರ ಏಕೈಕ ಜೀವನ ಸಂಗಾತಿಯಾಗಿದ್ದ ಖದೀಜಾ(ರ) ಕೆಲವು ದಿನಗಳ ಅಸ್ವಾಸ್ಥ್ಯದ

ಬಳಿಕ ಇಹಲೋಕ ತ್ಯಜಿಸಿದರು. ಒಂದರ ಹಿಂದೆ ಒಂದರಂತೆ ಈರ್ವರು ಬೆಂಬಲಿಗರಾದ ಪ್ರೀತಿ ಪಾತ್ರರ ಮರಣವು ಸಾಮಾನ್ಯ ದುಃಖದ ವಿಷಯವೇನೂ ಅಲ್ಲ. ದುಃಖದ ಎರಡು ಪರ್ವತಗಳು ತೀರಾ ಅಲ್ಪ ಅವಧಿಯಲ್ಲಿ ಇಬ್ನು ಅಬ್ದುಲ್ಲಾರ(ಸ) ಮೇಲೆ ಎರಗಿತ್ತು. ಆದರೆ ಅನಾಥಮುತ್ತು(ಸ) ಆ ದುಃಖವನ್ನು ಸಹನೆ-ಸ್ಥೈರ್ಯದೊಂದಿಗೆ ಸೈರಿಸಿಕೊಂಡರು. ಅಲ್ಲಾಹನು ಸಹನೆಯ ಸುವಾರ್ತೆ ಮತ್ತು ತನ್ನ ಸಾಂಗತ್ಯದ ವಾಗ್ದಾನದೊಂದಿಗೆ ಅವರ ಹೃದಯಕ್ಕೆ ಸಾಂತ್ವನ ನೀಡಿದನು. ಆದರೆ ಯಾವುದೇ ದುರ್ಘಟನೆಯಿಂದ ಪ್ರಭಾವಿತನಾಗಿ ಬಿಡುವುದು ಮಾನವನ ಸ್ವಭಾವವಾಗಿದೆ. ಆದ್ದರಿಂದ ಪ್ರವಾದಿವರ್ಯರ(ಸ) ಮೇಲೂ ಉಭಯ ದುಃಖ ಪ್ರಭಾವ ಬೀರಿತ್ತು. ಅವರು ಆ ವರ್ಷವನ್ನು 'ಆಮುಲ್ ಹುಝ್ನ್' ಅಂದರೆ 'ದುಃಖದ ವರ್ಷ' ಎಂದು ಹೇಳುತ್ತಿದ್ದರು.

ಅಬೂತಾಲಿಬ್‌ರ ಮರಣದಿಂದ ಸತ್ಯನಿಷೇಧಿಗಳು ಸಂತೋಷ ಆಚರಿಸಿದ್ದರಷ್ಟೇ. ಅದರ ಬೆನ್ನಿಗೇ ಖದೀಜರ(ರ) ಮರಣದಿಂದ ಅವರ ಸಂತೋಷವು ಇಮ್ಮಡಿಯಾಯಿತು. ವೈರ-ವಿದ್ವೇಷವು ಮಾನವನನ್ನು ಸಂಕುಚಿತ ಸ್ವಭಾವಿ ಮತ್ತು ನಿರ್ದಯಿಯನ್ನಾಗಿ ಮಾಡುತ್ತದೆ. ಎಲ್ಲಿಯ ವರೆಗೆಂದರೆ, ತನ್ನ ಇದಿರಾಳಿಯ ಕಳವಳ, ಸಂಕಷ್ಟದಿಂದ ಸಂತಾಪಪಡುವುದರ ಬದಲು ಸಂತೋಷಪಡುತ್ತಾನೆ. ಹಾಗೆಯೇ ಆಯಿತು... ಮುಹಮ್ಮದ್‌ರ(ಸ) ಬೆಂಬಲ ಮತ್ತು ಆಧಾರಗಳು ಒಂದೊಂದಾಗಿ ಕಳಚಿ ಹೋಗುತ್ತಿವೆಯೆಂದು ಸತ್ಯನಿಷೇಧಿಗಳು ಭಾವಿಸಿದರು. ಇನ್ನು ಮುಹಮ್ಮದ್‌ರ (ನಊದುಬಿಲ್ಲಾಹ್) ಅಹಂಕಾರವೆಲ್ಲವೂ ಮುರಿದು ಬೀಳಲಿದೆ... ತನ್ನ ಪ್ರೀತಿಪಾತ್ರ ಚಿಕ್ಕಪ್ಪ ಮತ್ತು ಪತ್ನಿಯನ್ನು ಮರಣದಿಂದ ರಕ್ಷಿಸಲಾಗದ ಪ್ರವಾದಿಯು ತನ್ನ ಧರ್ಮ ಮತ್ತು ಅದರ ಅನುಯಾಯಿಗಳನ್ನು ಹೇಗೆ ತಾನೇ ರಕ್ಷಿಸ ಬಲ್ಲರು? ಆಕಾಶಗಳ ವಿಷಯಗಳನ್ನು ತಿಳಿಸುವವನಿಗೆ ಭೂಮಿಯ ಸಂಕಷ್ಟಗಳನ್ನು ತಡೆಯಲಾಗಲಿಲ್ಲ...

ಅಕಟಾ! ತಿಳಿಗೇಡಿತನದ ಊಹನೆ ಮತ್ತು ಗುಮಾನಿಯೇ! ಅಜ್ಞಾನಜನ್ಯ ಸಂದೇಹಗಳೇ!

ನಜ್ಜಾಶಿಯ ಆಸ್ಥಾನದಲ್ಲಿ

ಕುರೈಶ್ ಸತ್ಯನಿಷೇಧಿಗಳ ಅಕ್ರಮ-ದೌರ್ಜನ್ಯಗಳು ಮೇರೆ ಮೀರತೊಡಗಿದುವು. ಅವರ ಮನಸ್ಸಿನ ದೋಷಗಳು ಹಿಂಸೆ, ದೌರ್ಜನ್ಯಗಳ ರೂಪದಲ್ಲಿ ಪ್ರಕಟವಾಗತೊಡಗಿದುವು. ಅವರು ನಿಜವಾಗಿಯೂ ಅನಾಥಮುತ್ತು(ಸ) ಹಾಗೂ ಅವರ ಸಂಗಾತಿಗಳ ಬದ್ಧವೈರಿಗಳಾಗಿ ಮಾರ್ಪಟ್ಟರು. ಅವರೆಲ್ಲ ಒಗ್ಗಟ್ಟಾಗಿ ತಮ್ಮ ಮಿಥ್ಯಾರಾಧಕರುಗಳ ಆಣೆ ಹಾಕುತ್ತಾ ಒಂದು ತೀರ್ಮಾನಕ್ಕೆ ಬಂದರು... ಏನೇ ಆಗಲಿ, ಯಾವ ರೀತಿಯಲ್ಲಾದರೂ ಸರಿ, ಮಕ್ಕಾ ನಗರ ದಿಂದ ಇಸ್ಲಾಮಿನ ಅನುಯಾಯಿಗಳನ್ನು ಸರ್ವನಾಶ ಮಾಡಿಯೇ ಸಿದ್ಧ... ಸಕಲ ಆಯುಧವನ್ನು ಮುಸ್ಲಿಮರ ವಿರುದ್ಧ ಬಳಸುವೆವು... ನಮ್ಮ ಉಸಿರು ಇರುವ ತನಕ ಈ ಹೊಸ ಧರ್ಮವು ಅರಬ್‌ನಲ್ಲಿ ನಡೆಯಲಾರದು... ಲಾತ್, ಹುಬಲ್‌ಗಳ ಘನತೆಗೆ ಒಂದಿನಿತೂ ಚ್ಯುತಿ ಬರುವುದನ್ನು ನಾವು ಸಹಿಸಲಾರೆವು...

ಇಸ್ಲಾಮಿನ ವಿರುದ್ಧ ದ್ವೇಷಾಸೂಯೆಯು ಹಿಂಸೆಯ ಸಕಲಾಯುಧ ಭೂಷಿತವಾಗಿ ರಂಗದಲ್ಲಿಳಿಯಿತು. ಇನ್ನು ಪರಸ್ಪರ ಸಮಾಲೋಚನೆ, ಸಲಹೆ-ಸೂಚನೆಯಿಲ್ಲ. ಬದಲಾಗಿ ಎಲ್ಲರೂ ಸೇರಿ ಹೀಗೆ ಪ್ರತಿಜ್ಞೆಗೈದರು: ಈ ಮುಹಮ್ಮದ್(ಸ) ಮತ್ತು ಅವರ ಅನುಚರರಿಗೆ ಮಕ್ಕಾದ ನೆಲವನ್ನು ಸಂಕೀರ್ಣಗೊಳಿಸುವೆವು... ಮುಸ್ಲಿಮರನ್ನು ರಹಸ್ಯವಾಗಿಯೂ ಬಹಿರಂಗ ವಾಗಿಯೂ ಯಾವೆಲ್ಲಾ ರೀತಿಯಲ್ಲಿ ಸತಾಯಿಸಲಾಗುವುದೋ ಆ ಎಲ್ಲ ವಿಧಾನಗಳನ್ನು ಅನುಸರಿಸುವೆವು... ಯಾವನೇ ಓರ್ವ ವಿಗ್ರಹಾರಾಧಕನನ್ನು ತನ್ನ ಮುಸ್ಲಿಮ್ ಬಂಧುವಿ ನೊಡನೆ ರಿಯಾಯಿತಿ ತೋರಗೊಡಲಾರೆವು... ಜನಾಂಗೀಯ ಮೇಲ್ಮೆ ಮತ್ತು ಪೂರ್ವಜರ ಘನತೆಯು ಇತರೆಲ್ಲ ವಿಷಯಗಳಿಗಿಂತಲೂ ಮಿಗಿಲಾದುದು... ಅಬೂತಾಲಿಬ್ ಮತ್ತು ಖದೀಜರ(ರ) ಮರಣದಿಂದಾಗಿ ಮುಹಮ್ಮದ್(ಸ) ಮತ್ತಾತನ ಅನುಯಾಯಿಗಳು ಕುಗ್ಗಿ ಹೋಗಿರಬಹುದು... ಅವರ ಈ ಹತಾಶೆಯನ್ನೇ ನಾವು ಸದುಪಯೋಗಪಡಿಸಿಕೊಳ್ಳುವೆವು... ದುಃಖಿತ ಮನಸ್ಸು ವಿರೋಧಗಳನ್ನು ಕಂಡು ಇನ್ನಷ್ಟು ಕುಗ್ಗಿ ಹೋಗುತ್ತದೆ... ಹ್ಹಾ! ಈ ಬೆರಳೆಣಿಕೆಯ ಮಂದಿಯನ್ನು ಮುಗಿಸಿ ಬಿಡಲು ನಾವು ಮೀನ ಮೇಷ ಎಣಿಸುತ್ತಿದ್ದೇವಲ್ಲ! ನಮ್ಮ ಸ್ವಾಭಿಮಾನ ಎಲ್ಲಿ ಹೋಯಿತು? ಗಲ್ಲಿ-ಗಲ್ಲಿ, ಮಾರುಕಟ್ಟೆ ಎಲ್ಲೆಡೆಯೂ ನಾವು ನಮ್ಮ ಆರಾಧ್ಯರುಗಳ ಅವಹೇಳನವನ್ನು ಕೇಳುತ್ತಿದ್ದೇವಲ್ಲ. ಅಕಟಾ! ಹಾಗೆ ಆಡಿಕೊಳ್ಳುವವರ

ದೇಹದೊಳಗೆ ಒಂದು ಸೂಜಿಯನ್ನು ಚುಚ್ಚುವುದೂ ನಮ್ಮಿಂದಾಗಿಲ್ಲವಲ್ಲ!! ವಾಸ್ತವದಲ್ಲಿ, ಲಾತ್ ಮತ್ತು ಮನಾತ್‌ಗಳನ್ನು ಹೀಯಾಳಿಸುವ ನಾಲಗೆಯನ್ನು ಹೊರಗೆಳೆದು ಕೊರಳಿಗೆ ಸುತ್ತಿ ಹಾಕಬೇಕಾದಷ್ಟು ದೊಡ್ಡ ಅಪರಾಧವಾಗಿದೆ ಅದು...

ಪುರುಷರಷ್ಟೇ ಅಲ್ಲ, ಕುರೈಶ್ ಮಹಿಳೆಯರೂ ಪ್ರವಾದಿವರ್ಯರನ್ನು(ಸ) ಮತ್ತವರ ಅನುಯಾಯಿಗಳನ್ನು ಪೀಡಿಸಲು ಟೊಂಕ ಕಟ್ಟಿದ್ದರು. ಅಜ್ಞಾನಜನ್ಯ ಕೋಮುವಾದವು ತನ್ನೆಲ್ಲ ಶಕ್ತಿಯೊಂದಿಗೆ ಪರಿಭ್ರಮಿಸುತ್ತಿತ್ತು. ಕುರೈಶ್ ಗೋತ್ರಜರು ಶತಶತಮಾನಗಳಿಂದ ಪರಸ್ಪರ ವೈರ ಕಟ್ಟಿಕೊಂಡು ಬಂದಿದ್ದರು. ಗೋತ್ರಗಳ ಮಧ್ಯೆ ದ್ವೇಷವು ಹಲವು ಪೀಳಿಗೆಗಳ ವರೆಗೆ ಮುಂದುವರಿಯುತ್ತಿತ್ತು. ಅವರ ಹೃದಯಗಳಲ್ಲಿ ಪ್ರತೀಕಾರಾಗ್ನಿ ಮತ್ತು ಹೊಟ್ಟೆ ಕಿಚ್ಚು ಹಲವು ವರ್ಷಗಳವರೆಗೆ ದಹಿಸುತ್ತಿದ್ದುವು. ಜನಾಂಗೀಯ ಒಗ್ಗಟ್ಟು ಬಹುಶಃ ಕುಸ್ಯೆಯವರ ಮರಣದೊಂದಿಗೇ ಅಸ್ತವ್ಯಸ್ತಗೊಂಡಿತ್ತು. ಆದರೆ ಇಸ್ಲಾಮ್ ದ್ವೇಷದಲ್ಲಿ ಅವರೆಲ್ಲ ತಮ್ಮ ವೈರ-ಪ್ರತೀಕಾರ ಭಾವನೆಗಳನ್ನು ಮರೆತು ಒಂದಾದರು. ಈ ಉದ್ದೇಶದಲ್ಲಿ ಅವರೆಲ್ಲ ಒಂದೇ ಅಭಿಪ್ರಾಯವನ್ನು ತಾಳಿದರು. ಅವರು ಜೂಜಾಟದಲ್ಲಿ ದಾಳ ಹಾಕು ವಾಗಲೂ ಪರಸ್ಪರ ಜಗಳಾಡುತ್ತಿದ್ದವರು... ಆಡು ಮೇಯಿಸುವಾಗಲೂ ಕುದುರೆ ಓಡಿಸು ವಾಗಲೂ ರಕ್ತ ಹರಿಸುವುದಕ್ಕೆ ನೆಪ ಹುಡುಕುತ್ತಿದ್ದವರು... ಕಾವ್ಯಗೋಷ್ಠಿಗಳಲ್ಲಿ ಕುಲ ಮಹಿಮೆಯು ರಕ್ತಪಾತದ ರೂಪ ಪಡೆಯುತ್ತಿತ್ತು... ಆದರೆ ಪ್ರವಾದಿ ಮುಹಮ್ಮದ್‌ರ(ಸ) ವಿರುದ್ಧ ಅವರೆಲ್ಲರೂ ಒಗ್ಗಟ್ಟಾಗಿದ್ದರು. ಅವರ ಪೈಕಿ ಪ್ರತಿಯೋರ್ವನೂ ಪ್ರವಾದಿ(ಸ) ಮತ್ತವರ ಸಂಗಾತಿಗಳನ್ನು ಸತಾಯಿಸುವಲ್ಲಿಅಬೂಜಹಲ್ ಮತ್ತು ಅಬೂಲಹಬ್‌ರನ್ನೂ ಮೀರಿಸಲು ಪ್ರಯತ್ನಿಸುತ್ತಿದ್ದರು.

ಯುವಕರು ತಮ್ಮ ಮನೆಗಳಲ್ಲಿ ಬಹಳ ಹೆಮ್ಮೆಯಿಂದ, ತನ್ನ ಅಂದಿನ ಸಾಧನೆ ಯನ್ನು ಹಾಡಿ ಹೊಗಳುತ್ತಿದ್ದರು- ಒಬ್ಬ ಹೇಳಿದ, "ಇಂದು ನಾನು ಇಂತಿಂತಹ ಖರ್ಜೂರ ತೋಟದಲ್ಲಿ ಇಂತಿಂತಹ ಮುಸ್ಲಿಮನನ್ನು ಮನಸೋ ಇಚ್ಛೆ ಹೊಡೆದೆ... ಅವನ ದೇಹವನ್ನಿಡೀ ರಕ್ತದಿಂದ ತೋಯಿಸಿದೆ..." ಇನ್ನೊಬ್ಬ ಹೇಳಿದ, "ಬನೂ ಹುದೈಲ್ ಕೇರಿಯಲ್ಲಿ ನಾನು ಓರ್ವ ಮುಸ್ಲಿಮನಿಗೆ ಅವಾಚ್ಯವಾಗಿ ಬೈದೆ. ಬಳಿಕ ಅವನ ಹಣೆಗೆ ಜೋರಾಗಿ ಕಲ್ಲನ್ನೆಸೆದೆ. ಆಗ ನಮ್ಮ ಆರಾಧ್ಯರುಗಳ ಆ ವೈರಿಯು ತಲೆ ತಿರುಗಿದ್ದು ನೋಡಬೇಕಿತ್ತು... ನಂತರ ಅವನನ್ನು ಒದ್ದೆ... ಎಷ್ಟರವರೆಗೆಂದರೆ ಆತ ಎಚ್ಚರ ತಪ್ಪಿ ಬಿದ್ದ!" ಓರ್ವ ಮಹಿಳೆ ತನ್ನ ಸಾಧನೆಯನ್ನು ಹೀಗೆ ಬಣ್ಣಿಸುತ್ತಿದ್ದಳು, "ನಾನು ಬನೂ ಹಾಶಿಮ್‌ರ ಮನೆಯೊಂದರೊಳಗೆ ಹೋದೆ... ಓರ್ವ ಮುಸ್ಲಿಮ್ ಮಹಿಳೆ ಮಾಂಸ ದಡುಗೆ ಮಾಡುತ್ತಿದ್ದಳು. ನಾನು ಆ ಪಾತ್ರೆಯಲ್ಲಿ ಬೂದಿಯನ್ನು ಸುರುವಿ ಬಂದೆ!" ಓರ್ವನಂತೂ ಇವೆಲ್ಲಕ್ಕಿಂತಲೂ ಹೆಚ್ಚಿನ ಸಾಧನೆಯನ್ನು ಮಾಡಿ ಬಂದಿದ್ದ. ಆತ ಹೇಳಿದ, "ನಾನು ಮುಹಮ್ಮದ್ ನಮಾಝ್ ಮಾಡು ವುದನ್ನು ಕಂಡೆ. ಸೀದಾ ಹೋಗಿ ಒಂಟೆಯ ಕರುಳನ್ನು ಅವರ ಕೊರಳಿಗೆ ಹಾಕಿ ಬಂದೆ!"

ಕುರೈಶ್ ಸತ್ಯನಿಷೇಧಿಗಳ ಹೃದಯವು ಮೊದಲೇ ಕಲ್ಲಿನಷ್ಟು ಕಠೋರ. ಇಸ್ಲಾಮ್

ದ್ವೇಷವು ಅದರ ಕಠೋರತೆಯಲ್ಲಿ ಇನ್ನಷ್ಟು ಹೆಚ್ಚಳವನ್ನೇ ಮಾಡಿತ್ತು. ಅವರಲ್ಲಿ ಸಭ್ಯತೆ, ಮಾನವೀಯತೆ ಮತ್ತು ನೈತಿಕತೆಯ ಲವಲೇಶವೂ ಉಳಿದಿರಲಿಲ್ಲ. ಅವರಲ್ಲಿ ಸತ್ಯವನ್ನು ಆಲಿಸುವಷ್ಟು ತಾಳ್ಮೆಯೂ ಇರಲಿಲ್ಲ. ನೋಡಿ ಪರಾಂಬರಿಸುವಷ್ಟು ವಿವೇಚನಾ ಶಕ್ತಿಯೂ ಇದ್ದಿರಲಿಲ್ಲ. ಆದರೆ ಅಂತಹವರ ನಡುವೆಯೂ ಸತ್ಯದ ಮುಂದೆ ನಿಲ್ಲುವ ಎಲ್ಲ ರೀತಿಯ ಮಿಥ್ಯಶಕ್ತಿಯನ್ನು ಎದುರಿಸುವ ಛಾತಿಯ ಕೆಲವು ಮಂದಿ ಸತ್ಯಪರರೂ ಇದ್ದರೆನ್ನಿ.

ಇಂತಹದೇ ಸಂಕೀರ್ಣ ಸಂದರ್ಭದಲ್ಲಿ ಅನಾಥಮುತ್ತು(ಸ) ತಮ್ಮ ಅನುಯಾಯಿಗಳೊಡನೆ ಹೇಳಿದರು, "ನೀವು ಅಬಿಸೀನಿಯಕ್ಕೆ ಹೋಗಿರಿ. ಅಲ್ಲಿನ ಅರಸ ನಿಮ್ಮೊಡನೆ ಸದ್ವರ್ತನೆ ತೋರುವನೆಂಬ ಭರವಸೆ ನನಗಿದೆ. ಆ ಪ್ರದೇಶದಲ್ಲಿ ನಿಮಗೆ ಸಮಾಧಾನದ ವಾತಾವರಣವು ದೊರೆಯಲಿದೆ." - ಹೀಗೆ ಸಹಾಬಿಗಳ ಒಂದು ಸಣ್ಣ ಯಾತ್ರಾ ತಂಡವು ಅಬಿಸೀನಿಯದೆಡೆ ಪಾದ ಬೆಳೆಸಿತು. ಇದು ಮುಸ್ಲಿಮರು, ಅಲ್ಲಾಹನ ಹಾದಿಯಲ್ಲಿ ಗೈದ ಪ್ರಥಮ ವಲಸೆ (ಹಿಜ್ರತ್) ಆಗಿದೆ. ಇದರ ಕಾರಣವಾಗಿಯೇ ದೇವ ಸಂದೇಶವು ಅರೇಬಿಯದಿಂದ ಹೊರ ನಾಡಿನಲ್ಲೂ ಪ್ರಚಾರ ಪಡೆಯಿತು.

ತಾಯ್ನಾಡಿನ ಪ್ರೀತಿಯು ಒಂದು ರೀತಿಯ ಆಕರ್ಷಣೆಯನ್ನು ಹೊಂದಿರುತ್ತದೆ. ಅಲ್ಲಿನ ಒಂದೊಂದು ಕಣದ ಮೇಲೂ ವ್ಯಕ್ತಿಗೆ ಅಪಾರ ಮಮತೆ ಇರುತ್ತದೆ. ಹುಟ್ಟೂರಿನ ಮುಳ್ಳು ಕೂಡ ಪರ ದೇಶದ ಪುಷ್ಪಕ್ಕಿಂತ ಹೆಚ್ಚು ಸಹ್ಯವಾಗಿರುತ್ತದೆ. ಆದರೆ ಸತ್ಯದ ಏಳಿಗೆ, ದೇವಾದೇಶ ಪಾಲನೆ ಮತ್ತು ಸತ್ಯದ ಪ್ರಚಾರ - ಪ್ರಸಾರದ ಹಾದಿಯಲ್ಲಿ ವಲಸೆಯೆಂಬ ಸಂಕೀರ್ಣ ಘಟ್ಟವೂ ಎದುರಾಗುತ್ತದೆ. ಆಗ ಹುಟ್ಟೂರಿನ ಪ್ರೀತಿಯ ಮುಂದೆ ಕರ್ತವ್ಯಕ್ಕೆ ಪ್ರಾಶಸ್ತ್ಯ ನೀಡಬೇಕಾಗುತ್ತದೆ. ಆಗೆಲ್ಲ ತಾಯ್ನಾಡಿನೊಂದಿಗಿನ ಹೃದ್ಯ ಸಂಬಂಧ ಮತ್ತು ಪ್ರೀತಿಯು ರಟ್ಟೆ ಹಿಡಿದು ನಿಲ್ಲಿಸಿ ಕೇಳುತ್ತದೆ, "ನಮ್ಮನ್ನು ಬಿಟ್ಟು ಎಲ್ಲಿ ಹೋಗುತ್ತಿದ್ದೀರಾ? ಪರದೇಶದಲ್ಲಿ ಯಾರು ನಿಮ್ಮನ್ನು ಸಾಂತ್ವನಪಡಿಸಲು ಬರುತ್ತಾರೆ? ಅಪರಿಚಿತ ವಾತಾವರಣವು ನಿಮಗೆ ಒಗ್ಗದಿರಲೂ ಬಹುದು. ಇಲ್ಲೇ ಇದ್ದು ಬಿಡಿ. ತವರ್ಮವರ ಬಯ್ಗುಳವೂ ಅನ್ಯರ ಪ್ರಾರ್ಥನೆ ಗಿಂತ ಅಪ್ಯಾಯಮಾನವಾಗಿರುತ್ತದೆ..." ಆದರೆ ದೇವ ಸಂದೇಶದ ವಕ್ತಾರರು, ಈ ಒಲುಮೆಯ ಒತ್ತಡಕ್ಕೆ ಮಣಿಯಲಾರರು. ಅವರು ಒಂದೇ ಬಾರಿಗೆ ಆ ಎಲ್ಲ ಸಂಬಂಧದ ಕೊಂಡಿಗಳನ್ನೂ ಕೊಡಹಿಬಿಡುತ್ತಾರೆ ಮತ್ತು ಅಲ್ಲಾಹನ ಹೆಸರೆತ್ತಿ ತಾಯ್ನಾಡಿನಿಂದ ಹೊರಡುತ್ತಾರೆ. ಆಗ ಅವರ ಆತ್ಮ ಸಾಕ್ಷಿಯು ಈ ರೀತಿ ಕೂಗಿ ಹೇಳುತ್ತದೆ,

"ಯಾವುದೇ ದೇಶಪ್ರೇಮಕ್ಕಿಂತಲೂ ದೇವಪ್ರೇಮವೇ ಮಿಗಿಲು."

ಈ ಅನುಗ್ರಹವು ಪ್ರತಿಯೊಬ್ಬರಿಗೂ ದಕ್ಕುವಂತಹದ್ದಲ್ಲ. ಬಹಳಷ್ಟು ಮಂದಿ ಕೇವಲ ತಮ್ಮ ಜೀವ-ಸೊತ್ತುಗಳ ರಕ್ಷಣೆಗಾಗಿ ಹುಟ್ಟೂರನ್ನು ತೊರೆಯುತ್ತಾರೆ. ಆದರೆ ಅದು ವಲಸೆಯೆಂದಾಗುವುದಿಲ್ಲ, ಬದಲಾಗಿ ಪಲಾಯನವಾಗಿ ಗಣಿಸಲ್ಪಡುತ್ತದೆ. ಹಿಜ್ರತ್ (ವಲಸೆ) ಅಂದರೆ ಇಸ್ಲಾಮಿನ ಏಳಿಗೆ ಮತ್ತು ರಕ್ಷಣೆಗಾಗಿ ದೇಶ ತೊರೆದು ದಾರಿದ್ರ್ಯ ಜೀವನವನ್ನು

ಅಂಗೀಕರಿಸುವುದಾಗಿದೆ. ಸಹಾಬಿಗಳು ಇದೇ ಉದ್ದೇಶದಿಂದ ವಲಸೆ ಹೋಗಿದ್ದಾರೆ...

❖ ❖ ❖ ❖

ಕೆಲವು ಮಂದಿ ಮುಸ್ಲಿಮರು ಸುರಕ್ಷಿತವಾಗಿ ಅಬಿಸೀನಿಯಕ್ಕೆ ತಲುಪಿದ್ದಾರೆ ಎಂದು ತಿಳಿದಾಗ, ಕುರೈಶರು ತಮ್ಮ ಒಂದು ನಿಯೋಗವನ್ನೂ ಅಬಿಸೀನಿಯಕ್ಕೆ ಕಳುಹಿಸಿದರು. ದ್ವೇಷ ಮತ್ತು ಉಪಟಳದ ಪರಾಕಾಷ್ಠೆ ನೋಡಿ! ಮುಸ್ಲಿಮರು ನಾಡು ತೊರೆದು ಹೋದ ಬಳಿಕವೂ ಕುರೈಶ್ ಸತ್ಯನಿಷೇಧಿಗಳಿಗೆ ಸಮಾಧಾನವೆಂಬುದು ಇರಲಿಲ್ಲ. ಮಕ್ಕಾನಗರ ದಂತೆಯೇ ಅಬಿಸೀನಿಯದ ನೆಲವನ್ನೂ ಮುಸ್ಲಿಮರ ಪಾಲಿಗೆ ಸಂಕಷ್ಟಮಯಗೊಳಿಸಬೇಕು, ಆ ಸತ್ಯವಾದಿಗಳಿಗೆ ಜಗತ್ತಿನ ಯಾವ ಮೂಲೆಯಲ್ಲೂ ಸಮಾಧಾನವಿರಕೂಡದು, ನೆಮ್ಮದಿಯ ಎಲ್ಲ ಹಾದಿಗಳೂ ಅವರ ಪಾಲಿಗೆ ಮುಚ್ಚಿ ಹೋಗಬೇಕು ಎಂದು ಕುರೈಶರು ಬಯಸಿದ್ದರು.

ಕುರೈಶ್ ಸತ್ಯನಿಷೇಧಿಗಳು ಬಹಳ ಚಾಲಾಕಿ ಜನರು. ಕುತಂತ್ರ, ಮೋಸದಲ್ಲಿ ಅವರದು ಎತ್ತಿದ ಕೈ. ಅದು ರಾಜ-ಮಹಾರಾಜರುಗಳ ನಿರಂಕುಶಾಧಿಪತ್ಯದ ಕಾಲಘಟ್ಟ ವಾಗಿತ್ತು. ಒಂದು ವೇಳೆ ಅಬಿಸೀನಿಯದ ರಾಜ ಮುಸ್ಲಿಮರಿಂದ ಮುಖ ತಿರುಗಿಸಿ ಬಿಟ್ಟರೆ, ಬೇರೆ ಯಾವುದೇ ಶಕ್ತಿಯಿಂದಲೂ ಮುಸ್ಲಿಮರಿಗೆ ಅಲ್ಲಿ ಆಶ್ರಯ ನೀಡಲಾಗದು ಮತ್ತು ಅಲ್ಲಿಂದ ಮುಸ್ಲಿಮರನ್ನು ಓಡಿಸಿ ಬಿಡಲಾಗುವುದು ಎಂದು ಕುರೈಶರು ಚೆನ್ನಾಗಿ ತಿಳಿದಿದ್ದರು. ಅದೇ ವೇಳೆ ರಾಜನ ಮೇಲೆ ಈ ನಿಟ್ಟಿನಲ್ಲಿ ಪ್ರಭಾವ ಬೀರುವುದೂ ಅಷ್ಟು ಸುಲಭ ವಿರಲಿಲ್ಲ. ಅದಕ್ಕಾಗಿ ಕುರೈಶರು ವೇದಿಕೆ ಸಜ್ಜುಗೊಳಿಸತೊಡಗಿದರು. ಅವರು ಮೊದಲು ರಾಜನ ಆಸ್ಥಾನಿಕರು ಮತ್ತು ಒಡನಾಡಿಗಳನ್ನು ಸಂಧಿಸಿದರು. ಅವರನ್ನು ಎಲ್ಲ ರೀತಿ ಯಿಂದಲೂ ಮನವೊಲಿಸಿದರು ಮತ್ತು ಸಹಾಬಿಗಳ ವಿರುದ್ಧ ಅವರ ಕಿವಿಯೂದಿದರು, "ಈ ಜನ ಒಂದು ಹೊಸ ಧರ್ಮವನ್ನು ಹೊತ್ತು ನಿಮ್ಮ ನಾಡಿಗೆ ಬಂದಿದ್ದಾರೆ. ಇವರು ನಮ್ಮ ಯುವಕರನ್ನು ಪುಸಲಾಯಿಸಿ ತಪ್ಪುದಾರಿಗೆಳೆದಿದ್ದಾರೆ. ಇವರ ಪ್ರಭಾವವು ನಿಮ್ಮ ಜನರ ಮೇಲೆ ಎಲ್ಲಾದರೂ ಆದೀತೇ ಎಂಬುದರ ಬಗ್ಗೆ ಜಾಗರೂಕತೆ ವಹಿಸಿರಿ. ಇವರು ಹೇಳುವ ಇಸ್ಲಾಮ್ ಧರ್ಮವು ಕ್ರೈಸ್ತ ಧರ್ಮಕ್ಕೂ ವಿರುದ್ಧವಾಗಿದೆ. ಈ ಜನರಾದರೋ ಏಕದೇವತ್ವದ ಅಮಲಿನಲ್ಲಿ ತೇಲಾಡುತ್ತಿದ್ದಾರೆ. ಅಲ್ಲಾಹ್ ಒಬ್ಬನೇ ಎಂಬುದು ಇವರ ನಿತ್ಯದ ವರಾತ. ನಮ್ಮ ಆರಾಧ್ಯರುಗಳನ್ನೂ ಅವರು ಅವಹೇಳನ ಮಾಡುತ್ತಾರೆ. ಅಂತೆಯೇ ಯೇಸು ಮಸೀಹರು ದೇವ ಪುತ್ರರೆಂಬ ವಾದವನ್ನೂ ಅವರು ನಿರಾಕರಿಸುತ್ತಾರೆ. ಒಂದು ವೇಳೆ ಮುಸ್ಲಿಮರಿಗೆ ಅಬಿಸೀನಿಯದಲ್ಲಿ ಕಾಲೂರಲು ಅವಕಾಶ ದೊರೆತರೆ, ಸ್ವಯಂ ಕ್ರೈಸ್ತ ಯುವಕರು ಕನ್ಯಾ ಮರ್ಯಮ್‌ರ ವಿಗ್ರಹ, ಪವಿತ್ರಾಲಯ ಮತ್ತು ಶಿಲುಬೆಗಳನ್ನು ಸ್ವಂತ ಕೈಗಳಿಂದಲೇ ಒಡೆದು ಹಾಕುವ ದಿನ ದೂರವಿರದು. ಇಗರ್ಜಿಗಳಲ್ಲಿ ಧೂಳು ತುಂಬಿ ಹೋಗುವುದನ್ನು ನೀವು ಕಾಣುವಿರಿ. ಇನ್ನು ನಿಮ್ಮ ಧರ್ಮದ ಸುರಕ್ಷತೆ ಮತ್ತು ಏಳಿಗೆ ಯನ್ನು ಬಯಸುವಿರಾದರೆ, ಈ ಜನರನ್ನು ಹೇಗಾದರೂ ಸರಿ, ನಮ್ಮ ವಶಕ್ಕೊಪ್ಪಿಸಿ ಬಿಡಿ. ನಾವು ಅವರನ್ನು

ನೋಡಿಕೊಳ್ಳುವೆವು."

ಆಸ್ಥಾನಿಕರು ಹೇಳಿದರು, "ನೀವೇನೂ ಚಿಂತಿಸಬೇಕಾಗಿಲ್ಲ. ರಾಜದರಬಾರಿನಲ್ಲಿ ನಾವು ನಿಮಗೆ ಸಂಪೂರ್ಣ ಸಹಕಾರ ನೀಡುವೆವು. ನಮ್ಮನ್ನು ನಿಮ್ಮ ಸಹಚಿಂತಕರೆಂದೂ ಮಿತ್ರರೆಂದೂ ಹಿತಚಿಂತಕರೆಂದೂ ಭಾವಿಸಿರಿ. ನಾವು ನಿಮ್ಮ ಮಾತುಗಳನ್ನು ಪುಷ್ಟೀಕರಿಸಲು ಸಾಧ್ಯಂತ ಪ್ರಯತ್ನಿಸುತ್ತೇವೆ." ಕುರೈಶ್ ಸತ್ಯನಿಷೇಧಿಗಳಿಗೆ ಆ ಮಂದಿಯಿಂದ ಸಹಕಾರ ಖಾತರಿಯಾದ ಬಳಿಕ ರಾಜನ ದಾರಬಾರಿನಲ್ಲಿ ಹೋಗಿ ಫಿರ್ಯಾದಿ ಸಲ್ಲಿಸಿದರು, "ಮಹಾರಾಜಾ! ಈ ಜನ (ಸಹಾಬಿಗಳು) ನಮ್ಮ ಕೈದಿಗಳು. ನಮ್ಮಲ್ಲಿಂದ ಓಡಿ ಬಂದು ನಿಮ್ಮ ನಾಡಿನಲ್ಲಿ ಆಶ್ರಯ ಪಡೆದಿದ್ದಾರೆ. ಇವರನ್ನು ನಮ್ಮ ವಶಕ್ಕೆ ಒಪ್ಪಿಸಿರಿ."

ಅಬಿಸೀನಿಯದ ರಾಜ ನಜ್ಜಾಶಿ ಘನಗಾಂಭೀರ್ಯದೊಂದಿಗೆ ಪೀಠದಲ್ಲಿ ಆಸೀನ ರಾಗಿದ್ದರು. ಅದು ರಾಜ ದರಬಾರು ಅನ್ನುವುದಕ್ಕಿಂತ ಭೂಮಿಯ ಸ್ವರ್ಗ ಅನ್ನುವಂತಿತ್ತು. ಚಿನ್ನದ ನೂಲಿನಿಂದ ನೇಯ್ದ ಪರದೆಗಳು, ಬೆಲೆಬಾಳುವ ರತ್ನಗಂಬಳಿ, ಕಣ್ಣು ಕೋರೈಸುವಂತಹ ಪೀಠೋಪಕರಣಗಳು, ವಿವಿಧ ನಮೂನೆಯ ಶಿಲುಬೆಗಳು, ಚಿನ್ನ-ಬೆಳ್ಳಿಯ ಹೂಕುಂಡಗಳು, ರಾಜ ಪೋಷಾಕೇನು? ದ್ವಾರ ಪಾಲಕ, ಡಂಗುರ ಹೊಡೆಯುವವ, ಸೇವಕರು, ಗುಲಾಮರು ಎಲ್ಲರೂ ಮಿರಮಿರ ಮಿರುಗುವ ಸಮವಸ್ತ್ರ ಧರಿಸಿದ್ದರು. ಕುರೈಶರು ಮುಸ್ಲಿಮರ ವಿರುದ್ಧ ಸಲ್ಲಿಸಿದ ಮನವಿಗೆ ಆಸ್ಥಾನಿಕರು ಅಹುದಹುದೆಂದು ತಲೆಯಲ್ಲಾಡಿಸಿದರು. ರಾಜನ ಪ್ರತಾಪದೆದುರು ಅವರಾರೂ ಬಾಯಿ ತೆರೆದು ಏನನ್ನೂ ಹೇಳಲಿಲ್ಲವಾದರೂ ಕುರೈಶ್ ಸರದಾರರು ಸತ್ಯ ಹೇಳುತ್ತಿದ್ದಾರೆಂದು ಅವರ ಮುಖಭಾವದಿಂದಲೇ ತಿಳಿಯುವಂತಿತ್ತು. ಈ ಮುಸ್ಲಿಮರು ನಿಜವಾಗಿಯೂ ಸರದಾರರು ಹೇಳುವಂತೆ ಕೈದಿಗಳಾಗಿದ್ದು, ಇಲ್ಲಿಗೆ ಪಲಾಯನ ಮಾಡಿ ಬಂದಿದ್ದಾರೆ... ಅನ್ಯ ದೇಶದ ಕೈದಿಗಳಿಗೆ ಅಬಿಸೀನಿಯದಲ್ಲಿ ಆಶ್ರಯ ನೀಡುವುದು ತರವಲ್ಲ... ಅನ್ಯಥಾ ಅಬಿಸೀನಿಯನ್ ಆಡಳಿತದ ಮೇಲೆ ಅಪವಾದವುಂಟಾದೀತು... ಅಬಿಸೀನಿಯವು ದೇಶದ್ರೋಹಿಗಳಿಗೆ, ದರೋಡೆಕೋರರಿಗೆ ಮತ್ತು ಪರಾರಿಯಾದ ಕೈದಿಗಳಿಗೆ ಆಶ್ರಯ ನೀಡುತ್ತಿದೆಯೆಂದು ಜನರಾಡಿಕೊಳ್ಳುವರು ಎಂಬಂತಹ ಮಾತುಗಳು ಆಸ್ಥಾನಿಗರು ತಲೆಯಲ್ಲಾಡಿಸುವುದರಲ್ಲಿ ಅಡಕವಾಗಿದ್ದುವು.

ನಜ್ಜಾಶಿಯು ಕುರೈಶ್ ನಿಯೋಗದೊಡನೆ ಕೆಲವು ಪ್ರಶ್ನೆಗಳನ್ನು ಕೇಳಿದರು. ತರುವಾಯ ಮುಸ್ಲಿಮರೆಡೆಗೆ ಪ್ರಶ್ನಾರ್ಥಕ ದೃಷ್ಟಿ ಬೀರಿದರು, "ನೀವೇನಂತೀರಿ? ಇವರು ಹೊರಿಸಿರುವ ಆರೋಪಗಳಿಗೆ ನಿಮ್ಮಲ್ಲೇನು ಉತ್ತರವಿದೆ?" ಸಹಾಬಿಗಳ ವತಿಯಿಂದ ಹ. ಜಅ್‌ಫರ್ ತಯ್ಯಾರ್(ರ) ಎದ್ದು ನಿಂತು ಬಹಳ ಮನಮುಟ್ಟುವ ಶೈಲಿಯಲ್ಲಿ ಒಂದು ಭಾಷಣ ಮಾಡಿದರು. ಅರೇಬಿಯದ ಅಜ್ಞಾನದ ಬಗ್ಗೆ ಸಂಕ್ಷಿಪ್ತವಾಗಿ ವಿಮರ್ಶಿಸಿದರು. ಪ್ರವಾದಿ ವರ್ಯರ(ಸ) ಶಿಕ್ಷಣದ ಕುರಿತು ಬೆಳಕು ಚೆಲ್ಲಿದರು. ಜಅ್‌ಫರ್(ರ) ಅದಕ್ಕೆ ಮುಂಚೆ ಯಾವೊಬ್ಬ ರಾಜನ ಮುಂದೆ ಮಾತನಾಡಿದ್ದಿಲ್ಲ. ಇದು ಅವರ ಚೊಚ್ಚಲ ಅವಕಾಶವಾಗಿತ್ತು. ಆದರೆ ಅವರು

ರಾಜನ ಆಸ್ಥಾನದಲ್ಲಿ ಮಾತನಾಡಲು ಯಾವೊಂದು ರೀತಿಯ ಅಳುಕನ್ನೂ ಅನುಭವಿಸಲಿಲ್ಲ. ದೇವನ ನೈಜ ದಾಸ ಮತ್ತು ಪ್ರವಾದಿವರ್ಯರ(ರ) ಅನುಸರಣಾಶೀಲ ಅನುಯಾಯಿ ರಾಜ ದರಬಾರಿನಲ್ಲಿ ಅತ್ಯಂತ ಧೀಮಂತಿಕೆಯಿಂದ ಆದರೆ ಅಚ್ಚುಕಟ್ಟಾಗಿ ತನ್ನ ಉದ್ದೇಶವನ್ನು ಅರುಹುತ್ತಲಿದ್ದಾರೆ...

ಒಂದೇ ದೀಪದ ಎರಡು ಬತ್ತಿಗಳು

ಹ. ಜಲ್‌ಫರ್‌ರ(ರ) ಭಾಷಣದಲ್ಲಿ ನಿಷ್ಕಳಂಕತೆಯಿತ್ತು, ಸರಳತೆಯಿತ್ತು. ಎಲ್ಲಕ್ಕಿಂತಲೂ ಮಿಗಿಲಾಗಿ ಧೀಮಂತಿಕೆ ಮತ್ತು ಮಹತ್ವಾಕಾಂಕ್ಷೆಯಿತ್ತು. ಸುತ್ತಿ ಬಳಸಿ ಮಾತನಾಡಲು ಅವರಿಗೆ ಬರುವುದಿಲ್ಲ. ಸುಸ್ಪಷ್ಟ ಸಾಕ್ಷ್ಯಾಧಾರಗಳು, ನೇರ ನುಡಿಗಳು. ಆಸ್ಥಾನದಲ್ಲಿ ಗಾಢ ಮೌನ ಆವರಿಸಿತು. ಖುರೈಶರು ತಮ್ಮ ಯೋಜನೆ ಖಂಡಿತ ಫಲಿಸುತ್ತದೆ ಎಂಬ ಭಾವನೆಯಲ್ಲಿದ್ದರು. ಈ ಮುಸ್ಲಿಮರು ನಮ್ಮ ಆರೋಪಗಳಿಗೆ ಯಾವ ಉತ್ತರ ನೀಡಬಲ್ಲರು? ನಮ್ಮ ತಂತ್ರಗಳು ಎಂದಿಗೂ ವಿಫಲವಾಗಲಾರದು. ಅದೂ ಅಲ್ಲದೆ, ರಾಜನ ಆಸ್ಥಾನಿಕರೂ ನಮ್ಮ ಪರವಾಗಿದ್ದಾರಲ್ಲ... ಈ ರಂಗವು ನಮ್ಮ ನಿಯಂತ್ರಣದಲ್ಲಿಯೇ ಇದೆ... ಎಂಬಿತ್ಯಾದಿಯಾಗಿ ಹಗಲುಗನಸು ಕಾಣುತ್ತಿದ್ದರು.

ಆದರೆ ಹ.ಜಲ್‌ಫರ್‌ರ(ರ) ಭಾಷಣವು ಖುರೈಶರ ಎಲ್ಲ ಯೋಜನೆಗಳನ್ನೂ ಮಣ್ಣುಗೂಡಿಸಿತು. ನಜ್ಜಾಶಿಯು ಅವರ ಭಾಷಣದಿಂದ ಪ್ರಭಾವಿತರಾಗುತ್ತಿದ್ದಾರೆ ಎಂದು ಅವರಿಗೆ ಭಾಸವಾಗತೊಡಗಿತು... ಜಲ್‌ಫರ್‌ರ(ರ) ಮಾತುಗಳಲ್ಲಿ ಅಂತಹ ಪ್ರಭಾವವಿತ್ತು... ಅಳೆದೂ ತೂಗಿ ಆಡಿದ ಮಾತುಗಳು ಅಬಿಸೀನಿಯದ ರಾಜ ನಜ್ಜಾಶಿಯ ಹೃದಯಾಳದಲ್ಲಿ ಇಳಿಯತೊಡಗಿದ್ದುವು... ಅವರು ಬಹಳ ಆಸಕ್ತಿಯಿಂದ ಜಲ್‌ಫರ್‌ರ(ರ) ಮಾತುಗಳನ್ನು ಆಲಿಸುತ್ತಿದ್ದರು.

ಅದೇ ವೇಳೆ, ಹ. ಈಸಾರ(ಅ) ಪ್ರಸ್ತಾಪವನ್ನೆತ್ತಲಾಯಿತು. ಆಗ ಜಲ್‌ಫರ್(ರ) ಪವಿತ್ರ ಕುರ್‌ಆನಿನ ವಚನಗಳ ಆಧಾರದಲ್ಲಿ ಉತ್ತರಿಸಿದರು...

ದೇವವಾಣಿಯು ಜಲ್‌ಫರ್‌ರ(ರ) ಮಾತಿನ ಮೂಲಕ ಹೊರಡುತ್ತಿತ್ತು...

ಮುಹಮ್ಮದ್‌ರ(ಸ) ಸಂದೇಶವು ಸಭಿಕರನ್ನು ಪ್ರಭಾವಿತಗೊಳಿಸುತ್ತಿತ್ತು...

ಜಲ್‌ಫರ್(ರ) ಪಠಿಸಿದ ಪವಿತ್ರ ಕುರ್‌ಆನ್‌ನ ವಚನಗಳು ಅಲ್ಲಾಹನ ಪ್ರಭುತ್ವ ಹಾಗೂ ಮರ್ಯಮರ ಪುತ್ರ ಈಸಾರ(ಅ) ದೇವ ದಾಸ್ಯತ್ವವನ್ನು ಸಾರಿ ಹೇಳುತ್ತಿದ್ದುವು. ಇದರಿಂದಾಗಿ ಕ್ರೈಸ್ತರಲ್ಲಿರುವ ತ್ರಿಏಕತ್ವದ ಕಲ್ಪನೆಯನ್ನು ನಿರಾಕರಿಸಿದಂದಾಗುತ್ತದೆ... ಆಗ ರಾಜ ನಜ್ಜಾಶಿಯು ತನ್ನ ಧರ್ಮದ ಅವಹೇಳನವನ್ನು ಸಹಿಸದೆ ಇಲ್ಲಿರುವ ಮುಸ್ಲಿಮರನ್ನು ಒಂದೋ ವಧಿಸುವರು ಅಥವಾ ಬಂಧಿಸುವರು ಅಥವಾ ಕನಿಷ್ಠ ಈ ಆಸ್ಥಾನದಿಂದ ಹೊರದಬ್ಬುವರು. ಮುಸ್ಲಿಮರು ಸ್ವಯಂ ತಮ್ಮ ಬಂಧನಕ್ಕೆ ಕಾರಣಕರ್ತರಾಗುತ್ತಿದ್ದಾರೆ. ಅವರ 'ಸದ್ಗುಣ'ಗಳೆಲ್ಲವೂ ಈಗ

ಮಣ್ಣುಗೂಡಲಿದೆ ಎಂದೆಲ್ಲ ಕುರೈಶರು ಭಾವಿಸಿ ಸಂತೋಷಪಟ್ಟರು.

ಜತೆಗೆ ರಾಜನ ಆಸ್ಥಾನಿಕರೂ ಇನ್ನು ಮುಸ್ಲಿಮರನ್ನು ರಾಜನ ಪ್ರಕೋಪದಿಂದ ಯಾರೂ ರಕ್ಷಿಸಲಾರರು ಎಂದು ಭಾವಿಸುತ್ತಾ ಒಳಗೊಳಗೇ ನಗುತ್ತಿದ್ದರು. ಕ್ರೈಸ್ತ ಧರ್ಮವು ಯಾವ ಆಧಾರದಲ್ಲಿ ಸ್ಥಾಪಿತಗೊಂಡಿದೆಯೋ ಅದರ ಮೇಲೆಯೇ ಕುರ್‌ಆನಿನ ವಚನಗಳು ಬಲವಾದ ಪೆಟ್ಟನ್ನು ನೀಡುತ್ತಿದೆ. ಈ ಅವಮಾನವನ್ನು ನಜ್ಜಾಶಿ ಹೇಗೆ ತಾನೇ ಸಹಿಸಬಲ್ಲರು... ರಾಜನ ಬಳಿ ಅಧಿಕಾರವಿದೆ... ನಿರಂಕುಶ ಪ್ರಭುತ್ವವಿದೆ... ನೇಣುಗಂಬ ಮತ್ತು ಕಾರಾಗೃಹದ ಗಾಢಾಂಧಕಾರಮಯ ಕೋಣೆಗಳಿವೆ... ಈ ಬೆರಳೆಣಿಕೆಯ ಮುಸ್ಲಿಮರನ್ನು ಬೆಂಬಲಿಸುವವರೂ ಇಲ್ಲಿಲ್ಲವಲ್ಲ... ಒಂದೇ ಒಂದು ನಾಲಗೆಯೂ ಅವರ ಪರ ವಾದಿಸಲು ಚಲಿಸುತ್ತಿಲ್ಲ... ಸ್ವಯಂ ಅವರ ನಾಡಿನ ಜನರೇ ಅವರ ವೈರಿಗಳಾಗಿ ಬಂದು ನಿಂತಿದ್ದಾರೆ... ಇಂತಹ ನಿರಾಶ್ರಿತ ಪರದೇಸಿಗಳನ್ನು ಅಳಿಸಿ ಹಾಕುವುದೇನು ಮಹಾ ಕೆಲಸವೇ? ಈಗ ನಮ್ಮ ಪ್ರಭು, ರಾಜಾಧಿರಾಜ ಸಹನೆಯೊಂದಿಗೆ ವ್ಯವಹರಿಸುತ್ತಿದ್ದಾರೆ... ಆದರೆ ಅವರು ರೋಷಾಕುಲರಾಗಿ ಬಿಟ್ಟರೆ, ಅನಾಹುತವಾದೀತು... ಕಟುಕರ ಖಡ್ಗಗಳು ರಾಜನ ಒಂದು ಆದೇಶಕ್ಕಾಗಿ ಕಾದು ನಿಂತಿವೆಯಷ್ಟೇ...

ಪ್ರತಿಯೋರ್ವರದೂ ಅವರವರದೇ ವಿಧಿ ಮತ್ತು ಅನುಗ್ರಹಗಳು... ಮಳೆಯ ನೀರು ಗಟ್ಟಿಯಾದ ಬಂಜರು ನೆಲದಲ್ಲೂ ಫಲವತ್ತಾದ ಜಮೀನಿನಲ್ಲೂ ಏಕಪ್ರಕಾರವಾಗಿಯೇ ಸುರಿಯುತ್ತದೆ. ಆದರೆ ಬಂಡೆಗೆ ಹೀರಲಾಗದ ನೀರನ್ನು ಫಲವತ್ತಾದ ಮಣ್ಣು ಹೀರಿದರೆ ಅದು ಬಂಡೆಯ ದುರದೃಷ್ಟವೋ ಅಥವಾ ಜಮೀನಿನ ಅದೃಷ್ಟವೋ...

ಒಟ್ಟಿನಲ್ಲಿ ಪ್ರಕೃತಿಯ ಅನುಗ್ರಹ ಮತ್ತು ಸಮೃದ್ಧಿಯಿಂದ ಪ್ರಯೋಜನ ಪಡೆಯಲು ಸ್ವಾಭಾವಿಕ ಗುಣ-ಸಾಮರ್ಥ್ಯಗಳ ಅಗತ್ಯ ಬಹಳ ಕಡಿಮೆಯೆನ್ನಬೇಕು. ಇದೇ ಕಾರಣವಾಗಿ ಅಬೂಜಹಲ್ ಮತ್ತು ಅಬೂಲಹಬ್‌ರಿಗೆ ಸ್ವಯಂ ದೇವಸಂದೇಶವಾಹಕರ ಬಾಯಿಯಿಂದಲೇ ಕುರ್‌ಆನ್ ವಚನಗಳನ್ನು ಕೇಳಿಯೂ ಸತ್ಯ ಸ್ವೀಕರಿಸುವ ಸೌಭಾಗ್ಯ ದೊರೆಯಲಿಲ್ಲ. ಆದರೆ ಅಬಿಸೀನಿಯದ ರಾಜ ನಜ್ಜಾಶಿಯು ಪ್ರವಾದಿವರ್ಯರ(ಸ) ಅನುಯಾಯಿಯ ಬಾಯಿಯಿಂದ ಕೆಲವೇ ಕುರ್‌ಆನ್ ವಚನಗಳನ್ನು ಕೇಳಿ ಸತ್ಯ ಸ್ವೀಕರಿಸುವಂತಹ ಸೌಭಾಗ್ಯ ವನ್ನು ಪಡೆದು ಕೊಂಡರು. ಅವರ ಸ್ವಾಭಾವಿಕ ಸಾಮರ್ಥ್ಯವು ಅದುವರೆಗೂ ಭ್ರಾಮಕ ವಿಶ್ವಾಸಗಳ ಭಾರ ದಿಂದ ಹತ್ತಿಕ್ಕಲ್ಪಟ್ಟಿತ್ತು. ಅದೀಗ ಒಮ್ಮೆಲೇ ತನ್ನೆಲ್ಲಾ ಪ್ರತಾಪದೊಂದಿಗೆ ಎಚ್ಚೆತ್ತುಕೊಂಡಿತು. ಅಷ್ಟಕ್ಕೇ ಕಣ್ಣ ಮುಂದಿನ ಅಜ್ಞಾನದ ಪರದೆಗಳು ತನ್ನಿಂತಾನೇ ಚಿಂದಿ ಚಿಂದಿಯಾಗಿ ಬಿಟ್ಟವು... ನಜ್ಜಾಶಿಯ ಹೃದಯವು ಅದಾಗಿಯೇ ಆರ್ದ್ರವಾಯಿತು... ಯಾವುದೋ ಅದೃಶ್ಯ ಶಕ್ತಿಯು ತನ್ನ ಚಿಟಿಕೆಯಲ್ಲಿ ಅವರ ಹೃದಯವನ್ನು ಒತ್ತಿ ಮೆತ್ತಗಾಗಿಸಿ ದಂತೆ ಅವರ ಹೃದಯದಲ್ಲಿದ್ದ ಕಾಠಿಣ್ಯವು ಸಂಪೂರ್ಣವಾಗಿ ಅಳಿದು ಹೋಯಿತು. ಕುರ್‌ಆನಿನ ವಚನಗಳು ಕೀಲಿಕೈಯಾಗಿ ಪರಿವರ್ತನೆಗೊಂಡು ಅವರ ಹೃದಯದ ಬೀಗವನ್ನು ಕಣ್ಣು ಮಿಟುಕಿಸುವುದರೊಳಗೆ ತೆರೆದು

ಬಿಟ್ಟವು. ಬೀಗ ತೆರೆಯುವುದೊಂದೇ ತಡ, ವಾಸ್ತವಿ ಕಾಂಶಗಳೆಲ್ಲವೂ ಪ್ರಕಟವಾಗಿಬಿಟ್ಟವು... ಕುರ್‌ಆನ್ ವಚನಗಳನ್ನು ಆಲಿಸಿದ ನಜ್ಜಾಶಿಯ ಕಂಗಳಲ್ಲಿ ಹನಿಗಳುದುರಿದುವು... ಆಸ್ಥಾನಿಕರು ಮತ್ತು ಸ್ವಯಂ ಕುರೈಶ್ ನಿಯೋಗದ ಮಂದಿ ಆಶ್ಚರ್ಯಚಕಿತರಾಗಿ ಬಿಟ್ಟರು... ಕೋಪಾಗ್ನಿಯ ಕಿಡಿಗಳು ಸಿಡಿಯಬೇಕಿದ್ದ ಕಣ್ಣುಗಳಲ್ಲಿ ಕಂಬನಿಯ ಹನಿಗಳುದುರುತ್ತಿರುವುದೇ? ಹ. ಜಅ್‌ಫರ್(ರ) ಪವಿತ್ರ ಕುರ್‌ಆನಿನ ವಚನಗಳನ್ನು ಪಠಿಸಿಯಾದ ಬಳಿಕ ನಜ್ಜಾಶಿಯು ತನಗರಿವಿಲ್ಲದಂತೆಯೇ ಹೇಳಿದರು,

"ಈ ವಾಣಿ ಮತ್ತು ಇಂಜೀಲ್ ಒಂದೇ ದೀಪದ ಬತ್ತಿಗಳಂತಿವೆ!"

ಆಸ್ಥಾನಿಕರು ಮತ್ತು ಕುರೈಶ್ ರಾಯಭಾರಿಗಳು ಈ ಮಾತುಗಳನ್ನು ನಂಬಲಾಗದೆ ಗರಬಡಿದಂತಾಗಿ ಬಿಟ್ಟರು. ಅವರ ನಿರೀಕ್ಷೆಗಳೆಲ್ಲವೂ ಹುಸಿಯಾದುವು. ಮನಸ್ಸಿಗೇ ಮಂಜು ಕವಿದಂತಾಯಿತು. ಅವರು ಯೋಜಿಸಿ ಬಂದದ್ದೇನು? ಆದರೆ ಇಲ್ಲಿ ನಡೆದುದೇನು? ಮಕ್ಕಾದ ಕುರೈಶರು ತಮ್ಮ ನಿಯೋಗವು ಮುಸ್ಲಿಮರನ್ನು ಬಂಧಿಸಿ ಕರೆತರುವರೆಂದು ಪ್ರತೀಕ್ಷಿಸು ತ್ತಿದ್ದರು. ಅವರು ಮನಸೋ ಇಚ್ಛೆ ಆ ಬಡಪಾಯಿಗಳ ಮೇಲೆ ದೌರ್ಜನ್ಯವೆಸಗುವ ಸನ್ನಾಹ ದಲ್ಲಿದ್ದರು. ಇತರ ಮುಸ್ಲಿಮರು ತಮ್ಮ ಬಂಧುಗಳ ಅವಸ್ಥೆ ನೋಡಿ ಪಾಠ ಕಲಿಯು ವಂತಾಗಬೇಕು... ಕುರೈಶರು ಬಯಸಿದ್ದನ್ನು ಮಾಡಿಯೇ ತೀರುತ್ತಾರೆ, ನಮ್ಮ ಜನಜೀವದ ರಕ್ಷಣೆಗಾಗಿ ನಾಡು ತೊರೆದು ಹೋದರೂ ಇವರು ಬೆಂಬಿಡದೆ ಬಂಧಿಸುತ್ತಾರೆ, ಪರವೂರಿನ ರಾಜಂದಿರೂ ಇವರಿಂದ ಪ್ರಭಾವಿತರಾಗುತ್ತಾರೆ, ಇಂತಹವರೊಡನೆ ವೈರಕಟ್ಟಿಕೊಂಡರೆ ನಾವು ಎಂದಿಗೂ ಸಫಲರಾಗಲಾರೆವು ಎಂದೆಲ್ಲ ಮುಸ್ಲಿಮರು ಭೀತಿಗೊಳಗಾಗಬೇಕೆಂದು ಮಕ್ಕಾದ ಕುರೈಶ್ ಸರದಾರರು ಭಾವಿಸಿದ್ದರು.

ಆದರೆ ಅವರ ನಿಯೋಗವು ಅಬಿಸೀನಿಯದಿಂದ ಮಕ್ಕಾಗೆ ಮರಳಿ ಬಂದು ನಡೆದ ಘಟನೆಯನ್ನೆಲ್ಲ ಸರದಾರರ ಮುಂದೆ ಅರುಹಿದಾಗ, ಅವರ ಆಕಾಂಕ್ಷೆಗಳ ಗಾಳಿಗೋಪುರ ವೆಲ್ಲವೂ ನೀರಮೇಲಣ ಗುಳ್ಳೆಯಂತೆ ಒಡೆದು ಹೇಳಹೆಸರಿಲ್ಲದಾಗಿ ಹೋದವು. ನಿಯೋಗದ ಮಂದಿ ಹೇಳಿದರು, "ಸಹೋದರರರೇ! ನಾವು ನಮ್ಮ ಪ್ರಯತ್ನದಲ್ಲಿ ಎಳ್ಳಷ್ಟೂ ಕೊರತೆಯ ನ್ನುಂಟು ಮಾಡಿಲ್ಲ. ರಾಜನ ಆಸ್ಥಾನಿಕರನ್ನೂ ನಮ್ಮೊಡನೆ ಸೇರಿಸಿದ್ದೆವು. ಆದರೇನು ಮಾಡುವುದು, ಜಅ್‌ಫರ್‌ರ(ರ) ಭಾಷಣ ಮತ್ತು ಕುರ್‌ಆನ್ ವಚನಗಳು ರಾಜನನ್ನು ಎಷ್ಟು ಪ್ರಭಾವಿತಗೊಳಿಸಿತ್ತೆಂದರೆ, ಆತ ತುಂಬಿದ ಸಭೆಯಲ್ಲೇ ಗಳಗಳನೇ ಅತ್ತುಬಿಟ್ಟ. ಸಹೋದರರರೇ! ಈ ಜನರು ಮಾಟಗಾರರೋ ಏನೋ! ಇವರು ಜಗತ್ತಿನ ಯಾವ ಮೂಲೆಗೆ ಹೋದರೂ ಜನರು ಇವರಿಂದ ಪ್ರಭಾವಿತರಾಗದೆ ಇರಲಾರರು. ಇವರ ಈ ನಡೆಯನ್ನು ಬಲಪ್ರಯೋಗ ದಿಂದ ತಡೆಯದಿದ್ದರೆ, ಅರೆಬಿಯವಷ್ಟೇ ಅಲ್ಲ, ಇಡೀ ಜಗತ್ತು ಇವರ ಹಿಂದೆ ನಡೆಯಬಹುದು!"

ಓರ್ವ ಪುಣ್ಯಾತ್ಮನ ಸತ್ಯ ಪಯಣ

ಮಕ್ಕಾ ನಗರವು ಇಡೀ ಅರೇಬಿಯದ ಆಧ್ಯಾತ್ಮಿಕ ಕೇಂದ್ರವಾಗಿತ್ತು. ಎಲ್ಲರೂ ಕಅಬಾಲಯವನ್ನು ಗೌರವಿಸುತ್ತಿದ್ದರು. ವರ್ಷಕ್ಕೊಮ್ಮೆ ದೂರದೂರದ ಪ್ರದೇಶಗಳಿಂದ ಜನರು ಇಲ್ಲಿಗೆ ಬಂದು ತಂತಮ್ಮ ಧಾರ್ಮಿಕ ಸಂಪ್ರದಾಯಗಳನ್ನು ಪೂರೈಸಿ ಮರಳು ತ್ತಿದ್ದರು. ಕುರೈಶರು ಈ ಸಂದರ್ಭಗಳಲ್ಲಿ ತಂಡಗಳನ್ನು ರಚಿಸಿ, ಮಕ್ಕಾದ ಹೊರ ವಲಯದ ಬೇರೆ ಬೇರೆ ದಾರಿಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಅಲ್ಲಿಂದ ಮಕ್ಕಾ ಪ್ರವೇಶಿಸುವವರೊಡನೆ, "ನಮ್ಮ ಜನಾಂಗದಲ್ಲಿ ಓರ್ವ ಮಾಟಗಾರ ಹುಟ್ಟಿದ್ದಾನೆ. ಆತ ತನ್ನನ್ನು ಅಲ್ಲಾಹನ ಪ್ರವಾದಿ ಮತ್ತು ಸಂದೇಶವಾಹಕ ಎಂದು ಹೇಳಿಕೊಳ್ಳುತ್ತಿದ್ದಾನೆ. ಆ ವ್ಯಕ್ತಿ ಒಂದು ನೂತನ ಧರ್ಮವನ್ನು ರಚಿಸಿದ್ದಾನೆ. ಅದು ನಮ್ಮ ಪೂರ್ವಿಕ ಧರ್ಮಕ್ಕೆ ತೀರಾ ಭಿನ್ನ ಮಾತ್ರವಲ್ಲ, ಅದಕ್ಕೆ ತೀರಾ ವಿರುದ್ಧವಾಗಿದೆ. ಆದ್ದರಿಂದ ನೀವು ಆ ಅಬ್ದುಲ್ಲಾರ ಪುತ್ರ ಮುಹಮ್ಮದ್‌ನಿಂದ ದೂರವಿರಿ. ಆತನ ಬಳಿ ಸುಳಿಯಲೂ ಬೇಡಿ. ಆತನ ಸಂಗಡಿಗರೊಡನೆ ಬೆರೆಯಲೂ ಬೇಡಿ. ಆ ಜನರ ಮಾತುಗಳಲ್ಲಿ ಅದೆಂತಹ ಮೋಡಿಯಿದೆಯೋ! ಅವರ ಮಾತುಗಳು ಬಲು ಸುಲಭವಾಗಿ ಮನಸ್ಸುಗಳಲ್ಲಿ ಮನೆ ಮಾಡುತ್ತವೆ. ನಂತರ ಕೇಳುಗನು ಆ ಧರ್ಮದ ಅನುಯಾಯಿಯಾಗಿ ಮಾರ್ಪಡುತ್ತಾನೆ. ನೋಡಿ, ಈ ಮಕ್ಕಾ ನಗರದಲ್ಲಿ ಈಗೀಗ ಅದೆಷ್ಟೋ ಮಂದಿ ಮತಿಭ್ರಮಣೆ ಗೊಂಡವರಿದ್ದಾರೆ. ಅವರು ನೂತನ ಧರ್ಮಕ್ಕಾಗಿ ತಮ್ಮ ಸಂಪತ್ತು, ಸಂಬಂಧ, ಮನೆ-ಮಠಗಳೆಲ್ಲವನ್ನೂ ತೊರೆದಿದ್ದಾರೆ. ಅವರು ಜನರಿಂದ ಪೆಟ್ಟು ತಿನ್ನುತ್ತಲಿರುತ್ತಾರೆ, ಹಸಿವೆ ಯಿಂದ ಕಂಗಾಲಾಗುತ್ತಾರೆ, ಹಲವು ರೀತಿಯ ಸಂಕಷ್ಟಗಳನ್ನು ಸಹಿಸುತ್ತಾರೆ. ಆದರೆ ಹೊಸ ಧರ್ಮವನ್ನು ತೊರೆಯಲು ಸರ್ವಥಾ ಸಿದ್ಧರಿಲ್ಲ. ನೀವು ಕಅಬಾ ಭವನದ ತವಾಫ್ ಮಾಡಲು ಬಂದಿದ್ದೀರಿ. ಆದ್ದರಿಂದ ತವಾಫ್ ಮಾಡಿ, ಹೊರಟು ಹೋಗಿ. ಹೊಸ ಹೊಸ ವಿಷಯ ಗಳಿಗೆಲ್ಲ ಕಿವಿಗೊಡಬೇಡಿರಿ."

ಅಜ್ಞಾನ ಮತ್ತು ಪಥಭ್ರಷ್ಟತೆಯ ಸ್ವತಃ ಪಥಭ್ರಷ್ಟರಾಗಿರುವಂತೆಯೇ ಇತರರನ್ನೂ ಸನ್ಮಾರ್ಗದಿಂದ ತಡೆಯುತ್ತಿದ್ದರು. ಸತ್ಯನಿಷೇಧ ಮತ್ತು ಇಸ್ಲಾಮ್ ದ್ವೇಷವು ಅವರನ್ನು ಅಂಧ, ಮೂಗ ಮತ್ತು ಕಿವುಡರನ್ನಾಗಿ ಮಾಡಿತ್ತು. ಅವರು ತಮ್ಮಂತೆಯೇ ಇತರರನ್ನೂ ಆ ಹೇಯ ಕೊಳಕು ಮತ್ತು ಅಜ್ಞಾನಾಂಧಕಾರದಲ್ಲಿಯೇ ಮುಳುಗಿರುವಂತೆ ನೋಡಿಕೊಳ್ಳಲು

ಹವಣಿಸುತ್ತಿದ್ದರು. ಇವರ ವಿರೋಧ ಮಾತುಗಳು ಜನರ ಮೇಲೆ ಬಹಳ ಪ್ರಭಾವ ಬೀರುತ್ತಿದ್ದುವು. ಕುರೈಶ್ ಸರದಾರರಾದ ಮಕ್ಕಾ ನಿವಾಸಿಗಳ ಮಾತುಗಳನ್ನು ಪರದೇಸಿಗಳು ಹೇಗೆ ತಾನೇ ನಿರಾಕರಿಸಿಯಾರು? ಆದರೂ ಈ ಎಲ್ಲ ವಿರೋಧ ಮತ್ತು ವೈರತ್ವದ ಮಾತುಗಳೊಂದಿಗೇ ಪರದೇಸಿಗಳ ಕಿವಿಗಳಿಗೆ ಮುಹಮ್ಮದ್(ಸ) ಮತ್ತು ಇಸ್ಲಾಮಿನ ಹೆಸರು ಬಹಳ ಪರಿಚಿತವಾಗಿ ಬಿಡುತ್ತಿತ್ತು. ಈ ವಿರೋಧಗಳೇ ಸ್ವಯಂ ಸತ್ಯಸಂದೇಶದ ಮೌನ ಪ್ರಚಾರ ಕಾರ್ಯವನ್ನು ಮಾಡಿಬಿಡುತ್ತಿದ್ದುವು. ಅವರ ಪ್ರಹಾರಗಳೇ ಸ್ವತಃ ಅವರ ಮುಖಕ್ಕೆ ತಿರುಗಿ ರಾಚುತ್ತಿದ್ದುವು. ಆದರೆ ತಮ್ಮ ಕುತಂತ್ರಗಳ ಪ್ರತಿಕೂಲ ಪ್ರಭಾವದ ಬಗ್ಗೆ ಅವರು ಅಜ್ಞರಾಗಿದ್ದರು. ಹೀಗೆ ಅಗ್ನಿಕುಂಡದ ಬುಡದಿಂದಲೇ ನೀರಿನ ಬುಗ್ಗೆಯೇಳುವ ವ್ಯವಸ್ಥೆ ತಣ್ಣಗೆ ಆಗುತ್ತಿತ್ತು.

ಈ ನಿಟ್ಟಿನಲ್ಲಿ ಒಂದು ಐತಿಹಾಸಿಕ ಘಟನೆಯನ್ನು ಉಲ್ಲೇಖಿಸದಿದ್ದರೆ, ಕುರೈಶ್ ಸತ್ಯನಿಷೇಧಿಗಳ ಕುತಂತ್ರ, ಕುಯುಕ್ತಿಗಳ ಪ್ರಸ್ತಾಪವು ಸಂಪೂರ್ಣವಾಗಲಾರದು. ಇಸ್ಲಾಮಿ ಇತಿಹಾಸದಲ್ಲಿ ಈ ಘಟನೆಯು ಎಲ್ಲ ರೀತಿಯಲ್ಲೂ ಪ್ರಾಮುಖ್ಯ ಮತ್ತು ಮೌಲ್ಯವನ್ನು ಹೊಂದಿದೆ. ಇದರಲ್ಲಿ ಪಾಠವೂ ಇದೆ, ಉಪದೇಶವೂ ಇದೆ; ಮಾರ್ಗದರ್ಶನ, ಮೋಕ್ಷ ಮತ್ತು ಅನುಗ್ರಹವೂ ಇದೆ.

ತುಫೈಲ್ ಬಿನ್ ಅಮ್ರ್ ದೌಸಿ ತಮ್ಮ ಜನಾಂಗದ ಸರದಾರರಾಗಿದ್ದರು. ಯಮನ್ ದೇಶದ ಪರಿಸರ ಪ್ರದೇಶದಲ್ಲಿದ್ದ ಅವರ ಗೋತ್ರವು ಬಹಳ ಪ್ರಖ್ಯಾತವಾಗಿತ್ತು. ಬಹಳ ಶ್ರೀಮಂತವಾಗಿದ್ದ ಅವರ ಮನೆತನವನ್ನು ನಾಡಿನೆಲ್ಲರೂ ಬಹಳವಾಗಿ ಗೌರವಿಸುತ್ತಿದ್ದರು. ಕೌಟುಂಬಿಕ ಸಭ್ಯತೆ, ಲೌಕಿಕ ಗೌರವ ಮತ್ತು ಸಂಪತ್ತು-ಐಶ್ವರ್ಯ... ಒಟ್ಟಿನಲ್ಲಿ ಸರ್ವಾಂಗೀಕೃತ ವ್ಯಕ್ತಿತ್ವ.

ತುಫೈಲ್ ಕೇವಲ ತಮ್ಮ ಗೋತ್ರದ ನಾಯಕ ಮಾತ್ರವಾಗಿದ್ದುದಲ್ಲ. ಗೌರವಾರ್ಹ ಸ್ಥಾನಮಾನದೊಂದಿಗೆ ವೈಯಕ್ತಿಕವಾಗಿ ಅನೇಕಾರು ವಿಶೇಷತೆಗಳನ್ನು ಹೊಂದಿದ್ದರು. ಯುಕ್ತಿವಂತಿಕೆ ಮತ್ತು ಕಾವ್ಯ ರಚನೆಯಲ್ಲಿ ಅವರು ಬಹಳ ಪ್ರಖ್ಯಾತರಾಗಿದ್ದರು. ಈ ನಿಟ್ಟಿನಲ್ಲೂ ಅವರು ಸಾರ್ವಜನಿಕ ಮನ್ನಣೆಯನ್ನು ಪಡೆದಿದ್ದರು.

ತುಫೈಲ್ ಮಕ್ಕಾ ನಗರಕ್ಕೆ ಬಂದಾಗ, ನಗರದ ಹೊರವಲಯದಲ್ಲಿಯೇ ಕುರೈಶ್ ಸರದಾರರು ಅವರನ್ನು ಸಂಧಿಸಿದರು. ಗೌರವಾದರಗಳೊಂದಿಗೆ ಅವರನ್ನು ಸ್ವಾಗತಿಸಿದರು. ಈ ತುಫೈಲ್ ಎಂಬವರು ಓರ್ವ ಬದವೀ (ಗ್ರಾಮೀಣ ಅರಬ) ಅಲ್ಲ, ಹಿಂದೆ-ಮುಂದೆ ನೋಡದೆ ನಮ್ಮ ಮಾತುಗಳನ್ನು ತಕ್ಷಣ ಒಪ್ಪಿ ಬಿಡುವಂತಹ ಆಸಾಮಿಯೂ ಅಲ್ಲ. ಅವರು ಅಪಾರ ಯುಕ್ತಿವಂತರೂ ವಿಚಾರವಂತರೂ ಆಗಿದ್ದಾರೆ. ಒಳಿತು-ಕೆಡುಕುಗಳ ವ್ಯತ್ಯಾಸ ವನ್ನರಿಯುವಷ್ಟು ಜ್ಞಾನ ಅವರಲ್ಲಿದೆ. ಇಂತಹ ವ್ಯಕ್ತಿ ಒಂದು ವೇಳೆ ಮುಹಮ್ಮದ್‌ರನ್ನು ಭೇಟಿಯಾದರೆ ಅವರಿಂದ ಖಂಡಿತವಾಗಿಯೂ ಪ್ರಭಾವಿತಗೊಳ್ಳದೆ ಇರಲಾರರು. ಹಾಗೊಂದು

ವೇಳೆ ಆದರೆ, ಅವರ ಇಡೀ ಗೋತ್ರವೂ ಆ ಪ್ರಭಾವದ ಮೇರೆಯೊಳಗೆ ಬರುತ್ತದೆ. - ಇದೆಲ್ಲ ಕುರೈಶರ ಲೆಕ್ಕಾಚಾರದಲ್ಲಿ ಬಂದಿತ್ತು.

ಹಾಗಾಗಿ ಕುರೈಶರು ತುಫೈಲ್‌ರನ್ನು ಶೀಷೆಯೊಳಗೆ ತುರುಕಲು ಅವರನ್ನು ಉದಾರವಾಗಿ ಸತ್ಕರಿಸಿದರು. ಈ ಮೂಲಕ ಅವರ ಮನಸ್ಸಿನಲ್ಲಿ ತಮ್ಮ ಬಗ್ಗೆ ಸದಭಿಪ್ರಾಯವನ್ನುಂಟು ಮಾಡುವುದು ಅವರ ಉದ್ದೇಶವಾಗಿತ್ತು. ಆದರ-ಸತ್ಕಾರಗಳಿಂದ ಯಾರೇ ಆದರೂ ಪ್ರಭಾವಿತರಾಗದೆ ಇರುವುದಿಲ್ಲ. ತುಫೈಲ್‌ರೂ ಕುರೈಶರ ಸತ್ಕಾರಾತಿಥ್ಯದಿಂದ ಬಹಳ ಸಂತುಷ್ಟರೂ ಪ್ರಭಾವಿತರೂ ಆದರು. ತರುವಾಯ ಕುರೈಶರು ತುಫೈಲ್‌ರನ್ನು ಬಹಳವಾಗಿ ಪ್ರಶಂಸೆಗೈದರು... "ನೀವು ಇಂತಿಂತಹ ಉನ್ನತ ಗುಣವನ್ನು ಹೊಂದಿದ್ದೀರಿ, ನಿಮ್ಮ ಕುರಿತು ನಿಮ್ಮ ಗೋತ್ರವು ಬಹಳ ಹೆಮ್ಮೆಯನ್ನು ಹೊಂದಿದ್ದಾರೆ ಮತ್ತು ನಿಮ್ಮ ಬುದ್ಧಿ ವಂತಿಕೆಯು ಯಾರದೇ ನಯವಾದ ಮಾತನ್ನು ಕಣ್ಣು ಮುಚ್ಚಿ ಅಂಗೀಕರಿಸಲು ಬಿಡಲಾರದು. ನಿಮ್ಮ ಸಂಕಲ್ಪ ಮತ್ತು ವಿಶ್ವಾಸದಲ್ಲಿ ದೃಢತೆಯನ್ನು ನಾವು ಕಾಣುತ್ತಿದ್ದೇವೆ..."

ಹೀಗೆ ತುಫೈಲ್‌ರಿಗೆ ತಮ್ಮ ಮಾತುಗಳ ಮೇಲೆ ನಂಬಿಕೆ ಬಂದಿದೆ ಎಂದು ಅರಿವಾದ ನಂತರ ಅವರೆಲ್ಲ ಸೇರಿ ದೇವಸಂದೇಶವಾಹಕರ(ಸ) ವಿರುದ್ಧ ಪಿತೂರಿ ನಡೆಸಿದರು, "ನಮ್ಮ ಗೋತ್ರದ ಓರ್ವ ವ್ಯಕ್ತಿ, ಮುಹಮ್ಮದ್ ಎಂಬುದು ಹೆಸರು... ಆತನಿಂದ ಕೊಂಚ ದೂರವೇ ಇರಬೇಕು. ಆತನೋರ್ವ ಮಾಟಗಾರ! ಆತನ ಪ್ರಭಾವದಿಂದ ತಂದೆ-ಮಗ, ಪತಿ-ಪತ್ನಿ, ಸಹೋದರರ ನಡುವೆ ಭೇದವುಂಟಾಗುತ್ತದೆ. ಆತ ನಮ್ಮ ಜನಾಂಗದ ಅಡಿಪಾಯವನ್ನೇ ಅಲುಗಾಡಿಸಿಬಿಟ್ಟಿದ್ದಾನೆ. ಆತನ ಕಾರಣವಾಗಿ ನಮ್ಮ ಕೆಲಸ-ಕಾರ್ಯಗಳೆಲ್ಲವೂ ಕೆಡುತ್ತ ಸಾಗಿವೆ. ನಿಮ್ಮ ಗೋತ್ರವೂ ಈ ಆಪತ್ತಿಗೆ ತುತ್ತಾಗುವುದನ್ನು ನಾವು ಇಷ್ಟಪಡಲಾರೆವು. ಆದ್ದರಿಂದ ನೀವು ಸ್ವತಃ ಅವನೊಡನೆ ಮಾತನಾಡಬಾರದು, ಅವನ ಮಾತನ್ನು ಆಲಿಸಬಾರದು ಮತ್ತು ಅವನ ಬಳಿಗೂ ಹೋಗಬಾರದು ಎಂದು ನಾವು ನಿಮ್ಮನ್ನು ಎಚ್ಚರಿಸಬಯಸುತ್ತೇವೆ."

ಕುರೈಶರ ಹಿತಚಿಂತನಾ ಶೈಲಿಗೇ ಮನಸೋತ ತುಫೈಲ್ ಪಾಪ, ಈ ಜನರು ನನ್ನ ಒಳಿತಿಗಾಗಿಯೇ ಉಪದೇಶಿಸುತ್ತಿದ್ದಾರೆಂದು ಭಾವಿಸಿ ಬಿಟ್ಟರು... ಅವರ ಹಿತಚಿಂತನೆಯಲ್ಲಿ ನಿಷ್ಕಳಂಕತೆ ಮತ್ತು ನಿಸ್ವಾರ್ಥತೆಯು ಎದ್ದು ಕಾಣುತ್ತಿದೆ... ನನ್ನನ್ನು ಯಾತ್ರಿಕನೆಂದು ಭಾವಿಸಿ ಇಲ್ಲಿ ಅಲಕ್ಷ್ಯನಾಗಿದ್ದು ಬಿಡಬಾರದು ಎಂದುಕೊಂಡು ನನಗೆ ಇಲ್ಲಿನವರ ಬಗ್ಗೆ ಎಚ್ಚರಿಕೆ ನೀಡಲಾಗುತ್ತಿದೆ. ಇಂತಹ ಹಿತಚಿಂತಕರ ಮತ್ತು ಕೃಪಾಳುಗಳ ಮಾತನ್ನು ಒಪ್ಪದಿದ್ದರೆ, ಅದೊಂದು ರೀತಿಯಲ್ಲಿ ಕೃತಘ್ನತೆಯೂ ಮೂರ್ಖತನವೂ ಆದೀತು...

ಈ ರೀತಿಯಾಗಿ ತುಫೈಲ್ ಬಿನ್ ಅಮ್ರ್ ದೌಸಿಯವರು ಆಲೋಚಿಸುತ್ತಿರುವಂತೆಯೇ ಅವರ ಮನಸ್ಸಿನಲ್ಲಿ ಕುರೈಶರ ಮಾತು ಆಳವಾಗಿ ಬೇರೂರುತ್ತಿತ್ತು. ತತ್ಪರಿಣಾಮವಾಗಿ ಅವರು ಕಅಬಾ ಭವನಕ್ಕೆ ಹೋಗುವಾಗಲೆಲ್ಲ ಮುಹಮ್ಮದ್‌ರ(ಸ) ಮಾತುಗಳನ್ನು ಆಲಿಸದಿರಲಿಕ್ಕಾಗಿ ಕಿವಿಗೆ ಹತ್ತಿಯನ್ನು ತುರುಕುತ್ತಿದ್ದರು. ತವಾಫ್ ಮಾಡುವಾಗಲೆಲ್ಲ ಮುಹಮ್ಮದ್(ಸ)

ಎದುರಾದರೆ ಅವರ ದೃಷ್ಟಿ ಮಾತ್ರದಿಂದಲೇ ನನ್ನ ಮೇಲೆ ಮಾಟದ ಪ್ರಭಾವವುಂಟಾಗ ಬಹುದೆಂದು ಭಾವಿಸಿ ಸಾಧ್ಯಂತ ಕಣ್ಣು ಮುಚ್ಚಿಕೊಂಡಿರುತ್ತಿದ್ದರು. ಅತ್ತಿತ್ತ ನೋಡಲೂ ಧೈರ್ಯ ವಹಿಸುತ್ತಿರಲಿಲ್ಲ. ಕುರೈಶರು ಅನುಭವಿಸಿಯೇ ಇಂತಹ ಅಭಿಪ್ರಾಯಕ್ಕೆ ಬಂದಿರ ಬಹುದು ಮತ್ತು ಮುಹಮ್ಮದ್‌ರಿಂದ ದೂರವಿರಲು ಸೂಚಿಸಿರಬಹುದು. ಅಲ್ಲದೆ, ಕುರೈಶರಂತಹ ಉನ್ನತ ಕುಲದ ಮಂದಿ ವಿನಾ ಕಾರಣ ಒಬ್ಬರ ಬಗ್ಗೆ ಅಪಪ್ರಚಾರ ಮಾಡಲಾರರಷ್ಟೇ.

ಕೆಲವಾರು ದಿನಗಳು ಹೀಗೆಯೇ ಕಳೆದುವು. ತುಫೈಲ್ ನಿತ್ಯ ಕಅಬಾಲಯಕ್ಕೆ ಬಂದು ಪ್ರದಕ್ಷಿಣೆ ಹಾಕಿ ಹೊರಟು ಹೋಗುತ್ತಿದ್ದರು. ಆದರೆ ವಿಧಿಯು ಬೇರೆಯೇ ಆಗಿತ್ತು. ತುಫೈಲ್‌ರ ಸೌಭಾಗ್ಯವು ಅಲ್ಲಿಯೇ ಅರಳಬೇಕೆಂದು ವಿಧಿಯಾಗಿತ್ತು. ಒಂದು ದಿನ ಅವರು ಕಅಬಾಲಯಕ್ಕೆ ಬಂದಾಗ ಅಲ್ಲಾಹನ ಪ್ರವಾದಿ ಅನಾಥಮುತ್ತು(ಸ) ಒಂದೆಡೆ ಕುಳಿತು ದೇವವಚನಗಳನ್ನು ಪಠಿಸುತ್ತಿದ್ದರು. ಅಂದು ತುಫೈಲ್ ಕಿವಿ ಮುಚ್ಚುವ ವ್ಯವಸ್ಥೆಯನ್ನು ಬಹುಶಃ ಸರಿಯಾಗಿ ಮಾಡಿದ್ದಿರಲಿಲ್ಲ. ಹಾಗಾಗಿ ಅವರ ಕಿವಿ ತಮಟೆಗಳಿಗೆ ಕುರ್‌ಆನಿನ ವಚನಗಳು ಸೋಂಕಿದವು. ಆ ಒಂದಿಷ್ಟು ವಚನಗಳೇ ಅವರ ಮೇಲೆ ಅವ್ಯಕ್ತವಾದ ಪ್ರಭಾವ ಬೀರಿದುವು. ತುಫೈಲ್ ಆಲೋಚಿಸತೊಡಗಿದರು... ನಾನೋರ್ವ ಕವಿಯಾಗಿದ್ದು, ಭಾಷಾ ಸಾಹಿತ್ಯದ ಆಳ-ಅಗಲ ಗಳನ್ನು ಚೆನ್ನಾಗಿ ಬಲ್ಲವನಾಗಿದ್ದೇನೆ... ಆದರೆ ಮುಹಮ್ಮದ್ ಪಠಿಸುತ್ತಿರುವ ವಚನ ಗಳಾದರೋ ಎಲ್ಲಕ್ಕಿಂತ ಭಿನ್ನ ಮತ್ತು ವಿಶಿಷ್ಟವಾಗಿದೆ! ನಾನಿದು ವರೆಗೂ ಇಷ್ಟು ಸುಮಧುರ ಮತ್ತು ಪ್ರಭಾವಶಾಲಿ ವಚನಗಳನ್ನು ಆಲಿಸಿದ್ದಿಲ್ಲ... ಇಂತಹ ವಚನಗಳಿಂದ ಇಷ್ಟು ದಿನ ದೂರವುಳಿದದ್ದೇ ನನ್ನ ದೌರ್ಭಾಗ್ಯ! ಮುಹಮ್ಮದ್‌ರನ್ನು ಇದುವರೆಗೆ ಭೇಟಿಯಾಗದೆ ಇದ್ದು, ಬಹಳ ದೊಡ್ಡ ತಪ್ಪು ಮಾಡಿದೆನೇನೋ! ಇಷ್ಟಕ್ಕೂ ಅವರೊಡನೆ ಮಾತನಾಡುವುದರಲ್ಲಿ ತಪ್ಪಾದರೂ ಏನಿದೆ? ಅವರ ಮಾತುಗಳು ಒಳ್ಳೆಯ ದಿದ್ದರೆ ಆಲಿಸುವೆನು ಮತ್ತು ಅಂಗೀಕರಿಸುವೆನು. ಏನಾದರೂ ತಪ್ಪು ಕಂಡರೆ ಅದಕ್ಕೆ ಕಿವಿಗೊಡದಿದ್ದರಾಯಿತು... ಏನೇ ಇರಲಿ, ಹತ್ತಿರ ಹೋಗಿ ಮಾತನಾಡುವುದೇ ಸರಿ...

ಅನಾಥಮುತ್ತು(ಸ) ನಮಾಝ್ ಮುಗಿಸಿ, ಹಜರುಲ್ ಅಸ್ವದ್‌ನೆಡೆಗೆ ನಡೆಯುತ್ತಿರು ವುದನ್ನು ಕಂಡು ತುಫೈಲ್ ಕೂಡ ಅವರ ಹಿಂದೆಯೇ ನಡೆದರು. ತರುವಾಯ ಪ್ರವಾದಿ ವರ್ಯರ(ಸ) ಮುಂದೆ ಕುರೈಶ್ ಸರದಾರರ ಪಥಭ್ರಷ್ಟವಾದ ಉಪದೇಶಗಳನ್ನೆಲ್ಲ ಅರುಹಿ ತಾನು ವಹಿಸಿದ್ದ ಎಚ್ಚರಿಕೆಯನ್ನೂ ವಿವರಿಸಿದರು. ಯಾವುದೇ ಮಾತನ್ನೂ ಅಡಗಿಸದೆ, ಇದ್ದುದನ್ನು ಇದ್ದ ಹಾಗೆಯೇ ಹೇಳಿಬಿಟ್ಟರು. ತಮ್ಮ ಮಾತುಗಳನ್ನು ಆಲಿಸದಂತಾಗಲು ಕಅಬಾ ಭವನದೆಡೆಗೆ ಬರುವಾಗ ಕಿವಿಗೆ ಹತ್ತಿ ತುರುಕಿ ಬರುತ್ತಿದ್ದುದನ್ನೂ ಹೇಳಿದರು. ಆದರೆ ಇಷ್ಟೆಲ್ಲ ಜಾಗರೂಕತೆಯ ಹೊರತಾಗಿಯೂ ಇಂದು ತಮ್ಮ ಧ್ವನಿಯನ್ನು ನಾನು ಆಲಿಸಿ ಬಿಟ್ಟೆ. ಆದ್ದರಿಂದ ತಾವು ತಮ್ಮ ಸಂದೇಶವನ್ನು ನನಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆಂದರು.

ಹ. ಮುಹಮ್ಮದುರ್‍ರಸೂಲುಲ್ಲಾಹ್‌ರು(ಸ) ಕೆಲವು ಕುರ್‌ಆನ್ ವಚನಗಳನ್ನು ಪಠಿಸಿದರು. ತುಫೈಲ್ ಒಂದೊಂದು ಪದಕ್ಕೂ ತಲೆದೂಗತೊಡಗಿದರು. ಅಲ್ಲಾಹನ ವಾಣಿಯನ್ನು ಅಲ್ಲಾಹನ ಸಂದೇಶವಾಹಕರ(ಸ) ಬಾಯಿಯಿಂದ ಆಲಿಸುವಾಗ ತುಫೈಲ್‌ರ ಮನದಲ್ಲಿ ಸಂತೋಷ-ದುಃಖ, ನಿರೀಕ್ಷೆ-ಭಯ ಎಲ್ಲದರ ಮಿಶ್ರಿತವೂ ವಿಚಿತ್ರವೂ ಆದ ಅವ್ಯಕ್ತ ಭಾವನೆಗಳು ಹುಟ್ಟತೊಡಗಿದುವು. ಅವರೆಂದರು, "ನಾನಿದುವರೆಗೂ ಇಂತಹ ವಾಣಿಯನ್ನು ಆಲಿಸಿದ್ದಿಲ್ಲ. ಒಳಿತು, ನ್ಯಾಯ, ಮಾರ್ಗದರ್ಶನ ತುಂಬಿದ ವಿಶಿಷ್ಟ ವಾಣಿ!" ಅಜ್ಞಾನದ ಅಂಧಕಾರವು ಕೊನೆಗೊಳ್ಳತೊಡಗಿದುವು... ಅದರ ಬೆನ್ನೇರಿ ಅನುಗ್ರಹ-ಸುಜ್ಞಾನದ ಕಾಲವು ಉದಯಿಸತೊಡಗಿತು... ಸತ್ಯವನ್ನು ಅಂಗೀಕರಿಸಲಿನ್ನು ಯಾವುದೇ ವಿಳಂಬ ಅಥವಾ ತೊಡಕು ಉಳಿಯಲಿಲ್ಲ... ತುಫೈಲ್ ಆಯಾಚಿತವಾಗಿ ಸತ್ಯದ ಸಾಕ್ಷ್ಯ ವಚನ ಪಠಿಸಿ, ದೇವ ಸಂದೇಶವಾಹಕರ(ಸ) ಅನುಯಾಯಿಗಳಲ್ಲೋರ್ವರಾಗಿ ಮಾರ್ಪಟ್ಟರು.

ജ◆◆◆ഋ

ಯಸ್ರಿಬ್‌ನಲ್ಲಿ ಸತ್ಯ ಪ್ರಕಾಶೋದಯ

ಪ್ರವಾದಿತ್ವದ ಹನ್ನೊಂದನೆಯ ವರ್ಷ. ಹಜ್ಜ್ ಋತುವಿನಲ್ಲಿ ಅರೇಬಿಯದ ಮೂಲೆಮೂಲೆಗಳಿಂದ ಜನ ಮಕ್ಕಾ ನಗರಕ್ಕೆ ಬರುತ್ತಿದ್ದಾರೆ. ಮಕ್ಕಾ ನಗರದ ಗಲ್ಲಿ-ಕೇರಿಗಳಲ್ಲಿ ಅಸಾಮಾನ್ಯವಾದ ಉತ್ಸಾಹ ತುಂಬಿ ತುಳುಕುತ್ತಿದೆ. ಪ್ರವಾದಿ ಮುಹಮ್ಮದ್(ಸ) ಮತ್ತು ಸಂಗಾತಿಗಳು ಹೊರನಾಡಿನ ಮಂದಿಗೆ ಅಲ್ಲಾಹನ ಸಂದೇಶವನ್ನು ತಲುಪಿಸುವ ಕಾರ್ಯದಲ್ಲಿ ಪ್ರಯತ್ನಶೀಲರಾಗಿದ್ದಾರೆ. ಕುರೈಶ್ ಸತ್ಯನಿಷೇಧಿಗಳ ವಿರೋಧ, ಪ್ರತಿರೋಧ ಮತ್ತು ಅಡೆತಡೆಗಳ ಹೊರತಾಗಿಯೂ ಸತ್ಯವಿಶ್ವಾಸಿಗಳು ತಮ್ಮ ಕರ್ತವ್ಯವನ್ನು ನಿಭಾಯಿಸುವುದರಲ್ಲಿಯೇ ಮಗ್ನರಾಗಿದ್ದಾರೆ.

ಮಕ್ಕಾ ನಗರದಿಂದ ಅನತಿ ದೂರದಲ್ಲಿ ಅಕಬಾ ಎಂಬ ಪ್ರದೇಶವಿದೆ. ರಾತ್ರಿಯ ಅಂಧಕಾರದಲ್ಲಿ ಯಸ್ರಿಬ್ ನಿವಾಸಿಗಳು ಅಲ್ಲಿಗೆ ಬಂದು ತಂಗುತ್ತಾರೆ. ಅವರು ತಮ್ಮ ಯಾತ್ರಾನುಭವಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದಾರೆ. ಮಕ್ಕಾ ನಿವಾಸಿಗಳ ಧಾರ್ಮಿಕ ನಾಯಕತ್ವ ಮತ್ತು ಅತಿಥಿ ಸತ್ಕಾರದ ವೃತ್ತಾಂತಗಳೂ ತಮ್ಮಲ್ಲಿನ ಔಸ್-ಖಝ್ರಜ್ ಗೋತ್ರಗಳ ಕೌಟುಂಬಿಕ ಶ್ರೇಷ್ಠತೆಯೂ ಪ್ರಶಂಸೆಗಳೂ ಅವರ ಮಾತುಗಳ ಮಧ್ಯೆ ತೂರಿ ಬರುತ್ತಿದ್ದುವು. ಜತೆಗೆ ಒಬ್ಬೊಬ್ಬರು ಒಂದೊಂದು ರೀತಿಯ ಯಾತ್ರಾನುಭವಗಳನ್ನು ಬಿಚ್ಚಿಡುತ್ತಿದ್ದರು... ಇಂತಿಂತಹ ಕಣಿವೆಯಲ್ಲಿ ನನ್ನ ಒಂಟೆ ಕಳೆದುಹೋಯಿತು... ಇಂತಿಂತಹ ಸ್ಥಳದಲ್ಲಿ ಬಹಳ ಕಷ್ಟದಿಂದಲೇ ರಾತ್ರಿ ಕಳೆಯಬೇಕಾಯಿತು... ಇಂತಿಂತಹ ತೋಟದ ಖರ್ಜೂರಗಳು ಬಹಳ ರುಚಿಕರವಾಗಿವೆ... ಮಾತು ಹೀಗೆ ಸಾಗುತ್ತಿದ್ದಂತೆಯೇ ದೂರದಲ್ಲಿ ಓರ್ವ ವ್ಯಕ್ತಿ ತಮ್ಮತ್ತಲೇ ಬರುತ್ತಿರುವುದನ್ನು ಅವರು ಕಂಡರು. ಅನಾಥಮುತ್ತು(ಸ) ಆ ಜನರ ಬಳಿಗೆ ತಲುಪಿದಾಗ, ಅವರಿಗೆ ಆಶ್ಚರ್ಯಾನಂದವಾಗಿತ್ತು. ಅವರು ಅದುವರೆಗೂ ಅಷ್ಟು ಸುಂದರ, ಪ್ರಕಾಶಮಾನ ಮುಖವನ್ನು ದರ್ಶಿಸಿರಲಿಲ್ಲ. ಆ ಅಂಧಕಾರದಲ್ಲಿ ಅವರಿಗೆ ಮೋಡಗಳೆಡೆಯಿಂದ ಚಂದ್ರ ಹೊರ ಬಂದಂತೆ ಭಾಸ ವಾಯಿತು. ಓರ್ವ ಕುರೈಶ್ ಸರದಾರ ತನ್ನ ಯಾವುದೋ ಕಾರ್ಯ ನಿಮಿತ್ತ ಅಥವಾ ನಮ್ಮೊಡನೆ ಅಗತ್ಯದ ಮಾತುಕತೆಯಾಡಲು ಈ ಕಡೆ ಬಂದಿರಬಹುದು ಎಂದು ಅವರು ಪರಸ್ಪರ ಹೇಳಿಕೊಂಡರು. ಅದೇ ವೇಳೆ ಅವರ ಅಂತಾರಾತ್ಮವು, "ಈ ಪಾವನ ಪ್ರಕಾಶವದನರಾದ

ವ್ಯಕ್ತಿಯು ರಾತ್ರಿಯ ಈ ಅಂಧಕಾರದಲ್ಲಿ ನಮ್ಮ ಬಳಿಗೆ ಬರಬೇಕಾದರೆ, ಅದು ಯಾವುದೋ ಅಮೂಲ್ಯ ಮತ್ತು ಘನವಾದ ವಿಷಯವಾಗಿರಬೇಕು. ಖಂಡಿತವಾಗಿಯೂ ಯಾವುದೋ ಹೊಸ ವಿಷಯವು ಪ್ರಕಟವಾಗಲಿದೆ" ಎಂದು ನುಡಿಯುತ್ತಿತ್ತು.

ಯಸ್ರಿಬ್‌ನಿಂದ ಆಗಮಿಸಿದ್ದ ಈ ಆರು ಮಂದಿ ಯಾತ್ರಿಕರ ಮುಂದೆ ಅನಾಥ ಮುತ್ತು(ಸ) ಅಲ್ಲಾಹನ ಮಹಾನತೆಯನ್ನು ಕೊಂಡಾಡಿದರು ಮತ್ತು ಅಲ್ಲಾಹನ ಹಿರಿಮೆ-ಪ್ರತಾಪ, ಮಹಾನತೆಯನ್ನು ಉಲ್ಲೇಖಿಸಿ ಅವರ ಮನಸ್ಸುಗಳಿಗೆ ನಾಟುವಂತೆ ಸತ್ಯ ಸಂದೇಶದ ಬೋಧನೆಯನ್ನು ನೀಡಿದರು. ತರುವಾಯ ಕೇಳುಗರ ಮನಸ್ಸಿನಲ್ಲಿ ಮೂರ್ತಿ ಪೂಜೆಯ ಬಗ್ಗೆ ತಿರಸ್ಕಾರ ಮತ್ತು ದ್ವೇಷ ಮೂಡುವ ರೀತಿಯಲ್ಲಿ ವಿಗ್ರಹಾರಾಧನೆಯನ್ನು ಖಂಡಿಸಿದರು. ತೌಹೀದ್‌ನ ಪಾಠ ಹೇಳಿಕೊಟ್ಟ ನಂತರ ಬಹುದೇವ ವಿಶ್ವಾಸದ ಖಂಡನೆ ಅಗತ್ಯವಾಗಿತ್ತು. ಅದು ಮಾನವ ಚಿಂತನೆಗೆ ಪೂರಕವೂ ಆಗಿತ್ತು. ತದನಂತರ ಅನಾಥಮುತ್ತು(ಸ) ನಿರಪೇಕ್ಷತೆ ಮತ್ತು ಧರ್ಮನಿಷ್ಠೆಯನ್ನು ಬೋಧಿಸಿದರು. ದುರಾಚಾರ ಮತ್ತು ದುಷ್ಕರ್ಮಗಳಿಂದ ದೂರವಿರಲು ಉಪದೇಶಿಸಿದರು. ಯಸ್ರಿಬ್‌ನವರು ಅತ್ಯಂತ ಸಮಾಧಾನ ಮತ್ತು ಮೌನ ದೊಂದಿಗೆ ಪ್ರವಾದಿವರ್ಯರ(ಸ) ಮಾತುಗಳನ್ನು ಆಲಿಸುತ್ತಿದ್ದರು. ಅವರ ಮನಸ್ಸುಗಳು ಒಂದೊಂದು ಪದವನ್ನೂ ಅಂಗೀಕರಿಸುತ್ತಿದ್ದುವು ಮತ್ತು ಪ್ರಭಾವಿತವಾಗುತ್ತಿದ್ದುವು. ಅವರು ಮೊದಲಿನಿಂದಲೇ ಸತ್ಯದ ಹುಡುಕಾಟದಲ್ಲಿದ್ದಂತೆ ಕಂಡರು. ಅವರ ಮನ-ಮಸ್ತಿಷ್ಕಗಳು ಸತ್ಯಮಾತುಗಳನ್ನು ಅಂಗೀಕರಿಸುವ ಸಾಮರ್ಥ್ಯವನ್ನು ಹೊಂದಿದ್ದುವು. ಒಟ್ಟಿನಲ್ಲಿ,

ಸತ್ಪಥದ ಹಾದಿಯಲ್ಲಿ ನೆಲ ಹಸನಾಗಿತ್ತು,

ಅದರಲ್ಲಿ ಬೀಜ ಬಿತ್ತುವುದೊಂದೇ ಬಾಕಿಯಿತ್ತು!!

ರಾತ್ರಿಯ ನೀರವತೆ, ಅಂಧಕಾರ, ಮಕ್ಕಾದ ಗುಡ್ಡ-ಕಣಿವೆಗಳ ಸಾಲು, ಅಪರಿಚಿತ ಜನರೊಡನೆ ಭೇಟಿ... ಇದೇ ಸ್ಥಿತಿಯಲ್ಲಿ ಹಿದಾಯತ್‌ನ (ಸನ್ಮಾರ್ಗ ದರ್ಶನದ) ಬೋಧನೆ ನೀಡಿಯಾದ ಬಳಿಕ ಅನಾಥಮುತ್ತು(ಸ) ಪವಿತ್ರ ಕುರ್‌ಆನಿನ ಕೆಲವು ವಚನಗಳನ್ನು ಆಗಂತುಕರಿಗೆ ಓದಿ ಕೇಳಿಸಿದರು. ಅದನ್ನು ಕೇಳುವಾಗಲೇ ವಾತಾವರಣವಿಡೀ ದೇವ ಪ್ರೀತಿಯಲ್ಲಿ ಉನ್ಮತವಾಯಿತು... ಕಲ್ಲು-ಮರಗಳು ಭಾವಪರವಶವಾದುವು... ಯಸ್ರಿಬ್ ನವರಾದರೋ ಮಾನವರಾಗಿದ್ದರು. ಅವರ ಹೃದಯಗಳಿಗೆ ಆದ ಸಂವೇದನೆಯ ವಿವರಣೆಯು ಬಹುಶಃ ಕಡಿಮೆಯೇ ಎನ್ನಬಹುದು. ದೇವ ವಚನಗಳು ಆ ಮಂದಿಯ ಮನಸ್ಸುಗಳಲ್ಲಿ ಸತ್ಯವಿಶ್ವಾಸದ ದೀಪವನ್ನು ಹೊತ್ತಿಸಿದುವು... ದಾರಿತಪ್ಪಿ ಅಲೆಯುತ್ತಿದ್ದವರಿಗೆ ಯಾವುದೇ ವಿಶೇಷ ಪ್ರಯತ್ನವಿಲ್ಲದೆ, ಅನಿರೀಕ್ಷಿತವಾಗಿ ಸನ್ಮಾರ್ಗದರ್ಶನವಾದಂತಾಯಿತು...

ಯಸ್ರಿಬ್‌ನ ಈ ಆರು ಮಂದಿ ತಮ್ಮ ಜನಾಂಗದವರೊಡಗೂಡಿ ವಿಗ್ರಹಾರಾಧನೆ ಗೈಯುತ್ತಿದ್ದರು. ಈ ಕೆಡುಕಿನಲ್ಲಿ ಅವರು ಮಕ್ಕಾವಾಸಿಗಳಿಗಿಂತ ಕಡಿಮೆಯೇನೂ ಇದ್ದಿರಲಿಲ್ಲ.

ವಿಗ್ರಹಗಳಿಗೆ ಸಾಷ್ಟಾಂಗವೆರಗುವುದು ಅವರ ಮಟ್ಟಿಗೆ ಮೋಕ್ಷದ ಪ್ರತೀಕವಾಗಿತ್ತು. ಅದರ ಜತೆಗೇ, ಶೀಘ್ರೋಭವಿಷ್ಯದಲ್ಲಿ ಒಬ್ಬ ಪ್ರವಾದಿಯ ಆಗಮನವಾಗಲಿದೆಯೆಂದು ಅವರು ಆಗಾಗ ಯಹೂದಿಗಳಿಂದ ಆಲಿಸುತ್ತಿದ್ದರು. ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ(ಸ) ಮುಖಾರವಿಂದ ಕಂಡಾಗ ಮತ್ತು ಅವರ ಉಪದೇಶ ಕೇಳಿದಾಗ ಅವರಿಗೆ ಅದು ಮನದಟ್ಟಾಗಿತ್ತು... ಹೌದು, ಯಹೂದಿಗಳು ಯಾವ ಪ್ರವಾದಿಯ ಸುವಾರ್ತೆಯನ್ನು ಯುಗ ಯುಗಾಂತರಗಳಿಂದ ನಿರೀಕ್ಷಿಸುತ್ತಿದ್ದರೋ, ಅದು ಇವರೇ ಆಗಿದ್ದಾರೆ... ಅವರಲ್ಲಿ ಉಂಟಾಗಿದ್ದ ಆ ಸಂವೇದನೆಯು ವಿಶ್ವಾಸದ ರೂಪ ತಾಳಲು ಹೆಚ್ಚು ಸಮಯ ತಗುಲಲಿಲ್ಲ. ಹೆಚ್ಚೇನೂ ಆಲೋಚಿಸದೆ ಅವರೆಲ್ಲರೂ ಸತ್ಯವಿಶ್ವಾಸ ಸ್ವೀಕರಿಸಿದರು. ರಸೂಲುಲ್ಲಾಹ್‌ರ(ಸ) ಕೆಲವು ಕ್ಷಣಗಳ ಬೋಧನೆಯು ಅವರಲ್ಲಿ ಇಸ್ಲಾಮಿನ ಆತ್ಮ, ಏಕದೇವ ವಿಶ್ವಾಸದ ಸವಿ, ಸತ್ಯವಿಶ್ವಾಸದ ಆಸಕ್ತಿ ಮತ್ತು ಸತ್ಕರ್ಮದ ಕಡೆಗಿನ ಸಂವೇದನೆ ಯನ್ನು ಹುಟ್ಟಿಸಿತು. ಅವರು ಮಕ್ಕಾದಿಂದ ತಮ್ಮ ನಾಡಿಗೆ ಮರಳಿದಾಗ, ಅವರಲ್ಲಿ ಪ್ರತಿಯೊಬ್ಬರೂ ದೇವಧರ್ಮದ ಪ್ರಚಾರಕ, ದೇವ ಸಂದೇಶದ ಪ್ರಸಾರಕ ಮತ್ತು ದೇವ ಸಂದೇಶವಾಹಕರ(ಸ) ದೌತ್ಯದ ಪ್ರತಿನಿಧಿಯಾಗಿ ಮಾರ್ಪಟ್ಟಿದ್ದರು.

❖ ❖ ❖ ❖

ಯಸ್ರಿಬ್‌ನಿಂದ ಬಹಳಷ್ಟು ಮಂದಿ ಹಜ್ಜ್‌ಗಾಗಿ ಮಕ್ಕಾ ನಗರಕ್ಕೆ ಹೋಗಿ ಬಂದಿದ್ದರು. ಅಲ್ಲದೆ ಬೇರೆ ಬೇರೆ ಪ್ರದೇಶಗಳಿಂದ ಯಾತ್ರಿಕರು ಯಸ್ರಿಬ್‌ಗೆ ಬರುತ್ತಲೂ ಇದ್ದರು. ಆದರೆ ಆ ಷಡ್ವ್ಯಕ್ತಿಗಳಲ್ಲಿ ವಿಶೇಷವಾದ ಬದಲಾವಣೆಯನ್ನು ಅಲ್ಲಿನ ಜನ ಗುರುತಿಸಿದರು. ಹೌದು, ಅವರು ಮಕ್ಕಾ ನಗರದಿಂದ ಮರಳುವಾಗ ಬಹಳಷ್ಟು ಮಾರ್ಪಾಟಾಗಿ ಬಂದಿದ್ದಾರೆ. ಅವರ ಒಂದೊಂದು ನಡೆ, ಮಾತು-ಕೃತಿಯಲ್ಲಿ ಮಾತ್ರವಲ್ಲ; ಸಭೆ ಸೇರುವುದು, ಬೀಳ್ಕೊಡುವುದರಲ್ಲೂ ವಿಶೇಷವಾದ ಬದಲಾವಣೆ!! ಜೀವನದಲ್ಲಿ ಇಂತಹ ಶೀಘ್ರ ಮಾರ್ಪಾಟು ಅತ್ಯಂತ ಆಶ್ಚರ್ಯಜನಕವಾದುದು.

ಆ ಸೌಭಾಗ್ಯವಂತರ ತಂಡವು ಯಸ್ರಿಬ್‌ಗೆ ಮರಳಿದಾಗ, ಭೇಟಿಯಾದ ಎಲ್ಲರೊಡನೆಯೂ... ತಮ್ಮವರು-ಪರರು, ಪಂಡಿತರು-ಪಾಮರರು, ಗ್ರಾಮೀಣರು-ನಗರವಾಸಿಗಳು ಎಂಬ ಭೇದವಿಲ್ಲದೆ ಎಲ್ಲರೊಡನೆಯೂ ಹೇಳಿದರು, "ಮಿತ್ರರೇ! ಸಹೋದರರೇ! ಇಡೀ ಜಗತ್ತು ನಿರೀಕ್ಷಿಸುತ್ತಿದ್ದಂತಹ ಪ್ರವಾದಿಯನ್ನು, ಅಂದರೆ ನಾವು ಬಹಳ ಕಾಲದಿಂದ ಯಾವ ಪ್ರವಾದಿಯ ಆಗಮನದ ಬಗ್ಗೆ ಆಲಿಸುತ್ತಿದ್ದೆವೋ ಆ ಪ್ರವಾದಿಯು ಆಗತರಾಗಿದ್ದಾರೆ. ನಾವು ಆ ಪಾವನ ಪ್ರವಾದಿಯನ್ನು ದರ್ಶಿಸಿ ಪುನೀತರಾಗಿ ಮರಳಿದ್ದೇವೆ. ಅವರ ವಾಣಿಯನ್ನು ನಾವು ನಮ್ಮ ಕಿವಿಯಾರೆ ಆಲಿಸಿ ಬಂದಿದ್ದೇವೆ. ಆ ಪ್ರವಾದಿಯು ನಮಗೆ ಸ್ವಯಂ ಜೀವಂತನಾದ ದೇವನ ಪರಿಚಯ ಮಾಡಿಸಿ ಕೊಟ್ಟಿದ್ದಾರೆ. ಇನ್ನು ನಮ್ಮ ದೃಷ್ಟಿಯಲ್ಲಿ ಐಹಿಕ ಜೀವನ ಮತ್ತು ಮರಣಕ್ಕೆ ಯಾವುದೇ ಮಹತ್ವವುಳಿದಿಲ್ಲ."

ಆರು ಹನ್ನೆರಡಾಯಿತು

ಅಂಧಕಾರ ವ್ಯಾಪಿಸಿದ್ದ ಯಸ್ರಿಬ್‌ನಲ್ಲಿ ಈ ಆರು ಮಿನುಗು ತಾರೆಗಳ ಉದಯವು ಮಾರ್ಗದರ್ಶನದ ಮುಂಬೆಳಕನ್ನು ಹರಿಸಿತು. ಅವರು ತಮಗೆ ದೊರೆತ ಸೌಭಾಗ್ಯವನ್ನು ಇತರರಿಗೆ ಹರಡಲು ತೀವ್ರವಾಗಿ ಶ್ರಮಿಸತೊಡಗಿದರು. ಮಕ್ಕಾ ನಗರದಿಂದ ಮರಳಿದಾಗಿ ನಿಂದ ಅವರು ಒಂದು ಕ್ಷಣವೂ ವಿರಮಿಸಲಿಲ್ಲ. ಇಸ್ಲಾಮಿನ ಪ್ರೀತಿಯು ತನ್ನ ಕೆಲಸವನ್ನು ಸರಾಗವಾಗಿ ಮಾಡುತ್ತಿತ್ತು. ಈಮಾನಿನ ಆಸಕ್ತಿಯು ಅವರನ್ನು ಗಲ್ಲಿ-ಗಲ್ಲಿಗಳಲ್ಲಿ ಸತ್ಯ ದೊಂದಿಗೆ ನಡೆಸಿತು. ಮಕ್ಕಾ ನಗರದಲ್ಲಿ ಸನ್ಮಾರ್ಗ ಮತ್ತು ಸೌಭಾಗ್ಯದ ಕೊನೆಯ ಹಾಗೂ ಪ್ರಕಾಶಮಾನ ಸೂರ್ಯೋದಯವಾಗಿದೆಯೆಂಬ ಸುವಾರ್ತೆಯನ್ನು ಅವರು ಹೋದಲ್ಲೆಲ್ಲ ಹರಡುತ್ತಾ ಹೊರಟರು. ಈ ಮೂಲಕ ಯಸ್ರಿಬ್‌ನ ಮೂಲೆಮೂಲೆಯಿಂದಲೂ ಅಂಧಕಾರವನ್ನು ಹೋಗಲಾಡಿಸಬೇಕೆಂಬ ಉತ್ಕಟೇಚ್ಛೆ ಅವರಲ್ಲಿತ್ತು. ಅವರು ಹೀಗೆ ಸಾರಿದರು, "ಜನರೇ! ವಿಗ್ರಹಾರಾಧನೆಯು ಅತಿದೊಡ್ಡ ಶಾಪವಾಗಿದೆ. ನಾವು ಇದುವರೆಗೂ ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದೆವು. ಈ ಸೂರ್ಯ-ಚಂದ್ರ-ನಕ್ಷತ್ರಾದಿಗಳು ಯಾರದೇ ಇಚ್ಛೆಯನ್ನು ಪೂರೈಸಲಾರವು; ಲಾತ್, ಹುಬಲ್‌ಗಳೂ ನಮ್ಮ ಸಂಕಷ್ಟವನ್ನು ನೀಗಿಸಲಾರವು. ಅವು ನಮ್ಮ ಅಹವಾಲನ್ನು ಆಲಿಸಲಾರವು. ಇವೆಲ್ಲವೂ ಅಜ್ಞಾನ ಕಾಲದ ಮೌಢ್ಯಗಳಾಗಿವೆ. ವಾಸ್ತವದಲ್ಲಿ ಏಕೈಕನಾದ ಸೃಷ್ಟಿಕರ್ತನೇ ಆರಾಧನೆಗೆ ಅರ್ಹನಾಗಿದ್ದಾನೆ. ಮಾನವನ ತಲೆಯು ಅವನ ಮುಂದೆ ಮಾತ್ರವೇ ಬಾಗಬೇಕು. ಮಾನವನ ಗೌರವದ ಮಾನದಂಡವು ಒಳಿತು ಮತ್ತು ಧರ್ಮನಿಷ್ಠೆಯಾಗಿದೆ. ದೇವ ಪ್ರವಾದಿ ಮುಹಮ್ಮದುರ್ರಸೂಲುಲ್ಲಾಹ್‌ರ(ಸ) ಸಂದೇಶ ಮತ್ತು ಶಿಕ್ಷಣದ ಸಾರಾಂಶ ಇದುವೇ."

ಇಸ್ಲಾಮಿನ ಈ ಆರು ಮಂದಿ ಉತ್ಸಾಹಿ ಸಂದೇಶ ಪ್ರಚಾರಕರ ಪ್ರಭಾವದಿಂದಾಗಿ ಯಸ್ರಿಬ್‌ನ ಮನೆಮನೆಗಳಲ್ಲಿ ಪ್ರವಾದಿವರ್ಯರ(ಸ) ಕುರಿತು ಚರ್ಚೆ ಆರಂಭವಾಯಿತು. ಆರು ಮಂದಿ ಮುಸ್ಲಿಮರ ಪರಿವರ್ತಿತ ಜೀವನವನ್ನು ನೋಡಿ ಯಸ್ರಿಬ್‌ನ ಮಂದಿ ಪರಸ್ಪರ ಆಡಿಕೊಳ್ಳತೊಡಗಿದರು, "ಯಾ ಅಯ್ಯುಹಲ್ ಇಖ್ವಾನ್! ಈ ಜನ ಇಸ್ಲಾಮ್ ಸ್ವೀಕರಿಸಿ ದಾಗಿನಿಂದ ಏನಕ್ಕೇನೋ ಆಗಿ ಬಿಟ್ಟಿದ್ದಾರೆ. ಕೆಡುಕುಗಳ ಹತ್ತಿರ ಸುಳಿಯುವುದೂ ಇಲ್ಲವೆನ್ನಿ! ಸದಾ ಒಳಿತು, ಮಡಿವಂತಿಕೆಯ ಬಗ್ಗೆಯೇ ಚಿಂತಿಸುತ್ತಿರುತ್ತಾರೆ! ಈ ಮಂದಿಯ ಚಾರಿತ್ರ್ಯವನ್ನೇ ಬದಲಿಸಿದ ಆ ಧರ್ಮ ಮತ್ತು ಅದರ ಪ್ರವಾದಿಯ ಶಿಕ್ಷಣದಲ್ಲಿ ಖಂಡಿತವಾಗಿಯೂ ಸತ್ಯವಂತಿಕೆ ತುಂಬಿರಲೇಬೇಕು." ಆಸಕ್ತಿ, ಕುತೂಹಲದ ಆ ಸುಪ್ತ ಕಿಡಿಗಳು ಅನೇಕ ಮಂದಿಯ ಹೃದಯ-ಮನಸ್ಸುಗಳನ್ನು ಬೆಚ್ಚಗಾಗಿಸತೊಡಗಿದುವು. ಏಕದೇವತ್ವ (ತೌಹೀದ್) ಮತ್ತು ಸತ್ಕರ್ಮಗಳ (ಇಹ್ಸಾನ್) ಮಾತನ್ನು ಕೇಳುವಾಗಲೆಲ್ಲ ಸಭ್ಯ ಆತ್ಮಗಳು ಮುದಗೊಳ್ಳ ತೊಡಗಿದವು.

❖ ❖ ❖ ❖

ಮರುವರ್ಷ ಅಂದರೆ ಪ್ರವಾದಿತ್ವದ ಹನ್ನೆರಡನೆಯ ವರ್ಷ... ಯಸ್ರಿಬ್‌ನಿಂದ ಹನ್ನೆರಡು ಮಂದಿ ಮಕ್ಕಾ ನಗರಕ್ಕಾಗಮಿಸಿದರು. ಈ ಮಂದಿ ರಸೂಲುಲ್ಲಾಹ್‌ರ(ಸ) ಸನ್ನಿಧಿಯಲ್ಲಿ ಹಾಜರಾಗಿ, ಅವರ ಶಿಕ್ಷಣ ಮತ್ತು ಧಾರ್ಮಿಕ ಭೋದನೆಗಳನ್ನು ತಮ್ಮ ಕಿವಿಯಾರೆ ಆಲಿಸ ಬೇಕು ಹಾಗೂ ಪ್ರವಾದಿವರ್ಯರ(ಸ) ಮಾತು, ಕೃತಿ ಮತ್ತು ಅವರ ಅನುಚರರ ಚಾರಿತ್ರ್ಯವನ್ನು ಅಭ್ಯಸಿಸಬೇಕು; ಆ ಮೂಲಕ ಆ ಪ್ರವಾದಿಯು ಅನುಸರಣೆಗೆ ಅರ್ಹರೋ ಅಲ್ಲವೋ ಎಂಬುದನ್ನು ತೀರ್ಮಾನಿಸಬೇಕು ಎಂಬ ಉದ್ದೇಶದಿಂದ ತಮ್ಮ ಮನೆಯಿಂದ ಹೊರಟಿದ್ದರು. ಸತ್ಯದ ಹುಡುಕಾಟ, ಒಳಿತಿನ ತುಡಿತ, ಈಮಾನ್ ಮತ್ತು ಹಿದಾಯತ್‌ನ ಆಸಕ್ತಿಯು ಅವರನ್ನು ಮಕ್ಕಾ ನಗರದೆಡೆಗೆ ಸೆಳೆದಿತ್ತು. ಧರ್ಮ ಮತ್ತು ವಿಶ್ವಾಸಕ್ಕೆ ಸಂಬಂಧಿಸಿದ ವಿಷಯವದು. ಚೆನ್ನಾಗಿ ಪರಿಶೀಲಿಸಿ ಸ್ವೀಕರಿಸಬೇಕಲ್ಲವೇ?

ಈ ಹನ್ನೆರಡು ಮಂದಿಯ ತಂಡವು ರಸೂಲುಲ್ಲಾಹ್‌ರ(ಸ) ಸನ್ನಿಧಿಯಲ್ಲಿ ಹಾಜರಾದರು. ಅನಾಥಮುತ್ತು(ಸ) ಅಲ್ಲಾಹನ ಸಂದೇಶವನ್ನು ಅವರ ಮುಂದಿರಿಸಿದರು. ಒಳಿತು-ಧರ್ಮನಿಷ್ಠೆಯನ್ನು ಬೋಧಿಸಿದರು. ಕುರ್‌ಆನ್‌ನ ವಚನಗಳು ಆ ಹನ್ನೆರಡು ಮಂದಿಯ ಪಾಲಿಗೂ ಮಾರ್ಗದರ್ಶನ ಮತ್ತು ವೈಚಾರಿಕ ಕ್ರಾಂತಿಗೆ ಪ್ರೇರಕವಾಯಿತು. ಸಹಾಬಿಗಳ ಪಾವನ ಜೀವನ ಕಂಡು, ಖೊಟ್ಟಿಯನ್ನು ಖರೆಯನ್ನಾಗಿಯೂ ಹಿತ್ತಾಳೆಯನ್ನು ಅಪರಂಜಿಯನ್ನಾಗಿಯೂ ಮಾರ್ಪಡಿಸಬಲ್ಲ ಜೀವನ ಕ್ರಮವೊಂದಿದ್ದರೆ ಅದು ಇಸ್ಲಾಮ್ ಮಾತ್ರವಾಗಿದೆಯೆಂದು ಯಸ್ರಿಬ್‌ನವರು ಮನಗಂಡರು. ಹೀಗೆ ಎಲ್ಲರೂ ಒಕ್ಕೊರಲಿನಿಂದ ಅಲ್ಲಾಹನ ಪ್ರಭುತ್ವ ಮತ್ತು ಮುಹಮ್ಮದ್‌ರ(ಸ) ಪ್ರವಾದಿತ್ವದ ಸಾಕ್ಷ್ಯ ವಹಿಸಿದರು. ಇಸ್ಲಾಮ್ ಸ್ವೀಕರಿಸುತ್ತಲೇ ಅವರಲ್ಲಿ ಸಂಪೂರ್ಣ ಪರಿವರ್ತನೆಯುಂಟಾಯಿತು. ಅವರು ಆ ಪರಿವರ್ತನೆ ಯನ್ನು ಸ್ವಯಂ ಅನುಭವಿಸಿದರು. ಹೃದಯಕ್ಕೆ ಬಿದ್ದಿದ್ದ ಶಿರ್ಕ್ ಮತ್ತು ಅಜ್ಞಾನದ ಪರದೆಯು ಒಮ್ಮಿಂದೊಮ್ಮೆಲೇ ಎದ್ದು ಹೋಯಿತು. ಅವರು ಪರಸ್ಪರರಿಗೆ ಶುಭಾಶಯ ಕೋರಿದರು. ಆನಂದವು ಅವರ ಮುಖದಲ್ಲಿ ಹೊಸ ಕಳೆಯೇರಿಸಿ ಬಿಟ್ಟಿತು. ಅವರು ತಮ್ಮ ಸೌಭಾಗ್ಯಕ್ಕೆ ಹೆಮ್ಮೆ ಪಟ್ಟರು.

ಕೆಲವು ದಿನ ಮಕ್ಕಾದಲ್ಲಿದ್ದು, ಆನಂತರ ನವ ಮುಸ್ಲಿಮರು ಯಸ್ರಿಬ್‌ಗೆ ಹೊರಟು ನಿಂತಾಗ, ಪ್ರವಾದಿವರ್ಯರು(ಸ) ಅವರ ತರಬೇತಿಗಾಗಿ ಅವರ ಜತೆಯಲ್ಲಿ ಮುಸ್‌ಅಬ್ ಬಿನ್ ಉಮೈರ್‌ರನ್ನು(ರ) ಕಳುಹಿಸಿಕೊಟ್ಟರು. ಮಕ್ಕಾದ ಶ್ರೀಮಂತರಲ್ಲೋರ್ವರಾದ ಉಮೈರ್‌ರ ಮಗ ಮುಸ್‌ಅಬ್(ರ) ಅತಿಯಾದ ಮುದ್ದು ಮತ್ತು ಪ್ರೀತಿ-ಕಾಳಜಿಯಿಂದ ಪೋಷಣೆ ಪಡೆದವರು. ಮನೆಯಲ್ಲಿ ಆಸ್ತಿ-ಸಂಪತ್ತು ತುಂಬಿ ತುಳುಕುತ್ತಿತ್ತು. ಮುಸ್‌ಅಬ್ ತಂದೆ-ತಾಯಿಯ ಮುದ್ದಿನ ಮಗನಾಗಿ ಬೆಳೆದಿದ್ದರು. ಸುಖ-ಭೋಗಾದಿಗಳ ಸಕಲ ವಸ್ತು ಗಳೂ ಅವರ ಬಳಿ ಇದ್ದುವು. ಬಹಳ ಶ್ರೀಮಂತ ಜೀವನವಾಗಿತ್ತು ಮುಸ್‌ಅಬ್‌ರದ್ದು. ಸುಖ ಸೌಲಭ್ಯ ಮತ್ತು ವೈಭವದ ಜೀವನ! ಮುಸ್‌ಅಬ್ ರೇಶ್ಮೆ ಬಟ್ಟೆ ಧರಿಸಿ, ಅರೇಬಿಯದ

ಅತ್ಯುತ್ತಮ ತಳಿಯ ಅಶ್ವವನ್ನೇರಿ ಹೊರಟು ನಿಂತರೆ ಅವರ ಹಿಂದೆ ಸೇವಕರೂ ಹೊರಟು ಬಿಡುತ್ತಿದ್ದರು. ಅವರ, "ಸರಿಯಿರಿ, ಆಚೆ ಹೋಗಿ" ಎಂಬ ಘೋಷಣೆ ಕೇಳಿಯೇ ಇದು ಮುಸ್‌ಅಬ್‌ರ ಸವಾರಿಯೆಂದು ಜನರು ಅರಿತುಕೊಳ್ಳುತ್ತಿದ್ದರು.

ಆದರೆ ಇಸ್ಲಾಮ್ ಮುಸ್‌ಅಬ್‌ರ ಜೀವನವನ್ನೇ ಬದಲಿಸಿ ಬಿಟ್ಟಿತು. ಆ ಜಂಭ-ಠೀವಿ-ವೈಭವಗಳಿಗೆ ಇಸ್ಲಾಮಿನಲ್ಲಿ ಅವಕಾಶವೆಲ್ಲಿ ಇತ್ತು? ಅದರಲ್ಲಿಯಂತೂ ಸರಳತೆ, ಪರಿಶುದ್ಧತೆ, ಒಳಿತುಗಳ ಸಮ್ಮಿಲನವಿತ್ತು. ಅದರೊಳಗೆ ಹೊಕ್ಕವರಿಂದ ಜಂಭ, ಭೋಗಾಸಕ್ತಿ ಎಲ್ಲವೂ ಹೊರಟು ಹೋಗುತ್ತಿತ್ತು. ಅವರ ಹೃದಯದ ಸ್ಥಿತಿಯೇ ಬದಲಾಗಿ ಬಿಡುತ್ತಿತ್ತು. ಇಸ್ಲಾಮಿನಲ್ಲಿರುವ ಆಸಕ್ತಿ ಮತ್ತು ತೌಹೀದ್‌ನ ಮೇಲಿನ ಆಕರ್ಷಣೆಯಿಂದಾಗಿ ಇತರೆಡೆಗೆ ಗಮನ ಹರಿಸುವುದಕ್ಕೆ ಸಮಯವಾದರೂ ಎಲ್ಲಿರುತ್ತದೆ? ಇನ್ನು ಅವರಲ್ಲಿ ತಮ್ಮ ಬಾಹ್ಯ ಸೌಂದರ್ಯವನ್ನು ಮನೆಗಳ ಗೋಡೆ-ಬಾಗಿಲುಗಳನ್ನು ಅಲಂಕರಿಸುವ ಇಚ್ಛೆಗೆ ಬದಲು ತಮ್ಮ ಆಂತರ್ಯವನ್ನು ಉತ್ತಮಪಡಿಸುವ ತುಡಿತವಿರುತ್ತದೆ. ಮುಸ್‌ಅಬ್ ಬಿನ್ ಉಮೈರ್‌ರ(ರ) ರೇಶ್ಮೆ ಬಟ್ಟೆಗಳಲ್ಲಿ ಬೆಲೆಬಾಳುವ ಬಟನ್‌ಗಳು ಹೊಳೆಯುತ್ತಿದ್ದುವು. ಆದರೆ ಮುಸ್ಲಿಮರಾದ ಬಳಿಕ ಅವರು ಧರಿಸುವ ದೊರಗು ಸೆಣಬಿನ ಬಟ್ಟೆಗಳಲ್ಲಿ ತೇಪೆಗಳಿರುತ್ತಿದ್ದುವು. ಮಿರ ಮಿರ ಮಿನುಗುವ ಸುಂದರ ಬಟನ್‌ಗಳ ಜಾಗವನ್ನು ಬಬೂಲ್ (ಬಬ್ಬುಲಿ) ಮರದ ಮುಳ್ಳುಗಳು ಆಕ್ರಮಿಸಿದ್ದುವು. ಮುಸ್‌ಅಬ್‌ರ(ರ) ಚಾರಿತ್ರ್ಯವನ್ನು ಪ್ರವಾದಿವರ್ಯರ(ಸ) ಸಾಂಗತ್ಯದ ಕುಲುಮೆಯು ಅಪ್ಪಟ ಅಪರಂಜಿಯನ್ನಾಗಿ ಮಾಡಿತ್ತು. ಅವರು ಸತ್ಯಸಂದೇಶ ಪ್ರಚಾರ ಮತ್ತು ಉಪದೇಶ ನೀಡುವುದರಲ್ಲಿ ಎತ್ತಿದ ಕೈಯಾಗಿದ್ದರು. ಯಸ್ರಿಬ್‌ನಲ್ಲಿ ಸಂದೇಶಪ್ರಚಾರ ನಡೆಸಲು ಮುಸ್‌ಅಬ್‌ರೇ(ರ) ಸೂಕ್ತ ವ್ಯಕ್ತಿ ಯೆಂದು ಪ್ರವಾದಿವರ್ಯರು(ಸ) ಮನಗಂಡಿದ್ದರು. ಹೀಗೆ ಅವರಿಗೆ ತೀರಾ ಹೊಸ ಸ್ಥಳದಲ್ಲಿ ಅಲ್ಲಾಹನ ಸಂದೇಶ ಹೊತ್ತು ಹೋಗ ಬೇಕಾಯಿತು. ಅಲ್ಲಿ ನವಮುಸ್ಲಿಮರ ತರಬೇತಿಯೊಂದಿಗೆ ಮುಸ್ಲಿಮೇತರರ ಮುಂದೆಯೂ ಸತ್ಯವನ್ನು ಸ್ಪಷ್ಟಪಡಿಸಬೇಕಾದ ಅಗತ್ಯವಿತ್ತು. ಹೀಗೆ ಎರಡೆರಡು ಹೊಣೆಗಾರಿಕೆಯ ಭಾರವು ಮುಸ್‌ಅಬ್‌ರ ಹೆಗಲಿಗೇರಿತ್ತು. ಈ ಮಹಾನ್ ಹೊಣೆಗಾರಿಕೆಯನ್ನು ನೆರವೇರಿಸಲಿಕ್ಕಾಗಿ ಅವರು ಸದಾ ಅಲ್ಲಾಹನಲ್ಲಿ ಸಹಾಯ ಮತ್ತು ಅನುಗ್ರಹವನ್ನು ಬೇಡುತ್ತಿದ್ದರು.

ಸತ್ಯ ಮೊಳೆಯಲು ಫಲವತ್ತಾದ ಭೂಮಿ

ಮೊದಲು ಅಕಬಾದಲ್ಲಿ ಆರು ಮಂದಿಗೆ ಇಸ್ಲಾಮಿನ ಸೌಭಾಗ್ಯ ಲಭಿಸಿತು. ಮತ್ತೀಗ ಹನ್ನೆರಡು ಮಂದಿ ನವ ಸೌಭಾಗ್ಯವಂತರು... ಹೀಗೆ ಯಸ್ರಿಬ್‌ನಲ್ಲಿ ಮುಸ್ಲಿಮರ ಸಂಖ್ಯೆ ಹದಿನೆಂಟಕ್ಕೇರಿತು. ಮುಸ್‌ಅಬ್‌ರ(ರ) ಉಪಸ್ಥಿತಿಯು ಆ ಸಂಖ್ಯೆಗೆ ಇನ್ನೊಂದು ಸೇರಿತು. ಈಗ ಯಸ್ರಿಬ್‌ನಲ್ಲಿ ವ್ಯಾಪಕ ಚರ್ಚೆ ಪ್ರಾರಂಭವಾಯಿತು. ಜನರಲ್ಲಿ ಕುತೂಹಲವೂ ಗರಿಗೆದರತೊಡಗಿತು... "ಮುಹಮ್ಮದ್‌ರು ನಮ್ಮ ನಗರದಲ್ಲಿ ಸಂದೇಶ ಪ್ರಚಾರ ಮಾಡಲು ತಮ್ಮ ಓರ್ವ ಸಂಗಡಿಗರನ್ನು ಕಳುಹಿಸಿದ್ದಾರೆ... ಹೋಗಿ ಅವರನ್ನು ಸಂಧಿಸಿ ಬರೋಣ...

ಅವರ ಮೂಲಕ ಇಸ್ಲಾಮಿನ ಕುರಿತಾದ ಸ್ಪಷ್ಟ ಮಾಹಿತಿಯನ್ನು ಪಡೆಯಬಹುದು..." ಎಂದೆಲ್ಲ ಮಾತನಾಡಿಕೊಳ್ಳುತ್ತಾ ಜನರು ಮುಸ್‌ಅಬ್‌ರ(ರ) ಬಳಿಗೆ ಬರುತ್ತಿದ್ದರು. ಇಸ್ಲಾಮಿನ ಬಗ್ಗೆ ಬಹಳಷ್ಟು ಪ್ರಶ್ನೆಗಳನ್ನೂ ಕೇಳಿದರು. ಅದಲ್ಲದೆ ಸ್ವತಃ ಮುಸ್‌ಅಬ್‌ರೂ ಗಲ್ಲಿ-ಕೇರಿಗಳಲ್ಲಿ, ಮಾರುಕಟ್ಟೆ, ಮನೆಮನೆಗೆ ತೆರಳಿಯೂ ಇಸ್ಲಾಮಿನ ಸಂದೇಶವನ್ನಿಡುತ್ತಿದ್ದರು. ಯಸ್ರಿಬ್ ನಗರವು ಮಕ್ಕಾ ನಗರದಂತೆ ಗುಲ್ಲು ಗದ್ದಲವಿರುವ ಬಂಜರು ಭೂಮಿ ಯಾಗಿರಲಿಲ್ಲ. ಇಲ್ಲಿನ ಭೂಮಿಯಲ್ಲಿ ಮಾರ್ಗದರ್ಶನವನ್ನು ಸ್ವೀಕರಿಸುವ ಫಲವತ್ತತೆಯಿತ್ತು. ಮುಸ್‌ಅಬ್‌ರ(ರ) ಶಿಕ್ಷಣ-ತರಬೇತಿಯು ಅನೇಕ ಹೃದಯಗಳನ್ನು ಈಮಾನ್‌ನ ಪ್ರಕಾಶದಿಂದ ಬೆಳಗಿಸಿತು. ಕ್ರಮೇಣ ಸತ್ಯವಿಶ್ವಾಸಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚ ತೊಡಗಿತು. ಮುಸ್ಲಿಮನಾಗಿ ಮಾರ್ಪಟ್ಟ ಪ್ರತಿಯೊಬ್ಬನೂ ಸ್ವಯಂ ಇಸ್ಲಾಮಿನ ಸಂದೇಶ ಪ್ರಚಾರಕ ನಾಗಿಯೂ ಮಾರ್ಪಡುತ್ತಿದ್ದ. ಒಂದು ದೀಪದಿಂದ ಇನ್ನೊಂದು ದೀಪವು ಹೊತ್ತಿ ಬೆಳಗು ವಂತೆ ಒಂದು ಹೃದಯದಿಂದ ಇನ್ನೊಂದು ಹೃದಯ ಪ್ರಭಾವಿತಗೊಳ್ಳುತ್ತಿತ್ತು. ಈಮಾನಿನ ಮಾಧುರ್ಯ ಮತ್ತು ಇಸ್ಲಾಮಿನ ರುಚಿಯನ್ನು ಹತ್ತಿಸಿಕೊಂಡವರೆಲ್ಲ ತಮ್ಮ ಅದುವರೆಗಿನ ಜೀವನ ಕ್ರಮದ ಬಗ್ಗೆ ಮರುಗಿದರು... ಅಕಟಾ! ನಾವು ಇದುವರೆಗೆ ಅಲಕ್ಷ್ಯ ಮತ್ತು ಅಜ್ಞಾನಾಂಧಕಾರದಲ್ಲಿ ಮುಳುಗಿಬಿಟ್ಟಿದ್ದೆವಲ್ಲ! ನಮ್ಮ ಜೀವನವು ಆಟ-ವಿನೋದ ಮತ್ತು ಅರ್ಥಹೀನ ವಿಷಯಗಳಲ್ಲಿಯೇ ಕಳೆದು ಹೋಯಿತಲ್ಲ!! ನಿಜವಾದ ಜೀವನವು ಈಗಷ್ಟೇ ಪ್ರಾರಂಭವಾಗಿದೆ... ನಮಗೆ ಮೊದಲೇ ಈ ಅನುಗ್ರಹಗಳು ದೊರೆತಿರುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

ಪ್ರವಾದಿವರ್ಯರ(ಸ) ರಾಯಭಾರಿ ಮುಸ್‌ಅಬ್‌ರ(ರ) ಆತಿಥೇಯನಾಗುವ ಸೌಭಾಗ್ಯ ಅಸ್‌ಅದ್ ಬಿನ್ ಝುರಾರರಿಗೆ ದೊರೆಯಿತು. ಅವರ ಮನೆಯಲ್ಲಿ ಸದಾ ಮುಸ್ಲಿಮರು ಜಮಾಯಿಸಿರುತ್ತಿದ್ದರು. ಸತ್ಯದ ಪ್ರಸಾರಕ್ಕಾಗಿ ಸೂಕ್ತ ವಿಚಾರಗಳ ಬಗ್ಗೆ ಚರ್ಚೆ-ಸಂವಾದ ಗಳು ನಡೆಯುತ್ತಿದ್ದುವು. ಅವರೆಲ್ಲರ ಹೃದಯಾಂತರಾಳದ ಬಯಕೆ ಒಂದೇ ರೀತಿಯ ದ್ದಾಗಿತ್ತು... ಯಸ್ರಿಬ್‌ನ ಯಾವೊಂದು ಮನೆಯಲ್ಲೂ ಕುಫ್ರ್-ಶಿರ್ಕ್‌ನ ಯಾವುದೇ ಕುರುಹು ಉಳಿಯಬಾರದು ಮತ್ತು ಅಜ್ಞಾನ-ಪಥಭ್ರಷ್ಟತೆಯ ಕಾರ್ಮೋಡಗಳು ಚದುರಿ ಹಿದಾಯತ್‌ನ ಶುಭ್ರ ಆಕಾಶ ಗೋಚರವಾಗಬೇಕು. ಆ ಪಾವನ ವ್ಯಕ್ತಿತ್ವಗಳು ಪ್ರಸ್ತುತ ಕಾರ್ಯಕ್ಕಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿರಿಸಿದ್ದರು. ಅವರು ಕೂತಾಗ ಮತ್ತು ಎದ್ದಾಗ, ಉಣ್ಣುವಾಗ ಮತ್ತು ಕುಡಿಯುವಾಗ, ಸಭೆಯಲ್ಲೂ ಏಕಾಂತದಲ್ಲೂ ಅವರಿಗಿದ್ದುದು ಒಂದೇ ಧ್ಯಾನ- ಇಸ್ಲಾಮಿನ ಪ್ರಸಾರ ಮತ್ತು ಅಜ್ಞಾನದ ಅಂತ್ಯ. ಇಂತಹ ನಿಷ್ಕಳಂಕ ಪ್ರಯತ್ನಗಳು ಹೇಗೆ ತಾನೇ ವ್ಯರ್ಥವಾಗುತ್ತವೆ? ಅದೇನಿದ್ದರೂ ಯಸ್ರಿಬ್‌ನಲ್ಲಿ ಇಸ್ಲಾಮ್ ಬಹಳ ವೇಗವಾಗಿ ಹರಡತೊಡಗಿತು.

ಬನೀ ಅಬ್ದುಲ್ ಅಶ್‌ಹಲ್ ಮತ್ತು ಬನೀ ಝುಫರ್ ಇವೆರಡೂ ಯಸ್ರಿಬ್‌ನ ಪ್ರಮುಖ ಗೋತ್ರಗಳಾಗಿದ್ದುವು. ಅದುವರೆಗೂ ಸತ್ಯವಿಶ್ವಾಸದ ಅನುಗ್ರಹದಿಂದ ವಂಚಿತ

ವಾಗಿದ್ದುವು. ಒಂದು ದಿನ ಅಸ್‌ಅದ್ ಬಿನ್ ಝುರಾರ(ರ) ತಮ್ಮೊಡನೆ ಮುಸ್‌ಅಬ್(ರ) ಮತ್ತಿತರ ವಿಶ್ವಾಸಿಗಳನ್ನು ಕರಕೊಂಡು 'ಮರ್‌ಕ್'ನ ಬಾವಿಯ ಬಳಿಗೆ ತಲುಪಿದರು. ಪ್ರಸ್ತುತ ಎರಡೂ ಗೋತ್ರಗಳ ಮುಂದೆ ಧರ್ಮ ಸಂದೇಶವನ್ನಿಡುವುದು ಹೇಗೆಂಬ ವಿಷಯದಲ್ಲಿ ಅವಲೋಕನ ನಡೆಸುವುದು ಅವರ ಉದ್ದೇಶವಾಗಿತ್ತು. ಎಲ್ಲರೂ ತಮಗೆ ತೋಚಿದಂತೆ ಅಭಿಪ್ರಾಯಗಳನ್ನು ಮಂಡಿಸಿದರು. ಇಂತಿಂತಹ ರೂಪದಲ್ಲಿ ಪ್ರಚಾರವನ್ನು ಆರಂಭಿಸ ಬೇಕು... ಇದು ಸರಿಯಾದ ರೀತಿಯಾಗಿದೆ... ಇಂತಿಂತಹ ಪ್ರಕಾರದಲ್ಲಿ ಸನ್ಮಾರ್ಗದ ಸಂದೇಶವನ್ನು ಆರಂಭಿಸಬೇಕು... ಇತ್ಯಾದಿ. ಈ ಎಲ್ಲ ಸಲಹೆ, ಅಭಿಪ್ರಾಯಗಳಲ್ಲಿ ಸತ್ಯವಂತಿಕೆ, ನಿಷ್ಕಳಂಕತೆ, ದೇವನಲ್ಲಿ ಭರವಸೆ ಮತ್ತು ಸ್ಥಿರ ವಿಶ್ವಾಸ ಮತ್ತು ನಿಶ್ಚಯ ದಾರ್ಢ್ಯವು ಎದ್ದು ಕಾಣುತ್ತಿದ್ದುವು. ಇದು ಯಾವುದೇ ರಾಜಕೀಯ ಸಮಾವೇಶವಾಗಿರಲಿಲ್ಲ. ಇಲ್ಲಿ ದೇವನ ಸಜ್ಜನ ದಾಸರು ಮತ್ತು ದೇವಪ್ರವಾದಿಯ(ಸ) ಪ್ರಾಮಾಣಿಕ ಅನುಯಾಯಿ ಗಳಿದ್ದರು. ಅವರ ಮಟ್ಟಿಗೆ ಈಮಾನ್ ಮತ್ತು ಇಸ್ಲಾಮ್ ಜಗತ್ತಿನೆಲ್ಲ ಪ್ರಯೋಜನ ಗಳಿಗಿಂತಲೂ ಅಮೂಲ್ಯ ಮತ್ತು ಉನ್ನತವಾಗಿದ್ದುವು.

ಪ್ರಸ್ತುತ ಎರಡೂ ಗೋತ್ರಗಳ ಸರದಾರರಾದ ಸಅದ್ ಬಿನ್ ಮುಆಝ್ ಮತ್ತು ಉಸೈದ್ ಬಿನ್ ಹುಝೈರ್ ಆಗ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಅವರಿಬ್ಬರಿಗೂ ಯಾರೋ ಬಂದು ಸುದ್ದಿ ಮುಟ್ಟಿಸಿದರು, "ಮುಸ್ಲಿಮರು ನಿಮ್ಮ ಗೋತ್ರಗಳಲ್ಲಿ ಇಸ್ಲಾಮನ್ನು ಹರಡುವ ಬಗ್ಗೆ ಚರ್ಚಿಸುತ್ತಿದ್ದಾರೆ. ಅವರು ಯಾವುದಾದರೂ ಒಂದು ತೀರ್ಮಾನಕ್ಕೆ ಬಂದು ಮುಟ್ಟಿದರೆ ತಡಮಾಡದೆ ತಮ್ಮ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುವರು. ಈ ಮುಸ್ಲಿಮರು ತಮ್ಮ ಉದ್ದೇಶದಲ್ಲಿ ದೃಢನಿಶ್ಚಯಿಗಳಾಗಿದ್ದಾರೆ. ಯಾವುದೇ ವಿರೋಧ ಅಥವಾ ಪ್ರತಿರೋಧವು ಅವರ ಹುಮ್ಮಸ್ಸನ್ನು ತಣಿಸಲು ಶಕ್ತವಾಗಿಲ್ಲ. ಅವರ ಮಾತುಗಳಲ್ಲಿ ಎಂತಹ ಪ್ರಭಾವ ವಿರುತ್ತದೆಯೆಂದರೆ, ಅವರಿಂದ ಸಂದೇಶವನ್ನು ಪಡೆದವರೆಲ್ಲ ಅವರಂತೆಯೇ ಆಗಿ ಬಿಡುತ್ತಾರೆ. ಅವರಿಂದ ನಿಮ್ಮ ಗೋತ್ರಗಳನ್ನು ಯಾವ ರೀತಿಯಿಂದಲಾದರೂ ದೂರವಿರಿಸಲು ಪ್ರಯತ್ನಿಸಿರಿ. ಅನ್ಯಥಾ, ಆ ಜನರು ನಿಮ್ಮ ಗೋತ್ರದವರ ಬಳಿಗೆ ತಲುಪಿ ಬಿಟ್ಟರೆ, ಅವರ ಪ್ರಭಾವವನ್ನು ತಡೆಯುವುದು ಅಸಾಧ್ಯವಾದೀತು. ಕ್ಷೋಭೆಯು (ನಊದುಬಿಲ್ಲಾಹ್) ತಲೆಯೆತ್ತುವುದಕ್ಕಿಂತ ಮುಂಚೆಯೇ ಅದನ್ನು ದಮನಿಸುವುದು ಬುದ್ಧಿವಂತರ ಲಕ್ಷಣವಾಗಿದೆ. ಇಂತಹ ಸಂದರ್ಭಗಳಲ್ಲಿ ಸಣ್ಣ ಮಟ್ಟಿನ ಸಡಿಲಿಕೆಯೂ ದೊಡ್ಡ ನಷ್ಟಕ್ಕೆ ಹೇತುವಾದೀತು."

ಜಗಳಕ್ಕೆ ಬಂದವರು ಜಳಕಕ್ಕಿಳಿದರು!

ಮುಸ್‌ಅಬ್(ರ) ಮತ್ತು ಅಸ್‌ಅದ್(ರ) ತಮ್ಮ ಜನಾಂಗದ ಕಡೆಗೆ ಬರುತ್ತಾರೆಂದು ತಿಳಿಯುತ್ತಲೇ ಸಅದ್ ಬಿನ್ ಮುಆದ್ ಕೋಪದಿಂದ ಕಿಡಿಕಿಡಿಯಾದರು. ಅವರು ಹೊರಳಿ ಉಸೈದ್‌ರೊಡನೆ ಹೇಳುತ್ತಾರೆ, "ಓ ಉಸೈದ್! ನೀವು ಎಂತಹ ಅಲಕ್ಷ್ಯ ಮತ್ತು ಮರವೆಯಲ್ಲಿ ಬಿದ್ದುಕೊಂಡಿದ್ದೀರಿ? ಈ ಅಸ್‌ಅದ್ ಮತ್ತು ಮುಸ್‌ಅಬ್ ಸೇರಿ ನಮ್ಮ ಮನೆತನಗಳ

ಮುಗ್ಧರನ್ನು ಬುಟ್ಟಿಗೆ ಹಾಕುವ ಸನ್ನಾಹದಲ್ಲಿದ್ದಾರಲ್ಲ! ಈ ಫಿತ್ನವು ನಮ್ಮ ಜನರ ಮನೆ ಬಾಗಿಲಿಗೆ ಬಂದು ಮುಟ್ಟಿದೆಯಲ್ಲ!! ಹೋಗಿ ಅವರೊಡನೆ ಹೇಳಿ, ಇನ್ನು ಮುಂದೆ ನಮ್ಮ ಮೊಹಲ್ಲಗಳಿಗೆ ಕಾಲಿಟ್ಟರೆ ಚೆನ್ನಾಗಿರದು ಎಂದು. ಉಸೈದ್! ಈ ಮಾತನ್ನು ನಾನು ಸ್ವತಃ ಹೇಳಬಲ್ಲೆನಾದರೂ ಅಸ್‌ಅದ್ ನನ್ನ ಚಿಕ್ಕಮ್ಮನ ಮಗ ನೋಡಿ, ಅದಕ್ಕಾಗಿ ನಿಮ್ಮನ್ನು ಕಳುಹಿಸುತ್ತಿದ್ದೇನೆ."

ಈ ಮುಸ್ಲಿಮರು ತಮ್ಮ ಬೇಳೆ ಬೇಯಿಸಲು ನಮ್ಮ ಮನೆಗಳಿಗೆ ಹೊರಟಿದ್ದಾರೆ ಎಂದು ಉಸೈದ್ ಬಿನ್ ಹುರ್ಯ್ಯೆರ್ ಕೂಡಾ ರೋಷಾಕುಲರಾಗಿದ್ದರು. ಸಅದ್‌ರ ಮಾತುಗಳು ಅವರ ಕೋಪಾಗ್ನಿಗೆ ತುಪ್ಪ ಸುರಿದುವು. ಉಸೈದ್, ಶಸ್ತ್ರವನ್ನೆತ್ತಿಕೊಂಡು ಎಲ್ಲ ರೀತಿಯ ಪ್ರತಿರೋಧವನ್ನು ಎದುರಿಸಲು ಸಿದ್ಧನಾಗಿ ಹೊರಟರು. ಕುಲಪಕ್ಷಪಾತ ಮತ್ತು ಅಜ್ಞಾನಜನ್ಯ ಪ್ರತಾಪವು ಉತ್ತುಂಗದಲ್ಲಿತ್ತು... 'ಒಂದು ವೇಳೆ ಮುಸ್ಲಿಮರು ಅಹಿತಕರ ವಾದ ಮಾತನ್ನು ಹೇಳಿದರೆ, ನನ್ನ ಈಟಿ ಮತ್ತು ಖಡ್ಗಗಳು ಅದಕ್ಕುತ್ತರ ನೀಡುವುವು... ಆರಂಭ ನನ್ನಿಂದಾಗಲಿದೆ, ಅದನ್ನು ಮುಂದುವರಿಸಲು ನನ್ನ ಇಡೀ ಗೋತ್ರವು ಧಾವಿಸ ಲಿದೆ... ಹೀಗೆ ಮುಸ್ಲಿಮರ ವಿರುದ್ಧ ಯುದ್ಧ ನಡೆಯಬಹುದು... ಮುಸ್ಲಿಮರ ಸಂಖ್ಯೆಯೂ ಬಹಳ ಕಡಿಮೆ... ನಮ್ಮ ಗೋತ್ರವನ್ನು ನೋಡಿ ಇತರ ಗೋತ್ರಗಳೂ ಮುಸ್ಲಿಮರ ವಿರುದ್ಧ ಸಮರಕ್ಕಿಳಿಯಬಹುದು... ನಂತರ... ಈ ಹೊಸ ಧರ್ಮಕ್ಕೆ ಯಸ್ರಿಬ್‌ನಲ್ಲಿ ಕಾಲೂರುವುದು ಕಷ್ಟ ಮಾತ್ರವಲ್ಲ, ಅಸಾಧ್ಯವಾಗಿ ಬಿಡುತ್ತದೆ...' ಎಂಬ ಮಾತುಗಳು ಉಸೈದ್‌ರ ಮನಸ್ಸಿನಲ್ಲಿ ಸುಳಿದಾಡುತ್ತಿದ್ದುವು.

ಉಸೈದ್ ಶಸ್ತ್ರಸಜ್ಜಿತರಾಗಿ ಧಾವಿಸಿ ಬರುತ್ತಿರುವುದನ್ನು ಕಂಡು ಅಸ್‌ಅದ್ ಬಿನ್ ಝುರಾರ(ರ), "ನೋಡಿ ಮುಸ್‌ಅಬ್(ರ)! ಈ ಗೋತ್ರದ ಸರದಾರ ಬರುತ್ತಿದ್ದಾರೆ. ಅಲ್ಲಾಹನಿಚ್ಛಿಸಿದರೆ ಆತ ನಿಮ್ಮ ಮಾತನ್ನು ಆಲಿಸುವರು ಮತ್ತು ಇಸ್ಲಾಮಿನ ಸಂದೇಶವನ್ನು ಸ್ವೀಕರಿಸುವರು." ಮುಸ್‌ಅಬ್(ರ) ಹೇಳಿದರು, "ಆ ವ್ಯಕ್ತಿ ಕುಳಿತುಕೊಂಡರೆ, ಖಂಡಿತ ವಾಗಿಯೂ ನಾನು ಆತನೊಡನೆ ಮಾತನಾಡುವೆನು." ಅಷ್ಟು ಹೊತ್ತಿಗೆ ಉಸೈದ್ ದಾಪು ಗಾಲಿಡುತ್ತಾ ಅಲ್ಲಿಗೆ ಬಂದು, ಮುಸ್‌ಅಬ್‌ರ(ರ) ಮುಂದೆ ನಿಂತು ಮುಸ್ಲಿಮರನ್ನು ಬಾಯಿಗೆ ಬಂದಂತೆ ಬಯ್ದರು. ತರುವಾಯ, "ನೀವು ನಮ್ಮ ಗೋತ್ರದ ಮುಗ್ಧರನ್ನೂ ತಿಳಿಗೇಡಿಗಳನ್ನೂ ಬುಟ್ಟಿಗೆ ಹಾಕಲು ಬಂದಿದ್ದೀರಾ? ನೋಡಿ! ನಿಮಗೆ ನಾನು ಎಚ್ಚರಿಕೆ ನೀಡುತ್ತಿದ್ದೇನೆ... ನಿಮ್ಮ ಕೃತ್ಯದಿಂದ ಹಿಂದೆ ಸರಿಯಿರಿ. ಇಲ್ಲದಿದ್ದರೆ ನಿಮಗೆ ಒಳ್ಳೆಯದಾಗಲಿಕ್ಕಿಲ್ಲ."

ಮುಸ್‌ಅಬ್(ರ) ಆ ದೂಷಣೆ, ಎಚ್ಚರಿಕೆಗಳನ್ನೆಲ್ಲ ಮೌನವಾಗಿ ಕೇಳಿಸಿಕೊಂಡರು. ಆತ ಹೇಳಬೇಕಾದ್ದನ್ನು ಹೇಳಿ ಮುಗಿಸಿಯಾದ ಬಳಿಕ ಮಾತನಾಡಬೇಕೆಂದು ಮುಸ್‌ಅಬ್(ರ) ಬಯಸಿದರು. ಈ ರೀತಿಯ ರೋಷಾಕುಲನಾದ ವ್ಯಕ್ತಿಯ ಮಾತಿನ ಮಧ್ಯದಲ್ಲೇ ಬಾಯಿ ಹಾಕುವುದು ಉಚಿತವಲ್ಲ. ತಡೆದರೆ ಕೋಪಾಗ್ನಿ ಇನ್ನಷ್ಟು ಹೊತ್ತಿ ಉರಿಯಬಹುದು. ಕೋಪೋದ್ರಿಕ್ತ ಸ್ಥಿತಿಯಲ್ಲಿ ಒಳಿತಿನ ಮಾತು ಕೂಡಾ ಪ್ರತಿಕೂಲ ಪರಿಣಾಮ ಬೀರುತ್ತದೆ.

ಉಸೈದ್ ಬಯ್ದಾಡಿ ತನ್ನ ಮನಸ್ಸಿನೆಲ್ಲ ನಂಜನ್ನು ಕಾರಿ ಸುಮ್ಮನಾದ ಬಳಿಕ ಮುಸ್‌ಅಬ್(ರ) ಅತ್ಯಂತ ನಮ್ರತೆಯೊಂದಿಗೆ ಹೇಳಿದರು, "ನೀವು ಒಮ್ಮೆ ಕುಳಿತುಕೊಂಡು ನನ್ನ ಮಾತನ್ನಾಲಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ನನ್ನ ಮಾತು ನಿಮಗೆ ಇಷ್ಟವಾದರೆ ಅಂಗೀಕರಿಸಿರಿ. ಇಷ್ಟವಾಗದಿದ್ದರೆ, ಅದಕ್ಕೆ ಕಿವಿಗೊಡಬೇಡಿರಿ."

ಇಂಥ ಒಂದು ಮಧುರವಾದ ಮಾತನ್ನು ಕೇಳಿ ಉಸೈದ್‌ರಿಗೆ ಬಹಳ ಆಶ್ಚರ್ಯವಾಯಿತು. ಅರೆ! ಯಾವ ವ್ಯಕ್ತಿಗೆ ನಾನಿಷ್ಟೆಲ್ಲ ಕಹಿ ಮಾತನ್ನು ಉಗಿದು ಬಯ್ದನೋ ಆ ವ್ಯಕ್ತಿಯ ಬಾಯಿಯಿಂದ ಒಂದೇ ಒಂದು ಅಹಿತವಾದ ಶಬ್ದ ಹೊರಡಲಿಲ್ಲ! ಅವರು ಹುಬ್ಬು ಗಂಟಿಕ್ಕುವುದು ಬಿಡಿ, ಮಾರುತ್ತರ ತೀರಾ ಮಧುರ ಮತ್ತು ನಯವಾಗಿತ್ತು. ಸರಿ, ಇವರ ಮಾತನ್ನು ಕೇಳಿಯೇ ಬಿಡೋಣ. ಆಲಿಸುವುದರಲ್ಲೇನಿದೆ? ವ್ಯಕ್ತಿಯೊಬ್ಬನು ಹಗಲೂ ರಾತ್ರಿ ಅದೆಷ್ಟೋ ರೀತಿಯ ಮಾತುಗಳನ್ನಾಲಿಸುತ್ತಾನಲ್ಲವೇ? ನೋಡೋಣ, ಮುಸ್‌ಅಬ್ ಏನು ಹೇಳುತ್ತಾರೆಂದು!

ಉಸೈದ್ ತಮ್ಮ ಆಯುಧಗಳ ಸಮೇತ ನೆಲದ ಮೇಲೆ ಕುಳಿತುಕೊಂಡರು. ಅವರ ಕಿವಿಗಳು ಮುಸ್‌ಅಬ್‌ರ(ರ) ಮಾತುಗಳನ್ನಾಲಿಸಲು ಸನ್ನದ್ಧವಾಗಿದ್ದುವು. ಈ ಉದ್ವೇಗ ಮತ್ತು ಕಾತರವು ಸತ್ಯಸ್ವೀಕಾರ ಹಾಗೂ ಮೋಕ್ಷದ ಕಡೆಗೆ ಪರೋಕ್ಷವಾಗಿ ಬೊಟ್ಟು ಮಾಡುತ್ತಿತ್ತು. ಹ. ಮುಸ್‌ಅಬ್‌ರು(ರ) ಅತ್ಯಂತ ಪ್ರಭಾವಶಾಲಿ ಶೈಲಿಯಲ್ಲಿ ಇಸ್ಲಾಮೆಂದರೇನು ಎಂಬುದನ್ನು ಉಸೈದ್‌ರಿಗೆ ತಿಳಿಹೇಳಿದರು. ಉಸೈದ್ ಗಮನವಿಟ್ಟು ಒಂದೊಂದು ಪದವನ್ನೂ ಆಲಿಸುತ್ತಿದ್ದರು. ಇಸ್ಲಾಮಿನ ಯಾವುದೇ ಮಾತು ಅವರನ್ನು ಭೀತಗೊಳಿಸಲಿಲ್ಲ. ವಾಸ್ತವದಲ್ಲಿ ಹೊಸ ಮಾತು ಮೊದಮೊದಲು ಮನಸ್ಸಿಗೆ ಹಿಡಿಸುವುದಿಲ್ಲ. ಆದರೆ ಉಸೈದ್‌ರ ಪಾಲಿಗೆ ಸತ್ಯಸ್ವೀಕಾರದ ಸೌಭಾಗ್ಯ ಅದಾಗಲೇ ವಿಧಿಸಲ್ಪಟ್ಟಿತ್ತು.

ಮುಸ್‌ಅಬ್(ರ), ಇಸ್ಲಾಮಿನ ವಾಸ್ತವಿಕ ಶಿಕ್ಷಣವನ್ನು ತಿಳಿಸಿ ಆದ ಬಳಿಕ, ಅದರ ಪ್ರಭಾವವನ್ನು ಇನ್ನಷ್ಟು ಸುದೃಢಗೊಳಿಸಲಿಕ್ಕಾಗಿ ಪವಿತ್ರ ಕುರ್‌ಆನಿನ ಕೆಲವು ವಚನಗಳನ್ನು ಓದಿ ಹೇಳಿದರು. ಉಸೈದ್, ಮೌನವಾಗಿ ಪವಿತ್ರ ವಚನಗಳನ್ನು ಆಲಿಸಿದರು. ತರುವಾಯ ಈ ಮುಂಚೆಗಿಂತ ತೀರಾ ಭಿನ್ನವಾದ ಶೈಲಿಯಲ್ಲಿ ಕೇಳುತ್ತಾರೆ,

"ನಿಮ್ಮ ಧರ್ಮದಲ್ಲಿ ಯಾರಾದರೂ ಬರಬಯಸಿದರೆ ಮೊತ್ತಮೊದಲು ನೀವು ಏನು ಮಾಡುತ್ತೀರಿ?"

"ಅಂಥ ಮಂದಿಯನ್ನು ನಾವು ಸ್ನಾನ ಮಾಡಿಸಿ, ಶುಭ್ರ ಬಟ್ಟೆಯನ್ನು ತೊಡಿಸುತ್ತೇವೆ ಮತ್ತು ಸತ್ಯದ ಸಾಕ್ಷ್ಯ ವಚನವನ್ನು ಕಲಿಸಿಕೊಡುತ್ತೇವೆ."

ಉಸೈದ್, ಆಯುಧಗಳನ್ನು ಅಲ್ಲೇ ಬಿಸುಟು, ನೀರಿನ ತೊಟ್ಟಿಯೆಡೆಗೆ ಧಾವಿಸಿದರು. ಅಲ್ಲಿ ತಮ್ಮ ಬಟ್ಟೆಯನ್ನು ಶುಚಿಗೊಳಿಸಿ, ಸ್ನಾನ ಮಾಡತೊಡಗಿದರು. ಮುಸ್‌ಅಬ್, ಅಸ್‌ಅದ್

ಮತ್ತಿತರ ಮುಸ್ಲಿಮರು ಉಸೈದ್‌ರ ಈ ತಯಾರಿಯನ್ನು ಕಂಡು ಸಂತೋಷ ಪಡುತ್ತಿದ್ದರು. ಈಗ ಸ್ವಲ್ಪವೇ ಹೊತ್ತು ಮುಂಚೆ ಬಯ್ಗುಳಗಳನ್ನು ಸುರಿಸಿದ ನಾಲಗೆಯು ಇನ್ನು ಅಲ್ಲಾಹನ ಮಹಾನತೆ ಮತ್ತು ಮುಹಮ್ಮದ್‌ರ(ರ) ಪ್ರವಾದಿತ್ವಕ್ಕೆ ಸಾಕ್ಷ್ಯ ವಚನವನ್ನು ನುಡಿಯಲಿದೆ!

ಉಸೈದ್ ಸ್ನಾನ ಮಾಡಿ, ಮಡಿಯುಟ್ಟು ಮುಸ್‌ಅಬ್‌ರ(ರ) ಮುಂದೆ ಬಂದು ನಿಂತರು. ತರುವಾಯ ಘನಗಂಭೀರವಾಗಿ ಸತ್ಯದ ಸಾಕ್ಷ್ಯ ವಚನ ಪಠಿಸಿದರು. ಹೀಗೆ ಇಸ್ಲಾಮ್‌ನ ಸಂದೇಶ ಪ್ರಚಾರವನ್ನು ತಡೆಯಲು ಬಂದ ಉಸೈದ್ ಸ್ವಯಂ ಮುಸ್ಲಿಮ ನಾಗಿ ಹೊರಡುತ್ತಿದ್ದಾರೆ... ಸಅದ್ ಬಿನ್ ಮುಆದ್ ಭಾರೀ ಕುತೂಹಲದೊಂದಿಗೆ ಉಸೈದ್ ಬಿನ್ ಹುಝೈರ್‌ರನ್ನು(ರ) ಕಾಯುತ್ತಿದ್ದಾರೆ... ಮುಸ್ಲಿಮರಿಂದ ಉಸೈದ್‌ರಿಗೆ ಯಾವ ಉತ್ತರ ದೊರೆತಿರಬಹುದು, ಈ ಘಟನೆಯು ಯಾವ ರೂಪಕ್ಕೆ ತಿರುಗಬಹುದು, ಉಸೈದ್‌ರ ಮರಳಿಕೆಯಲ್ಲಿ ವಿಳಂಬ ಯಾಕಾಗುತ್ತಿದೆ ಎಂಬಿತ್ಯಾದಿ ಆಲೋಚನೆಗಳು ಸಅದ್‌ರನ್ನು ಕಳವಳಕ್ಕೀಡು ಮಾಡುತ್ತಿದ್ದುವು. ಮನಸ್ಸಿನಲ್ಲಿ ಹಲವು ರೀತಿಯ ಗುಮಾನಿಗಳು ಹುಟ್ಟುತ್ತಿದ್ದುವು. ಮಾತಿಗೆ ಮಾತು ಬೆಳೆದು ಎಲ್ಲಾದರೂ ಹೊಯ್‌ಕೈ ನಡೆದಿರಬಹುದೇ? ಅದು ಮುಂದಕ್ಕೆ ಯುದ್ಧದ ರೂಪ ತಾಳಬಹುದೇ? ಎಲ್ಲಾದರೂ ಅಹಿತಕರ ಘಟನೆ ನಡೆದಿರಬಹುದೇ... ಆತಂಕ ಮಿಶ್ರಿತ ಗುಮಾನಿಗಳು!

ಬಹಳ ಹೊತ್ತು ಕಳೆದ ಬಳಿಕ, ದೂರದಿಂದ ಉಸೈದ್ ಬರುತ್ತಿರುವುದು ಕಂಡು ಸಅದ್‌ರಿಗೆ ಆಶ್ಚರ್ಯವಾಗುತ್ತದೆ. ಇದು ಉಸೈದ್ ಇಲ್ಲಿಂದ ಹೋಗುವಾಗ ಇದ್ದಂತಹ ಮುಖಭಾವ ಅಲ್ಲ. ಹೌದು, ಉಸೈದ್ ಅಡಿಯಿಂದ ಮುಡಿ ತನಕ ಬದಲಾಗಿ ಬಿಟ್ಟಿದ್ದಾರೆ. ಹೃದಯದ ಪಾವಿತ್ರ್ಯತೆ ಮತ್ತು ಮನಸ್ಸಿನ ಪರಿಶುದ್ಧತೆಯು ಅವರ ಮುಖಾರವಿಂದದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಅವರು ನಡೆದು ಬರುತ್ತಿರುವ ರೀತಿಯೂ ಇಲ್ಲಿಂದ ಹೋಗುವಾಗ ಇದ್ದುದಕ್ಕಿಂತ ತೀರಾ ಭಿನ್ನವಾಗಿದೆ. ಈಮಾನಿನ ಪ್ರಕಾಶ ಕಿರಣವು ಅವರ ಕಣ್ಣುಗಳಿಂದ ಹೊರಸೂಸುತ್ತಿದೆ. ವಿಶ್ವಾಸದ ಕಮಲದಳಗಳು ಅವರ ಕಪೋಲ-ಅಧರಗಳಲ್ಲಿ ಬಿರಿಯುತ್ತಿವೆ. ವಸ್ತುತಃ ಉಸೈದ್‌ರ(ರ) ಕೈ-ಕಾಲುಗಳು, ಕಣ್ಣುಗಳು, ಕದಪು, ಹಣೆ... ಒಟ್ಟಿನಲ್ಲಿ ಇಡೀ ದೇಹ ಮುಂಚಿನದೇ ಆಗಿತ್ತು. ಆದರೆ ಹೃದಯ ಬದಲಾಗಿತ್ತು. ಹೃದಯ ಮಾರ್ಪಟ್ಟ ಕಾರಣ ಜೀವನವೇ ಸಂಪೂರ್ಣ ಬದಲಾಗಿ ಬಿಟ್ಟಿತು. ಜೀವನದ ಸಕಲ ಕಾರ್ಯ-ಚಟುವಟಿಕೆಗಳೂ ಹೃದಯದಿಂದಲೇ ಹುಟ್ಟು ಪಡೆಯುತ್ತವೆ. ಅದರ ಅಚ್ಚಿ ನಲ್ಲಿಯೇ ಜೀವನ ರೂಪು ತಾಳುತ್ತದೆ.

ತರುವಾಯ ಮುಸ್‌ಅಬ್‌ರ(ರ) ಭೇಟಿಯು ಸಅದ್‌ರೊಂದಿಗಾಗುತ್ತದೆ. ಸಅದ್, ಕೆಲವು ಪ್ರಶ್ನೆಗಳನ್ನಿಡುತ್ತಾರೆ... ಸ್ವಲ್ಪ ಹೊತ್ತಿನ ವರೆಗೆ ಚರ್ಚೆ-ಸಂವಾದ ಮತ್ತು ಪ್ರಶ್ನೋತ್ತರ ಪ್ರಕ್ರಿಯೆ ಮುಂದುವರಿಯುತ್ತದೆ. ಮುಸ್‌ಅಬ್(ರ) ಸಅದ್‌ರ ಪ್ರತಿಯೊಂದು ಪ್ರಶ್ನೆಗೂ ಸಮಾಧಾನಕರ ಉತ್ತರವನ್ನು ನೀಡುತ್ತಾರೆ. ಇಸ್ಲಾಮಿನ ವಾಸ್ತವಿಕಾಂಶಗಳನ್ನು ಸ್ಪಷ್ಟವಾಗಿ ಅರುಹುತ್ತಾರೆ. ಯಾವುದೇ ಸಂಶಯ ಉಳಿಯಬಾರದು, ಕೇವಲ ಸಾರಾಂಶ ಸಾಲದು, ದೀರ್ಘ ಉತ್ತರ

ನೀಡಬೇಕು ಮತ್ತು ಪ್ರಶ್ನಿಸುವವರ ಮನಸ್ಸಿನಲ್ಲಿ ಇಸ್ಲಾಮ್ ಸಂಪೂರ್ಣ ಇಳಿದು ಹೋಗಬೇಕೆಂಬುದು ಮುಸ್‌ಅಬ್‌ರ ಇಂಗಿತವಾಗಿತ್ತು. ಹೀಗೆ ಅವರ(ರ) ಉತ್ತರ ಗಳಿಂದ ಸಅದ್ ಸಂತೃಪ್ತರಾಗುತ್ತಾರೆ. ವಾಸ್ತವಿಕಾಂಶಗಳು ಅವರ ಕಣ್ಣ ಮುಂದೆ ಅನಾವರಣ ಗೊಳ್ಳುತ್ತವೆ. ಸತ್ಯವು ಸ್ಪಷ್ಟವಾಯಿತು, ಸದಾಚಾರವು ಪ್ರಕಟವಾಯಿತು, ಮೋಕ್ಷ ಮತ್ತು ವಿಜಯದ ನೇರ ಹಾದಿಯು ಕೇವಲ ಇಸ್ಲಾಮ್ ಆಗಿದೆಯೆಂಬ ವಿಶ್ವಾಸವೂ ಅವರಲ್ಲಿ ಉಂಟಾಯಿತು... ಇದುವರೆಗೂ ನಾನು ಮತ್ತು ನನ್ನ ಗೋತ್ರದವರು ಅಜ್ಞಾನದ ಚಕ್ರವ್ಯೂಹ ದಲ್ಲಿ ಸಿಲುಕಿ ಒದ್ದಾಡುತ್ತಿದ್ದೆವು... ಪಥಭ್ರಷ್ಟತೆ ಮತ್ತು ಅವಿವೇಕಿತನದ ಜೀವನವನ್ನು ಇನ್ನು ಮುಂದೆ ಬದಲಿಸಬೇಕು... ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಅನುಸರಣೆಯ ಹೊರತು ಅಲ್ಲಾಹನನ್ನು ಅರಿಯುವುದು ಅಸಾಧ್ಯ. ಅವರೇ ಸತ್ಯ ಮತ್ತು ಸದಾಚಾರದ ಕೇಂದ್ರವಾಗಿದ್ದಾರೆ.

ಸಅದ್ ಬಿನ್ ಮುಆದ್ ಸಸಂತೋಷ ಎದ್ದು ನಿಂತು ಸತ್ಯದ ಸಾಕ್ಷ್ಯ ವಚನವನ್ನು ಪಠಿಸುವ ಮೂಲಕ ಮುಸ್ಲಿಮರಾದರು. ಸತ್ಯಸ್ವೀಕಾರದ ಬಳಿಕ ಅವರು ತನ್ನ ಗೋತ್ರದೆಡೆಗೆ ಹೊರಡುತ್ತಾರೆ. ತರುವಾಯ ಅತೀವ ಉತ್ಸಾಹ ಮತ್ತು ಹುರುಪಿನಿಂದ ಸಂದೇಶ ಪ್ರಚಾರ ನಡೆಸುತ್ತಾರೆ. ಗೋತ್ರದ ಮಂದಿ ಸಅದ್‌ರನ್ನು(ರ) ಬಹಳವಾಗಿ ಗೌರವಿಸುತ್ತಿದ್ದರು. ಅವರ ಯುಕ್ತಿವಂತಿಕೆ ಮತ್ತು ದೂರದರ್ಶಿತ್ವವು ಜನಜನಿತವಾಗಿತ್ತು. ಹೀಗೆ ಅವರ ಪ್ರಭಾವದಿಂದ ಬನೀ ಅಬ್ದುಲ್ ಅಶ್‌ಹಲ್ ಗೋತ್ರದ ಸಕಲರೂ ಒಂದೇ ದಿನದಲ್ಲಿ ಮುಸ್ಲಿಮರಾಗಿ ಮಾರ್ಪಟ್ಟರು.

ಸಅದ್ ಬಿನ್ ಮುಆದ್‌ರ ಇಸ್ಲಾಮ್ ಸ್ವೀಕಾರದಿಂದಾಗಿ ಯಸ್ರಿಬ್‌ನಲ್ಲಿ ಮುಸ್ಲಿಮರಿಗೆ ಆನೆ ಬಲ ದೊರೆತಂತಾಯಿತು. ಪ್ರಚಾರ ಮತ್ತು ಬೋಧನೆಯ ಕಾರ್ಯವು ಇನ್ನಷ್ಟು ಚುರುಕಾಯಿತು. ಯಸ್ರಿಬ್‌ನ ಜನರು ಬಹುಶಃ ಬಹಳ ಕಾಲದಿಂದ ಸನ್ಮಾರ್ಗದರ್ಶನಕ್ಕೆ ಕಾತರಿಸುತ್ತಿದ್ದರೇನೋ... ಸತ್ಯದ ಧ್ವನಿಯು ಕಿವಿಗೆ ಸೋಂಕಿದರಷ್ಟೇ ಸಾಕು, ಏಕದೇವನ ಆರಾಧನೆ ಮತ್ತು ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಅಂಗೀಕರಿಸಿ ಇಸ್ಲಾಮಿನ ಪ್ರಾಮಾಣಿಕ ಅನುಯಾಯಿಯಾಗಿ ಮಾರ್ಪಟ್ಟರು. ಅವರ ಗುಣ-ಸ್ವಭಾವ ಮತ್ತು ಪ್ರಕೃತಿಗೆ ಇಸ್ಲಾಮೀ ಶಿಕ್ಷಣವು ಬಹಳ ಅನುರೂಪವಾಗಿತ್ತು. ಸಣ್ಣದಾದ ತಿಕ್ಕುವಿಕೆಗೇ ಅವರ ಹೃದಯಕ್ಕೆ ಅಂಟಿದ್ದ ತುಕ್ಕು ಉದುರಿ ಹೋಯಿತು. ಅವರು ಮಕ್ಕಾದವರಂತಹ ಹಠಮಾರಿತನವನ್ನು ಹೊಂದಿರಲಿಲ್ಲ. ಬದಲಾಗಿ ಸತ್ಯಪ್ರೇಮಿಗಳಾಗಿದ್ದರು... ಸತ್ಯವು ಅನಾವರಣಗೊಂಡಾಗ ಅದನ್ನು ಅಂಗೀಕರಿಸಲು ಹಿಂದೆ ಮುಂದೆ ನೋಡುವವರಾಗಿರಲಿಲ್ಲ... ಸತ್ಯವಿಶ್ವಾಸ ಸ್ವೀಕರಿಸುವಾಗ ಮೀನ-ಮೇಷ ಎಣಿಸದಿರುವುದೇ ಸೌಭಾಗ್ಯವಂತರ ಲಕ್ಷಣವಾಗಿದೆ.

ತರುವಾಯ, ಪುನಃ ಯಸ್ರಿಬ್‌ನಿಂದ ಜನರು ಮಕ್ಕಾ ನಗರಕ್ಕೆ ಬಂದರು. ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದರು. ಅನಾಥಮುತ್ತು(ಸ) ಆಗಂತುಕರ ಮುಂದೆ ಇಸ್ಲಾಮಿನ ಸಂದೇಶವನ್ನಿಟ್ಟರು. ಪವಿತ್ರ ಕುರ್‌ಆನನ್ನು ಓದಿ ಕೇಳಿಸಿದರು. ಒಳಿತಿನ ಆಹ್ವಾನ

ನೀಡಿದರು. ಕೆಡುಕುಗಳನ್ನು ಖಂಡಿಸಿದರು. ಈಗ ಈ ಮಂದಿ ಮಕ್ಕಾದಿಂದ ಯಸ್ರಿಬ್‌ಗೆ ಮರಳಿ, ನಗರವಿಡೀ ಇಸ್ಲಾಮನ್ನು ಹರಡಿದರು. ಪುರುಷರಷ್ಟೇ ಅಲ್ಲ, ಸ್ತ್ರೀಯರೂ ದೇವನ ಸಂದೇಶವನ್ನು ಇತರರಿಗೆ ತಲುಪಿಸುವಲ್ಲಿ ತೊಡಗಿಕೊಂಡರು. ಮಾರುಕಟ್ಟೆ, ಸಭೆ-ಸಮಾರಂಭಗಳು, ಗೋಮಾಳಗಳು ಮತ್ತು ಛತ್ರಗಳು ಎಲ್ಲೆಂದರಲ್ಲಿ ಇಸ್ಲಾಮಿನದೇ ಚರ್ಚೆ... ಹೀಗೆ ಯಸ್ರಿಬ್‌ನಲ್ಲಿ, ಇಸ್ಲಾಮ್ ಬಹಳ ತೀವ್ರಗತಿಯಲ್ಲಿ ಹರಡತೊಡಗಿತು... ಕುಟುಂಬ, ಪರಿವಾರ, ಮನೆತನಗಳಷ್ಟೇ ಅಲ್ಲ, ಗೋತ್ರಕ್ಕೆ ಗೋತ್ರ ಗಳೇ ಇಸ್ಲಾಮಿನ ಆಶ್ರಯದಲ್ಲಿ ಒಳಪಡತೊಡಗಿದವು. ಪರಿಣಾಮವಾಗಿ, ಸತ್ಯದ ಪ್ರಚಾರ ಕಾರ್ಯದಲ್ಲಿ ಯಸ್ರಿಬ್‌ನ ಒಬ್ಬೊಬ್ಬ ಮುಸ್ಲಿಮನೂ ಮುಸ್‌ಅಬ್ ಆಗಿ ಮಾರ್ಪಟ್ಟರು.

ಸತ್ಯಸ್ವೀಕಾರದ ಅಪರಾಧದಲ್ಲಿ...

ಇತ್ತ, ಮಕ್ಕಾದಲ್ಲಿ ಕುರೈಶ್ ಸತ್ಯನಿಷೇಧಿಗಳು ತೀವ್ರ ಸಂದಿಗ್ಧತೆಯಲ್ಲಿದ್ದಾರೆ. ಅವರ ಎಲ್ಲ ರೀತಿಯ ವಿರೋಧಗಳ ಹೊರತಾಗಿಯೂ ಇಸ್ಲಾಮ್ ಸರಾಗವಾಗಿ ಹರಡುತ್ತಿದೆ. ಜನರು ಹೊರನಾಡಿನಿಂದ ಬರುತ್ತಾರೆ. ಮುಹಮ್ಮದ್‌ರ(ಸ) ಮಾತುಗಳನ್ನಾಲಿಸಿ ಪ್ರಭಾವಿತರಾಗು ತ್ತಾರೆ... ಕುರ್‌ಆನಿನ ಯುಕ್ತಿಪೂರ್ಣ ಸರಳ ಸಾಹಿತ್ಯ ಸಂಪತ್ತು ಕಂಡು ಕುರೈಶರ ಕಾವ್ಯ-ಮಾಟಗಳೆಂಬ ಆರೋಪಗಳೆಲ್ಲ ಸುಳ್ಳೆಂದು ಸಾಬೀತುಗೊಳ್ಳುತ್ತಿವೆ. ಅವರು ಮತ್ತೊಮ್ಮೆ ಒಟ್ಟು ಸೇರುತ್ತಾರೆ ಮತ್ತು ಒಮ್ಮತದ ತೀರ್ಮಾನಕ್ಕೆ ಬರುತ್ತಾರೆ... ಈ ಬಾರಿಯ ಹಜ್ಜ್ ಋತುವಿನಲ್ಲಿ ಆಗಮಿಸುವ ಹೊರನಾಡಿನ ಗೋತ್ರಗಳ ಜನರು ಮುಹಮ್ಮದ್‌ರನ್ನು(ಸ) ಭೇಟಿಯಾಗದಂತೆ ನೋಡಿಕೊಳ್ಳಬೇಕು... ಅವರ ಮಾತುಗಳನ್ನು ಆಲಿಸುವುದರಿಂದ ಮತ್ತು ಮುಸ್ಲಿಮರೊಡನೆ ಬೆರೆಯುವುದರಿಂದ ತಪ್ಪಿಸಬೇಕು... ಇದುವರೆಗೆ ನಮ್ಮ ಯಾವ ಮಾತೂ ಹೊರಗಿನ ಜನರ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದಿಲ್ಲ... ಯಸ್ರಿಬ್‌ನಿಂದ ಬಂದವರೆಲ್ಲ ಮುಹಮ್ಮದ್‌ರನ್ನು(ಸ) ಭೇಟಿಯಾಗುತ್ತಲೇ ಅವರ ಅನುಯಾಯಿಗಳಾಗಿ ಮಾರ್ಪಟ್ಟಿದ್ದಾರೆ... ಇನ್ನು ಬರುವವರಲ್ಲಿ ಇಬ್ನು ಅಬ್ದುಲ್ಲಾರ(ಸ) ಬಗ್ಗೆ ದ್ವೇಷ ಭಾವನೆ ಕೆರಳುವಂತಹ ಮಾತುಗಳನ್ನು ಪ್ರಚಾರ ಮಾಡುವುದೇ ನಮಗೆ ಉಳಿದಿರುವ ದಾರಿ... ಮುಹಮ್ಮದ್ ಬಿನ್ ಅಬ್ದುಲ್ಲಾ ಓರ್ವ ಶಕುನ ಹೇಳುವವ ಎಂದು ಪ್ರಚಾರ ಮಾಡಬೇಕು... ಸಮಾಲೋಚನಾ ಸಭೆಯಲ್ಲಿದ್ದ ಹೆಚ್ಚಿನ ಮಂದಿ ಹೇಳಿದರು.

"ನಾನು ಬಹಳಷ್ಟು ಶಕುನಿಗರನ್ನು ಕಂಡಿದ್ದೇನೆ. ಅವರ ಮಾತುಗಳನ್ನೂ ಆಲಿಸಿದ್ದೇನೆ. ಆದರೆ ಮುಹಮ್ಮದ್(ಸ) ಹೇಳುವ ಮಾತುಗಳು ಶಕುನಿಗರ ಮಾತುಗಳಿಗಿಂತ ತೀರಾ ಭಿನ್ನವಾದವುಗಳಾಗಿವೆ. ಇನ್ನು ಯಾರಾದರೂ ನಮ್ಮ ಆರೋಪಗಳನ್ನು ಮುಹಮ್ಮದ್‌ನ ಮಾತುಗಳಿಗೆ ತುಲನೆ ಮಾಡಿ ನೋಡಿದರೆ ಮತ್ತು ಅದರಲ್ಲಿ ಕಣಿ ಹೇಳುವಂತಹದ್ದೇನೂ ಕಾಣದಿದ್ದರೆ, ನಾವಾಗಿಯೇ ಜನರ ಮುಂದೆ ಸುಳ್ಳುಗಾರರೆಂದು ಸಾಬೀತಾದಂತಾಗುತ್ತದೆ" ವಯೋವೃದ್ಧ ವಲೀದ್ ಬಿನ್ ಮುಗೀರಾ ಪ್ರತಿಕ್ರಿಯಿಸಿದರು.

"ಹಾಗಿದ್ದರೆ, ಈ ವ್ಯಕ್ತಿ ಹುಚ್ಚ ಎಂದು ಪ್ರಚಾರ ಮಾಡುವೆವು" ಸಭೆಯ ಗದ್ದಲದೆಡೆಯಿಂದ ಒಂದು ಮಾತು ಹೊರಟಿತು.

ವಲೀದ್ ಅದನ್ನೂ ಅಲ್ಲಗಳೆದರು, "ನಿಮ್ಮ ಈ ಮಾತೂ ತಪ್ಪೆಂದು ಸಾಬೀತಾಗುತ್ತದೆ... ಮುಹಮ್ಮದ್‌ನಲ್ಲಿ ಹುಚ್ಚುತನದ ಯಾವುದೇ ಲಕ್ಷಣ ಗೋಚರಿಸುವುದಿಲ್ಲ."

"ಹಾಗಾದರೆ, ಮುಹಮ್ಮದ್(ಸ) ಓರ್ವ ಕವಿಯೆಂದು ನಾವು ಹೇಳುವೆವು."

"ಕವನ ಮತ್ತದರ ಪ್ರಕಾರಗಳ ಬಗ್ಗೆ ಅರಬರಿಗಿಂತ ಹೆಚ್ಚು ಯಾರು ಬಲ್ಲರು? ಮುಹಮ್ಮದ್‌ನ ವಾಣಿಯು ಯಾವ ರೂಪದಲ್ಲೂ ಕವಿವಾಣಿಗೆ ಹೋಲುವುದಿಲ್ಲವಲ್ಲ" ವಲೀದ್ ನಿಲುವಂಗಿಯ ಗುಂಡಿ ಬಿಚ್ಚುತ್ತಾ ಹೇಳಿದರು.

"ನೀವು ನಮ್ಮ ಒಂದೊಂದು ಉಪಾಯವನ್ನೂ ನಿರುತ್ತೇಜಿಸುತ್ತಿದ್ದೀರಲ್ಲ! ಸರಿ, ಕೊನೆಯದಾದ ಉಪಾಯವೊಂದಿದೆ... ಮುಹಮ್ಮದ್ ಓರ್ವ ಮಾಟಗಾರನೆಂದು ಹೇಳೋಣ. ಅವರ ಮಾತಿನಲ್ಲಿ ಮೋಡಿಯಿದೆ, ಅವರ ಧ್ವನಿಯಲ್ಲಿ ಮಾಟವಿದೆ ಮತ್ತು ಅವರ ರೂಪವೇ ಒಂದು ರೀತಿಯ ವಿಲಕ್ಷಣ ಆಕರ್ಷಣೆಯನ್ನು ಹೊಂದಿದೆ. ಭೇಟಿಯಾ ದವರು ಅವರಲ್ಲಿ ಅನುರಕ್ತರಾಗಿ ಬಿಡುತ್ತಾರೆ ಎಂದು ಪ್ರಚಾರ ಮಾಡೋಣ" ಎಂದು ಕೆಲವರು ಅಭಿಪ್ರಾಯಪಟ್ಟರು.

"ಈ ಅಪವಾದವೂ ಸುಳ್ಳೆಂದು ಸಾಬೀತಾಗಬಹುದು. ಮುಹಮ್ಮದ್‌ನ ಮೇಲೆ ಹೊರಿಸುವ ಆರೋಪವು ನಿಜವೆಂದು ಸಾಬೀತಾಗುವಂತಿರಬೇಕು ಮತ್ತು ಜನರ ದೃಷ್ಟಿ ಯಲ್ಲಿ ನಾವೂ ಗೌರವಾರ್ಹರಾಗಿ ಉಳಿಯಬೇಕು. ಸಹೋದರರೇ! ಮಾಟಗಾರರು ಸಾಮಾನ್ಯವಾಗಿ ಹೊಲಸು ಮತ್ತು ಕೊಳಕರಾಗಿರುತ್ತಾರೆ. ಮುಹಮ್ಮದನಾದರೋ ಸದಾ ಮಡಿವಂತಿಕೆ ಯುಳ್ಳವನು. ಅದೂ ಅಲ್ಲದೆ ಆತನ ಮುಖದಲ್ಲಿ ಎದ್ದು ಕಾಣುವ ಪ್ರಬುದ್ಧತೆ ಮತ್ತು ಪರಿಶುದ್ಧತೆಯಿದೆಲ್ಲ, ಅದನ್ನು ನೋಡುಗರಿಂದ ಹೇಗೆ ಮರೆಮಾಚ ಬಲ್ಲಿರಿ?" ಅನುಭವಿ ಮತ್ತು ಲೋಕಜ್ಞಾನಿಯಾದ ವಯೋವೃದ್ಧ ವಲೀದ್‌ರ ಮಾತಿನಿಂದ ಕುರೈಶ್ ಸರದಾರರು ನಿರುತ್ತರರಾದರು. ಸಮರ್ಪಕ ಉತ್ತರ ಅವರಿಂದ ಹೊರಡದಾಯಿತು.

ಅಸತ್ಯದ ಒಂದು ವಿಶೇಷ ಗುಣವಿದೆ. ಅದೆಂದರೆ, ಸತ್ಯವು ಯಶಸ್ವಿಯಾಗುತ್ತಿರುವುದನ್ನು ಕಂಡು ಅಸತ್ಯವು ಹಿಂಸೆ-ದೌರ್ಜನ್ಯಕ್ಕಿಳಿಯುತ್ತದೆ. ಬಲವಾದ ಸಾಕ್ಷ್ಯಗಳನ್ನು ಕೇಳಿಯೂ ಸ್ಪಷ್ಟವಾದ ನಿದರ್ಶನಗಳನ್ನು ಕಂಡೂ ಅಸತ್ಯದ ಅಜ್ಞಾನವು ಇನ್ನಷ್ಟು ಗಾಢವಾಗುತ್ತದೆ. ಕುರೈಶ್ ಸತ್ಯನಿಷೇಧಿಗಳು ಸಂಪೂರ್ಣ ಶಕ್ತಿಯೊಂದಿಗೆ ಅನಾಥಮುತ್ತು(ಸ) ಮತ್ತವರ ಅನುಚರರನ್ನು ಎದುರಿಸಲು ಸಜ್ಜಾದರು. ಆ ಹತಭಾಗ್ಯರು ಸತ್ಯವಿಶ್ವಾಸಿಗಳ ಮೇಲೆ ತಮ್ಮಿಂದ ಸಾಧ್ಯವಿರುವ ಎಲ್ಲ ತರದ ಹಿಂಸೆ-ದೌರ್ಜನ್ಯವನ್ನು ಎಸಗಿದರು. ಸತ್ಯವನ್ನು ಅಳಿಸಲೋಸುಗ ಯಾವೆಲ್ಲ ಕೆಡುಕುಗಳನ್ನು ಪ್ರಯೋಗಿಸಲು ಸಾಧ್ಯವಿತ್ತೋ ಅದೆಲ್ಲವನ್ನೂ ಅವರು ಪ್ರಯೋಗಿ ಸಿದರು. 'ಉಮ್ಮುಲ್ ಕುರಾ'ದ ಗಲ್ಲಿ-ಕೇರಿಗಳೆಲ್ಲವೂ ಅನಾಥಮುತ್ತು(ಸ) ಮತ್ತು ಅನುಚರರ ವಿರುದ್ಧ ಸಮರಾಂಗಣವಾಗಿ ಮಾರ್ಪಟ್ಟವು.

ಅನಾಥಮುತ್ತು(ಸ) ಆ ಹೃದ್ಗುರುಡರಾದ ಬುದ್ಧಿಗೇಡಿಗಳನ್ನು ಅಜ್ಞಾನದ ಅಂಧಕಾರ

ದಿಂದ ಬೆಳಕಿನೆಡೆಗೆ ಕರೆ ತರಬಯಸಿದ್ದರು. ಆದರೂ ಅವರು 'ಬೆಳಕಿನೆಡೆಗೆ ಬರಲು ನಾವು ಸುತರಾಂ ಸಿದ್ಧರಲ್ಲ, ನಮ್ಮ ತಂದೆ-ತಾತಂದಿರ ಪ್ರಭಾವಗಳನ್ನು ಅಳಿಯಗೊಡುವುದಿಲ್ಲ' ಎಂದು ಪಟ್ಟು ಹಿಡಿದಿದ್ದರು. ಅನಾಥಮುತ್ತು(ಸ), "ಏಕದೇವನನ್ನು ಆರಾಧಿಸಿರಿ, ವಿಗ್ರಹ ಪೂಜೆಯನ್ನು ತೊರೆಯಿರಿ" ಎಂದು ಕರೆಕೊಟ್ಟಾಗಲೆಲ್ಲ ಖುರೈಶರು ಹೇಳುತ್ತಿದ್ದರು, "ಓಹೋ, ಈ ವ್ಯಕ್ತಿಯ ಮಾತು ಕೇಳಿ ನಾವು ನಮ್ಮ ಆರಾಧ್ಯ ದೈವಗಳಿಂದ ದೂರವಾಗಬೇಕೇ? ಯುಗಯುಗಾಂತರಗಳಿಂದ ನಮ್ಮ ಆರಾಧ್ಯರುಗಳಾಗಿರುವ ಮತ್ತು ನಮಗೆ ಎಲ್ಲ ರೀತಿಯ ಪ್ರಯೋಜನಗಳನ್ನುಂಟು ಮಾಡುತ್ತಿರುವ ದೇವರುಗಳನ್ನು ನಾವು ಬಿಟ್ಟು ಬಿಡಬೇಕೇ? ಅದು ಸಾಧ್ಯವಿಲ್ಲ. ಲಾತನ್ನು ಅವಮಾನಿಸುವುದೇ!? ಹುಬಲ್‌ನಿಂದ ಸಂಬಂಧ ಕಡಿದುಕೊಳ್ಳ ಬೇಕೇ!? ಉಝ್ಝಾಳ ಮುಂದೆ ದಿನಕ್ಕೆ ಒಮ್ಮೆಯಾದರೂ ಸಾಷ್ಟಾಂಗವೆರಗದಿರಲಾದೀತೇ!? ಮತ್ತೆ... ನಸ್ರ್ ಒಬ್ಬಂಟಿಯಾಗಿ ಉಳಿಯಬೇಕೇ? ನಮ್ಮ ಉಸಿರು ಇರುವ ತನಕ ಮುಹಮ್ಮದ್‌ರ ಉದ್ದೇಶವನ್ನು ಈಡೇರಲು ನಾವು ಬಿಡಲಾರೆವು."

ಲೋಕಾನುಗ್ರಹಿಯೂ ಸೃಷ್ಟಿಶ್ರೇಷ್ಠರೂ ಆಗಿರುವ ಅನಾಥಮುತ್ತು(ಸ) ಆ ಜನರ ಕೈಯಿಂದ ವಿಷದ ಬಾಟಲಿಗಳನ್ನು ಕಿತ್ತೆಸೆದು, ಅಮೃತದ ಬಟ್ಟಲು ನೀಡಲು ಮುಂದಾಗು ತ್ತಿದ್ದರು. ಆದರೆ ಆ ದೂರದೃಷ್ಟಿಯಿಲ್ಲದ ಮಂದಿ ಜಗಳ ಕಾಯುತ್ತಿದ್ದರು. ಕೊಲ್ಲಲೂ ಸಾಯಲೂ ಸಿದ್ಧರಿದ್ದರು. ಆದರೆ ಅಮೃತಪಾನವನ್ನು ಇಷ್ಟಪಡಲಿಲ್ಲ. ಅವರಿಗೆ ಪೂರ್ವಜರು ಮಾಡಿಟ್ಟಿದ್ದ ವಿಷವನ್ನು ಕುಡಿಯುವುದರಲ್ಲಿಯೇ ಆತ್ಮಸಂತೋಷ ದೊರೆಯುತ್ತಿತ್ತು. ತಂದೆ-ತಾತಂದಿರು ನಡೆದ ವಕ್ರ ಮಾರ್ಗವೇ ಅವರಿಗೆ ಇಷ್ಟವಾಗಿತ್ತು. ಅಕ್ರಮಿ ಮತ್ತು ಮಿಥ್ಯಾ ರಾಧಕರಾದ ಆ ಸತ್ಯನಿಷೇಧಿಗಳು ಹೂವಿಗೆ ಉತ್ತರವಾಗಿ ಕಲ್ಲೆಸೆಯುತ್ತಿದ್ದರು. ಇಂತಹ ಉಪಕಾರಗೇಡಿತನದ ದೃಶ್ಯವು ಮಾನವ ಜಗತ್ತಿನಲ್ಲಿ ಬಹಳ ವಿರಳವಾಗಿ ಕಾಣಸಿಗುತ್ತವೆ.

ಪ್ರವಾದಿವರ್ಯರ(ಸ) ಅನುಚರರ ಮೇಲೆ ನಡೆಸಿದ ಅಕ್ರಮ, ದೌರ್ಜನ್ಯ, ಹಿಂಸೆ ಯನ್ನು ಕಲ್ಪಿಸುವಾಗ ಇಂದಿಗೂ ಮಾನವೀಯತೆಯು ಕಂಪಿಸಿ ಹೋಗುತ್ತದೆ. ಇಸ್ಲಾಮ್ ಸ್ವೀಕರಿಸಿ ಮುಸ್ಲಿಮರಾದವರನ್ನು ಅವರ ಮನೆಯವರು ಬಹಿಷ್ಕರಿಸಿದರು. ಅನ್ನಪಾನೀಯ, ಜನಸಂಪರ್ಕ ಎಲ್ಲವನ್ನೂ ನಿಲ್ಲಿಸಿಬಿಟ್ಟರು! ಕೆಲವು ಸಹಾಬಿಗಳನ್ನಂತೂ ಇಸ್ಲಾಮ್ ಸ್ವೀಕರಿಸಿದ ಒಂದೇ ಒಂದು ಕಾರಣಕ್ಕೆ ವಿವಸ್ತ್ರಗೊಳಿಸಲಾಯಿತು. ಅವರಿಗೆ ಕಬ್ಬಿಣದ ಕವಚಗಳನ್ನು ತೊಡಿಸಿ ಬಯಲಿನಲ್ಲಿ ಮಲಗಿಸಲಾಯಿತು. ಬಿಸಿಲಿನ ಬೇಗೆಯಿಂದ ಕಬ್ಬಿಣದ ಕವಚವು ಕೆಂಡದಂತೆ ಸುಡ ತೊಡಗುತ್ತಿತ್ತು. ಹೀಗೆ ಸಹಿಸಲಸಾಧ್ಯವಾದ ಬಿಸಿ ಕವಚ, ಮೇಲೆ ಕಡು ಬಿಸಿಲು, ಕೆಳಗೆ ಭಟ್ಟಿಯಂತೆ ಉರಿಯುವ ಮರಳು... ಆ ಜ್ವಾಲಾಮುಖಿ ಯಂತಾಗುವ ಕವಚದೊಳಗಿನಿಂದ ಸಹಾಬಿಗಳ ದೇಹದ ಚರ್ಮವು ಬಿಸಿಯನ್ನು ತಡ ಕೊಳ್ಳಲಾಗದೆ ಕರಟಿ ಹೋಗುತ್ತಿದ್ದುವು. ಅವರ ದೇಹದ ಕೊಬ್ಬು ಕೂಡ ಕರಗಿ ಬಿಡುವಷ್ಟು ತಾಪ ಆ ಕವಚದೊಳಗೆ ಕುದಿಯುತ್ತಿತ್ತು. ಆದರೆ ಆ ಎಲ್ಲ ದೌರ್ಜನ್ಯಗಳಿಗೆ ತುತ್ತಾದಷ್ಟೂ ಸತ್ಯದ ಅಮಲು ಇನ್ನೂ ಹೆಚ್ಚುತ್ತಿತ್ತು.

ಸತ್ಯಕ್ಕೆಂಥಾ ಗತಿ ಬಂತು!?

ಪ್ರವಾದಿವರ್ಯರ(ಸ) ಪ್ರಾಮಾಣಿಕ ಸೇವಕ ಅಬಿಸೀನಿಯಾದ ಬಿಲಾಲ್(ರ). ಅವರದ್ದು ಕಡುಗಪ್ಪು ಮೈಬಣ್ಣವಾದರೂ ಹೃದಯ ಶ್ರೀಮಂತಿಕೆಯು ಬೆಳದಿಂಗಳಿಗಿಂತ ಹೆಚ್ಚು ಪ್ರಕಾಶಮಾನವಾಗಿತ್ತು. ಸತ್ಯದ ಸಂದೇಶ ಪ್ರಚಾರದಲ್ಲಿ ಮತ್ತು ಸತ್ಯವಂತಿಕೆಯಲ್ಲಿ ಬಹಳ ಮುಂದಿದ್ದರು. ಮುಸ್ಲಿಮರಾದಾಗಿನಿಂದ ಪ್ರವಾದಿವರ್ಯರ(ಸ) ಸಾಂಗತ್ಯವನ್ನೇ ತನ್ನ ಸರ್ವಸ್ವ ವೆಂದು ಬಗೆದಿದ್ದರು. ಮುಸ್ಲಿಮರಲ್ಲಿ ಬಡವ-ಬಲ್ಲಿದ, ಸ್ವತಂತ್ರ-ಗುಲಾಮ ಎಂಬ ಯಾವುದೇ ಭೇದಭಾವ ಇದ್ದಿರಲಿಲ್ಲ. ಯಾರೆಲ್ಲಾ ಇಸ್ಲಾಮಿನ ಪರಿಧಿಯೊಳಗೆ ಬರುತ್ತಾರೋ ಅವರೆಲ್ಲ ಮುಸ್ಲಿಮರ ಸಹೋದರರಾಗಿ ಮಾರ್ಪಡುತ್ತಾರೆ. ಕುಲ-ಗೋತ್ರ-ವರ್ಣ ಸಂಬಂಧಿ ಅಹಂಕಾರ ಅಥವಾ ನಾಯಕತ್ವದ ಜಂಭ ಒಂದೂ ಮುಸ್ಲಿಮರಲ್ಲಿ ಇದ್ದಿರಲಿಲ್ಲ. ಅವರ ದೃಷ್ಟಿಯಲ್ಲಿ ಧರ್ಮನಿಷ್ಠೆ ಮತ್ತು ಸಜ್ಜನಿಕೆಗಳೇ ಗೌರವದ ಮಾನದಂಡವಾಗಿ ದ್ದುವು. ಸಾಮಾಜಿಕವಾಗಿ ಅವರೆಲ್ಲ ಏಕ ಸಮಾನರಾಗಿದ್ದರು.

ಗುಲಾಮರಾದ ಬಿಲಾಲ್‌ರವರು(ರ) ಉಮರ್(ರ), ಅಲಿ(ರ), ಉಸ್ಮಾನ್‌ರಂಥ(ರ) ಕುರೈಶಿ ಗೋತ್ರದವರಿಗೆ ಸರಿಸಮಾನರಾಗಿ ಕುಳಿತುಕೊಳ್ಳುವುದನ್ನು ಕಾಣುವಾಗಲೆಲ್ಲ ಕುರೈಶ್ ಸತ್ಯನಿಷೇಧಿಗಳ ರೋಷಾಗ್ನಿಯು ಹೆಚ್ಚೆಚ್ಚು ಧಗಧಗಿಸುತ್ತಿತ್ತು... ಈ ಹೊಸ ಧರ್ಮವು ನಮ್ಮ ಪೂರ್ವಿಕ ವಿಶ್ವಾಸವನ್ನು ಮಾತ್ರವಲ್ಲ, ಗೋತ್ರ ಮೇಲ್ಮೆ ಮತ್ತು ಕುಲ ಮಹಿಮೆ ಯನ್ನೂ ಮಣ್ಣುಗೂಡಿಸುತ್ತಿದೆಯಲ್ಲ... ಅಬೂತಾಲಿಬ್, ಅಬೂಕುಹಾಫ, ಖತ್ತಾಬ್‌ರಂಥ ಕುರೈಶ್ ಸರದಾರರುಗಳ ಪುತ್ರರಿಗೆ ಸರಿಸಮಾನವಾದ ಸ್ಥಾನದಲ್ಲಿ ಓರ್ವ ಗುಲಾಮ ವಿಜೃಂಭಿಸುವುದೇ? ಇದನ್ನೆಂತು ಸಹಿಸಲಾದೀತು? ಇದೇ ರೀತಿ ಮುಂದುವರಿದರೆ ಅಬಿಸೀನಿಯಾ, ಇರಾಕ್, ಸಿರಿಯಾ, ಇರಾನ್ ಮತ್ತು ಹದರ್‌ಮೌತ್‌ನ ಪ್ರತಿಯೊಬ್ಬ ಗುಲಾಮನೂ ಇಸ್ಲಾಮ್ ಸ್ವೀಕರಿಸಿ ಕುರೈಶಿಯರಿಗೆ ಸರಿಸಮಾನನಾಗಿ ಬಿಡಬಹುದು. ಇದಂತೂ ಕುರೈಶ್ ಗೋತ್ರದ ಘನತೆಯ ಸ್ಪಷ್ಟ ಅವಮಾನವಾಗಿದೆ. ನಮ್ಮ ಗೋತ್ರದ ಗೌರವವನ್ನು ನಾವು ಸಾವಿರಾರು ವರ್ಷಗಳಿಂದ ಕಾಪಾಡುತ್ತಾ ಬಂದಿದ್ದೇವೆ. ಯುದ್ಧ ರಂಗವು ನಮ್ಮ ಕತ್ತಿವರಸೆ, ಬಲಪ್ರದರ್ಶನ ಮತ್ತು ನಿರ್ಭಯತೆಯ ಸಾಕ್ಷಾತ್ಕಾರಗಳಿಗೆ ಸಾಕ್ಷಿಯಾಗಿದೆ. ನಾವು ನಮ್ಮೆದೆಗಳಲ್ಲಿ ಖಡ್ಗ, ಈಟಿ, ಭರ್ಜಿಗಳ ಗಾಯಗಳನ್ನು ಸಹಿಸುತ್ತಾ ಕುರೈಶ್ ಗೋತ್ರದ ಶ್ರೇಷ್ಠತೆಗೆ ಯಾವುದೇ ಕುಂದುಂಟಾಗದಂತೆ ನೋಡಿಕೊಂಡಿದ್ದೇವೆ. ನಮ್ಮ ವಂಶಾವಳಿಯು ಜಗತ್ತಿನೆಲ್ಲ ಗೋತ್ರ-ಜನಾಂಗಗಳಿಗಿಂತಲೂ ಹೆಚ್ಚು ಪ್ರಮಾಣೀಕೃತವೂ ಗೌರವಾರ್ಹವೂ ಆಗಿದೆ. ಆದರೆ ಅಬ್ದುಲ್ಲಾರ ಪುತ್ರ ಮುಹಮ್ಮದ್ ತಂದಿರುವ ಹೊಸ ಧರ್ಮವು ನಮ್ಮ ಈ ಜನಾಂಗೀಯ ಗೌರವವನ್ನು ಖಂಡಿತ ಅಳಿಸಿಬಿಡಬಹುದು...

ಹೀಗೆ ಬಿಲಾಲ್‌ರಂತಹ ಗುಲಾಮ ಅಬೂಬಕರ್ ಮತ್ತು ಅಲಿಗೆ ಸರಿಸಮಾನವಾಗಿ ನಿಂತು, ಅವರ ಭುಜಕ್ಕೆ ಭುಜ ತಾಗಿಸಿ ನಮಾಝ್ ಮಾಡುವುದನ್ನು ಕಾಣುವಾಗಲೆಲ್ಲ ಕುರೈಶ್ ಸತ್ಯನಿಷೇಧಿಗಳ ರಕ್ತ ಕುದ್ದು ಕಣ್ಣಿಗೆ ಬಂದು ಬಿಡುತ್ತದೆ...

ಮನಸ್ಸಿನಾಳದ ಸಿಡಿಮಿಡಿಯು ಅನ್ಯಾಯ-ಹಿಂಸೆಯ ರೂಪ ತಾಳತೊಡಗಿತು. ಕುರೈಶ್ ಸತ್ಯನಿಷೇಧಿಗಳು ಬಿಲಾಲ್‌ರ(ರ) ಕೊರಳಿಗೆ ಹಗ್ಗ ಕಟ್ಟಿ ಗಲ್ಲಿಯ ಪುಂಡಪೋಕರಿಗಳ ಕೈಗೆ ಕೊಡುತ್ತಿದ್ದರು. ಆ ಪಡ್ಡೆ ಹೈಕಳು ಬಿಲಾಲ್‌ರನ್ನು(ರ) ಮಕ್ಕಾದ ಗಲ್ಲಿಗಳಲ್ಲಿ ಎಳೆದಾಡುತ್ತಾ ಸಾಗುತ್ತಾರೆ. ಕುರೈಶರು ಅದನ್ನು ನೋಡಿ ಕೇಕೆ ಹಾಕಿ, ಚಪ್ಪಾಳೆ ತಟ್ಟಿ ಕುಣಿದು ಹಾಡು ತ್ತಾರೆ... 'ಬಿಲಾಲ್ ಇದಕ್ಕೇ ಅರ್ಹ!' ಅಬಿಸೀನಿಯದ ಗುಲಾಮನಾದರೇನು? ಮಕ್ಕಾದಲ್ಲಿ ತಲೆಯೆತ್ತಿ ನಡೆದಾಡಲು ಅರ್ಹತೆಯಿಲ್ಲದೆ ಹೋಯಿತೇ? ಆ ಎಳೆದಾಟದಲ್ಲಿ ಬಡಪಾಯಿ ಬಿಲಾಲ್‌ರ(ರ) ಕೊರಳ ಚರ್ಮ ಕಿತ್ತು ರಕ್ತ ಹರಿಯುತ್ತದೆ. ಅದು ಆ ನೀಚ ಪ್ರವೃತ್ತಿಯ ಮಂದಿಯ ನಿತ್ಯದ ಪರಿಪಾಠವಾಯಿತು. ಅಲ್ಲ, ಮೋಜಿನಾಟವೆಂದರೂ ಅತಿಶಯೋಕ್ತಿಯಲ್ಲ. ಈ ಮೂಲಕ ಬಿಲಾಲ್‌ರನ್ನು ಅವಮಾನಿಸುತ್ತಿದ್ದೇವೆಂದು ಅವರು ಭಾವಿಸುತ್ತಿದ್ದರು. ಆದರೆ ವಾಸ್ತವದಲ್ಲಿ ಅಂತಹ ಯಾವ ದೌರ್ಜನ್ಯವೇ ಆದರೂ ಸತ್ಯಸಂದೇಶದ ಅಮಲನ್ನು ಇನ್ನಷ್ಟು ಏರಿಸಲಷ್ಟೇ ಸಹಕಾರಿ ಎಂಬುದನ್ನು ಅರಿಯದಾದರು. ಅತ್ಯಂತ ಹಿರಿದಾದ ಅವಮಾನ ಚಾರಿತ್ರ್ಯ ಮತ್ತು ವ್ಯಕ್ತಿತ್ವದಲ್ಲಿರುವ ಕೀಳ್ತನವಾಗಿದೆ. ಹಾಗೆಯೇ ವ್ಯಕ್ತಿಯು ತನ್ನ ಚಾರಿತ್ರ್ಯದಿಂದಾಗಿ ಗೌರವಾರ್ಹನೆನಿಸಿದರೆ, ಅಂತಹ ಗೌರವವನ್ನು ಜಗತ್ತಿನ ಯಾರೂ ಕೀಳಾಗಿಸಲಾರರು. ಅಕ್ರಮಿಗಳಿಂದ ಮೆಟ್ಟಿನ ಹಾರವನ್ನು ಹಾಕಿಸಿಕೊಂಡರೂ ಸತ್ಯವು ಎಂದೂ ಹಿಂಜರಿಯ ಲಾರದು. ಸತ್ಯವನ್ನು ಸೋಲಿಸಿದೆನೆಂದು ಯಾರಾದರೂ ಭಾವಿಸಿದರೆ ಅದು ಅವರ ತಿಳುವಳಿಕೆಯ ಕೊರತೆ ಎಂದಷ್ಟೇ ಹೇಳಬಹುದು.

ಹ. ಬಿಲಾಲ್(ರ) ಉಮಯ್ಯ ಬಿನ್ ಖಲಫ್‌ನ ಗುಲಾಮರಾಗಿದ್ದರು. ಆತ ಬಿಲಾಲ್‌ರನ್ನು(ರ) ಬಿಸಿಲಲ್ಲಿ ಕೆಂಡದಂತೆ ಉರಿಯುವ ಮರಳಲ್ಲಿ ಮಲಗಿಸಿ, ಅವರ ಎದೆಯ ಮೇಲೆ ಭಾರವಾದ ಬಿಸಿ ಕಲ್ಲನ್ನಿಡುತ್ತಿದ್ದ. ಅದರಿಂದಾಗಿ ಬಿಲಾಲ್‌ರ(ರ) ಮೈಯ ಚರ್ಮ ಸುಟ್ಟು ಕರಕಲಾಗುತ್ತಿತ್ತು. ಆದರೆ ಆ ಇಸ್ಲಾಮಿನ ದಾಸನ ಬಾಯಿಯಿಂದ 'ಅಹದ್, ಅಹದ್' ಎಂದಷ್ಟೇ ಉದ್ಗಾರ ಹೊರಡುತ್ತಿತ್ತು. ಬಿಸಿ ಕೆಂಡದಂತಹ ಮರಳಲ್ಲಿ ಅಂಗಾತ ಬಿದ್ದು ಕೊಂಡಿದ್ದರೂ ತಣ್ಣಗೆ ಶಾಂತಚಿತ್ತರಾಗಿ ದೇವನ ಏಕತೆಯನ್ನು ಸಾರುತ್ತಿದ್ದರು.

ಹ. ಅಮ್ಮಾರ್ ಬಿನ್ ಯಾಸಿರ್(ರ) ಮತ್ತವರ ಮಾತಾಪಿತರಿಗೂ ಕುರೈಶ್ ಸತ್ಯನಿಷೇಧಿಗಳು ತರತರವಾಗಿ ಹಿಂಸೆ ನೀಡಿ ಸತಾಯಿಸಿದರು. ಅವರ ಮೇಲೆ ಎಸಗಲಾದ ದೌರ್ಜನ್ಯ ಅತ್ಯಂತ ಅಮಾನವೀಯ ಮತ್ತು ಕ್ರೂರವಾಗಿತ್ತು. ಒಮ್ಮೆ ಅಮ್ಮಾರ್ ಕುಟುಂಬ ವನ್ನು ನಿಷೇಧಿಗಳು ಸತಾಯಿಸುತ್ತಿದ್ದಾಗ, ಅತ್ತಕಡೆಯಿಂದ ಅನಾಥಮುತ್ತು(ಸ) ಹಾದು ಹೋಗುತ್ತಿದ್ದರು. ಆ ಬಡಪಾಯಿಗಳು ದೇವ ಸಂದೇಶವಾಹಕರನ್ನು(ಸ) ದೈನತೆಯಿಂದ ದಿಟ್ಟಿಸಿದರು. ಅವರ ಕಂಗಳಲ್ಲಿ ಆರ್ದ್ರ ವಿನಂತಿಯಿತ್ತು...

ಓ ಶಾಂತಿದೂತರೇ! ಸಾಕಾಯಿತು

ಸತ್ಯಕ್ಕೂ ಈ ಗತಿ ಯಾಕಾಯಿತು?

ಅನಾಥಮುತ್ತು(ಸ) ಸಾಂತ್ವನದ ನುಡಿಗಳನ್ನಾಡಿದರು,

"ಯಾಸಿರ್ ಕುಟುಂಬದವರೇ! ಸಹನೆ ವಹಿಸಿರಿ. ಸ್ವರ್ಗದ ವಾಗ್ದಾನವು ನಿಜವಾಗಿಯೂ ನಿಮ್ಮಂಥವರಿಗಾಗಿದೆ." ಲೋಕಾನುಗ್ರಹಿಯ(ಸ) ಬಾಯಿಯಿಂದ ಈ ಸುವಾರ್ತೆಯನ್ನು ಆಲಿಸಿದಾಗ ಅಮ್ಮಾರ್ ಬಿನ್ ಯಾಸಿರ್‌ರ(ರ) ಕುಟುಂಬದವರ ಮುಖವು ಸಂತೋಷದಿಂದ ಮಿನುಗಿತು. ನಾಲಗೆ ಸ್ತಬ್ಧವಿತ್ತಾದರೂ ಮನ ನುಡಿಯಿತು: ಓ ಲೋಕಾನುಗ್ರಹಿ! ನಿಮ್ಮ ಅನುಸರಣೆಯ ಪಾಶವು ಇನ್ನು ನಮ್ಮ ಕೊರಳಿನಿಂದ ಕಳಚದು. ನಮ್ಮ ದೇಹದ ಒಂದೊಂದು ಕೀಲು ಬೇರ್ಪಟ್ಟರೂ ಸರಿಯೇ. ನಾವು ನಿಮ್ಮವರಾಗಿಯೇ ಬಾಳಲು ಮತ್ತು ನಿಮ್ಮವರಾಗಿಯೇ ಸಾಯಲು ಬಯಸುತ್ತೇವೆ. ಜಗತ್ತಿನ ಯಾವ ಆಪತ್ತೂ ಇನ್ನು ನಮ್ಮನ್ನು ಇಸ್ಲಾಮಿನಿಂದ ವಿಚಲಿತಗೊಳಿಸಲಾರದು. ಏಕೆಂದರೆ...

ಪರ್ಯಾಲೋಚಿಸಿಯೇ ಕಠಾರಿಗೆ ಕೊರಳೊಡ್ಡಿದ್ದೇವೆ.

ಮಕ್ಕಾದ ವಿಶಾಲವಾದ ನಾಡನ್ನು ಮುಸ್ಲಿಮರಿಗೆ ಸಂಕೀರ್ಣಗೊಳಿಸಲಾಯಿತು. ಪ್ರತಿಯೋರ್ವ ಸಹಾಬಿಯೂ ಸತ್ಯನಿಷೇಧಿಗಳ ಹಿಂಸೆ-ದೌರ್ಜನ್ಯಗಳಿಗೆ ಈಡಾಗುತ್ತಿದ್ದರು. ಹಿಂಸೆಯ ನಿತ್ಯ ನೂತನ ವಿಚಿತ್ರ ರೀತಿಗಳು! ಒಬ್ಬ ಮುಸ್ಲಿಮನನ್ನು ತಲೆ ಕೆಳಗಾಗಿಸಿ ಮರಕ್ಕೆ ಕಟ್ಟಿ ನೇತು ಹಾಕಲಾಗುತ್ತದೆ. ಚಾಪೆ ಸುತ್ತಿ ಕೊಳ್ಳಿಯಿಟ್ಟು ಆತನ ಮೂಗಿಗೆ ಹೊಗೆ ಬಿಡಲಾಗುತ್ತದೆ... ಇನ್ನೊಬ್ಬರ ಕೈಗಳೆರಡನ್ನು ಮಂಚದ ಕಾಲುಗಳಡಿಯಲ್ಲಿ ಅದುಮಿರಿಸಿ ಅದರ ಮೇಲೆ ಹಲವು ಮಂದಿ ಧಡೂತಿಗಳು ಕುಳಿತುಕೊಳ್ಳುತ್ತಾರೆ... ಹೀಗೆ ಆ ಬಡಪಾಯಿಯ ಕೈಗಳ ಚರ್ಮ ಕಿತ್ತು ಬರುತ್ತದೆ, ಹಸ್ತಗಳು ಜಜ್ಜಿ ಹೋಗುತ್ತವೆ. ಅವಮಾನ, ಹಿಂಸೆ-ಕಿರುಕುಳದ ಯಾವೆಲ್ಲ ಬಗೆಗಳನ್ನು ಪ್ರಯೋಗಿಸಲು ಸಾಧ್ಯವಿತ್ತೋ ಅವೆಲ್ಲವನ್ನೂ ಅವರು ಮುಸ್ಲಿಮರ ಮೇಲೆ ಪ್ರಯೋಗಿಸಿದರು.

ಸ್ವಯಂ ಪ್ರವಾದಿವರ್ಯರ(ಸ) ಮೇಲೆ ಎಂತಹ ಅಕ್ರಮ-ದೌರ್ಜನ್ಯಗಳನ್ನು ಎಸಗುತ್ತಿದ್ದರೆಂದರೆ, ಅದನ್ನು ಕಂಡು ಮಾನವೀಯತೆಯ ಜೀವನಾಡಿ ಚಡಪಡಿಸುತ್ತಿತ್ತು. ಪ್ರವಾದಿವರ್ಯರು(ಸ) ನಡೆಯುವ ದಾರಿಯಲ್ಲಿ ಮುಳ್ಳುಗಂಟಿಗಳನ್ನು ಹರಡಲಾಯಿತು. ಅವರ ಪಾದಗಳು ಮುಳ್ಳು ಚುಚ್ಚಿ ಘಾಸಿಗೊಳ್ಳುತ್ತಿತ್ತು. ಆಯತಪ್ಪಿ ಬಿದ್ದರೆ ಅವರ ಮೈಗೆ ಮಣ್ಣು ಮೆತ್ತಿಕೊಳ್ಳುತ್ತಿತ್ತು. ಒಮ್ಮೆ ಅನಾಥಮುತ್ತು(ಸ) ಕಅಬಾಲಯದಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಒಂದೆಡೆ ಉಕ್ಬಾ ಬಿನ್ ಮುಈತ್ ಎಂಬಾತ ಬಹಳ ಹೊತ್ತಿನಿಂದ ಕಾದು ಕುಳಿತಿದ್ದ. ಅವಕಾಶ ನೋಡಿ ಆತ ಧಾವಿಸಿ ಬಂದು ಪ್ರವಾದಿವರ್ಯರ(ಸ) ಕೊರಳಿಗೆ ಚದ್ದರವನ್ನು ಸುತ್ತಿ ಎಳೆದಾಡಿದ. ಆ ರಭಸಕ್ಕೆ ಲೋಕಾನುಗ್ರಹಿಯ(ಸ) ಉಸಿರುಗಟ್ಟಿ ಕಣ್ಣುಗುಡ್ಡೆಗಳು ಹೊರ ಬಂದುವು. ಅಷ್ಟು ಹೊತ್ತಿಗೆ ಅಬೂಬಕರ್ ಬಂದು ಅವರನ್ನು ಪ್ರಯಾಸಪಟ್ಟು ರಕ್ಷಿಸಿದರು. ತರುವಾಯ ಆ ಕ್ರೂರಿಯನ್ನುದ್ದೇಶಿಸಿ ಹೇಳಿದರು, "ನಿಮ್ಮ ಬಳಿಗೆ ಅಲ್ಲಾಹನ ನಿದರ್ಶನಗಳನ್ನು ತಂದಿರುವ ಮತ್ತು ಕೇವಲ ಸೃಷ್ಟಿಕರ್ತನೊಬ್ಬನೇ ನನ್ನ ಪ್ರಭು ಎಂದಿರುವ ವ್ಯಕ್ತಿಯನ್ನು

ನೀನು ಕೊಲ್ಲಬಯಸುತ್ತೀಯಾ?"

ಜಗ್ಗಿದರೂ ಬಗ್ಗದವರ ವಿರುದ್ಧ ಪುನಃ ಸಭೆ ಸೇರಿದರು!

ಒಮ್ಮೆ ಮುಹಮ್ಮದರ್‌ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಲೆ ಸಂಪೂರ್ಣ ಧೂಳು ಮೆತ್ತಿದ ಸ್ಥಿತಿಯಲ್ಲಿ ಮನೆಗೆ ಬಂದರು. ಓರ್ವ ಮತಿಗೇಡಿ ಸತ್ಯನಿಷೇಧಿಯು ಪ್ರವಾದಿವರ್ಯರ(ಸ) ಮೇಲೆ ಮನದಣಿಯೆ ಮಣ್ಣೆಸೆದಿದ್ದನು. ತಂದೆಯ ಈ ಅವಸ್ಥೆಯನ್ನು ಕಂಡು ಫಾತಿಮಾ(ರ) ನೀರಿನ ಪಾತ್ರೆಯನ್ನೆತ್ತಿ ಧಾವಿಸಿ ಬಂದು, ಅವರ ತಂದೆಯ ಶಿರಕ್ಕೆ ನೀರನ್ನು ಸುರಿದರು. ಧೂಳೆಲ್ಲ ನೀರಿನೊಂದಿಗೆ ಇಳಿದು ಹೋಯಿತು. ಅದರ ಜೊತೆಗೇ ಫಾತಿಮಾರ(ರ) ಕಪೋಲಗಳಲ್ಲಿ ಕಣ್ಣೀರು ಹರಿಯತೊಡಗಿತು. ಮಗಳು ಅಳುವುದನ್ನು ಕಂಡು ಅನಾಥಮುತ್ತು(ಸ) ಹೇಳಿದರು,

"ಮಗೂ! ಅಳಬೇಡ, ಅಲ್ಲಾಹ್ ನಿನ್ನ ತಂದೆಯ ಕೈ ಬಿಡಲಾರ."

ಮಕ್ಕಾ ನಗರದಲ್ಲಿ ಆಡು-ಕುರಿ ಮತ್ತು ಒಂಟೆಗಳಿಗೆ ಆಶ್ರಯ ಸಿಗುತ್ತಿತ್ತು. ಆದರೆ ಅಲ್ಲಾಹನ ಸಂದೇಶವಾಹಕರು(ಸ) ಮತ್ತು ಅವರ ಸಂಗಾತಿಗಳಿಗೆ(ರ) ಶಾಂತಿ-ಸಮಾಧಾನದ ಎಲ್ಲ ಹಾದಿಗಳನ್ನೂ ಮುಚ್ಚಿ ಬಿಡಲಾಗಿತ್ತು. ಆ ನಾಡಿನ ಕಣಕಣವೂ ಇಸ್ಲಾಮ್ ಮತ್ತು ಮುಸ್ಲಿಮರ ವಿರೋಧಿಯಾಗಿತ್ತು. ಅಲ್ಲಿಯ ಗೋಡೆ ಬಾಗಿಲುಗಳೂ ಪ್ರವಾದಿಯವರ(ಸ) ರಕ್ತಕ್ಕಾಗಿ ಹಾತೊರೆಯುವಂತಿದ್ದುವು. ಪ್ರತಿಯೊಂದು ಸೂರ್ಯೋದಯವು ಸತ್ಯನಿಷೇಧಿಗಳ ಹಿಂಸಾ ಸರಣಿಗಳಲ್ಲಿ ಹೊಸತೊಂದು ಅಧ್ಯಾಯವನ್ನು ಸೇರಿಸುತ್ತಿತ್ತು. ಕುರೈಶ್ ಸತ್ಯ ನಿಷೇಧಿಗಳು ಪ್ರವಾದಿವರ್ಯರನ್ನೂ(ಸ) ಸಹಾಬಿಗಳನ್ನೂ(ರ) ಅಸ್ತಿತ್ವದಿಂದಲೇ ಕಿತ್ತು ಹಾಕಲು ಸಂಪೂರ್ಣವಾಗಿ ಶ್ರಮಿಸುತ್ತಿದ್ದರು. ಗೋತ್ರ ಪಕ್ಷಪಾತ ಮತ್ತು ಸತ್ಯ ದ್ವೇಷವು ಇಸ್ಲಾಮ್ ವಿರೋಧಿ ಅಲೆಯನ್ನೇ ಎಬ್ಬಿಸಿಬಿಟ್ಟಿತ್ತು. ಪ್ರತಿಯೋರ್ವ ಕಾಫಿರನೂ ಮುಸ್ಲಿಮರನ್ನು ಸತಾಯಿಸುವಲ್ಲಿ ಇತರರಿಗಿಂತ ಎರಡು ಹೆಜ್ಜೆ ಮುಂದಿರಲು ಪ್ರಯತ್ನಿಸುತ್ತಿದ್ದ. ದೇವನ ಸಜ್ಜನ ದಾಸರನ್ನು ಸತಾಯಿಸಿ, ಅವರು ತಮ್ಮ ಸಭೆಗಳಲ್ಲಿ ಹೆಮ್ಮೆಪಟ್ಟುಕೊಳ್ಳು ತ್ತಿದ್ದರು. ತಮ್ಮ ದೌರ್ಜನ್ಯಗಾಥೆಯನ್ನು ಪರಸ್ಪರ ಹಾಡಿ ಹೊಗಳುತ್ತಿದ್ದರು. ಸತ್ಯ ಪರತೆಯು ಅಗ್ನಿಪರೀಕ್ಷೆಗೊಡ್ಡಲ್ಪಡುತ್ತಿದೆ... ಸದಾಚಾರವು ಸಂಕಷ್ಟದ ಕುಲುಮೆಯಲ್ಲಿ ಬೇಯುತ್ತಿದೆ... ಇಸ್ಲಾಮಿನ ಪ್ರಶಾಂತ ಹಡಗು ಸತ್ಯನಿಷೇಧದ ಚಂಡಮಾರುತಕ್ಕೆ ಸಿಕ್ಕಿ ನಲುಗುತ್ತಿದೆ... ಭಯಾತಂಕ ಭರಿತ ಸಂಘರ್ಷಗಳು, ಅಪಾಯಕಾರಿ ಅಡೆತಡೆಗಳು, ಉತ್ಸಾಹ ಕುಂದಿಸು ವಂತಹ ವಿರೋಧಿ ಅಲೆಗಳು!

ಸುಧಾರಕರಾದ ಸತ್ಯವಿಶ್ವಾಸಿಗಳಿಗೆ ಎಲ್ಲ ತರದ ವಿರೋಧಗಳನ್ನು ಎದುರಿಸಬೇಕಾಗಿ ಬರುತ್ತದೆ. ಆದರೆ ಕುರೈಶ್ ಸತ್ಯನಿಷೇಧಿಗಳ ವಿರೋಧವು ನಿರ್ದಯೆ-ನಿರ್ಭಾವುಕತೆ ಯಿಂದ ಕೂಡಿತ್ತು. ಕರುಣೆ, ಕೃಪೆ, ಕ್ಷಮೆ ಇದಾವುದೂ ಆ ಜನರಿಗೆ ತಿಳಿದಿರಲಿಲ್ಲ. ಸತ್ಯದ ಮಾತುಗಳಿಗೆ ಅವರಿಂದ ಖಡ್ಗ, ಈಟಿ, ಕೊಡಲಿಗಳು ಹಾಗೂ ಕಲ್ಲುಗಳ ಹೊರತು ಬೇರೆ

ಉತ್ತರ ದೊರೆಯುತ್ತಿರಲಿಲ್ಲ. ಅವರ ವಿರೋಧದ ಅಗ್ನಿಪರ್ವತವು ತನ್ನೆಲ್ಲ ಶಕ್ತಿಯೊಂದಿಗೆ ಲಾವಾರಸವನ್ನು ಉಗುಳುತ್ತಿತ್ತು. ವಿದ್ವೇಷವು ತನ್ನೆಲ್ಲ ಶಕ್ತಿಯೊಂದಿಗೆ ಕಾರ್ಯಾಚರಿಸುತ್ತಿತ್ತು. ಕೆಲವು ಮಂದಿ ಸತ್ಯನಿಷೇಧಿಗಳಂತೂ ತಮ್ಮ ವ್ಯಾಪಾರ-ವ್ಯವಹಾರಗಳನ್ನೆಲ್ಲಾ ತೊರೆದು ಇಸ್ಲಾಮಿನ ನಿರ್ಮೂಲನದಲ್ಲಿ ತೊಡಗಿಕೊಂಡರು. ಅವರ ತ್ಯಾಗ-ಬಲಿದಾನಗಳೆಲ್ಲವೂ ಇಸ್ಲಾಮಿನ ವಿರುದ್ಧವಾಗಿದ್ದುವು. ಅವರು ಈ ಅಜ್ಞಾನವನ್ನು ಮಹಾನ್ ಜನಾಂಗ ಸೇವೆಯೆಂದು ಬಗೆದಿದ್ದರು. ಜನಾಂಗೀಯ ವಾದವು ವಿಧ್ವಂಸಕತೆ ಮತ್ತು ವಿನಾಶದ ಸಾಧ್ಯವಿರುವ ಎಲ್ಲ ಮೂಲಗಳೊಂದಿಗೆ ವಿರೋಧಾಂಗಣಕ್ಕಿಳಿದಿತ್ತು. ಮಿಥ್ಯವು ಸತ್ಯದೊಂದಿಗೆ ಸಂಘರ್ಷಿಸುತ್ತಿತ್ತು. ಈ ಬೆರಳೆಣಿಕೆಯಷ್ಟಿರುವ ಮುಸ್ಲಿಮರು ಹಿಂಸೆ-ದೌರ್ಜನ್ಯಗಳನ್ನು ಹೆಚ್ಚು ಹೊತ್ತು ಸಹಿಸಲಾರರು ಎಂದು ಸತ್ಯನಿಷೇಧವು ಸಮಾಧಾನಪಡುತ್ತಿತ್ತು. ಒಂದಲ್ಲ ಒಂದು ದಿನ ಮುಸ್ಲಿಮರು ಸೋತು ಸುಣ್ಣವಾಗಿ ತನ್ನ ಮುಂದೆ ಮಂಡಿಯೂರಬಹುದು ಎಂದೇ ಮಿಥ್ಯವು ನಿರೀಕ್ಷಿಸುತ್ತಿತ್ತು. ಒಂದು ವೇಳೆ ಅವರು ಸೋಲೊಪ್ಪಿಕೊಳ್ಳದಿದ್ದರೆ ಸರ್ವನಾಶವಾಗಿ ಹೋಗುವರು ಎಂದು ಮಿಥ್ಯಶಕ್ತಿಗಳು ಹೂಂಕರಿಸುತ್ತಿದ್ದುವು. ಮರಣವು ಮುಸ್ಲಿಮರ ತಲೆಯ ಮೇಲೆ ತೂಗುಗತ್ತಿಯಂತೆ ನೇತಾಡುತ್ತಿದೆ, ವಿನಾಶವು ಅವರ ದಾರಿ ಕಾಯುತ್ತಿದೆ, ಬೆರಳೆಣಿಕೆಯ ಈ ಮಂದಿ ನಮ್ಮಂತಹ ರಣವೀರ ಕಲಿಗಳೊಂದಿಗೆ ಹೆಚ್ಚು ಹೊತ್ತು ಸೆಣಸಲಾರರು ಮತ್ತು ಹುಲ್ಲುಕಡ್ಡಿಗಳು ಎಷ್ಟೇ ಗಟ್ಟಿಯಾಗಿ ನೆಲದಲ್ಲಿ ಬೇರೂರಿದ್ದರೂ ಗಾಳಿಯ ರಭಸಕ್ಕೆ ನೆಲ ಕಚ್ಚಲೇಬೇಕು ಎಂದು ಕುರೈಶ್ ಸರದಾರರು ಬೀಗುತ್ತಿದ್ದರು.

ಹಿಜ್ರತ್‌ನಿಂದ ಸೌರ್‌ಗುಹೆಯ ತನಕ

ಈ ಎಲ್ಲ ವಿರೋಧಗಳ ಹೊರತಾಗಿಯೂ ಇಸ್ಲಾಮಿನ ಹರಿವು ನಿಲ್ಲದಿದ್ದಾಗ ಮಕ್ಕಾದ ಸತ್ಯನಿಷೇಧಿಗಳು ದಾರುನ್ನದ್ವದಲ್ಲಿ ಸಮಾಲೋಚನಾ ನಿರತರಾಗುತ್ತಾರೆ. ದಾರುನ್ನದ್ವವು ಕುರೈಶರ ಪಾರ್ಲಿಮೆಂಟ್ ಆಗಿತ್ತು. ಕಿಲಾಬ್‌ರ ಸುವಿಖ್ಯಾತ ಪುತ್ರ ಕುಸೈ ಅದನ್ನು ಪ್ರಾರಂಭಿಸಿದರು. ಅಗತ್ಯದ ಮತ್ತು ಪ್ರಮುಖ ವಿಷಯಗಳಲ್ಲಿ ಸಲಹೆ-ಸೂಚನೆ, ಅಭಿಪ್ರಾಯ ವಿನಿಮಯ ಮಾಡಬೇಕಿದ್ದರೆ ಸರದಾರರು ಅಲ್ಲಿ ಸಭೆ ಸೇರುತ್ತಿದ್ದರು. ಹೀಗಿರುತ್ತಾ, ಈಗ ದಾರುನ್ನದ್ವದಲ್ಲಿ ಕುರೈಶ್ ಸರದಾರರು ಸೇರಿದ್ದು, ಯಾವುದೋ ಗಹನವಾದ ಚರ್ಚೆ ನಡೆಯಲಿದೆಯೆಂಬುದನ್ನು ಸೂಚಿಸುತ್ತದೆ.

ಬಹುಶಃ ಕುಸೈಯವರಿಂದ ಹಿಡಿದು ಆ ತನಕ ಸರದಾರರುಗಳ ಇಷ್ಟು ಬೃಹತ್ತಾದ ಸಮಾಲೋಚನಾ ಸಭೆ ಎಂದೂ ನಡೆದಿರಲಿಕ್ಕಿಲ್ಲ. ಜನ ತಮ್ಮ ಹೊಣೆಗಾರಿಕೆಯ ಪ್ರಜ್ಞೆಯೊಂದಿಗೆ ಅಲ್ಲಿ ಸೇರಿದ್ದರು. ಆ ತಿಳಿಗೇಡಿಗಳು ಭಾವಿಸಿರುವಂತೆ, ಅಲ್ಲಿ ಅವರ ಅತಿದೊಡ್ಡ ಶತ್ರುವಿನ ವಿರುದ್ಧ ಸಮಾಲೋಚನೆ ನಡೆಯುತ್ತಿದೆ... ಕುರೈಶರ ಜನಾಂಗೀಯ ಶ್ರೇಷ್ಠತೆ ಮತ್ತು ಪೂರ್ವಿಕ ಧರ್ಮದ ಜೀವನ್ಮರಣದ ಅಂತಿಮ ತೀರ್ಮಾನವಾಗಲಿದೆ... ಇಸ್ಲಾಮನ್ನು ಅಳಿಸಿ ಹಾಕಲಿಕ್ಕಾಗಿ ಈ ಸಲಹಾ ಮಂಡಳಿಯ ಸಭೆ ಸೇರಿದೆ. ಕುರೈಶ್ ಸರದಾರರು ಲೋಕಜ್ಞಾನಿಗಳು, ಅನುಭವಿಗಳು, ಧೀಮಂತರು, ನಿರ್ಭಯರು, ಖಡ್ಗ ಕಾಳಗ ಮತ್ತು ಬಿಲ್ವಿದ್ಯೆಯಲ್ಲಿ ಪಳಗಿದವರು. ರೋಷವುಕ್ಕಿದರೆ ಮದಿರಾಲಯವನ್ನು ಕ್ಷಣ ಮಾತ್ರದಲ್ಲಿ ವಧಾಗಾರವನ್ನಾಗಿ ಮಾರ್ಪಡಿಸಬಲ್ಲರು. ತಲೆಯಲ್ಲಿ ಮುಂಡಾಸು ಮತ್ತು ಹಗ್ಗ, ಉದ್ದ ನಿಲುವಂಗಿ, ಕುರ್ತಾ, ಯಮನ್‌ನ ಚದ್ದರ ಮತ್ತು ಕೆಲವರು ಪಟ್ಟೆಯ ನೀಳ ಜುಬ್ಬ ಧರಿಸಿದ್ದರು. ಬಹಳ ಹೊತ್ತಿನ ವಾದ-ವಿವಾದದ ಬಳಿಕ, ಹೇಗಾದರೂ ಸರಿ ಅಬ್ದುಲ್ಲಾರ ಪುತ್ರ ಮುಹಮ್ಮದ್‌ರನ್ನು(ಸ) ಮುಗಿಸಿ ಬಿಡುವುದೇ ಸರಿ ಎಂಬ ತೀರ್ಮಾನಕ್ಕೆ ಬರಲಾಯಿತು. ಅವರು ಅಳಿದು ಹೋದರೆ ಎಲ್ಲವೂ ಮುಗಿದಂತೆ... ಅವರ ಧರ್ಮ ಸ್ವಯಂ ಅಳಿಯುತ್ತದೆ ಮತ್ತು ಅವರ ಅನುಯಾಯಿಗಳು ದಂಡನಾಯಕನಿಲ್ಲದ ಸೈನಿಕರಂತೆ ದಿಕ್ಕಾಪಾಲಾಗುವರು... ನಾಯಕ ಇಹಲೋಕ ತ್ಯಜಿಸಿದಷ್ಟಕ್ಕೇ ಅವರ ಸ್ಥೈರ್ಯ ಸ್ವಯಂ ಉಡುಗಿ ಹೋಗುತ್ತದೆ... ಅವರಲ್ಲಿ ಧೈರ್ಯ ತುಂಬುವಂತಹವರು ಯಾರೂ ಇರಲಾರರು... ಮುಹಮ್ಮದ್‌ರ(ಸ)

ಉಪಸ್ಥಿತಿಯಿಂದಾಗಿಯಲ್ಲವೇ ಆ ಮುಸ್ಲಿಮರು ಮರಣಕ್ಕೂ ಹೆದರದೆ ದೃಢಚಿತ್ತರಾಗಿರುವುದು... ಆ ಮುಹಮ್ಮದ್‌ರೇ(ಸ) ಇಲ್ಲವಾದರೆ ಈ ಬಡಪಾಯಿಗಳು ಸ್ವಯಂ ಸೋಲೊಪ್ಪಿಕೊಳ್ಳುವರು ಎಂದೆಲ್ಲ ಕುರೈಶರು ಭಾವಿಸಿದರು.

ಕೊನೆಗೂ ಕೊಲೆಯ ತೀರ್ಮಾನ ಆಗಿಯೇ ಬಿಟ್ಟಿತು

ಇನ್ನು ಉಳಿದಿರುವುದು ಒಂದೇ ಕೆಲಸ. ಅಬ್ದುಲ್ಲಾರ ಪುತ್ರ ಮುಹಮ್ಮದ್‌ರನ್ನು(ಸ) ಕೊಲ್ಲುವ ತೀರ್ಮಾನವನ್ನು ಕಾರ್ಯರೂಪಕ್ಕೆ ತರುವುದು ಹೇಗೆ ಎಂಬುದು.

"ಅವರ ಕೊರಳು ಮತ್ತು ಕಾಲುಗಳಿಗೆ ಬೇಡಿ ಬಿಗಿದು ಮನೆಯೊಂದರಲ್ಲಿ ಬಂಧಿಸಿಡಬೇಕು. ಮನೆಯ ಬಾಗಿಲು, ಕಿಟಕಿ, ಗಾಳಿ ಕಿಂಡಿಗಳನ್ನೆಲ್ಲ ಮಣ್ಣಿನಿಂದ ಮುಚ್ಚಿ ಹಾಕಬೇಕು. ಎಲ್ಲಿಯ ವರೆಗೆಂದರೆ ಝುಹೈರ್ ಮತ್ತು ನಾಬಿಗರಂತೆ ಅವರು ಉಸಿರುಗಟ್ಟಿ ಅಸುನೀಗಲಿ" ಕೆಲವು ಮಂದಿ ಒಕ್ಕೊರಲಿನಿಂದ ಹೇಳಿದರು.

ಈ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡಿದ್ದ ಗುಡ್ಡಗಾಡು ನಿವಾಸಿಯಾದ ವಯೋವೃದ್ಧರೋರ್ವರು ಇಂತೆಂದರು,

"ಈ ಸಲಹೆ ಅಷ್ಟು ಸೂಕ್ತ ಎಂದೆನಿಸುವುದಿಲ್ಲ. ಈ ಗೃಹಬಂಧನ ಸುದ್ದಿಯು ಹೆಚ್ಚು ಹೊತ್ತು ರಹಸ್ಯವಾಗಿ ಉಳಿಯದು. ಖಂಡಿತವಾಗಿಯೂ ಅವರ ಅನುಯಾಯಿಗಳಿಗೆ ಅದು ತಿಳಿದೇ ಬಿಡುವುದು. ಮುಹಮ್ಮದ್‌ರ(ಸ) ಬಗ್ಗೆ ಅವರ ಅನುಯಾಯಿಗಳಿಗೆ ಎಷ್ಟು ಪ್ರೀತಿ, ಆದರವಿದೆ ಎಂಬುದು ನಿಮಗೆ ತಿಳಿದೇ ಇದೆ. ವಿಷಯ ತಿಳಿದಾಗಲೇ ಆ ಜನ ಬಂದು ಇಬ್ನು ಅಬ್ದುಲ್ಲಾನನ್ನು ಖಂಡಿತ ಬಿಡಿಸುವರು. ಜತೆಗೆ ಯಸ್ರಿಬ್‌ನಿಂದ ಇನ್ನಷ್ಟು ಜನ ಬೆಂಬಲ ಮತ್ತು ಶಕ್ತಿ ಗಳಿಸಿ ನಮ್ಮ ವಿರುದ್ಧ ಸೇಡು ತೀರಿಸಲೂ ಬಹುದು."

"ಹಾಗಿದ್ದರೆ, ಸಹೋದರರರೇ! ಮುಹಮ್ಮದ್‌ರನ್ನು ಒಂದು ಹುಚ್ಚು ಒಂಟೆಯ ಬೆನ್ನಲ್ಲಿ ಕೂರಿಸಿ, ಕಟ್ಟಿ ಹಾಕಿರಿ, ನಗರದ ಹೊರ ವಲಯದಲ್ಲಿ ಬಿಟ್ಟು ಬಿಡುವುದೇ ಸರಿ, ನಂತರ ಅವರು ಎಲ್ಲೇ ಹೋಗಲಿ, ಬಿಡಲಿ; ಇರಲಿ, ಸಾಯಲಿ, ನಮಗೇನು?" ಓರ್ವ ಗಂಭೀರ ವದನನಾದ ವ್ಯಕ್ತಿ ಕೊಂಚ ಆಲೋಚಿಸಿ ಹೇಳಿದ.

"ಸಹೋದರರರೇ, ಈ ಉಪಾಯವೂ ಫಲಿಸುವಂತೆ ಕಾಣುವುದಿಲ್ಲ. ಬದಲಾಗಿ ತದ್ವಿರುದ್ಧ ಪರಿಣಾಮವುಂಟಾಗುವ ಸಾಧ್ಯತೆಯೇ ಹೆಚ್ಚು. ನೀವೆಲ್ಲ ಮುಹಮ್ಮದ್‌ನ(ಸ) ಮನಸೂರೆಗೊಳಿಸುವಂತಹ ಮಾತಿನ ಧಾಟಿಯನ್ನು ನಿರ್ಲಕ್ಷಿಸುತ್ತೀರಾ ಅಥವಾ ಮರೆತಿದ್ದೀರಾ? ಆತ ಯಾರೊಂದಿಗೆ ಮಾತನಾಡುತ್ತಾನೋ ಅವರನ್ನು ತನ್ನವರನ್ನಾಗಿಸಿ ಬಿಡುತ್ತಾನೆ. ಆದ್ದರಿಂದ ಆತ ಎಲ್ಲಿಗೆ ಹೋದರೂ ತನ್ನ ಮೋಡಿಯ ಮಾತಿನ ಪ್ರಭಾವವನ್ನು ಹರಡಿಯೇ ಸಿದ್ಧ..." ವೃದ್ಧನ ಮಾತಿಗೆ ಇತರರು ನಿರುತ್ತರರಾದರು.

ಈ ಸಮಾಲೋಚನೆ ಬಹಳ ಹೊತ್ತು ಮುಂದುವರಿಯಿತು. ಯಾವುದಾದರೊಂದು ತೀರ್ಮಾನಕ್ಕೆ ಬರದೆ ಕುರೈಶ್ ಸರದಾರರು ಸಭೆಯನ್ನು ಬರ್ಖಾಸ್ತುಗೊಳಿಸಲು ತಯಾರಿರಲಿಲ್ಲ.

ಬಹಳ ಹೊತ್ತಿನ ತನಕ ಯಾರಿಗೂ ಏನೂ ಹೊಳೆಯಲಿಲ್ಲ. ಪ್ರತಿಯೊಬ್ಬನೂ ತನ್ನ ಆಲೋಚನಾ ಸಾಮರ್ಥ್ಯಕ್ಕನುಸಾರ ಮೆದುಳನ್ನೋಡಿಸುತ್ತಿದ್ದ. ವಯೋವೃದ್ಧರ ಆಕ್ಷೇಪಗಳು ಅವರೆಲ್ಲರನ್ನೂ ಚಕಿತ ಮತ್ತು ಜಾಗೃತಗೊಳಿಸಿದ್ದವು. ಹಾಗಾಗಿ ಅವರೆಲ್ಲರೂ ಚೆನ್ನಾಗಿ ಅಳೆದೂ ತೂಗಿಯೇ ಬಾಯಿ ತೆರೆಯಬೇಕು ಎಂದುಕೊಂಡಿದ್ದರು.

ಕೊನೆಗೆ ಅಬೂಜಹಲ್‌ನ ಬುದ್ಧಿಯು ಎಚ್ಚೆತ್ತುಕೊಂಡಿತು. ಆತನ ತುಟಿಗಳು ತೆರೆದವು. ನಾಲಗೆಯು ಹರಿತ ಕತ್ತರಿಯಂತೆ ಹರಿಯಿತು. ಎಲ್ಲರೂ ಗಮನಗೊಟ್ಟು ಆತನ ಮಾತನ್ನು ಆಲಿಸತೊಡಗಿದರು.

"ಸನ್ಮಾನ್ಯ ಸರದಾರರುಗಳೇ! ಎಲ್ಲಿಯ ವರೆಗೆ ಅಬ್ದುಲ್ಲಾರ ಪುತ್ರ ಮುಹಮ್ಮದ್‌ನ ಅಂತ್ಯವಾಗುವುದಿಲ್ಲವೋ, ಈ ಕ್ಷೋಭೆಯೂ ಕೊನೆಗೊಳ್ಳಲಾರದು. ಆದರೆ ಆತನ ಹತ್ಯೆಯಿಂದಾಗಿ ಗಲಾಟೆಯೇಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಬನೀ ಹಾಶಿಮ್ ಗೋತ್ರದವರು ಪ್ರತೀಕಾರಕ್ಕೆ ಸಿದ್ಧರಾಗುತ್ತಾರೆ. ಹಾಗಾಗಿ ನನ್ನ ಮಿದುಳಿನಲ್ಲಿ ಬಂದಂತಹ ಒಂದು ವಿಷಯವನ್ನು ಹೇಳುತ್ತೇನೆ. ಕೇಳಿ, ಮಕ್ಕಾದ ಪ್ರತಿಯೊಂದು ಪ್ರಖ್ಯಾತ ಮತ್ತು ಗೌರವಾನ್ವಿತ ಗೋತ್ರದಿಂದ ಒಬ್ಬೊಬ್ಬ ಯುವಕನನ್ನು ಆಯ್ದುಕೊಳ್ಳಬೇಕು. ಅವರೆಲ್ಲಾ ರಾತ್ರಿಯ ಅಂಧಕಾರದಲ್ಲಿ ಮುಹಮ್ಮದ್‌ನ ಮನೆಯನ್ನು ಸುತ್ತುವರಿಯಬೇಕು. ಬೆಳಿಗ್ಗೆ ಮುಹಮ್ಮದ್ ಪ್ರಾರ್ಥನೆಗಾಗಿ ಹೊರಗೆ ಅಡಿಯಿಟ್ಟಾಗಲೇ ಯುವಕರೆಲ್ಲರೂ ಒಮ್ಮೆಲೇ ಆತನ ಮೇಲೆ ಮುಗಿಬೀಳಬೇಕು. ಹೀಗಾದಾಗ ಮುಹಮ್ಮದ್‌ನ ಕೊಲೆಯ ಆರೋಪವು ಎಲ್ಲಾ ಗೋತ್ರಗಳ ಹೆಗಲಿಗೇರುತ್ತದೆ. ಬಳಿಕ ಇಷ್ಟು ದೊಡ್ಡ ಸಂಖ್ಯೆಯ ಜನರೊಡನೆ ವೈರ ಕಟ್ಟಿಕೊಳ್ಳಲು ಅವರಾರಿಂದಲೂ ಸಾಧ್ಯವಿಲ್ಲ."

ಉಳಿದೆಲ್ಲ ಸಲಹೆಗಾರರ ಮುಖಗಳು ಸಂತೋಷದಿಂದ ಅರಳಿದುವು. ಎಲ್ಲರೂ ಅಬೂಜಹಲನ ಸಲಹೆಯನ್ನು ಮೆಚ್ಚಿದರು, "ಇದಂತೂ ಅನುಸರಣೀಯವಾದ ಸಲಹೆ. ಅದರ ಪ್ರತಿಯೊಂದು ಪದವೂ ಅನುಸರಣಾರ್ಹ!" ಅಬೂಜಹಲ್ ಎಂಥ ಯಶಸ್ವಿ ಸೂತ್ರವನ್ನು ತಿಳಿಸಿದ್ದಾನೆ ಎಂದು ಅವನನ್ನು ಕೊಂಡಾಡಿದ್ದೇ ಕೊಂಡಾಡಿದ್ದು. ಅದುವರೆಗಿನ ಎಲ್ಲಾ ಸಲಹೆಗಳನ್ನು ಟೀಕಿಸುತ್ತಿದ್ದ ವಯೋವೃದ್ಧನೂ ಅಬೂಜಹಲನ ಮಾತಿಗೆ ತಲೆದೂಗಿದ. ಆತನ ಮೌನವನ್ನು ಎಲ್ಲರೂ ಒಪ್ಪಿಗೆ ಎಂದೇ ಗ್ರಹಿಸಿದರು. ಅಂದರೆ ಅಬೂಜಹಲನ ಮಾತು ಅಂತಿಮ ತೀರ್ಮಾನವೆಂದಾಯಿತು. ಅಲ್ಲದೆ, ಅದರಲ್ಲಿ ಯಾವುದೇ ಅಪಾಯವೂ ಇರುವಂತೆ ಕಾಣುವುದಿಲ್ಲ. ವಿವೇಕಯುತ ಸಲಹೆ! ಅತ್ಯುತ್ತಮ ಉಪಾಯ!!

ಸತ್ಯನಿಷೇಧಿಗಳು ತಮ್ಮ ಈ ರಹಸ್ಯ ಸಭೆಯ ವಿಷಯ ಇತರ ಯಾವ ನರಪಿಳ್ಳೆಯೂ ತಿಳಿಯಲಾರರು ಎಂದು ಭಾವಿಸುತ್ತಿದ್ದರು. ಹೊರಗಿನವರಾರೂ ಹತ್ತಿರ ಸುಳಿಯದಿರಲಿಕ್ಕಾಗಿ ಅದಕ್ಕಾಗಿಯೇ ದಾರುನ್ನದ್ವದ ಸುತ್ತಲೂ ಪಹರೆ ನಿಲ್ಲಿಸಲಾಗಿತ್ತು. ಕೆಲವು ವಿಶ್ವಸನೀಯ ವ್ಯಕ್ತಿಗಳು ಮಾತ್ರವೇ ಈ ಯೋಜನೆಯ ರಹಸ್ಯವನ್ನು ಬಲ್ಲವರಾಗಿದ್ದರು. ಅವರಾರೂ ತಮ್ಮ

ಮನೆಮಂದಿಗೆ ಕೂಡಾ ಈ ಒಳಸಂಚಿನ ಗುಟ್ಟನ್ನು ಬಿಚ್ಚಿಡಲಿಲ್ಲ. ಏಕೆಂದರೆ, ರಹಸ್ಯದ ಮಾತು ಬಾಯಿಯಿಂದ ಹೊರಟರೆ ಅದು ಖಂಡಿತವಾಗಿಯೂ ರಹಸ್ಯವಾಗಿ ಉಳಿಯಲಾರದು. ರಹಸ್ಯ ಅಂದರೆ ಅದನ್ನು ಯಾರ ಮುಂದೆಯೂ ಪ್ರಕಟಿಸದಿರುವುದೇ ಆಗಿದೆಯಷ್ಟೆ. ಇಂತಹ ಸ್ಥಿತಿಯಲ್ಲಿ ತನ್ನ ಜೀವನ ಸಂಗಾತಿಯೊಂದಿಗೂ ಈ ಮಾತುಗಳನ್ನು ಹಂಚಿಕೊಳ್ಳುವುದು ಅಪಾಯಕಾರಿಯಾಗಿದೆ. ಆದರೆ ಈ ಎಲ್ಲಾ ರಹಸ್ಯ ಮಾತುಕತೆ ಯನ್ನು ಅಲ್ಲಾಹನು ವಹೀಯ ಮೂಲಕ ತನ್ನ ಪ್ರೀತಿ ಪಾತ್ರರೂ ಸೃಷ್ಟಿಶ್ರೇಷ್ಠರೂ ಮಾನವಕುಲದ ವಿಮೋಚಕರೂ ಆದ ಮುಹಮ್ಮದ್‌ರಿಗೆ(ಸ) ಅದಾಗಲೇ ತಿಳಿಸಿಯಾಗಿತ್ತು.

ಇತ್ತ ಕುರೈಶ್ ಸತ್ಯನಿಷೇಧಿಗಳು ಆನಂದ ಸಾಗರದಲ್ಲಿ ತೇಲಾಡಿದರು. ಅವರಿಗೆ ಅಬೂಜಹಲನ ಸಲಹೆ ಬಹಳ ಮೆಚ್ಚುಗೆಯಾಗಿತ್ತು. ಅವರ ಚಿತ್ತದಲ್ಲಿ ಇಂತಹ ಒಂದು ಸಲಹೆಯು ಸುಳಿದಿರಲೇ ಇಲ್ಲ. ಪ್ರವಾದಿಯವರೊಂದಿಗೆ(ಸ) ಅಲ್ಲಾಹನಿಗೆ ಯಾವ ಸಂಬಂಧವಿದೆ ಮತ್ತು ಮುಹಮ್ಮದ್‌ರನ್ನು(ಸ) ತನ್ನ ಸಂದೇಶವಾಹಕರನ್ನಾಗಿ ಕಳುಹಿಸಿದ ಅಲ್ಲಾಹನು ಅವರ ಸಂರಕ್ಷಣೆಯನ್ನು ಮಾಡಲಾರನೇ ಎಂಬುದನ್ನು ಆ ತಿಳಿಗೇಡಿಗಳು ಕನಸು ಮನಸ್ಸಿನಲ್ಲೂ ಎನಿಸಿರಲಿಲ್ಲ. ಅವರಲ್ಲಂತೂ ದಿವ್ಯವಾಣಿಯ ಅವತೀರ್ಣದ ಕುರಿತು ಆಲೋಚಿಸುವಂತಹ ಶಕ್ತಿಯೇ ಇದ್ದಿರಲಿಲ್ಲ. ಲಾತ್ ಹುಬಲ್‌ಗಳನ್ನು ಪೂಜಿಸುವವರಿಗೆ ಜನರ ಹೃದ್ಗತಗಳನ್ನು ಅಲ್ಲಾಹನು ಅರಿಯುತ್ತಾನೆಂದೂ ವಿಶ್ವದ ಸಕಲ ವಸ್ತುಗಳೂ ಅಲ್ಲಾಹನ ಅಂಕೆಯಲ್ಲಿ ಇವೆಯೆಂದೂ ತಿಳಿಯುವಷ್ಟು ಸಾಮರ್ಥ್ಯ ಎಲ್ಲಿದೆ? ಅಲ್ಲಾಹನು ತನ್ನ ಇಷ್ಟ ದಾಸರಿಗೆ ರಹಸ್ಯ ಮಾತುಗಳನ್ನು, ಮುಂಬರುವ ವಿಚಾರಗಳನ್ನು ಮೊದಲೇ ತಿಳಿಸುವಂತಹ ಏರ್ಪಾಡು ಮಾಡುತ್ತಾನೆ ಎಂಬುದು ಆ ಹೃದ್ಗುರುಡರಾದ ನಿಷೇಧಿಗಳಿಗೆ ಹೇಗೆ ತಾನೇ ತಿಳಿದೀತು? ದೃಷ್ಟಿಗೋಚರ ಜಗತ್ತಿನ ಪೂಜಕರಾದ ಕುರೈಶ್ ಸರದಾರರಿಗೆ ಅನ್ನಿಸುವುದೇನು... ಅಬ್ದುಲ್ಲಾರ ಪುತ್ರ ಮತ್ತು ಅಬ್ದುಲ್ ಮುತ್ತಲಿಬ್‌ರ ಪೌತ್ರರಾಗಿರುವ ಮುಹಮ್ಮದ್(ಸ) ನಮ್ಮಂತೆಯೇ ತಿನ್ನುವ, ಕುಡಿಯುವ, ನಿದ್ರೆ, ಎಚ್ಚರ ಎಲ್ಲವೂ ಬಾಧಿಸುವಂತಹ ಮಾನವ... ಜೀವನದ ಅಗತ್ಯಕ್ಕಾಗಿ ಮಾರುಕಟ್ಟೆಗೆ ಕೂಡ ನಮ್ಮ ಹಾಗೆ ಹೋಗುತ್ತಾರೆ, ಖರೀದಿ ಮಾರಾಟವನ್ನು ಮಾಡುತ್ತಾರೆ... ಮಾನವನ ಪ್ರಾಕೃತಿಕ ಸ್ಥಿತಿಗೆ ಸಂಬಂಧಿಸಿ ನಮ್ಮಂತೆಯೇ ಇದ್ದಾರೆ... ಇತ್ಯಾದಿ. ಹೌದು, ಮುಹಮ್ಮದ್ ಬಿನ್ ಅಬ್ದುಲ್ಲಾ ಬಿನ್ ಅಬ್ದುಲ್ ಮುತ್ತಲಿಬ್ ಬಿನ್ ಹಾಶಿಮ್ ಖಂಡಿತವಾಗಿಯೂ ಅವ ರಂತೆಯೇ ಮಾನವರೇ ಆಗಿದ್ದಾರೆ. ಅಲ್ಲಾಹನ ದಾಸರಾಗಿದ್ದಾರೆ. ಆದರೆ ಎಂತಹ ದಾಸ? ಲೋಕಾನುಗ್ರಹಿ... ಜಗತ್ತಿಗೆ ಬೆಳಕು... ಕರುಣೆ... ದಯೆ... ದೇವವಾಣಿಯ ಅಂತಿಮ ಕೊಂಡಿ. ಯಾರ ಬಗ್ಗೆ ಅವರು(ಸ) ಇಹಜೀವನದಲ್ಲೇ ಸ್ವರ್ಗದ ಸುವಾರ್ತೆ ನೀಡಿದರೋ ಅವರಿಗೆ ಸ್ವರ್ಗ ಕಡ್ಡಾಯವಾಯಿತು... ಅಲ್ಲಾಹನು ವಾಸ್ತವವನ್ನು ತಿಳಿಯಪಡಿಸಲಿಕ್ಕಾಗಿ ಮುಹಮ್ಮದರ(ಸ) ಎದೆಯನ್ನು ತೆರೆದು ಸತ್ಯಪ್ರಜ್ಞೆಯನ್ನು ತುಂಬಿಸಿದ್ದಾನೆ. ಅವರಿಗೆ ಅಲ್ಲಾಹನೊಂದಿಗೆ ನೇರ ಸಂಪರ್ಕವಿದೆ. ಹೌದು ಅವರು ನಿದ್ರಿಸುತ್ತಿರು ವಾಗಲೂ

ಅವರ ಹೃದಯ ಎಚ್ಚರದಲ್ಲಿರುತ್ತದೆ. ಜನರ ಬರಿಗಣ್ಣಿಗೆ ಕಾಣುವಂತಹ ಮಕ್ಕಾ ನಗರದ ಮನೆಗಳ ಬಾಗಿಲು-ಕಿಟಕಿಗಳು, ಬೀದಿಗಳು, ಮರಳುಗಾಡಿನ ಬಬೂಲ್ ಮತ್ತು ಖರ್ಜೂರ ಮರಗಳು ಇವೆಲ್ಲವುಗಳ ಸೃಷ್ಟಿ ರಹಸ್ಯಗಳು ಹಾಗೂ ಪ್ರಕೃತಿ ರಹಸ್ಯಗಳೆಲ್ಲವೂ ಅವರ ಅಂತರ್ಯಕ್ಕೆ ಕಲಿಸಲ್ಪಟ್ಟಿವೆ.

ಅವರ ಸ್ಮರಣೆಯನ್ನು ಸ್ವಯಂ ಅಲ್ಲಾಹನು ಉನ್ನತಿಗೇರಿಸಿದ್ದಾನೆ. ಜಗತ್ತಿನ ಸಕಲ ಶಕ್ತಿಗಳು ಸೇರಿದರೂ ಅವರನ್ನು ಕೀಳಾಗಿಸಲು ಸಾಧ್ಯವಿಲ್ಲ. ಅಬ್ದುಲ್ಲಾರ ಪುತ್ರ ಮುಹಮ್ಮದ್‌ರೊಂದಿಗೆ ವೈರ ಕಟ್ಟುವುದೆಂದರೆ ಅಲ್ಲಾಹನೊಂದಿಗೆ ಶತ್ರುತ್ವವಿರಿಸಿದಂತೆ... ಮತ್ತು ಅಲ್ಲಾಹನಿಂದ ಯಾವ ಶಕ್ತಿಗೂ ಗೆಲುವು ಸಾಧಿಸಲು ಸಾಧ್ಯವಿಲ್ಲವಷ್ಟೆ. ಮುಹಮ್ಮದರ್‍ರಸೂಲ್ಲಾಹರಿಗಾಗಿ ದೇವ ಸಹಾಯ ಮತ್ತು ಯಶಸ್ಸು ಬರೆಯಲ್ಪಟ್ಟಿದೆ. ಸತ್ಯನಿಷೇಧಿಗಳೇ, ನಿಮ್ಮ ಸಕಲ ಯಶಸ್ಸುಗಳೂ ಮಣ್ಣುಗೂಡಲಿವೆ. ನಿಮ್ಮ ಬಹು ಸಂಖ್ಯೆಯ ಬಗ್ಗೆ ಜಂಭ ಕೊಚ್ಚಿಕೊಳ್ಳಬೇಡಿ. ಮುಹಮ್ಮದ್‌ರ(ಸ) ವ್ಯಕ್ತಿತ್ವವು ಪ್ರಕಾಶಮಾನ ದೀಪದಂತಿದೆ. ಅದನ್ನು ಊದಿ ನಂದಿಸುವಷ್ಟು ಶಕ್ತಿ ನಿಮ್ಮಲ್ಲಿ ಖಂಡಿತಾ ಇಲ್ಲ- ಪ್ರಕೃತಿಯೇ ತನ್ನ ರಾತ್ರಿಯ ನೀರವತೆಯೊಂದಿಗೆ ಎದ್ದು ಕುರೈಶ್ ಸತ್ಯನಿಷೇಧಿಗಳನ್ನು ಎಚ್ಚರಿಸುವ ಪ್ರಯತ್ನ ಮಾಡುತ್ತಿತ್ತು.

ಕಾದು ಕುಳಿತವರು ಕಣ್ಣು ತೆರೆದೇ ಇದ್ದರು...

ಅಲ್ಲಾಹನ ಸಂದೇಶವಾಹಕರು(ಸ) ತಮ್ಮ ಪ್ರೀತಿಯ ದಾಯಾದಿ ಸೋದರ ಹಾಗೂ ಪ್ರಾಮಾಣಿಕ ಅನುಚರ ಹ. ಅಲಿಯವರನ್ನು(ರ) ಕರೆದು ಹೇಳಿದರು,

"ನನ್ನ ಹಾಸಿಗೆಯಲ್ಲಿ ನನ್ನ ಚದ್ದರವನ್ನು ಹೊದ್ದುಕೊಂಡು ಮಲಗು. ನೀನು ಚಿಂತಿಸಲೂ ಬೇಡ, ವ್ಯಥೆ ಪಡುವುದೂ ಬೇಡ. ಯಾರೂ ಕೂಡ ನಿನ್ನ ಕೂದಲನ್ನೂ ಕೊಂಕಿಸಲಾರ."

ಎಂಥ ಕಠಿಣ ಪರೀಕ್ಷೆ! ಮುಹಮ್ಮದ್‌ರ(ಸ) ಹಾಸಿಗೆಯಲ್ಲಿ ಇವತ್ತು ಮಲಗುವು ದೆಂದರೆ ಖಡ್ಗಗಳ ಅಲಗಿನ ಮೇಲೆ ನಿದ್ರಿಸಿದಂತೆಯೇ ಸರಿ. ಇದು ಮರಣ ಮತ್ತು ಸರ್ವನಾಶವನ್ನು ಆಹ್ವಾನಿಸಿದಂತೆ! ಮಕ್ಕಾ ನಗರದ ಪ್ರತಾಪಶಾಲಿ ಯುವಕರ ಖಡ್ಗ ಗಳಿಗೆ ಮೈಯೊಡ್ಡುವುದು ಎಂದರ್ಥ. ಅತ್ಯಂತ ಅಪಾಯಕಾರಿ ಅವಸ್ಥೆ ಎದುರಾದೀತು! ಪ್ರತಿಯೊಂದು ಕ್ಷಣವೂ ಜೀವ ಹೋಗುವ ಅಪಾಯ ಇದ್ದದ್ದೇ... ಕಾಫಿರರು ಸಕಲಾಯುಧ ಭೂಷಿತರಾಗಿ, ಸರ್ವಸಜ್ಜಿತರಾಗಿ ಅಚಲ ಇರಾದೆಯೊಂದಿಗೆ ಬಂದಿದ್ದಾರೆ. ಆದರೆ ಅಲಿ(ರ) ವಿಶ್ವಾಸ ಮತ್ತು ಶ್ರದ್ಧೆಯ ಅಚಂಚಲ ಪರ್ವತವಾಗಿದ್ದರು. ಅವರು ಕೊಂಚವೂ ಅಳುಕಲಿಲ್ಲ. ಮುಹಮ್ಮದುರ್‍ರಸೂಲುಲ್ಲಾಹ್‌ರ(ಸ) ಆದೇಶದ ನಂತರ ಚಿಂತಿಸುವುದು, ಮೆದುಳಿಗೆ ಕಸರತ್ತು ನೀಡುವುದು ಮತ್ತು ಪರಿಣಾಮದ ಬಗ್ಗೆ ಹೆದರುವುದೆಂದರೆ ಸತ್ಯವಿಶ್ವಾಸವನ್ನೇ ಅವಹೇಳನ ಮಾಡಿದಂತೆ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ(ಸ) ಆಜ್ಞೆಗೆ ತಲೆ ಬಾಗುವುದೇ ಇಸ್ಲಾಮ್ ಮತ್ತು ಈಮಾನ್ ಆಗಿದೆ. ಯಾರಾದರೂ ಆಜ್ಞಾ ಪಾಲನೆಯಲ್ಲಿ ಹಿಂಜರಿದರೆ ಅಥವಾ ಅಳುಕಿದರೆ ಅವನ ಈಮಾನ್‌ನಲ್ಲಿಯೇ ಏನೋ ದೋಷವಿದೆ ಎಂದೂ ಅವನು ತನ್ನ

ದೇಹೇಚ್ಛೆಗಳಿಗೆ ಈಗಲೂ ದಾಸನಾಗಿದ್ದಾನೆಂದೂ ಅರ್ಥ.

ಹ. ಅಲೀ(ರ) ಯಾವುದೇ ಚಿಂತೆಯಿಲ್ಲದೆ, ಸಮಾಧಾನದಿಂದ ಪ್ರವಾದಿವರ್ಯರ(ಸ) ಹಾಸಿಗೆಯಲ್ಲಿ ಪವಡಿಸಿದರು. ಇತ್ತ ಕಟುಕರು ಅನಾಥಮುತ್ತು(ಸ) ಹೊರಬರುವುದನ್ನೇ ಕಾಯುತ್ತಾ ಕೂತಿದ್ದರು. ಅವರ ನಗ್ನಖಡ್ಗಗಳು ಲೋಕಾನುಗ್ರಹಿಯ ರಕ್ತಕ್ಕಾಗಿ ಹಾತೊರೆಯುತ್ತಿದ್ದುವು. ಅವರ ಕಣ್ಣೆವೆಗಳು ಆ ರಾತ್ರಿ ಮುಚ್ಚಲು ಸಿದ್ಧವಿರಲಿಲ್ಲ... ಮುಹಮ್ಮದ್(ಸ) ಬಾಗಿಲು ತೆರೆದು ಹೊರಬರುವಂತೆಯೇ ನಮ್ಮ ಖಡ್ಗಗಳು ರಕ್ತದಾಹವನ್ನು ತಣಿಸಿಕೊಳ್ಳಬೇಕು. ಇವತ್ತು ಮುಹಮ್ಮದ್(ಸ) ತಪ್ಪಿಸಿಕೊಳ್ಳಲಾರರು. ಇದು ಅವರ ಜೀವನದ ಕೊನೆಯ ರಾತ್ರಿಯಾಗಿದೆ. ನಾವು ಇದುವರೆಗೆ ಅವರಿಗೆ ಸಡಿಲ ಬಿಟ್ಟು ಕೊಡುತ್ತಿದ್ದೆವು. ಆದರೆ ಅಬ್ದುಲ್ಲಾರ ಪುತ್ರ ನಮ್ಮ ಯಾವುದೇ ಮಾತಿಗೆ ಬೆಲೆ ನೀಡಿಲ್ಲ! ಇನ್ನು ಎಲ್ಲಿಯ ತನಕ ನಮ್ಮ ಆರಾಧ್ಯರುಗಳ ಅವಹೇಳನವನ್ನು ಸಹಿಸಬೇಕು? ಸಹನೆಗೂ ಒಂದು ಮಿತಿ ಅನ್ನೋದಿದೆ. ಬನೂ ಹಾಶಿಮ್ ಕುಟುಂಬದಲ್ಲಿ ನಾಳೆ ಬೆಳಿಗ್ಗೆ ಶೋಕಾಚರಣೆ ನಡೆಯಲಿದೆ. ಅಬ್ದುಲ್ ಮುತ್ತಲಿಬ್‌ರ ಪುತ್ರ ಅಬ್ದುಲ್ಲಾರ ಅಕಾಲಿಕ ಮರಣಕ್ಕೂ ಅಷ್ಟು ಶೋಕ ಆಚರಿಸಿರಲಿಕ್ಕಿಲ್ಲ. ಹಾಶ್ಮಿ ಮನೆತನದ ಮಹಿಳೆಯರು ರೋದಿಸುತ್ತಾ ಹೇಳುವರು, "ಮುಹಮ್ಮದ್(ಸ) ನೀವು ಓರ್ವ ಸಜ್ಜನರಾಗಿದ್ದಿರಿ. ಸತ್ಯಸಂಧ, ಪ್ರಾಮಾಣಿಕ, ಸ್ಫುರದ್ರೂಪಿ, ಸಜ್ಜನ... ಲಜ್ಜೆಯು ನಿಮ್ಮ ಪ್ರಕೃತಿಯಾಗಿದೆ. ಸ್ವಾಭಿಮಾನವು ನಿಮ್ಮ ಹುಟ್ಟುಗುಣವಾಗಿದೆ. ಅರೇಬಿಯದಲ್ಲಿ ಬಹುಶಃ ನಿಮ್ಮಷ್ಟು ಒಳ್ಳೆಯ ವ್ಯಕ್ತಿ ಹುಟ್ಟಿರಲಿಕ್ಕಿಲ್ಲ. ಕುಸೈಯವರ ಸಾಧನೆಗಳು ನಿಮ್ಮ ಮುಂದೆ ಹಳಸಲಾಗಿ ಕಾಣಬಹುದು. ಆದರೆ ನೀವು ನಿಮ್ಮ ಸಮಾಜದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದು ಒಳ್ಳೆಯದಾಗಿರಲಿಲ್ಲ. ಒಂದು ವೇಳೆ ನೀವು ಜನಾಂಗದ ವಿರುದ್ಧ ನಿಲ್ಲದಿರುತ್ತಿದ್ದರೆ ಈ ದಿನ ನೋಡಲು ಸಿಗುತ್ತಿರಲಿಲ್ಲ.'

ಹೀಗೆ ಕುರೈಶ್ ಸತ್ಯನಿಷೇಧಿಗಳು ತೆರೆದ ಕಣ್ಣಲ್ಲಿ ಕನಸು ಕಾಣುತ್ತಾ ನಿರೀಕ್ಷೆಯ ಕ್ಷಣಗಳನ್ನು ಕಳೆಯುತ್ತಿರಲು, ರಾತ್ರಿಯ ಮೂರನೆಯ ಜಾವದಲ್ಲಿ ಸರ್ವಲೋಕಗಳ ಪಾಲಕ ಪ್ರಭುವಿನ ಪ್ರೀತಿಪಾತ್ರ ಸೃಷ್ಟಿಶ್ರೇಷ್ಠರಾದ ಅನಾಥಮುತ್ತು(ಸ) ಮನೆಯಿಂದ ಹೊರ ಬಂದರು. ಅಲ್ಲಾಹನು ಎಚ್ಚರದಿಂದಿದ್ದ ಸತ್ಯನಿಷೇಧಿಗಳ ತೆರೆದ ಕಂಗಳಿಗೆ ತೆರೆಯನ್ನಿಳಿಸಿಬಿಟ್ಟಿದ್ದನು. ಹೀಗಾಗಿ ಅವರಿಗೆ ಅನಾಥಮುತ್ತು ಹೊರಹೋಗಿದ್ದುದರ ಪ್ರಜ್ಞೆಯೇ ಉಂಟಾಗಲಿಲ್ಲ. ಅಲ್ಲಾಹನು ಯಾರನ್ನು ಸಂರಕ್ಷಿಸಬಯಸುತ್ತಾನೋ ಅವರನ್ನು ಜಗತ್ತಿನ ಸಕಲ ಶಕ್ತಿಗಳು ಸೇರಿಯೂ ಏನೂ ಮಾಡಲಾರವು. ಅಲ್ಲಾಹನ ಯುಕ್ತಿಗೆದುರು ಏನೂ ನಡೆಯಲಾರದು. ನಮ್ಮ ಅನುಭವ ಮತ್ತು ತಿಳುವಳಿಕೆಗಳ ಆಧಾರದಲ್ಲಿ ನಾವು ಯಾವುದನ್ನು 'ಗುಣ ವಿಶೇಷತೆಗಳು', ಅಭ್ಯಾಸಗಳು ಮತ್ತು ಒಲವುಗಳೆಂದು ಹೇಳುತ್ತೇವೋ ಅವೆಲ್ಲವುಗಳಿಗೂ ಅಲ್ಲಾಹ್ ಮೀರಿದವನಾಗಿದ್ದಾನೆ. ಅವನಿಚ್ಛಿಸಿದರೆ ಪ್ರತಿಯೊಂದು ಪ್ರಾಕೃತಿಕ ಗುಣವನ್ನೂ ಬದಲಾಯಿಸಬಲ್ಲನು. ಆತನಿಚ್ಛಿಸಿದರೆ ನೀರಿನಿಂದ ಉರಿಸುವ, ಬೆಂಕಿಯಿಂದ ನಂದಿಸುವ ಕೆಲಸವನ್ನೂ ಮಾಡಿಸಬಲ್ಲನು. ಹೀಗಿರುತ್ತಾ ಮಾನವನ ಅಸ್ತಿತ್ವ ಯಾವ ಲೆಕ್ಕಕ್ಕೆ? ನೀರಿನ

ಗುಳ್ಳೆ, ಸಮುದ್ರದಲೆಗಳ ನೊರೆ, ಇಬ್ಬನಿಯ ಬಿಂದು ಅಷ್ಟೇ. ದೊಡ್ಡ ದೊಡ್ಡ ಬಲಿಷ್ಠ ಕೋಟೆಗಳೂ ಆಂತರಿಕ ಮತ್ತು ಬಾಹ್ಯ ಆಕ್ರಮಣದಿಂದಾಗಿ ಇತರರ ಸ್ವಾಧೀನವಾಗಿ ಬಿಡುತ್ತವೆ. ಮಾನವ ಒಂದು ಆಲೋಚಿಸಿದರೆ ಆಗುವುದು ಇನ್ನೊಂದು. ಮನೆಯನ್ನು ಸುತ್ತುವರಿದಿದ್ದ ಶತ್ರುಗಳ ಮುಂದಿನಿಂದಲೇ ಅಲ್ಲಾಹನ ಪ್ರವಾದಿ(ಸ) ಹೊರಟು ಹೋಗುತ್ತಾರೆ. ಯಾವೊಬ್ಬ ಕಾಫಿರನಿಗೂ ಪ್ರವಾದಿವರ್ಯರ(ಸ) ನೆರಳೂ ಕಾಣದಂತಾಗಿತ್ತು.

ಪ್ರವಾದಿವರ್ಯರು(ಸ) ತಮ್ಮ ಮನೆಯಿಂದ ಹೊರಟು, ಆಪ್ತಮಿತ್ರ ಅಬೂಬಕರ್‌ರ(ರ) ಮನೆಗೆ ತಲುಪಿದರು. ಅಲ್ಲಿ ಅವರೊಡನೆ ತಮ್ಮ ಇರಾದೆ ಮತ್ತು ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟರು. ಅಬೂಬಕರ್(ರ) ಸ್ವಲ್ಪವೂ ಆಲೋಚಿಸದೆ, ಅಳುಕದೆ ತಕ್ಷಣವೇ ಹೊರಟು ನಿಂತರು. ವಸ್ತುತಃ ಮುಹಮ್ಮದ್‌ರೊಡನೆ(ಸ) ಪ್ರಯಾಣ ಹೊರಡುವುದೆಂದರೆ ಸಂಕಷ್ಟ ಮತ್ತು ಅಪಾಯದಲ್ಲಿ ಧುಮುಕಿದಂತೆ ಹಾಗೂ ಮರಣದ ಕರೆಗೆ ಓಗೊಟ್ಟಂತೆ! ಇದು ಯಾವುದೇ ವಿಹಾರ ಯಾತ್ರೆಯೋ ವ್ಯಾಪಾರಿ ಯಾನವೋ ಆಗಿರಲಿಲ್ಲ. ಈ ಯಾತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ಅತ್ಯಪಾಯಕಾರಿ ಸನ್ನಿವೇಶಗಳನ್ನು ಎದುರಿಸಬೇಕಾಗಿ ಬರಬಹುದು. ಇದು ಜೀವವನ್ನು ಪಣಕ್ಕೊಡ್ಡಿ ಮರಣದೊಂದಿಗೆ ಸೆಣಸುವುದಕ್ಕಿಂತ ಭಿನ್ನವಾಗಿರಲಿಲ್ಲ... ಆದರೆ ಸಿದ್ದೀಕುಲ್ ಅಕ್ಬರ್‌ರ(ರ) ಈಮಾನ್‌ನ ಶಕ್ತಿಯು ಚಿತ್ತದ ಆತಂಕಗಳಿಗೆ ಹೊರಬರಲು ಅವಕಾಶವನ್ನೇ ಕೊಡಲಿಲ್ಲ. ಸಿದ್ದೀಕ್‌ರ(ರ) ವಿಶ್ವಾಸವು ಅಲ್ಲಾಹ್ ಮತ್ತು ರಸೂಲುಲ್ಲಾಹ್‌ರ(ಸ) ಆದೇಶದ ಮುಂದೆ ಚಕಾರ ವೆತ್ತುವುದನ್ನು ಕಲಿತೇ ಇಲ್ಲ. ಕೇವಲ ಅಂಗೀಕಾರ, ಒಪ್ಪಿಗೆ, ಅನುಸರಣೆ, ಅನುಕರಣೆ ಮತ್ತು ಆಜ್ಞಾಪಾಲನೆಯನ್ನು ಮಾತ್ರ ಕಲಿತಿತ್ತು. ಇದು ಸತ್ಯವಿಶ್ವಾಸಕ್ಕೆ ಸಂಬಂಧಿಸಿದ ವಿಷಯವಾಗಿದೆ. ಎಲ್ಲವನ್ನೂ ಲಾಭನಷ್ಟಗಳಲ್ಲಿ ಅಳೆದು ಮುನ್ನಡೆಯಲು ವ್ಯಾಪಾರವೇನೂ ಅಲ್ಲವಲ್ಲ. ವಿಶ್ವಾಸವು ಮುಂಬರುವ ಪರಿಣಾಮವನ್ನು ಲೆಕ್ಕಿಸದೆ ತಲೆಬಾಗಿ ಮುಂದಡಿಯಿಡುತ್ತದೆ. ಬಾಗಿದ ಮೇಲೆ ತಲೆಯೆತ್ತಲು ಅವಕಾಶವೇ ಸಿಗದಂತಾಗಲೂಬಹುದು. ಶತ್ರುವಿನ ಖಡ್ಗದೇಟು ರುಂಡವನ್ನು ಚೆಂಡಾಡಲೂಬಹುದು. ಇನ್ನು ವಿಶ್ವಾಸದಲ್ಲಿ ದೃಢತೆಯಿಲ್ಲ ವೆಂದಾದರೆ, ಆತನಲ್ಲಿ ಇನ್ನೂ ದೌರ್ಬಲ್ಯ ಉಳಿದಿದೆಯೆಂದೇ ಅದರರ್ಥವಾಗಿದೆ. ಮುಹಮ್ಮದ ರ‍್ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶ ಕೇಳಿದಾಗ ಅಬೂಬಕರ್ ಸಿದ್ದೀಕ್‌ರು(ರ) ಈ ಅಪಾಯಕಾರಿ ಸಾಂಗತ್ಯ ಮತ್ತು ಭಯಾನಕ ಯಾತ್ರೆಯ ಪರಿಣಾಮ ವೇನಾಗಬಹುದು ಎಂಬುದನ್ನು ಆಲೋಚಿಸಲೇ ಇಲ್ಲ. ಅವರಾದರೋ ಸತ್ಯ ವಿಶ್ವಾಸವಿರಿಸಿ ಇಸ್ಲಾಮ್ ಸ್ವೀಕರಿಸಿದಾಗಿನಿಂದಲೇ ತಮ್ಮ ಜೀವನ, ಸಂಪತ್ತು, ಬುದ್ಧಿ-ವಿವೇಕ, ಚಿಂತನೆ, ಪ್ರಜ್ಞೆ, ಮನ-ಮಸ್ತಿಷ್ಕ ಎಲ್ಲವನ್ನೂ ಅಲ್ಲಾಹ್ ಮತ್ತು ರಸೂಲುಲ್ಲಾಹ್‌ರಿಗೆ(ಸ) ಅರ್ಪಿಸಿ ಬಿಟ್ಟಿದ್ದರು. ಧರ್ಮದ ವಿಷಯದಲ್ಲಿ ವೈಯಕ್ತಿಕ ಅಭಿಪ್ರಾಯ, ವ್ಯಕ್ತಿಗತ ಯುಕ್ತಿ ಮತ್ತು ಸ್ವಂತ ಆಲೋಚನೆಗಳಿಗೆ ಯಾವುದೇ ಅವಕಾಶವನ್ನು ಅವರು ಇರಿಸಿರಲಿಲ್ಲ.

ಅಬೂಬಕರ್(ರ) ಆ ಸೂಕ್ಷ್ಮ ಕ್ಷಣದಲ್ಲಿ ಯಾವೆಲ್ಲ ಅಗತ್ಯದ ವಸ್ತುವನ್ನು ಕಲೆ

ಹಾಕಲು ಸಾಧ್ಯವಿತ್ತೋ ಅವೆಲ್ಲವನ್ನೂ ಒಟ್ಟು ಸೇರಿಸಿದರು. ಹುರಿದ ಧಾನ್ಯಗಳ ಚೀಲವನ್ನು ಕಟ್ಟಲು ಅವರು ತ್ವರೆ ಮಾಡಿದರು. ಆ ಗಡಿಬಿಡಿಯಲ್ಲಿ ಅದರ ಬಾಯಿಕಟ್ಟಲು ಅಬೂಬಕರ್‌ರಿಗೆ(ರ) ತಕ್ಷಣಕ್ಕೆ ಹಗ್ಗ ದೊರೆಯಲಿಲ್ಲ. ಆಗ ಅವರ ಯುಕ್ತಿವಂತ ಮಗಳು ಅಸ್ಮಾ(ರ) ತಮ್ಮ ಸೊಂಟಪಟ್ಟಿಯನ್ನೇ ಹರಿದು ಕೊಟ್ಟರು. ಈ ಒಂದು ಯುಕ್ತಿವಂತಿಕೆ ಗಾಗಿ ಅಸ್ಮಾ(ರ) ಇಸ್ಲಾಮಿ ಇತಿಹಾಸದಲ್ಲಿ 'ದಾತುನ್ನಿತಾಕೈನ್' (ಎರಡು ಸೊಂಟ ಪಟ್ಟಿಯವಳು) ಎಂಬ ಶಾಶ್ವತ ಬಿರುದಿಗೆ ಭಾಜನರಾದರು. ಹೀಗೆ ಹುರಿದ ಧಾನ್ಯಗಳ ಪುಡಿ, ಖರ್ಜೂರ, ನೀರಿನ ಚೀಲ ಮತ್ತು ಅಗತ್ಯದ ಇನ್ನಿತರ ಮೂರ್ನಾಲ್ಕು ವಸ್ತುಗಳನ್ನು ಹೊತ್ತು ರಾತ್ರಿಯ ಏಕಾಂತತೆಯೊಂದಿಗೆ ಸಯ್ಯಿದುನಾ ಮುಹಮ್ಮದುರ್ರಸೂಲುಲ್ಲಾಹ್(ಸ) ಮತ್ತು ಅವರ ಆಪ್ತಮಿತ್ರ ಅಬೂಬಕರ್ ಸಿದ್ದೀಕ್(ರ) ಹೊರಟರು. ಮಕ್ಕಾದ ಗಲ್ಲಿಗಳಲ್ಲಿ ನೀರವ ಮೌನ ಆವರಿಸಿತ್ತು. ಜನರೆಲ್ಲ ತಂತಮ್ಮ ಬಿಡಾರಗಳಲ್ಲಿ ಸುಖನಿದ್ರೆಯಲ್ಲಿ ಮುಳುಗಿದ್ದರು. ಗಲ್ಲಿಯಿಂದಾಚೆ ಹೋದ ಬಳಿಕ ಅನಾಥಮುತ್ತು(ಸ) ಮಕ್ಕಾ ನಗರವನ್ನು ಪ್ರೀತಿಯಿಂದ ಬಾರಿಬಾರಿಗೆ ಹೊರಳಿ ನೋಡಿದರು. ಮಕ್ಕಾ ನಗರ ಕಳೆದು ಹೋಗುತ್ತಿದೆ. ಈ ಜನ್ಮನಾಡು, ಮುಹಮ್ಮದ್‌ರ(ಸ) ಬಾಲ್ಯ ಮತ್ತು ಯೌವನದ ವಸಂತಗಳನ್ನು ಕಂಡಿತ್ತು. ಈ ನಾಡಿನ ಕಣಕಣವೂ ಪ್ರವಾದಿವರ್ಯರಿಗೆ(ಸ) ಆರ್ದ್ರವಾಗಿ ವಿದಾಯ ಕೋರುತ್ತಿತ್ತು...

ಗುಹೆಯ ಮಿತ್ರ

ನಾಡಪ್ರೇಮವು ದೇವಸಂದೇಶವಾಹಕರ(ಸ) ಹೆಜ್ಜೆಗಳನ್ನು ಹಿಡಿದಿಟ್ಟು ಹೇಳಿತು, "ಉಮ್ಮುಲ್ ಕುರಾವನ್ನು ಬಿಟ್ಟು ಎಲ್ಲಿಗೆ ಹೋಗುತ್ತಿದ್ದೀರಿ? ನಿಮ್ಮ ಉಪಸ್ಥಿತಿಯ ಸೌಭಾಗ್ಯದಿಂದ ಮಕ್ಕಾ ನಗರವನ್ನು ಬರಿದಾಗಿಸಬೇಡಿರಿ." ಗಲ್ಲಿ, ಕೇರಿ, ಮಾರುಕಟ್ಟೆಗಳೆಲ್ಲ ಕೂಗಿ ಹೇಳಿದುವು, "ಲೋಕಾನುಗ್ರಹಿ(ಸ)! ನಿಮ್ಮ ಹೆಜ್ಜೆ ಗುರುತುಗಳು ನಮ್ಮೆದೆ ಗೂಡಲ್ಲಿ ಭದ್ರವಾಗಿವೆ. ನೀವು ಹೋಗುತ್ತೀರಾದರೆ, ನಮ್ಮನ್ನೂ ಜತೆಗೆ ಕರಕೊಂಡು ಹೋಗಿ. ಇಂತಹ ಪಾವನ ಹೆಜ್ಜೆ ಛಾಪು ನಮಗೆ ಇನ್ನೆಲ್ಲಿ ದೊರೆತೀತು? ಓ ಶಾಂತಿ, ಸಮಾಧಾನದ ಪ್ರವಾದಿಯೇ(ಸ)! ಸ್ವನಾಡನ್ನು ತೊರೆದು ಪರದೇಶಕ್ಕೆ ಹೋಗಬೇಡಿ. ಕಷ್ಟ ಕಾಲದಲ್ಲಿ ಯಾರೂ ಸಹಾಯಕ್ಕೆ ಬರಲಿ, ಬಾರದಿರಲಿ... ಇಲ್ಲಿ ಏನಿದ್ದರೂ ನಿಮ್ಮವರೇ ಇರುವುದಲ್ಲವೇ? ರಕ್ತ ಸಂಬಂಧವೆನ್ನುವುದು ಬಹಳ ಗಟ್ಟಿಯಾದ ಸಂಬಂಧವಾಗಿದೆ. ತಮ್ಮವರಿಗೆ ಇರುವಷ್ಟು ಅಪ್ಯಾಯಮಾನ್ಯತೆಯು ಅನ್ಯರಲ್ಲಿ ಕಾಣಲು ಸಾಧ್ಯವೇ?" ಇತ್ತ ಕಅಬಾದ ಗೋಡೆ-ಬಾಗಿಲು ಗಳಲ್ಲಿ ಅತೀವ ದುಃಖ ಮಡುಗಟ್ಟಿತ್ತು. ತನ್ನ ನಿಕಟ ಬಂಧು ಮತ್ತು ಪ್ರೀತಿ ಪಾತ್ರ ಗೆಳೆಯ ಅಗಲುತ್ತಿದ್ದಾರೆಂದು ಕಅಬಾಲಯವು ಒಳಗೊಳಗೇ ರೋದಿಸುತ್ತಿದೆ. ಅನುಗ್ರಹದ ಚಿಲುಮೆ ಝುಮ್‌ಝುಮ್‌ನಿಂದ ಹಿಡಿದು ಹತೀಮ್‌ನವರೆಗೂ ಎಲ್ಲವೂ ಸಂತಾಪಪಡುತ್ತಿವೆ.

ಭಯಾನಕ ಕಾರಿರುಳು... ಕಲ್ಲು-ಶಿಲೆಗಳ ದುರ್ಗಮ ಹಾದಿ... ಅಲ್ಲಲ್ಲಿ ಅಪಾಯಕಾರಿ ತಿರುವು... ಜತೆಗೆ ಏರು-ತಗ್ಗುಗಳು ಬೇರೆ! ಚೂಪು ಚೂಪಾದ ಹರಳು ಕಲ್ಲುಗಳು ಪಾವನ

ಪಾದಗಳಿಗೆ ಚುಚ್ಚುತ್ತಿದ್ದುವು... ಸ್ವಲ್ಪ ದೂರ ಸಾಗುವಷ್ಟರಲ್ಲಿ ಅವರ ಪಾದದಿಂದ ರಕ್ತ ಒಸರತೊಡಗಿತು. ತಿರುವು ಮತ್ತು ಏರು-ತಗ್ಗುಗಳಲ್ಲಿ ಕಲ್ಲುಗಳೆಡವಿದಾಗ ಮೊದಲೇ ಗಾಯ ಗೊಂಡ ಪಾದಗಳ ನೋವು ಇನ್ನೂ ಹೆಚ್ಚುತ್ತಿತ್ತು. ಈ ಸ್ಥಿತಿಯನ್ನು ಕಂಡು ಸಿದ್ದೀಕುಲ್ ಅಕ್ಬರ್‌ರಿಗೆ(ರ) ಸಹಿಸಲಾಗಲಿಲ್ಲ. ಅವರು ತನ್ನ ಮತ್ತು ದೇವನ ಆಪ್ತಮಿತ್ರನನ್ನು ಹೆಗಲ ಮೇಲೆ ಕೂರಿಸಿದರು. ಕಲ್ಲುಗಳ ಚೂಪು ಈಗ ಸಿದ್ದೀಕ್‌ರ ಕಾಲುಗಳನ್ನು ಮತ್ತಷ್ಟು ಘಾಸಿ ಗೊಳಿಸತೊಡಗಿತು. ಆದರೆ ಅಬೂಬಕರ್(ರ), ಅಲ್ಲಾಹನ ಸಂದೇಶವಾಹಕ ರಿಗೆ ತೊಂದರೆ ಯಾಗಬಾರದೆಂದು ಭಾವಿಸಿ, ನೋವು ನುಂಗಿ ನಡೆದರು... ಅವರು ಚೂಪು ಕಲ್ಲುಗಳ ಮೇಲಿನಿಂದಲೂ ಹೂವಿನ ಹಾಸಿಗೆಯಲ್ಲಿ ನಡೆದಂತೆ ಹೆಜ್ಜೆ ಹಾಕತೊಡಗಿದರು. ಹೀಗೆ ಐದು ಮೈಲುಗಳ ಪ್ರಯಾಣದ ಬಳಿಕ ಸೌರ್ ಗುಹೆ ಎದುರಾಯಿತು. ಅಬೂಬಕರ್(ರ) ಪ್ರವಾದಿ ವರ್ಯರೊಡನೆ(ಸ) ಹೇಳಿದರು, "ಅಲ್ಲಾಹನ ಸಂದೇಶವಾಹಕರೇ(ಸ)! ಇಲ್ಲಿ ಕೊಂಚ ವಿರಮಿಸಿರಿ. ನಾನು ಗುಹೆಯ ಒಳಹೋಗಿ ನೋಡಿ ಬರುತ್ತೇನೆ."

ಮುಳ್ಳುಗಂಟಿಗಳಿಂದಾವೃತ್ತವಾದ ಸೌರ್ ಗುಹೆಯನ್ನು ಕಲ್ಲು-ಮುಳ್ಳುಗಳು, ಮಣ್ಣಿನ ಹೆಂಟೆಗಳು ಆಚ್ಛಾದಿಸಿದಂತಿದ್ದವು. ನೋಡಲು ಅದು ಭಯಾನಕವಾಗಿ ಭೀತಿ ಹುಟ್ಟಿಸು ವಂತಿತ್ತು. ವಿಕಾರವಾದ ಕರಿಬಂಡೆಗಳು, ಹರಳು ಕಲ್ಲುಗಳ ರಾಶಿಯು ಏರು-ತಗ್ಗುಗಳನ್ನು ನಿರ್ಮಿಸಿದಂತಿತ್ತು... ಗುಹೆಯ ಗೋಡೆಯಲ್ಲಿ ಅಲ್ಲಲ್ಲಿ ರಂಧ್ರ, ಬಿರುಕು, ಬಿಲಗಳು ಇದ್ದವು! ಅಬೂಬಕರ್ ಸಿದ್ದೀಕ್‌ರು(ರ) ಬಹುಬೇಗನೆ ಗುಹೆಯ ಒಳಭಾಗದ ಧೂಳನ್ನು ಝಾಡಿಸಿದರು... ನೆಲವನ್ನು ಕೂರಲರ್ಹವಾಗುವಂತೆ ಒರೆಸಿದರು... ಉಟ್ಟ ಬಟ್ಟೆಯನ್ನೇ ಹರಿದು ಗುಹೆಯೊಳಗಿನ ಬಿಲ, ರಂಧ್ರ, ಬಿರುಕುಗಳನ್ನು ಮುಚ್ಚಿದರು... ವಿಷಜಂತು ಯಾವುದೂ ದೇವಸಂದೇಶ ವಾಹಕರಿಗೆ ತೊಂದರೆ ಕೊಡದಿರಲೆಂದಾಗಿತ್ತು ಅವರ ಉದ್ದೇಶ. ಸಾಮಾನ್ಯವಾಗಿ ಗುಹೆಗಳಲ್ಲಿ ಹಾವು, ಚೇಳು ಮತ್ತಿತರ ವಿಷಕಾರಿ ಜಂತುಗಳ ದಾಳಿಯ ಅಪಾಯ ಇದ್ದದ್ದೇ. ಆದರೆ ಅಬೂಬಕರ್ ಸಿದ್ದೀಕ್‌ರವರಿಗೆ ಪ್ರವಾದಿವರ್ಯರ(ಸ) ಮೇಲಿನ ಮಮತೆಯಲ್ಲಿ ತನ್ನ ಜೀವ-ದೇಹದ ಬಗ್ಗೆ ಆಲೋಚಿಸುವಷ್ಟೂ ವ್ಯವಧಾನವಿದ್ದಿರಲಿಲ್ಲ. ಎಲ್ಲ ರೀತಿಯಲ್ಲಿಯೂ ಸಮಾಧಾನ ವೆನಿಸಿದ ಬಳಿಕ ಅವರು(ರ) ಗುಹೆಯಿಂದ ಹೊರ ಬಂದರು. ತರುವಾಯ ಪ್ರವಾದಿವರ್ಯ ರೊಡನೆ(ಸ) ಗುಹೆಯೊಳಗೆ ಅಡಿಯಿಡಲು ಹೇಳಿದರು. ಅನಾಥ ಮುತ್ತು(ಸ) ಸೌರ್ ಗುಹೆಯೊಳ ಹೊಕ್ಕರು. ಅವರೊಟ್ಟಿಗೇ ಸಿದ್ದೀಕ್(ರ) ಒಳ ನಡೆದರು. ಆದರೆ ಏನಾದರೂ ಅಪಾಯ ಎದುರಾದೀತೇ ಎಂದು ಆತಂಕದಿಂದ ಅತ್ತಿತ್ತ ದೃಷ್ಟಿ ಹಾಯಿಸುತ್ತಲೂ ಇದ್ದರು. 'ಎಲ್ಲಾದರೂ ಯಾವುದಾದರೊಂದು ಹಾವು ಅತ್ತ ಸುಳಿದಾಡಿದರೆ ಅದರ ಹೆಡೆಯನ್ನು ಹಿಡಿದು ಹೊಸಕಿ ಹಾಕಿಯೇನು. ಅದರಿಂದ ನನ್ನ ಜೀವ ಹೋದರೂ ಸರಿಯೆ. ಆದರೆ ದೇವಸಂದೇಶವಾಹಕರ(ಸ) ಕೂದಲು ಕೊಂಕಲೂ ಬಿಡಲಾರೆ' ಎಂದು ಸಿದ್ದೀಕ್‌ರ(ರ) ಮನ ನುಡಿಯುತ್ತಿತ್ತು.

ಅಬೂಬಕರ್‌ರ(ರ) ಸ್ಥಾನದಲ್ಲಿ ಯಾರಾದರೂ ಲೌಕಿಕವಾದಿ ಅಥವಾ ಸ್ವಾರ್ಥಪರ

ವ್ಯಕ್ತಿ ಇರುತ್ತಿದ್ದರೆ, ಯುಕ್ತಿಯ ಜಾಡಿನಲ್ಲಿ ತನ್ನ ಸಹಚರನಿಗೆ ಅಪಾಯವನ್ನು ತಂದೊಡ್ಡುತ್ತಿದ್ದ... ಆತ ಬಹುಶಃ, "ನಾನು ಮತ್ತು ನೀವು ಒಂದೇ ಸ್ಥಿತಿಯಲ್ಲಿದ್ದೇವೆ. ಹಾಗಾಗಿ ನೀವು ನನ್ನ ಬಗ್ಗೆ ಕಾಳಜಿ ವಹಿಸಿರಿ, ನಾನು ನಿಮ್ಮ ಬಗ್ಗೆ ಕಾಳಜಿ ವಹಿಸುತ್ತೇನೆ. ಒಟ್ಟೊಟ್ಟಿಗೆ ಸೇರಿ ನಡೆದರೆ ಕೆಲಸ ಸುಲಭವಾದೀತು. ಇಡೀ ಹೊಣೆಭಾರವನ್ನು ಒಬ್ಬನ ಹೆಗಲಿಗೇರಿಸದಿರುವುದು ಉತ್ತಮವಲ್ಲವೇ?" ಎನ್ನುತ್ತಿದ್ದ. ಒಂದು ವೇಳೆ ಆತನೊಬ್ಬನೇ ಎಲ್ಲ ಹೊಣೆಗಳನ್ನು ವಹಿಸಿದರೂ ಅದನ್ನು ಆಗಾಗ ಹೇಳಿ ತಲೆಚಿಟ್ಟು ಹಿಡಿಸುತ್ತಿದ್ದನೇನೋ... "ನಾನು ನಿನಗಾಗಿ ಇದನ್ನು ಮಾಡಿದೆ, ಅದನ್ನು ಮಾಡಿದೆ. ನನ್ನ ಸೌಕರ್ಯಗಳನ್ನು ತ್ಯಜಿಸಿ ನಿನಗಾಗಿ ಸೌಲಭ್ಯಗಳನ್ನು ಮಾಡಿಕೊಟ್ಟೆ... ನಿನ್ನ ರಕ್ಷಣೆಗಾಗಿ ನನ್ನ ಜೀವವನ್ನೂ ಪಣಕ್ಕಿಟ್ಟೆ... ಈ ಬಿಲಗಳಲ್ಲಿ ಹಾವು-ಚೇಳುಗಳಿದ್ದಿರಲಿಕ್ಕೂ ಸಾಕು, ಆದರೆ ನಾನು ನಿನ್ನ ಮೇಲಿನ ಪ್ರೀತಿಯಿಂದಾಗಿ ನನಗಾಗುವ ತೊಂದರೆಯನ್ನೂ ಲೆಕ್ಕಿಸಲಿಲ್ಲ..." ಎಂದೆಲ್ಲಾ ಹೇಳುತ್ತಿದ್ದನೇನೋ!

ಆದರೆ ಇಲ್ಲಿದ್ದವರು ಅಬೂಬಕರ್ ಸಿದ್ದೀಕ್‌ರಾಗಿದ್ದರು. ವಾಸ್ತವಿಕವಾಗಿ ಗುಹೆಯ ಸಂಗಾತಿಯಾಗಿದ್ದರು! ನಿರಪೇಕ್ಷ ಮಿತ್ರ, ಪ್ರಾಣ ಸ್ನೇಹಿತ, ವಿಶ್ವಾಸಾರ್ಹ ಸಹಯಾತ್ರಿಕ ಮತ್ತು ಜೀವಾರ್ಪಣೆಗೂ ಸಿದ್ಧವಿರುವ ಸೇವಕ! ಅವರು ಪ್ರವಾದಿವರ್ಯರಿಂದ(ಸ) ಶಹಬ್ಬಾಸ್‌ಗಿರಿ ಗಿಟ್ಟಿಸಲಿಕ್ಕಾಗಿ ಈ ಎಲ್ಲ ಸೇವೆಗಳನ್ನು ಮಾಡಿದ್ದಲ್ಲ. ಅವರಾದರೋ ಅಷ್ಟೆಲ್ಲ ಮಾಡಿಯೂ 'ನನ್ನಿಂದ ಹೆಚ್ಚಿನದೇನೂ ಮಾಡಲಾಗಲಿಲ್ಲವಲ್ಲಾ' ಎಂದು ಹಲುಬುತ್ತಿದ್ದರು. ನಿಜವೇ. ಮುಹಮ್ಮದ್‌ರ(ಸ) ಹಾದಿಯಲ್ಲಿ ಹೃದಯವನ್ನೇ ಹರವಿ ಕೊಂಡರೂ ವಿಶ್ವಾಸದ ಹಕ್ಕು ಈಡೇರಿಸಿದಂತಾಗಲಾರದು. ಯಾರ ಮೂಲಕವಾಗಿ ನಮಗೆ ವಿಶ್ವಾಸದ ಸೌಭಾಗ್ಯ ಪ್ರಾಪ್ತವಾಯಿತೋ ಮತ್ತು ಇಸ್ಲಾಮಿನ ಅನುಗ್ರಹ ಲಭಿಸಿತೋ, ಅವರಿಗಾಗಿ ಜೀವವನ್ನು ಅರ್ಪಿಸಿದರೂ ಅವರ ಋಣ ಸಂದಾಯವಾಗಲಾರದು.

ಸೌರ್ ಗುಹೆಯಲ್ಲಿ...

ಇತ್ತ ಪ್ರವಾದಿವರ್ಯರ(ಸ) ಮನೆಯ ಸುತ್ತ ಮುತ್ತಿಗೆ ಹಾಕಿ ಕೂತಿದ್ದ ಸತ್ಯನಿಷೇಧಿಗಳು ಇನ್ನು ನಮ್ಮ ಗುರಿ ಈಡೇರಲು ಹೆಚ್ಚು ಸಮಯವಿಲ್ಲವೆಂದು ರಾತ್ರಿ ಕಳೆಯುವುದನ್ನೇ ಖುಷಿಯಿಂದ ಕಾಯುತ್ತಿದ್ದರು. ಎಲ್ಲಿಯ ವರೆಗೆಂದರೆ ಪೂರ್ವ ದಿಗಂತದಲ್ಲಿ ಬೆಳ್ಳಿ ರೇಖೆ ಮೂಡತೊಡಗಿತು. ಆದರೆ ಅಬ್ದುಲ್ಲಾರ ಪುತ್ರ(ಸ) ಮನೆಯಿಂದ ಹೊರ ಬರುವುದು ಕಾಣುತ್ತಿಲ್ಲ. ಸತ್ಯನಿಷೇಧಿಗಳಿಗೆ ಅಚ್ಚರಿಯಾಯಿತು... ಏನಾಯಿತು? ಮುಹಮ್ಮದ್(ಸ) ಎಂದಿನಂತೆ ಯಾಕೆ ಹೊರ ಬರುತ್ತಿಲ್ಲ? ಸೂರ್ಯೋದಯವಾಗುವ ಹೊತ್ತಾಯಿತು... ಮುಹಮ್ಮದ್(ಸ) ಆರಾಧನೆಗಾಗಿ ಹೊರ ಬಂದಿಲ್ಲವೇಕೆ? ಅವರಂತೂ ಬೆಳಕು ಹರಿಯುವುದಕ್ಕೆ ಮುನ್ನವೇ ಕಅಬಾದ ದಾರಿ ಹಿಡಿಯುತ್ತಾರಲ್ಲ! ಅವರ ಈ ಅಭ್ಯಾಸವು ಇಡೀ ಮಕ್ಕಾ ನಗರದಲ್ಲಿ ಪ್ರಖ್ಯಾತವಾಗಿದೆ... ಜನ ನಿದ್ರಿಸುತ್ತಿರುವ ಆ ವೇಳೆಯಲ್ಲಿ ಮುಹಮ್ಮದ್‌ರ(ಸ) ಹಣೆಯು

ಕಅಬಾಲಯದ ಅಂಗಳದಲ್ಲಿ ದೇವನ ಮುಂದೆ ಸಾಷ್ಟಾಂಗವೆರಗಿಕೊಂಡಿರುತ್ತದೆ. ಬಹುಶಃ ಇಂದು ಅವರು ಎಚ್ಚರಗೊಂಡಿರಲಿಕ್ಕಿಲ್ಲ ಎಂದು ಒಬ್ಬ ಸತ್ಯನಿಷೇಧಿ ಭಾವಿಸಿದರೆ, ಬಹುಶಃ ನಾವು ಸುತ್ತುವರಿದಿರುವುದನ್ನರಿತು ಮುಹಮ್ಮದ್(ಸ) ಮನೆಯಲ್ಲೇ ಅಡಗಿ ಕುಳಿತಿರಲಿಕ್ಕೂ ಸಾಕು ಎಂದು ಇನ್ನೊಬ್ಬ ಗ್ರಹಿಸಿದ. ಒಬ್ಬೊಬ್ಬರು ಒಂದೊಂದು ತೆರನಾಗಿ ಚಿಂತಿಸುತ್ತಿದ್ದಾಗಲೇ, ಒಳಗೆ ನೋಡಿದರೆ ಒಳ್ಳೆಯದೆಂಬ ಆಲೋಚನೆಯೂ ಅವರಲ್ಲಿ ಹುಟ್ಟಿತು. ಸರಿ, ಯಾವ ಕೆಲಸಕ್ಕಾಗಿ ನಾವು ರಾತ್ರಿಯಿಡೀ ನಿದ್ದೆಗೆಟ್ಟು ಕುಳಿತಿದ್ದೆವೋ ಅದನ್ನು ಪೂರ್ತಿಗೊಳಿಸಿಯೇ ತೀರುವೆವು... ಇಂದು ನಾವು ಬರಿಗೈಯಲ್ಲಿ ಮರಳಲಾರೆವು ಎಂದು ಭಾವಿಸಿ ಅವರೆಲ್ಲ ಮನೆಯ ಹತ್ತಿರ ಸರಿದರು.

ಒಳಗೆ ನೋಡಿದಾಗ ಪ್ರವಾದಿವರ್ಯರ(ಸ) ಮಂಚದಲ್ಲಿ ಅಲೀ(ರ) ಮಲಗಿರುವುದನ್ನು ಕಂಡು ಅವರಿಗೆ ಅತೀವ ರೋಷವುಕ್ಕಿತು. ಆ ನಿರ್ದಯಿಗಳು ಅಲಿಯವರನ್ನು ಹಿಡಿದು ಚೆನ್ನಾಗಿ ತದಕಿದರು.

"ಮುಹಮ್ಮದ್ ಬಿನ್ ಅಬ್ದುಲ್ಲಾ ನಮ್ಮ ಕಣ್ಣಿಗೆ ಮಣ್ಣೆರಚಿ ಹೋದರಲ್ಲ!" ಒಬ್ಬ ಕುರೈಶಿ ಒದರಿದ. ಉಳಿದವರು ಹೌದೆಂಬಂತೆ ತಲೆಯಲ್ಲಾಡಿಸಿದರು. ಅವರೆಲ್ಲರ ಮನಸ್ಸಿನಲ್ಲೂ ಅದೇ ಚಿಂತೆಯಿತ್ತು. ಅವರು ಸಿಡಿಮಿಡಿಗೊಳ್ಳುತ್ತಾ ತಂತಮ್ಮ ಖಡ್ಗಗಳನ್ನು ನೋಡುತ್ತಾರೆ... ಛೆ! ನಮ್ಮ ಈ ಪ್ರತಾಪಶಾಲಿ ಖಡ್ಗಗಳ ರಕ್ತದಾಹ ತಣಿಯಲಿಲ್ಲವಲ್ಲಾ... ಏನು ಆಲೋಚಿಸಿ ಬಂದಿದ್ದೆವು ಮತ್ತು ಏನು ಆಗಿಬಿಟ್ಟಿತು! ಮನದಾಳದ ಆಗ್ರಹವು ಅಲ್ಲೇ ಹುದುಗಿ ಹೋಯಿತೇ! ಒಂದಿಷ್ಟು ಕಾಳಗ ನಡೆದ ಬಳಿಕ ಹೀಗಾಗುತ್ತಿದ್ದರೆ, ಕನಿಷ್ಠ ನಮ್ಮ ಖಡ್ಗಗಳಿಗೆ ಶೌರ್ಯ ಮೆರೆಯುವ ಅವಕಾಶವಾದರೂ ಸಿಕ್ಕಿತಲ್ಲ ಎಂದು ಭಾವಿಸಿ ಸಹನೆ ವಹಿಸಬಹುದಿತ್ತು. ಆದರೆ ಇಲ್ಲಿ, ಯಾರದೇ ಖಡ್ಗವು ಒರೆಯಿಂದ ಹೊರ ಬರದೇನೇ ಮುಹಮ್ಮದ್ ಹೊರಟು ಹೋದರಲ್ಲ...!

ಸೂರ್ಯ ಪ್ರಕಾಶ ಹರಡುತ್ತಿದ್ದಂತೆಯೇ ಪ್ರವಾದಿವರ್ಯರ(ಸ) ಹುಡುಕಾಟ ಶುರುವಾಯಿತು. ಅವರ ಹುಡುಕಾಟದಲ್ಲಿ ಅಶ್ವಾರೂಢರೂ ಒಂಟೆ ಸವಾರರೂ ನಾಲ್ದೆಸೆಗೆ ದೌಡಾಯಿಸಿದರು. ಕೆಲವರು ಕಾಲ್ನಡಿಗೆಯಲ್ಲೇ ಹೊರಟರು. ಮುಹಮ್ಮದ್(ಸ) ಹೆಚ್ಚು ದೂರ ಹೋಗಿರಲಿಕ್ಕಿಲ್ಲ, ಒಂದು ವೇಳೆ ತ್ವರಿತವಾಗಿ ಹುಡುಕಾಡಿದರೆ ಪತ್ತೆ ಹಚ್ಚುವುದೇನೂ ಕಷ್ಟವಿಲ್ಲ ಎಂಬುದು ಅವರ ಗ್ರಹಿಕೆಯಾಗಿತ್ತು. ಅವರು ಮಕ್ಕಾ ಸಮೀಪದ ಎಲ್ಲಾ ಪೊದೆಗಳನ್ನು ತಡಕಾಡಿದರು. ಆಸುಪಾಸಿನ ಖರ್ಜೂರ ತೋಟ ಮತ್ತು ಎಲ್ಲ ದಾರಿಗಳಲ್ಲೂ ಹುಡುಕಾಡಿದರು. ಆದರೆ ಯಾವುದೇ ಫಲ ದೊರೆಯಲಿಲ್ಲ. ಎಲ್ಲಿಯ ವರೆಗೆಂದರೆ, ಸತ್ಯನಿಷೇಧಿಗಳು ಸೌರ್ ಗುಹೆಯ ದ್ವಾರವನ್ನೂ ತಲುಪಿದರು. ಮೊದಲು ಅವರ ಹೆಜ್ಜೆ ಸಪ್ಪಳ ಕೇಳಿಸಿತು, ನಂತರ ಅವರ ಮಾತುಗಳು... ಅಬೂಬಕರ್ ಸಿದ್ದೀಕ್(ರ) ಅತೀವ ಕಳವಳ ಮತ್ತು ಭಯ-ಭೀತಿ ಆವರಿಸಿತು... ಈ ಕ್ರೂರಿಗಳು ಗುಹೆಯೊಳಗೆ ಇಣುಕಿ ನೋಡಿದರೇನು ಮಾಡುವುದು? ಈ

ಗುಹೆಗಿರುವುದೊಂದೇ ದ್ವಾರ... ಎಲ್ಲಿಂದ ತಪ್ಪಿಸುವುದು!? ಅಯ್ಯೋ, ಎಲ್ಲಿಗೂ ಹೋಗಲಾರೆವು... ಶತ್ರುಗಳು ಹೊರಗೆ ಅಡ್ಡಾಡುತ್ತಿದ್ದಾರೆ... ಹೀಗಿರುತ್ತಾ ಚಿಂತೆಯಾಗುವುದು ಸ್ವಾಭಾವಿಕವೇ... ಅಬೂಬಕರ್ ರಿಗೆ(ರ) ತಮಗಿಂತ ಅಲ್ಲಾಹನ ಸಂದೇಶವಾಹಕರದೇ ಚಿಂತೆಯಾಗಿತ್ತು. ಶತ್ರುಗಳೆಲ್ಲಾದರೂ ಅಲ್ಲಾಹನ ಸಂದೇಶವಾಹಕರಿಗೆ ಕೇಡನ್ನುಂಟು ಮಾಡಿದರೆ? ಆದರೆ ಅಲ್ಲಾಹನು ಅದೇ ಹೊತ್ತಿಗೆ ದಿವ್ಯವಾಣಿ ಅವತೀರ್ಣಗೊಳಿಸಿದ. ಅದನ್ನೇ ಪ್ರವಾದಿ(ಸ) ಉಚ್ಚರಿಸಿದರು,

"ಹೆದರಬೇಡಿರಿ, ಅಲ್ಲಾಹ್ ನಮ್ಮ ಜತೆಯಲ್ಲಿದ್ದಾನೆ."

ಪ್ರವಾದಿವರ್ಯರ(ಸ) ಬಾಯಿಯಿಂದ ಈ ಮಾತು ಕೇಳಿದಾಗ ಅಬೂಬಕರ್ ಸಿದ್ದೀಕ್‌ರಿಗೆ(ರ) ಸಮಾಧಾನವಾಯಿತು. ಚಿಂತೆಯು ಸಮಾಧಾನವಾಗಿ ಮಾರ್ಪಟ್ಟಿತು ಮತ್ತು ಕಳವಳದ ಜಾಗದಲ್ಲಿ ಶಾಂತಿ ನೆಲೆಸಿತು. ದುಃಖ, ದುಮ್ಮಾನ ದೂರವಾಯಿತು. "ಹೆದರಬೇಡಿರಿ, ಅಲ್ಲಾಹನು ನಮ್ಮಿಬ್ಬರೊಂದಿಗಿದ್ದಾನೆ" ಎಂಬ ಸ್ವಯಂ ದೇವವಾಣಿಯು ಸಿದ್ದೀಕ್‌ರ(ರ) ಮನದ ಬೇಗುದಿಯನ್ನು ನಿವಾರಿಸಿ, ಅವರ ಹೃದಯಕ್ಕೆ ತಂಪನ್ನೆರೆಯಿತು. ಅಲ್ಲಾಹನ ಸಾಂಗತ್ಯವಿದೆಯೆಂಬ ಸುವಾರ್ತೆಯು ನಿರೀಕ್ಷೆಯ ಆಶಾಕಿರಣವನ್ನು ಬೆಳಗಿಸಿತು. ಈ ಸತ್ಯನಿಷೇಧಿಗಳು ಇನ್ನು ನಮ್ಮ ಕೂದಲನ್ನೂ ಕೊಂಕಿಸಲಾರರು ಎಂದು ಸಿದ್ದೀಕುಲ್ ಅಕ್ಬರ್‌ರಿಗೆ(ರ) ಮನವರಿಕೆಯಾಯಿತು. ಹೀಗೆ ಅಲ್ಲಾಹನ ಸಹಾಯ-ಸಹಕಾರವು ಅವರ ವಿಧಿಯಲ್ಲಿ ಬರೆಯಲ್ಪಟ್ಟಿತು. ಹಾಗಾಗಿ ಶತ್ರುಗಳು ಅಲ್ಲಿಂದ ನಿರಾಶರಾಗಿ ಮರಳಿದರು. ವಸ್ತುತಃ ಹುಲ್ಲು ಮತ್ತು ಮುಳ್ಳುಗಂಟಿಗಳಿಂದ ಆವೃತ್ತವಾಗಿರುವ ಈ ಗುಹೆಯೊಳಗೆ ಯಾರೂ ಹೋಗಿರಲಾರರು ಎಂದು ಭಾವಿಸಿದ, ಆ ತಿಳಿಗೇಡಿಗಳು ಅಲ್ಲಿಂದ ಹೊರಟು ಹೋದರು.

ಸತತ ಮೂರು ದಿನಗಳ ಕಾಲ ಲೋಕನಾಯಕ ಅನಾಥಮುತ್ತು(ಸ) ಮತ್ತು ಅವರ ಆಪ್ತಮಿತ್ರ ಸಿದ್ದೀಕುಲ್ ಅಕ್ಬರ್(ರ) ಸೌರ್‌ಗುಹೆಯಲ್ಲಿ ಅಡಗಿದ್ದರು. ಈ ಮಧ್ಯೆ ರಾತ್ರಿಯ ಅಂಧಕಾರ ಆವರಿಸಿದಾಗ ಅಬೂಬಕರ್‌ರ(ರ) ಪುತ್ರಿ ಅಸ್ಮಾ(ರ) ರೊಟ್ಟಿಗಳನ್ನು ಕಟ್ಟಿಕೊಂಡು ಮನೆಯಿಂದ ಹೊರಟು ಬಹಳ ಜಾಗರೂಕತೆಯೊಂದಿಗೆ ಸೌರ್ ಗುಹೆಗೆ ತಲುಪುತ್ತಿದ್ದರು. ಅದು ಅತ್ಯಂತ ನಾಜೂಕಿನ ಕಾರ್ಯವಾಗಿತ್ತು. ಸತ್ಯನಿಷೇಧಿಗಳಿಗೆ ಸ್ವಲ್ಪವಾದರೂ ಆ ಬಗ್ಗೆ ಸಂಶಯ ಬಂದರೆ ಜೀವಕ್ಕೇ ಅಪಾಯವಿತ್ತು. ಹೌದು, ಅದು ಜೀವವನ್ನೇ ಪಣಕ್ಕೊಡ್ಡುವ ಕಾರ್ಯವಾಗಿತ್ತು. ಆದರೆ ಅವರು ಪ್ರವಾದಿವರ್ಯರ(ಸ) ಗುಹೆಯ ಮಿತ್ರ ಸಿದ್ದೀಕುಲ್ ಅಕ್ಬರ್‌ರ(ರ) ಧೀಮಂತ ಪುತ್ರಿಯಾಗಿದ್ದರು. ವಿಧೇಯತೆಯು ಅವರಲ್ಲಿ ರಕ್ತಗತ ವಾಗಿತ್ತು. ಪ್ರವಾದಿವರ್ಯರಿಗಾಗಿ(ಸ) ಅವರೂ ಯಾವುದೇ ರೀತಿಯ ಅಪಾಯವನ್ನು ಲೆಕ್ಕಿಸಲಿಲ್ಲ. ಸತ್ಯವಿಶ್ವಾಸವು ಅವರ ಹೃದಯವನ್ನು ದೃಢ ಮತ್ತು ನಿರ್ಭಯವನ್ನಾಗಿಸಿತ್ತು.

ಇನ್ನು, ಸೌರ್ ಗುಹೆಯಿಂದ ಹೊರಡುವ ವಿಷಯ. ಅದೂ ಕೂಡಾ ಬಹಳ ಸೂಕ್ಷ್ಮವಾದ ವಿಚಾರವಾಗಿತ್ತು. ಒಂದು ವೇಳೆ ಕಳವಳ ಮತ್ತು ಗಡಿಬಿಡಿಯ ಕ್ರಮದಿಂದಾಗಿ ಎಲ್ಲಾದರೂ

ಶತ್ರುಗಳಿಗೆ ಸುಳಿವು ಸಿಕ್ಕಿ ಬಿಟ್ಟರೆ ಏನಾಗುತ್ತಿತ್ತು!? ಆ ಸಂದರ್ಭದ ಸೂಕ್ಷ್ಮತೆಯು ಜಾಗರೂಕತೆ ಮತ್ತು ಮುಂದಾಲೋಚನೆಯನ್ನು ಬಯಸುತ್ತಿತ್ತು. ಆದ್ದರಿಂದ ಕುರೈಶರ ಚಲನ ವಲನ ಮತ್ತು ಅವರ ಇರಾದೆಗಳ ಬಗ್ಗೆ ಜಾಗ್ರತೆ ವಹಿಸುವುದು ಅತಿ ಅಗತ್ಯವಾಗಿತ್ತು. ಈ ಕಾರ್ಯಕಾರಣ ಜಗತ್ತಿನಲ್ಲಿ ಬಾಳುವವರು ಗೋಚರ ವಿಷಯ ಮತ್ತು ಸಂಪನ್ಮೂಲಗಳನ್ನು ಬಳಸಬೇಕಾಗಿ ಬರುವುದು ಸ್ವಾಭಾವಿಕವೇ. ಇದುವೇ ಅಲ್ಲಾಹನ ವಿಧಿ ಮತ್ತು ಪ್ರಕೃತಿ ನಿಯಮವಾಗಿದೆ. ಅಲ್ಲಾಹನ ದಯಾಕೃಪೆಯ ಮೇಲೆ ಭರವಸೆಯನ್ನಿರಿಸುತ್ತಾ ಅವಶ್ಯಕತೆಗಳ ಈಡೇರಿಕೆ ಮತ್ತು ಸಂಪನ್ಮೂಲಗಳ (ಜೀವನಾಧಾರ) ತಲಾಶೆಯನ್ನು ಮಾಡುವುದು ಸತ್ಯವಿಶ್ವಾಸಿಗಳ ಲಕ್ಷಣವಾಗಿದೆ. ಅಬೂಬಕರ್‌ರ(ರ) ಪುತ್ರ ಅಬ್ದುಲ್ಲಾ(ರ) ನಗರವಾಸಿಗಳ ದೃಷ್ಟಿಯಿಂದ ತಪ್ಪಿಸುತ್ತಾ ಸೌರ್ ಗುಹೆಯ ಬಳಿಗೆ ಬರುತ್ತಿದ್ದರು ಮತ್ತು ಮಕ್ಕಾವಾಸಿಗಳ ಸ್ಥಿತಿಗತಿಗಳನ್ನು ತಿಳಿಸುತ್ತಿದ್ದರು. ಹ. ಆಯಿಶಾರ(ರ) ಸಹೋದರನ ಗುಲಾಮನಾಗಿದ್ದ ಆಮಿರ್ ಬಿನ್ ಫುಹೈರಃ ಆಡುಗಳನ್ನು ಮೇಯಿಸುತ್ತಿದ್ದ. ಆತ ಆಡುಗಳನ್ನು ಅತ್ತ ಕಡೆಗೆ ಅಟ್ಟಿಕೊಂಡು ಬರುತ್ತಿದ್ದ. ಅನಾಥಮುತ್ತು(ಸ) ಮತ್ತು ಅವರ ಆಪ್ತಮಿತ್ರ(ರ), ಸಾಕಷ್ಟು ಹಾಲು ಕರೆದು ಕುಡಿಯುತ್ತಿದ್ದರು. ತರುವಾಯ ಆಮಿರ್, ಆಡುಗಳ ಹೆಜ್ಜೆ ಗುರುತುಗಳನ್ನು ಮರಳಿನಿಂದ ಅಳಿಸುತ್ತ ಮರಳುತ್ತಿದ್ದ. ಎಲ್ಲಾದರೂ ಆಡುಗಳ ಹೆಜ್ಜೆ ಗುರುತು ಕಂಡು ಅವರನ್ನು ಶತ್ರುಗಳು ಪತ್ತೆ ಹಚ್ಚಿಯಾರೆಂದು ಆಮಿರ್‌ರ ಆತಂಕವಾಗಿತ್ತು. ಇಲ್ಲಿ ಈ ಸಂದರ್ಭದಲ್ಲಿ ಅತ್ಯಂತ ರಹಸ್ಯ ಮತ್ತು ಅತಿಯಾದ ಮುಂಜಾಗ್ರತೆಯನ್ನು ವಹಿಸುವುದು ಅನಿವಾರ್ಯವಾಗಿತ್ತು.

ಎರಡು ಇಡೀ ಹಗಲು ಮತ್ತು ಮೂರು ಸಂಪೂರ್ಣ ರಾತ್ರಿಗಳು ಇದೇ ಸ್ಥಿತಿಯಲ್ಲಿ ಕಳೆದು ಹೋದುವು. ಆದರೆ ಕುರೈಶರು ಅಲಕ್ಷ್ಯರಾಗಿರಲಿಲ್ಲ. ಅವರ ಜನ ಹುಡುಕಾಡುತ್ತಲೇ ಇದ್ದರು. ಕೊನೆಗೆ ನಾಲ್ಕನೆಯ ರಾತ್ರಿ ಅಬೂಬಕರ್‌ರ(ರ) ಮನೆಯಿಂದ ಎರಡು ದಷ್ಟಪುಷ್ಟವಾದ, ವೇಗವಾಗಿ ಓಡುವ ಹೆಣ್ಣೊಂಟೆಗಳನ್ನು ತರಲಾಯಿತು. ಒಂದರಲ್ಲಿ ಅನಾಥಮುತ್ತು(ಸ) ಮತ್ತು ಅಬೂಬಕರ್(ರ) ವಿರಾಜಮಾನರಾದರು. ಇನ್ನೊಂದರಲ್ಲಿ ಆಮಿರ್ ಬಿನ್ ಫುಹೈರಃ ಮತ್ತು ಅಬ್ದುಲ್ಲಾ ಬಿನ್ ಉರೀಕತ್ ಆಸೀನರಾದರು. ಅಬ್ದುಲ್ಲಾರನ್ನು ದಾರಿ ತೋರಿಸಲಿಕ್ಕಾಗಿ ನೇಮಿಸಲಾಗಿತ್ತು.

ಈ ವಲಸೆಯ ಸಂದರ್ಭದಲ್ಲಿ ಅಬೂಬಕರ್ ಸಿದ್ದೀಕ್‌ರ(ರ) ಕುಟುಂಬವು ಸಲ್ಲಿಸಿದ ಸೇವೆಯ ಕುರಿತು ಇತಿಹಾಸವು ಬಹಳ ಹೆಮ್ಮೆ ಪಟ್ಟುಕೊಳ್ಳುತ್ತಿದೆ. ತಂದೆ, ಮಗಳು, ಮಗ ಮತ್ತು ಸೇವಕ ಎಲ್ಲರೂ ಪ್ರವಾದಿವರ್ಯರಿಗಾಗಿ(ಸ) ತಮ್ಮ ಪಾಲಿನ ಸೇವೆಯನ್ನು ತಮ್ಮಿಂದ ಸಾಧ್ಯವಾದಷ್ಟರ ಮಟ್ಟಿಗೆ ನೆರವೇರಿಸಿದ್ದಾರೆ. ಸಿದ್ದೀಕ್‌ರ(ರ) ಕುಟುಂಬದ ಈ ಮಹತ್ತರ ಸೇವೆಗಳನ್ನು ಮುಸ್ಲಿಮರು ಸರ್ವಥಾ ಮರೆಯಲಾರರು.

ಮದೀನದೆಡೆಗೆ

ಸೌರ್ ಗುಹೆಯಿಂದ ಈ ಸಣ್ಣ ಆದರೆ ಪಾವನವಾದ ಯಾತ್ರಾ ತಂಡವು ಯಸ್ರಿಬ್ ನೆಡೆಗೆ ಹೊರಟಿತು. ಅಬೂಬಕರ್‌ರ(ರ) ಒಂಟೆಗಳು ಅಂದಿನ ಯಾತ್ರೆಗಾಗಿಯೇ ತರಬೇತು ಗೊಳಿಸಿದ್ದೇನೋ ಎಂಬಂತೆ ಬಹಳ ವೇಗವಾಗಿ ಓಡಿದುವು. ಈ ಯಾತ್ರೆಯು ಹಗಲೂ ರಾತ್ರಿ ಮುಂದುವರಿಯಿತು. ಕೆಲವೇ ಕೆಲವೆಡೆ ವಿಶ್ರಾಂತಿಗಾಗಿ ಕೊಂಚ ವಿರಮಿಸಲಾಯಿತು. ಏಕೆಂದರೆ ಶತ್ರುವಿನ ಆಕ್ರಮಣ ಯಾವ ಹೊತ್ತಿನಲ್ಲೂ ಆಗಬಹುದು ಎಂಬ ಆತಂಕ ಸದಾ ಇದ್ದೇ ಇತ್ತು. ಮುಸ್ಲಿಮರನ್ನು ಬೆನ್ನು ಹತ್ತಿ ಅಬಿಸೀನಿಯದ ವರೆಗೂ ತಲುಪಿದ ವೈರಿಗಳಿಗೆ ತಮ್ಮದೇ ನಾಡಿನಲ್ಲಿ ನಮ್ಮನ್ನು ಬೆನ್ನಟ್ಟುವುದು ಅಂತಹ ಕಷ್ಟದ ಕೆಲಸವೇನಲ್ಲ. ಕುರೈಶ್ ಸತ್ಯನಿಷೇಧಿಗಳು ಎಲ್ಲ ಹಾದಿಗಳ ಏರು-ತಗ್ಗು, ಅಡ್ಡ-ತಿರುವುಗಳನ್ನು ಬಲ್ಲವರಾಗಿದ್ದಾರೆ. ಹಾದಿಯ ಎಲ್ಲೆಲ್ಲಿ ಖರ್ಜೂರ ತೋಟಗಳಿವೆ... ಎಲ್ಲೆಲ್ಲಿ ತಗ್ಗು-ದಿಣ್ಣೆಗಳಿವೆ... ಛತ್ರಗಳು, ಜನವಸತಿಗಳು, ಹುಲ್ಲುಗಾವಲು, ಬರಡು ಮೈದಾನ ಒಟ್ಟಿನಲ್ಲಿ ಹಿಜಾಝ್‌ನ ಉದ್ದಗಲದ ಎಲ್ಲವನ್ನೂ ಕುರೈಶರು ಅರಿತವರಾಗಿದ್ದರು. ಅವರು ಅತ್ಯುತ್ತಮ ಒಂಟೆ ಸವಾರರೂ ಅಶ್ವಾರೂಢರೂ ಆಗಿದ್ದರು. ಆ ರಸ್ತೆಗಳಲ್ಲಿ ಅವುಗಳ ಹೆಜ್ಜೆ ಸಪ್ಪಳಗಳು ಈಗಲೂ ಪ್ರತಿಧ್ವನಿಸುತ್ತಿವೆ. ಹಾಗಾಗಿ ಯಾವಾಗ ಯಾವ ಹಂತದಲ್ಲಿ ಶತ್ರುಗಳ ದಾಳಿಯಾಗಬಹುದೆಂಬ ಆತಂಕ ಸಹಜವೇ ಆಗಿತ್ತು. ಆದ್ದರಿಂದ ಪ್ರತಿಕ್ಷಣವೂ ಎಚ್ಚರದಿಂದ ಇರಬೇಕಾಗಿತ್ತು.

ಕುರೈಶ್ ಸತ್ಯನಿಷೇಧಿಗಳು ಊಹನಾತೀತ ಚಿಂತೆಯಲ್ಲಿ ಬಿದ್ದುಬಿಟ್ಟರು. ಮುಹಮ್ಮದ್ ಬಿನ್ ಅಬ್ದುಲ್ಲಾ ನಮ್ಮ ಕೈಯಿಂದ ತಪ್ಪಿಸಿಕೊಂಡು ಬಿಟ್ಟರಲ್ಲ ಎಂದು ಅವರು ಖೇದಪಟ್ಟರು, ಕೈಕೈ ಹಿಸುಕಿಕೊಂಡರು, ಹಪಹಪಿಸಿದರು. ಕೊನೆಗೆ ಅವರು ಒಂದು ಪ್ರಕಟನೆ ಹೊರಡಿಸಿದರು- "ಯಾರಾದರೂ ಮುಹಮ್ಮದ್(ಸ) ಅಥವಾ ಅಬೂಬಕರ್‌ರನ್ನು(ರ) ಬಂಧಿಸಿ ತರುತ್ತಾರೋ ಅವರಿಗೆ ನೂರು ಒಂಟೆಗಳನ್ನು ಬಹುಮಾನವಾಗಿ ನೀಡಲಾಗುವುದು." ಇದು ಮಕ್ಕಾವಾಸಿಗಳು ನೀಡಬಹುದಾದ ಅತಿ ದೊಡ್ಡ ಬಹುಮಾನ ಮೊತ್ತವಾಗಿತ್ತು. ಒಂದು ಒಂಟೆಯೇ ಅವರಿಗೆ ಧಾರಾಳವಿತ್ತು... ಇಲ್ಲಿಯಂತೂ ನೂರು ಒಂಟೆಗಳನ್ನು ನೀಡುವ ವಾಗ್ದಾನ ನೀಡಲಾಗುತ್ತಿದೆ. ಕುರೈಶರಿಂದ ಇದು ಭಾರೀ ಮೊತ್ತದ ಕೊಡುಗೆಯಾಗಿತ್ತು; ಮರಳುಗಾಡಿನ ಅಲೆಮಾರಿಗಳಿಗೆ ಮತ್ತು ಒಂಟೆ ಸವಾರರ ಪಾಲಿಗೆ ಬಲುದೊಡ್ಡ ಇನಾಮಾಗಿತ್ತು.

ಬಹುಮಾನದ ಬಗ್ಗೆ ತಿಳಿದು ಜಅ್‌ಶಮ್‌ರ ಧೀರ-ಪರಾಕ್ರಮಿ ಪುತ್ರ ಸುರಾಕಾರ ಬಾಯಲ್ಲಿ ನೀರೂರಿತು. ಒಂದೇ, ಎರಡೇ? ನೂರು ಒಂಟೆಗಳು, ನೂರು! ಕೆಲಸವೂ ಯಾವ ಕಷ್ಟದ್ದು? ಮುಹಮ್ಮದ್ ಅಥವಾ ಅಬೂಬಕರ್‌ರ ಪೈಕಿ ಯಾರಾದರೊಬ್ಬರನ್ನು ಬಂಧಿಸಿ ಮಕ್ಕಾಗೆ ತರುವುದು ತಾನೇ? ಇದೇನೂ ಅಪಾಯಕಾರಿ ವಿಷಯವಲ್ಲ. ನೋಡೋಣ... ಒಂದು ಪ್ರಯತ್ನ ಮಾಡಿಯೇ ಬಿಡೋಣ... ಅದೃಷ್ಟವನ್ನು ಪರೀಕ್ಷಿಸುವುದರಲ್ಲೇನಿದೆ... ಮುಹಮ್ಮದ್‌ರ(ಸ) ಬಳಿಯೇನೂ ಸೈನ್ಯವಿಲ್ಲವಷ್ಟೇ. ಹೆಚ್ಚೆಂದರೆ ಮೂರ್ನಾಲ್ಕು ಮಂದಿ ಇರಬಹುದು. ಆ ಜನ ಎದುರಾದರೆ ಅವರೆಲ್ಲರನ್ನೂ ನಾನು ಮಣಿಸಬಲ್ಲೆ. ನಾನು ಅದೆಷ್ಟೋ ಅಪಾಯಕಾರಿ ಕಾಳಗಗಳನ್ನು ಕಂಡಿದ್ದೇನೆ. ಹೀಗೆಲ್ಲ ಆಲೋಚಿಸುತ್ತಾ ಸುರಾಕಾ ಶೀಘ್ರಗಾಮಿ ಕುದುರೆಯೇರಿ ಮಕ್ಕಾ ನಗರದಿಂದ ಹೊರಟರು.

ಯೌವನದ ಬಿಸಿರಕ್ತ, ಮೇಲಾಗಿ ಅಪಾರವಾದ ಬಹುಮಾನದ ಮೊತ್ತ! ಇದು ಎರಡು ತರದ ಅಮಲನ್ನೇರಿಸಿತು. ಇದೇ ಉಮೇದಿನಲ್ಲಿ ಸುರಾಕಾರ ಕುದುರೆಯು ನಾಗಾಲೋಟ ಕಿತ್ತಿತು. ಎಡ-ಬಲ, ಅತ್ತ-ಇತ್ತ ಎಲ್ಲೆಲ್ಲಿ ದಾರಿಹೋಕರು, ಒಂಟೆ ಸವಾರರು ಮತ್ತು ಕುರಿಗಾಹಿಗಳು ಸಿಕ್ಕಿದರೋ ಅಲ್ಲೆಲ್ಲ ಇಳಿದು ಅವರೊಡನೆ, "ನೀವು ಈ ಕಡೆಯಿಂದ ಮೂರ್ನಾಲ್ಕು ಮಂದಿ ಯಸ್ರಿಬ್‌ನ ಕಡೆಗೆ ಹೋಗುವುದನ್ನು ಕಂಡಿದ್ದೀರಾ?" ಎಂದು ಕೇಳುತ್ತಿದ್ದರು. ಅವರೆಲ್ಲರೂ, "ಯಸ್ರಿಬ್‌ನ ಕಡೆಗೆ ಬಹಳಷ್ಟು ವ್ಯಾಪಾರಿ ತಂಡಗಳು ಇಲ್ಲಿಂದ ಹಾದು ಹೋಗುತ್ತವೆ. ಅವುಗಳಲ್ಲಿ ನೀವು ಕೇಳುವ ವ್ಯಕ್ತಿಗಳು ಇದ್ದರೋ ಇಲ್ಲವೋ ತಿಳಿಯದು" ಎಂದುತ್ತರಿಸಿದರು. ಸುರಾಕಾ ಮುಖ ಚಹರೆಯ ಲಕ್ಷಣಗಳನ್ನು ಹೇಳುತ್ತಿದ್ದರು, "ಸಹೋದರರೇ! ನಾನು ವಿಚಾರಿಸುತ್ತಿರುವ ವ್ಯಕ್ತಿ ಲಕ್ಷ ಮಂದಿಯ ನಡುವೆಯೂ ಎದ್ದು ಕಾಣುವವರಾಗಿದ್ದಾರೆ. ಸಭ್ಯತೆ ಮತ್ತು ಸೌಂದರ್ಯವು ಅವರ ನಡತೆಯಲ್ಲಿ ತುಳುಕುತ್ತದೆ. ಆ ವ್ಯಕ್ತಿ ನಮ್ಮ ವೈರಿಯಾಗಿದ್ದರೂ ಸಹ. ಆದರೆ ವಾಸ್ತವದಲ್ಲಿ ಅವರ ಮುಖಾರವಿಂದವು ಸೂರ್ಯಕ್ಕಿಂತಲೂ ಪ್ರಕಾಶಮಾನ ಮತ್ತು ಉಜ್ವಲ ಮಾನವಾಗಿದೆ. ಹೂನಗುವಿನ ಸುಂದರ ವದನ... ಮನಸೂರೆಗೊಳ್ಳುವಂತಹ ಸ್ಫುರದ್ರೂಪ. ಹೊರನಾಡಿನಿಂದ ಮಕ್ಕಾನಗರಕ್ಕೆ ಬಂದ ಅದೆಷ್ಟೋ ಮಂದಿ ಈ ವ್ಯಕ್ತಿಯ ಮುಖದರ್ಶನ ಮಾತ್ರದಿಂದಲೇ ಮುಸ್ಲಿಮರಾದದ್ದಿದೆ. ಮುಹಮ್ಮದ್ ಎಂದಾಗಿದೆ ಅವರ ಹೆಸರು! ಅಂಥ ಹೆಸರಿನ ಬೇರಾವ ವ್ಯಕ್ತಿಯೂ ಇಡೀ ಅರೇಬಿಯದಿಂದ ಹೊರಡಲಿಕ್ಕಿಲ್ಲ!!"

ಎದುರಾದ ಹಂತಕ!

ಸುರಾಕಾ ದೃಢ ನಿಶ್ಚಯದೊಂದಿಗೆ ಮನೆಯಿಂದ ಹೊರಟಿದ್ದರು. ಎಲ್ಲಿಯೂ ಸಮರ್ಪಕ ಮಾಹಿತಿ ಸಿಗದಿದ್ದಾಗಿಯೂ ತನ್ನ ಪ್ರಯತ್ನವನ್ನು ನಿಲ್ಲಿಸಿರಲಿಲ್ಲ. ಹಾಗೂ ಹೀಗೂ ಒಂದು ದಿನ ದೂರದಲ್ಲಿ ಒಂಟೆ ಸವಾರರಾಗಿ ಮುಹಮ್ಮದ್ ಮತ್ತು ಅಬೂಬಕರ್ ಹೋಗುತ್ತಿರುವುದನ್ನು ಅವರು ಕಂಡರು. ಸಂತೋಷದಿಂದ ಅವರ ಮನಸ್ಸು ಕುಣಿದಾಡಿತು. ಅವರ ಕಣ್ಣುಗಳು

ಆನಂದದಿಂದ ಹೊಳೆದುವು. ಉದ್ದೇಶಿತ ಫಲ ಕೈಗೂಡಲು ಇನ್ನು ಕೆಲವೇ ಕ್ಷಣಗಳು ಉಳಿದಿವೆ ಎಂದು ಅವರಲ್ಲಿದ್ದ ಆಸೆಯು ಗಹಗಹಿಸಿತು... ಮುಹಮ್ಮದ್‌ರ(ಸ) ಜತೆಯಲ್ಲಿ ಕೇವಲ ಮೂರು ಮಂದಿಯಷ್ಟೇ ಇದ್ದಾರೆ. ಹಾಗಾಗಿ ಹೆಚ್ಚು ಜನ ಇರಬಹುದೆಂಬ ಭೀತಿಯೂ ಹೊರಟುಹೋಯಿತು. ಸುರಾಕಾ ಕುದುರೆಯನ್ನು ಇನ್ನಷ್ಟು ವೇಗವಾಗಿ ಓಡಿಸಿದರು. ಅದು ಬಿರುಗಾಳಿಯಂತೆ ನಾಗಾಲೋಟಕ್ಕಿತ್ತು ಅನಾಥಮುತ್ತು(ಸ) ಸವಾರರಾಗಿದ್ದ ಒಂಟೆಯ ಸಮೀಪಕ್ಕೆ ತಲುಪಿತು. ಅನಾಥಮುತ್ತು(ಸ) ಹೊರಳಿ ಸುರಾಕರತ್ತ ದೃಷ್ಟಿ ಹಾಯಿಸಿದರು. ಅಷ್ಟರಲ್ಲಿ ಕುದುರೆ ಎಡವಿ ಬಿದ್ದುಬಿಟ್ಟಿತು.

ಸುರಾಕಾ ತಕ್ಷಣ ಬಿದ್ದಲ್ಲಿಂದ ನೆಗರಿ ಎದ್ದು ಬತ್ತಳಿಕೆಯಿಂದ ಬಾಣವನ್ನು ಹೊರ ತೆಗೆದರು. ಆದರೆ ಯಾಕೋ ಈ ಹೊತ್ತು ಬಾಣ ಹೂಡುವುದು ಸರಿಯಲ್ಲವೆಂದು ಸುರಾಕಾರಿಗೆ ತೋಚಿತು. ಎಲ್ಲಾದರೂ ತ್ವರೆ ಮಾಡಿದರೆ ತನಗೇ ತಿರುಗು ಬಾಣವಾದೀತು ಎಂದು ಅವರ ಒಳಮನಸ್ಸು ಹೇಳಿತು. ಅದರಿಂದ ತಪ್ಪಿಸಬೇಕಾದರೆ ಸೀದಾ ಮನೆಗೆ ಮರಳುವುದು ಸೂಕ್ತ ಎಂದು ಅವರಿಗೆ ಭಾಸವಾಯಿತು. ಈಗ ಏನೂ ಅನಾಹುತವಾಗಿಲ್ಲ. ಕುರೈಶರೇನಾದರೂ ಪ್ರಶ್ನಿಸಿದರೆ, ನಾನು ಪ್ರತಿಯೊಂದು ದಾರಿಯನ್ನೂ ಸವೆಸಿದ್ದೆ. ಆದರೆ ಯಾರೂ ಕಣ್ಣಿಗೆ ಬೀಳಲಿಲ್ಲ ಎಂದು ಹೇಳಿದರಾಯಿತೆಂದು ಅವರು ಆಲೋಚಿಸಿದರು. ಆದರೆ ದುರಾಸೆಯು ಅವರನ್ನು ಕೆಣಕತೊಡಗಿತು... ಈಗ ಸಿಕ್ಕಿರುವ ಅವಕಾಶವನ್ನು ಕೈಬಿಡಬೇಡ. ಸ್ವಲ್ಪ ಧೈರ್ಯ ತೋರು. ಇಂತಹ ಸಂದರ್ಭದಲ್ಲಿ ಹಿಂದಕ್ಕಡಿಯಿಡುವುದು ಹೇಡಿತನವಾಗಿದೆ. ಸುರಾಕಾ! ಮರೆತು ಬಿಟ್ಟೆಯಾ? ನಿನ್ನ ನೆನಪೇನು ಮಾಸಿ ಹೋಯಿತೇ? ನೂರು ಒಂಟೆಗಳ ಬಹುಮಾನ ಘೋಷಿಸಲಾಗಿದೆ!! ನೂರು ಒಂಟೆಗಳು!! ನಿನ್ನ ಜೀವನ ಸಾರ್ಥಕವಾದೀತು. ಸ್ವಲ್ಪವೇ ಹೊತ್ತಿನಲ್ಲಿ ಬಡ ಹಸಿದ ಹೊಟ್ಟೆಯ ಸುರಾಕಾ ಶ್ರೀಮಂತವಾಗಿ ಬಿಡುತ್ತೀಯಾ. ನೂರು ಒಂಟೆಗಳು ಕುರೈಶರ ದೊಡ್ಡ ದೊಡ್ಡ ಸರದಾರರ ಬಳಿಯೂ ಇಲ್ಲವಲ್ಲ. ಇರುವವರೆಲ್ಲರಿಗೂ ದೊಡ್ಡ ಘನತೆ, ಗೌರವ ಸಮಾಜದಲ್ಲಿದೆಯಲ್ಲ...

ಹೀಗೆ ದುರಾಸೆಯ ಪ್ರೇರಣೆಯಿಂದಾಗಿ ಸುರಾಕಾ ಪುನಃ ಕುದುರೆಯನ್ನೆಬ್ಬಿಸಿ ಮುಂದುವರಿದರು. ಆದರೆ ನಾಲ್ಕೈದು ಹೆಜ್ಜೆಗೇ ಕುದುರೆಯು ಪುನಃ ಎಡವಿತು. ಈ ಬಾರಿ ಅದು ಮೊಣಕಾಲ ವರೆಗೆ ಮರಳಿನಲ್ಲಿ ಹೂತುಹೋಯಿತು. ಅವರಿಗೆ ಮತ್ತೊಮ್ಮೆ ಬೇಕೋ ಬೇಡವೋ ಎಂಬಂತಾಯಿತು. ಅವರ ಒಳಮನಸ್ಸು ಪುನಃ ಅವರನ್ನು ತಡೆಯಿತು. ಆದರೆ ದುರಾಸೆಯು ಹೊರಳಿ ಅವರನ್ನು ಕೆಣಕತೊಡಗಿತು... ಧೈರ್ಯತೋರು, ಖಡ್ಗವೆತ್ತು, ಬಾಣಹೂಡು, ರಟ್ಟೆಬಲವನ್ನು ಪ್ರದರ್ಶಿಸು... ಈ ಜನರು ಭೀತರೂ ದಣಿದವರೂ ಆಗಿದ್ದಾರೆ... ನೀನಾದರೋ ಲವಲವಿಕೆಯಿಂದಿರುವಿ. ಹುಂ! ಪ್ರತಿರೋಧಕ್ಕಿಳಿದರೂ ಅವರಿಂದ ಹೆಚ್ಚು ಹೊತ್ತು ಸೆಣಸಲಾಗದು... ಹೊರಡು... ಈ ಬಾರಿ ದೃಢ ನಿಶ್ಚಯ ಮಾಡಿದರು... ಆದರೆ ಆಕ್ರಮಣಕ್ಕಲ್ಲ, ಬದಲಾಗಿ ಕ್ಷಮಾ ಯಾಚನೆಗೆ! ಹೌದು, ಸುರಾಕಾರಿಗೆ ಸತ್ಯವು

ಮನವರಿಕೆಯಾಗಿತ್ತು. ಅವರು ದೇವಸಂದೇಶವಾಹಕರಲ್ಲಿ ಕ್ಷಮೆ ಕೋರಿದರು, ಅಭಯ ಯಾಚಿಸಿದರು. ಅನಾಥಮುತ್ತು(ಸ) ಸುರಾಕಾರ ಕೈಗಳನ್ನು ನೋಡುತ್ತಾ ಮುಗುಳ್ನಕ್ಕು ಹೇಳಿದರು, "ಸುರಾಕಾ! ನಿಮ್ಮ ಕೈಗಳಲ್ಲಿ ಕಿಸ್ರಾನ ಕಡಗಗಳನ್ನು ಕಾಣುತ್ತಿದ್ದೇನೆ."

ಪ್ರವಾದಿವರ್ಯರ(ಸ) ಈ ಮಾತು ಸುರಾಕಾರ ಪಾಲಿಗೆ ಅತಿ ಆಶ್ಚರ್ಯಕರವಾಗಿತ್ತು. ಅವರು ಪಾಪ, ಕಿಸ್ರಾನನ್ನು ಬಿಡಿ, ಆತನ ರಾಜ್ಯಪಾಲರನ್ನೋ ಆಸ್ಥಾನಿಕರನ್ನೋ ಕಾಣುವ ಕಲ್ಪನೆಯನ್ನೇ ಹೊಂದಿರಲಿಲ್ಲ. ಆದರೆ ಅದು ಅಲ್ಲಾಹನ ಸಂದೇಶವಾಹಕರ ಸುವಾರ್ತೆಯಾಗಿತ್ತು. ಅವರ ಬಾಯಿಯಿಂದ ಸತ್ಯವಲ್ಲದೆ ಬೇರೇನೂ ಹೊರಡುತ್ತಿರಲಿಲ್ಲವೆಂಬುದಕ್ಕೆ ದೇವನೇ ಸಾಕ್ಷಿಯಾಗಿದ್ದಾನೆ. ಅನಾಥಮುತ್ತು(ಸ) ಸುರಾಕಾರ ವಿಧಿಲಿಖಿತವನ್ನು ಓದಿ ಹೇಳುತ್ತಿರುವಂತೆ ನಿಖರವಾಗಿಯೇ ಆ ಮಾತುಗಳನ್ನು ಉಚ್ಚರಿಸಿದ್ದರು. ಉಮರುಲ್ ಫಾರೂಕ್‌ರ(ರ) ಖಿಲಾಫತ್ ಅವಧಿಯಲ್ಲಿ ಇರಾನ್ ದೇಶವನ್ನು ಜಯಿಸಿದಾಗ ಅವರ ಸುವಾರ್ತೆಯು ಸಾಕ್ಷಾತ್ಕಾರಗೊಳ್ಳುತ್ತದೆ. ಅಂದು ಕಿಸ್ರಾನ ಕಡಗವನ್ನು ಸುರಾಕಾರ ಕೈಗಳಿಗೆ ತೊಡಿಸಲಾಗುತ್ತದೆ. ಕಿಸ್ರಾನ ಬಹುಮೂಲ್ಯವಾದ ಕಡಗವು ಸುರಾಕರ ಕೈಗಳಲ್ಲಿ ರಾರಾಜಿಸುತ್ತದೆ. ಹಿಜ್ರತ್‌ನ ಆ ವಿಷಮ ಘಟ್ಟದಲ್ಲಿ ಸಂಭವಿಸಿದ ಘಟನೆಗಳು ಎಳೆ ಎಳೆಯಾಗಿ ಸುರಾಕರ ಸ್ಮೃತಿಪಟಲದಲ್ಲಿ ಮೂಡಿಬರುತ್ತದೆ... ದೇವಸಂದೇಶವಾಹಕರ(ಸ) ಅಣಿಮುತ್ತು ಗಳು ಅವರ ಕರ್ಣಪರದೆಗಳಲ್ಲಿ ಪ್ರತಿಧ್ವನಿಸುತ್ತವೆ...

❖ ❖ ❖ ❖

ಸುರಾಕಾರ ವಿಫಲ ಮರಳಿಕೆಯ ಬಳಿಕ ದಾರಿಯುದ್ದಕ್ಕೂ ಯಾವುದೇ ದಾಳಿ ಅಥವಾ ಅಹಿತಕರ ಘಟನೆ ನಡೆಯದೆಯೇ ಹಿಜ್ರಾ ಯಾತ್ರೆ ಮುಂದುವರಿಯಿತು. ಆದರೆ ಹೆಜ್ಜೆ ಹೆಜ್ಜೆಗೂ ಅಪಾಯದ ಸಾಧ್ಯತೆ ಇನ್ನೂ ಬಹಳ ಇತ್ತು. ಸುರಾಕಾರಂತೆಯೇ ಇತರರೂ ಹುಡುಕಾಟದಲ್ಲಿ ತೊಡಗಿದ್ದಿರಬಹುದು... ಕುರೈಶ್ ಸತ್ಯನಿಷೇಧಿಗಳು ಕೈಕಟ್ಟಿ ಸುಮ್ಮನೆ ಇದ್ದು ಬಿಡುವವರಲ್ಲ. ಇಸ್ಲಾಮ್ ಮತ್ತು ಪ್ರವಾದಿವರ್ಯರ(ಸ) ಮೇಲಿರುವ ಅವರ ದ್ವೇಷವು ಅಪರಿಮಿತವಾದುದಾಗಿತ್ತು. ಅವರ ಆ ವಿರೋಧವು ಎಲ್ಲ ರೂಪದಲ್ಲೂ ಪ್ರಕಟವಾಗುತ್ತಿತ್ತು. ಅಂತಹ ವೈರಿಗಳು ಏನೂ ಮಾಡಿಯಾರು. ಯಾವುದಕ್ಕೂ ಹೇಸುವ ವರಲ್ಲ. ಆದರೆ ಅಲ್ಲಾಹನ ಕೃಪೆ, ದಯೆಯು ಪ್ರವಾದಿ(ಸ) ಮತ್ತವರ ಸಂಗಾತಿಗಳ ಮೇಲಿತ್ತು. ದೇವ ಸಹಾಯವು ಅವರಿಗೆ ವಿಧಿತವಾಗಿತ್ತು. ಕೆಲವು ದಿನಗಳ ಯಾತ್ರೆಯ ತರುವಾಯ ಆ ಪಾವನ ಯಾತ್ರಾ ತಂಡವು ಕ್ಷೇಮವಾಗಿ ಕುಬಾ ತಲುಪಿತು. ಕುಬಾ ಪ್ರದೇಶವು ಮಕ್ಕಾ ನಗರದಿಂದ ಬಹಳ ದೂರವೂ ಯಸ್ರಿಬ್‌ಗೆ ತೀರಾ ಸಮೀಪವೂ ಇತ್ತು. ಸತ್ಯನಿಷೇಧಿಗಳ ಸಂಚು, ಆಕ್ರಮಣದ ಭೀತಿಯು ಕುಬಾ ತಲುಪಿದಲ್ಲಿಂದ ಹೊರಟುಹೋಯಿತು.

ಈ ಯಾತ್ರೆಯು ವಿವಶತೆಯ ಯಾತ್ರೆಯಾಗಿತ್ತು. ಕುರೈಶ್ ಸತ್ಯನಿಷೇಧಿಗಳು ಮಕ್ಕಾದ ನೆಲವನ್ನು ಪ್ರವಾದಿವರ್ಯರ(ಸ) ಪಾಲಿಗೆ ಸಂಕೀರ್ಣಗೊಳಿಸಿದ್ದರು. ಆದ್ದರಿಂದಲೇ ಆ ನಾಡನ್ನು

ತೊರೆಯಬೇಕಾಯಿತು. ಅದು ವಾಸ್ತವದಲ್ಲಿ ವಲಸೆಯಾಗಿತ್ತು. ದೇವ ಮಾರ್ಗದಲ್ಲಿ ವಲಸೆ! ಈ ನಾಡು ತೊರೆಯುವ ಸಂಕಷ್ಟದಲ್ಲಿ ಅಲ್ಲಾಹನ ಸಂಪ್ರೀತಿ ಮತ್ತು ಅವನ ಆದೇಶ ಪಾಲನೆಯ ಬೇಡಿಕೆಯಿತ್ತು. ಈ ಯಾತ್ರೆಯ ವೇಳೆಯಲ್ಲಿ 'ನಾಡಪ್ರೇಮ'ವು ನಿಜವಾಗಿಯೂ ಪ್ರವಾದಿವರ್ಯರ(ಸ) ಹೃದಯವನ್ನು ಹಿಂಡಿ ಹಾಕಿತ್ತು. ಹೃದಯಾರ್ದ್ರ ನೋವು ಅವರಿಗೆ ಅನುಭವವಾಗಿತ್ತು. ತಾಯ್ನಾಡಾದ ಮಕ್ಕಾ ನಗರ ತೊರೆಯುವಾಗ ಪ್ರವಾದಿವರ್ಯರಿಗೆ(ಸ) ನೋವಾಗುವುದು ಸಹಜವೇ ತಾನೇ. ಆದರೆ ಇಸ್ಲಾಮಿನ ಉನ್ನತಿ, ಸತ್ಯದ ಪ್ರಚಾರಕ್ಕಾಗಿ ಅವರು ಆ ನೋವನ್ನು ಸಸಂತೋಷ ಸಹಿಸಿದರು.

ಈ ಕಾಯುವಿಕೆಯ ಉದ್ವೇಗವು ಎಷ್ಟೊಂದು ಸುಖಕರ!

ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಸ್ವಯಂ ದೇಶಭ್ರಷ್ಟತೆಯನ್ನು ಸ್ವೀಕರಿಸಿದ್ದು ಒಳ್ಳೆಯದಾಯಿತೆಂದು ಮಕ್ಕಾದ ಕೆಲವು ಮಂದಿ ಸಂತೋಷಪಟ್ಟರು. ಇನ್ನು, ಇಸ್ಲಾಮ್ ಮತ್ತು ಮುಸ್ಲಿಮರು ಆಶ್ರಯ ಕಳಕೊಂಡುಬಿಟ್ಟರು. ಇಸ್ಲಾಮಿನ ಪ್ರಚಾರ ಇಲ್ಲಿಗೆ ಮುಗಿಯಿತು. ದೀಪವೇ ಇಲ್ಲದಿದ್ದರೆ ಹಾತೆಗಳಿಗೇನು ಕೆಲಸ? ಇಲ್ಲಿಂತೂ ಮುಹಮ್ಮದ್‌ರ(ಸ) ಕಾರಣ ದಿಂದಾಗಿಯಲ್ಲವೇ ಇಷ್ಟೆಲ್ಲ ಚಟುವಟಿಕೆಗಳು ನಡೆಯುತ್ತ ಇದ್ದುದು? ಅವರೇ ಹೊರಟು ಹೋದರೆಂದರೆ, ಮಕ್ಕಾದಿಂದ ಸ್ವತಃ ಇಸ್ಲಾಮ್ ಹೊರಟು ಹೋಯಿತೆಂದರ್ಥ. ಇದು ಆ ವಿಘ್ನ ಸಂತೋಷಿಗಳ ಲೆಕ್ಕಾಚಾರವಾಗಿತ್ತು. ಆದರೆ ಸೂಕ್ಷ್ಮಗ್ರಾಹಿಗಳು ಮತ್ತು ಅನುಭವಿಗಳು ಒಳಗೊಳಗೇ ಭೀತಿಪಟ್ಟರು! ಅವರ ಮನಸ್ಸು ಕೂಗಿ ಹೇಳುತ್ತಿತ್ತು... ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ ಮಾತುಗಳಲ್ಲಿ ಅಸಾಮಾನ್ಯವಾದ ಆಕರ್ಷಣೆಯಿದೆ, ಅವರ ಮುಖದರ್ಶನವೇ ಅಪರಿಚಿತರ ಮನಸೂರೆಗೊಳ್ಳುತ್ತದೆ. ಅವರು ಎತ್ತ ಹೋದರೂ ತಮ್ಮ ಲೋಕವನ್ನು ಸೃಷ್ಟಿಸಿಯೇ ತೀರುತ್ತಾರೆ. ಅವರ ಸಂದೇಶವು ನಿಲ್ಲಲಾರದು... ವಲಸೆ ಹೋದ ಬಳಿಕದಿಂದಂತೂ ಅವರ ಸಂದೇಶವು ಇನ್ನಷ್ಟು ಶಕ್ತಿಯುತವಾಗಿ ಹರಡಬಹುದು. ಮುಹಮ್ಮದ್‌ರ(ಸ) ವಲಸೆಯು ವಸ್ತುತಃ ಅವರ ಯಶಸ್ಸಿನ ಮುನ್ನುಡಿ ಯಾಗಿದೆ. ನಾವು ಮಕ್ಕಾದಲ್ಲಿ ಕುಡಿಯೊಡೆಯಲು ಬಿಡದಿದ್ದ ಆ ಇಸ್ಲಾಮಿನ ಗಿಡವು ಹೊರನಾಡಿನಲ್ಲಿ ಬೇರು ಬಿಡಲಿದೆ!!

ಅನಾಥಮುತ್ತು(ಸ) ಕುಬಾದಲ್ಲಿ ಕೆಲವು ದಿನ ತಂಗಿದರು. ಈ ಮಧ್ಯೆ ಅಲಿ(ರ) ಮಕ್ಕಾ ದಿಂದ ಕಾಲ್ನಡಿಗೆಯಿಂದಲೇ ಅಲ್ಲಿಗೆ ಬಂದು ತಲುಪಿದರು. ಅಲಿಯವರಿಂದ(ರ) ಮಕ್ಕಾವಾಸಿ ಗಳ ವೃತ್ತಾಂತಗಳು ವಿವರವಾಗಿ ದೊರೆಯಿತು. ಕುಬಾದಲ್ಲಿ ತಂಗಿದ್ದ ಈ ಸಂದರ್ಭದಲ್ಲಿ, ದೇವಾರಾಧನೆಗಾಗಿ ಮಸೀದಿಯನ್ನು ನಿರ್ಮಿಸಲಾಯಿತು. ಈ ನಿರ್ಮಾಣ ಕಾರ್ಯದಲ್ಲಿ ಸ್ವಯಂ ಅನಾಥಮುತ್ತು(ಸ) ದುಡಿದರು. ಅವರು ಕೆಲಸ ಮಾಡುವುದನ್ನು ಕಂಡು ಅಲ್ಲಿನ ಸಹಾಬಿ ಗಳಲ್ಲಿ ಆಸಕ್ತಿ ಮತ್ತು ಉತ್ಸಾಹ ಹೆಚ್ಚುತ್ತಿತ್ತು. ಈ ಮಸೀದಿಯ ಶಂಕು ಸ್ಥಾಪನೆಯನ್ನು ಧರ್ಮನಿಷ್ಠೆ (ತಕ್ವಾ) ಮತ್ತು ಸದಾಚಾರದಿಂದ ಮಾಡಲಾಯಿತು. ಅದರ ಬುನಾದಿಯಲ್ಲಿ ನಿಷ್ಕಳಂಕ ವಿಶ್ವಾಸವಿತ್ತು. ನಿಷ್ಕಪಟ ಸಾಷ್ಟಾಂಗಕ್ಕಾಗಿ ಅದನ್ನು ಸ್ಥಾಪಿಸಲಾಯಿತು.

ಇತ್ತ, ಅಲ್ಲಾಹನ ಸಂದೇಶವಾಹಕರು(ಸ) ಕುಬಾದಲ್ಲಿ ತಂಗಿದ್ದಾರೆಂದೂ ಬಹಳ ಶೀಘ್ರದಲ್ಲೇ ಯಸ್ರಿಬ್‌ಗೆ ಆಗಮಿಸಲಿದ್ದಾರೆಂದೂ ಯಸ್ರಿಬ್ ನಗರದಾದ್ಯಂತ ಸುದ್ದಿ ಹರಡಿತು. ಯಸ್ರಿಬ್‌ನವರಾದರೋ ಪ್ರವಾದಿವರ್ಯರ(ಸ) ಆಗಮನವನ್ನು ಬಹಳ ಕಾತರದಿಂದ ನಿರೀಕ್ಷಿಸುತ್ತಿದ್ದರು. ಅವರು ದಿನಾ ಬೆಳ್ಳಂಬೆಳಗ್ಗೆ ನಗರದ ಹೊರವಲಯಕ್ಕೆ ಬಂದು ಎತ್ತರದ ದಿಣ್ಣೆಗಳ ಮೇಲೇರಿ ಕುಳಿತುಕೊಳ್ಳುತ್ತಿದ್ದರು. ಸೂರ್ಯ ನೆತ್ತಿಗೇರಿ ಹಣೆ ಸುಡುವವರೆಗೂ ಅವರು ಅಲ್ಲೇ ಝುಂಡಾ ಊರಿ ಕಾಯುತ್ತಿದ್ದರು. ಈ ಪ್ರತೀಕ್ಷೆಯ ಕ್ಷಣಗಳು ಬಹಳವೇ ಕಠಿಣವಾಗಿತ್ತು. ಯಸ್ರಿಬ್ ನಿವಾಸಿಗಳ ಮಟ್ಟಿಗೆ ಒಂದೊಂದು ಕ್ಷಣವೂ ಭಾರವಾಗಿ ಪರಿಣಮಿಸುತ್ತಿತ್ತು. ಅವರ ಒಲವು ತುಂಬಿದ ಕಂಗಳಲ್ಲಿ ಹೃದಯದ ಬೇಗುದಿಯು ಆಕಾಂಕ್ಷೆಯಾಗಿ ಮಿನುಗುತ್ತಿತ್ತು. ಕೆಲವರು ಅಲ್ಲೇ ರಾತ್ರಿ ಕಳೆಯುತ್ತಿದ್ದರು. ಅನಾಥಮುತ್ತು(ಸ) ಪ್ರಾತಃ ಕಾಲದಲ್ಲಿ ಆಗತರಾದರೆ ಅವರನ್ನು ಸ್ವಾಗತಿಸುವ ಸೌಭಾಗ್ಯ ನಮಗೆ ಸಿಗಲಿ ಎಂಬ ಆಗ್ರಹದಿಂದ; ಯಸ್ರಿಬ್‌ನ ಗುಡ್ಡ-ಬೆಟ್ಟಗಳೆಡೆಯ ಕಡಿದಾದ ದಾರಿಗಳಲ್ಲಿ ಪ್ರವಾದಿತ್ವದ ಪೂರ್ಣ ಚಂದ್ರ ಉದಯಿಸುವರು ಮತ್ತು ನಾವು ಕಣ್ತುಂಬಾ ಅವರನ್ನು ನೋಡಿ ಕೃತಾರ್ಥರಾಗುವೆವು ಎಂಬ ಆಸೆಯಿಂದ! ಆದರೆ ಸೂರ್ಯೋದಯವಾಗಿ, ಬಳಿಕ ಸೂರ್ಯ ನಡುನೆತ್ತಿಗೇರುವಾಗ ಅವರು ಸೋತ ಮುಖ ಹೊತ್ತು ಮನೆಗೆ ಮರಳುತ್ತಾರೆ. ಆದರೆ ಈ ಸೋಲಿನಲ್ಲೂ ಅವರ ಹೃದಯಗಳು ಒಂದು ರೀತಿಯಲ್ಲಿ ಮುದಗೊಳ್ಳುತ್ತಿರುತ್ತವೆ. ಅದು ಕಾತರದ ಸುಖ! ಉದ್ವೇಗದ ಆನಂದ!! ಅವರ ಈ ಆಸಕ್ತಿ, ನಿರೀಕ್ಷೆಯ ಕಿಡಿಗೆ ಪ್ರಕೃತಿಯು ಬಿಸಿಗಾಳಿ ಊದುತ್ತಿತ್ತು. ಪ್ರತೀಕ್ಷೆಯು ಹೆಚ್ಚಿದಂತೆಲ್ಲ ಅವರ ಕಾತರದ ಕಾವು ಏರುತ್ತಿತ್ತು.

ಜನರಿಗೆ ತಮ್ಮದೇ ಆದ ಭಾಗ್ಯ ಮತ್ತು ತಮ್ಮದೇ ಆದ ಚಿಂತನಾ ಲಹರಿಯಿರುತ್ತದೆ. ಮಕ್ಕಾವಾಸಿಗಳಲ್ಲಿ ಪ್ರವಾದಿವರ್ಯರ(ಸ) ಮೇಲೆ ಎಷ್ಟು ದ್ವೇಷ ಇತ್ತೆಂದರೆ, ಅದರಿಂದಾಗಿ ಪ್ರವಾದಿವರ್ಯರು(ಸ) ಹುಟ್ಟೂರು ತೊರೆಯಬೇಕಾಯಿತು. ಅದೇ ವೇಳೆ ಯಸ್ರಿಬ್‌ನವರಲ್ಲಿ ಪ್ರವಾದಿವರ್ಯರ(ಸ) ಮೇಲೆ ಎಷ್ಟು ಪ್ರೀತಿಯಿದೆಯೆಂದರೆ, ಅವರು ದೇಹವಿಡೀ ಕಣ್ಣಾಗಿಸಿ ಪ್ರವಾದಿಯವರ(ಸ) ದಾರಿ ಕಾಯುತ್ತಿದ್ದಾರೆ. ಯಾವ ರೂಪದಲ್ಲಾದರೂ ಭೂಮಿಯ ಪಾಶಗಳು ಬಿಗಿದೆಳೆಯಲ್ಪಟ್ಟು, ದೇವ ಸಂದೇಶವಾಹಕರು(ಸ) ನಾಳೆಯ ಬದಲು ಇಂದೇ... ಅಲ್ಲಲ್ಲ... ಈಗಲೇ ಇಲ್ಲಿಗೆ ಬಂದು ತಲಪುವಂತಾಗಲಿ ಎಂದು ಆ ಸೌಭಾಗ್ಯವಂತರು ಕಾತರಿಸುತ್ತಿದ್ದರು. ಮಕ್ಕಾ ಯಾವ ಸಂದೇಶವನ್ನು ತಿರಸ್ಕರಿಸಿತೋ ಅದನ್ನೇ ಯಸ್ರಿಬ್ ಸ್ವಾಗತಿಸಿತು. ಮಕ್ಕಾ ತನಗೆ ದೊರೆತ ಸೌಭಾಗ್ಯವನ್ನು ದೂರಕ್ಕಟ್ಟಿತು. ಅದೇ ವೇಳೆ ಯಸ್ರಿಬ್ ಆ ಸೌಭಾಗ್ಯಕ್ಕಾಗಿ ಹಂಬಲಿಸುತ್ತಿತ್ತು. ಒಂದೆಡೆ ದ್ವೇಷ-ಅನ್ಯಾಯವಿತ್ತು. ಇನ್ನೊಂದೆಡೆ ಪ್ರೀತಿ-ವಿಶ್ವಾಸವಿದೆ. ಯಸ್ರಿಬ್‌ವಾಸಿಗಳ ಹೃದಯವನ್ನು ದೇವನ ವಿಧಿಯು ಸನ್ಮಾರ್ಗದರ್ಶನದ ಪವಿತ್ರ ಜಲದಿಂದ ಪಾವನ ದರ್ಪಣವನ್ನಾಗಿ ಮಾಡಿತು. ಅದರ ಕೋಮಲತೆಯು ಸತ್ಯವನ್ನು ಅಂಗೀಕರಿಸಲು ಸಂಪೂರ್ಣ ಸನ್ನದ್ಧವಾಗಿತ್ತು. ಅದೆಷ್ಟೋ ದರ್ಪಣಗಳು ಸತ್ಯದರ್ಶನದಿಂದ ಈಗಾಗಲೇ

ಜಗಮಗಿಸತೊಡಗಿವೆ.

ಪ್ರವಾದಿವರ್ಯರ(ಸ) ದರ್ಶನದ ಭಾಗ್ಯ ಪಡೆದಂತಹ ಅನೇಕ ಅನುಗ್ರಹೀತರು ಯಸ್ರಿಬ್‌ನಲ್ಲಿ ಆಗಲೇ ಇದ್ದರು. ಆದರೆ ಅವರಿಗಿಂತಲೂ ಎಷ್ಟೋ ಪಾಲು ಹೆಚ್ಚು ಜನ ಆ ಸೌಭಾಗ್ಯವನ್ನು ಹೊಂದಲು ಈಗ ಕಾತರಿಸುತ್ತಿದ್ದಾರೆ. ಮಕ್ಕಾದಲ್ಲಿ ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾಗುವ ಭಾಗ್ಯವನ್ನು ಪಡೆದಿದ್ದವರು, ಮನಸ್ಸಿನಲ್ಲೇ ಆನಂದಿಸುತ್ತಿದ್ದರು... ದೇವ ಸಂದೇಶವಾಹಕರು(ಸ) ನಮ್ಮಂತಹ ಸತ್ಯಾಕಾಂಕ್ಷಿಗಳನ್ನು ನೋಡಿ ಮುಗುಳ್ನಗುವರು, ನಮ್ಮನ್ನು ಗುರುತಿಸುವರು... ಆಹ್! ದೇವ ಸಂದೇಶವಾಹಕರ(ಸ) ಆ ಮುಗುಳ್ನಗು ಎಷ್ಟೊಂದು ಸೌಮ್ಯಸುಂದರವಾಗಿದೆ! ಮನಸ್ಸು ದುಃಖದಿಂದ ಎಷ್ಟೇ ಬಸವಳಿದಿದ್ದರೂ ರಸೂಲುಲ್ಲಾಹ್‌ರ(ಸ) ಒಂದು ಹೂನಗು ಕಂಡು ಗುಲಾಬಿಯ ಹೂವಿನಂತೆ ಅರಳುವುದು ಖಂಡಿತ. ಈ ಸೌಭಾಗ್ಯವು ನಮಗಿನ್ನು ಮನೆಯಲ್ಲಿದ್ದುಕೊಂಡೇ ದೊರೆಯಲಿದೆ! ಮೊದಲು ದಾಹಿಗಳು ಕೆರೆಯ ಬಳಿಗೆ ಹೋಗುತ್ತಿದ್ದರು. ಆದರೆ ಈಗ ಅಲ್ಲಾಹನ ಕೃಪೆಯಿಂದ ಸಾಗರವೇ ದಾಹಿಗಳ ಬಳಿಗೆ ಬರುತ್ತಿದೆ!!

ಇನ್ನು ಪ್ರವಾದಿವರ್ಯರ(ಸ) ಮುಖಾರವಿಂದವನ್ನು ಕಾಣುವ ಸೌಭಾಗ್ಯ ಹೊಂದಿರದಿದ್ದ ಮಂದಿಯಲ್ಲಿ ಕೂಡ ಆನಂದ ತುಳುಕಾಡುತ್ತಿತ್ತು. ದರ್ಶನಾಭಿಲಾಶೆಯು ಅವರ ಮನಸ್ಸನ್ನು ಆಗಾಗ ತಟ್ಟಿ ಹೇಳುತ್ತಿತ್ತು, "ಅವರೀಗ ಬರುವರು... ಕುಬಾದಿಂದ ಹೊರಟಿ ದ್ದಾರೆ... ಬರುತ್ತಿದ್ದಾರೆ... ಕುಬಾವಾಸಿಗಳು ಅನುಗ್ರಹೀತ ರಿಕಾಬಿಗೆ ಮುತ್ತಿಟ್ಟು ವಿದಾಯ ಕೋರಿದ್ದಾರೆ... ಅವರು ಒಬ್ಬಂಟಿಯಾಗಿ ಯಸ್ರಿಬ್‌ಗೆ ಆಗಮಿಸುತ್ತಿರುವುದಲ್ಲ. ಅವರೊಂದಿಗೆ ಅನುಗ್ರಹಗಳ ವರ್ಷಧಾರೆ, ಸೌಭಾಗ್ಯ ಮಿನುಗುತ್ತಾರೆ, ಮಾರ್ಗದರ್ಶನದ ಪತಾಕೆ, ಒಳಿತಿನ ನಿದರ್ಶನ ಮತ್ತು ಸಜ್ಜನಿಕೆಯ ಖಜಾನೆಗಳೇ ಧಾವಿಸಿ ಬರುತ್ತಿವೆ. ಅವರ ಸಮೃದ್ಧಿ ತುಂಬಿದ ಹೆಜ್ಜೆಗಳಿಂದಾಗಿ ಯಸ್ರಿಬ್‌ನ ಇತಿಹಾಸದ ಹೊಸ ಅಧ್ಯಾಯ ಆರಂಭವಾಗಲಿದೆ. ಮತ್ತೆ ನೋಡಿ, ವಿಶ್ವಾಸ ಪ್ರಕಟಣೆಯಲ್ಲಿ ಯಾವುದೇ ಕೊರತೆಯುಂಟಾಗ ಬಾರದು... ಅವರ ದಾರಿಯಲ್ಲಿ ನಿಜವಾಗಿಯೂ ಹೃದಯ-ದೃಷ್ಟಿಗಳನ್ನು ಹರಡಿಕೊಂಡಿರಿ..."

ಮದೀನದಲ್ಲಿ

ಅಲ್ಲಾಹನ ಸಂದೇಶವಾಹಕರು(ಸ) ಯಸ್ರಿಬ್ ತಲುಪುತ್ತಿದ್ದಾರೆಂಬ ಶುಭವಾರ್ತೆ ಅಲ್ಲಿನ ನಿವಾಸಿಗಳಿಗೆ ತಲುಪಿತು... ಇನ್ನು ಕೆಲವೇ ಕ್ಷಣಗಳಲ್ಲಿ ವಸಂತಾಗಮನವಾಗಲಿದೆ... ಯಸ್ರಿಬ್‌ನ ದಾರಿಯಲ್ಲಿ ಖರ್ಜೂರದ ಮರಗಳ ತೋಪು ಸಾಲುಸಾಲಾಗಿ ಇಲ್ಲದಿರುತ್ತಿದ್ದರೆ ಪ್ರವಾದಿವರ್ಯರ(ಸ) ಪಾವನ ಯಾತ್ರೆಯ ಮಿನುಗು ತಾರೆ ಈಗಾಗಲೇ ದೃಷ್ಟಿಗೆ ಗೋಚರ ವಾಗುತ್ತಿತ್ತು. ನಿರೀಕ್ಷೆಯ ಮಜಲುಗಳು ಮುಗಿದುವು... ದರ್ಶನಾಭಿಲಾಷಿಗಳಿಗೆ ಸುವಾರ್ತೆ ನೀಡಿರಿ... ಆ ಮನಮೋಹಕರೂಪಿ ಇದೋ ಬರುತ್ತಿದ್ದಾರೆ. ಅವರ ಜಗದೇಕ ಸೌಂದರ್ಯ ವನ್ನು ಕಂಡು ಕೃತಾರ್ಥರಾಗಿರಿ...

ಇಡೀ ಯಸ್ರಿಬ್ ಪಟ್ಟಣವು ಉಭಯ ಲೋಕಗಳ ಸರದಾರರನ್ನು(ಸ) ಸ್ವಾಗತಿಸಲು ಉಕ್ಕೇರಿ ಬಂತು. ಆ ಪೈಕಿ ಹೆಚ್ಚಿನವರು ಜ್ಞಾನವಂತರಿದ್ದರೆ, ಕೇವಲ ಪ್ರೇಕ್ಷಕರಾಗಿದ್ದವರು ಕೆಲವೇ ಕೆಲವು ಮಂದಿ! ಯುವಕರೂ ಹಿರಿಯರೂ ಶಸ್ತ್ರಾಲಂಕಾರ ಭೂಷಿತರಾಗಿ ಮನೆಯಿಂದ ಹೊರಟ್ಟಿದ್ದಾರೆ... ಖಡ್ಗಗಳ ಪ್ರತಾಪವು ಚಿತ್ತಾಕರ್ಷಕ ಕೆತ್ತನೆಯ ಒರೆಗಳೊಳಗಿ ನಿಂದ ಇಣುಕು ಹಾಕುತ್ತಿವೆ... ಸುಂದರ ಮನಮೋಹಕ ಬತ್ತಳಿಕೆಗಳು... ಬೆಲೆಬಾಳುವ ಭರ್ಜಿಗಳು... ಜತೆಗೆ ಮನಸೂರೆಗೊಳ್ಳುವಂತಹ ಪತಾಕೆಗಳು ವಾತಾವರಣದಲ್ಲಿಡೀ ವಸಂತ ವೈಭವವನ್ನುಂಟು ಮಾಡಿದ್ದುವು! ಓರ್ವ ಬಡ ವ್ಯಕ್ತಿಯ ಬಳಿ ಹರಿದ ಯುದ್ಧ ಕವಚವಿತ್ತು. ಅದನ್ನೇ ಧರಿಸಿ ಅವರು ಹೊರಟರು. ತಾಯಂದಿರು ಮಕ್ಕಳ ಮುಖ ತೊಳೆದು, ಶುಭ್ರ ವಸ್ತ್ರ ತೊಡಿಸಿದರು... ಈ ಮುಗ್ಧ ಬಾಲ-ಬಾಲೆಯರು ಉಭಯಲೋಕಗಳ ಸರದಾರರ(ಸ) ಸ್ವಾಗತದಿಂದ ವಂಚಿತರಾಗುವುದೇಕೆ? ಯಸ್ರಿಬ್‌ನ ಮನೆಮನೆಯಲ್ಲಿ ಆನಂದವು ನಲಿದಾಡಿತು... ಇಂದು ಯಸ್ರಿಬ್ ವಾಸಿಗಳ ಹಬ್ಬವಾಗಿತ್ತು...

ಅಲ್ಲಲ್ಲ... ಹಬ್ಬಗಳ ಹಬ್ಬವಾಗಿತ್ತು.

ಆಕಾಶಗಳು, ಸೂರ್ಯ-ಚಂದ್ರರು ಅದೆಷ್ಟೋ ರಾಜ-ಮಹಾರಾಜರುಗಳ, ಆಡಳಿತಾ ಧಿಕಾರಿಗಳ ಮತ್ತು ವಿಜಯಿಗಳ ಭವ್ಯ ಸ್ವಾಗತಗಳನ್ನೂ ಅವುಗಳ ವೈಭವಗಳನ್ನೂ ಕಂಡಿವೆ.

ಆದರೆ ಈ ಸ್ವಾಗತವು ತನ್ನ ಮಹತ್ವ ಮತ್ತು ಪಾವಿತ್ರ್ಯದ ನಿಟ್ಟಿನಲ್ಲಿ ಇತರೆಲ್ಲವುಗಳಿಗಿಂತ ಭಿನ್ನ ಹಾಗೂ ಉನ್ನತವಾಗಿದೆ. ಇಷ್ಟಕ್ಕೂ ಯಸ್ರಿಬ್‌ಗೆ ಇಂದು ಬರುತ್ತಿರುವುದು ಯಾರು? ಜಗತ್ತಿನ ಅತಿದೊಡ್ಡ ವ್ಯಕ್ತಿತ್ವ, ಅಲ್ಲಾಹನ ಅತ್ಯಂತ ಶ್ರೇಷ್ಠ ದಾಸ, ಪ್ರವಾದಿಗಳ ಸರದಾರ ಮತ್ತು ಸಂದೇಶವಾಹಕರುಗಳ ನೇತಾರ... ಪ್ರವಾದಿ ಇಬ್ರಾಹೀಮ್(ಅ) ಮತ್ತು ಪ್ರವಾದಿ ಮೂಸಾರ(ಅ) ಗ್ರಂಥ, ಯೆಶಾಯರ ಪವಿತ್ರ ಗ್ರಂಥ ಹಾಗೂ ಹಬಕ್ಕೂಕ ಪ್ರವಾದಿಯ ಸುವಾರ್ತೆಗಳಲ್ಲಿ ಈ ಮಹಾನ್ ವ್ಯಕ್ತಿತ್ವದ ಆಗಮನದ ಪ್ರಸ್ತಾಪವಿದೆ. ಪ್ರವಾದಿ ಈಸಾ ಮಸೀಹರ(ಅ) ಹವಾರಿ(ಸಂಗಾತಿ)ಗಳ ಪೈಕಿ ಯೋಹಾನಾ ಎಂಬ ಓರ್ವ ಮಹಾನರಿದ್ದರು. ಅವರೊಡನೆ ಪ್ರವಾದಿ ಈಸಾ(ಅ) ಹೀಗೆಂದಿದ್ದರು,

"ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ. ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು. ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೇ." (ಯೋಹಾನ: 14:15-17)

ಝುಬೂರ್‌ನಲ್ಲಿಯೂ ಇದೇ ರೀತಿಯ ಸುವಾರ್ತೆ ಕಾಣಬಹುದಾಗಿದೆ.

"ಅವರ (ಮುಹಮ್ಮದ್‌ರ) ಹೆಸರು ಅಂತ್ಯಕಾಲದ ವರೆಗಿರುವುದು. ಸೂರ್ಯನ ಪ್ರಕಾಶ ಇರುವ ತನಕ ಜಗತ್ತಿನಲ್ಲಿ ಅವರ ಹೆಸರು ಚಾಲ್ತಿಯಲ್ಲಿರುವುದು. ಮಾನವರೆಲ್ಲರೂ ಅವರನ್ನು ತಮ್ಮ ಪಾಲಿನ ಸೌಭಾಗ್ಯವೆಂದೇ ಭಾವಿಸುವರು. ಹಾಗೆಯೇ ಸಕಲ ಶಕ್ತಿ-ಸಾಮರ್ಥ್ಯಗಳೂ ಅವರ ಸನ್ನಿಧಿಯಲ್ಲಿ ಕಾಣಿಕೆಯನ್ನು ಸಲ್ಲಿಸುತ್ತಿರುವುವು..."

ಯಸ್ರಿಬ್‌ನವರು ಯಾರ ಸ್ವಾಗತಕ್ಕಾಗಿ ಕಾತರಿಸುತ್ತಿದ್ದರೋ, ಅವರ ಅಸ್ತಿತ್ವದಲ್ಲಿ ಅಲ್ಲಾಹನು ತನ್ನೆಲ್ಲ ದಯೆ-ಕೃಪೆ-ಕರುಣೆಗಳನ್ನು ಸಂಪೂರ್ಣಗೊಳಿಸಿರುವನು. ಅವರಿಗಿಂತ ಮಿಗಿಲಾಗಿ ಬೇರಾರಿಗೂ ಈ ಜಗದಲ್ಲಿ ಅದನ್ನು ದಯಪಾಲಿಸಿರಲಿಲ್ಲ. ಅವರು ಜಗತ್ತಿನಾದ್ಯಂತದ ಹಿಂದಿನ ಮತ್ತು ಮುಂದಿನ ಸಕಲ ಮೇರು ವ್ಯಕ್ತಿಗಳಲ್ಲಿ ಅತ್ಯಧಿಕ ಗೌರವಾರ್ಹರೂ ಆದರಣೀಯರೂ ಆಗಿದ್ದಾರೆ. ಅವರ ಒಳಿತುಗಳಿಗೆ ಯಾವುದೇ ಮೇರೆಯಿರಲಿಲ್ಲ. ಗೌರವದ ಅತ್ಯುನ್ನತ ಸ್ಥಾನವೂ ಅವರ ಅಸ್ತಿತ್ವಕ್ಕೆ ಸಾಟಿಯಾಗಲಾರದು.

ಯಸ್ರಿಬ್ ಆ ಸೃಷ್ಟಿಶ್ರೇಷ್ಠರ(ಸ) ಪಾಲಿಗೆ 'ದಾರುಲ್ ಹಿಜ್ರತ್' (ವಲಸೆಯ ಗೃಹ) ಆಗಿ ಮಾರ್ಪಡುತ್ತಿದೆ. ಇದು ಮೇಲ್ನೋಟಕ್ಕೆ ಒಂದು ಹೊಸ ಪ್ರಕ್ರಿಯೆಯಾಗಿ ಕಾಣಬಹುದಾದರೂ ಹಲವರ ಸ್ಮೃತಿ ಪಟಲದಲ್ಲಿ ಬಹಳ ಹಿಂದೆಯೇ ಅದರ ಪ್ರತಿಬಿಂಬ ಗೋಚರಿಸಿತ್ತು. ಪವಿತ್ರ ಕುರ್‌ಆನಿನಲ್ಲಿ ಯಮನಿನ ತುಬ್ಬಅ್ ಎಂಬ ರಾಜನ ಪ್ರಸ್ತಾಪವಿದೆ. ಈ ತುಬ್ಬಅ್ ಒಮ್ಮೆ ತನ್ನ ಸುಸಜ್ಜಿತ ಸೇನೆಯೊಂದಿಗೆ ಯಸ್ರಿಬ್‌ನ ಮೇಲೆ ಆಕ್ರಮಣ ಮಾಡಿದ್ದ. ಔಸ್, ಖಝ್ರಜ್ ಮತ್ತು ಯಹೂದಿ ಗೋತ್ರಜರು ವೀರಾವೇಶದಿಂದ ಆಕ್ರಮಣಕಾರಿಗಳನ್ನು ಎದುರಿಸಿದರು. ಯಸ್ರಿಬ್‌ನ ಮಂದಿ ಸ್ವಭಾವತಃ ಮೃದು ಹೃದಯಿಗಳು, ವಿನಯವಂತರು ಮತ್ತು ಸದ್ಗುಣ

ಸಂಪನ್ನರಾಗಿದ್ದರು. ಆ ಜನರು ರಾತ್ರಿಯ ವೇಳೆ ತುಬ್ಬಲ್ ಮತ್ತಾತನ ಸಂಗಡಿಗರಿಗೆ ಆದರಾತಿಥ್ಯ ನೀಡುತ್ತಿದ್ದರು. ಬೆಳಗಾದ ಮೇಲೆ ಯುದ್ಧ ಭೂಮಿಗೆ ಬಂದು ಅವರೊಡನೆ ಸೆಣಸುತ್ತಿದ್ದರು. ಈ ವರ್ತನೆಯಿಂದಾಗಿ ತುಬ್ಬಲ್ ಬಹಳ ಲಜ್ಜಿತನಾಗಿ ಹೋದ. ಇಂತಹ ವಿನಯಶೀಲ ಆತಿಥೇಯರೊಡನೆ ಯುದ್ಧ ಮಾಡುವ ಮೂಲಕ ನಾನು ಸ್ವಯಂ ನನ್ನ ಮೇಲೆಯೇ ಅಕ್ರಮವೆಸಗುತ್ತಿದ್ದೇನೆ ಎಂದು ಭಾವಿಸಿದ ತುಬ್ಬಲ್, ಸಂಧಾನ ಹಸ್ತ ಚಾಚಿದ. ಹೀಗೆ ಉಭಯ ಕಡೆಗಳಿಂದ ಒಪ್ಪಂದಕ್ಕಾಗಿ ಕೆಲವು ಮಂದಿ ನಿಯೋಜಿಸಲ್ಪಟ್ಟರು. ಆ ಮಧ್ಯವರ್ತಿಗಳ ಪೈಕಿ ಅಜೀಹ ಎಂಬೋರ್ವ ವ್ಯಕ್ತಿ ಇದ್ದರು. ಅವರು ತುಬ್ಬಲ್‌ನೊಡನೆ ಇಂತೆಂದರು, "ನಾವು ನಿಮ್ಮದೇ ಜನಾಂಗದವರಾಗಿದ್ದೇವೆ. ನಮ್ಮೊಡನೆ ನೀವು ಯುದ್ಧ ಮಾಡಬಾರದಿತ್ತು. ಅದೂ ಅಲ್ಲದೆ, ನಮ್ಮ ಈ ನಗರವನ್ನು ನೀವು ಎಂದಿಗೂ ಜಯಿಸಲಾರಿರಿ." ತುಬ್ಬಲ್ ವಿಚಾರಿಸಿದ, "ಅದಕ್ಕೇನು ಕಾರಣ? ನಾನಾದರೋ ನಿಮ್ಮ ಚಾರಿತ್ರ್ಯ ಮತ್ತು ಆದರಾತಿಥ್ಯಕ್ಕೆ ಮಾರು ಹೋಗಿ ಸಂಧಾನಕ್ಕೆ ಮುಂದಾಗಿದ್ದೇನೆ. ಅನ್ಯಥಾ ನನ್ನ ಸೇನೆಯು ನಿಮ್ಮ ನಗರವನ್ನು ಧೂಳೀಪಟ ಮಾಡಿಬಿಡುವಷ್ಟು ಬಲಿಷ್ಠವಾಗಿದೆ." ಅಜೀಹ ಹೇಳಿದರು, "ಇಲ್ಲ, ನಮ್ಮ ಈ ನಗರವು ಓರ್ವ ಪ್ರವಾದಿಯು ತಂಗುವ ಸ್ಥಳವಾಗಿದೆ. ಅವರು ಕುರೈಶ್ ಜನಾಂಗ ದಿಂದ ಬರುವವರಾಗಿದ್ದಾರೆ." ಈ ಉತ್ತರವನ್ನು ಕೇಳಿ ತುಬ್ಬಲ್ ಒಂದು ದ್ವಿಪದಿಯನ್ನು ಹಾಡಿದ. ಅದರ ಭಾವಾರ್ಥ ಹೀಗಿದೆ,

"ಆ ನಗರದಿಂದ ದೂರವಿರಲು ಆತ ನನಗೆ ಉಪದೇಶಿಸಿದ; ಅದು ಮುಹಮ್ಮದ್‌ರಿಗಾಗಿ ಮೀಸಲಿಡಲಾಗಿದೆಯಂತೆ!"

ಗತ ಇತಿಹಾಸವು ಭವಿಷ್ಯದ ಮೇಲೆ ಬೆಳಕು ಚೆಲ್ಲುತ್ತಿದೆ!

ಬೈಬಲಿನ ಯೆಶಾಯನ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ, "ಅವರು ಆಗಮಿಸುವಾಗ ಸೆಲ ಪಟ್ಟಣದವರು* ಹರ್ಷಧ್ವನಿಗೈದು ಪರ್ವತಾಗ್ರಗಳಲ್ಲಿ ಕೇಕೆ ಹಾಕಲಿ." (42:11)

ಈಗ ಆ ಸುವಾರ್ತೆಗಳೆಲ್ಲ ಪ್ರಕಟವಾಗುವ ಕಾಲ ಕೂಡಿ ಬಂತು. ಸಕಲ ಸೃಷ್ಟಿಗಳ ನಾಯಕ ಮತ್ತು ಜಗತ್‌ಸೃಷ್ಟಿಯ ಸಾರಾಂಶವಾದ ಪ್ರವಾದಿ ಮುಹಮ್ಮದ್‌ರ(ಸ) ಆಗಮನ ವನ್ನು ದರ್ಶಿಸಿದ ಯಸ್ರಿಬ್ ವಾಸಿಗಳು ಸಂತೋಷಾತಿರೇಕದಿಂದ ಚೀರಿದರು... ಪರಸ್ಪರ ಶುಭಾಶಯ ಕೋರಿದರು. 'ಅಹ್ಲನ್ ವ ಸಹ್ಲನ್' ಮತ್ತು 'ಹುಬ್ಬದ್ ಅವ್ ಮರ್‌ಹಬ' ಎಂಬ ಶುಭವಾಕ್ಯಗಳು ಸುತ್ತಲ ಬೆಟ್ಟ-ಗುಡ್ಡಗಳಿಗೆ ರಾಚಿ ಪ್ರತಿಧ್ವನಿಸಿದುವು. ಎಲ್ಲರ ಮುಖ ಗಳೂ ಆನಂದದಿಂದ ಕೆಂಪೇರಿದುವು... ಯಾರೋ ಅವರ ಮುಖದ ಮೇಲೆ ಅರಿಸಿನ ಲೇಪನ, ಪನ್ನಂಬರ ಮತ್ತು ಪನ್ನೀರು ಚಿಮುಕಿಸಿದಂತೆ. ಆನಂದವು ಯಸ್ರಿಬ್ ವಾಸಿಗಳಲ್ಲಿ ಪ್ರೇಮಮಯ ಅವಸ್ಥೆಯನ್ನುಂಟು ಮಾಡಿತ್ತು. ಅವರ ಹೃದಯವು ಸ್ಥಿಮಿತ ಕಳಕೊಳ್ಳುತ್ತದೋ ಎಂಬಂತಾಗಿತ್ತು ಸ್ಥಿತಿ.

* 'ಸಲಅ್' ಎಂಬುದು ಯಸ್ರಿಬ್‌ನ ಪುರಾತನ ಹೆಸರು.

ಯಸ್ರಿಬ್‌ನ ಖರ್ಜೂರದ ತೋಪುಗಳು ತಂಗಾಳಿಯೊಡನೆ ತೊನೆದಾಡಿ ಹೇಳಿದುವು,

"ಅನಾಥರ ಸಂರಕ್ಷಕ ಬಂದರು."

ಉತ್ತರವಾಗಿ ಗುಡ್ಡದ ಶೃಂಗದಿಂದ ಶಬ್ದ ಬಂತು,

"ಗುಲಾಮರ ಒಡೆಯ ಆಗಮಿಸಿದರು."

ತರುವಾಯ ಗೋಡೆ-ಬಾಗಿಲುಗಳಿಂದ ಶುಭಾಶಯ ಗೀತೆಗಳು ಪ್ರತಿಧ್ವನಿಸಿದುವು. ಯಸ್ರಿಬ್‌ನ ಕಣಕಣಗಳಿಗೆ ಬಾಯಿ ಬಂದು ನಾಲಗೆ ಹೊರಳಿದುವು. ಕಲ್ಲುಗಳು ಮಾತನಾಡಿದುವು ಮತ್ತು ಬಂಡೆಗಳಿಂದ ಪ್ರಶಂಸಾಮೃತಗಳ ಚಿಲುಮೆ ಒಡೆದುವು. ವಿಶ್ವನಾಯಕ(ಸ) ಮತ್ತು ಆಪ್ತಮಿತ್ರ(ರ) ಒಂದೇ ಒಂಟೆಯಲ್ಲಿ ಸವಾರರಾಗಿದ್ದರು. ಜನರಲ್ಲಿದ್ದ ಕುತೂಹಲ, ಆಸಕ್ತಿ, ಪ್ರೀತಿಯನ್ನು ಕಂಡ ಅಬೂಬಕರ್(ರ) ನೆಟ್ಟಗಾದರು. ತಮ್ಮ ಚದ್ದರವನ್ನು ಪ್ರವಾದಿವರ್ಯರ(ಸ) ತಲೆಮೇಲೆ ನೆರಳಿಗಾಗಿ ಹಿಡಿದರು. ಈ ಮೂಲಕ ಜನರು ನಾಯಕ-ಸೇವಕರ ನಡುವಿನ ವ್ಯತ್ಯಾಸ ಅರಿಯಲಿ ಮತ್ತು ಮುಹಮ್ಮದರ್ರಸೂಲುಲ್ಲಾಹ್(ಸ) ಹಾಗೂ ಅಬೂಬಕರ್ ಬಿನ್ ಅಬೂ ಕುಹಾಫಾರನ್ನು(ರ) ಸರಿಯಾಗಿ ಗುರುತಿಸಲಿ ಎಂಬುದು ಅವರ ಇಂಗಿತವಾಗಿತ್ತು. ಅನ್ಸಾರರ ಪುಟ್ಟ ಪುಟ್ಟ ಬಾಲೆಯರು ರಾಗ-ತಾಳದೊಂದಿಗೆ ಹಾಡಿದರು,

ಅಶ್ರಫಲ್ ಬದ್ರು ಅಲೈನಾ, ಮಿನ್‌ಸನ್ನಿಯಾತಿಲ್ ವದಾಇ...

ಮುದ್ದು ಮಕ್ಕಳ ಮಧುರ ಹಾಡುಗಳು ಯಸ್ರಿಬ್‌ವಾಸಿಗಳ ಪ್ರಮೋದಾವಸ್ಥೆಯನ್ನು ಇನ್ನಷ್ಟು ಹೆಚ್ಚಿಸಿತು. ಅನ್ಸಾರರ ಆ ಹೆಣ್ಮಕ್ಕಳ ಹಾಡಿನಲ್ಲಿ ಆನಂದ, ಪ್ರೀತಿ ಮತ್ತು ಹೃದಯಂಗಮವಾದ ಅಮಿತೋತ್ಸಾಹ ತುಂಬಿ ತುಳುಕುತ್ತಿತ್ತು. ಆ ಮಕ್ಕಳು ಭೂಮಿಯಲ್ಲಿ ಹಾಡುತ್ತಿದ್ದರು ಮತ್ತು ದೇವಚರರು ಆಕಾಶಗಳಲ್ಲಿ ನಲಿಯುತ್ತಿದ್ದರು. ತಮ್ಮ ಹಾಡಿನಲ್ಲಿ ರಾಗ-ಲಯಗಳ ಸಮತೋಲನ ಇದೆಯೋ ಇಲ್ಲವೋ ಎಂಬುದರ ಕಡೆಗೆ ಆ ಮಕ್ಕಳ ಗಮನವಿರಲಿಲ್ಲ. ಆದರೆ ಅವರ ಮನದ ಭಾವನೆಗಳು ಮತ್ತು ಪ್ರೀತಿಯ ಸಂವೇದನೆಯು ಆ ಹಾಡುಗಳಿಗೆ ಜೀವ ತುಂಬಿದ್ದುವು. ಅದು ಹೃದಯದಿಂದ ಹೊರಟ ಪದ್ಯವಾಗಿತ್ತು. ಹಾಗಾಗಿ ಅವರ ಪದಗಳಲ್ಲಿ ಪ್ರಭಾವ ಇರಲೇ ಬೇಕಿತ್ತು.

ಯಸ್ರಿಬ್‌ನ ಪ್ರತಿಯೋರ್ವ ವ್ಯಕ್ತಿಯೂ ಪ್ರವಾದಿವರ್ಯರಲ್ಲಿ(ಸ) ಅರಿಕೆ ಮಾಡುತ್ತಿದ್ದರು, "ಯಾ ರಸೂಲುಲ್ಲಾಹ್(ಸ)! ನನ್ನ ಮನೆಗೆ ಆತಿಥ್ಯದ ಅನುಗ್ರಹ ಕಲ್ಪಿಸಿರಿ." ಆದರೆ ಆ ಸೌಭಾಗ್ಯವು ಅಬೂ ಅಯ್ಯೂಬ್ ಅನ್ಸಾರಿಯವರ(ರ) ಪಾಲಿಗೆ ಬರೆಯಲ್ಪಟ್ಟಿತ್ತು. ಪ್ರವಾದಿವರ್ಯರ(ಸ) ಒಂಟೆಯು ಅಲ್ಲಾಹನ ಅಣತಿಯಂತೆ ಅಬೂ ಅಯ್ಯೂಬ್‌ರ(ರ) ಮನೆಯ ಮುಂದೆ ಮಂಡಿಯೂರಿತು. ಹೀಗೆ ಕೆಲವು ದಿನಗಳ ತನಕ ಅನಾಥಮುತ್ತು(ಸ) ಆ ಮನೆಯಲ್ಲಿ ತಂಗಿದರು. ಅಬೂ ಅಯ್ಯೂಬ್ ಅನ್ಸಾರಿ(ರ) ತಮ್ಮ ಅದೃಷ್ಟಕ್ಕೆ ಬಹಳ ಹೆಮ್ಮೆಪಟ್ಟುಕೊಂಡರು. ಆನಂದಾತಿರೇಕದಿಂದ ಅಮಲೇರಿದಂತೆ ಅವರ ಹೆಜ್ಜೆಗಳು ತಪ್ಪುತ್ತಿದ್ದುವು, ಅವರ ಪೇಟವು ಆಗಾಗ ಬಿಚ್ಚಿಕೊಳ್ಳುತ್ತಿತ್ತು, ಅವರ ಮನೆಯ ಕತ್ತಲ ಕೋಣೆಯು ಪ್ರಕಾಶದ

ಕಲಶವಾಗಿ ಮಾರ್ಪಟ್ಟಿತು. ಪ್ರವಾದಿತ್ವದ ಸೂರ್ಯ ಪ್ರಕಾಶವು ಆ ಮನೆಯ ಅದೃಷ್ಟವನ್ನೇ ಬದಲಾಯಿಸಿ ಬಿಟ್ಟಿತು.

ಜನರು ಅಬೂ ಅಯ್ಯೂಬ್ ಅನ್ಸಾರಿಯವರಿಗೆ ಶುಭಾಶಯ ಕೋರಿದರು, "ನಿಮಗೆ ಇದ್ದಲ್ಲಿಯೇ ಶಾಶ್ವತ ಸಂಪತ್ತು ದೊರೆಯಿತಲ್ಲ! ಇಂತಹ ಮಹಾನ್, ಪಾವನ ಮತ್ತು ಶ್ರೇಷ್ಠ ವ್ಯಕ್ತಿತ್ವವಿರುವ ಅತಿಥಿಯನ್ನು ಸತ್ಕರಿಸುವ ಸೌಭಾಗ್ಯ ಜಗತ್ತಿನಲ್ಲಿ ಬೇರಾರಿಗೂ ದೊರೆಯಲಿಲ್ಲ!" ಅಬೂ ಅಯ್ಯೂಬ್‌ರ(ರ) ಕೃತಜ್ಞತೆ ತುಂಬಿದ ಕಣ್ಣುಗಳು ಉತ್ತರಿಸಿ ದುವು, "ಅಲ್ಲಾಹನು ನನ್ನಂತಹ ಬಡವನ ಮೇಲೆ ಅನುಗ್ರಹ ವರ್ಷಿಸಿದನು. ನಾನು ಈ ಎಣೆ ಇಲ್ಲದ ದಯೆ-ಕೃಪೆಗೆ ಅರ್ಹನಾಗಿದ್ದಿರಲಿಲ್ಲ. ಇದು ಅಲ್ಲಾಹನ ಕೊಡುಗೆ... ಅವನು ಯಾವ ಕಣವನ್ನು ಬೇಕಾದರೂ ಸೂರ್ಯವಾಗಿ ಮಾರ್ಪಡಿಸಬಲ್ಲ. ನಾನು ಮತ್ತು ವಿಶ್ವನಾಯಕರ(ಸ) ಆತಿಥ್ಯ... ಕನಸು ಕಾಣುತ್ತಿರುವೆನೇ!?"

ಅವರು ಬಂದರೆನ್ನ ಮನೆಗೆ
ಇದು ಅಲ್ಲಾಹನ ಕೃಪೆ
ಒಮ್ಮೆ ನನ್ನನ್ನೊಮ್ಮೆ ಅವರನ್ನು
ನೋಡಿ ಅಲ್ಲಾಹನಿಗೆ ನಮಿಪೆ

ಮಸ್ಜಿದುನ್ನಬವಿ

ಬೈಬಲಿನ ಯೆಶಾಯ ಗ್ರಂಥದಲ್ಲಿ ಉಲ್ಲೇಖಿಸಲಾಗಿರುವ ಸೆಲ ಪಟ್ಟಣವು (ಸಲಅ್) ನಂತರ ಯಸ್ರಿಬ್ ಎಂದು ನಾಮಕರಣಗೊಂಡಿತು. ಈಗ ಅದೇ ನಗರವು ಪ್ರವಾದಿ ಮುಹಮ್ಮದ್‌ರ(ಸ) ಆಗಮನದಿಂದ 'ಮದೀನತುನ್ನಬಿ' (ಪ್ರವಾದಿಯ ನಗರ) ಎಂದು ಕರೆಯಲ್ಪಟ್ಟಿತು. ಇನ್ನು ಇಸ್ಲಾಮೀ ಇತಿಹಾಸದಲ್ಲಿ ಆ ನಗರವು ಮದೀನಾ ಎಂಬ ಹೆಸರಿನಿಂದ ಕರೆಯಲ್ಪಡುವುದು. ಈಗ ಈ ನಗರವು 'ಯಸ್ರಿಬ್' ಅಥವಾ 'ಬತ್ಹಾ' ಎಂದಲ್ಲ ಬದಲಾಗಿ 'ಮದೀನಾ' ಎಂದು ಗುರುತಿಸಲ್ಪಡಲಿದೆ. ಹೌದು ಮದೀನಾ(ನಗರ) ತಯ್ಯಿಬ (ಪಾವನ) ಕೂಡಾ ಹೌದು! ಮುನವ್ವರ (ಪ್ರಕಾಶಮಾನ) ಕೂಡಾ ಹೌದು! ಈ ನೆಲದ ಧೂಳು-ಮಣ್ಣು, ಕಲ್ಲು ಹರಳುಗಳೆಲ್ಲವನ್ನೂ ಸತ್ಯವಿಶ್ವಾಸಿಗಳು ಅಪಾರವಾಗಿ ಗೌರವಿಸುವರು; ವಿಶ್ವಾಸವಿರಿಸಿದ ಪ್ರತಿಯೋರ್ವನಿಗೂ ಈ ನಗರದೊಂದಿಗೆ ಹೃದಯಂಗಮವಾದ ಸಂಬಂಧ ವೇರ್ಪಡುವುದು; ಕವಿಗಳು ಮದೀನದ ಕುರಿತು ಪದ್ಯ ಕಟ್ಟುವರು ಹಾಗೂ ಚರ್ಚಾಗೋಷ್ಠಿ ಗಳಲ್ಲಿ ಮದೀನದ ಪ್ರಸ್ತಾಪ ಬರುವಾಗಲೆಲ್ಲ ಜನರು ಭಾವಪರವಶರಾಗುವರು.

ಮದೀನದಲ್ಲಿ ತಂಗಿದ ಬಳಿಕ ದೇವ ಸಂದೇಶವಾಹಕರಾದ ಅನಾಥಮುತ್ತು(ಸ) ದೇವಗೃಹವನ್ನು ನಿರ್ಮಿಸುವ ಸಂಕಲ್ಪ ತೊಡುತ್ತಾರೆ. ನಜ್ಜಾರ್ ಕುಟುಂಬದ ಒಂದು ಜಮೀನನ್ನು (ಅದರಲ್ಲಿ ಕೆಲವು ಗೋರಿಗಳು ಮತ್ತು ಖರ್ಜೂರ ಮರಗಳಿದ್ದುವು) ಅದಕ್ಕಾಗಿ ಆಯ್ದುಕೊಂಡರು. ನಜ್ಜಾರ್ ಕುಟುಂಬದವರನ್ನು ಕರೆಸಲಾಯಿತು.

"ಈ ಜಮೀನನ್ನು ಬೆಲೆ ಕೊಟ್ಟು ಖರೀದಿಸಲು ಬಯಸುತ್ತಿದ್ದೇನೆ" ಅನಾಥಮುತ್ತು(ಸ) ಹೇಳಿದರು.

"ನಾವು ಬೆಲೆ ಪಡೆಯುವೆವು. ಆದರೆ ತಮ್ಮಿಂದ ಅಲ್ಲ, ಬದಲಾಗಿ ಅಲ್ಲಾಹನಿಂದ" ನಜ್ಜಾರ್ ಕುಟುಂಬದವರು ಉತ್ತರಿಸಿದರು.

ಈ ಜಮೀನು ಅನಾಥ ಮಕ್ಕಳದ್ದಾಗಿತ್ತು. ಪ್ರವಾದಿವರ್ಯರು(ಸ) ಅವರನ್ನು ಕರೆಸಿದರು. ಬೆಲೆ ನೀಡಲು ಬಯಸಿದರು. ಆಗ ಆ ಸಜ್ಜನ ಮಕ್ಕಳು, "ಈ ಜಮೀನನ್ನು ನಿಮಗೆ ಅರ್ಪಿಸುತ್ತಿದ್ದೇವೆ" ಎಂದರು. ಆದರೆ ಲೋಕಾನುಗ್ರಹಿಯು ಅನಾಥಮಕ್ಕಳ ಕೊಡುಗೆ ಮತ್ತು

ಅರ್ಪಣೆಯನ್ನು ಸ್ವೀಕರಿಸಲಿಲ್ಲ. ಹ. ಅಬೂ ಅಯ್ಯೂಬ್ ಅನ್ಸಾರಿ ಯವರು(ರ) ಆ ಜಮೀನಿನ ಬೆಲೆ ಪಾವತಿಸಿದರು.

ಮೊತ್ತಮೊದಲು ಆ ಸ್ಥಳದಲ್ಲಿದ್ದ ಗೋರಿಗಳನ್ನು ಅಗೆದು ನೆಲವನ್ನು ಸಮತಟ್ಟು ಗೊಳಿಸಲಾಯಿತು. ಇದಾದ ಬಳಿಕ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಅನ್ಸಾರ್ ಮತ್ತು ಮುಹಾಜಿರರು ಒಟ್ಟು ಸೇರಿ ಮಸೀದಿಯ ನಿರ್ಮಾಣದಲ್ಲಿ ತೊಡಗಿದರು. ಕೆಲವರು ನೆಲ ಅಗೆದರು, ಇನ್ನು ಕೆಲವರು ಕಲ್ಲು ಜೋಡಿಸಿದರು, ಮತ್ತೆ ಕೆಲವರು ಗಾರೆ ಕೆಲಸದಲ್ಲಿ ತೊಡಗಿದರು. ಅತ್ಯಂತ ಆಸಕ್ತಿ ಮತ್ತು ಆದರದೊಂದಿಗೆ ನಿರ್ಮಾಣ ಕಾರ್ಯ ಮುಂದು ವರಿಯಿತು. ಪ್ರತಿಯೋರ್ವರೂ ಈ ಕಾರ್ಯವನ್ನು ತನ್ನ ಕರ್ತವ್ಯವೆಂದೇ ಭಾವಿಸಿ ಮಾಡುತ್ತಿದ್ದರು. ಅವರೊಡನೆ ಸೇರಿ ಅನಾಥಮುತ್ತು(ಸ) ಕೂಡಾ ಸಾಮಾನ್ಯ ಕಾರ್ಮಿಕನಂತೆ ನಿರ್ಮಾಣ ಕಾರ್ಯದಲ್ಲಿ ಕೈ ಜೋಡಿಸಿದರು. ಸ್ವತಃ ಕಲ್ಲುಗಳನ್ನೆತ್ತಿ ತರುತ್ತಿದ್ದರು. ಧೂಳು, ಮಣ್ಣು ಅವರ ಪಾವನ ಶರೀರವಿಡೀ ಆವರಿಸುತ್ತಿತ್ತು. ಸಹಾಬಿಗಳು ಅರಿಕೆ ಮಾಡುತ್ತಿದ್ದರು, "ಯಾ ರಸೂಲುಲ್ಲಾಹ್! ತಾವು ಕಷ್ಟಪಡದಿರಿ. ತಾವು ಕೇವಲ ನಮ್ಮ ಮೇಲುಸ್ತುವಾರಿ ನೋಡಿದರೆ ಸಾಲದೇ?" ಉತ್ತರವಾಗಿ ಅನಾಥಮುತ್ತು(ಸ) ಮುಗುಳ್ನಗುತ್ತಾ ಕಲ್ಲೆತ್ತಿ ತರುತ್ತಿದ್ದರು.

ಮಾಸ-ಸಂವತ್ಸರಗಳ ಪರಿಭ್ರಮಣವು ನಿಂತಂತಾಗಿ ಕಾಲವು ಮೆಲ್ಲನೆ ಸಾಗುತ್ತಿತ್ತು. ಯಾರ ತಲೆಯ ಮೇಲೆ ಅಲ್ಲಾಹನು ಜಗತ್ತಿನ ಅತ್ಯಂತ ಅಮೂಲ್ಯ ಮತ್ತು ಹೊಣೆಭಾರ ಇರುವ ಕಿರೀಟವನ್ನು ತೊಡಿಸಿದ್ದಾನೋ, ಅವರು ಸಾಮಾನ್ಯ ಕಾರ್ಮಿಕನಂತೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರಲ್ಲ! ಅವರ ಪಾವನ ಶರೀರವನ್ನು ಧೂಳು ಮೆತ್ತಿಕೊಳ್ಳುತ್ತಿದೆ ಯಲ್ಲ! ಒಡೆಯ ತನ್ನ ಸೇವಕರಿಗೆ ಸಹಾಯ ಮಾಡುತ್ತಿದ್ದಾರೆ! ಆ ಹೊತ್ತಿನಲ್ಲಿ ಪ್ರವಾದಿತ್ವವು ಕಾರ್ಮಿಕ ಶಕ್ತಿಯ ಭಾಷೆಯಲ್ಲಿ ಮಾತನಾಡುತ್ತಿತ್ತು. ಮೇಲ್ನೋಟಕ್ಕೆ ಅದು ಮಸೀದಿ ನಿರ್ಮಾಣ ಕಾರ್ಯವೆಂಬಂತೆ ಕಾಣುತ್ತಿತ್ತು. ಆದರೆ ಅದೊಂದು ಪಾಠವಾಗಿತ್ತು. ಅರಸ, ಸಾಮ್ರಾಟ, ನೇತಾರ, ಸರದಾರರುಗಳಿಗೆ...

ಅಧಿಕಾರ ಮದ ಮತ್ತು ಸಂಪತ್ತಿನ ನಶೆಯಲ್ಲಿ ಮುಳುಗಿ ನಿಮ್ಮತನವನ್ನು, ನಿಮ್ಮ ಕರ್ತವ್ಯವನ್ನು ಮರೆಯದಿರಿ. ಮಾನವನ ಶ್ರೇಷ್ಠತೆಯು ಚಿನ್ನ-ಬೆಳ್ಳಿಗಳ ರಾಶಿಯಲ್ಲೋ ರತ್ನಗಂಬಳಿಯಲ್ಲೋ ರೇಶ್ಮೆಯ ಜುಬ್ಬದಲ್ಲೋ ಅಥವಾ ಸುಂದರ ಹೂದೋಟದಗಳಲ್ಲೋ ಅಡಗಿಲ್ಲ. ಬದಲಾಗಿ ಸನ್ನಡತೆ, ವಿನಯಶೀಲತೆ, ಹಿತಚಿಂತನೆ ಮತ್ತು ಪರಸ್ಪರ ಸಹಕಾರ ಮನೋಭಾವದಲ್ಲಿಯೇ ಮಾನವೀಯತೆಯ ಘನತೆಯು ಅಡಗಿದೆ. ಸೃಷ್ಟಿಯು ಎಷ್ಟೇ ಉನ್ನತಿಗೇರಿದರೂ ಸೃಷ್ಟಿಯಾಗಿರುತ್ತಾನೆಯೇ ಹೊರತು ಸೃಷ್ಟಿಕರ್ತನಾಗಿ ಬಿಡುವುದಿಲ್ಲ. ಅಹಂ ಮತ್ತು ಗರ್ವಗಳು ಸೃಷ್ಟಿಯ ಗುಣವಲ್ಲ, ಬದಲಾಗಿ ಸೃಷ್ಟಿಕರ್ತನ ಘನತೆಯಾಗಿದೆ. ಯಾರು ತನ್ನ ಮೇರೆಯನ್ನು ಮೀರಲು ಪ್ರಯತ್ನಿಸುತ್ತಾನೋ ಅವನು ಖಂಡಿತವಾಗಿಯೂ ಅವಮಾನಕ್ಕೀಡಾಗುವನು. ಮಾನವೀಯ ಅನುಕಂಪವನ್ನು ಮನಸ್ಸಿನಲ್ಲಿ ಹೊಂದಿಲ್ಲದವನು

ಬೆಲೆಬಾಳುವ ರತ್ನ ಖಚಿತ ಕಿರೀಟ ಧರಿಸಿದ್ದರೂ ಅವಮಾನಿತನಾಗಿರುತ್ತಾನೆ. ಮುತ್ತು-ರತ್ನಗಳ ಹೊಳಪು ಕಿರೀಟಧಾರಿಯ ಗೌರವದಲ್ಲಿ ಹೆಚ್ಚಳವನ್ನೇನೂ ಮಾಡಲಾರದು. ಅದೇ ವೇಳೆ ವ್ಯಕ್ತಿಯು ದೇವನಿಷ್ಠ, ಸಚ್ಚಾರಿತ್ರ್ಯವಂತ ಮತ್ತು ಮಾನವೀಯ ಅನುಕಂಪವುಳ್ಳವನಾಗಿದ್ದರೆ, ಆತನ ತಲೆಯಲ್ಲಿ ಮಣ್ಣಿನ ಪಾತ್ರೆಯಿದ್ದರೂ ಆತನ ಗೌರವವು ಹೆಚ್ಚುತ್ತದೆಯೇ ಹೊರತು ಕಡಿಮೆಯಾಗಲಾರದು.

ಇದು ಮಸ್ಜಿದುನ್ನಬವಿಯಾಗಿತ್ತು... ಸರಳತೆಯ ಅತ್ಯುತ್ತಮ ಮಾದರಿ... ಬಾಹ್ಯ ಅಲಂಕಾರ ಮತ್ತು ತೋರಿಕೆಯ ವೈಭವದಿಂದ ಮುಕ್ತ... ಇಲ್ಲಿ ಕೃತಿಮತೆಗೆ ಯಾವುದೇ ಸ್ಥಾನವಿಲ್ಲ. ಸುಂದರವಾದ ಕೆತ್ತನೆಯಿಲ್ಲದ ದೊರಗು ಕಲ್ಲುಗಳ ಗೋಡೆ... ಖರ್ಜೂರದ ಕಾಂಡ ಮತ್ತು ಎಲೆಗಳಿಂದ ಆಚ್ಛಾದಿಸಿದ ಮಾಡು... ನೆಲದಲ್ಲಿ ಹರಡಿಕೊಂಡಿರುವ ಹರಳು ಕಲ್ಲುಗಳು... ಆದರೆ ಆ ಮಸೀದಿಯಲ್ಲಿ ಯಾರ ಸಾಷ್ಟಾಂಗಗಳ ಕಂಪು ಹರಡಿದೆಯೋ ಅದಕ್ಕೆ ಯಾವುದೇ ಮಾರ್ಬಲುಗಳ ತಂಪು ಸಾಟಿಯಾಗಲಾರದು. ಲೋಕಾನುಗ್ರಹಿಯ(ಸ) ಪಾದಸ್ಪರ್ಶವಾದ ಕಡೆ ಸಾಷ್ಟಾಂಗವೆರಗುವುದರ ಪುಣ್ಯಕ್ಕೆ ಎಣೆಯುಂಟೇ?

ಅದೂ ಅಲ್ಲದೆ, ಯಾವ ಸ್ಥಳದಲ್ಲಿ ಪ್ರವಾದಿವರ್ಯರ(ಸ) ಹಣೆಯ ಛಾಪು ಮೂಡಿದೆಯೋ ಅಲ್ಲಿನ ಉನ್ನತಿಗೆ ಯಾವುದು ಸಾಟಿ? ಅನಾಥಮುತ್ತು(ಸ) ಸಾಷ್ಟಾಂಗ ಎರಗುತ್ತಿರುವ ಜಾಗದೆಡೆಗೆ ಆಕಾಶಗಳು ಬಾಗಿಕೊಂಡಿರುತ್ತಿರಬಹುದು.

ಮಸ್ಜಿದುನ್ನಬವಿಯ ನಿರ್ಮಾಣ ಪೂರ್ಣಗೊಂಡಾಗ, ಅದರ ಸನಿಹದಲ್ಲಿ ಸತ್ಯ ವಿಶ್ವಾಸಿಗಳ ಮಾತೆಯರಿಗಾಗಿ ಕೋಣೆಗಳನ್ನು ನಿರ್ಮಿಸಲಾಯಿತು. ಅತ್ಯಂತ ಸರಳ ಮಣ್ಣಿನ ಗೋಡೆಯಿಂದ ಕಟ್ಟಿದ ಕೋಣೆಗಳು. ಕೆಲವದರ ಮಾಡು ಎಷ್ಟು ತಗ್ಗಿನಲ್ಲಿತ್ತೆಂದರೆ, ವ್ಯಕ್ತಿಯು ನೇರ ನೆಟ್ಟಗೆ ನಿಂತರೆ ನೆತ್ತಿಗೆ ಮಾಡು ತಾಗುತ್ತಿತ್ತು. ಇವು ಪ್ರವಾದಿವರ್ಯರ(ಸ) ಕುಟುಂಬದ ಮನೆಗಳಾಗಿದ್ದುವು. ಕೈಸರ್(ಸೀಝರ್) ಮತ್ತು ಕಿಸ್ರಾ(ಖುಸ್ರೋ)ರ ಮಹಲುಗಳು, ಹರ್ಕ್ಯುಲಿಸ್‌ನ ವೈಭವೋಪೇತ ಅರಮನೆ ಅಥವಾ ಭಾರತ ಮತ್ತು ಇರಾನ್‌ಗಳ ಭೋಗ ವಿಲಾಸ ಗೃಹಗಳಾಗಿರಲಿಲ್ಲ. ಅದು ಮಾನವೇತಿಹಾಸದ ಅತ್ಯಂತ ಪ್ರಖರ ಪುಟವಾಗಿತ್ತು. ಅದರ ಪ್ರಭಾ ವಲಯದಿಂದಲೇ ಲೋಕದ ಜನರು ತಮ್ಮ ಪಾಲಿಗೆ ದಾರಿದೀಪವನ್ನು ಕಂಡು ಕೊಳ್ಳಬೇಕಿತ್ತು. ಇವೇ ಸರಳತೆ, ಸಂಕ್ಷಿಪ್ತತೆ ಮತ್ತು ನಿಸ್ವಾರ್ಥತೆಯು ಮಾನವೀಯತೆಯ ಪಾಲಿಗೆ ಮಾರ್ಗದರ್ಶಿಯಾಗಿದೆ.

ಫಿತ್‌ಯೂನನ ಹತ್ಯೆ

ಮಕ್ಕಾ ನಗರದಿಂದ ವಲಸೆ ಬಂದ ಮುಹಾಜಿರರೊಡನೆ ಒಡಹುಟ್ಟಿದ ಸಹೋದರರಂತೆ ಮಾತ್ರವಲ್ಲ, ಅದಕ್ಕಿಂತಲೂ ಮಿಗಿಲಾಗಿ ಒಳಿತು, ಹಿತಚಿಂತನೆ, ಪ್ರೀತಿ, ಆದರ ದೊಂದಿಗೆ ವ್ಯವಹರಿಸಿದ ಮದೀನಾವಾಸಿಗಳು ಇಸ್ಲಾಮೀ ಇತಿಹಾಸದಲ್ಲಿ 'ಅನ್ಸಾರ್' ಎಂಬ ಹೆಸರಲ್ಲಿ ಸ್ಮರಿಸಲ್ಪಡುತ್ತಾರೆ. ಈ ಜನ ಅಲ್ಲಾಹನ ಧರ್ಮದ ನೈಜ ಮತ್ತು ಪ್ರಾಮಾಣಿಕ ಸಹಾಯಕ (ಅನ್ಸಾರ)ರಾಗಿದ್ದರು. ಈ ಅನ್ಸಾರರ ಪೂರ್ವಜರು ಯಮನಿನವರಾಗಿದ್ದರು. ಯಮನಿನಲ್ಲಿ ಬಹಳ ಹಿಂದೆ ಭೀಕರ ಬಿರುಗಾಳಿಯೆದ್ದಿತ್ತು. ಅದರೊಂದಿಗೇ ಉಕ್ಕಿ ಬಂದ ನೆರೆಯು ಯಮನನ್ನು ಸರ್ವನಾಶಗೈದಿತ್ತು. ಆ ಸಂದರ್ಭದಲ್ಲಿ ಜೀವ ಸಹಿತ ಉಳಿದಿದ್ದ ಕಹ್ತಾನಿ ಗೋತ್ರಜರು ಯಮನ್ ತೊರೆದು ಮದೀನದಲ್ಲಿ ಆಶ್ರಯ ಪಡೆದಿದ್ದರು ಮತ್ತು ಇಲ್ಲೇ ತಳವೂರಿದರು. ಹೀಗೆ ಮದೀನವು ಅನ್ಸಾರರ ಪೂರ್ವಜರ ಪಾಲಿಗೆ ದ್ವಿತೀಯ ನಾಡಾಗಿ ಪರಿಣಮಿಸಿತು. ಕ್ರಮೇಣ ನೂರಾರು ವರ್ಷಗಳು ಕಳೆದು ಹೋದುವು. ಹೀಗೆ ಅವರ ನಂತರದ ಪೀಳಿಗೆಗಳು ಮದೀನದವರಾಗಿಯೇ ಮಾರ್ಪಟ್ಟರು. ಆ ಗೋತ್ರ ದವರ ಪೈಕಿ ಔಸ್ ಮತ್ತು ಖಝ್ರಜ್ ಎಂಬೀರ್ವರು ವಿಖ್ಯಾತ ಪ್ರಭಾವಿ ವ್ಯಕ್ತಿಗಳಾಗಿದ್ದರು. ಅನ್ಸಾರರೆಲ್ಲರೂ ಆ ಇಬ್ಬರು ಸಹೋದರರ ಸಂತಾನವಾಗಿದ್ದಾರೆ. ಮುಂದೆ ಅವರಿಬ್ಬರ ಹೆಸರಲ್ಲಿಯೇ ಎರಡು ಗೋತ್ರಗಳು ಮೂಡಿ ಬಂದವು.

ಬಹಳ ವರ್ಷಗಳ ಹಿಂದೆ ಯಸ್ರಿಬ್(ಮದೀನ)ನಲ್ಲಿ ಯಹೂದಿಯರಿಗೂ ಪ್ರಾಬಲ್ಯವಿತ್ತು. ಯಹೂದಿಯರು ಆಸ್ತಿ-ಸಂಪತ್ತಿನ ವಿಷಯವಾಗಿ ಸದಾ ಕಾರೂನನಂತಿದ್ದಾರೆ. ಲೋಭವು ಅವರ ಪ್ರಕೃತಿ ಮತ್ತು ದುರಾಸೆ-ದುರಾಚಾರಗಳು ಅವರ ಸ್ವಭಾವವಾಗಿತ್ತು. ಹಣ ಮಾಡುವ ಕಲೆಯು ಅವರಿಗೆ ಕರಗತವಾಗಿತ್ತು. ಹಣ ಸಂಪಾದನೆಯಲ್ಲಿ ಹಲಾಲ್- ಹರಾಮ್ ಎಂಬ ವ್ಯತ್ಯಾಸ ಅವರಿಗೆ ಇರುತ್ತಿರಲಿಲ್ಲ. ಹಣ-ಸಂಪತ್ತಿನ ಆಧಿಕ್ಯವು ಅವರನ್ನು ಯಸ್ರಿಬ್‌ನಲ್ಲಿ ಅಧಿಕಾರರೂಢರನ್ನಾಗಿ ಮಾರ್ಪಡಿಸಿತ್ತು. ನಗ-ನಗದಿನ ಆಧಾರದಲ್ಲಿ ಅವರು ಪ್ರಾಬಲ್ಯ ಮೆರೆಯುತ್ತಿದ್ದರು.

ಈ ಯಹೂದಿಯರಲ್ಲಿ ಫಿತ್‌ಯೂನ್ ಎಂಬೋರ್ವ ಧನಿಕನಿದ್ದ. ಅತ್ಯಂತ ಭೋಗಾಸಕ್ತ, ವಿಷಯಾಸಕ್ತ, ಭ್ರಷ್ಟ ಹಾಗೂ ಅಹಂಕಾರಿ. ಮದುವೆಯಾಗುವ ಕನ್ಯಾ ಸ್ತ್ರೀಯು ಮೊದಲ

ರಾತ್ರಿ ತನ್ನೊಂದಿಗೆ ಕಳೆಯಬೇಕೆಂಬ ವಿಕೃತ ಫರಮಾನನ್ನು ಈತ ಯಸ್ರಿಬ್ ವಾಸಿಗಳ ಮೇಲೆ ಹೇರಿದ್ದ. ಈ ಆದೇಶವು ಯಸ್ರಿಬ್‌ನವರ ಸ್ವಾಭಿಮಾನಕ್ಕೆ ಸವಾಲಾಗಿತ್ತು ಹಾಗೂ ಅವರ ಗೌರವ-ಘನತೆಯ ವಿರುದ್ಧ ಸಾರಿದ ಸಮರವಾಗಿತ್ತು. ಯಹೂದಿಗಳಲ್ಲಿಯಂತೂ ಮಾನ-ಸ್ವಾಭಿಮಾನ-ಆತ್ಮಸಮ್ಮಾನ ಎಂಬುದು ಸತ್ತು ಹೋಗಿತ್ತು. ಹಾಗಾಗಿ ಅವರು ಈ ಅವಮಾನವನ್ನು ಅಂಗೀಕರಿಸಿದರು. ಹೀಗೆ ಫಿತ್‌ಯೂನ್‌ನ ಅಂತಃಪುರದಲ್ಲಿ ಕನ್ಯತ್ವದ ಕೊಲೆಯಾಗತೊಡಗಿತು.

ಆ ಕಾಲದಲ್ಲಿ ಮಾಲಿಕ್ ಬಿನ್ ಇಜ್ಲಾನ್ ಎಂಬವರು ಅನ್ಸಾರರ ಸರದಾರರಾಗಿದ್ದರು. ಅವರ ಸಹೋದರಿಯು ತನ್ನ ವಿವಾಹದ ದಿನವೇ ಮನೆಯಿಂದ ಹೊರಗೆ ಅಡಿಯಿಟ್ಟಳು. ಅಣ್ಣ ಮಾಲಿಕ್ ಬಿನ್ ಇಜ್ಲಾನ್‌ರ ಮುಂದಿನಿಂದಲೇ ಆಕೆ ಹಾದು ಹೋದಳು. ಮಾಲಿಕ್ ಕೋಪದಿಂದ ಕಿಡಿಕಿಡಿಯಾದರು. ವಿವಾಹದ ದಿನ ನವವಧು ಮನೆಯಿಂದ ಹೊರಗೆ ಹೋಗುವುದು ಅಗೌರವದ ಸಂಕೇತವೆಂದು ಅಂದು ಭಾವಿಸಲಾಗುತ್ತಿತ್ತು. ಮಾಲಿಕ್ ಕೋಪ ದಿಂದಲೇ ತಂಗಿಯನ್ನು ತಡೆದು ಕೇಳಿದರು,

"ಇದೇನು ಮಾಡಿದೆ ನೀನು? ಕುಟುಂಬದ ಗೌರವಕ್ಕೆ ಮಸಿ ಬಳಿದೆಯಲ್ಲ."

"ಅಣ್ಣಾ! ಇದು ಏನೇನೂ ಅಲ್ಲ. ಮತ್ತೆ..." ತಂಗಿಯ ಮಾತು ಪೂರ್ಣವಾಗುವುದಕ್ಕೆ ಮುನ್ನವೇ ಇಬ್ನು ಇಜ್ಲಾನ್ ಗರ್ಜಿಸಿದರು,

"ಇದಕ್ಕಿಂತ ದೊಡ್ಡ ಅವಮಾನ ಬೇರೇನಿರಬಹುದು? ಕುಲೀನ ಮನೆತನದ ಮದುವಣ ಗಿತ್ತಿಯರು ಮದುವೆಯ ದಿನ ಮನೆಯಿಂದ ಹೊರಗೆ ಕಾಲಿಡುವುದಿಲ್ಲ."

ತಂಗಿ ಫಿತ್‌ಯೂನ್‌ನ ಮಹಲಿನ ಕಡೆಗೆ ಸೂಚಿಸುತ್ತಾ ತಣ್ಣಗೆ ಉತ್ತರಿಸುತ್ತಾಳೆ, "ಆದರೆ ನಾಳೆ ನಡೆಯಲಿರುವುದು ಇದಕ್ಕಿಂತಲೂ ಹೀನವಾದುದಲ್ಲವೇ? ನಾನು ಇದಕ್ಕಿಂತ ಹೆಚ್ಚಿನದೇನನ್ನೂ ಹೇಳುವುದಿಲ್ಲ. ಮಾನ-ಲಜ್ಜೆಯು ನನ್ನ ತುಟಿಯನ್ನು ಹೊಲಿದಿದೆ."

ತಂಗಿಯ ಉತ್ತರ ಕೇಳಿ ಮಾಲಿಕ್ ಭಾವೋದ್ವೇಗದಿಂದ ಕಂಪಿಸಿದರು. ಕೋಪದ ತಾಪದಿಂದ ಅವರ ದೇಹವಿಡೀ ಬೆವರಿಳಿಯಿತು. ಮರುದಿನ ಅವರ ನವವಿವಾಹಿತೆ ತಂಗಿಯು ಸರ್ವಾಲಂಕಾರ ಭೂಷಿತೆಯಾಗಿ ಫಿತ್‌ಯೂನ್‌ನ ಅಂತಃಪುರಕ್ಕೆ ಹೊರಟು ನಿಂತಾಗ, ಮಾಲಿಕ್ ಕೂಡ ತಂಗಿಯ ಸಖಿಯರ ಜತೆಯಲ್ಲಿ ಸ್ತ್ರೀ ವೇಷ ಹಾಕಿಕೊಂಡು ಹೊರಟರು. ಅವರು ಕಠಾರಿಯನ್ನು ಕಂಕುಳಲ್ಲಿ ಅಡಗಿಸಿಟ್ಟು ಅವಕಾಶಕ್ಕಾಗಿ ಕಾಯುತ್ತಿದ್ದರು. ಸಂಜೆಯಾಯಿತು... ಸೂರ್ಯ ಅಸ್ತಮಿಸಿತು... ರಾತ್ರಿಯಾವರಿಸಿತು... ಫಿತ್‌ಯೂನ್ ಸಂತೋಷದಿಂದ ತನ್ನ ಕೋಣೆಯೆಡೆಗೆ ನಡೆಯತೊಡಗಿದ. ಒಳಗೆ ಮಾಲಿಕ್‌ರ ತಂಗಿ ಭಯದಿಂದ ತತ್ತರಿಸುತ್ತಾ ಪವಡಿಸಿದ್ದಳು. ಅದು ಆಕೆಯ ಶೀಲಹರಣಗೊಳ್ಳುವ ಕರಾಳ ರಾತ್ರಿಯಾಗಿತ್ತು. ಫಿತ್‌ಯೂನ್ ತನ್ನ ಅಂತಃಪುರದೊಳಗೆ ಅಡಿಯಿಟ್ಟದ್ದೇ ತಡ ಮಾಲಿಕ್ ಬಿನ್ ಇಜ್ಲಾನ್ ಛಂಗನೆ ಆತನ ಮೇಲೆರಗಿ ಕಠಾರಿಯಿಂದ ತಿವಿದರು. ಅಷ್ಟಕ್ಕೇ ಆತ ತಣ್ಣಗಾಗಿ ಬಿಟ್ಟ.

ಯಹೂದಿಯರು ಇಡೀ ಯಸ್ರಿಬ್‌ನಲ್ಲಿ ಹರಡಿಕೊಂಡಿದ್ದಾರೆ ಎಂಬುದು ಮಾಲಿಕ್ ಬಿನ್ ಇಜ್ಲಾನ್‌ಗೆ ಚೆನ್ನಾಗಿ ತಿಳಿದಿತ್ತು. ಇಲ್ಲಿ ಇದ್ದರೆ ಖಂಡಿತ ಸಿಕ್ಕಿ ಬೀಳುವೆ... ನನ್ನ ಪರವಾಗಿ ಒಂದು ಸಣ್ಣ ಧ್ವನಿಯೂ ಮೊಳಗದು. ಔಸ್ ಮತ್ತು ಖಝ್ರುಜರು ಪ್ರತಿಭಟಿಸಿದರೂ ಸಹ, "ನಮ್ಮ ಸರದಾರನ ಕೊಲೆಗಾರನನ್ನು ಸಮರ್ಥಿಸುತ್ತಿದ್ದೀರಿ" ಎಂದು ಹೇಳಿ ಯಹೂದಿಯರು ಅವರ ಬಾಯಿ ಮುಚ್ಚಿಸಬಹುದು. ಹೀಗೆ ಭಾವಿಸಿದ ಮಾಲಿಕ್ ಯಸ್ರಿಬ್‌ನಿಂದ ಓಡಿ ಹೋಗಿ ಸಿರಿಯಾ ತಲುಪಿದರು. ಅಬೂಜಬ್ಲ ಗುಸ್ಸಾನಿ ಎಂಬ ಸಭ್ಯ ಮತ್ತು ಮಾನವೀಯ ಗುಣವುಳ್ಳ ವ್ಯಕ್ತಿ ಅಲ್ಲಿನ ಆಡಳಿತಗಾರನಾಗಿದ್ದರು. ಮಾಲಿಕ್ ಬಿನ್ ಇಜ್ಲಾನ್ ನಡೆದ ವೃತ್ತಾಂತವನ್ನೆಲ್ಲ ಅಬೂಜಬ್ಲರ ಮುಂದೆ ಅರುಹಿದರು. ಸಭ್ಯ ಸರದಾರ ಅಬೂಜಬ್ಲ ತನ್ನ ಖಡ್ಗವನ್ನು ಮುಟ್ಟಿ ಆಣೆ ಹಾಕಿ ಹೇಳಿದರು, "ಫಿತ್‌ಯೂನನ ದುಷ್ಕೃತ್ಯಗಳು ಹೆಚ್ಚು ದಿನ ನಡೆಯಲಾರದು. ಹಾಗೆಯೇ ಯಹೂದಿಯರು ನಿಮ್ಮ ಪರಿವಾರದ ಕೂದಲನ್ನೂ ಕೊಂಕಿಸಲಾರರು."

ಅಬೂಜಬ್ಲ, ಬೃಹತ್ ಸೇನೆಯನ್ನು ಸಂಘಟಿಸಿ ಯಸ್ರಿಬ್‌ಗೆ ಸಮೀಪ ಬೀಡು ಬಿಟ್ಟರು. ಮೊದಲ ದಿನ ಔಸ್-ಖಝ್ರುಜ್ ಗೋತ್ರಗಳ ಸರದಾರರುಗಳನ್ನು ಆಮಂತ್ರಿಸಿ, ಆದರಾತಿಥ್ಯದಿಂದ ಸತ್ಕರಿಸಿ, ಅಮೂಲ್ಯ ಉಡುಗೊರೆ ಮತ್ತು ವಸ್ತ್ರಗಳನ್ನು ನೀಡಿ ಕಳುಹಿಸಿದರು. ಮರುದಿನ ಯಹೂದಿ ಧನಾಢ್ಯರನ್ನು ಆಮಂತ್ರಿಸಿದರು. 'ನಾವು ಔಸ್ ಮತ್ತು ಖಝ್ರುಜ್ ಗೋತ್ರದವರಿಗಿಂತ ಮಿಗಿಲಾಗಿದ್ದೇವೆ. ಹಾಗಾಗಿ ನಮಗೆ ಅವರಿಗಿಂತಲೂ ಮಿಗಿಲಾದ ಉಡುಗೊರೆ ಮತ್ತು ಸನ್ಮಾನ ದೊರೆಯಬಹುದು' ಎಂದು ಯಹೂದಿಯರು ಭಾವಿಸಿ ಸಂತೋಷಪಟ್ಟರು. ಆದರೆ ಅದು ಅಬೂಜಬ್ಲರ ಸಂಚಾಗಿತ್ತು. ಅವರು ಯಹೂದಿ ಧನಿಕರನ್ನೆಲ್ಲರನ್ನೂ ವಧಿಸಿದರು ಮತ್ತು ಈ ಪ್ರಕಾರ ಯಸ್ರಿಬ್‌ನಿಂದ ಯಹೂದಿಗಳ ಪ್ರಾಬಲ್ಯ ಹೊರಟು ಹೋಯಿತು ಹಾಗೂ ಔಸ್-ಖಝ್ರುಜ್ ಗೋತ್ರಜರು ಪ್ರಬಲರಾದರು. ಮದೀನದ ಅನ್ಸಾರರು ಅವರದೇ ಸಂತಾನವಾಗಿದ್ದಾರೆ.

ಅತಿಥಿ ಸತ್ಕಾರ

ಅನ್ಸಾರರು ಸ್ವಭಾವತಃ ಸ್ನೇಹಜೀವಿಗಳೂ ಸಜ್ಜನರೂ ವಿಶಾಲ ಮನಸ್ಕರೂ ಅತಿಥಿ ಸತ್ಕಾರಿಗಳೂ ಆಗಿದ್ದರು. ಇಸ್ಲಾಮ್ ಅವರ ಆ ಸದ್ಗುಣಗಳನ್ನು ಇನ್ನಷ್ಟು ಪ್ರತಿಬಿಂಬಿಸಿತು. ಸತ್ಯವನ್ನು ಸ್ವೀಕರಿಸಲು ಅವರು ಮೊದಲಿಂದಲೇ ಸರ್ವಸನ್ನದ್ಧರಾಗಿದ್ದರಷ್ಟೇ. ಸತ್ಯದ ಕರೆಯು ಕಿವಿಗೆ ಸೋಂಕುತ್ತಲೇ ಅದು ಅವರ ಹೃದಯದಲ್ಲಿ ಮನೆ ಮಾಡಿತು. ಇಸ್ಲಾಮಿನ ಸಂದೇಶವನ್ನು ಅವರು ಮಕ್ಕಾವಾಸಿಗಳಂತೆ ತಿರಸ್ಕರಿಸಲಿಲ್ಲ. ಬದಲಾಗಿ ಸತ್ಯವನ್ನು ಅವರು ಮೊದಲೇ ನಿರೀಕ್ಷಿಸುತ್ತಿದ್ದವರಂತೆ ತಕ್ಷಣವೇ ಅಂಗೀಕರಿಸಿದರು. ಮೊದಲ ಮತ್ತು ಎರಡನೆಯ ಅಕಬಾ ಒಪ್ಪಂದಗಳು ನಡೆದ ಬೆನ್ನಿಗೇ ಔಸ್ ಮತ್ತು ಖಝ್ರಜ್ ಗೋತ್ರಗಳಲ್ಲಿ ಇಸ್ಲಾಮಿನ ಸಂದೇಶಪ್ರಚಾರವು ಆರಂಭಗೊಂಡಿತ್ತು. ಈಗ ಅಲ್ಲಾಹನ ಸಂದೇಶವಾಹಕರ ಆಗಮನ ದಿಂದ ಯಹೂದಿಯರ ಹೊರತು ಸಕಲ ಮದೀನವಾಸಿಗಳೂ ಸತ್ಯವಿಶ್ವಾಸ ಸ್ವೀಕರಿಸಿದರು. ಅನ್ಸಾರರು ನಿಜಾರ್ಥದಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರ ಪಾಲಿಗೆ ಸಹಾಯಕರಾದರು. ಇಸ್ಲಾಮಿನ ಸೇವೆಗಾಗಿ ಅವರು ಜೀವ-ಸೊತ್ತುಗಳನ್ನು ಅರ್ಪಿಸಲು ಹಿಂದೆ ಮುಂದೆ ನೋಡಲಿಲ್ಲ. ಮಕ್ಕಾದ ಮರ್ದಿತ ಇಸ್ಲಾಮ್ ಮದೀನಕ್ಕೆ ಬಂದು ವಿಜಯಿಯಾಗಿ ಮಾರ್ಪಟ್ಟಿತು. ವಿವಶತೆ ಮತ್ತು ಅಸಹಾಯಕತೆಯ ಕಾಲವು ಕಳೆದು ಹೋಯಿತು. ಇನ್ನು ವಿಜಯ, ದೇವ ಸಹಾಯ ಮತ್ತು ಇತರರ ಮೇಲೆ ಪ್ರಭಾವ ಬೀರುವ ಯುಗದ ಆರಂಭ.

ಮುಹಾಜಿರರು ಮದೀನಕ್ಕಾಗಮಿಸಿದಾಗ ಎಲ್ಲ ರೀತಿಯಿಂದಲೂ ಕಂಗಾಲಾಗಿದ್ದರು. ಬರಿಗೈಯಲ್ಲಿ ಬಂದಿದ್ದರು. ಉಪಜೀವನದ ಚಿಂತೆಯು ಅವರ ಮುಖಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಇಸ್ಲಾಮ್ ಸ್ವೀಕರಿಸಿದಾಗಿನಿಂದ ಅವರಿಗೆ ನೆಮ್ಮದಿಯೆಂಬುದು ಮರೀಚಿಕೆ ಯಾಗಿತ್ತು. ಮಕ್ಕಾವಾಸಿಗಳ ಅಕ್ರಮ-ದೌರ್ಜನ್ಯಗಳು ಅವರ ಜೀವನದ ಸಕಲ ಸಂತೋಷ ಗಳನ್ನು ಕಸಿದಿದ್ದುವು. ತಮ್ಮವರು ಪರರೆನ್ನದೆ ಎಲ್ಲರೂ ಅವರ ಶತ್ರುಗಳಾಗಿದ್ದರು, ಅವರ ರಕ್ತದಾಹಿಗಳಾಗಿದ್ದರು. ಮಕ್ಕಾವಾಸಿಗಳು ಒಂದು ರೀತಿಯಲ್ಲಿ ಸಹಾಬಿಗಳ ಮೇಲೆ ದಿಗ್ಬಂಧನ ವನ್ನೇ ಹೇರಿಬಿಟ್ಟಿದ್ದರು. ಲೌಕಿಕ ಅನುಗ್ರಹಗಳ ದಾರಿಯು ಅವರ ಪಾಲಿಗೆ ಬಹುತೇಕ ಮುಚ್ಚಲ್ಪಟ್ಟಿತ್ತು. ಅವರು ಮಕ್ಕಾ ನಗರದಿಂದ ಬರಿಗೈಯಲ್ಲೇ ಹೊರಟಿದ್ದರು. ಕೆಲವರ ಬಳಿಯಂತೂ ಸರಿಯಾಗಿ ಮೈಮುಚ್ಚಲು ಬಟ್ಟೆಯೂ ಇದ್ದಿರಲಿಲ್ಲ. ಪರ ಊರಲ್ಲಿ

ಬರಿಗೈಯಲ್ಲಿರುವುದೆಂದರೆ ಇನ್ನೂ ಹೆಚ್ಚಿನ ಸಂಕಷ್ಟಕ್ಕೆ ದಾರಿ ಮಾಡಿ ಕೊಟ್ಟಂತಾಗುತ್ತದೆ. ಆದರೆ ಅನ್ಸಾರರ ಸದ್ವರ್ತನೆಯು ಮುಹಾಜಿರರನ್ನು ನಿರ್ಗತಿಕರಾಗಿದ್ದು ಬಿಡಲು ಅವಕಾಶ ನೀಡಲಿಲ್ಲ. ತಮ್ಮ ಈ ಪರದೇಸಿ ಸಹೋದರರಿಗೆ ಎಷ್ಟು ಸಹಾಯ ಮಾಡಲು ಸಾಧ್ಯವಿತ್ತೋ ಅಷ್ಟನ್ನೂ ಮಾಡಿದರು.

ಈ ಜಗತ್ತು ಕಾರ್ಯಕಾರಣ ಜಗತ್ತಾಗಿದೆ. ಅಲ್ಲಾಹನು ಜೀವನವನ್ನು ಮುಂದುವರಿಸಿಕೊಂಡು ಹೋಗಲು ಸಂಪನ್ಮೂಲಗಳನ್ನು ಒದಗಿಸಿಕೊಟ್ಟಿದ್ದಾನೆ. ಆ ಸಂಪನ್ಮೂಲ, ಮಾಧ್ಯಮ ಮತ್ತು ಸಂಬಂಧಗಳನ್ನು ಬಳಸದೆ ನಾಗರಿಕ ಸಮಾಜದಲ್ಲಿ ಮಾನವನಿಗೆ ಜೀವಿಸಲು ಸಾಧ್ಯವಿಲ್ಲ. ಮಾನವರಿಗೆ ಹೆಜ್ಜೆ ಹೆಜ್ಜೆಗೂ ಪರಸ್ಪರ ಸಹಾಯ-ಸಹಕಾರ ಮತ್ತು ಸಹಾನುಭೂತಿಯ ಅಗತ್ಯವಿರುತ್ತದೆ. ಯಾವೊಬ್ಬನೂ ಈ ಜಗತ್ತಿನಲ್ಲಿ ಒಬ್ಬಂಟಿಯಾಗಿ ಬದುಕಲಾರ. ಯಾವುದಾದರೊಂದು ರೀತಿಯಲ್ಲಿ ಇತರರೊಡನೆ ಸಂಪರ್ಕವನ್ನು ಇರಿಸಲೇ ಬೇಕಾಗುತ್ತದೆ. ಎಲ್ಲಿಯ ವರೆಗೆಂದರೆ ಸನ್ಯಾಸವೂ ಲೌಕಿಕ ಸಂಬಂಧದಿಂದ ಸಂಪೂರ್ಣ ಮುಕ್ತವಾಗಿರುವುದಿಲ್ಲ.

ಪ್ರವಾದಿವರ್ಯರು(ಸ) ವಾಸ್ತವಿಕತೆಯನ್ನು ಚೆನ್ನಾಗಿ ಅರಿತಿದ್ದರು. ಮುಹಾಜಿರರ ಬಡತನ ಮತ್ತು ಸಂಕಷ್ಟವು ಅವರನ್ನು ಚಿಂತಿತರನ್ನಾಗಿ ಮಾಡಿತ್ತು. ಅದೇ ವೇಳೆ ಅನ್ಸಾರರು ತಮ್ಮ ಮುಹಾಜಿರ್ ಸಹೋದರರೊಡನೆ ಸಹಾನುಭೂತಿ ತೋರಲು ಹಿಂದೇಟು ಹಾಕಲಾರರು ಎಂಬುದನ್ನೂ ಪ್ರವಾದಿವರ್ಯರು(ಸ) ಅರಿತಿದ್ದರು. ಅಲ್ಲಾಹನು ಇಸ್ಲಾಮಿನ ಸೇವೆಗಾಗಿ ಅನ್ಸಾರರ ಹೃದಯಗಳನ್ನು ಸಂಪೂರ್ಣ ತೆರೆದಿರಿಸಿದ್ದಾನೆ. ಮಕ್ಕಾವಾಸಿಗಳಂತೆ ಇವರ ಹೃದಯಗಳಲ್ಲಿ ಸಂಕುಚಿತತೆ ಎಳ್ಳಷ್ಟೂ ಇಲ್ಲ. ಅನ್ಸಾರರು ದೇವಸಂದೇಶವಾಹಕರ ಸೇವೆಗೆ ಕಟಿಬದ್ಧರಾಗಿದ್ದರು. ಪ್ರವಾದಿವರ್ಯರು(ಸ) ಅನ್ಸಾರ್ ಮತ್ತು ಮುಹಾಜಿರರ ನಡುವೆ ಸಹೋದರತೆಯನ್ನು ಸ್ಥಾಪಿಸಿದರು. ಅವರೊಡನೆ ಪ್ರೀತಿಪೂರ್ವಕ "ಇವರು ನಿಮ್ಮ ಸಹೋದರರು" ಎಂದು ಮುಹಾಜಿರರೆಡೆಗೆ ತೋರಿಸುತ್ತಾ ಹೇಳಿದರು.

ತರುವಾಯ ಅವರು ಮುಹಾಜಿರರ ಪೈಕಿ ಇಬ್ಬರನ್ನು ಮತ್ತು ಅನ್ಸಾರರ ಪೈಕಿ ಇಬ್ಬರನ್ನು ಪ್ರತ್ಯಪ್ರತ್ಯೇಕವಾಗಿ ಕರೆದು, "ಇವರು ಮತ್ತು ನೀವು ಸಹೋದರರು" ಎನ್ನತೊಡಗಿದರು. ಹಿಗೆ ಅನ್ಸಾರ್ ಮತ್ತು ಮುಹಾಜಿರರ ನಡುವೆ ಸಹೋದರ ಸಂಬಂಧ ಸ್ಥಾಪಿತವಾಯಿತು.

ಅನ್ಸಾರರು ಮುಹಾಜಿರರೊಡನೆ ಒಡಹುಟ್ಟಿದ ಸಹೋದರರಂತೆ ವ್ಯವಹರಿಸಿದರು. ಮಾತ್ರವಲ್ಲ, ಅದಕ್ಕಿಂತಲೂ ಮಿಗಿಲಾಗಿ ಪ್ರವಾದಿವರ್ಯರ(ಸ) ಆದೇಶವನ್ನು ಪಾಲಿಸಿದರು. ಅವರು ಮುಹಾಜಿರರನ್ನು ತಮ್ಮೊಡನೆ ಕರೆದುಕೊಂಡು ಹೋಗಿ ತಮ್ಮ ಸಂಪತ್ತಿನಿಂದ ಸರಿ ಅರ್ಧಪಾಲು ಮಾಡಿ ಅವರಿಗೆ ನೀಡುತ್ತಿದ್ದರು. ಕೆಲವು ಅನ್ಸಾರರಂತೂ ತಮ್ಮ ಇಬ್ಬರು ಹೆಂಡಿರಲ್ಲಿ ಒಬ್ಬಾಕೆಗೆ ತಲಾಕ್ ನೀಡಿ ಮುಹಾಜಿರ್ ಸಹೋದರನಿಗೆ ಒಪ್ಪಿಸಿ ಬಿಡಲೂ ಸಿದ್ಧರಾದರು. ಮಾನವೇತಿಹಾಸದಲ್ಲಿ ಇಂತಹ ಹಿತಚಿಂತನೆ, ಸಹಾನುಭೂತಿ, ವಿಶಾಲ ಮನಸ್ಕತೆ ಮತ್ತು ಅತಿಥಿ ಸತ್ಕಾರಗಳಿಗೆ ಸಾಟಿಯಾದ ಬೇರೆ ಘಟನೆ ಸಿಗಲು ಸಾಧ್ಯವೇ ಇಲ್ಲ.

ಈ ಜಗತ್ತಿನಲ್ಲಿ ಮಾನವರು ಸದಾ ಸ್ವಾರ್ಥ ಮತ್ತು ಲಾಭವನ್ನು ಬಯಸುವವರಾಗಿರುತ್ತಾರೆ. ಒಡಹುಟ್ಟಿದ ಸಹೋದರರೂ ಪರಸ್ಪರ ಕುತಂತ್ರ ಮತ್ತು ಕೃತಿಮತೆಯನ್ನು ತೋರುತ್ತಾರೆ. ಪ್ರತಿಯೊಬ್ಬನೂ ಇತರರ ಲಾಭ-ನಷ್ಟಗಳಿಗಿಂತ ತನ್ನ ಲಾಭ-ನಷ್ಟಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾನೆ. ತ್ಯಾಗ ಬಲಿದಾನದಲ್ಲಿಯೂ ಲೌಕಿಕವಾದಿಗಳು ಹೆಸರು, ಖ್ಯಾತಿ, ಜನಮನ್ನಣೆ ಇತ್ಯಾದಿ ಯಾವುದಾದರೊಂದು ಲಾಭವನ್ನು ದೃಷ್ಟಿಯಲ್ಲಿಸಿರುತ್ತಾರೆ. ತನ್ನ ಬಗ್ಗೆ ಇತರರು ಈ ವ್ಯಕ್ತಿ ಕೊಡುಗೈ ದಾನಿಯಾಗಿದ್ದಾನೆ, ತ್ಯಾಗ ಬಲಿದಾನಕ್ಕೆ ಹಿಂಜರಿಯದವನು, ಅನ್ಯರಿಗಾಗಿ ಇಂತಿಂತಹ ಸಹಾಯ ಮಾಡುತ್ತಾನೆ ಎಂದು ಪ್ರಶಂಸಿಸಲಿ ಎಂದು ಆಶಿಸುತ್ತಿರುತ್ತಾನೆ. ಅದೇ ರೀತಿ ಯಾರೊಂದಿಗಾದರೂ ಸದ್ವರ್ತನೆ ತೋರಿದರೂ ಅದರ ಹಿಂದೆ ನನಗೆಲ್ಲಾದರೂ ಸಂಕಷ್ಟ ಎರಗಿ ಬಿಟ್ಟರೆ ಈತ ನನಗೆ ಸಹಾಯ ಮಾಡಬಹುದೆಂಬ ಸ್ವಾರ್ಥವನ್ನೂ ಖಂಡಿತ ಹೊಂದಿರುತ್ತಾನೆ. ಆದರೆ ಅನ್ಸಾರರ ತ್ಯಾಗ ಬಲಿದಾನವು ನಿಷ್ಕಳಂಕತೆ ಮತ್ತು ಸತ್ಯಸಂಧತೆಯಿಂದ ಕೂಡಿದ್ದು ಅದರಲ್ಲಿ ಯಾವುದೇ ರೀತಿಯ ಸ್ವಾರ್ಥವಿರಲಿಲ್ಲ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ(ಸ) ಮೇಲಿನ ಪ್ರೀತಿಯು ಅವರನ್ನು ಈ ರೀತಿ ಮಾಡಿಸುತ್ತಿತ್ತು. ಅವರು ದೇವ ಸಂದೇಶವಾಹಕರ(ಸ) ಆದೇಶ ಪಾಲನೆಯಲ್ಲಿ ಪೈಪೋಟಿ ನಡೆಸುತ್ತಿದ್ದರು.

ಸಹೋದರತೆಯ ಸ್ಥಾಪನೆಯಿಂದ, ಅಬ್ದುರ್ರಹ್ಮಾನ್ ಬಿನ್ ಔಫ್‌ರವರು ಸಅದ್ ಬಿನ್ ರಬೀಅ್‌ರ ಸಹೋದರರೆಂದು ಘೋಷಿಸಲ್ಪಟ್ಟರು. ಸಅದ್ ಹೇಳಿದರು, "ನನಗೆ ಇಬ್ಬರು ಹೆಂಡಿರಿದ್ದಾರೆ. ಅವರ ಪೈಕಿ ಯಾರು ನಿಮಗೆ ಇಷ್ಟವೋ ಆಕೆಗೆ ನಾನು ತಲಾಕ್ ನೀಡುತ್ತೇನೆ. ನೀವು ಆಕೆಯೊಂದಿಗೆ ವಿವಾಹವಾಗಿರಿ."

ಅಬ್ದುರ್ರಹ್ಮಾನ್ ಬಿನ್ ಔಫ್ ಕೃತಜ್ಞತೆ ಸಲ್ಲಿಸುತ್ತಾ ಆ ಪ್ರಸ್ತಾಪವನ್ನು ನಯವಾಗಿ ತಿರಸ್ಕರಿಸಿದರು. ತರುವಾಯ ಸಅದ್‌ರವರು ತಮ್ಮ ಮನೆಗೆ ಅವರನ್ನು ಕರಕೊಂಡು ಹೋದರು ಮತ್ತು ಅಲ್ಲಿರುವ ವಸ್ತುಗಳನ್ನೆಲ್ಲ ತೋರಿಸಿ, "ಇವುಗಳಲ್ಲಿ ಅರ್ಧ ಪಾಲನ್ನು ನೀವು ತೆಗೆದುಕೊಳ್ಳಿ" ಅಂದರು. ಅದಕ್ಕೆ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಪ್ರತಿಕ್ರಿಯೆ ಹೀಗಿತ್ತು,

"ಸಹೋದರಾ! ನಿಮ್ಮ ಸಂಪತ್ತು ನಿಮಗಿರಲಿ. ನನಗೆ ಸಂತೆಯ ದಾರಿ ತೋರಿಸಿರಿ, ಸಾಕು."

ಅವರಿಗೆ ಸಅದ್, ಕೈನುಕಾಅ್‌ನ ಸಂತೆಯ ದಾರಿಯನ್ನು ತೋರಿಸಿದರು. ಅಬ್ದುರ್ರಹ್ಮಾನ್ ಬಿನ್ ಔಫ್‌ರವರು ಅಲ್ಲಿಗೆ ತೆರಳಿ ಮೊದಲು ಗಿಣ್ಣು ಖರೀದಿಸಿದರು. ಅದನ್ನು ಮಾರಿ ಲಾಭ ಬಂದಾಗ, ಅದರಿಂದ ಇತರ ವಸ್ತುಗಳನ್ನು ಒಂದೊಂದಾಗಿ ಖರೀದಿಸಿದರು. ಹೀಗೆ ಅವರ ವ್ಯಾಪಾರವು ಪ್ರಗತಿ ಹೊಂದತೊಡಗಿತು. ಅವರು ಪ್ರಾಮಾಣಿಕರಾಗಿದ್ದರು, ಪರಿಶ್ರಮಿಯಾಗಿದ್ದರು, ಜತೆಗೆ ಸತ್ಯಸಂಧರೂ ಆಗಿದ್ದರು. ಒಬ್ಬರೊಡನೆ ವ್ಯಾಪಾರ ಕುದುರಿಸಿದ ಬಳಿಕ ಮತ್ತೆ ಮಾತು ತಪ್ಪುವುದಿಲ್ಲ, ಅದರಲ್ಲಿ ಅವರಿಗೆ ಎಷ್ಟೇ ನಷ್ಟವಾದರೂ ಸರಿಯೆ.

ಅಲ್ಲಾಹನು ಅಬ್ದುರ್ರಹ್ಮಾನ್ ಬಿನ್ ಔಫ್‌ರ ವ್ಯಾಪಾರದಲ್ಲಿ ಸಮೃದ್ಧಿಯನ್ನುಂಟು ಮಾಡಿದನು. ಅವರ ವ್ಯಾಪಾರ ವಹಿವಾಟು ವಿಸ್ತರಿಸುತ್ತಲೇ ಹೋಯಿತು. ಎಲ್ಲಿಯವರೆಗೆಂದರೆ, ಹೊರನಾಡಿನಿಂದ ಏಳುನೂರು ಒಂಟೆಗಳಲ್ಲಿ ಸರಕುಗಳು ಮದೀನಕ್ಕೆ ತರುವಷ್ಟು ಸಮೃದ್ಧಿ ಹೊಂದಿತು. ಈ ಮೂಲಕ ಅಲ್ಲಾಹನು ಅನ್ಸಾರರಿಗೂ ಒಂದು ಪಾಠವನ್ನು ಬೋಧಿಸಿದನು- ಮುಹಾಜಿರರಿಗೆ ನೀವು ಮಾಡುತ್ತಿರುವ ಸಹಾಯಕ್ಕಾಗಿ ಎಂದಿಗೂ ಅಹಂಭಾವಪಡಬಾರದು. ನೀವು ಈ ಸಹಕಾರಕ್ಕೆ ಮುಂದಾಗಿ ಪುಣ್ಯ ಸಂಪಾದಿಸಲು ವ್ಯವಸ್ಥೆ ಮಾಡಿರುವುದು ನಿಮ್ಮ ಮೇಲೆ ನನ್ನ ಕೃಪೆಯಾಗಿದೆ. ನಿಮ್ಮ ಸಹಾಯವು ಯಾರಿಗೂ ಒದಗದೆಯೇ ನಾನು ಮುಹಾಜಿರರಿಗೆ ಸಂಪತ್ತು ಗಳಿಸಲು ವ್ಯವಸ್ಥೆ ಮಾಡಬಲ್ಲೆ ಎಂದೂ ನಿಮಗೆ ತೋರಿಸಲು ಶಕ್ತನಾಗಿದ್ದೇನೆ.

ಅನ್ಸಾರರು ಸ್ವಭಾವತಃ ಸಜ್ಜನರಾಗಿದ್ದರೆಂಬುದು ಸ್ಪಷ್ಟ. ಅವರು ಮುಹಾಜಿರರ ಮೇಲೆ ಉಪಕಾರ ಭಾರವಿರಿಸಲಿಲ್ಲ. ಮಾತ್ರವಲ್ಲ, ತಮ್ಮ ಸಹಾನುಭೂತಿಗೆ ಪ್ರತಿಫಲವಾಗಿ ಏನನ್ನೂ ಬಯಸಲಿಲ್ಲ. ಅವರ ಸಹಾನುಭೂತಿಯು ಸ್ವಾರ್ಥವನ್ನು ಮೀರಿ ನಿಂತಿತ್ತು. ಅವರ ಸೇವೆಯೂ ಅನುಪಮ ಮತ್ತು ನಿಸ್ಪೃಹವಾಗಿತ್ತು. ಅಲ್ಲಾಹನ ಸಂದೇಶವಾಹಕರ ಆದೇಶ ಪಾಲನೆಗಾಗಿ ಅವರು ಅಷ್ಟೆಲ್ಲಾ ಮಾಡುತ್ತಿದ್ದರು. ಅಲ್ಲಾಹನು ಅವರ ಆ ಒಳಿತುಗಳನ್ನು ಅಂಗೀಕರಿಸಿದನು. ಆ ಮಂದಿ ಇಸ್ಲಾಮೀ ಇತಿಹಾಸದಲ್ಲಿ 'ಪ್ರವಾದಿಯವರ ಸಹಾಯಕರು' ಎಂದು ಗುರುತಿಸಲ್ಪಡುತ್ತಾರೆ. ಭೂಮಿ ಮಾತ್ರವಲ್ಲ, ಆಕಾಶಗಳಲ್ಲೂ ಅವರ ಸದ್ಗುಣಗಳ ಪ್ರಶಂಸಾ ಗೀತೆಯು ಈಗಲೂ ಪ್ರತಿಧ್ವನಿಸುತ್ತಿದೆ.

ಕುರೈಶರ ಸಿದ್ಧತೆಗಳು

ಮುಸ್ಲಿಮರನ್ನು ಅಬಿಸೀನಿಯ(ಇತಿಯೋಪಿಯ)ದ ವರೆಗೂ ಹಿಂಬಾಲಿಸಿಕೊಂಡು ಹೋಗಿದ್ದ ಕುರೈಶ್ ಸತ್ಯನಿಷೇಧಿಗಳ ನರನಾಡಿಗಳಲ್ಲಿ ಇಸ್ಲಾಮಿನ ಕುರಿತು ವೈರ ತುಂಬಿ ಹರಿದಾಡುತ್ತಿತ್ತು. ಹೀಗಿರುತ್ತಾ ಅನಾಥಮುತ್ತು(ಸ) ಮತ್ತು ಅವರ ಸಂಗಾತಿಗಳು ಮದೀನ ದಲ್ಲಿ ಕ್ಷೇಮವಾಗಿ ಬಾಳುವುದನ್ನು ಸಹಿಸಿಯಾರೇ? ಅವರು ಷಡ್ಯಂತ್ರ ರಚಿಸಲಾರಂಭಿಸಿದರು ಮತ್ತು ಮದೀನದ ಮೇಲೆ ಆಕ್ರಮಣದ ಸಿದ್ಧತೆಯನ್ನೂ ಮಾಡತೊಡಗಿದರು. ಅವರು ತಮ್ಮ ಗೂಢಚರರನ್ನು ಮದೀನಕ್ಕೆ ಕಳುಹಿಸಿದ್ದರು. ಆ ಗೂಢಚರರು ಮುಸ್ಲಿಮರ ಚಲನವಲನಗಳ ವಿವರವನ್ನು ಮಕ್ಕಾ ನಗರಕ್ಕೆ ರವಾನಿಸುತ್ತಿದ್ದರು.

ಪ್ರವಾದಿವರ್ಯರು(ಸ) ವಲಸೆ ಹೋದ ಬಳಿಕ ಇನ್ನು ಮಕ್ಕಾ ನಗರದಲ್ಲಿ ಮುಸ್ಲಿಮರು ಆಶ್ರಯ ಕಳಕೊಂಡರು. ಮುಹಮ್ಮದ್(ಸ) ಹೊರಟು ಹೋದ ಮೇಲೆ ಮುಸ್ಲಿಮರ ಸ್ಥೈರ್ಯ ಉಡುಗಿ ಹೋಯಿತು, ಮುಹಮ್ಮದ್(ಸ) ಬಿನ್ ಅಬ್ದುಲ್ಲಾ ತಾನೇ ಈ ಜನರಲ್ಲಿ ತ್ಯಾಗ-ಬಲಿದಾನ ಮತ್ತು ಸಮರ್ಪಣೆಯ ಆತ್ಮವನ್ನೂದುತ್ತಿದ್ದುದು, ಅವರೇ ಇಲ್ಲಿಂದ ಹೊರಟು ಹೋದ ಮೇಲೆ ಈ ಬಡಪಾಯಿಗಳು ಇನ್ನು ಯಾರ ಆಧಾರದಲ್ಲಿ ನಮ್ಮ ದೌರ್ಜನ್ಯಗಳನ್ನು ಎದುರಿಸಿಯಾರು, ಸರದಾರನೇ ಇಲ್ಲವೆಂದ ಮೇಲೆ ಅವನ ಸೇನೆಯು ಎಷ್ಟು ಹೊತ್ತು ರಣರಂಗದಲ್ಲಿ ಕಾಲೂರಿ ನಿಂತೀತು ಎಂದೆಲ್ಲ ಕುರೈಶ್ ಸತ್ಯನಿಷೇಧಿಗಳು ಭಾವಿಸಿದ್ದರು.

ಆದರೆ ಅವರ ನಿರೀಕ್ಷೆಗಳೆಲ್ಲವೂ ಹುಸಿಯಾದುವು. ಹೆಚ್ಚಿನ ಮುಸ್ಲಿಮರು ತಮ್ಮ ಆಸ್ತಿ-ಪಾಸ್ತಿಗಳೆಲ್ಲವನ್ನೂ ತೊರೆದು ಮದೀನಕ್ಕೆ ಹೊರಟುಹೋಗಿದ್ದರು. ಹಿಜ್ರತೆ (ವಲಸೆ) ಎಂಬ ಪವಿತ್ರ ಕರ್ಮವನ್ನು ಆಚರಣೆಗೆ ತರುವಾಗ ಅವರು ತಮ್ಮ ಮನೆ-ಮಠ, ಸಂಪತ್ತು-ಆಸ್ತಿ ಮಾತ್ರವಲ್ಲ, ಪತ್ನಿ-ಮಕ್ಕಳು ಹಾಗೂ ಬಂಧು-ಮಿತ್ರರನ್ನೂ ಪರಿಗಣಿಸಿರಲಿಲ್ಲ. ಅಲ್ಲಾಹನ ಮಾರ್ಗದಲ್ಲಿ ಎಲ್ಲ ರೀತಿಯ ತ್ಯಾಗ-ಬಲಿದಾನಗಳನ್ನೂ ಸಸಂತೋಷ ಸಹಿಸಿದರು. ಯಾವುದೇ ಸಂಬಂಧವೂ ಅವರನ್ನು ಆ ಸತ್ಕರ್ಮದಿಂದ ಹಿಂಜರಿಸಲಿಲ್ಲ. ಸರ್ವ ಸಂಬಂಧವನ್ನೂ ಸಕಲ ವಸ್ತುಗಳನ್ನೂ ತೊರೆದು ಅವರು ಮನೆಯಿಂದ ಹೊರಟು ಹೋಗಿದ್ದರು. ಇನ್ನು ಮಕ್ಕಾ ನಗರದಲ್ಲಿ ಉಳಿದಿದ್ದ ಮುಸ್ಲಿಮರೂ ದೃಢತೆ ಮತ್ತು ಸ್ಥೈರ್ಯವನ್ನು ಪ್ರದರ್ಶಿಸಿದರು. ಸತ್ಯನಿಷೇಧಿಗಳು ಅವರನ್ನು ಹೊಡೆದರು, ಬಡಿದರು, ಕಾರಾಗೃಹ ಶಿಕ್ಷೆ ನೀಡಿದರು, ಬಿಸಿ

ಬಂಡೆಗಳ ಮೇಲೆ ಮಲಗಿಸಿದರು ಮತ್ತು ಕೆಂಡಗಳ ಮೇಲೆ ಎಳೆದಾಡಿ ಅವರ ಮೈಯ ಚರ್ಮವನ್ನು ಕರಟಿಸಿದರು, ಆದರೆ ಸಹಾಬಿಗಳ ಸತ್ಯವಿಶ್ವಾಸವು ಯಾವುದೇ ರೀತಿಯಲ್ಲೂ ಕಡಿಮೆಯಾಗುವ ಲಕ್ಷಣ ಕಾಣಲಿಲ್ಲ. ಬದಲಾಗಿ ಹಿಂಸೆ, ಮರ್ದನ, ದಬ್ಬಾಳಿಕೆ ಹೆಚ್ಚಿದಷ್ಟೂ ಮುಸ್ಲಿಮರ ವಿಶ್ವಾಸವೂ ಹೆಚ್ಚುತ್ತಿತ್ತು. ವಾಸ್ತವದಲ್ಲಿ ಆ ಮುಸ್ಲಿಮರು ಮುಹಮ್ಮದರ್ರ ಸೂಲುಲ್ಲಾಹ್‌ರ(ಸ) ನೈಜ ಅನುಯಾಯಿ ಗಳೂ ಸರ್ವಲೋಕಗಳ ಪಾಲಕ ಪ್ರಭುವಿನ ನೈಜ ದಾಸರೂ ಆಗಿದ್ದರು.

ಅಷ್ಟೇ ಅಲ್ಲ, 'ಮುಹಮ್ಮದ್(ಸ) ನಿಮ್ಮ ಜತೆಯಲ್ಲಿ ಇದ್ದರೂ ಇಲ್ಲದಿದ್ದರೂ ಅಥವಾ ಈ ಲೋಕಕ್ಕೇ ವಿದಾಯ ಕೋರಿದರೂ ನಿಮ್ಮ ವಿಶ್ವಾಸದಲ್ಲಿ ಕಿಂಚಿತ್ತೂ ಕೊರತೆಯುಂಟಾಗ ಬಾರದು. ಏಕೆಂದರೆ ನೀವು ಅಲ್ಲಾಹನನ್ನು ಆರಾಧಿಸುವವರಾಗಿದ್ದೀರಿ ಮತ್ತು ಅಲ್ಲಾಹ ನಾದರೋ ಸ್ವಯಂ ಜೀವಂತನೂ ಶಾಶ್ವತನೂ ಆಗಿದ್ದಾನೆ' ಎಂಬ ಶಿಕ್ಷಣವನ್ನು ಸ್ವತಃ ದೇವಸಂದೇಶವಾಹಕರೇ(ಸ) ತಮ್ಮ ಅನುಯಾಯಿಗಳಿಗೆ ನೀಡಿದ್ದಾರೆ. ಹೀಗೆ ಮುಸ್ಲಿಮರ ದೃಢಚಿತ್ತತೆ ಮತ್ತು ಸಹನೆ-ಸ್ಥೈರ್ಯವನ್ನು ಕಂಡು ಕುರೈಶ್ ಸತ್ಯನಿಷೇಧಿಗಳು ಮತ್ತಷ್ಟು ಸಿಡಿಮಿಡಿಗೊಳ್ಳುತ್ತಿದ್ದರು. ಇಸ್ಲಾಮಿನ ಮೇಲಿನ ಪ್ರೀತಿಯು ಮುಹಮ್ಮದ್ ವಲಸೆ ಹೋದ ಮೇಲೂ ಕಡಿಮೆಯಾಗಿಲ್ಲವಲ್ಲ! ಹೌದು, ಮಕ್ಕಾ ನಗರದಲ್ಲೇ ಉಳಿದಿದ್ದ ಮುಸ್ಲಿಮರು ವಿಶ್ವಾಸ ಶ್ರದ್ಧೆ ಮತ್ತು ದೇವನ ಮೇಲಿನ ಭರವಸೆಗೆ ಸ್ವಯಂ ನಿದರ್ಶನರಾಗಿದ್ದರು.

ಮದೀನದಲ್ಲಿರುವ ಗೂಢಚಾರರಿಂದ ಕುರೈಶ್ ಸತ್ಯನಿಷೇಧಿಗಳಿಗೆ ಮಾಹಿತಿ ದೊರೆ ಯುತ್ತದೆ- ಮದೀನದಲ್ಲಿ ಇಸ್ಲಾಮ್ ಬಹಳ ತೀವ್ರಗತಿಯಲ್ಲಿ ಹರಡುತ್ತಿದೆ. ಹಿಜ್ರತ್‌ಗೆ ಮುಂಚೆಯೇ ಅಲ್ಲಿನ ಬಹಳಷ್ಟು ಮಂದಿ ಇಸ್ಲಾಮ್ ಸ್ವೀಕರಿಸಿದ್ದರು. ಹಿಜ್ರತ್‌ನ ಬಳಿಕ ವಂತೂ ಈ ಪ್ರಕ್ರಿಯೆಯಲ್ಲಿ ಇನ್ನಷ್ಟು ವೇಗ ಪಡೆಯಿತು. ಗೋತ್ರಕ್ಕೆ ಗೋತ್ರಗಳೇ ಸಾಮೂಹಿಕವಾಗಿ ಸತ್ಯಸ್ವೀಕಾರ ಮಾಡುತ್ತಿವೆ. ಯಹೂದಿಗಳು ಮತ್ತು ಅವರ ಪ್ರಭಾವವಿರುವ ಗೋತ್ರಗಳು ಮಾತ್ರವೇ ಈ ಅನುಗ್ರಹದಿಂದ ವಂಚಿತವಾಗಿವೆ. ಅಷ್ಟೇ ಹೊರತು ಔಸ್ ಮತ್ತು ಖಿಝ್ರುಜ್ ಗೋತ್ರಗಳ ಮನೆಮನೆಗಳಲ್ಲೂ ಇಸ್ಲಾಮಿನ ಜ್ಯೋತಿ ಬೆಳಗುತ್ತಿದೆ. ಮದೀನಾ ನಿವಾಸಿಗಳು ಮತ್ತು ಅನ್ಸಾರಿ ಸರದಾರರುಗಳು ಅಲ್ಲಾಹ್ ಮತ್ತವನ ಸಂದೇಶ ವಾಹಕರ ಅನುಸರಣೆಯ ನೊಗವನ್ನು ತಮ್ಮ ಕೊರಳಿಗೆ ಧರಿಸಿದ್ದಾರೆ.

ಈ ಸುದ್ದಿಯು ಕುರೈಶ್ ಸತ್ಯನಿಷೇಧಿಗಳನ್ನು ಕೆರಳಿಸಿತು. ಅವರು ವಿಪರೀತ ತಲ್ಲಣ ಗೊಂಡರು. ನಿರೀಕ್ಷೆಗೆ ವಿರುದ್ಧವಾಗಿ ಯಾವುದಾದರೂ ಘಟನೆ ಸಂಭವಿಸಿದರೆ ಮಾನವನು ಗಾಬರಿಗೊಳ್ಳುವುದು ಸಹಜ. ಇನ್ನು ಎಲ್ಲರೂ ಸೇರಿ ಸಮಾಲೋಚಿಸಿದರು. ಕೊನೆಗೆ ಒಂದು ತೀರ್ಮಾನಕ್ಕೆ ಬಂದರು. ಮದೀನದಲ್ಲಿ ನಮ್ಮ ವೈರಿಗಳನ್ನು ಶಾಂತಿಯಿಂದಿರಲು ಬಿಡಲಾರೆವು. ಅವರಿಗೆ ಇನ್ನಷ್ಟು ಕಾಲಾವಕಾಶ ದೊರೆತು ಬಿಟ್ಟರೆ ಮತ್ತು ನಮ್ಮ ಕಡೆಯಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗದಿದ್ದರೆ ಇಡೀ ಅರೇಬಿಯದಲ್ಲಿ ಇಸ್ಲಾಮ್ ಹರಡಬಹುದು. ಹಾಗೊಂದು

ವೇಳೆ ಆದರೆ, ನಮ್ಮ ಆರಾಧ್ಯರುಗಳ ಪ್ರಭುತ್ವವೇ ಹೊರಟು ಹೋದೀತು ಮತ್ತು ನಮ್ಮ ಗೋತ್ರ ಮಹಿಮೆಯು ಮಣ್ಣು ಪಾಲಾದೀತು. ಈ ಅವಮಾನವನ್ನು ಯಾವ ರೀತಿಯಲ್ಲೂ ಸಹಿಸಲು ಸಾಧ್ಯವಿಲ್ಲ. ಕುರೈಶ್ ಮನೆತನದ ಗೌರವವನ್ನು ಯಾವ ಬೆಲೆ ತೆತ್ತಾದರೂ ಸಂರಕ್ಷಿಸಬೇಕಾಗಿದೆ. ನಮ್ಮ ಸಂಕಷ್ಟಗಳನ್ನು ದೂರೀಕರಿಸುತ್ತಿರುವ ವಿಗ್ರಹಗಳ ಘನತೆ ಯನ್ನೂ ನಾವು ಮಣ್ಣುಗೂಡಲು ಬಿಡಲಾರೆವು. ಇಂದು ನಮ್ಮ ಬಳಿ ಶಕ್ತಿಯಿದೆ, ಪ್ರತಾಪವಿದೆ, ಪ್ರಭಾವವಿದೆ, ಜನ ಬಲ-ಧನಬಲ ಹಾಗೂ ಹೇರಳ ಆಯುಧ ಬಲವಿದೆ. ಅರೇಬಿಯದ ಇತರ ಗೋತ್ರಗಳು ನಮ್ಮನ್ನು ಬಹಳ ಗೌರವಿಸುತ್ತಾರೆ. ಗುಡ್ಡಗಾಡು ಪ್ರದೇಶದ ಜನರು ನಮ್ಮನ್ನು ತಮ್ಮ ಸರದಾರನೆಂದು ಭಾವಿಸುತ್ತಾರೆ. ಕಅಬಾಲಯದ ನ್ಯಾಸವು ನಮ್ಮ ಕೈಯಲ್ಲಿದೆ. ಸನ್ಆದಿಂದ ತಾಯಿಫ್ ವರೆಗೂ ನಮ್ಮ ನಾಯಕತ್ವವನ್ನು ಅಂಗೀಕರಿಸಲಾಗುತ್ತಿದೆ. ಮುಸ್ಲಿಮರ ಸಂಖ್ಯೆಯೇ ಹೆಚ್ಚು ಇಲ್ಲ. ಈ ಒಂದು ಕಾರಣದಿಂದಲೇ ಅವರ ಧೈರ್ಯವನ್ನು ನಾವು ಉಡುಗಿಸಬಲ್ಲೆವು.

ಯುದ್ಧಕ್ಕೆ ನೆಪ ಹುಡುಕಿದರು

ಕುರೈಶರು ಮದೀನದ ಅತಿ ಶ್ರೀಮಂತ ಸರದಾರನಾದ ಅಬ್ದುಲ್ಲಾ ಬಿನ್ ಉಬೈಗೆ ಸಂದೇಶ ಕಳುಹಿಸುತ್ತಾರೆ. "ಒಂದೋ ನೀವೇ ಸ್ವಯಂ ಧೈರ್ಯ ವಹಿಸಿ ಮುಹಮ್ಮದ್ ರನ್ನು(ಸ) ವಧಿಸಿ ಬಿಡಿ. ಅನ್ಯಥಾ ನಾವು ಮದೀನದ ಮೇಲೆ ಆಕ್ರಮಣ ಮಾಡಿ ನಿಮ್ಮ ಜನಾಂಗವನ್ನು ನಿರ್ಮೂಲನಗೊಳಿಸುತ್ತೇವೆ" ಎಂದು ಎಚ್ಚರಿಸುತ್ತಾರೆ. ಹೀಗೆ ಒಂದೆಡೆ ಕುರೈಶರು ಪ್ರವಾದಿವರ್ಯರನ್ನು(ಸ) ವಧಿಸಲು ಅಬ್ದುಲ್ಲಾ ಬಿನ್ ಉಬೈಯನ್ನು ಹುರಿದುಂಬಿಸು ತ್ತಾರೆ. ಮಾತ್ರವಲ್ಲ, ಎಚ್ಚರಿಕೆಯನ್ನೂ ನೀಡುತ್ತಾರೆ. ಇನ್ನೊಂದೆಡೆ ಅವರ ಯುವಕರ ಗುಂಪುಗಳು ಮದೀನದ ಆಸುಪಾಸಿನಲ್ಲಿ ಸುಳಿದಾಡತೊಡಗುತ್ತವೆ. ಅವರು ಅನ್ಸಾರರ ಹುಲ್ಲುಗಾವಲುಗಳನ್ನು ಹಾಳುಗೆಡಹಿದರು. ಖರ್ಜೂರದ ತೋಟಗಳಿಗೆ ನುಗ್ಗಿ ಮರಗಳನ್ನು ಕಡಿದರು ಹಾಗೂ ಮದೀನದ ಕುರಿಗಾಹಿಗಳಿಂದ ಆಡುಗಳನ್ನು ಕಿತ್ತೊಯ್ದರು. ಈ ಮೂಲಕ ಕುರೈಶರು ಪ್ರವಾದಿ(ಸ) ಮತ್ತು ಅನುಯಾಯಿಗಳ ಶಕ್ತಿಯನ್ನು ಅಂದಾಜಿಸ ಬಯಸಿದ್ದರು... ಒಂದು ವೇಳೆ ಅವರಲ್ಲಿ ಧೈರ್ಯ-ಸ್ಥೈರ್ಯ ಇದ್ದರೆ ಖಂಡಿತ ನಮ್ಮ ಕಿತಾಪತಿಗಳಿಗೆ ಉತ್ತರ ನೀಡುವರು. ಈ ಮೂಲಕ ಯುದ್ಧಕ್ಕೆ ನೆಪವೂ ದೊರೆತಂತಾದೀತು. ಮದೀನದಿಂದ ಹೊರಗೆ ಮುಸ್ಲಿಮರ ಪ್ರಭಾವ ಇಲ್ಲ. ಹಾಗಾಗಿ ಅವರನ್ನು ಒಂದೇ ಪೆಟ್ಟಿಗೆ ಮಣಿಸಬಹುದು...

ಆದರೆ ಕುರೈಶರ ಈ ಕುತಂತ್ರವೂ ಫಲಿಸಲಿಲ್ಲ. ಕೊನೆಗೆ ಅವರು ಮದೀನವನ್ನು ಆಕ್ರಮಿಸುವ ಸಿದ್ಧತೆಯಲ್ಲಿ ತೊಡಗಿದರು. ವಾಸ್ತವದಲ್ಲಿ ಮೊದಲಿನಿಂದಲೇ ಅವರು ಮದೀನದ ಮೇಲೆ ತಮ್ಮ ಸಂಪೂರ್ಣ ಶಕ್ತಿಯೊಂದಿಗೆ ನಿರ್ಣಾಯಕ ಆಕ್ರಮಣ ಮಾಡಬಯಸಿದ್ದರು. ಆದರೆ ಅದಕ್ಕಾಗಿ ಸಾಮಗ್ರಿ-ಸಲಕರಣೆಗಳು ಮತ್ತು ಹಣದ ಅವಶ್ಯಕತೆಯಿತ್ತು. ಇತರರ ನಾಡಿನ ಮೇಲೆ ಆಕ್ರಮಣ ಮಾಡುವುದೆಂದರೆ ಮಕ್ಕಳಾಟವೇನಲ್ಲ. ಈ ಯುದ್ಧವು ಅವರ ಕುಟುಂಬ

ಕಲಹ ಮತ್ತು ಗೋತ್ರ ಸಮರಕ್ಕಿಂತ ತೀರಾ ಭಿನ್ನವಾಗಿದೆ. ಹಾಗಾಗಿ, ಯುದ್ಧದ ಖರ್ಚಿಗಾಗಿ ಅವರೊಂದು ಉಪಾಯ ಹೂಡಿದರು. ಈ ಬಾರಿಯ ವ್ಯಾಪಾರಿ ತಂಡವು ತರುವ ಸರಕುಗಳ ಹಣವು ಯುದ್ಧದ ಖರ್ಚಿಗಾಗಿ ವಿನಿಯೋಗಿಸ ಬೇಕು. ಈ ರೀತಿ ಇಡೀ ಜನಾಂಗವೇ ಯುದ್ಧದಲ್ಲಿ ಪಾಲ್ಗೊಳ್ಳುವಂತಾಗುತ್ತದೆ ಮತ್ತು ಯಾವುದೇ ಒಂದು ಗೋತ್ರದ ಮೇಲೆ ಭಾರ ಬೀಳದು.

ಈ ಸಲಹೆಯನ್ನು ಕಾರ್ಯರೂಪಕ್ಕಿಳಿಸಲಿಕ್ಕಾಗಿ ಕುರೈಶ್ ನಾಯಕರು ಆವೇಶಭರಿತ ಭಾಷಣಗಳನ್ನು ನೀಡಿದರು. ಸೇನಾ ಸಹಾಯಕ್ಕಾಗಿ ಜನರನ್ನು ಹುರಿದುಂಬಿಸಿದರು, "ಸಹೋದರರೇ! ಇದು ನಮ್ಮ ಗೋತ್ರ ಮತ್ತು ನಾಡಿನ ಮರ್ಯಾದೆಯ ವಿಷಯವಾಗಿದೆ. ನಮ್ಮ ಮಟ್ಟಿಗೆ ಇದಕ್ಕಿಂತ ಸೂಕ್ಷ್ಮವಾದ ಸಂದರ್ಭವು ಇನ್ನೆಂದೂ ಎದುರಾಗಲಾರದು. ಮುಸ್ಲಿಮರ ಶಕ್ತಿಯನ್ನು ಮುರಿಯದೆ ಇದ್ದರೆ, ಮುಂದೆ ಅವರು ಪ್ರಾಬಲ್ಯ ಪಡೆದು ನಮ್ಮನ್ನೇ ನಾಶ ಮಾಡಿಬಿಡುವರು. ಆ ದಿನವನ್ನು ಕಾಣಲು ನಾವು ಜೀವಿಸಿರಬೇಕೇ? ಆ ಮುಸ್ಲಿಮರ ಕೈಯಿಂದ ನಮ್ಮ ಲಾತ್, ಹುಬಲ್‌ಗಳು ಧ್ವಂಸವಾಗುವುದನ್ನು ಕೈಕಟ್ಟಿ ನಿಂತು ನೋಡುತ್ತಿರಬೇಕೇ? ನಮ್ಮ ಖಡ್ಗಗಳು ಸದಾ ಕುರೈಶ್ ಘನತೆಯನ್ನು ಎತ್ತಿ ಹಿಡಿದಿವೆ. ನಾವು ನಮ್ಮೆದೆಗಳಲ್ಲಿ ಗಾಯಗಳನ್ನು ಹೊಂದಿಯೂ ಜನಾಂಗದ ಘನತೆಯನ್ನು ಕುಂದ ದಂತೆ ನೋಡಿಕೊಂಡಿದ್ದೇವೆ..."

ಕುರೈಶರು ವಾಕ್ಚಾತುರ್ಯಕ್ಕೆ ಹೆಸರುವಾಸಿಯಾದವರು. ಸ್ಫೋಟಕ ಭಾಷಣಗಳು ಅವರಿಗೆ ಕರಗತವಾಗಿದ್ದುವು. ಯುದ್ಧಕ್ಕಾಗಿ ತಮ್ಮ ಜನಾಂಗವನ್ನು ಎಂತಹ ವಾಕ್ಯಗಳಿಂದ ಉದ್ರೇಕಿಸ ಬಹುದು ಮತ್ತು ಯಾವ ರೀತಿಯ ಪದಗಳು ಅವರ ಸ್ವಾಭಿಮಾನದ ನರಕ್ಕೆ ಚುಚ್ಚಬಹುದು ಎಂಬುದನ್ನು ಕುರೈಶ್ ಸರದಾರರು ಚೆನ್ನಾಗಿ ತಿಳಿದಿದ್ದರು. ಹೀಗೆ ಮಕ್ಕಾದ ಸಕಲ ನಾಗರಿಕರು ತಮ್ಮ ಸಂಪತ್ತನ್ನು ಆ ವ್ಯಾಪಾರಿ ತಂಡಕ್ಕೆ ಅರ್ಪಿಸಿದರು. ವಿಧವೆಯರು ಮತ್ತು ನಿರ್ಗತಿಕ ಮಹಿಳೆಯರು ತಮ್ಮಲ್ಲಿರುವ ಅಲ್ಪ ಸ್ವಲ್ಪ ಆಸ್ತಿಯನ್ನೂ ಆ ವ್ಯಾಪಾರಿ ತಂಡಕ್ಕೆ ನೀಡಿದರು. ತರುವಾಯ ಈ ವ್ಯಾಪಾರಿ ತಂಡವು ಸಿರಿಯದೆಡೆಗೆ ಪ್ರಯಾಣ ಬೆಳೆಸಿತು... ಇನ್ನು ಈ ತಂಡ ಸಿರಿಯದಿಂದ ಮರಳಿ ಬರಲಿ... ನಂತರ ಒಂದೋ ನಾವು, ಇಲ್ಲವೇ ಮುಹಮ್ಮದ್(ಸ) ಮತ್ತವರ ಸಂಗಡಿಗರು! ನೋಡುತ್ತಾ ಇರಿ, ಘನಘೋರ ಯುದ್ಧ ನಡೆಯಲಿದೆ! ಯುದ್ಧಭೂಮಿಯಿಂದೇಳಲಿರುವ ಧೂಳಿನಿಂದ ಇಡೀ ಅರೇಬಿಯವೇ ನಲುಗಿ ಹೋಗಲಿದೆ... ಇದುವರೆಗೆ ಅವರ ಮೇಲೆ ನಾವು ವೈಯಕ್ತಿಕವಾಗಿ ದೌರ್ಜನ್ಯ ಎಸಗುತ್ತಿದ್ದೆವು... ಆದರೆ ಈಗ ಇಡೀ ಜನಾಂಗವು ಒಟ್ಟು ಸೇರಿ ಅವರ ವಿರುದ್ಧ ಯುದ್ಧ ಮಾಡಲಿದೆ... ಕುರೈಶ್ ಗೋತ್ರದ ಘನತೆಯೊಂದಿಗೆ ಆಟವಾಡುವುದು ತಮಾಷೆಯ ವಿಷಯವಲ್ಲ ಎಂಬುದನ್ನು ನಮ್ಮ ಖಡ್ಗಗಳು ಆ ಮುಸ್ಲಿಮರಿಗೆ ತಿಳಿಸಲಿವೆ. ಅಬೂಕುಹಾಫರ ಪುತ್ರ, ಖತ್ತಾಬ್‌ರ ಮಗ ಮತ್ತು ಅಬೂತಾಲಿಬ್‌ರ ಮಕ್ಕಳ ಹೆಣಗಳು ನೆಲದಲ್ಲಿ ಬಿದ್ದು ಹೊರಳಾಡುವ ಕಾಲ

ದೂರವಿಲ್ಲ... ಆ ತಿಳಿಗೇಡಿ ಅನ್ಸಾರರಿಗೂ ತಮ್ಮ ಇಸ್ಲಾಮ್ ಪ್ರೇಮಕ್ಕೆ ಬೆಲೆ ತೆರಬೇಕಾಗಿ ಬರಲಿದೆ. ನಮ್ಮ ಶತ್ರುಗಳಿಗೆ ಆಶ್ರಯ ನೀಡಲು ಅವರು ಯಾರು?

ಕುರೈಶರ ವ್ಯಾಪಾರಿ ತಂಡ ಸಿರಿಯಾ ಪ್ರಯಾಣ ಬೆಳೆಸಿದ ಕೆಲವೇ ದಿನಗಳ ತರುವಾಯ ಮುಸ್ಲಿಮರು ವ್ಯಾಪಾರಿ ತಂಡವನ್ನು ಕೊಳ್ಳೆ ಹೊಡೆಯಲಿಕ್ಕಾಗಿ ಮದೀನದಿಂದ ಹೊರಟಿದ್ದಾರೆ ಮತ್ತು ಯಾವುದಾದರೊಂದು ಕಡೆ ನಮ್ಮ ವ್ಯಾಪಾರಿ ತಂಡವನ್ನು ಅವರು ತಡೆಯಲಿದ್ದಾರೆ ಎಂಬ ಗಾಳಿಸುದ್ದಿಯು ಮಕ್ಕಾ ನಗರದಾದ್ಯಂತ ಹರಡಿತು. ಈ ಸುದ್ದಿ ನಗರವಿಡೀ ಹರಡಿದ್ದೇ ತಡ, ಕುರೈಶ್ ಸತ್ಯನಿಷೇಧಿಗಳು ಕೋಪದಿಂದ ಕೆಂಡಾ ಮಂಡಲವಾದರು... ನಮ್ಮ ವ್ಯಾಪಾರಿ ತಂಡದ ಮೇಲೆ ಆಕ್ರಮಣ ಮಾಡುವ ಅವಕಾಶ ವನ್ನು ನಾವು ಮುಸ್ಲಿಮರಿಗೆ ನೀಡಲಾರೆವು. ನಾವೇ ಸ್ವಯಂ ಹೋಗಿ ಆ ಮುಸ್ಲಿಮರನ್ನು ಎದುರು ಹಾಕಿಕೊಳ್ಳುವೆವು. ಅವರ ಖಡ್ಗಗಳು ಒರೆಯಿಂದ ಹೊರಬರುವುದಕ್ಕೆ ಮುನ್ನವೇ ನಮ್ಮ ವೀರರ ಖಡ್ಗಗಳು ಅವರ ಮೇಲೆ ಎರಗಲಿವೆ. ನಮ್ಮ ವ್ಯಾಪಾರಿ ತಂಡದ ಮೇಲೆ ಆಕ್ರಮಣವು ನಮ್ಮ ಘನತೆ-ಪರಾಕ್ರಮಗಳಿಗೆ ಪಂಥಾಹ್ವಾನವಾಗಿದೆ. ಅದಕ್ಕೆ ನಾವು ಶಕ್ತಿ ಮೀರಿ ಉತ್ತರ ನೀಡುವೆವು. ಆಕ್ರಮಣದ ಆರಂಭವು ನಮ್ಮಿಂದಲೇ ಆಗಬೇಕು ಎಂಬಿತ್ಯಾದಿಯಾಗಿ ಅವರು ಪರಸ್ಪರ ಹೇಳಿಕೊಂಡರು.

ಮದೀನದ ಪ್ರಥಮ ಮಹಾಸಭೆ

ಈ ವಿಷಯವು ಪ್ರವಾದಿವರ್ಯರಿಗೆ(ಸ) ತಿಳಿದಾಗ ಅವರು ಸಹಾಬಿಗಳೆಲ್ಲರನ್ನೂ ಒಟ್ಟು ಸೇರಿಸಿದರು. ಅವರ ಕರೆಗೆ ಅನ್ಸಾರ್, ಮುಹಾಜಿರರೆಲ್ಲರೂ ಒಟ್ಟಾದರು. ಪ್ರವಾದಿವರ್ಯರ(ಸ) ಹಿಜ್ರತ್‌ನ ಬಳಿಕ ಇಷ್ಟು ದೊಡ್ಡ ಸಭೆಯು ಅದುವರೆಗೂ ಜರಗಿರಲಿಲ್ಲ. ಪ್ರವಾದಿವರ್ಯರು(ಸ) ಪರಿಸ್ಥಿತಿಯನ್ನು ಸಭೆಯ ಮುಂದಿಟ್ಟರು. ಅದಕ್ಕುತ್ತರವಾಗಿ ಅಬೂಬಕರ್(ರ) ಮತ್ತಿತರ ಪ್ರಮುಖ ಸಹಾಬಿಗಳು ಅತ್ಯುತ್ಸಾಹ ಭರಿತ ಭಾಷಣಗಳನ್ನು ನೀಡಿದರು. ಅವರು ತಮ್ಮ ಭಾಷಣದಲ್ಲಿ ತಮ್ಮ ಸಂಕಲ್ಪ, ದೃಢತೆ, ವಿಶ್ವಾಸ ಹಾಗೂ ಇಸ್ಲಾಮಿಗಾಗಿ ಸಕಲ ತ್ಯಾಗ ಬಲಿದಾನಗಳಿಗೆ ಸಿದ್ಧ ಎಂಬುದನ್ನು ಸಾರಿದರು. ಮುಹಾಜಿರರು ಅಲ್ಲಾಹನ ಧರ್ಮಕ್ಕಾಗಿ ಮರಣವನ್ನಪ್ಪಲೂ ಸಿದ್ಧರೆಂದು ವ್ಯಕ್ತವಾಗುತ್ತಿತ್ತು. ಅವರ ಹೃದಯದಲ್ಲಿ ಯಾವುದೇ ರೀತಿಯ ಭಯ ಮತ್ತು ಹಿಂಜರಿಕೆಯಿದ್ದಿರಲಿಲ್ಲ! ಯುದ್ಧವೇ ನಾದರೂ ಸಂಭವಿಸಿದರೆ, ಇಸ್ಲಾಮಿನ ಈ ವಿನೀತ ಅನುಯಾಯಿಗಳು ಈಟಿ ಮತ್ತು ಖಡ್ಗಗಳಿಂದ ಗಾಯಗೊಂಡೂ ಪರಾಕ್ರಮ ಮೆರೆಯ ಬಲ್ಲರು. ಮುಂದಿಟ್ಟ ಅಡಿಯನ್ನು ಇನ್ನು ಹಿಂದಿಕ್ಕಲಾರರು. ತಮ್ಮ ರಕ್ತದ ಕಣಕಣಗಳ ಮೂಲಕವೂ ಈ ಸತ್ಯಪರರಾದ ದಾಸರು ಅಲ್ಲಾಹನ ಪ್ರಭುತ್ವವನ್ನು ಸಾರಿಸಾರಿ ಹೇಳುವರು.

❖ ❖ ❖ ❖

ಮುಹಾಜಿರರು ಭಾಷಣ ಮಾಡುತ್ತಿದ್ದರೂ ಪ್ರವಾದಿವರ್ಯರ(ಸ) ದೃಷ್ಟಿಯು ಆಗಾಗ ಅನ್ಸಾರರ ಕಡೆಗೆ ಹೊರಳುತ್ತಿತ್ತು. ಅನ್ಸಾರರು ಮೌನವಾಗಿದ್ದರು. ಏಕೆಂದರೆ ಈ ಮುಹಾಜಿರರು ಹೇಳುತ್ತಿರುವುದೆಲ್ಲವೂ ಅನ್ಸಾರರ ಮನದ ಮಾತುಗಳೇ ಆಗಿದ್ದುವು. ನಮ್ಮ

ಹೃದಯದ ಮಾತುಗಳೇ ಮುಹಾಜಿರರ ಬಾಯಿಯಿಂದ ಉದುರುತ್ತಿವೆ. ನಾವೂ ಅವರಿಗಿಂತ ಯಾವ ತ್ಯಾಗದಲ್ಲೂ ಹಿಂದಿಲ್ಲ ಎಂದು ಅನ್ಸಾರರು ಭಾವಿಸುತ್ತಿದ್ದರು. ಆದರೆ ಲೋಕ ನಾಯಕರು(ಸ) ನಮ್ಮ ಬಾಯಿಯಿಂದ ನಮ್ಮ ಮನದಾಳದ ಮಾತುಗಳನ್ನು ಆಲಿಸ ಬಯಸುತ್ತಾರೆಂದು ಅರಿವಾದಾಗ ಅನ್ಸಾರರ ಪೈಕಿ ಖಝ್ರಜ್ ಗೋತ್ರದ ಸರದಾರ ರಲ್ಲೋರ್ವರಾದ ಸಅದ್ ಬಿನ್ ಮುಆದ್(ರ) ಎದ್ದು ನಿಂತರು. ಅತ್ಯುತ್ಸಾಹದಿಂದ ಆದರೆ ಅತ್ಯಂತ ಆದರಪೂರ್ವಕವಾಗಿ ಹೇಳಿದರು,

"ಅಲ್ಲಾಹನ ಸಂದೇಶವಾಹಕರು(ಸ) ಅನ್ಸಾರರ ಅಭಿಪ್ರಾಯವನ್ನೂ ಆಲಿಸ ಬಯಸುತ್ತಾರೆ ಎಂದನಿಸುತ್ತಿದೆ. ತಮ್ಮನ್ನು ತನ್ನ ಸಂದೇಶವಾಹಕರನ್ನಾಗಿ ನೇಮಿಸಿದ ಸೃಷ್ಟಿಕರ್ತನಾಣೆ! ತಾವು ಆದೇಶ ನೀಡಿರಿ. ನಾವು ಸಮುದ್ರದಲ್ಲಿಳಿಯಲೂ ಸಿದ್ಧರಿದ್ದೇವೆ. ಶತ್ರುಗಳ ವಿರುದ್ಧ ಸೆಣಸಲು ನಮಗೆ ಕಷ್ಟವೇನೂ ಅಲ್ಲ. ಅನ್ಸಾರರ ಪೈಕಿ ಯಾವೊಬ್ಬನೂ ಯುದ್ಧದಿಂದ ಹಿಂಜರಿಯಲಾರ. ತಾವು ಎಲ್ಲಿಗೆ ಬೇಕಾದರೂ ನಮ್ಮನ್ನು ಕರೆದೊಯ್ಯಿರಿ."

ಸಅದ್ ಬಿನ್ ಮುಆದ್‌ರ(ರ) ಬಳಿಕ ಮಿಕ್ದಾದ್(ರ) ಎದ್ದು ನಿಂತರು,

"ಯಾ ರಸೂಲುಲ್ಲಾಹ್(ಸ)! ಪ್ರವಾದಿ ಮೂಸಾರ(ಅ) ಅನುಯಾಯಿಗಳು ಹೇಳಿದಂತೆ, ನೀವು ಮತ್ತು ನಿಮ್ಮ ಪ್ರಭು ಹೋಗಿ ಯುದ್ಧ ಮಾಡಿರಿ. ನಾವು ಇಲ್ಲೇ ಕುಳಿತು ನೋಡುತ್ತೇವೆ ಎಂದು ಖಂಡಿತ ನಾವು ಹೇಳಲಾರೆವು. ನಾವು ಅನ್ಸಾರರು, ತಮ್ಮ ಸಂಗಡ ರಣರಂಗಕ್ಕೆ ತೆರಳಿ ಎಡ-ಬಲಗಳಿಂದಲೂ ಯುದ್ಧ ಮಾಡುವೆವು."

ಅನ್ಸಾರರ ಆವೇಶಭರಿತ ಭಾಷಣಗಳನ್ನು ಆಲಿಸಿದ ಪ್ರವಾದಿವರ್ಯರ(ಸ) ಮುಖಾರ ವಿಂದವು ಸಂತೋಷದಿಂದ ಮಿನುಗಿತು. ಅವರ ಸಂತೋಷವನ್ನು ಅನ್ಸಾರ್ ಮತ್ತು ಮುಹಾಜಿರರು ಸ್ಪಷ್ಟವಾಗಿ ಕಂಡರು. ನಮ್ಮ ಮಾತುಗಳನ್ನು ಪ್ರವಾದಿವರ್ಯರು(ಸ) ಸ್ವೀಕರಿಸಿದರು ಎಂದು ಅವರೆಲ್ಲರೂ ಸಂತೋಷಪಟ್ಟರು. ಹೀಗೆ ಅನ್ಸಾರರು ಯುದ್ಧಕ್ಕಾಗಿ ಪ್ರವಾದಿವರ್ಯರಲ್ಲಿ(ಸ) ಬೈಅತ್ ಮಾಡುತ್ತಿರುವಾಗ, ಅಸದ್ ಬಿನ್ ಝುರಾರ(ರ) ಎದ್ದು ನಿಂತು ಹೇಳಿದರು,

"ಸಹೋದರರೇ! ನೀವೆಲ್ಲ ಯಾವ ವಿಷಯದ ಮೇಲೆ ಬೈಅತ್ ಮಾಡುತ್ತಿದ್ದೀರಿ ಎಂಬ ಅರಿವಿದೆಯೇ? ಇದು ಅರಬ್ ಮತ್ತು ಅರಬೇತರ ಹಾಗೂ ಜಿನ್ನ್ ಮತ್ತು ಮಾನವರ ಯುದ್ಧ ಘೋಷಣೆಯಾಗಿದೆ!"

ಅಸದ್ ಬಿನ್ ಝುರಾರ(ರ) ಮೇಲ್ನೋಟಕ್ಕೆ ಭಯ ಹುಟ್ಟಿಸುವಂತಹ ಮಾತುಗಳ ನ್ನಾಡಿದರು. ಅದನ್ನು ಕೇಳಿ, ಅನ್ಸಾರರ ಜಾಗದಲ್ಲಿ ಧೈರ್ಯಹೀನ ಜನರಿರುತ್ತಿದ್ದರೆ, ಮತ್ತೊಮ್ಮೆ ಆಲೋಚಿಸುತ್ತಿದ್ದರು. ಜೀವಭಯ, ಉಚಿತಾನುಚಿತದ ಮಾತುಗಳನ್ನಾಡಿ ನೆಪ ಹುಡುಕ ತೊಡಗುತ್ತಿದ್ದರು. ಮೆಲ್ಲನೆ ವ್ಯಾವಹಾರಿಕ ಉತ್ತರಗಳನ್ನು ನೀಡಿ ಜಾರಿಕೊಳ್ಳುತ್ತಿದ್ದರು. ಆದರೆ

ಇಲ್ಲಿ ಇರುವವರು ಅನ್ಸಾರರು. ಇವರು ತಮ್ಮ ಪ್ರಾಣವನ್ನು ಅಲ್ಲಾಹನ ಬಳಿ ಮಾರಿಕೊಂಡವರು. ಪ್ರವಾದಿವರ್ಯರ(ಸ) ಆದೇಶದ ಬಳಿಕ ಮೀನ- ಮೇಷ ಎಣಿಸುವುದು ಮತ್ತು ನೆಪ ಹುಡುಕುವುದು ಧರ್ಮದಲ್ಲಿ ಎಸಗುವ ಕಾಪಟ್ಯವಾಗಿದೆ ಎಂದು ಭಾವಿಸಿದವರಾಗಿದ್ದರು ಅನ್ಸಾರರು. ಹಾಗಾಗಿ ಅವರೆಲ್ಲರೂ ಒಕ್ಕೊರಲಿನಿಂದ ಹೇಳಿದರು, "ಹೌದು, ನಾವು ಅದೇ ವಿಷಯದಲ್ಲಿ ಬೈಅತ್ ಮಾಡುತ್ತಿದ್ದೇವೆ."

ರಮಝಾನ್ ತಿಂಗಳ ಹನ್ನೆರಡನೆಯ ತಾರೀಕು. ಅನಾಥಮುತ್ತು(ಸ) ಸುಮಾರು ಮುನ್ನೂರು ಮಂದಿ ಅನುಯಾಯಿಗಳೊಡಗೂಡಿ ಮದೀನದಿಂದ ಹೊರಟರು. ನಗರದ ಹೊರವಲಯದಿಂದ ಒಂದಿಷ್ಟು ದೂರ ಹೋದ ಬಳಿಕ ಅನಾಥಮುತ್ತು(ಸ) ಯೋಧರೆಡೆಗೆ ತಿರುಗಿ ಪರೀಕ್ಷಾ ದೃಷ್ಟಿ ಬೀರಿದರು. ಅವರ ಪೈಕಿ ಅಪ್ರಾಪ್ತರನ್ನೆಲ್ಲ ಮದೀನಕ್ಕೆ ಮರಳಿ ಸಿದರು. ಆ ಪೈಕಿ ಉಮೈರ್ ಬಿನ್ ಅಬೀ ವಕ್ಕಾಸ್ ಅಪ್ರಾಪ್ತರಾಗಿದ್ದರು. ಆದರೆ ಹುತಾತ್ಮತೆಯ ಹುಮ್ಮಸ್ಸು ಅವರನ್ನು ಎಳೆದು ತಂದಿತ್ತು. ಮಕ್ಕಳನ್ನು ಮದೀನಕ್ಕೆ ವಾಪಸು ಕಳುಹಿಸುತ್ತಿರುವುದನ್ನು ಕಂಡು ಎತ್ತರ ಹೆಚ್ಚಾಗಿ ಕಾಣಲು ಅವರು ತುದಿಗಾಲಲ್ಲಿ ನಿಂತರು. ಆದರೂ ಪ್ರವಾದಿವರ್ಯರು(ಸ) ಉಮೈರ್‌ರಿಗೆ ಮರಳಿ ಹೋಗಲು ಸೂಚಿಸುತ್ತಾರೆ. ಅಷ್ಟಕ್ಕೇ ಅವರು ಗಳಗಳನೇ ಅತ್ತುಬಿಡುತ್ತಾರೆ. ಕೊನೆಗೆ ಅವರನ್ನು ಯುದ್ಧರಂಗಕ್ಕೆ ಹೋಗಲು ಅನುಮತಿಸಲಾಗುತ್ತದೆ. ಉಮೈರ್‌ರ ಹಿರಿಯಣ್ಣ ಸಅದ್ ಬಿನ್ ಅಬೀ ವಕ್ಕಾಸ್‌ರವರು ಸಂತೋಷದಿಂದ ತಮ್ಮನ ಹೆಗಲಿಗೆ ಖಡ್ಗವನ್ನು ನೇತಾಡಿಸುತ್ತಾರೆ.

ತನಗೆ ಅಲ್ಲಾಹನ ಸಂದೇಶವಾಹಕರ ಸೇನೆಯಲ್ಲಿ ಸೇರಲು ಅನುಮತಿ ದೊರೆತುದನ್ನು ತಿಳಿದಾಗ ಕಣ್ಣೀರಿಳಿಸುತ್ತಿದ್ದ ಉಮೈರ್‌ರ ಮುಖವು ಸಂತೋಷದಿಂದ ಕಾಂತಿಪೂರ್ಣವಾಗಿ ಬೆಳಗಿತು. ಆನಂದಾತಿರೇಕದಿಂದ ಅವರ ಕೆನ್ನೆಗಳು ಕೆಂಗುಲಾಬಿಯಂತೆ ಕಂಗೊಳಿಸಿದುವು. ಹಣೆಯಲ್ಲಿ ಕ್ಷೀರ ಪಥದ ಪ್ರಭಾವಲಯವು ಮಿಂಚಿತು. ಹೃದಯವು ಎದೆಗೂಡೊಳಗಿಂದಲೇ ಕುಣಿದಾಡಿತು. ವಿಶ್ವಾಸವು ಹೇಳಿತು, "ಇಸ್ಲಾಮಿನ ಪ್ರಥಮ ಸೇನೆಯ ಅತ್ಯಂತ ಕಿರಿಯ ಯೋಧ! ನಿನ್ನ ಸೌಭಾಗ್ಯಕ್ಕೆ ಹೆಮ್ಮೆ ಪಡು. ನೀನು ಈ ಯುದ್ಧದಲ್ಲಿ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ(ಸ) ಪರವಾಗಿ ಹೋರಾಡಲು ಹೋಗುತ್ತಿರುವೆ. ಈ ಯುದ್ಧವು ಇಸ್ಲಾಮೀ ಇತಿಹಾಸದ ಮುನ್ನುಡಿಯಾಗಲಿದೆ. ಸತ್ಯ-ಮಿಥ್ಯಗಳ ಈ ಕದನದಲ್ಲಿ ಪಾಲ್ಗೊಳ್ಳುತ್ತಿರುವ ನಿನಗಿದೋ ಸ್ವಾಗತ- ಶುಭಾಶಯಗಳು. ಬದುಕುಳಿದರೂ ನೀನು ಯಶಸ್ವಿಯಾಗುವೆ. ಹುತಾತ್ಮನಾದರೂ ಯಶಸ್ಸು ನಿನ್ನೊಂದಿಗೇ ಇರುವುದು..."

ೞ◆◆◆ൽ

ಬದ್ರ್ ಯುದ್ಧ

ಅಪ್ರಾಪ್ತರನ್ನು ಬೇರ್ಪಡಿಸಿದ ಬಳಿಕ ಸೇನೆಯ ಅವಲೋಕನ ನಡೆಸುವಾಗ, ಯೋಧರ ಸಂಖ್ಯೆ ಮುನ್ನೂರ ಹದಿಮೂರಕ್ಕೆ ಬಂದು ನಿಲ್ಲುತ್ತದೆ. ಅವರ ಪೈಕಿ 60 ಮಂದಿ ಮುಹಾಜಿರರಿದ್ದರೆ, ಉಳಿದವರೆಲ್ಲ ಅನ್ಸಾರರು. ಮದೀನದಿಂದ ಸಿರಿಯದೆಡೆಗೆ ಸಾಗುವ ದಾರಿಯಲ್ಲಿ ಈ ಮುಜಾಹಿದರ ಸೇನೆಯು ಹೊರಡುತ್ತದೆ. ಜಗತ್ತು ಅದೆಷ್ಟೋ ದೊಡ್ಡ ದೊಡ್ಡ ಪರಾಕ್ರಮಿ ಸೇನೆಗಳನ್ನು ಕಂಡಿದೆ. ಶರವೇಗದ ಅಶ್ವಗಳು, ಯುದ್ಧ ಕವಚಗಳು, ಶಿರಸ್ತ್ರಾಣಗಳು, ತೋಳು ಬಂದಿ, ಖಡ್ಗಗಳು, ಗುರಾಣಿಗಳು, ಈಟಿ-ಭರ್ಜಿ ಮತ್ತು ಶತ್ರುಗಳನ್ನು ಭೇದಿಸಿ ಮುನ್ನಡೆಯಬಹುದಾದಂತಹ ಎಲ್ಲ ತರದ ಸಲಕರಣೆಗಳು... ಸೇನೆಯೊಡನೆ ಆಹಾರ ಸಾಮಗ್ರಿಗಳು, ಡೇರೆಗಳು, ಶಾಮಿಯಾನಗಳು, ಛತ್ರಿಗಳು, ನಗಾರಿ-ಡೋಲುಗಳು... ಆದರೆ ಇದು ದೇವಸಂದೇಶವಾಹಕರಾದ ಮುಹಮ್ಮದ್‌ರ(ಸ) ಅನುಯಾಯಿಗಳ ಸೇನೆಯಾಗಿತ್ತು. ಇವರ ಬಳಿ ತುಂಡಾದ ಖಡ್ಗಗಳು ಮತ್ತು ಹರಿದ ಯುದ್ಧ ಕವಚಗಳಿದ್ದುವು. ಒಂದೊಂದು ಒಂಟೆಯ ಮೇಲೆ ಇಬ್ಬರು, ಮೂವರಂತೆ ಸವಾರರಾಗಿದ್ದರು. ಆಹಾರ ಧಾನ್ಯದ ಜಾಗದಲ್ಲಿ ಅಲ್ಲಾಹನ ನಾಮವಿತ್ತು. ಹೆಚ್ಚೆಂದರೆ ಕೆಲವು ಚೀಲ ಹುರಿದ ಧಾನ್ಯದ ಹುಡಿ ಮತ್ತು ಖರ್ಜೂರಗಳಿದ್ದವು. ಮೇಲ್ನೋಟಕ್ಕೆ ಕಾಣುವ ಸರಂಜಾಮುಗಳು ಬೇರೆ ಇಲ್ಲ. ಈಮಾನಿನ ಶಕ್ತಿ ಮತ್ತು ಇಸ್ಲಾಮಿನ ಉತ್ಸಾಹದ ಹೊರತು. ಅವರು ಮನೆಯಿಂದ ಹೊರಡುವಾಗ, ಅಲ್ಲಾಹನ ನಾಮದ ಉತ್ತುಂಗಕ್ಕಾಗಿ ಜೀವದ ಹಂಗು ತೊರೆದು ಹೋರಾಡುವುದಾಗಿ ನಿಶ್ಚಯಿಸಿದ್ದರು. ಕವಿವಾಣಿ ಹೇಳುವಂತೆ,

ಕಾಫಿರನಿಗಾದರೋ ಹೋರಾಡಲು
ಅಸ್ತ್ರ-ಶಸ್ತ್ರ-ಗುರಾಣಿ ಬೇಕು
ಮೂಮಿನನು ಬರಿಗೈಯಲ್ಲಿದ್ದರೂ
'ತವಕ್ಕಲ್ತು ಅಲಲ್ಲಾಹ್' -ಸಾಕು

ಹೌದು, ಆ ಮುಜಾಹಿದರಿಗೆ ಕೇವಲ ಅಲ್ಲಾಹನ ಮೇಲೆ ಭರವಸೆಯಿತ್ತು. ಇದೇ

ವಿಶ್ವಾಸವು ಅವರನ್ನು ಮರಣದ ಕರೆಗೆ ಓಗೊಡುವಂತೆ ಮಾಡಿತ್ತು. ಅವರ ಹೃದಯದಲ್ಲಿ ಅಲ್ಲಾಹನ ಹೊರತು ಬೇರೆ ಯಾರದೇ ಭಯವಿದ್ದಿರಲಿಲ್ಲ. ಅಲ್ಲಾಹನ ಭಯ ಅವರ ಹೃದಯದಲ್ಲಿ ಹುಟ್ಟಿದಂದಿನಿಂದ ಇತರೆಲ್ಲ ಭಯ-ಭೀತಿ ಮತ್ತು ಆಂತಕಗಳು ಹೊರಟು ಹೋಗಿದ್ದವು. ಆ ಮುಜಾಹಿದರು ತಕ್ಬೀರ್ ಮೊಳಗಿಸುತ್ತಾ ಅಲ್ಲಾಹನನ್ನು ಸ್ಮರಿಸುತ್ತಾ ಹೋಗುತ್ತಿದ್ದರು. ನಮಾಝ್‌ನ ಸಮಯವಾದಾಗಲೆಲ್ಲ ಅಲ್ಲಾಹನ ಸನ್ನಿಧಿಯಲ್ಲಿ ಭಯ-ಭಕ್ತಿಯೊಂದಿಗೆ ಬಾಗುತ್ತಿದ್ದರು. ದೇವ ಸಂದೇಶವಾಹಕರಾದ ಅನಾಥಮುತ್ತು(ಸ) ಆ ಮುಜಾಹಿದರ ಇಮಾಮ್, ನಾಯಕ ಮತ್ತು ಸೇನಾಧಿಪತಿಯಾಗಿದ್ದರು. ಪ್ರವಾದಿ ವರ್ಯರ(ಸ) ಸಾಂಗತ್ಯಕ್ಕೆ ಅವರ ಅದೃಷ್ಟವು ಹೆಮ್ಮೆಪಡುತ್ತಿತ್ತು... ಓ ಕುರಿಗಾಹಿಗಳೇ! ನಿಮಗೆ ಭೂಮಿ-ಆಕಾಶಗಳು ಶುಭಾಶಯ ಕೋರುತ್ತಿವೆ... ಆಕಾಶಗಳಿಂದ ನಿಮ್ಮ ಹೆಸರಿಗೆ ಸಲಾಮ್ ಕಳುಹಿಸಲಾಗುತ್ತಿದೆ... ಸೃಷ್ಟಿಶ್ರೇಷ್ಠರಿಗೆ(ಸ) ಸಹಯಾತ್ರಿಗಳಾಗುವುದೇ ಬಹುದೊಡ್ಡ ಅನುಗ್ರಹ... ಈಗಂತೂ ಅಲ್ಲಾಹನ ಮಾರ್ಗದಲ್ಲಿ ಹೋರಾಡಲು ರಣಾಂಗಣದ ದಾರಿ ತುಳಿಯುತ್ತಿದ್ದೇವೆ... ಸೇನೆಯ ದಂಡನಾಯಕತ್ವವನ್ನು ಸ್ವತಃ ಸಯ್ಯದುಲ್ ಅಂಬಿಯಾ(ಸ) ವಹಿಸಿಕೊಂಡಿದ್ದಾರೆ... ಇದಕ್ಕಿಂತ ದೊಡ್ಡ ಹರ್ಷ ಬೇರೇನಿದ್ದೀತು? ಸೌಭಾಗ್ಯ ಮತ್ತು ಅನುಗ್ರಹದ ಸೋಪಾನವೆಂದರೆ ಇದು!

ಇತ್ತ ಕುರೈಶ್ ಸತ್ಯನಿಷೇಧಿಗಳು ಸರ್ವಸಿದ್ಧತೆ ಮತ್ತು ಸರಂಜಾಮುಗಳೊಂದಿಗೆ ಮಕ್ಕಾ ನಗರದಿಂದ ಹೊರಟಿದ್ದರು. ಒಂದು ಸಾವಿರಕ್ಕಿಂತ ಮಿಕ್ಕಿದ ಯೋಧರು; ಶಸ್ತ್ರಾಸ್ತ್ರ, ಸವಾರಿ ಜಾನುವಾರು ಮತ್ತು ಆಹಾರ ಸಾಮಗ್ರಿಗಳು ಹೇರಳವಾಗಿದ್ದುವು. ಕುರೈಶರ ಸಕಲ ಸರದಾರರೂ ಸ್ವಯಂ ಈ ಯುದ್ಧದಲ್ಲಿ ಪಾಲ್ಗೊಳ್ಳಲು ಹೊರಟಿದ್ದರು. ಅಬೂಲಹಬ್ ಅನಾರೋಗ್ಯ ನಿಮಿತ್ತ ಹೊರಡಲಾಗದ್ದರಿಂದ ಓರ್ವ ಪರಾಕ್ರಮಿಯನ್ನು ಹಣ ಕೊಟ್ಟು ತನ್ನ ಪರವಾಗಿ ಯುದ್ಧ ಮಾಡಲು ಕಳುಹಿಸಿದ್ದ. ಈ ಕುರೈಶ್ ಸೇನೆಯ ದಂಡನಾಯಕತ್ವವನ್ನು ಉತ್ಬಾ ಬಿನ್ ರಬೀಅ ವಹಿಸಿದ್ದನು.

ಮದೀನದಿಂದ ಸುಮಾರು ಎಂಭತ್ತು ಮೈಲು ದೂರ ಬದ್ರ್‌ನ ಮೈದಾನವಿದೆ. ಈ ಪ್ರದೇಶವು ಸಿರಿಯಾದ ಮಾರ್ಗದಲ್ಲಿ ಸಿಗುತ್ತದೆ. ಕುರೈಶರು ಈ (ಬದ್ರ್) ಪ್ರದೇಶಕ್ಕೆ ತಲುಪಿದಾಗ ಅಬೂಸುಫ್‌ಯಾನ್‌ರ ನೇತೃತ್ವದಲ್ಲಿದ್ದ ವ್ಯಾಪಾರಿ ತಂಡವು ಕ್ಷೇಮವಾಗಿ ಮದೀನವನ್ನು ದಾಟಿ ಹೋಗಿದೆಯೆಂದೂ ಇನ್ನು ಯಾವುದೇ ಅಪಾಯ ಇಲ್ಲ ಎಂದೂ ತಿಳಿದು ಬಂತು. ಮುಸ್ಲಿಮರು ಮದೀನದಿಂದ ಅಷ್ಟು ದೂರ ಹೋಗಿ ವ್ಯಾಪಾರಿ ತಂಡವನ್ನು ದೋಚುವುದು ಸಾಧ್ಯವಿಲ್ಲದ ಮಾತು. ಆದ್ದರಿಂದ ಝುಹ್ರ ಮತ್ತು ಅದೀ ಗೋತ್ರಗಳ ಸರದಾರರುಗಳು ಹೇಳಿದರು, "ನಾವು ನಮ್ಮ ವ್ಯಾಪಾರಿ ತಂಢವನ್ನು ರಕ್ಷಿಸ ಲೋಸುಗ ಮಕ್ಕಾದಿಂದ ಹೊರಟಿದ್ದೇವಷ್ಟೇ. ವ್ಯಾಪಾರಿ ತಂಡ ಸಕ್ಷೇಮ ಸಿರಿಯದೆಡೆಗೆ ಸಾಗಿದೆಯೆಂದರೆ ನಾವೂ ಮಕ್ಕಾಗೆ ಮರಳುವುದು ಲೇಸು. ಸುಮ್ಮನೆ ಮುಸ್ಲಿಮರೊಡನೆ ಕಾಲುಕೆರೆದು ಜಗಳ ಕ್ಕಿಳಿಯುವುದು ತರವಲ್ಲ." ಆದರೆ

ಅಬೂಜಹಲ್ ಅದನ್ನೊಪ್ಪಲಿಲ್ಲ. ಆತ ತನ್ನ ಹಠದಲ್ಲೇ ಸ್ಥಿರವಾಗಿದ್ದ. ಉತ್ಬಾ ಮತ್ತು ಉಮಯ್ಯ ಕೂಡ ಮೆತ್ತಗಾಗಿದ್ದರು. ಆದರೂ ಅಬೂಜಹಲ್‌ನ ದ್ವೇಷವು ಇನ್ನಷ್ಟು ಹೆಚ್ಚಿತು. ಆತ ಇಸ್ಲಾಮಿನ ವೈರಿಗಳೊಡನೆ ಹೇಳಿದ, "ಮಕ್ಕಾಗೆ ಈ ರೀತಿ ಯುದ್ಧ ಮಾಡದೆ ಮರಳುವುದೆಂದರೆ ಹೇಡಿತನವೆನಿಸೀತು. ವ್ಯಾಪಾರಿ ತಂಡ ಹೊರಟು ಹೋದರೇನಂತೆ? ನಮ್ಮ ವೈರಿಗಳಾದ ಮುಸ್ಲಿಮರು ಇದ್ದಾರಲ್ಲ. ಅವರ ಅಸ್ತಿತ್ವವು ಇಡೀ ಅರೇಬಿಯಕ್ಕೇ ಅತಿದೊಡ್ಡ ಅಪಾಯವಾಗಿದೆ. ಇಲ್ಲಿಗೆ ನಾವು ತಲುಪಿಯಾಗಿದೆ. ಇನ್ನು ಆ ನಮ್ಮ ವೈರಿಗಳನ್ನು ಆ ಅಪಾಯಕಾರಿ ಕ್ಷೋಭೆಗಳನ್ನು ಮಟ್ಟ ಹಾಕಿಯೇ ಹೋಗೋಣ."

ಕುರೈಶರು ಮೊದಲೇ ಬದ್ರ್ ತಲುಪಿದ್ದರು. ಆದ್ದರಿಂದ ವಿಶಾಲವಾದ ಮೈದಾನ ದಲ್ಲಿ ಅವರು ಬೀಡು ಬಿಟ್ಟಿದ್ದರು. ರಾತ್ರಿಯ ಸಮಯವಾಗಿತ್ತು. ಸಹಾಬಿಗಳು ನಿರಂತರ ಪ್ರಯಾಣ ಬೆಳೆಸುತ್ತ ಬಂದಿದ್ದರು. ಆ ರಾತ್ರಿ ಎಲ್ಲರೂ ವಿಶ್ರಾಂತಿ ಪಡೆದರು. ಮುಸ್ಲಿಮರ ಈ ಇಡೀ ಸೇನೆಯಲ್ಲಿ ಒಬ್ಬರು ಮಾತ್ರ ಎಚ್ಚರವಾಗಿದ್ದರು. ಅನಾಥಮುತ್ತು! ಪ್ರವಾದಿ ವರ್ಯರು(ಸ) ರಾತ್ರಿಯಿಡೀ ದೇವನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿದ್ದರು. ನಿರಂತರ ಪ್ರಾರ್ಥನೆಯಲ್ಲಿ ಮುಳುಗಿದ್ದರು. ಎಲ್ಲರ ಕಣ್ಣಲ್ಲಿ ನಿದ್ರೆ ಲಾಸ್ಯವಾಡುತ್ತಿದ್ದರೆ ಉಭಯ ಲೋಕಗಳ ಸರದಾರರ(ಸ) ನಯನಗಳಲ್ಲಿ ಅಶ್ರುಧಾರೆಯಾಗಿ ಹರಿಯುತ್ತಿತ್ತು. ತನ್ನ ದುಃಖ-ವೇದನೆಯನ್ನು ಲೋಕಾನುಗ್ರಹಿಯು(ಸ) ಸರ್ವಲೋಕಗಳ ಪ್ರಭುವಿನೊಡನೆ ತೋಡಿ ಕೊಳ್ಳುತ್ತಿದ್ದರು.

❖ ❖ ❖ ❖

ರಾತ್ರಿಯ ಅಂಧಕಾರ, ಕಾನನ, ಶತ್ರುಗಳ ಆಕ್ರಮಣದ ಅಪಾಯ... ಇಂತಹ ಸ್ಥಿತಿಯಲ್ಲೂ ಮುಹಮ್ಮದರ್ರಸೂಲುಲ್ಲಾಹ್(ಸ) ಸಾಷ್ಟಾಂಗವೆರಗಿ ಪ್ರಾರ್ಥನಾ ನಿರತ ರಾಗಿದ್ದಾರೆ. ಪ್ರಾರ್ಥನೆ ಸ್ವೀಕಾರವಾಗುವ ಲಕ್ಷಣಗಳು ಗೋಚರಿಸತೊಡಗಿದುವು... ವಾತಾವರಣ ವಿಡೀ ಕಂಪಿಸಿ ಜೋಲಾಡಿತು... ಅರ್ಶ್‌ನ ಕಮಾನುಗಳು ಅಲ್ಲಾಡಿದವು... ಭೂಮಿಯ ಪಾಶಗಳು, ಆಕಾಶಗಳ ಛಾವಣಿ ತತ್ತರಿಸಿ ಹೋದುವು. ರಾತ್ರಿಯ ಏಕಾಂತದಲ್ಲಿ ಈ ವಿನೀತ ದಾಸ ತನ್ನ ಆರಾಧ್ಯನಲ್ಲಿ ಏನನ್ನು ನಿವೇದಿಸಿದರು ಮತ್ತು ಅತ್ತಲಿಂದ ಯಾವ ಉತ್ತರ ಬಂತು ಎಂಬುದನ್ನು ಯಾರು ತಾನೇ ಹೇಳಬಲ್ಲರು? ಯಾವ ಮಾನವ ಶ್ರೇಷ್ಠರ ಮನವು ಕೊಂಚ ಭಾರವಾದರೂ ಜಿಬ್ರೀಲ್ ಇಳಿದು ಬಂದು 'ನಿಮ್ಮ ದೇವನು ನಿಮಗೆ ಸಂದೇಶ ಕಳುಹಿಸಿದ್ದಾನೆ' ಎಂದು ಬಿಡುತ್ತಾರೋ, ಆ ಸೃಷ್ಟಿಶ್ರೇಷ್ಠರು ದೀನರಾಗಿ ದೇವನಲ್ಲಿ ಬೇಡುತ್ತಿ ರುವಾಗ, ದೇವ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿರುವಾಗ ಯಾವ ಕಡೆಯಿಂದ ಏನು ಸಂದೇಶ ಬಂದಿರಬಹುದು? ಊಹಿಸಲು ಸಾಧ್ಯವಿಲ್ಲದ ಮಾತು.

ಏನಿದ್ದರೂ ಜಿಬ್ರೀಲ್ ದೇವಸಂದೇಶ ಹೊತ್ತು ಬರುತ್ತಾರೆ...

ಮದೀನದಿಂದ ಬದ್ರ್‌ನೆಡೆಗೆ ಕ್ಲಿಷ್ಟಕರ ಘಾಟಿಯ ದಾರಿಯಾಗಿ ಸಾಗಬೇಕಾಗಿ ಬಂದಿತ್ತು... ಆದರೆ ಬದ್ರ್‌ನ ಪರಿಸರದ ನೆಲವು ಸಮತಟ್ಟಾಗಿತ್ತು. ಅಲ್ಲಲ್ಲಿ ದಿಣ್ಣೆಗಳಿದ್ದುವು... ಈ ಮೈದಾನದ ಒಂದು ಮೂಲೆಯಲ್ಲಿ ಸಹಾಬಿಗಳು ಪ್ರವಾದಿವರ್ಯರಿಗಾಗಿ(ಸ) ಚಪ್ಪರ ಕಟ್ಟಿದರು... ಸಅದ್ ಬಿನ್ ಮುಆದ್(ರ) ಅದರ ಛಾವಣಿಯ ಕೆಳಗೆ ನಗ್ನ ಖಡ್ಗ ಹಿಡಿದು ಪ್ರವಾದಿವರ್ಯರ(ಸ) ರಕ್ಷಣೆಗಾಗಿ ನಿಂತರು. ಒಂದೇ ಆಲೋಚನೆ ಅವರ ಮನದಲ್ಲಿತ್ತು... ಜೀವ ಹೋದರೂ ಚಿಂತಿಲ್ಲ, ದೇವ ಸಂದೇಶವಾಹಕರ(ಸ) ಕೂದಲೂ ಕೊಂಕಲು ಬಿಡಲಾರೆ!

ಪ್ರಭಾತ ನಮಾಝ್‌ನ ಬಳಿಕ ಅನಾಥಮುತ್ತು(ಸ) ಸಶಸ್ತ್ರ ಜಿಹಾದ್‌ನ ಕುರಿತು ಪ್ರವಚನ ನೀಡಿದರು. ಆ ಮೂಲಕ ದೇವಮಾರ್ಗದ ಹೋರಾಟಗಾರರ ಮನಸ್ಸುಗಳಲ್ಲಿ ಸ್ಫೂರ್ತಿ-ಹುಮ್ಮಸ್ಸಿನ ಕಿಡಿಯನ್ನು ಹೊತ್ತಿಸಿದರು. ಅವರ ಒಂದೊಂದು ಪದಕ್ಕೂ ಮುಜಾಹಿದರು ಭಾವಾವೇಶಗೊಳ್ಳುತ್ತಿದ್ದರು... ತರುವಾಯ ಯುದ್ಧಕ್ಕಾಗಿ ಪಂಕ್ತಿ ಕಟ್ಟಲಾಯಿತು. ಅನಾಥ ಮುತ್ತು(ಸ) ಸ್ವಯಂ ಪಂಕ್ತಿಯನ್ನು ರಚಿಸಿದರು. ಕೈಯಲ್ಲಿ ಖರ್ಜೂರದ ಸೋಗೆಯೊಂದಿತ್ತು... ಅದರಿಂದಲೇ ಸನ್ನೆ ಮಾಡುತ್ತಾ ಪಂಕ್ತಿ ಸರಿಪಡಿಸಲು ಆದೇಶಿಸು ತ್ತಿದ್ದರು. ಈ ಪಂಕ್ತಿಗಳಲ್ಲಿ ಸೌದಾ ಬಿನ್ ಉಝ್ಯಾ ಎಂಬ ವಿನೋದ ಪ್ರಿಯ ಸಹಾಬಿ ಯಿದ್ದರು. ಅವರಿಗರಿವಿಲ್ಲದೆಯೇ ಅವರ ಪಾದವು ಪಂಕ್ತಿಯಿಂದ ಕೊಂಚ ಮುಂದಾಗಿತ್ತು. ಆ ಕಾರಣದಿಂದಾಗಿಯೇ ಪಂಕ್ತಿಯು ಓರೆಯಾಗಿ ಕಂಡಿತು. ಪ್ರವಾದಿವರ್ಯರು(ಸ) ಅವರ ಎದೆಗೆ ಖರ್ಜೂರದ ಸೋಗೆಯನ್ನು ತಾಗಿಸಿ ಇತರರಂತೆಯೇ ಪಂಕ್ತಿಯಲ್ಲಿ ನೇರವಾಗಿ ನಿಲ್ಲಲು ಸನ್ನೆ ಮಾಡಿದರು. ಆಗ ಸೌದಾ(ರ) ಈ ರೀತಿ ಅರುಹಿದರು, "ಯಾ ರಸೂಲುಲ್ಲಾಹ್(ಸ)! ಅಲ್ಲಾಹನು ತಮ್ಮನ್ನು ಸತ್ಯದೊಂದಿಗೆ ನೇಮಿಸಿರುವನು ಮತ್ತು ನ್ಯಾಯ ಪಾಲನೆಗಾಗಿಯೇ ತಾವು ಈ ಲೋಕಕ್ಕೆ ಬಂದಿರುವಿರಿ. ನನ್ನ ಎದೆಯ ಮೇಲೆ ತಾವು ಬೆತ್ತದಿಂದ ತಿವಿದಿರಲ್ಲವೇ... ಅದಕ್ಕೆ ನಾನು ಪ್ರತೀಕಾರ ಪಡೆಯುವೆನು."

ಅನಾಥಮುತ್ತು(ಸ) ತಮ್ಮೆದೆಯಿಂದ ಚದ್ದರವನ್ನು ಸರಿಸಿ, "ಓ ಸೌದಾ! ಕಿಸಾಸ್ (ಪ್ರತೀಕಾರ) ಪಡೆ" ಎಂದರು.

ಸೌದಾರ ಅರಿಕೆಯಿಂದ ಸಕಲ ಸಹಾಬಿಗಳು ಆಶ್ಚರ್ಯ ಚಕಿತರಾದರು. ಏನಾಗಿದೆ ಈ ವ್ಯಕ್ತಿಗೆ? ಮಕ್ಕಾದಿಂದಂತೂ ಮುಹಮ್ಮದರ್ರಸೂಲುಲ್ಲಾಹ್‌ರ(ಸ) ಒಂದು ಆಜ್ಞೆಗೆ ಜೀವಾರ್ಪಣೆಗೂ ಸಿದ್ಧ ಎಂದು ತೀರ್ಮಾನಿಸಿ ಬಂದಿದ್ದ ವ್ಯಕ್ತಿ, ಇಲ್ಲಿ ಒಂದು ಬೆತ್ತದ ಸಣ್ಣ ತಿವಿತಕ್ಕೆ ಸ್ವಯಂ ಲೋಕಾನುಗ್ರಹಿಯಿಂದ ಪ್ರತೀಕಾರ ಪಡೆಯುವ ಮಾತನ್ನಾಡುತ್ತಿದ್ದಾರೆ. ಕೆಲವು ಮಂದಿ ಸಹಾಬಿಗಳಂತೂ ರೋಷಾವೇಶದಿಂದ ಖಡ್ಗದ ಹಿಡಿಯನ್ನು ಬಲವಾಗಿ ಹಿಡಿದರು. ಪ್ರವಾದಿವರ್ಯರ(ಸ) ಒಂದೇ ಒಂದು ಕಣ್ಸನ್ನೆಗೆ ಕಾದರು, ಸೌದಾರ ತಲೆ ಕಡಿಯಲು!

ಪ್ರವಾದಿವರ್ಯರು(ಸ) ಚದ್ದರ ಸರಿಸಿದ್ದೇ ತಡ, ಸೌದಾ ಧಾವಿಸಿ ಬಂದು ಅವರ(ಸ) ಎದೆಯನ್ನು ಚುಂಬಿಸಿದರು. ಕಿಸಾಸ್ ಪಡೆಯದಿರುವ ಬಗ್ಗೆ ಪ್ರವಾದಿವರ್ಯರು(ಸ) ವಿಚಾರಿಸಿದಾಗ

ಸೌದಾ(ರ) ಹೇಳಿದರು, "ಯಾ ರಸೂಲುಲ್ಲಾಹ್! ಇದು ನನ್ನ ಕೊನೆಯ ಘಳಿಗೆಯಾಗಿದೆ. ಒಂದೆರಡು ಘಳಿಗೆಗಳ ನಂತರ ನಾನು ಬಹುಶಃ ಅಲ್ಲಾಹನ ಮಾರ್ಗ ದಲ್ಲಿ ವಧಿಸಲ್ಪಡುವೆನು. ಇಂತಿರುವಾಗ ಜೀವನದ ಅಂತಿಮ ಘಳಿಗೆಯಲ್ಲಿ ದೇವಸಂದೇಶ ವಾಹಕರ(ಸ) ಪಾವನ ಶರೀರವನ್ನು ಸ್ಪರ್ಶಿಸುವುದಾಗಿತ್ತು ನನ್ನ ಬಯಕೆ." ಅನಾಥಮುತ್ತು(ಸ) ಸೌದಾರ ಒಳಿತಿಗಾಗಿ ಪ್ರಾರ್ಥಿಸಿದರು. ಸಹಾಬಿಗಳೆಲ್ಲರೂ ಸೌದಾರ(ರ) ಈ ಉತ್ತರ ದಿಂದ ಸಂತೋಷಪಟ್ಟರು. ಕೋಪಗೊಂಡಿದ್ದವರ ಕೋಪಾಗ್ನಿಯು ತಣ್ಣಗಾಯಿತು- ಕೆಂಡದ ಮೇಲೆ ಒಮ್ಮೆಲೆ ತಣ್ಣೀರು ಸುರಿದಂತೆ. ಕೆಲವರು ಸೌದಾರ ಈ ಪ್ರವಾದಿ ಪ್ರೀತಿ ಮತ್ತು ವಿಶ್ವಾಸವನ್ನು ಮನಸಾರೆ ಮೆಚ್ಚಿದರು.

ಕುರೈಶ್ ಸತ್ಯನಿಷೇಧಿಗಳ ಕಡೆಯಿಂದ ಕೆಲವು ಮಂದಿ ಪರಾಕ್ರಮಿಗಳು ರಣರಂಗ ದಲ್ಲಿಳಿದು ಮುಸ್ಲಿಮರನ್ನು ಕೆಣಕಿದರು. ಉತ್ತರವಾಗಿ ಅನ್ಸಾರರ ಪೈಕಿ ಅತ್ಯುತ್ಸಾಹಿಗಳು ರಂಗಕ್ಕಿಳಿದರು. ಸತ್ಯನಿಷೇಧಿಗಳೆಂದರು, "ನಮಗೂ ಅನ್ಸಾರರಿಗೂ ಏನು ಹೋಲಿಕೆ? ನಮ್ಮೊಡನೆ ಸೆಣಸಲು ಹಮ್‌ಝ, ಉಮರ್, ಅಲಿಯವರನ್ನು ಕಳುಹಿಸಿರಿ." ಅದನ್ನು ಕೇಳಿ ಮುಹಾಜಿರರ ಪೈಕಿ ಪರಾಕ್ರಮಿಗಳು ತೊಡೆತಟ್ಟಿ ಮುಂದೆ ಬಂದರು. ಈ ರೀತಿ ಯುದ್ಧದ ಆರಂಭವಾಯಿತು. ಅನಾಥಮುತ್ತು(ಸ) ದೇವ ಸನ್ನಿಧಿಯಲ್ಲಿ ಕೈಯೆತ್ತಿ ಪ್ರಾರ್ಥಿಸಿದರು,

"ಸರ್ವಶಕ್ತ ಪ್ರಭೂ! ನನಗೆ ನೀನು ಮಾಡಿರುವ ವಾಗ್ದಾನವನ್ನು ಈಡೇರಿಸು!"

ಪ್ರಾರ್ಥನಾ ತನ್ಮಯತೆಯ ಅವಸ್ಥೆಯೇನಾಗಿತ್ತೆಂದರೆ, ಪ್ರವಾದಿವರ್ಯರ(ಸ) ಪಾವನ ಶರೀರದ ಮೇಲಿದ್ದ ಚದ್ದರವು ಜಾರಿ ಬೀಳುತ್ತಿತ್ತು. ತರುವಾಯ ಅವರು ದೇವಸನ್ನಿಧಿಯಲ್ಲಿ ಸಾಷ್ಟಾಂಗವೆರಗಿದರು. ಹಣೆ ನೆಲಕ್ಕೆ ತಾಗಿಸಿ ಅಂದರು,

"ಪ್ರಭೂ! ಈ ಕೆಲವು ಎಣಿಕೆಯ ಮಂದಿ ಇಂದು ನಾಶವಾಗಿ ಬಿಟ್ಟರೆ, ಮುಂದೆ ಲೋಕಾವಸಾನದ ವರೆಗೂ ನಿನ್ನ ಆರಾಧನೆ ಮಾಡುವವರಾರೂ ಎದ್ದು ಬರಲಾರರು."

ಈ ಪ್ರಾರ್ಥನೆಯು ವಾಸ್ತವದಲ್ಲಿ ದೇವದಾಸ್ಯದ ವಿಶಿಷ್ಟ ಸಂವೇದನೆಯಿಂದ ಕೂಡಿತ್ತು. ಅದರ ಒಳಾರ್ಥವನ್ನು ಸ್ವಯಂ ಮುಹಮ್ಮದ್(ಸ) ಅಥವಾ ಮುಹಮ್ಮದ್‌ರ(ಸ) ಪ್ರಭು ಮಾತ್ರವೇ ಬಲ್ಲರು. ಅತ್ತ ಅಲ್ಲಾಹನ ಮಾರ್ಗದಲ್ಲಿ ಯುದ್ಧ ನಡೆಯುತ್ತಿದೆ, ಇತ್ತ ಅನಾಥಮುತ್ತು(ಸ) ಪ್ರಾರ್ಥನಾ ನಿರತರಾಗಿದ್ದಾರೆ. ಅಲ್ಲಾಹನೇ ತನ್ನ ಸಂದೇಶ ವಾಹಕರ ಮೂಲಕ ಈ ಪ್ರಾರ್ಥನಾ ವಾಕ್ಯಗಳನ್ನು ಹೊರಡಿಸುತ್ತಿದ್ದಾನೆ. ಈ ಬಗ್ಗೆ ನಾವು ಇಷ್ಟೇ ಹೇಳಬಲ್ಲೆವು- ಈ ಸೂಕ್ಷ್ಮ ವಾಸ್ತವಿಕತೆಯನ್ನು ಮಣ್ಣಿನ ಪುತ್ಥಳಿಯಾದ ನಾವೇನು, ದೇವ ಸಂದೇಶ ಹೊತ್ತು ತರುತ್ತಿದ್ದ ಪವಿತ್ರಾತ್ಮರಿಗೂ ತಿಳಿದಿರಲಿಕ್ಕಿಲ್ಲ.

'ಫುಝ್ತು ಬಿರಬ್ಬಿಲ್ ಕಅ್‌ಬಃ'

ಎರಡೂ ಬಣಗಳು ವೀರಾವೇಶದಿಂದ ಹೋರಾಡುತ್ತಿದ್ದುವು. ಕುರೈಶ್ ಸತ್ಯನಿಷೇಧಿಗಳು ಅಜ್ಞಾನಜನ್ಯ ಪಕ್ಷಪಾತವನ್ನು ಸಾದ್ಯಂತ ಪ್ರದರ್ಶಿಸಿದರು. ಪ್ರತಿಯೋರ್ವ ಸತ್ಯನಿಷೇಧಿಯೂ

ಜೀವದ ಹಂಗು ತೊರೆದು ಹೋರಾಡುತ್ತಿದ್ದ. ಸತ್ಯನಿಷೇಧವು ಧೈಯ-ಸ್ಥೈರ್ಯದಲ್ಲಿ ಎಳ್ಳಷ್ಟೂ ಹಿಂದೆ ಬೀಳಲಿಲ್ಲ. ಕಾಫಿರರು ಲಾತ್, ಹುಬಲ್‌ಗಳಿಗೆ ಜೈಕಾರ ಹಾಕುತ್ತಾ ಖಡ್ಗ ಚಲಾಯಿಸುತ್ತಿದ್ದರು... ಅವರ ಪೈಕಿ ಖಡ್ಗ ವರಸೆಯಲ್ಲಿ ಅನುಭವ ಹೊಂದಿದವರು ಅನೇಕ ರಿದ್ದರು... ಪರಾಕ್ರಮಿ ಯುವಕರೂ ಸಾಕಷ್ಟಿದ್ದರು... ಮುಸ್ಲಿಮರನ್ನು ನಾಮಾವಶೇಷಗೊಳಿಸಿ ಬಿಡುವೆವು. ಅದರಲ್ಲಿ ನಮ್ಮ ಜೀವ ಹೋದರೂ ಚಿಂತಿಲ್ಲ ಎಂಬ ಒಂದು ನಿರ್ಧಾರ ದೊಂದಿಗೆ ಇವತ್ತು ಅವರು ರಣರಂಗಕ್ಕಿಳಿದಿದ್ದಾರೆ. ಅವರು ಪೆಟ್ಟು ತಿಂದೂ ಗಾಯಗೊಂಡೂ ಮುಂದಡಿಯಿಡಲು ಪ್ರಯತ್ನಿಸುತ್ತಿದ್ದಾರೆ. ಒಬ್ಬ ಹತನಾದರೆ, ಇನ್ನೊಬ್ಬ ಅವನ ಜಾಗದಲ್ಲಿ ಬಂದು ನಿಲ್ಲುತ್ತಾನೆ... ಅವರ ಬಳಿ ಜನ ಬಲದಲ್ಲಿ ಯಾವುದೇ ಕೊರತೆಯಿರಲಿಲ್ಲ... ಶಸ್ತ್ರಾಸ್ತ್ರಗಳೂ ಹೇರಳವಾಗಿ ಇದೆ... ಯಾರದಾದರೂ ಖಡ್ಗ ತುಂಡಾಗಿ ಬಿಟ್ಟರೆ ಅದಕ್ಕಿಂತಲೂ ತೀಕ್ಷ್ಣವಾದ ಖಡ್ಗವನ್ನು ಅವನಿಗೆ ಕೂಡಲೇ ಒದಗಿಸಲಾಗುತ್ತದೆ. ಇದು ಸತ್ಯ ಮತ್ತು ಮಿಥ್ಯ, ಇಸ್ಲಾಮ್ ಮತ್ತು ಕುಫ್ರ್ ನಡುವಿನ ಪ್ರಥಮ ಯುದ್ಧವಾಗಿತ್ತು. ಈ ಪ್ರಥಮ ಸಮರದಲ್ಲಿ ಸೋಲನುಭವಿಸಿದರೆ ನಮ್ಮ ಧೈರ್ಯ-ಸ್ಥೈರ್ಯ ಮತ್ತು ಪ್ರಸಿದ್ಧಿ-ಗೌರವಗಳೆಲ್ಲವೂ ಮಣ್ಣು ಗೂಡುವವು ಹಾಗೂ ಬಿಸಿ ರಕ್ತದ ತರುಣರು ನಿರಾಶರಾಗುವರು ಎಂಬುದು ಸತ್ಯನಿಷೇಧಿ ಗಳಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಇಂದು ವೀರಾವೇಶದಿಂದ ಹೋರಾಡಬೇಕಾದ ಅಗತ್ಯವಿದೆ... ಮುಸ್ಲಿಮರು ಸಂಖ್ಯೆಯಲ್ಲಿ ಬಹಳ ಕಡಿಮೆಯಿದ್ದಾರೆ... ಆಯುಧ ಬಲವೂ ಹೇಳಿಕೊಳ್ಳುವಷ್ಟೇನೂ ಇಲ್ಲ... ನಾವು ಪಟ್ಟು ಬಿಡದೆ ಸೆಣಸಿದರೆ ಈ ಹೊಟ್ಟೆಗೆ ಹಿಟ್ಟಿಲ್ಲದ ಬೆರಳೆಣಿಕೆಯ ಮಂದಿ ಎಷ್ಟು ಹೊತ್ತು ಹೋರಾಡಿಯಾರು?

ಆದರೆ ಸಹಾಬಿಗಳ ವಿಶ್ವಾಸ ಬಲವು ಸತ್ಯನಿಷೇಧಿಗಳ ಪಾದದಡಿಯ ನೆಲವನ್ನು ಕುಸಿಯುವಂತೆ ಮಾಡಿತ್ತು. ಒಬ್ಬೊಬ್ಬ ಧೀರ ಪರಾಕ್ರಮಿ ಮುಸ್ಲಿಮನು ನಿಷೇಧಿಗಳ ಪಂಕ್ತಿಯನ್ನು ಭೇದಿಸಿ ಕೈಗೆ ಸಿಕ್ಕವರನ್ನೆಲ್ಲ ತರಿದು ಬಿಡುತ್ತಿದ್ದ. ಕುರೈಶ್ ಸೇನೆಯ ಎಡ-ಬಲಗಳಲ್ಲಿ ಕೋಲಾಹಲವುಂಟಾಯಿತು. ಎಲ್ಲಿಯ ವರೆಗೆಂದರೆ ಪರಾಕ್ರಮಿ ಸಹಾಬಿಗಳು ಮಿಥ್ಯಾರಾಧಕರ ಸೇನಾವ್ಯೂಹವನ್ನೇ ಭೇದಿಸಿ ಹಾಕಿದರು. ಸಂಕಷ್ಟ, ಪೀಡಿತ, ಬಡ-ದರಿದ್ರರಾದ ದೇವವಿಶ್ವಾಸಿಗಳ ತುಂಡು ಖಡ್ಗಗಳು ಮತ್ತು ಹರಿದ ಯುದ್ಧ ಕವಚಗಳು... ಆದರೆ ಸತ್ಯಪರವಾದ ಹುಮ್ಮಸ್ಸು ಅವರಲ್ಲಿ ಅಪಾರ ಶಕ್ತಿಯನ್ನು ತುಂಬಿಸಿತ್ತು. ಅವರ ನಾಲಗೆ ಯಲ್ಲಿ ದೇವನಾಮೋಚ್ಚಾರವಿತ್ತು, ಕೈಯಲ್ಲಿ ಖಡ್ಗವಿತ್ತು... ಅತ್ಯಂತ ಸಮಾಧಾನ ಚಿತ್ತ, ದೃಢವಿಶ್ವಾಸ ಮತ್ತು ಧೀಮಂತಿಕೆಯೊಂದಿಗೆ ಅವರು ಸೆಣಸುತ್ತಿದ್ದರು... ಯಶಸ್ಸು ಅವರಿಗಾಗಿ ಬರೆಯಲ್ಪಟ್ಟಿರುವಂತೆ! ತಮ್ಮ ಅಲ್ಪಸಂಖ್ಯೆಯ ಬಗ್ಗೆ ಅವರಲ್ಲಿ ಎಳ್ಳಷ್ಟೂ ದುಃಖವಿದ್ದಿರಲಿಲ್ಲ. ಶತ್ರುಗಳ ಜನ ಬಲದಿಂದ ಭೀತರಾಗಿಯೂ ಇಲ್ಲ. ಇಡೀ ಅರೇಬಿಯವೇ ನಮ್ಮ ವಿರುದ್ಧ ನಿಂತರೆ ನಾವು ಹೋರಾಟಕ್ಕೆ ಸಿದ್ಧ. ಮುಹಮ್ಮದರ್ರ ಸೂಲುಲ್ಲಾಹ್‌ರ(ಸ) ಅನುಯಾಯಿಗಳು ಮರಣವನ್ನು ಒಂದು ಆಟದಂತೆ ಭಾವಿಸುತ್ತಾರೆ ಹಾಗೂ ಯಾವುದೇ

ದೊಡ್ಡ ಅಪಾಯ ಎದುರಾದರೂ ಅದನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ ಎಂದು ಇಡೀ ಜಗತ್ತು ನೋಡಲಿದೆ.

ಅನಾಥಮುತ್ತು ಹುಲ್ಲು ಛಾವಣಿಯ ಗುಡಾರದಿಂದ ಸಹಾಬಿಗಳ ಪರಾಕ್ರಮವನ್ನು ವೀಕ್ಷಿಸುತ್ತಿದ್ದಾರೆ. ಮುಜಾಹಿದರು ಗಾಯಗೊಂಡಷ್ಟೂ ಉತ್ಸಾಹದಿಂದ ಖಡ್ಗ ಚಲಾಯಿಸುತ್ತಿದ್ದಾರೆ. ಹಣೆಗೆ ಆದ ಗಾಯದಿಂದ ರಕ್ತ ಒಸರಿದರೆ ಆ ವೀರ ಮುಜಾಹಿದರು (ಯೋಧ) 'ಫುಝ್ತು ಬಿರಬ್ಬಿಲ್ ಕಅ್‌ಬಃ' (ಕಅಬಾದ ಪ್ರಭುವಿನ ಆಣೆ ನಾನು ಯಶಸ್ವಿಯಾದೆ) ಎನ್ನುತ್ತಾ ಆ ನೆತ್ತರ ಕಾರಂಜಿಯಿಂದ ಮುಖವನ್ನು ಕೆಂಪೇರಿಸುತ್ತಿದ್ದರು. ಧೂಳು ಮತ್ತು ರಕ್ತದಿಂದ ಮಿಂದೇಳುತ್ತಿರುವ ಪ್ರತಿಯೋರ್ವ ಮುಜಾಹಿದನೂ ತನ್ನ ಅದೃಷ್ಟಕ್ಕೆ ಹೆಮ್ಮೆಪಟ್ಟುಕೊಳ್ಳುತ್ತಿದ್ದ... ಜೀವನಾಡಿಯಿಂದ ಹೊರಟ ನೆತ್ತರು 'ನಾವು ನಿಮ್ಮ ಕಂಠನಾಡಿಗಿಂತಲೂ ಹತ್ತಿರವಿದ್ದೇವೆ' ಎಂಬ ಕುರ್‌ಆನ್ ವಾಕ್ಯಕ್ಕೆ ಸಾಕ್ಷ್ಯ ವಹಿಸುತ್ತಿದೆ... ಮಾತ್ರವಲ್ಲ, ಸ್ವಯಂ ಲೋಕನಾಯಕ ನಮ್ಮ ಪರಾಕ್ರಮ ಮತ್ತು ಜೀವಾರ್ಪಣೆಯನ್ನು ವೀಕ್ಷಿಸುತ್ತಿದ್ದಾರೆ. ಇದಕ್ಕಿಂತ ಮಿಗಿಲಾದ ಅನುಗ್ರಹ ಬೇರೇನಿದೆ?

ಕೊನೆಗೂ ಸತ್ಯನಿಷೇಧವು ಸತ್ಯವಿಶ್ವಾಸವನ್ನು ಹೆಚ್ಚು ಹೊತ್ತು ಎದುರಿಸಲಾರದೆ ಹೋಯಿತು. ಸತ್ಯದ ಮುಂದೆ ಮಿಥ್ಯವು ಜಯ ಗಳಿಸಲಿಲ್ಲ. ಲಾತ್ ಮತ್ತು ಹುಬಲ್‌ಗಳನ್ನು ಪೂಜಿಸುತ್ತಿದ್ದವರು ಏಕದೇವನನ್ನು ಆರಾಧಿಸುವವರ ಮುಂದೆ ಕಾಲೂರದೆ ಹೋದರು. ಸಜ್ಜನರಿಗೆ ಯಶಸ್ಸು ಮತ್ತು ದುರ್ಜನರಾದ ಭ್ರಷ್ಟರಿಗೆ ಸೋಲು ಅನುಭವಿಸಬೇಕಾಗಿ ಬಂತು. ಕುರೈಶರ ಅಹಂಕಾರ ಮುರಿಯಿತು. ಕೋಮುವಾದ ಮತ್ತು ಪರಂಪರಾಗತ ಮಿಥ್ಯ ವಿಶ್ವಾಸವು ಮಣ್ಣು ಮುಕ್ಕಲೇ ಬೇಕಾಯಿತು. ಅಬೂಜಹಲ್ ಅವಮಾನಿತನಾಗಿ ನೆಲಕಚ್ಚಿದ. ಉತ್ಬಾ ಗಾಯಗಳ ನೋವು ತಾಳಲಾರದೆ ಕೊನೆಯುಸಿರೆಳೆದ. ಶೈಬಾ ನರಳುತ್ತಲೇ ಕಣ್ಣು ಮುಚ್ಚಿದ. ಅವರೆಲ್ಲ ನೋಡುತ್ತಿದ್ದರು... ಮುಸ್ಲಿಮರು ನಮ್ಮ ಪಂಕ್ತಿಗಳನ್ನು ಭೇದಿಸುತ್ತಿದ್ದಾರೆ ಮತ್ತು ನಮ್ಮ ವೀರಾಗ್ರೇಸರು ಆ ಪರಾಕ್ರಮಿ ಸಿಂಹಗಳ ಮುಂದೆ ನರಿಯಂತೆ ಬಾಲ ಮುದುರಿಸಿ ಓಟಕ್ಕೀಳುತ್ತಿದ್ದಾರೆ... ಒಂದು ವೇಳೆ ನಾವು ಸೋಲೊಪ್ಪಿಕೊಳ್ಳದೆ ಹೋದರೆ ನಮ್ಮ ಪೈಕಿ ಬಹುಶಃ ಯಾರೊಬ್ಬನೂ ಜೀವ ಸಹಿತ ಉಳಿಯಲಾರ... ಈ ಮುಸ್ಲಿಮರನ್ನು ಎದುರಿಸುವುದು ನಮ್ಮಿಂದ ಸಾಧ್ಯವಿಲ್ಲದ ಮಾತು... ಮುಸ್ಲಿಮ್ ಸೇನೆಯ ಯುವಕರೇನು! ಅವರು ಮೀಸೆಯೂ ಮೊಳೆತಿರದ ನವ ತರುಣ ಯೋಧರು!! ಅಬ್ಬಬ್ಬಾ... ಎಂಥ ಪರಾಕ್ರಮದಿಂದ ಖಡ್ಗ ಬೀಸುತ್ತಿದ್ದಾರೆ!!!

ತಮ್ಮ ವೈಫಲ್ಯ ಮತ್ತು ಸೇನೆಯ ಚೆಲ್ಲಾಪಿಲ್ಲಿಯಾದ ದೃಶ್ಯ ಕಂಡು ಕುರೈಶ್ ಸರದಾರರು ಸೋಲೊಪ್ಪಿದರು. ಶರಣಾಗತರಾದರು. ಖಡ್ಗಗಳನ್ನು ನೆಲಕ್ಕೆ ಬಿಸುಟರು. ಭರ್ಜಿಗಳ ಮೊನೆಯನ್ನು ಕೆಳಮುಖವಾಗಿ ಹಿಡಿದರು. ಬತ್ತಳಿಕೆಗಳನ್ನು ಉಲ್ಟಾ ನೇತಾಡಿಸಿದರು. ಅಹಂಕಾರದಿಂದ ಸೆಟೆದಿದ್ದ ಕೊರಳು ಕೆಳಗೆ ಬಾಗಿತು. ತುಟಿಗಳಲ್ಲಿ ಅವಮಾನದ ಬೀಗ ಜಡಿಯಲ್ಪಟ್ಟಿತು. ಆದರೆ ಮೌನವು

ಸ್ವಯಂ ಮಾತಾಡಿತು- ನಾವು ಸೋಲೊಪ್ಪಿಕೊಳ್ಳುತ್ತೇವೆ... ಈಗ ನಾವು ನಿಮ್ಮ ಕೃಪಾಶ್ರಯದಲ್ಲಿದ್ದೇವೆ... ನಮ್ಮೊಡನೆ ಯಾವ ರೀತಿ ಬೇಕಾದರೂ ವ್ಯವಹರಿಸಬಹುದು. ನಾವು ನಿಮ್ಮನ್ನು ಅಳಿಸಿ ಹಾಕುವ ಇರಾದೆಯೊಂದಿಗೆ ಬಂದಿದ್ದೆವು... ಆದರೆ ಅದೃಷ್ಟ ಕೈ ಕೊಟ್ಟಿತು... ಸೇನೆಯಲ್ಲಿ ಜನಬಲ-ಆಯುಧ ಬಲ ಅಧಿಕವಾಗಿದ್ದೂ ನಾವು ವಿಫಲರಾದೆವು... ಆದರೆ ನಮ್ಮ ವೀರ ಸೇನಾನಿಗಳು ಹೇಡಿತನ ಪ್ರದರ್ಶಿಸಲಿಲ್ಲ... ವೀರಾವೇಶದಿಂದಲೇ ಹೋರಾಡಿದ್ದರು... ಕುರೈಶರು ಮರಣಕ್ಕೆ ಕಣ್ಣಲ್ಲಿ ಕಣ್ಣಿಟ್ಟು ಖಡ್ಗ ಬೀಸಿದ್ದರು... ಆದರೇನಂತೆ! ರಣರಂಗ ನಿಮ್ಮ ಪಾಲಾಯಿತು... ನಾವು ನಿಮ್ಮನ್ನು ದುರ್ಬಲರು, ನೀಚರು, ಹೊಟ್ಟೆಗೆ ಹಿಟ್ಟಿಲ್ಲದವರು ಮತ್ತು ಆಶ್ರಯ ಹೀನರು ಎಂದು ಭಾವಿಸಿದ್ದೆವು... ಆದರೆ ನಮ್ಮ ಎಲ್ಲ ಊಹೆಗಳೂ ಸುಳ್ಳಾದುವು... ನೀವಂತೂ ದೃಢ ನಿಶ್ಚಯದ ಅಚಲ ಪರ್ವತದಂತೆ ಕಂಡಿರಿ... ಅಕಟಾ! ನಮ್ಮ ಈ ಅವಮಾನವನ್ನು ನೋಡುವ ದೌರ್ಭಾಗ್ಯ ನಮಗೆ ಒದಗದೆ ಇರುತ್ತಿದ್ದರೆ... ಅಬೂಜಹಲ್ ಮತ್ತು ಶೈಬಾರಂತೆಯೇ ನಮ್ಮ ಶವಗಳೂ ಮಣ್ಣಲ್ಲಿ ಹೂತು ಹೋಗಿರುತ್ತಿದ್ದರೆ...!!

ಬದ್ರ್‌ನ ಕೈದಿಗಳು

ಸತ್ಯನಿಷೇಧಿಗಳ ಮೃತದೇಹಗಳನ್ನೊಮ್ಮೆ ಅವಲೋಕಿಸಲಾಯಿತು. ದೊಡ್ಡ ದೊಡ್ಡ ಕುರೈಶಿ ಸರದಾರರು ವಧಿಸಲ್ಪಟ್ಟಿದ್ದಾರೆ. ಸ್ವತಃ ಸೇನಾ ದಂಡನಾಯಕ ಹತನಾಗಿದ್ದಾನೆ ಮತ್ತು ಅವನ ಮೃತ ದೇಹವು ಹಾಗೆಯೇ ವಾರೀಸುದಾರರಿಲ್ಲದೆ ಬಿದ್ದುಕೊಂಡಿದೆ. ದಾರುನ್ನದ್‌ವಾದಲ್ಲಿ ಪ್ರವಾದಿವರ್ಯ(ಸ) ಹತ್ಯೆಯ ಸಲಹೆಗೆ ಸಮ್ಮತಿ ಸೂಚಿಸಿದ್ದ ಹದಿನಾಲ್ಕು ಮಂದಿಯ ಪೈಕಿ ಹನ್ನೊಂದು ಮಂದಿ ಈಗ ಬದ್ರ್ ರಣಾಂಗಣದಲ್ಲಿ ಶವವಾಗಿ ಬಿದ್ದಿದ್ದಾರೆ. ಈ ಬದ್ರ್ ಯುದ್ಧದಲ್ಲಿ ಕುರೈಶ್ ಸರದಾರರುಗಳ ಜೀವನವೇ ಛಿದ್ರಛಿದ್ರವಾಗಿ ಹೋಯಿತು. ಅರೇಬಿಯದಲ್ಲಾದ ಯಾವುದೇ ಇತರ ಯುದ್ಧಗಳಲ್ಲಿ ಕುರೈಶರ ಪೈಕಿ ಇಷ್ಟು ದೊಡ್ಡ ಸಂಖ್ಯೆಯ ನಾಯಕರು, ಸರದಾರರು ಹತರಾದ ಇತಿಹಾಸ ವಿಲ್ಲ. ಬದ್ರ್‌ನಲ್ಲಿ ಕುರೈಶ್ ಸತ್ಯನಿಷೇಧಿಗಳ ಸೋಲು ವಾಸ್ತವದಲ್ಲಿ ಅವರ ಅಧಿಕಾರ ಮತ್ತು ಪ್ರಭುತ್ವದ ಸೋಲಾಗಿದೆ. ಈ ಸೋಲಿನ ದೀರ್ಘಕಾಲೀನ ಪರಿಣಾಮ ಇನ್ನು ಮುಂದೆ ಎದುರಾಗಲಿದೆಯೆಂಬುದರ ಹಲವು ಲಕ್ಷಣಗಳು ಈಗಾಗಲೇ ಗೋಚರಿಸ ತೊಡಗಿವೆ. ಆದರೆ ಈ ಒಂದು ಹಂತದಲ್ಲಿ ಸತ್ಯನಿಷೇಧದ ಅವಮಾನವು ಮುಗಿದು ಹೋಗುವುದಿಲ್ಲ. ಇನ್ನೂ ಅದಕ್ಕೆ ಬಹಳಷ್ಟು ಅವಮಾನಕ್ಕೀಡಾಗಲಿಕ್ಕಿದೆ. ಮಿಥ್ಯದ ಯಾವುದೇ ಕುರುಹನ್ನೂ ಉಳಿದು ಬಿಡಲು ಇಸ್ಲಾಮ್ ಅವಕಾಶ ನೀಡದು. ಪ್ರಕಾಶ ಮತ್ತು ಮಬ್ಬುಗತ್ತಲು ಹೇಗೆ ಒಂದೇ ಕಡೆ ಇರಲು ಸಾಧ್ಯವಿಲ್ಲವೋ ಸತ್ಯ ಮತ್ತು ಮಿಥ್ಯವೂ ಬೆರೆತುಕೊಂಡಿರಲು ಸಾಧ್ಯವಿಲ್ಲ.

ಕುರೈಶರ ಎಪ್ಪತ್ತು ಮಂದಿ ಬಂಧಿತರಾಗಿ ಮದೀನಕ್ಕೆ ತರಲ್ಪಟ್ಟರು. ಇವರೆಲ್ಲರೂ ಧೀರ ಕಲಿಗಳೆಂದು ಖ್ಯಾತರಾಗಿದ್ದವರು. ತಂತಮ್ಮ ಗೋತ್ರಗಳಲ್ಲಿ ಅವರನ್ನು ಅಪಾರ ಗೌರವಾದರದಿಂದ ಕಾಣಲಾಗುತ್ತಿತ್ತು. ಸೋಲಿನ ನಿರಾಶೆಯಿಂದಾಗಿ ಅವರ ಕೆಂಬಿಳಿ ವರ್ಣದ ಮುಖಗಳು ಕಪ್ಪಿಟ್ಟಿದ್ದುವು... ಕಣ್ಣುಗಳು ಶುಷ್ಕವಾಗಿದ್ದುವು, ಆದರೆ ಹೃದಯವು ರೋದಿಸುತ್ತಿತ್ತು... ಪ್ರವಾದಿವರ್ಯರ(ಸ) ಚಿಕ್ಕಪ್ಪ ಅಬ್ಬಾಸ್ ಅದುವರೆಗೂ ಸತ್ಯ ಸ್ವೀಕರಿಸಿರಲಿಲ್ಲ. ಅವರು ತಮ್ಮ ಬಂಧುಗಳೊಡಗೂಡಿ ಕುರೈಶರ ಮಿಥ್ಯ ವಿಶ್ವಾಸ ದೊಂದಿಗೆ ಬದ್ರ್ ಯುದ್ಧದಲ್ಲಿ ಪರಾಕ್ರಮ ಮೆರೆದಿದ್ದರು. ಆದರೆ ಬಂಧಿಯಾಗಿ

ಮದೀನಕ್ಕೆ ತರಲ್ಪಟ್ಟರು.

ಬದ್ರ್‌ನ ಕೈದಿಗಳನ್ನು ಮಸ್ಜಿದುನ್ನಬವಿಯ ಕಂಬಗಳಿಗೆ ಕಟ್ಟಲಾಯಿತು. ಅಬ್ಬಾಸ್‌ರೂ ಬಂಧನದ ಸಂಕಷ್ಟವನ್ನು ಅನುಭವಿಸಿದರು. ಪ್ರವಾದಿವರ್ಯರ(ಸ) ಸೂಚನೆಯ ಮೇರೆಗೆ ಅಬ್ಬಾಸ್‌ರನ್ನು ಬಿಗಿದಿದ್ದ ಕಟ್ಟನ್ನು ಸಡಿಲಿಸಲಾಯಿತು. ಅಂದು ರಾತ್ರಿಯ ವೇಳೆ ಪ್ರವಾದಿವರ್ಯರು(ಸ) ಕಳವಳದಿಂದ ಮಸ್ಜಿದುನ್ನಬವಿಯ ವರಾಂಡದಲ್ಲಿ ಅಡ್ಡಾಡತೊಡಗಿದರು. ಸಹಾಬಿಗಳು ಆಶ್ಚರ್ಯಗೊಂಡು ವಿಚಾರಿಸಿದರು, "ಯಾ ರಸೂಲುಲ್ಲಾಹ್(ಸ)! ತಾವು ನಿದ್ರಿಸಲಿಲ್ಲವೇ?" ಅನಾಥಮುತ್ತು ಕ್ಷೀಣ ಸ್ವರದಲ್ಲಿ ಇಂತೆಂದರು, "ನನಗೆ ಕೈದಿಗಳ ಅವಸ್ಥೆಯನ್ನು ನೋಡಲಾಗುತ್ತಿಲ್ಲ." ಸಹಾಬಿಗಳು ಅಬ್ಬಾಸ್‌ರಂತೆಯೇ ಇತರೆಲ್ಲ ಕೈದಿಗಳ ಬಂಧನವನ್ನೂ ಸಡಿಲಿಸಿದರು. ಹೀಗೆ ಬದ್ರ್‌ನ ಕೈದಿಗಳಿಗೆ ಸಮಾಧಾನವಾಯಿತೆಂದು ಭಾಸವಾದ ಮೇಲಷ್ಟೇ ಅನಾಥಮುತ್ತು(ಸ) ನಿರಮ್ಮಳರಾದರು.

ಈ ಬದ್ರ್ ಕೈದಿಗಳು ವಸ್ತುತಃ ಅನಾಥಮುತ್ತು(ಸ) ಮತ್ತು ಅವರ ಸಂಗಾತಿಗಳ ರಕ್ತದಾಹಿಗಳಾಗಿದ್ದರು. ಅವರು ಮುಸ್ಲಿಮರ ಮೇಲೆ ಹಲವು ರೀತಿಯಲ್ಲಿ ವೇದನಾಜನಕ ದೌರ್ಜನ್ಯಗಳನ್ನು ಎಸಗಿದ್ದರು. ಆದರೆ ಲೋಕಾನುಗ್ರಹಿಯು(ಸ) ಇಸ್ಲಾಮಿನ ಆ ವೈರಿ ಗಳಿಗೆ ಉಡಲು ವಸ್ತ್ರ ನೀಡಿದರು. ಧೂಳು, ರಕ್ತ ಮೆತ್ತಿದ್ದ ಬಟ್ಟೆಯ ಜಾಗದಲ್ಲಿ ಸ್ವಚ್ಛ ಶುಭ್ರ ಕುರ್ತಾಗಳು. ಹ. ಅಬ್ಬಾಸ್ ನೀಳಕಾಯದವರಾಗಿದ್ದರು. ಇತರೆಲ್ಲರಿಗಿಂತ ಕೊಂಚ ಹೆಚ್ಚೇ ಎತ್ತರವಿದ್ದರು. ಹಾಗಾಗಿ ಅವರಿಗೆ ಯಾರದೇ ಬಟ್ಟೆ ಸರಿ ಹೊಂದುತ್ತಿರಲಿಲ್ಲ. ಮದೀನ ದಲ್ಲಿ ಮುನಾಫಿಕರ ಸರದಾರನೊಬ್ಬ ಇದ್ದ- ಅಬ್ದುಲ್ಲಾ ಬಿನ್ ಉಬೈ. ಅವನ ನೀಳ ಕಾಯವು ಮದೀನದಲ್ಲಿ ಬಹು ಚರ್ಚಿತವಾಗಿತ್ತು. ಪ್ರವಾದಿವರ್ಯರು(ಸ) ಆತನ ಬಟ್ಟೆ ಯನ್ನು ತರಿಸಿ ಅಬ್ಬಾಸ್‌ರಿಗೆ ಉಡಲು ಕೊಟ್ಟರು.

ಚಿಕ್ಕಪ್ಪ ಅಬ್ಬಾಸ್‌ರ ಮೇಲೆ ಅಬ್ದುಲ್ಲಾ ಬಿನ್ ಉಬೈ ಮಾಡಿದ್ದ ಈ ಉಪಕಾರವನ್ನು ಪ್ರವಾದಿವರ್ಯರು(ಸ) ಎಂದೂ ಮರೆಯಲಿಲ್ಲ. ಕಪಟ ವಿಶ್ವಾಸಿಗಳ ಸರದಾರನಾದ ಅಬ್ದುಲ್ಲಾ ಬಿನ್ ಉಬೈ ಮರಣ ಹೊಂದಿದಾಗ ಪ್ರವಾದಿವರ್ಯರು(ಸ) ತಮ್ಮ ಚದ್ದರವನ್ನು ಆತನ ಶವವಸ್ತ್ರಕ್ಕಾಗಿ ನೀಡುವ ಮೂಲಕ ಆ ಉಪಕಾರವನ್ನು ತೀರಿಸಿದರು. ಆದರೆ ವಸ್ತುಗಳ ಸಂಬಂಧದಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಅಂದು ಅಬ್ಬಾಸ್‌ರಿಗೆ ನೀಡಲಾದದ್ದು ಕಪಟ ವಿಶ್ವಾಸಿಗಳ ಸರದಾರನ ಕುರ್ತಾ; ಇಲ್ಲಿ ಅದಕ್ಕೆ ಪ್ರತಿಯಾಗಿ ಆ ಕಪಟ ವಿಶ್ವಾಸಿಗೆ ದೊರೆತದ್ದು ಸಕಲ ಪ್ರವಾದಿಗಳ ಸರದಾರರಾದ ಮುಹಮ್ಮದ್(ಸ) ಬಿನ್ ಅಬ್ದುಲ್ಲಾರ ಚದ್ದರವಾಗಿತ್ತು. ಈ ಮೂಲಕ ಶವವಸ್ತ್ರದ ರೂಪದಲ್ಲಿ ಅಬ್ದುಲ್ಲಾ ಬಿನ್ ಉಬೈ ಎಂಬ ಕಪಟಿಗೆ ದೊರೆತ ಸೌಭಾಗ್ಯ ಇತರ ಯಾರಿಗೂ ದೊರೆತಿರಲಿಲ್ಲ. ಲೋಕಾನುಗ್ರಹಿಯು(ಸ) ಇಬ್ನು ಉಬೈಯ ಮೇಲೆ ತನ್ನ ಪ್ರತ್ಯುಪಕಾರವನ್ನು ತೀರಿಸಿದ ರೀತಿ ಅಮೋಘವಾಗಿತ್ತು.

ಬದ್ರ್‌ನ ಕೈದಿಗಳು ಖಂಡಿತವಾಗಿಯೂ ವಧಾ ಶಿಕ್ಷೆಗೆ ಅರ್ಹರಾಗಿದ್ದರು. ಉಮರುಲ್ ಫಾರೂಕ್(ರ) ಕೂಡ ಇದೇ ಅಭಿಪ್ರಾಯವನ್ನು ಹೊಂದಿದ್ದರು ಮತ್ತು ತಾನು ತನ್ನ ಬಂಧುಗಳನ್ನೂ ಅಲಿಯವರು(ರ) ಅವರ ಬಂಧಗಳನ್ನೂ ವಧಿಸುವಂತಾಗ ಬೇಕು ಎಂದೂ ಹೇಳಿದ್ದರು. ಆದರೆ ಅನಾಥಮುತ್ತು(ಸ) ಕೈದಿಗಳನ್ನು ತೀರಾ ಸಾಮಾನ್ಯ ವಾದ ಪರಿಹಾರ ಪಡೆದು ಬಿಡುಗಡೆಗೊಳಿಸಿದರು. ಓದು ಬರೆಹ ತಿಳಿದಿರುವ ಕೈದಿಗಳಿಂದ ಮಾತ್ರ ಧನ ಪರಿಹಾರವನ್ನು ಪಡೆಯಲಿಲ್ಲ. ಬದಲಾಗಿ ಅನ್ಸಾರರ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿ ಕೊಡುವುದೇ ಅವರ ಪರಿಹಾರ ಎಂದು ಸಾರಿದರು.

ಅಲ್ಲಾಹನು ಬದ್ರ್‌ನಲ್ಲಿ ಮುಸ್ಲಿಮರಿಗೆ ದೊರೆತ ವಿಜಯವನ್ನು ಈ ರೀತಿ ಬಣ್ಣಿಸಿದ್ದಾನೆ,

"ನೀವು ದುರ್ಬಲರಾಗಿದ್ದಿರಿ. ಅಲ್ಲಾಹನು ನಿಮಗೆ ಸಹಾಯ ಮಾಡಿದನು. ಇನ್ನು ನೀವು ಅಲ್ಲಾಹನ ಮೇಲೆ ನಿಷ್ಠೆಯನ್ನಿರಿಸಿಕೊಳ್ಳಿರಿ ಮತ್ತು ಕೃತಜ್ಞತೆಯನ್ನು ಕೈಗೊಳ್ಳಿರಿ."

ಕೊಲ್ಲ ಬಂದವರ ಅವಸ್ಥೆ

ಬದ್ರ್‌ನಲ್ಲಿ ಕುರೈಶರ ಸೋಲಿನ ಸುದ್ದಿ ಮಕ್ಕಾ ನಗರಕ್ಕೆ ತಲುಪಿದಾಗ ಊರಿಡೀ ಸೂತಕದ ಶೋಕದಲ್ಲಿ ಮುಳುಗಿತು. ಪ್ರತಿಯೋರ್ವನೂ ದುಃಖಾತಿರೇಕದಲ್ಲಿ ರೋದಿಸುತ್ತಿದ್ದ. ಅಷ್ಟ ದಿಕ್ಕುಗಳಲ್ಲಿಯೂ ಬದ್ರ್ ಯುದ್ಧದ್ದೇ ಚರ್ಚೆ, ವಿಮರ್ಶೆ... ಈ ಪರಾಜಯದ ಬಗ್ಗೆ ಎಲ್ಲರಿಗೂ ದುಃಖವಾಗಿತ್ತು. ವಹಬ್‌ರ ಪುತ್ರ ಉಮೈರ್, ಪ್ರವಾದಿ(ಸ) ಮತ್ತವರ ಸಂಗಾತಿಗಳ ವಿರುದ್ಧ ದ್ವೇಷವಿರಿಸಿಕೊಂಡವರಲ್ಲಿ ಮುಂಚೂಣಿಯಲ್ಲಿದ್ದರು. ಅವರು ತನ್ನ ಮಿತ್ರ ಸಫ್‌ವಾನ್ ಬಿನ್ ಉಮಯ್ಯರೊಡಗೂಡಿ ಒಂದೆಡೆ ಕುಳಿತು ಬದ್ರ್‌ನಲ್ಲಿ ಹತರಾದವರ ಕುರಿತು ಶೋಕಾಚರಿಸುತ್ತಿದ್ದರು. ಅವರ ಸಂಭಾಷಣೆಯೇನು, ಅದೊಂದು ವೇದನಾಜನಕ ದುಃಖಗೀತೆಯಾಗಿತ್ತು.

"ಉಮೈರ್! ಈ ಅವಮಾನಕಾರಿ ವೈಫಲ್ಯದ ಬಳಿಕ ಜೀವನದಲ್ಲಿ ಆಸಕ್ತಿಯೇ ಉಳಿದಿಲ್ಲ..." ಸಫ್‌ವಾನ್ ನಿಟ್ಟುಸಿರು ಬಿಟ್ಟರು.

"ನೀವು ಹೇಳುತ್ತಿರುವುದು ಸತ್ಯ ಸಫ್‌ವಾನ್! ಒಂದು ವೇಳೆ ನನ್ನ ಮೇಲೆ ಸಾಲದ ಹೊರೆ ಮತ್ತು ಕುಟುಂಬ ಪೋಷಣೆಯ ಹೊಣೆ ಇಲ್ಲದಿರುತ್ತಿದ್ದರೆ, ನಾನು ಕುದುರೆಯೇರಿ ಮದೀನ ತಲುಪುತ್ತಿದ್ದೆ ಹಾಗೂ ಮುಹಮ್ಮದ್‌ಗೆ(ಸ) ಒಂದು ಗತಿ ಕಾಣಿಸಿ ಬಿಡುತ್ತಿದ್ದೆ. ಮದೀನದಲ್ಲಿ ನನ್ನ ಮಗನೂ ಬಂಧಿಯಾಗಿದ್ದಾನೆ..." ಉಮೈರ್ ವಿಷಾದದಿಂದ ನುಡಿದರು.

"ನೀವು ಸಾಲದ ಚಿಂತೆ ಮತ್ತು ಮಕ್ಕಳು ಮರಿಗಳ ಆಲೋಚನೆ ಬಿಟ್ಟು ಬಿಡಿ. ನಾನು ಆ ಬಗ್ಗೆ ಹೊಣೆಗಾರಿಕೆಯನ್ನು ಖಾತ್ರಿ ಪಡಿಸುತ್ತೇನೆ. ನನ್ನ ಮೇಲೆ ಸಂಪೂರ್ಣ ವಿಶ್ವಾಸ ವಿರಿಸಿ ಉಮೈರ್!"

ಸಫ್‌ವಾನ್‌ರಿಂದ ಹೊಣೆಗಾರಿಕೆಯ ಭರವಸೆ ದೊರೆತದ್ದೇ ತಡ, ಉಮೈರ್ ಮನೆಯ ಕಡೆಗೆ ಧಾವಿಸಿದರು. ಪತ್ನಿಯೊಡನೆಂದರು, "ನಾನು ಮದೀನಕ್ಕೆ ಹೊರಡುತ್ತಿದ್ದೇನೆ. ನಿನ್ನ ಮಗನನ್ನು ಬಂಧಮುಕ್ತಗೊಳಿಸಿ ತರುವೆನು. ನನ್ನ ಈ ವಿಷಲೇಪಿತ ಖಡ್ಗದ ಪೆಟ್ಟಿನಿಂದ ಮುಹಮ್ಮದ್(ಸ) ತಪ್ಪಿಸಲಾರರು. ಬದ್ರ್‌ನಲ್ಲಿ ಹತರಾದವರ ರಕ್ತ ಪ್ರತೀಕಾರದ ಮೊದಲ ಕಂತು ಇದು!"

ಉಮೈರ್, ಶರವೇಗಿ ಒಂಟೆಯನ್ನೇರಿ ಮದೀನದೆಡೆಗೆ ದೌಡಾಯಿಸಿದರು. ದಾರಿಯಲ್ಲಿ ಅಗತ್ಯಾನುಸಾರ ಅಲ್ಲಲ್ಲಿ ತಂಗುತ್ತ, ವಿಶ್ರಾಂತಿ ಪಡೆದು ಕೊಂಚ ಪ್ರಫುಲ್ಲರಾದ ಬಳಿಕ ಪ್ರಯಾಣ

ಮುಂದುವರಿಸುತ್ತಿದ್ದರು. ಅವರು ಆದಷ್ಟು ಶೀಘ್ರ ಮದೀನ ತಲುಪಲು ಉತ್ಸುಕ ರಾಗಿದ್ದರು. ಆಗಾಗ ವಿಷಲೇಪಿತ ಖಡ್ಗವನ್ನು ನೋಡುತ್ತಿದ್ದರು... "ಒಂದೇ ಏಟಿಗೆ ಮುಹಮ್ಮದ್ ಕಣ್ಣು ಮುಚ್ಚಿದಂತೆಯೇ ಸರಿ (ನಊದುಬಿಲ್ಲಾಹ್!) ಖಡ್ಗವು ಮೊದಲೇ ಹರಿತವಾಗಿದೆ... ಮೇಲಾಗಿ ವಿಷ ಲೇಪನದಿಂದ ಅದನ್ನು ಮರಣದ ದೂತನಂತೆಯೇ ಮಾರ್ಪಡಿಸಿದ್ದೇನೆ. ಇದರ ಸಣ್ಣ ಗಾಯವೇ ಶತ್ರುವನ್ನು ಮುಗಿಸಿ ಬಿಡಲು ಸಾಕು..." ಉಮೈರ್ ಬಿನ್ ವಹಬ್‌ರ ಮನಸ್ಸಿನಲ್ಲಿ ಹೀಗೆ ಹಲವು ಆಲೋಚನೆಗಳು ಹಾದು ಹೋದುವು.

ಉಮೈರ್ ಮದೀನ ತಲುಪಿದಾಗ ಹ. ಉಮರ್(ರ) ಅವರಿಗೆದುರಾದರು. ಅವರ ಮುಖಭಾವ ಕಂಡೇ ಉಮರುಲ್ ಫಾರೂಕ್‌ರವರು(ರ) ಈತನು ಯಾವುದೋ ದುರುದ್ದೇಶ ದಿಂದ ಬಂದಿದ್ದಾನೆಂದು ಗ್ರಹಿಸಿದರು. ಆ ಕೂಡಲೇ ಅವರು(ರ) ಉಮೈರ್‌ರ ಕೊರಳಿಗೆ ಕೈ ಹಾಕಿ, ಅದೇ ಸ್ಥಿತಿಯಲ್ಲಿ ಬಹುತೇಕ ಎಳೆದುಕೊಂಡೇ ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ತಲುಪಿಸಿದರು. ಅನಾಥಮುತ್ತು(ಸ) ಹೇಳಿದರು, "ಉಮರ್! ಈ ವ್ಯಕ್ತಿಯನ್ನು ಬಿಟ್ಟುಬಿಡಿ." ರಸೂಲುಲ್ಲಾಹ್‌ರ(ಸ) ಆದೇಶ ಕೇಳಿದ್ದೇ ತಡ, ಉಮರ್‌ರವರ ಪಟ್ಟು ತಂತಾನೇ ಸಡಿಲ ವಾಯಿತು. ತರುವಾಯ ಪ್ರವಾದಿವರ್ಯರು(ಸ) ಉಮೈರ್‌ರನ್ನು ಹತ್ತಿರ ಕರೆದು ಕೇಳಿದರು,

"ಯಾವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೀರಿ?"

"ನನ್ನ ಮಗನನ್ನು ಬಂಧಮುಕ್ತಗೊಳಿಸುವ ಉದ್ದೇಶದಿಂದ" ಎಂದು ಉಮೈರ್ ಉತ್ತರಿಸಿದರು.

"ಹಾಗಾದರೆ ಈ ಖಡ್ಗವನ್ನು ಯಾಕೆ ಕೊರಳಿಗೆ ನೇತಾಡಿಸಿದ್ದೀರಿ?" ಲೋಕಾನುಗ್ರಹಿ(ಸ) ಪುನಃ ಪ್ರಶ್ನಿಸಿದರು.

"ನಮ್ಮ ಈ ಖಡ್ಗಗಳು ಬದ್ರ್‌ನಲ್ಲಿ ಯಾವ ಪ್ರಯೋಜನಕ್ಕೆ ಬಂತು? ಇದಂತೂ..." ಉಮೈರ್‌ರ ಸ್ವರ ತಗ್ಗಿತು- ಬದ್ರ್‌ನ ಹೆಸರೆತ್ತುವಾಗಲೇ ಅವರ ಮನಸ್ಸಿಗಾಗಿದ್ದ ಗಾಯ ಮತ್ತೆ ಹಸಿಯಾದಂತೆ! ಕೊನೆಯ ಪದವನ್ನು ತೀರಾ ಮೆಲುವಾಗಿ ಉಚ್ಚರಿಸಿದರು. ಮಾತು ಹಾಗೆಯೇ ಮುಗಿಸಿ ಬಿಟ್ಟಂತೆ!

ಪ್ರತಿಯಾಗಿ ಅನಾಥಮುತ್ತು(ಸ) ಹೇಳಿದರು,

"ನೀವು ಮತ್ತು ಸಫ್‌ವಾನ್ ಮಕಾಮು ಹಿಜ್ರ್‌ನಲ್ಲಿ ಕುಳಿತು ನನ್ನ ಹತ್ಯೆಯ ಸಂಚು ರೂಪಿಸಿದ್ದಿರಲ್ಲ!"

ಪ್ರವಾದಿವರ್ಯರ(ಸ) ಈ ಮಾತು ಕೇಳಿ ಉಮೈರ್ ಬೆವತು ಹೋದರು... ಸಫ್‌ವಾನ್‌ರೊಂದಿಗೆ ಮಾತನಾಡುತ್ತಿದ್ದಾಗ ಮೂರನೆಯ ವ್ಯಕ್ತಿ ಅಂತ ಯಾರೂ ಇದ್ದಿರಲಿಲ್ಲ ವಲ್ಲ... ಸ್ವಯಂ ನನ್ನ ಆಪ್ತರು, ಮಿತ್ರರು ಮತ್ತು ಕುಟುಂಬಿಕರಿಗೂ ಈ ಸಂಚಿನ ಬಗ್ಗೆ ತಿಳಿದಿರಲಿಲ್ಲ... ನಾವಿಬ್ಬರಂತೂ ಅತ್ಯಂತ ರಹಸ್ಯವಾಗಿ ಈ ಬಗ್ಗೆ ಚರ್ಚಿಸಿದ್ದೆವು... ಆದರೆ ಮುಹಮ್ಮದ್(ಸ) ಮದೀನದಲ್ಲಿದ್ದುಕೊಂಡು ಮಕ್ಕಾದಲ್ಲಾದ ರಹಸ್ಯ ಮಾತುಕತೆಯ

ಬಗ್ಗೆ ಹೇಳುತ್ತಿದ್ದಾರೆಂದರೆ! ಖಂಡಿತವಾಗಿಯೂ ಅಲ್ಲಾಹನು ಪರೋಕ್ಷದ ವಿಷಯಗಳನ್ನು ಇವರಿಗೆ ತಿಳಿಸುತ್ತಿದ್ದಾನೆಂಬುದಕ್ಕೆ ಇದು ಸಾಕ್ಷಿ!! ಅಲ್ಲಾಹನೊಡನೆ ಈ ರೀತಿಯ ಒಡನಾಟ ವಿರಿಸಿಕೊಂಡಿರುವ ವ್ಯಕ್ತಿಯು ಖಂಡಿತ ಪ್ರವಾದಿಯಾಗಿರಲೇ ಬೇಕು!

ಸತ್ಯವು ಪ್ರಕಟವಾಯಿತು... ಉಮೈರ್‌ರ ವರ್ತನೆಯಲ್ಲಿದ್ದ ಹಠಮಾರಿತನ ಹೊರಟು ಹೋಯಿತು... ಸ್ವಭಾವದಲ್ಲಿದ್ದ ಅಜ್ಞಾನಜನ್ಯ ಧೂಳು ಪ್ರವಾದಿತ್ವ ಮೇಘ ಉದುರಿಸಿದ ನಾಲ್ಕಾರು ಹನಿಮುತ್ತುಗಳಿಂದ ತೊಳೆದು ಹೋಯಿತು... ಉಮೈರ್ ಧಿಗ್ಗನೆದ್ದು, ಅತ್ಯುತ್ಸಾಹಭರಿತ ಸ್ವರದಲ್ಲಿ ಅಲ್ಲಾಹನ ಏಕತೆಯನ್ನೂ ಮುಹಮ್ಮದ್‌ರವರ ಪ್ರವಾದಿತ್ವ ವನ್ನೂ ಸಾರುವ ಸತ್ಯ ವಚನ ಪಠಿಸಿ ಮುಸ್ಲಿಮರಾದರು. ಸೌಭಾಗ್ಯ, ಪರಿವರ್ತನೆ, ಜಾಗೃತಿಯ ಅವಸ್ಥೆ ನೋಡಿ- ವಿಷಲೇಪಿತ ಖಡ್ಗವನ್ನು ಹಿಡಿದು (ನಊದುಬಿಲ್ಲಾಹ್) ಅಬ್ದುಲ್ಲಾರ ಪುತ್ರ ಮುಹಮ್ಮದ್‌ರನ್ನು(ಸ) ವಧಿಸುವ ಉದ್ದೇಶದಿಂದ ಬಂದಿದ್ದರು ಉಮೈರ್. ಆದರೆ ಇಲ್ಲಿ ಬಂದ ಬಳಿಕ ಅವರ ಹೃದಯದ ಲೋಕವೇ ಏನಕ್ಕೇನೋ ಆಗಿ ಬಿಟ್ಟಿತು. ಜನರನ್ನು ಪರೀಕ್ಷಿಸುವ ದೃಷ್ಟಿಕೋನವೇ ಬದಲಾಯಿತು. ಸಂಕಲ್ಪದ ಕಟ್ಟಡವೇ ಅಡಿಮೇಲಾಯಿತು. ಅಲ್ಲಾಹನ ಮಾರ್ಗದರ್ಶನವು ಸಹಾಯಕ್ಕೆ ಬಂದಾಗ ಹತ್ಯೆಗೆ ಬಂದವರೇ ಜೀವರಕ್ಷಕ ಅನುಯಾಯಿಯಾಗಿ ಮಾರ್ಪಟ್ಟರು.

ಗಾಳಿ ಗೋಪುರ ಧರೆಗೆ ಉರುಳಿತು

ಉಮೈರ್ ಮಕ್ಕಾದಿಂದ ಹೊರಟಿದ್ದಾಗ, ಕುರೈಶ್ ಸತ್ಯನಿಷೇಧಿಗಳು ಮೆಲ್ಲಮೆಲ್ಲನೆ ಅವರ ಉದ್ದೇಶವನ್ನು ತಿಳಿಯತೊಡಗಿದ್ದರು... ಒಬ್ಬ ಇನ್ನೊಬ್ಬನಿಗೆ, ಅವನು ಮತ್ತೊಬ್ಬ ನಿಗೆ... ಹೀಗೆ ಮಕ್ಕಾ ನಗರದಾದ್ಯಂತ ಸಂತೋಷದ ಅಲೆಯೇಳತೊಡಗಿತು. ಅವರೆಲ್ಲ ಭಾವಿಸತೊಡಗಿದರು- ಉಮೈರ್ ತನ್ನ ಉದ್ದೇಶದಲ್ಲಿ ಸಫಲನಾಗಿ ಮರಳುವರು... ಮದೀನ ದಿಂದ ಮರಳಿ ಬರುತ್ತಲೇ, "ನಾನು ಹೀಗೆ ಮದೀನ ತಲುಪಿದೆ... ನಂತರ ಬಹಳ ದಿನಗಳ ಪ್ರಯತ್ನದ ಬಳಿಕ ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ ಸಭೆಯಲ್ಲಿ ನುಸುಳಿದೆ... ತರುವಾಯ ಅತ್ಯಂತ ಯುಕ್ತಿಪೂರ್ಣವಾಗಿ ಜಾಗರೂಕತೆಯಿಂದ ಮುಹಮ್ಮದ್‌ರನ್ನು ವಧಿಸಿದೆ... ನನ್ನ ಖಡ್ಗವನ್ನು ಮೂಸಿ ನೋಡಿರಿ, ಬನೂಹಾಶಿಮ್‌ರ ನೆತ್ತರ ಗಂಧ ಸೂಸುತ್ತಿದೆ... ನಾನು ಮದೀನದಿಂದ ಹೊರಟು ಬರುವಾಗ ಅಲ್ಲಿ ಸೂತಕದ ಮೌನ ಆವರಿಸಿತ್ತು... ಖತ್ತಾಬ್‌ರ ಮಗ ಉಮರ್‌ರಂತಹ ವೀರ ಕಲಿಗಳೂ ಮಕ್ಕಳಂತೆ ಗಳಗಳನೇ ಅಳುತ್ತಿದ್ದರು" ಎಂದೆಲ್ಲ ಹೇಳುವರು...

ಮದೀನದಿಂದ ಮಕ್ಕಾದ ಕಡೆಗೆ ವ್ಯಾಪಾರಿ ತಂಡಗಳು ಬರುತ್ತಲೂ ಹೋಗುತ್ತಲೂ ಇದ್ದುವು. ಉಮೈರ್ ತನ್ನ ಉದ್ದೇಶವನ್ನು ಈಡೇರಿಸಿ ಯಾವುದಾದರೂ ವ್ಯಾಪಾರಿ ತಂಡ ದೊಂದಿಗೆ ಬರುವರೋ ಅಥವಾ ಒಬ್ಬಂಟಿಯಾಗಿ ಬರುವರೋ ಎಂದು ಜನ ಕಾಯುತ್ತಿದ್ದರು. ಮದೀನದಿಂದ ಯಾರೇ ಬಂದರೂ ಆತನೊಡನೆ ಕುರೈಶ್ ಸತ್ಯನಿಷೇಧಿಗಳು, "ಮದೀನದಿಂದ

ಯಾವುದಾದರೂ ಹೊಸ ಸುದ್ದಿಯಿದ್ದರೆ ಹೇಳಿ" ಎಂದು ದಂಬಾಲು ಬೀಳುತ್ತಿದ್ದರು. ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಹತರಾದ ಸುದ್ದಿಯು ಯಾರಿಂದಲೂ ಮರೆಯಾಗಿರ ಲಾರದು ಮತ್ತು ಮದೀನದ ಆಸುಪಾಸಿನ ಪ್ರದೇಶಗಳಿಗೂ ಈ ಸುದ್ದಿ ಮಿಂಚಿನಂತೆ ಹರಡಬಹುದು ಎಂದು ಅವರಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಮಕ್ಕಾಗೆ ಬರುವ ಯಾತ್ರಿಕರು ಹೇಳುತ್ತಿದ್ದರು, "ನಾವು ಹೊಸತಾದ ಯಾವುದೇ ಸುದ್ದಿಯನ್ನು ಆಲಿಸಿದ್ದಿಲ್ಲ. ಆದರೆ ಮದೀನ ನಗರದಾದ್ಯಂತ ಮುಸ್ಲಿಮರ ಸಂಖ್ಯೆ ಬಹಳ ತೀವ್ರಗತಿಯಲ್ಲಿ ಏರುತ್ತಿದೆ ಎಂಬುದನ್ನಷ್ಟೇ ನಾವು ಬಲ್ಲೆವು. ಮಕ್ಕಾದಲ್ಲಿ ನೆಲೆಯೂರಲೂ ಅವಕಾಶ ದೊರೆಯದ ಬೀಜವು ಮದೀನದಲ್ಲಿ ಹೆಮ್ಮರವಾಗಿ ಬೆಳೆಯುತ್ತಿದೆ."

ಕೊನೆಗೆ ಒಂದು ದಿನ ಮದೀನದಿಂದ ಸುದ್ದಿ ಬಂತು... ಮಕ್ಕಾವಾಸಿಗಳ ಮಟ್ಟಿಗೆ ಅತ್ಯಂತ ದುಃಖದಾಯಕ ಸುದ್ದಿ! ಸುದ್ದಿ ತಂದವ ಹೇಳಿದ, "ಕುರೈಶ್ ಜನರೇ! ಉಮೈರ್ ಇಲ್ಲಿಂದ ಹೋಗಿ ಮದೀನದಲ್ಲಿ ಇಸ್ಲಾಮ್ ಸ್ವೀಕರಿಸಿದ್ದಾರೆ. ನೀವು ವೃಥಾ ಗಾಳಿಗೋಪುರ ವನ್ನು ಕಟ್ಟುತ್ತಿದ್ದೀರಿ."

ಈ ಸುದ್ದಿಯನ್ನು ಕೇಳಿದ ಕುರೈಶರು ಕಕ್ಕಾಬಿಕ್ಕಿಯಾದರು. ಅವರ ರಕ್ತದ ಕಣಕಣವೂ ನೀರಾಗಿ ಬಿಟ್ಟಂತೆ ಬಿಳುಚಿಕೊಂಡರು. ನಿರೀಕ್ಷೆಗೆ ವಿರುದ್ಧವಾಗಿ ಏನಾದರೂ ಕೇಳಿ ಬಂದರೆ ವ್ಯಕ್ತಿ ಆಶ್ಚರ್ಯಚಕಿತನಾಗುವುದು ಸ್ವಾಭಾವಿಕವೇ. ಕುರೈಶರ ವಯೋವೃದ್ಧ ಗೋತ್ರ ನಾಯಕ ತನ್ನ ಬೆಳ್ಳಿಗಡ್ಡವನ್ನು ಆಗಾಗ ಮುಷ್ಟಿಯಲ್ಲಿ ಹಿಡಿಯುತ್ತ ಬಿಡುತ್ತ ಇದ್ದ. ಉಕ್ಕಿ ಬಂದಿದ್ದ ಆವೇಶವೂ ಒಮ್ಮೊಮ್ಮೆ ಇಳಿದು ಅವರೆಲ್ಲರ ಮುಖಭಾವವು ಪೇಲವವಾಗಿ ಬಿಡುತ್ತಿತ್ತು. ಅದುವರೆಗೂ ಉಮೈರ್‌ರ ಪ್ರಶಂಸೆಯಲ್ಲಿ ದಣಿಯದಿದ್ದ ನಾಲಗೆಗಳು ಈಗ ಹಳಿಯ ತೊಡಗಿದುವು... ಉಮೈರ್‌ರ ಕುಟುಂಬವು ಹಿಂದಿನಿಂದಲೇ ಪರಾಕ್ರಮಿ ಮತ್ತು ಸ್ವಾಭಿಮಾನಿ ಯಾಗಿತ್ತು, ಉಮೈರ್‌ರ ಮುತ್ತಜ್ಜ ಸಿರಿಯದ ಗಡಿಯಲ್ಲಿ ಒಬ್ಬಂಟಿಯಾಗಿಯೇ ಡಕಾಯಿತರನ್ನು ಹೊಡೆದೋಡಿಸಿದ್ದರು ಎಂದೆಲ್ಲ ಹೊಗಳುತ್ತಿದ್ದ ಮಂದಿ ಈಗ ಮದೀನದಿಂದ ಸುದ್ದಿ ಕೇಳುತ್ತಲೇ ಉಮೈರ್‌ರಲ್ಲಿ ಕೊರತೆಗಳನ್ನು ಹುಡುಕತೊಡಗಿದರು. ನಿನ್ನೆಯವರೆಗೆ ಉಮೈರ್‌ರ ಹಿರಿಮೆಯನ್ನು ಕೊಂಡಾಡುತ್ತಿದ್ದವರು, ಇಂದು ಉಮೈರ್‌ರ ಕುಟುಂಬವು ಕುರೈಶ್ ಜನಾಂಗದ ಪಾಲಿಗೆ ಒಂದು ದೊಡ್ಡ ಕಳಂಕವೆನ್ನತೊಡಗಿದರು. ಅವರ ಪೂರ್ವಿಕರು ಯುದ್ಧ ವೇಳೆ ಗಳಲ್ಲಿ ಮಹಿಳೆಯರಿಗೆ ಮೀಸಲಿಡುತ್ತಿದ್ದ ಪಲ್ಲಕಿಗಳಲ್ಲಿ ಆಶ್ರಯ ಪಡೆಯುವಂತಹ ರಣಹೇಡಿ ಗಳಾಗಿದ್ದರು ಎಂದು ಹಂಗಿಸತೊಡಗಿದರು. ಇಂತಹ ಹೇಡಿಗಳ ಕುಟುಂಬದ ವ್ಯಕ್ತಿಯಿಂದ ಪರಾಕ್ರಮವನ್ನು ನಿರೀಕ್ಷಿಸಲು ಸಾಧ್ಯವೇ? ಈ ವ್ಯಕ್ತಿ ಏನನ್ನೂ ಮಾಡಲಾರನೆಂದು ನಮಗೆ ಮೊದಲೇ ತಿಳಿದಿತ್ತು. ನಮ್ಮ ಊಹೆ ನಿಜವಾಯಿತು ಅಷ್ಟೇ... ಸತ್ಯನಿಷೇಧಿಗಳ ನಾಲಗೆಯು ನಿಯಂತ್ರಣವಿಲ್ಲದೆ ಹರಿದಾಡಿತು...

ಘೋರ ಸಂಚು

ಕುರೈಶರಿಗೆ ಸೋಲಿನ ಮೇಲೆ ಸೋಲು ಎದುರಾಗುತ್ತಿತ್ತು. ಆದರೂ ಅವರು ತಮ್ಮ ಕುಕೃತ್ಯದಿಂದ ಹಿಂದೆ ಸರಿಯಲಿಲ್ಲ. ಮದೀನದಿಂದ ಅವರಿಗೆ ದೊರೆಯುತ್ತಿರುವ ಸುದ್ದಿ ಕೇಳಿ ಕೇಳಿ ಅವರು ಸಿಡಿಮಿಡಿಗೊಳ್ಳುತ್ತಿದ್ದರು, ಕೆಂಡಾಮಂಡಲವಾಗುತ್ತಿದ್ದರು, ಹಲ್ಲು ಕಡಿಯುತ್ತಿದ್ದರು, ತುಟಿ ಕಚ್ಚುತ್ತಿದ್ದರು ಮತ್ತು ಮುಸ್ಲಿಮರಿಗೆ ಬಯ್ಯುತ್ತಲೂ ಇದ್ದರು. ಕೀಳ್ಮಟ್ಟದ ಬುದ್ಧಿಯುಳ್ಳವರು, ತಮ್ಮಿಂದ ಏನೂ ಮಾಡಲಾಗದಿದ್ದಾಗ ಇದೇ ರೀತಿಯ ನೀಚ ಕೃತ್ಯಕ್ಕಿಳಿಯುತ್ತಾರೆ.

ಕುರೈಶ್ ಸತ್ಯನಿಷೇಧಿಗಳಿಗೆ ಯಾವ ರೀತಿಯಿಂದಲೂ ಸಮಾಧಾನ ಎನ್ನುವುದು ಇರುತ್ತಿರಲಿಲ್ಲ. ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಮತ್ತು ಅವರ ಸಂಗಾತಿಗಳನ್ನು ಯಾವೆಲ್ಲ ರೂಪದಲ್ಲಿ ಸತಾಯಿಸಬಹುದೆಂಬ ಚಿಂತೆಯಲ್ಲೇ ಅವರು ಮುಳುಗಿರುತ್ತಿದ್ದರು. ಒಮ್ಮೆ ಸಹಾಬಿಗಳ ಮಧ್ಯೆ ಒಡಕನ್ನುಂಟು ಮಾಡುವ ಬಗ್ಗೆ ಆಲೋಚಿಸುತ್ತಾರೆ. ಇನ್ನೊಮ್ಮೆ ಹಿಜಾಝ್‌ನ ಗೋತ್ರಗಳಲ್ಲಿ ಪೂರ್ವಗ್ರಹಗಳನ್ನು ಹರಡಿಸಿ ಮತ್ತು ಗ್ರಾಮೀಣ ಅರಬರನ್ನು ಪ್ರಚೋದಿಸಿ ಮದೀನದ ಮೇಲೆ ಆಕ್ರಮಣ ನಡೆಸುವ ಯೋಜನೆಯನ್ನೂ ಹಾಕುತ್ತಾರೆ. ಮದೀನದ ಯಹೂದಿ ಮತ್ತು ಕಪಟವಿಶ್ವಾಸಿ ಕೂಟಗಳೊಂದಿಗೆ ಮಕ್ಕಾದ ಸತ್ಯನಿಷೇಧಿಗಳು ರಹಸ್ಯ ಸಂಪರ್ಕವನ್ನಿರಿಸಿದ್ದರು. ಅನಾಥಮುತ್ತು(ಸ) ಮತ್ತು ಅವರ ಸಂಗಾತಿಗಳ ಚಲನ ವಲನಗಳ ವರದಿಯು ಅವರಿಗೆ ದೊರೆಯುತ್ತಲಿತ್ತು.

ಕುರೈಶರು ಅಝ್ಲ್ ಮತ್ತು ಕ್ವಾರ ಗೋತ್ರಗಳ ಬಳಿಗೆ ಹೋಗಿ, ಅವರಿಗೆ ಬೆದರಿಕೆಯೊಡ್ಡಿದರು, ಆಮಿಷವೊಡ್ಡಿದರು ಮತ್ತು ಹೇಳಿದರು, "ಅಬ್ದುಲ್ಲಾರ ಪುತ್ರ ಮುಹಮ್ಮದ್ ನೂತನ ಧರ್ಮವನ್ನು ಸಂಶೋಧಿಸಿ ನಮ್ಮ ಪೂರ್ವಿಕ ಧರ್ಮಕ್ಕೆ ಭಾರೀ ಅಪಾಯವನ್ನು ತಂದೊಡ್ಡಿದ್ದಾರೆ. ಅರೇಬಿಯದ ಕುಲ ಮಹಿಮೆಯು ಮಣ್ಣುಗೂಡುವ ಸ್ಥಿತಿಗೆ ತಲುಪಿದೆ. ನಮಗೆ ನೂರಾರು ವರ್ಷಗಳಿಂದ ಸಹಾಯ ಮಾಡುತ್ತಿರುವ ವಿಗ್ರಹಗಳನ್ನು ಈ ಮುಸ್ಲಿಮರು ಅವಹೇಳನ ಮಾಡುತ್ತಿದ್ದಾರೆ. ಒಂದು ವೇಳೆ ಈ ಕ್ಷೋಭೆಯನ್ನು ತಡೆಯದೆ ಹೋದರೆ ಇಡೀ ಅರೇಬಿಯವು ಒಂದು ದಿನ ಮುಹಮ್ಮದ್‌ರ ಪಾದ ತಳದಲ್ಲಿರುವುದು. ಆ ಸಂದರ್ಭದಲ್ಲಿ ಅರೇಬಿಯದ ಸ್ಥಿತಿ ಏನಾಗಿರಬಹುದೆಂದು ನಿಮಗೆ ತಿಳಿದಿದೆಯೇ? ಯಾವ ನಾಲಗೆಯಿಂದಲೂ ಲಾತ್, ಹುಬಲ್‌ಗಳಿಗೆ ಜೈಕಾರ ಹೊರಡಲಾರದು! ಬಡ-ದರಿದ್ರ, ಹೊಟ್ಟೆಗೆ ಹಿಟ್ಟಿಲ್ಲದ

ಮುಸ್ಲಿಮರು ಕುರೈಶ್ ಸರದಾರರುಗಳಿಗೆ ಸರಿಸಮಾನರಾಗಿ ಪರಿಗಣಿಸಲ್ಪಡುವರು! ನಮ್ಮ ಪೂರ್ವಿಕರು ಖಡ್ಗಗಳ ನೆರಳಡಿ ಅಮಲೇರಿಸಿಕೊಳ್ಳುತ್ತಿದ್ದಂತಹ ಮದ್ಯಪಾನವನ್ನು ನಿಷೇಧಿಸ ಲಾಗುವುದು!! ಸಕಲ ಸುಖ-ಭೋಗಗಳು, ಮನರಂಜನೆಗಳು ಬಂದ್! ಎಲ್ಲಾ ತರದ ಸವಿ ಮತ್ತು ಉತ್ಸಾಹ ಅಳಿದು ಹೋದಾವು... ಕೇವಲ ಬೆಳಗ್ಗಿನಿಂದ ಸಂಜೆಯವರೆಗೆ, ಮಾತ್ರವಲ್ಲ ರಾತ್ರಿಯೂ ನಿದ್ರೆಯಿಂದೆದ್ದು ಆರಾಧನೆ ಮಾಡಬೇಕು. ನಿಲ್ಲಬೇಕು, ಬಾಗಬೇಕು ಮತ್ತು ಹಣೆಗೆ ಧೂಳು ಮೆತ್ತುವಂತೆ ಸಾಷ್ಟಾಂಗ ಎರಗಬೇಕು!! ಅದೂ ಕೂಡ ಕಣ್ಣಿಗೆ ಕಾಣದ ಶಕ್ತಿಯೊಂದರ ಮುಂದೆ!!!"

ಕುರೈಶರ ಈ ಮಾತುಗಳು ಆ ಜನರ ಮೇಲೆ ಅಪಾರ ಪರಿಣಾಮ ಬೀರಿದುವು. ಆ ಎರಡೂ ಗೋತ್ರಗಳಿಂದ ಏಳು ಮಂದಿ ಮದೀನಕ್ಕೆ ತೆರಳಲು ಸಿದ್ಧರಾದರು. ಒಂದು ನಿಗೂಢ ಉದ್ದೇಶ ಅವರ ಮುಂದಿತ್ತು. ಮುಹಮ್ಮದ್‌ರ ಸಂಗಾತಿಗಳನ್ನು ತಮ್ಮ ಗೋತ್ರದ ಬಳಿಗೆ ಕರೆಸಿಕೊಳ್ಳುವುದು ಮತ್ತು ತಂತ್ರದಿಂದ ಅವರ ಹತ್ಯೆ ಮಾಡಿ ಬಿಡುವುದು. ಈ ಯೋಜನೆ ಯಶಸ್ವಿಯಾದರೆ ನಂತರವೂ ಅದೇ ರೀತಿಯಲ್ಲಿ ಅಥವಾ ಬೇರೆ ಬೇರೆ ತಂತ್ರಗಳಿಂದ ಮುಸ್ಲಿಮರನ್ನು ಮುಗಿಸಿ ಬಿಡುವುದು. ಈ ಮೂಲಕ ಒಂದೆಡೆ ಅವರ ಸಂಖ್ಯೆ ಕಡಿಮೆಯಾಗುತ್ತ ಹೋಗುತ್ತದೆ. ಇನ್ನೊಂದೆಡೆ ಮುಸ್ಲಿಮರನ್ನು ಸಂಹರಿಸುವಂತಹ ಒಂದು ಜನಕೂಟವು ಬೆಳೆದು ಬಂದಿದೆ ಎಂಬ ಸುದ್ದಿಯು ಅರೇಬಿಯದಾದ್ಯಂತ ಹರಡಿದಲ್ಲಿ, ಇತರ ಗೋತ್ರಗಳ ಮಂದಿ ಇಸ್ಲಾಮಿನೆಡೆಗೆ ಆಕರ್ಷಿತರಾಗಲಾರರು. ಒಂದು ವೇಳೆ ಆಕರ್ಷಿತರಾದರೂ ಕಾರ್ಯತಃ ಮುಂದಡಿಯಿಡಲಾರರು.

ಹೀಗೆ ಕುರೈಶರ ಪ್ರಚೋದನೆಯಿಂದ ಅಝ್ಲ್ ಮತ್ತು ಕ್ವಾರ ಗೋತ್ರಗಳ ಏಳು ಮಂದಿ ಮದೀನಕ್ಕೆ ತಲುಪಿ, ಪ್ರವಾದಿವರ್ಯರನ್ನು(ಸ) ಸಂಧಿಸಿದರು. ಆ ಮಂದಿ ತೀರಾ ಮುಗ್ಧರಂತೆ ನಟಿಸುತ್ತಾ ತಮ್ಮನ್ನು ಇಸ್ಲಾಮಿನ ಆಕರ್ಷಣೆಯು ಇಲ್ಲಿಯ ವರೆಗೆ ಎಳೆದು ತಂದಿದೆ ಎಂದು ಬಿಂಬಿಸತೊಡಗಿದರು. ಆ ಜನರು ಪ್ರವಾದಿವರ್ಯರೊಡನೆ(ಸ) ಹೀಗೆ ಅರಿಕೆ ಮಾಡಿಕೊಂಡರು, "ನಮ್ಮ ಗೋತ್ರಗಳು ಇಸ್ಲಾಮಿನ ಅನುಗ್ರಹಗಳನ್ನು ಹೊಂದಲು ಸನ್ನದ್ಧರಾಗಿವೆ. ಆದ್ದರಿಂದ ನಮ್ಮ ಗೋತ್ರಗಳಿಗೆ ಇಸ್ಲಾಮಿನ ಶಿಕ್ಷಣ ನೀಡಬಲ್ಲ ಮಂದಿಯನ್ನು ನಮ್ಮೊಡನೆ ಕಳುಹಿಸಬೇಕೆಂದು ವಿನಂತಿಸುತ್ತೇವೆ." ಪ್ರವಾದಿವರ್ಯರು(ಸ) ಹತ್ತು ಮಂದಿ ಮುಸ್ಲಿಮರನ್ನು ಅವರ ಜತೆಯಲ್ಲಿ ಕಳುಹಿಸಿದರು. ಆಸಿಮ್ ಬಿನ್ ಸಾಬಿತ್ ಎಂಬವರು ಆ ಸಂದೇಶ ಪ್ರಚಾರಕ ತಂಡದ ನೇತಾರನಾಗಿದ್ದರು.

ಮದೀನದಿಂದ ಈ ಯಾತ್ರಾ ತಂಡವು ಸಂತೋಷದ ಅಲೆಯಲ್ಲಿ ತೇಲಾಡುತ್ತಾ ಹೊರಟಿತು. ಸಹಾಬಿಗಳು ಖುಷಿಯಾಗಲು ಕಾರಣ, ನಾವು ಸತ್ಯ ಸಂದೇಶದ ಪ್ರಚಾರ ಕಾರ್ಯಕ್ಕಾಗಿ ಹೊರಡುತ್ತಿದ್ದೇವೆಂದಾಗಿತ್ತು. ತಿಳಿದಿಲ್ಲದವರಿಗೆ ಇಸ್ಲಾಮಿನ ವಾಸ್ತವಿಕತೆಯನ್ನು ತಿಳಿಯಪಡಿಸುವೆವು... ಇದುವರೆಗೂ ಇಸ್ಲಾಮ್ ಸ್ವೀಕರಿಸಿಲ್ಲದವರಿಗೆ ಇಸ್ಲಾಮನ್ನು ಕಲಿಸಿ ಕೊಡುವೆವು... ನಮ್ಮ ಪ್ರಯತ್ನದಿಂದ ಕೆಲವು ಮಂದಿಯಾದರೂ ಮಾರ್ಗದರ್ಶನ ಪಡೆದಲ್ಲಿ,

ನಮ್ಮ ಕರ್ಮಪತ್ರವು ಈ ಸತ್ಕರ್ಮದಿಂದಾಗಿ ಭಾರವಾಗುವುದು ಎಂಬಿತ್ಯಾದಿ ವಿಚಾರಗಳು ಅವರಿಗೆ ಮುದ ನೀಡುತ್ತಿತ್ತು.

ವಾಸ್ತವವೂ ಅಷ್ಟೇ... ಸತ್ಯದ ಸ್ವೀಕಾರವು ಅತಿದೊಡ್ಡ ಅನುಗ್ರಹವಾಗಿದೆ. ಆ ಅರ್ಥದಲ್ಲಿ ಸಂದೇಶ ಪ್ರಚಾರ ಕಾರ್ಯವು ಅತಿದೊಡ್ಡ ಜನಸೇವೆಯಾಗಿದೆ. ಈ ಲೋಕದಲ್ಲಿ ಒಬ್ಬ ಮಾನವನು ಇನ್ನೊಬ್ಬ ಮಾನವನ ಮೇಲೆ ತೋರುವ ಅತಿದೊಡ್ಡ ಔದಾರ್ಯವೆಂದರೆ, ಅದು ಆತನನ್ನು ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನೆಡೆಗೆ ಮಾರ್ಗದರ್ಶನ ಮಾಡುವುದಾಗಿದೆ. ಹೊಟ್ಟೆಗೆ-ಬಟ್ಟೆಗೆ ಏನೂ ಇಲ್ಲದವನಿಗೆ ಉಣ ಬಡಿಸುವುದು ಮತ್ತು ಬಟ್ಟೆ ತೊಡಿಸುವುದು ಹಾಗೂ ಮರ್ದಿತನ ಕೂಗನ್ನು ಆಲಿಸುವುದು ಮಾನವೀಯ ಸೇವೆಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಒಬ್ಬನ ಪ್ರಯತ್ನ ಮತ್ತು ಪ್ರಭಾವದಿಂದ ಯಾರಾದರೂ ಅಜ್ಞಾನಿಯು ಜ್ಞಾನದ ಬೆಳಕು ಕಂಡರೆ ಅದಕ್ಕಿಂತ ಮಿಗಿಲಾದ ಒಳಿತು ಬೇರೆ ಯಾವುದೂ ಇರಲಿಕ್ಕಿಲ್ಲ.

ಮದೀನದಿಂದ ಸಾಕಷ್ಟು ದೂರ ಸಾಗುವ ವರೆಗೆ ಆ ಏಳು ಮಂದಿಯೂ ಸುಮ್ಮನಿದ್ದರು. ತಾವು ಇಸ್ಲಾಮಿನ ಮಾರ್ಗದರ್ಶನ ಪಡೆಯಲು ನಿಜಕ್ಕೂ ಕಾತರರಾಗಿರುವಂತೆ ಮತ್ತು ಹಿಂದಿನಂತೆ ಕಠಿಣ ಹೃದಯಿಗಳಲ್ಲವೆಂಬಂತೆ ತೋರ್ಪಡಿಸಿದರು. ಆದರೆ ಅವರ ಜನವಸತಿಯು ಹತ್ತಿರವಾದಂತೆಯೇ ಅವರ ಮನಸ್ಸಿನ ಕಾಪಟ್ಯ ಪ್ರಕಟವಾಗ ತೊಡಗಿತು ಹಾಗೂ ದುರುದ್ದೇಶವು ಅವರ ಮಾತು-ಕೃತಿಗಳಲ್ಲಿ ಹೊರಬರತೊಡಗಿತು... ಅವರ ಒರೆಗಳೊಳಗೇ ಇದ್ದಂತಹ ಖಡ್ಗಗಳು ಹೊರಬರತೊಡಗಿದುವು... ಅಷ್ಟರಲ್ಲಿ ಆ ಗೋತ್ರಗಳ ಸುಮಾರು ಇನ್ನೂರು ಮಂದಿ ಯೋಧರು ಆ ಸಹಾಬಿಗಳನ್ನು ಸುತ್ತುವರಿದರು. ಅವರನ್ನು ಬಂಧಿಸಲು ಪ್ರಯತ್ನಿಸಿದರು. ಆದರೆ ಪ್ರವಾದಿವರ್ಯರ(ಸ) ಆಪ್ತ ಸಂಗಾತಿಗಳು ಶತ್ರುಗಳ ಈ ಸಂಖ್ಯಾಬಲವನ್ನು ಕಂಡು ಕೊಂಚವೂ ವಿಚಲಿತರಾಗಲಿಲ್ಲ. ಅವರ ಆತ್ಮಸ್ಫೂರ್ತಿ ಬಹಳ ಉನ್ನತವಾಗಿತ್ತು. ಅವರ ವಿಶ್ವಾಸಪರ ಸ್ಥೈರ್ಯವು ಅವರನ್ನು ಶರಣಾಗಲು ಬಿಡಲಿಲ್ಲ. ಅವರೂ ಖಡ್ಗವೆತ್ತಿದರು. "ನಾವು ಮುಸ್ಲಿಮರು, ಅವಮಾನದೊಂದಿಗೆ ಶರಣಾಗಲು ಸಿದ್ಧರಿಲ್ಲ! ನೀವು ಹೆಚ್ಚೆಂದರೆ ಏನು ಮಾಡಬಲ್ಲಿರಿ? ನಮ್ಮನ್ನು ಕೊಂದು ಬಿಡುವಿರಿ. ಅಷ್ಟೇ ತಾನೇ? ಆದರೆ ನಮ್ಮ ಸ್ಥೈರ್ಯ ಮತ್ತು ವಿಶ್ವಾಸಪರವಾದ ಶಕ್ತಿಯನ್ನು ನೀವು ಮೆಟ್ಟಿ ನಿಲ್ಲಲಾರಿರಿ. ಜೀವ ಹೋದರೆ ಹೋಗಲಿ, ಅದು ಎಂದಾದ ರೊಂದು ದಿನ ಹೋಗುವಂತಹದ್ದೇ... ಆದರೆ ನಮ್ಮ ವಿಶ್ವಾಸಕ್ಕೆ ಕಳಂಕ ತಟ್ಟಲು ಬಿಡಲಾರೆವು."

ಸಮರ ಆರಂಭವಾಯಿತು. ಇದಿರು ಪಕ್ಷದಲ್ಲಿ ನೂರಾರು ಮಂದಿ ಯೋಧರು, ಇತ್ತ ಕೇವಲ 10 ಮಂದಿ ಸಹಾಬಿಗಳು! ಶತ್ರುಗಳು ತಮ್ಮದೇ ನಾಡಿನಲ್ಲಿದ್ದರು, ಇವರು ಪರದೇಶಿಗಳು! ಅವರು ಮೊದಲೇ ಯುದ್ಧ ಸನ್ನದ್ಧರಾಗಿದ್ದರು, ಇವರಾದರೋ ಏಕಾಏಕಿ ಆಕ್ರಮಣವನ್ನು ಎದುರಿಸಬೇಕಾಯಿತು! ಆದರೂ ಸಹಾಬಿಗಳು ಹೋರಾಡಿದರು... ಪರಾಕ್ರಮ ಮೆರೆದರು. ಎಂಟು ಮಂದಿ ಹುತಾತ್ಮರಾದರು. ಖುಬೈಬ್ ಹಾಗೂ ಝೈದ್‌ರನ್ನು ಶತ್ರುಗಳು ಬಂಧಿಸಿದರು.

ಆ ಗೋತ್ರಗಳ ಓರ್ವ ಪ್ರಭಾವಿ ವ್ಯಕ್ತಿ ಸುಫ್‌ಯಾನ್ ಹಝ್‌ಲಿ ಎಂಬವನು ಈರ್ವರು ಬಂಧಿಗಳನ್ನೂ ಮಕ್ಕಾಕ್ಕೆ ಕರಕೊಂಡು ಹೋದ. ಅಲ್ಲಿ ತನ್ನ ಗೋತ್ರದವರ ಸಾಧನೆಗಳನ್ನೆಲ್ಲ ವಿವರಿಸಿದ, "ಮುಸ್ಲಿಮರು ಮತ್ತು ಸ್ವಯಂ ಅವರ ಪ್ರವಾದಿ ನಮ್ಮ ಮೋಸದ ಬಲೆಗೆ ಬಿದ್ದರು. ಆದರೆ ಜನರೇ! ಈ ಮುಸ್ಲಿಮರು ಬಹಳ ಪರಾಕ್ರಮಿಗಳು. ಅಂತೆಯೇ ಕೊಂಚ ಮೂರ್ಖರು ಕೂಡ. ನಮ್ಮ ಯುವ ಯೋಧರೊಡನೆ ಹೋರಾಡಲು ಮುಂದಾದರಲ್ಲ! ಈ ಬೆರಳೆಣಿಕೆಯಷ್ಟು ಮಂದಿ ನೂರಾರು ಸಶಸ್ತ್ರ ಯೋಧರನ್ನು ಎದುರಿಸುವುದೇ!? ಎಂಟು ಮಂದಿಯನ್ನು ನಾವು ಮರಣದ ಕೂಪಕ್ಕೆ ತಳ್ಳಿದೆವು... ಅವರು 'ಅಲ್ಲಾಹ್, ಅಲ್ಲಾಹ್' ಎಂದು ಕೂಗಿದ್ದೇ ಬಂತು... ಆದರೆ ನಾವು ಅವರನ್ನು ನಮ್ಮ ಖಡ್ಗ ಮತ್ತು ಈಟಿಗಳಿಂದ ನಾಶ ಮಾಡಿಯೇ ಬಿಟ್ಟೆವು. ಓ ಕುರೈಶ್ ಜನರೇ! ಅವರ ತ್ಯಾಗ-ಬಲಿದಾನ ಮತ್ತು ಪರಾಕ್ರಮದ ಅವಸ್ಥೆಯೇನಾಗಿತ್ತೆಂದರೆ, ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನಿಗೆ ಅಡ್ಡ ಬರುತ್ತಾ ಅವನಿಗೆ ಬೀಳುವ ಪೆಟ್ಟನ್ನು ತಾನೇ ಸಹಿಸುತ್ತಾ ಎದುರಿಸುತ್ತಿದ್ದ. ಸರಿ, ಸಂಕ್ಷಿಪ್ತದಲ್ಲಿ ಆ ಎಂಟು ಮಂದಿಯ ಹೆಣಗಳು ಮಣ್ಣುಗೂಡಿದವು. ಈ ಇಬ್ಬರನ್ನು ನಾವು ಬಂಧಿಸಿ ತಂದಿದ್ದೇವೆ."

ಕುರೈಶರು ಸಂತೋಷಾತಿರೇಕದಿಂದ ಅಟ್ಟಹಾಸಗೈದರು. ಬಹಳ ದಿನಗಳ ಬಳಿಕ ಅವರ ಕಿವಿಗಳು ಇಂತಹ ಶುಭವಾರ್ತೆ ಕೇಳುತ್ತಿರುವುದು. ಕುರೈಶರು ಅಝ್ಲ್ ಮತ್ತು ಕ್ವಾರ ಗೋತ್ರಗಳ ಪರಾಕ್ರಮವನ್ನು ಬಹಳವಾಗಿ ಕೊಂಡಾಡಿದರು, "ನೀವು ಅರಬ್ ಜನರ ಮರ್ಯಾದೆ ಉಳಿಸಿದಿರಿ. ಇನ್ನು ಇಂತಹದೇ ನಾಲ್ಕೈದು ಕಾರ್ಯಾಚರಣೆ ನಡೆದು ಬಿಟ್ಟರೆ ಮುಸ್ಲಿಮರು ಮುಗಿದೇ ಹೋದರು ಎಂದುಕೊಳ್ಳಿ. ಏನಿಲ್ಲವೆಂದರೂ ಕಡೇ ಪಕ್ಷ ಇಸ್ಲಾಮಿನ ಪ್ರಗತಿಯಂತೂ ನಿಂತೇ ಹೋಗುತ್ತದೆ."

ಸುಫ್‌ಯಾನ್ ಹಝ್‌ಲಿಯು ಆ ಈರ್ವರು ಸಹಾಬಿಗಳನ್ನು ಕುರೈಶರಿಗೆ ಮಾರಿದನು. ಕುರೈಶರು ಖುಬೈಬ್ ಮತ್ತು ಝೈದ್‌ರಿಗೆ ಬೆದರಿಕೆಯೊಡ್ಡಿದರು. "ನೀವು ಇಸ್ಲಾಮನ್ನು ತೊರೆಯದಿದ್ದರೆ ನಿಮ್ಮ ಸಹೋದರರಿಗಾದಂತಹದೇ ಗತಿ ನಿಮ್ಮದೂ ಆಗಲಿದೆ. ನೋಡಿ! ನಾವು ನಿಮ್ಮ ಹಿತದ ಮಾತನ್ನೇ ಆಡುತ್ತಿದ್ದೇವೆ. ನಮ್ಮ ಮಾತನ್ನು ಒಪ್ಪಿರಿ. ನಿಮ್ಮನ್ನು ನೀವೇ ಸಂಕಷ್ಟ ಮತ್ತು ನಾಶಕ್ಕೊಳಪಡಿಸಬೇಡಿರಿ. ಅತ್ತ ನಿಮ್ಮ ನಾಲಗೆ ಹೊರಳಿದಂತೆಯೇ ಇತ್ತ ನಿಮ್ಮ ಬಂಧನದ ಬಿಗಿತ ಸಡಿಲವಾಗುವುದು... ಬಿಡಿ ಇಸ್ಲಾಮನ್ನು! ಮರಳಿರಿ ನಿಮ್ಮ ಪೂರ್ವಿಕರ ಧರ್ಮಕ್ಕೆ! ಸಮುದಾಯದಲ್ಲಿ ನಿಮಗೆ ಗೌರವ ಪ್ರಾಪ್ತವಾಗಬಹುದು. ಎಲ್ಲ ರೀತಿ ಸುಖ-ಸೌಲಭ್ಯಗಳು ನಿಮಗೆ ಒದಗಬಹುದು." ಆದರೆ ಖುಬೈಬ್ ಮತ್ತು ಝೈದ್‌ರನ್ನು ಜೀವ ಹೋಗುವ ಬೆದರಿಕೆಯೋ ಸುಖದ ಸುಪ್ಪತ್ತಿಗೆಯ ಆಮಿಷವೋ ಎಳ್ಳಷ್ಟೂ ವಿಚಲಿತ ಗೊಳಿಸಲಿಲ್ಲ. ಇಸ್ಲಾಮಿನ ನಶೆಯೇ ಅಂತಹುದು.

ಕುರೈಶರು ಖುಬೈಬ್‌ರನ್ನು ನೇಣುಗಂಬದ ಬಳಿ ನಿಲ್ಲಿಸಿ ಹೇಳಿದರು, "ನೀವು ಇಸ್ಲಾಮನ್ನು ತೊರೆದರೆ ನಿಮ್ಮನ್ನು ಬಿಟ್ಟುಬಿಡಲಾಗುವುದು." ಖುಬೈಬ್ ಮತ್ತು ಝೈದ್ ಒಕ್ಕೊರಲಿ ನಿಂದ ಹೇಳಿದರು, "ಮೂರ್ಖರು ನೀವು! ಇಸ್ಲಾಮ್ ತೊರೆದ ಮೇಲೆ ನಾವು ಜೀವಿಸಿಯೇನು ಫಲ?"

ಈ ಉತ್ತರ ಕೇಳಿ ಕುರೈಶರು ಕಕ್ಕಾಬಿಕ್ಕಿಯಾದರು. ಅವರು ಈ ಉತ್ತರವನ್ನು ಕನಸಿನಲ್ಲೂ ಎಣಿಸಿರಲಿಲ್ಲ. ಕೇವಲ ಒಂದು ಧರ್ಮಕ್ಕಾಗಿ ಸಸಂತೋಷ ಜೀವಾರ್ಪಣೆಗೈಯಲು ಮುಂದಾಗುವಂತಹ ಮಂದಿಯೂ ಈ ಜಗತ್ತಿನಲ್ಲಿ ಇದ್ದಾರೆಯೇ? ನೇಣುಗಂಬದ ಬಳಿ ನಿಂತಿದ್ದೂ ಅವರ ವಿಶ್ವಾಸದಲ್ಲಿ ಯಾವುದೇ ಏರುಪೇರು ಉಂಟಾಗಲಿಲ್ಲವಲ್ಲ!

ಕುರೈಶರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಈ ಘಟನೆಯಿಂದ ಖಂಡಿತ ಪಾಠ ಕಲಿಯುತ್ತಿದ್ದರು. ಆದರೆ ಕುರೈಶರಾದರೋ ಕಲ್ಲಿಗಿಂತಲೂ ಕಠೋರವಾದ ಹೃದಯವನ್ನು ಹೊಂದಿದ್ದರು. ಕಲ್ಲಿನಿಂದಲೂ ಕೆಲವೊಮ್ಮೆ ನೀರಿನ ಕಾರಂಜಿ ಪುಟಿಯುತ್ತದೆ. ಆದರೆ ಅವರ ಹೃದಯಗಳಲ್ಲಿ ನೀರು ಬಿಡಿ ಗಾಳಿಯೂ ಹಾಯದಷ್ಟು ಕಠೋರತೆಯಿತ್ತು. ಓರ್ವ ಅಕ್ರಮಿಯು ಖುಬೈಬ್‌ರ ಎದೆಗೆ ಚಾಕುವನ್ನು ಚುಚ್ಚುತ್ತಾ, "ಹೇಳು! ಈಗ ನಿನ್ನ ಜಾಗದಲ್ಲಿ ಮುಹಮ್ಮದ್ ಇದ್ದು ನೀನು ಬಂಧಮುಕ್ತನಾಗಿದ್ದರೆ ಚೆನ್ನಾಗಿತ್ತೆಂದು ನಿನ್ನ ಮನಸ್ಸು ಹೇಳುತ್ತಿದೆಯಲ್ಲವೇ?" ಎಂದು ಕೇಳಿದ. ಈ ಪ್ರಶ್ನೆಗೆ ಖುಬೈಬ್‌ರ ದೇಹದಲ್ಲಿಡೀ ಬೆಂಕಿಯು ಹೊತ್ತಿ ದಹಿಸಿದಂತಾಯಿತು. ಅವರು ಹುಲಿಯಂತೆ ಗರ್ಜಿಸುತ್ತಾ ಅಂದರು, "ನನ್ನ ಮಾತಿಗೆ ಅಲ್ಲಾಹನೇ ಸಾಕ್ಷಿ. ನನ್ನ ಜೀವ ಉಳಿಯುತ್ತಾ ಪ್ರವಾದಿವರ್ಯರ(ಸ) ಕಾಲಿಗೆ ಒಂದು ಮುಳ್ಳು ಚುಚ್ಚುವುದನ್ನೂ ನಾನು ಇಷ್ಟಪಡಲಾರೆ!"

ಅವಮಾನಿತರಾದ ಅಕ್ರಮಿಗಳ ಮುಖಭಾವದಲ್ಲಿ ರೋಷಾಗ್ನಿ ಪ್ರಜ್ವಲಿಸಿತು... ಕ್ರೌರ್ಯವು ಮೈಕೊಡವಿತು... ಹೃದಯದ ಕರಾಳತೆ ಇನ್ನಷ್ಟು ಕರಾಳವಾಯಿತು... ಉತ್ತರ ಗಲ್ಲು ಶಿಕ್ಷೆಯಾಯಿತು. ಖುಬೈಬ್(ರ) ಹುತಾತ್ಮರಾದರು... ಆದರೆ ಜೀವ ಹೋಗುವ ವೇಳೆ ಅವರ ತುಟಿಗಳಲ್ಲಿ ಮಂದಹಾಸವಿತ್ತು... ಮರಣವನ್ನು ಸಸಂತೋಷ, ಆದರದಿಂದ ಸ್ವಾಗತಿಸುತ್ತಿರುವಂತೆ! ಕೊನೆಯದಾಗಿ ಅವರ ಬಾಯಿಯಿಂದ ಒಂದು ಪ್ರಾರ್ಥನೆ ಹೊರಟಿತು,

"ಓ ಅಲ್ಲಾಹ್! ನಾವು ನಿನ್ನ ಸಂದೇಶವಾಹಕರ(ಸ) ಆದೇಶಗಳನ್ನು ಈ ಜನರಿಗೆ ತಲುಪಿಸಿದೆವು. ಇನ್ನು ನೀನು ನಿನ್ನ ಸಂದೇಶವಾಹಕರಿಗೆ ನಮ್ಮ ಸ್ಥಿತಿ ಮತ್ತು ಸತ್ಯನಿಷೇಧಿಗಳ ಕೃತ್ಯವನ್ನು ತಿಳಿಯಪಡಿಸು."

ಮರ್ದಿತರ ಈ ಮರಣ ಮತ್ತು ಸತ್ಯವಂತಿಕೆಯ ಸಾಕ್ಷ್ಯವು ವಾಸ್ತವದಲ್ಲಿ ಕುರೈಶ್ ಸತ್ಯನಿಷೇಧಿಗಳ ಪಾಪದ ಕೊಡಗಳನ್ನು ತುಂಬಿಸಿಬಿಟ್ಟಿತು. ಇನ್ನು ಅಕ್ರಮ-ಅನ್ಯಾಯದ ಈ ಓತಪ್ರೋತಗಳೆಲ್ಲ ಛಿದ್ರವಿಚ್ಛಿದ್ರವಾಗುವುದನ್ನು ಇತಿಹಾಸವು ನಿರೀಕ್ಷಿಸತೊಡಗಿತು.

ಉಹುದ್ ಯುದ್ಧ

ಬದ್ರ್‌ನಲ್ಲಿ ಕುರೈಶರ ಸೋಲಿನ ಸುದ್ದಿ ಕೇಳಿದ ಮಕ್ಕಾ ನಗರದಲ್ಲಿಡೀ ಸೂತಕದ ಕಳೆ ಆವರಿಸಿತ್ತು. ನಮ್ಮ ಶಸ್ತ್ರಸಜ್ಜಿತ ಸೇನೆಯನ್ನು ನಿರಾಯುಧರಾದ ಆ ಬೆರಳೆಣಿಕೆಯಷ್ಟು ಮಂದಿ ಎದುರಿಸುವುದೆಂತು? ಒಂದೇ ಏಟಿಗೆ ಆ ಮುಸ್ಲಿಮರು ಧೂಳೀಪಟವಾಗುವರು... ಖಾಲಿದ್ ಮತ್ತು ವರಕರಂತಹ ಧೀರ-ಶೂರರ ಖಡ್ಗಗಳಿಗೆ ಶತ್ರುಗಳ ರಕ್ತದ ರುಚಿ ನೋಡದೆ ಒರೆಯೊಳಗೆ ಬರುವುದು ತಿಳಿದೇ ಇಲ್ಲ... ಆ ಮುಸ್ಲಿಮರಿಗೆ ಬಹುಶಃ ಅನ್ಸಾರರ ಸಂಖ್ಯೆಯ ಬಗ್ಗೆ ಅಹಂಕಾರವಿರಬೇಕು... ಆದರೆ ಪಾಪ ತಮ್ಮ ಇತಿಹಾಸದಲ್ಲಿ ರಕ್ತರಂಜಿತ ಪುಟವನ್ನೇ ಕಾಣದ ಆ ಬಡಪಾಯಿ ಅನ್ಸಾರರು, ಸದಾ ರಕ್ತಪಾತದ ಸಾಧನೆಯಲ್ಲಿ ಮುಂದಿರುವ ಕುರೈಶರ ಈ ಸಶಸ್ತ್ರ ಸೇನೆಯನ್ನು ಎದುರಿಸುವುದಾದರೂ ಹೇಗೆ? ಇನ್ನು ಮುಹಮ್ಮದ್‌ರ(ಸ) ಜತೆಗೂಡಿರುವಂತಹ ಮಕ್ಕಾದ ತಿಳಿಗೇಡಿ ಕುರೈಶರು, ಅವರು ಮಾತ್ರವೇ ಧೀರ-ಶೂರರು... ಏನಿದ್ದರೂ ಅವರು ನಮ್ಮ ರಕ್ತಸಂಬಂಧಿಗಳೇ ತಾನೇ ಎಂದೆಲ್ಲಾ ಮಕ್ಕಾ ವಾಸಿಗಳು ಹಗಲುಗನಸು ಕಂಡಿದ್ದರು.

ಆದರೆ ಬದ್ರ್ ರಣಾಂಗಣದಿಂದ ಬಂದ ಸುದ್ದಿಯೇ ಬೇರೆ... ಕುರೈಶರು ಅವಮಾನಕರ ಸೋಲನುಭವಿಸಿದ್ದಾರೆ. ಅವರ ಅನೇಕ ಯುದ್ಧ ಪರಿಣತರು ಹತರಾಗಿದ್ದಾರೆ. ಇನ್ನೂ ಹೆಚ್ಚಿನ ಯೋಧರನ್ನು ಮುಸ್ಲಿಮರು ಬಂಧಿಸಿದ್ದಾರೆ. ಕುರೈಶರು ಬದ್ರ್‌ನಲ್ಲಿ ವೀರಾವೇಶದಿಂದ ಹೋರಾಡಿದ್ದಾರೆ. ಆದರೆ ಮುಸ್ಲಿಮರ ಹುಮ್ಮಸ್ಸು ಬಿರುಗಾಳಿಯಂತಿತ್ತು. ಸಣ್ಣ ಸಣ್ಣ ಈಟಿಗಳು ಮತ್ತು ಅರೆಬರೆ ಖಡ್ಗಗಳು ಪ್ರಳಯವನ್ನೇ ಸೃಷ್ಟಿಸಿದ್ದುವು...

ಈಗ ಮಕ್ಕಾದ ಸತ್ಯನಿಷೇಧಿಗಳು ಪ್ರತೀಕಾರಕ್ಕಾಗಿ ಬೃಹತ್ ಪ್ರಮಾಣದ ಸಿದ್ಧತೆ ಯಲ್ಲಿ ತೊಡಗಿದರು. ಮಹಿಳೆಯರು ಪುರುಷರನ್ನು ಕೆಣಕಿದರು, "ಬದ್ರ್‌ನಲ್ಲಿ ಸೋತ ಬಳಿಕವೂ ತೆಪ್ಪಗಿರುವುದು ಹೇಡಿತನವಾಗಿದೆ. ಕುರೈಶರ ಘನತೆಯ ಪುಟಗಳು ಸುಲಭದಲ್ಲಿ ಅಳಿಯುವಂತಹದ್ದಲ್ಲ... ಸೋಲಿಗೆ ಪ್ರತೀಕಾರವಾಗಲೇ ಬೇಕು. ಖಂಡಿತ ಆಗಲೇ ಬೇಕು..." ಕವಿಗಳೂ ಉದ್ರೇಕಕಾರಿ ಪದ್ಯಗಳನ್ನು ಕಟ್ಟಿ ಹಾಡಿದರು:

ಅದ್‌ನಾನ್ ಮತ್ತು ಗಾಲಿಬ್‌ರ ಆತ್ಮಗಳು ಚೀರುತ್ತಿವೆ, 'ಪ್ರತೀಕಾರ... ಪ್ರತೀಕಾರ!'

ಬದ್ರ್‌ನಲ್ಲಿ ಹತರಾದ ವೀರ ಸೇನಾನಿಗಳ ರಕ್ತಪ್ರತೀಕಾರ... ಪ್ರತೀಕಾರ!

ಕುರೈಶರು ಪ್ರತೀಕಾರ ಪಡೆಯಲು ಹೊರಟರೆಂದರೆ, ಆಕಾಶಗಳು ಕಂಪಿಸುತ್ತವೆ ಮತ್ತು ಭೂಮಿಯ ಪಾಶಗಳು ಬಿಗಿಯಲ್ಪಡುತ್ತವೆ. ಶತ್ರುಗಳು ಅವರ ಪ್ರತೀಕಾರಾಗ್ನಿಯ ಶಾಖವನ್ನು ಸಹಿಸಲಾರರು...

ವಿಧವೆಯರ ಹೃದಯ ಬೇಗುದಿ, ಅನಾಥರ ಕಣ್ಣೀರ ಹನಿಯು ನಿಮ್ಮ ಸ್ವಾಭಿಮಾನದ ಕರ್ಣಗಳಲ್ಲಿ 'ಪ್ರತೀಕಾರ'ದ ಘೋಷಣೆ ಕೂಗುತ್ತಿವೆ...

ಸೋತ ಬಳಿಕವೂ ಕೈಕಟ್ಟಿ ಕುಳಿತುಕೊಳ್ಳುವುದು ಹೇಡಿಗಳ ಲಕ್ಷಣವಾಗಿದೆ... ಖಡ್ಗಗಳನ್ನು ಒರೆಯಿಂದ ಹೊರಗೆಳೆಯಿರಿ... ಈಟಿಗಳನ್ನು ಎತ್ತಿಕೊಳ್ಳಿರಿ... ಕುದುರೆಗಳನ್ನು ರಣಾಂಗಣಕ್ಕೆ ದೌಡಾಯಿಸಿರಿ... ಹೆಚ್ಚು ಸಮಯ ಕಳೆದರೆ ಮತ್ತು ಹೆಚ್ಚೆಚ್ಚು ಆಲೋಚಿಸಿದರೆ, ಪ್ರತೀಕಾರ ಭಾವನೆಯ ತೀವ್ರತೆಯೂ ಅಷ್ಟೇ ತಣ್ಣಗಾಗುತ್ತದೆ...

ಈ ರೀತಿಯ ಅರ್ಥ ಬರುವ ಉದ್ರೇಕಕಾರಿ ಕಾವ್ಯಗಳು ಕುರೈಶರಲ್ಲಿ ಪ್ರತೀಕಾರಾಗ್ನಿಯನ್ನು ಧಗ ಧಗಿಸಿತು, ತೀವ್ರ ತಯಾರಿ ನಡೆಯಿತು, ಶಸ್ತ್ರಾಸ್ತ್ರಗಳನ್ನು ಪರಿಶೀಲಿಸಲಾಯಿತು, ಒಬ್ಬರು ಈಟಿಯ ತುದಿಯನ್ನು ಹರಿತಗೊಳಿಸಿದರೆ, ಇನ್ನೊಬ್ಬರು ಖಡ್ಗವನ್ನು ಹರಿತಗೊಳಿಸಿದರು, ಮತ್ತೊಬ್ಬರು ಬಿಲ್ಲುಗಳ ಬಿಗಿತ ಸರಿಪಡಿಸಿದರು. ಹೀಗೆ ಮುಸ್ಲಿಮರಿಂದ ಬದ್ರ್‌ನಲ್ಲಿ ಅನುಭವಿಸಿದ ಸೋಲಿಗೆ ಪ್ರತೀಕಾರ ಪಡೆಯಲು ಕುರೈಶರ ಸೇನೆಯು ಹೊರಟಿತು. ಅವರಲ್ಲಿ ಯುವ ಸೇನಾನಿಗಳಿದ್ದರು, ಅನುಭವಿ ಹಿರಿಯ ಯೋಧರಿದ್ದರು, ಮಹಿಳೆಯರೂ ಇದ್ದರು. ಸೇನಾನಿಗಳಿಗೆ ಪ್ರಚೋದನಕಾರಿ ಗೀತೆಗಳಿಂದ ಪ್ರೋತ್ಸಾಹಿಸುವುದು ಮಹಿಳೆಯರ ಕೆಲಸವಾಗಿತ್ತು.

ಹೊರಡುವುದಕ್ಕೆ ಮುನ್ನ ಅಬೂಸುಫ್‌ಯಾನ್ ತಮ್ಮ ಆರಾಧ್ಯ ದೈವ ಹುಬಲ್‌ನ ಮುಂದೆ ಧ್ಯಾನಮಗ್ನರಾದರು. ಕುರೈಶರ ಮಹಾ ಸೇನಾಧಿಪತಿಯು ಕಲ್ಲಿನ ನಿರ್ಜೀವ ಮೂರ್ತಿಯ ಮುಂದೆ ತಲೆ ತಗ್ಗಿಸಿ ನಿಂತಿದ್ದಾರೆ. ಅವರ ಗಡ್ಡದ ರೋಮವು ಗಾಳಿಯೊಂದಿಗೆ ಮಾತನಾಡುತ್ತಿತ್ತು. ಬಾಣಗಳ ಮೂಲಕ ಶಕುನ ನೋಡಿದರು. ತರುವಾಯ ಹುಬಲ್‌ನ ಮುಂದೆ ಮುಖಸ್ತುತಿಗೈಯುತ್ತಾ ಅರಿಕೆ ಮಾಡಿದರು,

"ನನ್ನ ಇಷ್ಟಾರ್ಥ ದೈವವೇ! ಕುರೈಶರ ಸರದಾರ ನಿನ್ನ ಮುಂದೆ ಸಹಾಯ ಬೇಡಿ ನಿಂತಿದ್ದಾನೆ. ನಾವು ಬದ್ರ್‌ನಲ್ಲಿ ಮುಸ್ಲಿಮರಿಂದ ಹತರಾದ ನಮ್ಮವರ ರಕ್ತಪ್ರತೀಕಾರ ಪಡೆಯಲು ಹೊರಡುತ್ತಿದ್ದೇವೆ. ನಮಗೆ ಸಹಾಯ ಮಾಡು. ನಿನ್ನ ಮಹಾನತೆಯನ್ನು ಕೊಂಡಾಡುವವರು ಮತ್ತು ನಿನಗೆ ಜೈಕಾರ ಹಾಕುವವರು ಮತ್ತೊಮ್ಮೆ ಅವಮಾನಕ್ಕೀಡಾಗದಿರಲಿ. ಅವರಿಗೆ ಯಶಸ್ಸು ದೊರೆಯಲಿ. ನಾವು ವಿಜಯಿಯಾಗಿ ಮರಳುವಂತಾಗಬೇಕು ಮತ್ತು ಇಂದು ದುಃಖದಿಂದ ಬಾಡಿದ ಮುಖಗಳಲ್ಲಿ ನಾಳೆ ಆನಂದದ ಕಿರಣಗಳು ಮಿಂಚುವಂತಾಗಲಿ."

ಕುರೈಶ್ ಸತ್ಯನಿಷೇಧಿಗಳ ಈ ಪ್ರತೀಕಾರ ಭ್ರಾಂತಿಯಿಂದಾಗಿಯೇ ಉಹುದ್ ಯುದ್ಧ

ಸಂಭವಿಸಿತು. ಇತ್ತ ಮುಸ್ಲಿಮರ ಸೇನೆಯೂ ಉಹುದ್ ಬೆಟ್ಟ ತಲುಪಿತು. ಉಭಯ ಪಡೆಗಳಿಂದಲೂ ಯುದ್ಧಕ್ಕೆ ಪಂಕ್ತಿ ಕಟ್ಟಲಾಯಿತು. ತೌಹೀದ್‌ವಾದಿಗಳು ಉಹುದ್ ಬೆಟ್ಟದ ಕಡೆಯಿದ್ದರೆ, ಬಹುದೇವಾರಾಧಕರು ಬಂಜರು ಭೂಮಿಯಲ್ಲಿ ಜಮಾಯಿಸಿದರು. ಅನಾಥಮುತ್ತು(ಸ) ಸ್ವಯಂ ಪಂಕ್ತಿಗಳನ್ನು ಸರಿಪಡಿಸಿದರು. ಆ ನೇರವಾದ ಪಂಕ್ತಿಗಳಲ್ಲಿ ಮುಸ್ಲಿಮ್ ಯೋಧರು ಅಲ್ಲಾಹನ ಮೇಲೆ ಭರವಸೆಯಿಟ್ಟು ಕಟಿಬದ್ಧರಾದರು. ಈ ಉಹುದ್ ಯುದ್ಧವು ಬದ್ರ್‌ಗಿಂತ ಹೆಚ್ಚು ಕಠಿಣವಾದುದು. ಮಕ್ಕಾದ ಸತ್ಯನಿಷೇಧಿಗಳು ಸರ್ವ ಸನ್ನದ್ಧತೆಯೊಂದಿಗೆ ಯುದ್ಧಕ್ಕೆ ಬಂದಿದ್ದಾರೆ. ಅವರ ಪ್ರತೀಕಾರಾಗ್ನಿಯು ತನ್ನೆಲ್ಲಾ ಶಕ್ತಿಯೊಂದಿಗೆ ಧಗಧಗಿಸುತ್ತಿದೆ ಎಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಮುಸ್ಲಿಮರ ಹುಮ್ಮಸ್ಸು ಉನ್ನತ ಮತ್ತು ಸಂಕಲ್ಪವು ಬೆಟ್ಟದಂತೆ ಅಚಲವಾಗಿತ್ತು. ಯುದ್ಧ ಒಮ್ಮೆ ಆರಂಭವಾಗಲಿ... ನಂತರ ಏಕದೇವ ವಿಶ್ವಾಸಿಗಳೊಡನೆ ಯುದ್ಧ ಮಾಡುವುದೆಂದರೆ ಮರಣವನ್ನು ಆಹ್ವಾನಿಸಿದಂತೆ ಎಂಬುದನ್ನು ಕುರೈಶರು ನೋಡಲಿ ಎಂದು ಅವರ ಹುಮ್ಮಸ್ಸು ಬಾಯ್ತೆರೆದು ಹೇಳುತ್ತಿತ್ತು.

ಮುಸ್ಲಿಮ್ ಸೇನೆಯು ಉನೈನ್ ಎಂಬ ಬೆಟ್ಟದ ಕಣಿವೆಯ ಬಳಿ ಬೀಡುಬಿಟ್ಟಿತ್ತು. ಆ ಕಣಿವೆಯಲ್ಲಿ ಕಡಿದಾದ ದಾರಿಯೂ ಇತ್ತು. ಇದು ಅವರಿಗೆ ಇತರೆಡೆಗಳಿಂದ ಸಹಾಯ ಒದಗಿಸಬಹುದಾದ ಸ್ಥಳವಾಗಿತ್ತು. ಜತೆಗೆ ಶತ್ರುಗಳು ಅತ್ತಲಿಂದ ಆಕ್ರಮಣ ನಡೆಸುವ ಸಾಧ್ಯತೆಯೂ ಇತ್ತು. ಆದ್ದರಿಂದ ಅನಾಥಮುತ್ತು(ಸ) ಆ ಜಾಗದಲ್ಲಿ 50 ಮಂದಿ ಬಿಲ್ಲಾಳುಗಳನ್ನು ನೇಮಿಸಿ ಹೇಳಿದರು, "ನಾವು ಯುದ್ಧರಂಗದಲ್ಲಿ ಗೆದ್ದರೂ ಸೋತು ಪೆಟ್ಟು ತಿನ್ನುತ್ತಿದ್ದರೂ ನೀವು ಈ ಜಾಗದಿಂದ ಕದಲಬಾರದು. ಇಲ್ಲಿ ನಿಂತು ಕಾವಲು ಕಾಯುತ್ತಿರಬೇಕು." ಆ ಬಿಲ್ಲಾಳುಗಳ ನಾಯಕನಾಗಿ ಅಬ್ದುಲ್ಲಾ ಬಿನ್ ಜುಬೈರ್‌ರನ್ನು(ರ) ನೇಮಿಸಿದರು.

ಮುಸ್ಲಿಮರ ಸೇನೆಯು ಸಮರ ಸನ್ನದ್ಧವಾಗಿ ನಿಂತಿತ್ತು. ಪ್ರವಾದಿವರ್ಯರಿಂದ(ಸ) ಆದೇಶ ಬರುವುದಷ್ಟೇ ಉಳಿದಿತ್ತು. ಹುತಾತ್ಮತೆಯ ಆಸಕ್ತಿ ಮತ್ತು ಜಿಹಾದ್‌ನ ಹುಮ್ಮಸ್ಸಿನಿಂದಾಗಿ ಅವರು ಚಡಪಡಿಸಿದರು. ಪ್ರವಾದಿವರ್ಯರು(ಸ) ಸಅದ್ ಬಿನ್ ಅಬೀ ವಕ್ಕಾಸ್(ರ) ಮತ್ತು ಅಬೂ ಉಬೈದಾ ಬಿನ್ ಜರ್‍ರಾಹ್‌ರನ್ನು(ರ) ಇಸ್ಲಾಮಿ ಸೇನೆಯ ಮುಂಚೂಣಿಯಲ್ಲಿ ನೇಮಿಸಿದರು. ಹೀಗೆ ಮುಂದಿನ ಪಾದಾತಿ ದಳದ ವ್ಯವಸ್ಥೆಯನ್ನು ಮಾಡಿದ ಬಳಿಕ ಅನಾಥಮುತ್ತು(ಸ) ಎಡ-ಬಲಗಳ ಸೇನೆಯೆಡೆಗೆ ಗಮನ ಹರಿಸಿದರು. ಉಕಾಶ ಬಿನ್ ಮುಹ್ಸಿನ್ ಅಸದಿ ಮತ್ತು ಅಬೂಸಲಮ ಬಿನ್ ಅಬ್ದುಲ್ ಅಸದ್‌ರಿಗೆ ಆ ಎರಡೂ ದಳಗಳ ನೇತೃತ್ವ ವಹಿಸಿಕೊಡಲಾಯಿತು.

ಕುರೈಶ್ ಸತ್ಯನಿಷೇಧಿಗಳೂ ಪಂಕ್ತಿಗಳನ್ನು ಕಟ್ಟಿದರು. ಅವರ ಬಲಗಡೆಯ ಸೇನಾ ತುಕಡಿಯ ಕಮಾಂಡರ್ ಆಗಿ ಖಾಲಿದ್ ಬಿನ್ ವಲೀದ್ ಮತ್ತು ಎಡಗಡೆಯ ಸೇನಾ ತುಕಡಿಯ ಕಮಾಂಡರ್ ಆಗಿ ಇಕ್ರಿಮ ಬಿನ್ ಅಬೂಜಹಲ್ ನೇಮಕವಾದರೆ, ಸೇನಾ ದಂಡ ನಾಯಕನಾಗಿ

ಅಬೂಸುಫ್‌ಯಾನ್ ಹೊಣೆ ಹೊತ್ತು ನಿಂತರು.

ಯುದ್ಧ ಆರಂಭವಾಯಿತು. ಉಭಯ ಬಣಗಳ ಯೋಧರು ಪರಾಕ್ರಮ ಮೆರೆಯ ತೊಡಗಿದರು. ಖಡ್ಗಗಳ ಘರ್ಷಣೆಯ ಶಬ್ದವು ಉಹುದ್ ಬೆಟ್ಟ ಕಣಿವೆಗಳಲ್ಲಿ ಪ್ರತಿಧ್ವನಿಸ ತೊಡಗಿದವು. ಒಂದೆಡೆ ಲಾತ್-ಹುಬಲ್‌ಗಳಿಗೆ ಜೈಕಾರ ಹಾಕುತ್ತಿದ್ದರೆ, ಇನ್ನೊಂದೆಡೆ ತಕ್ಬೀರ್ ಘೋಷಣೆ ಮೊಳಗುತ್ತಿದೆ. ಅನಾಥಮುತ್ತು(ಸ) ತಮ್ಮ ಖಡ್ಗವನ್ನು ಅಬೂದುಜಾನರಿಗೆ ನೀಡಿದರು. ಅಬೂದುಜಾನ ಧೀರ-ಶೂರ ಮತ್ತು ಪರಾಕ್ರಮಿಯಾಗಿದ್ದರು. ಪ್ರವಾದಿಯ(ಸ) ಖಡ್ಗ ಪಡೆದ ಅವರು ಶತ್ರು ಸೇನೆಯೆಡೆಗೆ ಹೆಜ್ಜೆಯಿಟ್ಟಾಗ ಅವರ ನಡೆಯಲ್ಲಿ ದರ್ಪ ಎದ್ದು ತೋರುತ್ತಿತ್ತು. ಆಗ ಪ್ರವಾದಿಯವರು(ಸ) ಇಂತೆಂದರು, "ಇಂತಹ ನಡೆಯನ್ನು ಅಲ್ಲಾಹನು ಮೆಚ್ಚುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಇದು ಅನುವದನೀಯವಾಗಿದೆ."

ಶತ್ರುಗಳ ಪಂಕ್ತಿಯಿಂದ ಓರ್ವ ಯೋಧ ಅಬೂದುಜಾನರೆಡೆಗೆ ಧಾವಿಸಿದ. ಆತ ಖಡ್ಗ ಬೀಸಲುದ್ಯುಕ್ತನಾಗುತ್ತಿದ್ದಂತೆಯೇ ಅಬೂದುಜಾನ(ರ) ಆತನ ತಲೆಯನ್ನು ಕಡಿದು ಬಿಟ್ಟರು. ತರುವಾಯ ಅವರು ಶತ್ರುಗಳ ಪಂಕ್ತಿಯನ್ನು ಭೇದಿಸುತ್ತಾ ಸಾಗಿದರು. ಒಂದೆಡೆ ಅಬೂ ಸುಫ್‌ಯಾನ್‌ರ ಪತ್ನಿ ಹಿಂದಃ ಇತರ ಸ್ತ್ರೀಯರೊಡಗೂಡಿ, ಕುರೈಶ್ ಸೈನಿಕರನ್ನು ಹುರಿದುಂಬಿಸಲು ಸಮರ ಗೀತೆ ಹಾಡುತ್ತಿದ್ದರು. ಅವರ ಪ್ರತಿಯೊಂದು ಕವನ ಸಾಲಿನಲ್ಲೂ ರಕ್ತಪ್ರತೀಕಾರದ ದಾಹ ಎದ್ದು ಕಾಣುತ್ತಿತ್ತು. ಪ್ರತಿ ವಾಕ್ಯವೂ ಮಕ್ಕಾದ ಯೋಧರ ಹುಮ್ಮಸ್ಸನ್ನು ಹೆಚ್ಚಿಸುತ್ತಿತ್ತು. ಅಬೂದುಜಾನ(ರ) ಪರಾಕ್ರಮ ಮೆರೆಯುತ್ತ ಹಿಂದರನ್ನು ಸಮೀಪಿಸಿದರು. ಹಿಂದರ ಮುಖ ದರ್ಶನವಾಗುತ್ತಲೇ ಅಬೂದುಜಾನ(ರ) ಆಕೆಯ ಕೊರಳು ಕೊಯ್ಯಲು ಖಡ್ಗವೆತ್ತಿದರು. ಇನ್ನು ಸ್ವಲ್ಪವೇ ಹೊತ್ತಿನಲ್ಲಿ ಹಿಂದರ ನಿರ್ಜೀವ ದೇಹವು ನೆಲದಲ್ಲಿ ಚಡಪಡಿಸುವುದರಲ್ಲಿತ್ತು. ಆದರೆ ಅದೇ ಹೊತ್ತಿನಲ್ಲಿ ಪ್ರವಾದಿ ಯವರ(ಸ) ಖಡ್ಗದಿಂದ ಓರ್ವ ಮಹಿಳೆಯ ರಕ್ತ ಹರಿಯುವುದು ಸರಿಯಲ್ಲವೆಂಬ ಆಲೋಚನೆ ಅಬೂದುಜಾನರಲ್ಲಿ ಹುಟ್ಟಿಕೊಂಡಿತು. ಈ ಆಲೋಚನೆಯು ಅಬೂದುಜಾನರ ಕೈಯನ್ನು ತಡೆದು ಬಿಟ್ಟಿತು. ಹೀಗೆ ಅಬೂಸುಫ್‌ಯಾನ್‌ರ ಪತ್ನಿಯ ಪ್ರಾಣ ಉಳಿಯಿತು.

ಬಿಲ್ಲುಗಳಿಂದ ಬಾಣಗಳ ಸುರಿಮಳೆಯಾಗುತ್ತಿತ್ತು... ಈಟಿ ಖಡ್ಗಗಳು ಖಣಖಣಿಸ ತೊಡಗಿವು... ಸತ್ಯನಿಷೇಧಿಗಳೂ ಇಂದು ಜೀವದ ಹಂಗು ತೊರೆದು ಹೋರಾಡುವ ಪಣ ತೊಟ್ಟಂತಿದ್ದರು. ಅವರು ಅತೀವ ಪರಾಕ್ರಮದಿಂದ ಹೋರಾಡುತ್ತಿದ್ದರು. ಒಬ್ಬ ಧರೆ ಗುರುಳಿದರೆ, ಅವನ ಜಾಗದಲ್ಲಿ ಇನ್ನೊಬ್ಬ ಎದ್ದು ನಿಲ್ಲುತ್ತಿದ್ದ. ಆದರೆ ಮುಸ್ಲಿಮರ ತೀವ್ರ ಪ್ರತಿದಾಳಿಯನ್ನು ಅವರಿಂದ ಎದುರಿಸಲಾಗಲಿಲ್ಲ... ಅವರ ಪಾದಗಳು ಕಂಪಿಸಿದವು... ಮುಂದಡಿಯಿಟ್ಟವರು ಹಿಂದೆ ಸರಿದರು... ಮಾಡು ಇಲ್ಲವೇ ಮಡಿಯೆಂಬ ಶಪಥ ತೊಟ್ಟಂತೆ ಬಂದಿದ್ದ ಯೋಧರು ಯುದ್ಧರಂಗದಿಂದ ಕಾಲ್ಕಿತ್ತರು. ಜೀವ ಎಲ್ಲರಿಗೂ ಪ್ರಿಯವೇ ತಾನೇ? ಇತ್ತ ಕಣಿವೆಯಲ್ಲಿ ಕಾವಲು ಕಾಯಲು ಅಬ್ದುಲ್ಲಾ ಬಿನ್ ಜುಬೈರ್‌ರ(ರ) ನೇತೃತ್ವದಲ್ಲಿ

ನೇಮಿಸಲ್ಪಟ್ಟಿದ್ದ ಯೋಧರು, ಶತ್ರುಗಳು ಪಲಾಯನ ಮಾಡುವುದನ್ನು ಕಂಡು ಕೆಳಗಿಳಿದು ಬಂದು ಸಮರಾರ್ಜಿತ ಸೊತ್ತನ್ನು ಬಾಚಲು ತೊಡಗಿದರು. ನಮಗೆ ವಿಜಯ ಪ್ರಾಪ್ತ ವಾಯಿತೆಂದು ಆ ಬಿಲ್ಲಾಳುಗಳು ಭಾವಿಸಿದ್ದರು. ಹೌದು, ಶತ್ರುಗಳು ಸೋತು ಓಡಿ ಹೋಗುತ್ತಿದ್ದಾರೆ... ಇತ್ತಂಡಗಳ ಪೈಕಿ ಒಂದು ಬಣದ ಸೋಲಿನೊಂದಿಗೆ ಯುದ್ಧವು ಕೊನೆಗೊಳ್ಳುತ್ತದೆ. ಓಡಿ ಹೋಗುವವರು ಮರಳಿ ಆಕ್ರಮಣ ಮಾಡುವುದಾದರೂ ಹೇಗೆ? ಬದ್ರ್ ಯುದ್ಧದ ವೇಳೆ, ಸಮರಾಂಗಣ ಬಿಟ್ಟೋಡಿದ ಶತ್ರು ಯೋಧರು ಹಿಂತಿರುಗಿ ನೋಡಿರಲೂ ಇಲ್ಲ... ಆದರೆ ಬಿಲ್ಲಾಲುಗಳ ಗ್ರಹಿಕೆ ತಪ್ಪಾಗಿತ್ತು. "ಯಾವುದೇ ಪರಿಸ್ಥಿತಿಯಲ್ಲೂ ನಿಮ್ಮ ಜಾಗದಿಂದ ಕದಲಬಾರದು" ಎಂದು ಪ್ರವಾದಿಯವರೇ(ಸ) ಆದೇಶಿಸಿದ್ದರಲ್ಲವೇ? ಒಳಿತಿನ ಸಂಕಲ್ಪವಿದ್ದಾಗಿಯೂ ಪ್ರವಾದಿವರ್ಯರ(ಸ) ಆದೇಶವನ್ನು ಉಲ್ಲಂಘಿಸಿದುದರ ಕಾರಣವಾಗಿ ಯುದ್ಧ ಭೂಮಿಯ ಚಿತ್ರಣವೇ ಬದಲಾಗಿ ಬಿಟ್ಟಿತು. ಯುದ್ಧದ ಫಲಿತಾಂಶವೂ ಏನಕ್ಕೇನೋ ಆಗಿ ಬಿಟ್ಟಿತು.

ವೀರ ಕಲಿಗಳ ಧೀರ ಅಂತ್ಯ

ಪ್ರತಿರೋಧದ ಈ ಪ್ರಬಲ ಬಿಲ್ಲಾಳುಗಳ ಪಡೆಯು ಸಮರಾರ್ಜಿತ ಸೊತ್ತನ್ನು ಬಾಚುವುದರಲ್ಲಿ ಮಗ್ನರಾಗಿರುವುದನ್ನು ಕಂಡು, ಪಲಾಯನಗೈಯುತ್ತಿದ್ದ ಶತ್ರು ಸೇನೆಯ ನಾಯಕರು ಮರಳಿ ಆಕ್ರಮಣ ಮಾಡಿದರು. ಈ ಜನ ಒಗ್ಗಟ್ಟಾಗಿ ದಾಳಿಯಿಟ್ಟರೆ, ಮುಸ್ಲಿಮರೆಲ್ಲ ಅಲ್ಲಲ್ಲಿ ಚದುರಿಕೊಂಡಿದ್ದರು. ಈ ಮರುದಾಳಿಯನ್ನು ದಿಟ್ಟತನದಿಂದ ಎದುರಿಸಿದ ಅಬ್ದುಲ್ಲಾ ಬಿನ್ ಜುಬೈರ್(ರ) ತಮ್ಮ ಸಂಗಡಿಗರೊಂದಿಗೆ ಹುತಾತ್ಮರಾದರು. ಇಸ್ಲಾಮೀ ಸೇನೆಯ ಮೇಲೆ ಮಹಾ ಆಪತ್ತು ಎರಗಿತು. ಹದಿನಾಲ್ಕು ಮಂದಿ ಸಹಾಬಿಗಳ ಹೊರತು, ಯುದ್ಧ ರಂಗದಲ್ಲಿದ್ದ ಎಲ್ಲ ಮುಸ್ಲಿಮ್ ಯೋಧರ ಕಾಲಡಿಯ ನೆಲವೇ ಕುಸಿದಂತೆ ಗರಬಡಿದು ನಿಂತರು. ಇನ್ನೂ ದುರಂತವೇನೆಂದರೆ ಸ್ವತಃ ಪ್ರವಾದಿವರ್ಯರೇ(ಸ) ಹುತಾತ್ಮರಾದರೆಂಬ ವದಂತಿ ನಾಲ್ದೆಸೆಗಳಲ್ಲೂ ಹರಡಿತು. ಈ ವದಂತಿಯು ಮುಸ್ಲಿಮ ರಲ್ಲಿದ್ದ ಅಲ್ಪಸ್ವಲ್ಪ ಧೈರ್ಯವನ್ನೂ ಉಡುಗಿಸಿತು.

ಮಕ್ಕಾದ ಓರ್ವ ಗುಲಾಮ ವಹ್‌ಶೀ, ಹಮ್‌ಝಾರನ್ನೇ(ರ) ಹುಡುಕುತ್ತಿದ್ದ. ಅವರನ್ನು ಕಾಣುತ್ತಲೇ, ವಹ್‌ಶೀ ಈಟಿಯನ್ನೆತ್ತಿ ಅವರೆಡೆಗೆ ಬೀಸಿದ. ಆ ಪೆಟ್ಟಿಗೆ ಹಮ್‌ಝಾ ತತ್ತರಿಸಿ ಹೋದರು. ಅಲ್ಲಾಹನ ಹೆಸರೆತ್ತುತ್ತ ಕಣ್ಣು ಮುಚ್ಚಿ ಹುತಾತ್ಮರಾದರು. ತರುವಾಯ ವಹ್‌ಶೀ, ಹಮ್‌ಝಾರ ಹೊಟ್ಟೆ ಸಿಗಿದು ಕರುಳನ್ನು ಹೊರತೆಗೆದು ಹಿಂದರ ಬಳಿಗೆ ಧಾವಿಸಿದ. ಅದನ್ನು ಅವರೆಡೆಗೆ ಹಿಡಿದು ಹೇಳಿದ,

"ಇಲ್ಲಿ ನೋಡಿ, ನಾನು ಯಾವ ವಸ್ತುವನ್ನು ತಂದಿದ್ದೇನೆಂಬುದು ತಿಳಿದಿದೆಯೇ? ಇದೋ ಬದ್ರ್‌ನಲ್ಲಿ ನಿಮ್ಮ ತಂದೆಯನ್ನು ವಧಿಸಿದ ವ್ಯಕ್ತಿಯ ಕರುಳು!"

ಹಮ್‌ಝರ ಕರುಳನ್ನು ಪಡೆದ ಹಿಂದ, ಅದನ್ನು ಕಚ್ಚಿ ಜಗಿದರು. ಇಂತಹ ಅತಿ

ಕ್ರೂರ ಪ್ರತೀಕಾರ ಜಗತ್ತಿನಲ್ಲಿ ಯಾರೂ ಎಂದೂ ಪಡೆದಿರಲಿಕ್ಕಿಲ್ಲ.

ಹ. ಅಲಿಯವರು(ರ) ಹಮ್‌ಝರ(ರ) ಪಾರ್ಥಿವ ಶರೀರವನ್ನು ಬಹಳಕಷ್ಟ ದಿಂದಲೇ ಹುಡುಕಿದರು. ಮೃತದೇಹದ ಅಂಗಾಂಗಗಳೆಲ್ಲ ಬೇರ್ಪಟ್ಟಿದ್ದುವು. ಪ್ರವಾದಿವರ್ಯರಿಗೆ(ಸ) ಇದರ ಬಗ್ಗೆ ತಿಳಿದಾಗ, ಅವರಿಗೆ ಅತೀವ ಆಘಾತವಾಯಿತು. ಹಮ್‌ಝರ(ರ) ಸಹೋದರಿ ಸಫಿಯ್ಯ(ರ) ಕೂಡ ತನ್ನ ಅಣ್ಣನ ದೇಹಕ್ಕಾದ ಸ್ಥಿತಿಯನ್ನು ಕಂಡು ರೋದಿಸಿದರು. ಸಯ್ಯಿದಃ ಫಾತಿಮಾರ(ರ) ಕಂಗಳಿಂದಲೂ ಧಾರಾಕಾರ ಕಂಬನಿ ಹರಿಯಿತು. ಅನಾಥಮುತ್ತು(ಸ) ಕೂಡ ಗಳಗಳನೆ ಅತ್ತುಬಿಟ್ಟರು.

ಶತ್ರುಗಳು ಸಿಕ್ಕಿದ ಅವಕಾಶದಿಂದ ಸಂಪೂರ್ಣ ಪ್ರಯೋಜನ ಪಡೆದರು. ಇಸ್ಲಾಮೀ ಸೇನೆಯು ಚೆಲ್ಲಾಪಿಲ್ಲಿಯಾಗಿರುವುದನ್ನು ಕಂಡು ಅವರ ಉತ್ಸಾಹ ಇಮ್ಮಡಿಸಿತು. ಈಗ ಮುಸ್ಲಿಮರು ಆಘಾತಕ್ಕೀಡಾಗಿದ್ದಾರೆ... ಇದೇ ಸುಸಂದರ್ಭ. ಎದುರಿಗೆ ಸಿಕ್ಕವರನ್ನು ಹೊಡೆದು ಮುಗಿಸಿಬಿಡಬೇಕು... ಮುಸ್ಲಿಮರ ಪ್ರತಿಯೋರ್ವ ಯೋಧನೂ ಮಣ್ಣು ಮುಕ್ಕುವವರೆಗೆ ತರಿಯುತ್ತಾ ಹೋಗಬೇಕು ಅಥವಾ ಈ ಜನ ಸೋಲೊಪ್ಪಿಕೊಳ್ಳಬೇಕು. ಆಗ ಮಾತ್ರವೇ ಬದ್‌ರ್‌ಗೆ ಪ್ರತೀಕಾರ ಪಡೆದಂತಾದೀತು.

ಅನಾಥಮುತ್ತು(ಸ) ಕೆಲವು ಮಂದಿ ಆತ್ಮಾರ್ಪಿತ ಧೀರ ಯೋಧರಿಂದ ಸುತ್ತುವರಿ ಯಲ್ಪಟ್ಟು ರಕ್ಷಣೆ ಹೊಂದಿದರು. ನಾಲ್ದೆಸೆಗಳಿಂದಲೂ ಬಾಣಗಳು ಸುರಿಮಳೆ ಯಾಗುತ್ತಿದೆ. ಆ ಸಂದರ್ಭದಲ್ಲಿ ಹ. ಅಲಿ(ರ) ತೋರಿದ ಧೀಮಂತಿಕೆಯು ಇಸ್ಲಾಮೀ ಇತಿಹಾಸದ ಪುಟ ಗಳಲ್ಲಿ ಅಚ್ಚಳಿಯದೆ ಉಳಿದು ಬಿಟ್ಟಿದೆ.

ಹ. ಹಂಝಲ(ರ) ಓರ್ವ ಅತ್ಯುತ್ಸಾಹಿ ನವ ತರುಣರಾಗಿದ್ದರು. ಈ ಘಟನೆ ಸಂಭವಿಸು ವುದರ ಹಿಂದಿನ ರಾತ್ರಿಯೇ ಅವರ ನಿಕಾಹ್ ಆಗಿತ್ತು. ಬೆಳಗಾತ ಎದ್ದು ಅವರು ಸ್ನಾನ ಮಾಡುತ್ತಿದ್ದರು. ಅದೇ ಹೊತ್ತಿಗೆ ಪ್ರವಾದಿವರ್ಯರು(ಸ) ಹುತಾತ್ಮರಾದರೆಂಬ ವದಂತಿಯು ಮದೀನದಾದ್ಯಂತ ಹರಡಿತು. ಆ ಕೂಡಲೇ ಅವರು ಖಡ್ಗ ಹಿಡಿದು ಹೊರಟು ನಿಂತರು. ಉಹುದ್ ತಲಪುತ್ತಲೇ ಶತ್ರು ಸೇನೆಯೊಳಗೆ ನುಗ್ಗಿ ಸಿಕ್ಕಸಿಕ್ಕವರನ್ನೆಲ್ಲ ತರಿಯುತ್ತ ಸಾಗಿದರು. ಸ್ವಲ್ಪವೇ ಹೊತ್ತಿನಲ್ಲಿ ಅನೇಕ ಶತ್ರುಗಳನ್ನು ಧರೆಗುರುಳಿಸಿದರು. ಆದರೆ ಅವರೊಬ್ಬರನ್ನೇ ಶತ್ರುಗಳ ಗುಂಪು ಸುತ್ತುವರಿಯಿತು. ಬಾಣ, ಈಟಿ, ಖಡ್ಗಗಳ ಏಟಿನಿಂದಾಗಿ ಅವರ ದೇಹವಿಡೀ ಗಾಯಗೊಂಡು ಜರ್ಝರಿತವಾಯಿತು. ಸ್ವಲ್ಪ ಹೊತ್ತು ವೀರಾವೇಶದಿಂದ ಹೋರಾಡಿದ ಅವರು ದೇವಮಾರ್ಗದಲ್ಲಿ ಹುತಾತ್ಮರಾದರು. ಹುತಾತ್ಮರ ಮೃತದೇಹಗಳನ್ನು ಹುಡುಕುವಾಗ ಹಂಝಲರ ಮೃತದೇಹವು ಆಗಷ್ಟೇ ಜನಾಝಕ್ಕೆ ಸ್ನಾನ ಮಾಡಿಸಿದಂತೆ ನೀರಲ್ಲಿ ಒದ್ದೆ ಯಾಗಿರುವ ಸ್ಥಿತಿಯಲ್ಲಿ ಕಂಡುಬಂತು. ಒಂದು ರಾತ್ರಿಯ ಮದುಮಗ ತನ್ನ ನವವಧುವನ್ನು ತೊರೆದು ಹುತಾತ್ಮತೆಯನ್ನು ಆಲಂಗಿಸಿ ಹೊರಟುಹೋದರು.

ಹಬಶ್‌ರ ಪುತ್ರ ಅಬ್ದುಲ್ಲಾ ಜೀವದ ಹಂಗು ತೊರೆದು ಖಡ್ಗ ಬೀಸುತ್ತಾ ಇರುವಾಗ

ಕತ್ತಿವರಸೆಯಲ್ಲಿ ಅವರ ಖಡ್ಗ ತುಂಡಾಯಿತು. ಅದನ್ನು ಕಂಡು ಪ್ರವಾದಿವರ್ಯರು(ಸ) ಹತ್ತಿರವೇ ಇದ್ದ ಖರ್ಜೂರದ ಗೆಲ್ಲನ್ನು ಅವರತ್ತ ಎಸೆದರು. ಆ ಗೆಲ್ಲನ್ನೇ ಅವರು ಖಡ್ಗದಂತೆ ಬಳಸಿ ಶತ್ರುಗಳ ಪಾಳಯಕ್ಕೆ ನುಗ್ಗಿದರು.

ಹ. ಅಬೂತಲ್ಹಾ ಅನ್ಸಾರಿ ಪಳಗಿದ ಗುರಿಕಾರರಾಗಿದ್ದರು. ಮದೀನದಾದ್ಯಂತ ಅವರ ಬಾಣ ಪ್ರಯೋಗವು ಪ್ರಸಿದ್ಧವಾಗಿತ್ತು. ಅವರು ಪ್ರವಾದಿವರ್ಯರ(ಸ) ರಕ್ಷಣೆಗಾಗಿ ತಮ್ಮ ಎದೆಯನ್ನೇ ಒಡ್ಡಿದರು. ಯಾವುದಾದರೊಂದು ಬಾಣ ಎತ್ತರದಲ್ಲಿ ಬಂದರೆ ತುದಿಗಾಲಲ್ಲಿ ನಿಂತು ಬಿಡುತ್ತಿದ್ದರು. ಅದು ತಮ್ಮ ಎದೆ ಅಥವಾ ಕೊರಳಿಗೆ ಬಿದ್ದರೂ ಸರಿ, ದೇವ ಸಂದೇಶವಾಹಕರಿಗೆ ಕಿಂಚಿತ್ತೂ ಪೆಟ್ಟಾಗಬಾರದು ಎಂಬುದು ಅವರು ಸಂಕಲ್ಪವಾಗಿತ್ತು. ಅಬೂತಲ್ಹಾ ಶತ್ರುಗಳೆಡೆಗೆ ಎಷ್ಟು ತೀವ್ರವಾಗಿ ಬಾಣ ಹೂಡುತ್ತಿದ್ದರೆಂದರೆ ಅವರ ಕೈಯಿಂದ ಮೂರು ಬಿಲ್ಲುಗಳೇ ತುಂಡಾಗಿ ಬಿಟ್ಟುವು.

ಈ ರೀತಿ ಆತ್ಮಾರ್ಪಣೆಗೆ ಸಿದ್ಧರಾದ ಶೂರರಲ್ಲಿ ಸಅದ್ ಬಿನ್ ಅಬೀ ವಕ್ಕಾಸ್ ಕೂಡ ಒಬ್ಬರು. ಅವರ ಕೈಯಲ್ಲೂ ಬಿಲ್ಲು-ಬಾಣಗಳಿದ್ದುವು ಮತ್ತು ಶತ್ರುಗಳೆಡೆಗೆ ನಿರಂತರ ಬಾಣಗಳ ಸುರಿಮಳೆಗೆರೆಯುತ್ತಿದ್ದರು. ಸಅದ್‌ರವರು ಬಾಣ ಹೂಡುವ ಶೈಲಿಯನ್ನು ಕಂಡು ಅನಾಥಮುತ್ತು(ಸ) ಅಪಾರ ಪ್ರೀತಿ ತುಂಬಿದ ಸ್ವರದಲ್ಲಿ ಪ್ರೋತ್ಸಾಹಿಸುತ್ತಾ ಹೇಳುತ್ತಿದ್ದರು,

"ಸಅದ್! ಬಾಣ ಬಿಡು!! ನನ್ನ ಮಾತಾಪಿತರು ನಿನಗೆ ಅರ್ಪಿತ!!!"

ಪ್ರವಾದಿವರ್ಯರ(ಸ) ಬಾಯಿಯಿಂದ ಈ ಪ್ರೀತಿ ತುಂಬಿದ ಮಾತು ಸಅದ್‌ರ ಹೊರತು ಬೇರೆ ಯಾರಿಗಾಗಿಯೂ ಹೊರಟಿದ್ದಿಲ್ಲ.

♦♦♦

ವಿಷಮ ಸ್ಥಿತಿ

ಬಿಲ್ಲಾಳುಗಳಿಂದ ಆದ ಪ್ರಮಾದದಿಂದಾಗಿ ಯುದ್ಧದ ಚಿತ್ರಣವೇ ಬದಲಾಗಿ ಬಿಟ್ಟಿತು. ಮುಸ್ಲಿಮರು ಚದುರಿದುದನ್ನು ಕಂಡು ವೈರಿಸೇನೆಯು ಮುಂದುವರಿದೇ ಇತ್ತು. ಈ ಮುಸ್ಲಿಮರು ಇನ್ನು ಹೆಚ್ಚು ಹೊತ್ತು ನಮ್ಮನ್ನು ಎದುರಿಸಲಾರರು. ಉಹುದ್ ಯುದ್ಧದಿಂದಲೇ ಕುರೈಶ್ ಇತಿಹಾಸದ ದಿಕ್ಕು ಬದಲಾಗಿದೆ. ಈ ಯುದ್ಧವನ್ನು ನಾವು ಜಯಿಸಿದರೆ, ಮುಸ್ಲಿಮರ ಸಂಪೂರ್ಣ ಬಲ ಮುರಿಯಲಿದೆ. ನಾವೇನೋ ಬದ್ರ್‌ನ ಸೋಲನ್ನು ಸಹಿಸಿದೆವು. ಆದರೆ ಈ ಜನ ಒಂದೇ ಸೋಲಿಗೆ ಹತಾಶರಾಗಿ ಬಿಡುವರು. ಇನ್ನು ಮದೀನದಲ್ಲಿರುವ ಮುಸ್ಲಿಮರು... ಅವರನ್ನೂ ಇಲ್ಲಿಂದಲೇ ಆಕ್ರಮಿಸಬಲ್ಲೆವು. ಈ ಮೂಲಕ ಇಸ್ಲಾಮ್ ಮತ್ತು ಅದರ ಪ್ರವಾದಿಯ ಅಸ್ತಿತ್ವವೇ ಈ ಲೋಕದಿಂದ ಅಳಿದು ಹೋಗಲಿದೆ. ಇನ್ನು ಸೆಲ ಪಟ್ಟಣದ ಪರ್ವತ ಶ್ರೇಣಿಗಳಿಂದ ತಕ್ಬೀರ್‌ನ ಶಬ್ದವು ಶಾಶ್ವತವಾಗಿ ಸ್ತಬ್ಧವಾಗಲಿದೆ... ಎಂದೆಲ್ಲಾ ಕುರೈಶರು ಭಾವಿಸತೊಡಗಿದರು.

ಕುರೈಶ್ ಸೇನೆಯಲ್ಲಿ ಇಬ್ನು ಕುಮ್ಮೈಮಾ ಎಂಬಾತ ಮುಂಚೂಣಿಯಲ್ಲಿದ್ದ. ಆತ ಪ್ರವಾದಿವರ್ಯರ(ಸ) ಮೇಲೆ ಕಲ್ಲಿನ ಸುರಿಮಳೆಗೆರೆಯತೊಡಗಿದ. ಈ ಹೃದಯ ವಿದ್ರಾವಕ ದೃಶ್ಯ ಕಂಡು ಸೂರ್ಯ ಇನ್ನಷ್ಟು ಪ್ರಜ್ವಲಿಸಿ ಕುದಿಯತೊಡಗಿತು... ಜಗತ್ತಿನ ಜನರಿಗಾಗಿ ಅನುಗ್ರಹದ ಪುಷ್ಪ ವರ್ಷಿಸಿದವರ ಮೇಲೆ ಕಲ್ಲಿನ ಸುರಿಮಳೆಯೇ!? ಕಲ್ಲೇಟಿನಿಂದಾಗಿ ಪ್ರವಾದಿವರ್ಯರ(ಸ) ಮುಖಾರವಿಂದವು ನೆತ್ತರಲ್ಲಿ ಮಿಂದು ಹೋಗಿತ್ತು. ತರುವಾಯ ಇಬ್ನು ಕುಮ್ಮೈಮಾ ಮುಂದುವರಿದು ಪ್ರವಾದಿವರ್ಯರ(ಸ) ಮೇಲೆ ಖಡ್ಗ ಬೀಸಿದ. ಆದರೆ ಪ್ರವಾದಿ ವರ್ಯರು(ಸ) ಯುದ್ಧ ಕವಚ ಧರಿಸಿದ್ದ ಕಾರಣ ಹೊಡೆತದ ರಭಸಕ್ಕೆ ಆಯ ತಪ್ಪಿ ಹತ್ತಿರದ ಗುಂಡಿಯೊಂದರೊಳಗೆ ಬಿದ್ದುಬಿಟ್ಟರು. 'ಆಹ್! ನನ್ನ ಬಹುದಿನಗಳ ಆಗ್ರಹ ಫಲಗೂಡಿತು' ಎಂದು ಭಾವಿಸಿದ ಇಬ್ನು ಕುಮ್ಮೈಮಾ ಸಂತೋಷಾತಿರೇಕದಿಂದ ಬೊಬ್ಬಿರಿದ, "ಮುಹಮ್ಮದ್ ಹತರಾದರು!" ಈ ಒಂದು ವಾಕ್ಯ ಸತ್ಯನಿಷೇಧಿ ಸೇನೆಯಾದ್ಯಂತ ಬಾಯ್ದೆರೆಯಾಗಿ ಹರಡುತ್ತಾ ಹೋಯಿತು. ಆಕ್ರಮಣಕೋರರ ಮುಖಗಳು ಆನಂದಾತಿರೇಕದಿಂದ ಬೆಳಗತೊಡಗಿದವು... ತುಟಿಗಳಲ್ಲಿ ವಿಜಯದ ನಗೆ ಮಿಂಚಿತು... ಸಂತೋಷ ತಡೆಯಲಾರದೆ ಅವರ ಹೃದಯಗಳು ಕುಣಿದಾಡಿದುವು... ಮಕ್ಕಾ ನಗರದಾದ್ಯಂತ ಈ ಸುದ್ದಿ ಹರಡಿದಾಗ ನಮ್ಮವರು ನಮ್ಮ

ಸಾಧನೆಯನ್ನು ಕೊಂಡಾಡುವರು... ಕವಿಗಳು ನಮ್ಮ ಪ್ರಶಂಸಾ ಗೀತೆ ರಚಿಸಿ ಹಾಡುವರು... ಉಕಾಝ್ ಮತ್ತು ದುಲ್‌ಮಜನ್ನಾ ಸಂತೆಕಟ್ಟೆಗಳಲ್ಲಿ ನಮ್ಮ ಹೆಸರುಗಳನ್ನು ಹೊತ್ತ ಶಿಲಾಫಲಕಗಳನ್ನು ಪ್ರತಿಷ್ಠಾಪಿಸುವರು... ಹೀಗೆ ಅವರ ಸಂತೋಷಕ್ಕೆ ಪಾರವಿರಲಿಲ್ಲ.

ಅಬೂ ಉಬೈದಾ ಬಿನ್ ಜರ್ರಾಹ್‌ರು(ರ) ಪ್ರವಾದಿವರ್ಯರ(ಸ) ಶಿರಸ್ತ್ರಾಣದ ಕಟ್ಟುಗಳನ್ನು ತಮ್ಮ ಹಲ್ಲುಗಳಿಂದ ಕಚ್ಚಿ ತೆಗೆದರು. ಅದರಿಂದ ಅವರ ಹಲ್ಲುಗಳಿಗೆ ಹಾನಿ ಯಾದುವು. ಆದರೂ ಪ್ರವಾದಿವರ್ಯರ(ಸ) ಹಣೆಯಿಂದ ತೊಟ್ಟಿಕ್ಕಿದ ರಕ್ತ ನೆಲಕ್ಕೆ ತಾಗುವುದನ್ನು ಅವರು ಇಷ್ಟಪಡಲಿಲ್ಲ. ಎಲ್ಲಾದರೂ ಅದು ನೆಲಕ್ಕೆ ತೊಟ್ಟಿಕ್ಕಿ ಈ ಭೂಭಾಗದ ಮೇಲೆ ಅಲ್ಲಾಹನ ಕ್ರೋಧವೆರಗಿದರೆ, ಅಲ್ಲಿನ ಫಲವತ್ತತೆಯೇ ನಾಶ ವಾದೀತು ಎಂದು ಅವರು ಅಂಜಿದ್ದರು.

ಇತ್ತ ಪ್ರವಾದಿವರ್ಯರಿಗಾದ(ಸ) ಗಾಯಗಳಿಂದ ರಕ್ತ ಒಸರುತ್ತಿತ್ತು... ಅತ್ತ ಶತ್ರುಗಳು ವಿಜಯೋತ್ಸವ ಆಹ್ಲಾದದಲ್ಲಿದ್ದಾರೆ. ಮುಸ್ಲಿಮರೆಲ್ಲ, ಭಿನ್ನಭಿನ್ನರಾಗಿ ಬಿಟ್ಟಿದ್ದಾರೆ... ಅದು ಅತ್ಯಂತ ಕಠಿಣ ಮತ್ತು ಸೂಕ್ಷ್ಮ ಅವಸ್ಥೆಯಾಗಿತ್ತು. ಅಷ್ಟು ಹೊತ್ತಿಗೆ ಅಲಿ(ರ) ತಮ್ಮ ಗುರಾಣಿಯಲ್ಲಿ ನೀರು ತುಂಬಿಸಿ ತಂದರು. ಅದರಿಂದ ತಮ್ಮ ಪತ್ನಿ ಸಯ್ಯಿದಃ ಫಾತಿಮರ(ರ) ತಂದೆಯ ಮರ್ದಿತ ಮತ್ತು ಪಾವನ ಮುಖದಲ್ಲಾದ ಗಾಯವನ್ನು ತೊಳೆದರು.

ಗಾಯಗಳಿಂದಾಗಿ ಅನಾಥಮುತ್ತು(ಸ) ತೀರಾ ಬಸವಳಿದಿದ್ದರು. ಆದರೆ ಆ ಸ್ಥಿತಿ ಯಲ್ಲೂ ಅವರು ಎದ್ದು ಕುಳಿತು ನಮಾಝ್ ನಿರ್ವಹಿಸಿದರು. ಮರ್ದಿತಾವಸ್ಥೆಯ ಆ ಸಾಷ್ಟಾಂಗಗಳ ಬಗ್ಗೆ ಸ್ವತಃ ನಮಾಝ್ ಹೆಮ್ಮೆ ಪಟ್ಟುಕೊಂಡಿತು. ಅತ್ತ ಸತ್ಯನಿಷೇಧಿಗಳ ತಂಡದಲ್ಲಿ ವಿಜಯೋತ್ಸವದ ಸಿದ್ಧತೆ ನಡೆಯುತ್ತಿತ್ತು. ಅಬೂಸುಫ್‌ಯಾನ್ ಪ್ರಮುಖ ಸಹಾಬಿಗಳ ಹೆಸರೆತ್ತಿ ಕರೆದರು. ಆದರೆ ಪ್ರವಾದಿವರ್ಯರ(ಸ) ಸಂಜ್ಞೆಯ ಮೇರೆಗೆ ಸಹಾಬಿಗಳಿಂದ ಯಾವುದೇ ಉತ್ತರ ಬರಲಿಲ್ಲ. ತರುವಾಯ ಅಬೂಸುಫ್‌ಯಾನ್ ತನ್ನ ಜನರನ್ನು ಕರೆದು ಹೇಳಿದರು, "ಸಹೋದರರೇ! ಸಂತೋಷಾಚರಿಸಿರಿ. ಈ ಎಲ್ಲ ಜನ ಹತರಾಗಿಬಿಟ್ಟಿದ್ದಾರೆ. ಅವರೆಲ್ಲ ಜೀವಂತವಿರುತ್ತಿದ್ದರೆ ನನ್ನ ಮಾತಿಗೆ ಖಂಡಿತ ಉತ್ತರಿಸುತ್ತಿದ್ದರು."

ಅಬೂಸುಫ್‌ಯಾನ್‌ರ ಈ ವ್ಯಂಗ್ಯಭರಿತ ಮಾತುಗಳನ್ನು ಕೇಳಿದಾಗ ಉಮರ್‌ರಿಂದ(ರ) ತಡೆಯಲಾಗಲಿಲ್ಲ. ಅವರ ಸಹನೆಯ ಕಟ್ಟೆ ಒಡೆಯಿತು. ಅವರೂ ಧ್ವನಿಯೆತ್ತರಿಸಿ ಗರ್ಜಿಸಿದರು,

"ಓ ಅಲ್ಲಾಹನ ವೈರಿಯೇ! ಯಾರೆಲ್ಲರ ಹೆಸರೆತ್ತಿ ನೀನು ಕರೆದಿದ್ದೆಯೋ ಅವರೆಲ್ಲ ಜೀವಂತವಿದ್ದಾರೆ."

ಇದರಿಂದ ಅಬೂಸುಫ್‌ಯಾನ್ ಕೂಡಾ ಆವೇಶಗೊಂಡರು. ಸತ್ಯನಿಷೇಧದ ಆವೇಶವು ವಿಗ್ರಹಗಳಿಗೆ ಜೈಕಾರವಾಗಿ ಹೊರಹೊಮ್ಮಿತು.

ಆಗ ಅಲ್ಲಾಹನ ಸಂದೇಶವಾಹಕರು(ಸ) ಇಂತೆಂದರು, "ಉತ್ತರವಾಗಿ ನೀವೂ 'ಅಲ್ಲಾಹು ಅಲ್‌ಲಾ ವ ಅಜಲ್ಲ್' ಎನ್ನಿರಿ."

ರಬೀಅ್ ಅನ್ಸಾರಿಯವರ ಓರ್ವ ಮಗ ಸಅದ್ ಕೂಡ ಈ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಅವರು ಕಾಣದಿದ್ದಾಗ ಪ್ರವಾದಿವರ್ಯರು(ಸ), "ಸಈದ್ ಬಿನ್ ರಬೀಅ್‌ರ ಶುಭ ಸುದ್ದಿಯನ್ನು ನನಗೊಪ್ಪಿಸುವವರಾರು?" ಎಂದು ಕೇಳಿದರು. ಪ್ರವಾದಿ ವರ್ಯರ(ಸ) ಆದೇಶ ಕೇಳಿದ್ದೇ ತಡ, ಅನ್ಸಾರ್‌ಗಳ ಪೈಕಿ ಓರ್ವರು ತಕ್ಷಣ ಸಅದ್‌ರನ್ನು ಹುಡುಕಲು ಹೊರಟರು. ರಣಾಂಗಣದಲ್ಲಿ ನೂರಾರು ಮೃತದೇಹಗಳು ರಾಶಿ ಬಿದ್ದಿದ್ದುವು. ರಕ್ತವು ಆ ಮರಳುಮಯ ಹಳದಿ ನೆಲವನ್ನು ಸಂಪೂರ್ಣವಾಗಿ ಕೆಂಬಣ್ಣಕ್ಕೆ ತಿರುಗಿಸಿತ್ತು. ಬಹಳಷ್ಟು ಹುಡುಕಾಡಿದ ಬಳಿಕ ಸಈದ್‌ರವರು ಅರೆಜೀವಾವಸ್ಥೆಯಲ್ಲಿ, ಜಡದೇಹ ಗಳೆಡೆಯಲ್ಲಿ ತಮ್ಮ ಕೊನೆಯ ಕ್ಷಣಗಳನ್ನು ಎಣಿಸುತ್ತಿರುವುದು ಕಂಡಿತು. ಅವರನ್ನು ಕಾಣುತ್ತಲೇ ಅನ್ಸಾರಿಯು ಹೇಳಿದರು,

"ಅಲ್ಲಾಹನ ಸಂದೇಶವಾಹಕರು ನಿಮಗೆ ಸಲಾಮ್ ತಿಳಿಸಿದ್ದಾರೆ."

"ನನ್ನ ಸಲಾಮನ್ನೂ ಅವರಿಗೆ ತಿಳಿಸಿರಿ" ಇಬ್ನು ರಬೀಅ್ ಉತ್ತರಿಸುತ್ತಾ ಸ್ವಲ್ಪ ಹೊತ್ತು ಮೌನ ವಹಿಸಿದರು. ಮರಣಾಸನ್ನತೆಯ ಸ್ಥಿತಿಯಲ್ಲಿ ನಿತ್ರಾಣವಾಗುವುದು ಸ್ವಾಭಾವಿಕ. ಬಳಿಕ ತುಟಿ ಕಚ್ಚಿ ನೋವನ್ನು ಸಹಿಸುತ್ತಾ, ಬಹಳ ತ್ರಾಸದಿಂದಲೇ ಅವರು ತಮ್ಮ ಮಾತನ್ನು ಮುಂದುವರಿಸಿದರು, "ನನ್ನ ಸಂಗಡಿಗರು ಮತ್ತು ಮಿತ್ರರಿಗೆ ಪ್ರತ್ಯಪ್ರತ್ಯೇಕವಾಗಿ ಹೀಗೆ ಹೇಳಬೇಕು- ನೋಡಿ, ಅಲ್ಲಾಹನ ಸಂದೇಶವಾಹಕರ ಅನುಸರಣೆಯಲ್ಲಿ ಎಂದೂ ಕೊರತೆ ಯಾಗಬಾರದು. ಪ್ರವಾದಿಯ ಅನುಸರಣೆಯಲ್ಲಿ ಕೊರತೆಯುಂಟಾದರೆ ಮತ್ತೆ ಅಲ್ಲಾಹ್ ನಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಲಾರನು."

ಆವೇಶವುಕ್ಕಿ ಈ ಮಾತುಗಳನ್ನು ಹೇಳಿ ಮುಗಿಸುವಷ್ಟರಲ್ಲಿ ಜೀವನಾಡಿಯ ಕೊನೆಯ ರಕ್ತಬಿಂದು ಕೂಡ ಹರಿದು ಹೋಯಿತು... ಅಲ್ಲಾಹ್ ಮತ್ತು ಅಲ್ಲಾಹನ ಸಂದೇಶ ವಾಹಕರ(ಸ) ಮೇಲೆ ಅತೀವ ಮಮಕಾರವನ್ನು ಹೊಂದಿದ್ದ ಆ ಬಿಸಿ ರಕ್ತ ಕಣವು ಹೊರ ಹರಿದು ತಂಪಾಗುವುದರೊಂದಿಗೆ, ಸತ್ಯದ ಧ್ವಜವಾಹಕರಾದ ಸಈದ್ ಶಾಶ್ವತವಾಗಿ ತಣ್ಣಗಾದರು. ಮುಖವು ಬಿಳುಚಿಕೊಂಡಿತು... ದೇಹದಿಂದ ಆತ್ಮವು ಬೇರ್ಪಟ್ಟಿತು.

ಅನ್ಸಾರಿಯು ಮರಳಿ ಬಂದು ನಡೆದ ಘಟನೆಯನ್ನು ಪ್ರವಾದಿವರ್ಯರ(ಸ) ಮುಂದೆ ಅರುಹಿದರು. ಆಗ ಪ್ರವಾದಿವರ್ಯರೂ(ಸ) ಇಂತೆಂದರು, "ಓ ಅಲ್ಲಾಹ್! ರಬೀಅ್‌ರ ಪುತ್ರ ಸಅದ್‌ರಿಂದ ನೀನು ಸಂತುಷ್ಟನಾಗು."

ಸುದೈವಿ ಮತ್ತು ಸೌಭಾಗ್ಯವಂತ ಸಅದ್ ಹುತಾತ್ಮರಾಗುತ್ತಲೇ ಪ್ರವಾದಿ ವರ್ಯರ(ಸ) ಪ್ರಾರ್ಥನೆಯ ಶಾಶ್ವತ ಪರಿಮಳವನ್ನು ಹೊತ್ತುಕೊಂಡೇ ದೇವಸನ್ನಿಧಿಗೆ ಹೊರಟರು. ಅಲ್ಲಾಹನ ಸಂತುಷ್ಟಿಯು ಅವರ ಪಾಲಿಗೆ ನಿರ್ಧರಿಸಲ್ಪಟ್ಟಿತು.

ಉಹುದ್‌ನ ಬಳಿಕ

ಉಹುದ್ ಬೆಟ್ಟದ ಕಣಿವೆಯ ಈ ದುಃಖಾತಿದುಃಖ ಸುದ್ದಿಯು ಮದೀನಾ ನಗರದಾದ್ಯಂತ ಹರಡಿದಾಗ, ಮನೆಮನೆಗಳಲ್ಲಿ ಕೋಲಾಹಲವೆದ್ದಿತು. ಜನರೆಲ್ಲ ಹತಾಶೆ ಮತ್ತು ನಿರಾಶೆಯಿಂದ ಪರಸ್ಪರ ಮುಖ ನೋಡಹತ್ತಿದರು. ಈ ದುಃಖವಾರ್ತೆಯನ್ನು ಕೇಳಿದ ಮಹಿಳೆಯೋರ್ವರು ಮನೆಯಿಂದ ಹೊರಟು ಉಹುದ್‌ನೆಡೆಗೆ ಧಾವಿಸಿದರು. ದಾರಿಮಧ್ಯೆ ಓರ್ವರು "ನಿನ್ನ ತಂದೆ ಹುತಾತ್ಮರಾದರು" ಎಂದು ಕನಿಕರ ಸೂಚಿಸುತ್ತಾ ನುಡಿದರು. ಆದರೆ ಆ ಮಹಿಳೆ ಮುಂದಕ್ಕೆ ಧಾವಿಸಿದರು. "ನಿನ್ನ ಪತಿ ಶಹೀದಾದರು" ಇನ್ನೋರ್ವ ವ್ಯಕ್ತಿ ಹೇಳಿದ. ಆದರೆ ಆ ಮಹಿಳೆಯ ನಡೆಯ ವೇಗವು ಸ್ವಲ್ಪವೂ ಕಡಿಮೆಯಾಗಲಿಲ್ಲ, ಹೆಜ್ಜೆಯು ಕೊಂಚವೂ ಭಾರವಾಗಲಿಲ್ಲ. ಇನ್ನೂ ಮುಂದಕ್ಕೆ ಹೋದಾಗ, ಮತ್ತೋರ್ವ ವ್ಯಕ್ತಿ ಹೇಳಿದ, "ನಿನ್ನ ಮಗ ಎದೆಗೆ ಈಟಿ ತಾಗಿ ಹುತಾತ್ಮನಾದ."

"ಆದರೆ ಓ ಅಲ್ಲಾಹನ ದಾಸ! ಪ್ರವಾದಿವರ್ಯರ(ಸ) ಅವಸ್ಥೆಯೇನು ಹೇಳು? ನನ್ನ ಕಿವಿಗಳಿಗೆ ಅತಿ ಭಯಾನಕವಾದ ದುಃಖವಾರ್ತೆ ತಲುಪಿತು... ನನ್ನ ಬಾಯಿಗೆ ಮಣ್ಣು ಬೀಳ... ಆದರೆ ಮನಸ್ಸು ಆ ವಾರ್ತೆಯನ್ನು ಸಹಿಸಲೊಲ್ಲದು!" ಮಹಿಳೆ ತಡೆತಡೆದು ದುಗುಡದಿಂದ ಕೇಳಿದರು.

"ಅಲ್ಲಾಹನ ಸಂದೇಶವಾಹಕರು(ಸ) ಕ್ಷೇಮದಿಂದಿದ್ದಾರೆ. ಆದರೆ..." ಹೇಳುವವನು ತನ್ನ ಮಾತಿನ್ನೂ ಪೂರ್ಣಗೊಳಿಸಿರಲಿಲ್ಲ, ಆ ಮಹಿಳೆ ಮಧ್ಯದಲ್ಲೇ ತಡೆದು ಹೇಳಿದರು,

"ನಮ್ಮೊಡೆಯ ಜೀವಂತವಿದ್ದಾರೆಂದ ಮೇಲೆ... ಆಪ್ತರ ಮರಣವಾರ್ತೆಯೇನೂ ದುಃಖದಾಯಕವಲ್ಲ. ಮುಹಮ್ಮದರ್‌ರಸೂಲುಲ್ಲಾಹ್(ಸ) ಇರುವಾಗ ಎಲ್ಲ ಸಂಕಷ್ಟಗಳೂ ದುಃಖಗಳೂ ನಗಣ್ಯ!"

ಉಹುದ್‌ನಿಂದ ಪ್ರವಾದಿವರ್ಯರು(ಸ) ಮರಳುತ್ತಿದ್ದಾರೆಂದು ತಿಳಿದಾಗ ಮದೀನದಾದ್ಯಂತದ ಮುಸ್ಲಿಮರು ಅವರನ್ನು ಸ್ವಾಗತಿಸಲು ನಗರದ ಹೊರವಲಯಕ್ಕೆ ಬಂದು ಸೇರಿದರು. ಹಮ್‌ಝರ(ರ) ಪುಟ್ಟ ಮಗಳು ಫಾತಿಮಾ ಕೂಡ ದಾರಿಯಲ್ಲಿ ಬಂದು ನಿಂತಿದ್ದಳು. ಸ್ವಾಗತದ ಬಳಿಕ ಜನರೆಲ್ಲ ತಂತಮ್ಮ ಮನೆಗಳಿಗೆ ತೆರಳಿದರು. ಆದರೆ ಫಾತಿಮಾಳಿಗೆ ತನ್ನ ತಂದೆ ಹಮ್‌ಝರ ಮುಖ ದರ್ಶನವಾಗಲಿಲ್ಲ. ಏನಾಗಿದೆ? ಅವರೇಕೆ ಬಂದಿಲ್ಲ? ಅವರಂತೂ

ಸೇನೆಯ ಜತೆಯಲ್ಲೇ ಮರಳಬೇಕಿತ್ತಲ್ಲ? ಪುಟ್ಟ ಬಾಲೆಯ ಹೃದಯ ಜೋರಾಗಿ ಬಡಿಯ ತೊಡಗಿತು. ಅವ್ಯಕ್ತವಾದ ಅನಾಥ ಪ್ರಜ್ಞೆಯು ಆ ಬಾಲೆಯ ಮುಖದಲ್ಲಿ ಗೋಚರಿಸ ತೊಡಗಿತು... ಮನಸ್ಸಿನಲ್ಲಿ ತರತರದ ಆಲೋಚನೆಗಳು ಸುಳಿದಾಡ ತೊಡಗಿದುವು... ಆತಂಕ ತುಂಬಿದ ಆಲೋಚನೆಗಳು! ಅದು ಹುಟ್ಟುವುದು ಸ್ವಾಭಾವಿಕವೇ ತಾನೇ? ಯುದ್ಧದಿಂದ ಯಾರಾದರೂ ಮರಳದಿದ್ದರೆ ಆಘಾತದ ಸುದ್ದಿ ತಲಪುತ್ತದೆಂದೇ ಅರ್ಥವಲ್ಲವೇ!

ದಾರಿಯಲ್ಲಿ ಹ. ಸಿದ್ದೀಕ್(ರ) ಸಿಕ್ಕಿದರು. ಬಾಲಕಿ ಫಾತಿಮಾ ಕೇಳಿದಳು,

"ನನ್ನ ತಂದೆ ಎಲ್ಲಿದ್ದಾರೆ?"

ಸಿದ್ದೀಕುಲ್ ಅಕ್ಬರ್(ರ) ಸ್ವಲ್ಪ ತಡೆದು ಹೇಳಿದರು,

"ಹಿಂದಿನಿಂದ ರಸೂಲುಲ್ಲಾಹ್(ಸ) ಬರುತ್ತಿದ್ದಾರೆ. ಅವರಿಂದಲೇ ನಿನ್ನ ತಂದೆಯ ಬಗ್ಗೆ ವಿಚಾರಿಸು."

ಸ್ವಲ್ಪ ಹೊತ್ತಿಗೆ ಅನಾಥಮುತ್ತು(ಸ) ಅಶ್ವಾರೂಢರಾಗಿ ಬರುವುದು ಕಾಣಿಸಿತು. ಹಮ್‌ಝುರ(ರ) ಪುಟ್ಟ ಮಗಳು ಧಾವಿಸಿ ಹೋಗಿ ಪ್ರವಾದಿವರ್ಯರನ್ನು(ಸ) ಸಮೀಪಿಸಿದಳು. ತರುವಾಯ ಕುದುರೆಯ ಲಗಾಮನ್ನು ಹಿಡಿದು ಕೇಳಿದಳು,

"ಯಾ ರಸೂಲುಲ್ಲಾಹ್! ನನ್ನ ತಂದೆ ಎಲ್ಲಿದ್ದಾರೆ?"

ಪ್ರೀತಿಯ ಚಿಕ್ಕಪ್ಪ ಹಮ್‌ಝುರ(ರ) ಹೃದಯ ವಿದ್ರಾವಕ ಹುತಾತ್ಮತೆಯು ಪ್ರವಾದಿ ವರ್ಯರನ್ನು(ಸ) ಅತೀವ ದುಃಖಿತರನ್ನಾಗಿಸಿತ್ತು. ಈಗ ಅನಾಥ ಬಾಲೆಯ ಪ್ರಶ್ನೆಯು ಅವರ ದುಃಖವನ್ನು ಪುನಃ ಕೆದಕಿ ಬಿಟ್ಟಿತು.

ಅವರೆಂದರು,

"ಇನ್ನು ಮುಂದೆ ನಾನೇ ನಿನಗೆ ತಂದೆ..."

ಪ್ರವಾದಿವರ್ಯರ(ಸ) ಈ ವಾಕ್ಯವು ಆ ಬಾಲೆಗೆ ಸಮಾಧಾನವನ್ನೂ ನೀಡಿತು, ಜತೆಯಲ್ಲೇ ಅತ್ಯಂತ ಸೂಕ್ಷ್ಮ ಮತ್ತು ಪ್ರಬುದ್ಧ ರೀತಿಯಲ್ಲಿ ಘಟನೆಯ ವಿವರಣೆಯನ್ನೂ ಕೊಟ್ಟಿತು. ಪ್ರವಾದಿವರ್ಯರು(ಸ) ಸಯ್ಯಿದುಶ್ಶುಹದಾ ಹಮ್‌ಝುರ(ರ) ಹುತಾತ್ಮತೆಯ ವೃತ್ತಾಂತವನ್ನು ವಿವರವಾಗಿ ಹೇಳುತ್ತಿದ್ದರೆ, ಆ ಬಾಲಕಿಯ ಮನಸ್ಸಿನ ಮೇಲೆ ಎಂತಹ ಪರಿಣಾಮ ಬೀರುತ್ತಿತ್ತೆಂದು ಊಹಿಸಲಸಾಧ್ಯ. ಪ್ರವಾದಿವರ್ಯರ(ಸ) ಸಂಕ್ಷಿಪ್ತ ಉತ್ತರ ಕೇಳಿದ ಫಾತಿಮಾ ಬಿಂತು ಹಮ್‌ಝಾ(ರ) ಹೇಳಿದಳು,

"ಈ ಉತ್ತರದಲ್ಲಿ ನೆತ್ತರ ಗಂಧ ಸೂಸುತ್ತಿದೆ!"

☙◆◆◆❧

ಕಂದಕ ಯುದ್ಧ

ಉಹುದ್ ಯುದ್ಧದ ಬಳಿಕ ಕುರೈಶ್ ಸತ್ಯನಿಷೇಧಿಗಳಲ್ಲಿ ಇನ್ನಷ್ಟು ಧೈರ್ಯ ಬಂತು. ಅವರು ಮಕ್ಕಾಗೆ ಮರಳಿ, ಬದ್ರ್ ಯುದ್ಧಕ್ಕೆ ಒಂದು ಹಂತದ ಪ್ರತೀಕಾರವನ್ನು ನಾವು ಪಡೆದೆವು ಎಂದು ಜನರಲ್ಲಿ ಹೇಳಿ ಬೀಗಿದರು. ಹಮ್‌ಝರಂತಹ ಧೀರಕಲಿಯನ್ನು ಮಣ್ಣು ಮುಕ್ಕಿಸಿದೆವು... ಸ್ವಯಂ ಅಬ್ದುಲ್ಲಾರ ಪುತ್ರ ಮುಹಮ್ಮದ್ ನಮ್ಮ ಹಿಡಿತಕ್ಕೆ ಬಂದಿದ್ದರು! ಇಬ್ನು ಕುಮೈಮನ ಕೈಯಿಂದ ಇನ್ನೂ ಜೋರಾದ ಪೆಟ್ಟು ಬೀಳುತ್ತಿದ್ದರೆ ಈ ಇಡೀ ಕತೆ ಅಲ್ಲಿಗೇ ಮುಗಿಯುತ್ತಿತ್ತು. ಮುಹಮ್ಮದ್‌ರ ಅದೃಷ್ಟ ಚೆನ್ನಾಗಿತ್ತು... ಉಳಿದು ಬಿಟ್ಟರು! ಆದರೂ ಕಲ್ಲುಗಳ ಸುರಿಮಳೆಯಿಂದಾಗಿ ಮುಹಮ್ಮದ್‌ರಿಗಾದ ಗಾಯ... ಆದರೆ ಸಹೋದರರೇ! ಅವರ ಸಂಗಾತಿಗಳೂ ಆತ್ಮಾರ್ಪಣೆಯಲ್ಲಿ ಅಪ್ರತಿಮರಾಗಿದ್ದಾರೆ. ನಾವು ಮುಹಮ್ಮದ್‌ರೆಡೆಗೆ ಬಾಣ ಹೂಡಿದರೆ, ಅದನ್ನು ಒಬ್ಬ ಅನ್ಸಾರಿಯು ತನ್ನ ಎದೆಯೊಡ್ಡಿ ತಡೆಯುತ್ತಾನೆ! ಓ ಸಹೋದರರೇ! ಮುಸ್ಲಿಮ್ ಮಹಿಳೆಯರೂ ಈ ಯುದ್ಧದಲ್ಲಿ ಪರಾಕ್ರಮ ಮೆರೆದಿದ್ದರು. ಬಾಣಗಳ ಸುರಿಮಳೆ ಮತ್ತು ಖಡ್ಗಗಳ ಖಣಖಣಗಳ ನಡುವೆ ಆ ಮಹಿಳೆಯರು ನೀರಿನ ಚೀಲ ಬೆನ್ನಿಗೇರಿಸಿ ಬಾಯಾರಿದ ಮುಸ್ಲಿಮ್ ಯೋಧರಿಗೆ ನೀರು ಕುಡಿಸುತ್ತಿದ್ದರು. ಅವರ ಗಾಯಗಳಿಗೆ ಮದ್ದು ಹಚ್ಚುತ್ತಿದ್ದರು. ಇದೇ ರೀತಿಯಲ್ಲಿ ಮತ್ತೊಂದು ಹಂತದ ಯುದ್ಧ ಆಯಿತು. ಆಗಂತೂ ಮುಸ್ಲಿಮರ ಜಂಘಾಬಲವೇ ಉಡುಗಿ ಹೋಗಿತ್ತು. ನಾವು ಕುರೈಶರ ವೈರಿಗಳನ್ನು ಸದೆಬಡಿಯದೆ ಸುಮ್ಮನಿರಲು ಸಾಧ್ಯವೇ! ಇದಂತೂ ನಮ್ಮ ಕುಲ ಗೌರವದ ವಿಷಯವಾಗಿದೆ. ನಾವು ದಣಿದು ಕುಳಿತು ಬಿಟ್ಟರೆ ಜಗತ್ತು ಏನು ಹೇಳೀತು ನಮ್ಮ ಬಗ್ಗೆ!? ಕುಸೈಯವರಂಥ ಸುಪ್ರಸಿದ್ಧ ಸರದಾರನ ಸಂತಾನ ಸೋಲೊಪ್ಪಿತೆಂದಲ್ಲವೇ? ಇದು ನಮ್ಮ ಎಲ್ಲ ಗತ ಇತಿಹಾಸದ ಶೌರ್ಯ ವೃತ್ತಾಂತದ ಮೇಲೆ ತಣ್ಣೀರು ಹೊಯ್ದಂತಾಗಲಾರದೇ? ನಾವು ಹಾಗೆ ಆಗಲು ಬಿಡಲಾರೆವು!

ಕಂದಕ್ ಯುದ್ಧವೂ ಇದರದೇ ಮುಂದುವರಿಕೆಯಾಗಿದೆ. ಪ್ರವಾದಿವರ್ಯರು(ಸ) ಸಲ್ಮಾನುಲ್ ಫಾರ್ಸಿಯವರ(ರ) ಸಲಹೆಯಂತೆ ಕಂದಕ ತೋಡಲು ಆದೇಶಿಸಿದರು. ಸಹಾಬಿಗಳು ಕಂದಕ ತೋಡಲಾರಂಭಿಸಿದರು. ಸ್ವಯಂ ಅನಾಥಮುತ್ತು(ಸ) ಕೂಡ ಅವರೊಡನೆ ಸೇರಿದರು. ಪರಿಪೂರ್ಣ ಮಾರ್ಗದರ್ಶನ ಮತ್ತು ಅನುಗ್ರಹಗಳ ಸಾಮ್ರಾಟ ಓರ್ವ ಕಾರ್ಮಿಕನಂತೆ ನೆಲ ಅಗೆಯುತ್ತಿರುವುದನ್ನು ಭಾನುನೇತ್ರಗಳೆಂದಾದರೂ ಕಂಡಿರಲಿಕ್ಕೆ ಸಾಧ್ಯವೇ? ಎಲ್ಲಿದ್ದಾರೆ ಸೋಫಾ

ಮತ್ತು ರತ್ನಗಂಬಳಿಯಲ್ಲಿ ಪವಡಿಸಿ ಕಾರ್ಮಿಕರ ಕಲ್ಯಾಣದ ಬಗ್ಗೆ ಯೋಜನೆಗಳನ್ನು ರಚಿಸುವವರು? ಎಲ್ಲಿದ್ದಾರೆ ಕಾರ್ಮಿಕರ ಮತ್ತು ರೈತಾಪಿ ಜನರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುವ ಠಕ್ಕ ಹಿತಚಿಂತಕರು? ಆ ಸುಖಭೋಗಾಸ್ತರಿಗೇನು ಗೊತ್ತು ಕಾರ್ಮಿಕರ ದುಃಖ-ವೇದನೆಯೇನೆಂದು? ಕಾರ್ಮಿಕ ಏನು ಮತ್ತು ಕಾರ್ಮಿಕನ ಅವಸ್ಥೆಯೇನು ಎಂಬುದನ್ನು ಕಂದಕ ಯುದ್ಧದ ಈ ಪರಿಶುದ್ಧ ಕಾರ್ಮಿಕನಲ್ಲಿ ಕೇಳಿ ನೋಡಿ...

ಅಂದರೆ, "ಕಾರ್ಮಿಕನ ಬೆವರು ಆರುವುದಕ್ಕೆ ಮುನ್ನ ಅವನ ಮಜೂರಿ ಕೊಟ್ಟು ಬಿಡಿ" ಎಂದ ಅನಂತ ಕೃಪೆಯ ಆಗರವಾದ ಪ್ರವಾದಿವರ್ಯರಲ್ಲಿ(ಸ) ಕೇಳಿ ನೋಡಿ.

ಕಂದಕ ತೋಡುವಾಗ ದೊಡ್ಡದೊಂದು ಕಲ್ಲು ಅಡ್ಡ ಬಂತು. ಸಹಾಬಿಗಳು ಎಷ್ಟೇ ಪ್ರಯತ್ನಿಸಿದರಾದರೂ ಆ ಪಾದೆಗಲ್ಲು ಅಲುಗಾಡಲಿಲ್ಲ. ಸಲ್ಮಾನ್(ರ) ಈ ಸಂಗತಿಯನ್ನು ಪ್ರವಾದಿವರ್ಯರಲ್ಲಿ ಅರುಹಿದರು. ಅನಾಥಮುತ್ತು(ಸ) ಗುದ್ದಲಿಯಿಂದ ಒಂದು ಪೆಟ್ಟು ನೀಡಿದ್ದೇ ತಡ, ಪಾದೆಗಲ್ಲು ಚೂರುಚೂರಾಯಿತು. ಪಾದೆಯಿಂದ ಪ್ರಕಾಶ ಹರಿದಂತಾಯಿತು. ನೋಡಿದವರು ಈಜಿಪ್ಟ್, ಇರಾನ್ ಮತ್ತು ಸಿರಿಯಗಳ ಸರಹದ್ದುಗಳನ್ನು ಸ್ಪಷ್ಟವಾಗಿ ಕಂಡರು. ಇತಿಹಾಸವು ಪುನರಾವರ್ತಿಸಿ ಗತವನ್ನು ವರ್ತಮಾನವನ್ನಾಗಿ ಪರಿವರ್ತಿಸುತ್ತಿದೆ. ಇಲ್ಲಿ ವರ್ತಮಾನದ ದರ್ಪಣದಲ್ಲಿ ಭವಿಷ್ಯ ಗೋಚರಿಸುತ್ತಿದೆ. ಇದು ಪ್ರವಾದಿತ್ವದ ಅನುಗ್ರಹ ವಾಗಿತ್ತು. ಅದರ ರಹಸ್ಯಗಳನ್ನು ಎಲ್ಲರೂ ಕಂಡುಕೊಳ್ಳುವರೆಂದು ಹೇಳಲು ಸಾಧ್ಯವಿಲ್ಲ. ಈ ಅವಸ್ಥೆಯನ್ನು ಪ್ರತಿಯೋರ್ವ ನರಮಾನವನ ಹೃದಯವು ಅನುಭವಿಸುತ್ತದೆನ್ನುವಂತೆಯೂ ಇಲ್ಲ. ಇದು ಪ್ರಕೃತಿದತ್ತ ಕೊಡುಗೆ ಹಾಗೂ ಅಲ್ಲಾಹನ ಅನುಗ್ರಹವಾಗಿದೆ. ಬುದ್ಧಿ ಹೇಳಬಹುದು- ಅದಕ್ಕಾಗಿ ಪುರಾವೆ ತನ್ನಿ... ಮಾನವನ ಪರಿಸ್ಥಿತಿ ಮತ್ತು ಅವಸ್ಥೆಗಳಲ್ಲಿ ಇಂಥ ಅಸಾಮಾನ್ಯ ವ್ಯತ್ಯಾಸ ಆಗಲಾರದು.

ಆದರೆ ನಾವು ಹೇಳುತ್ತೇವೆ- ಇಂಥ 'ಅಂತರ'ಗಳ ಬಗ್ಗೆ ಪುರಾವೆಗಳಿಗೇನೂ ಬರವಿಲ್ಲ... ಒಂದೇ ತೋಟದಲ್ಲಿ ಒಂದೇ ಹೂದಾನಿಯಲ್ಲಿ ಗುಲಾಬಿ ಮತ್ತು ದತ್ತೂರದ ಗಿಡ ಬೆಳೆಯುವುದಿಲ್ಲವೇ? ಇದ್ದಲು ಮತ್ತು ವಜ್ರದ ರಾಸಾಯನಿಕ ಅಂಶಗಳಲ್ಲಿಯೂ ವ್ಯತ್ಯಾಸ ವೆಲ್ಲಿದೆ? ಆದರೆ ಒಂದನ್ನು ಒಲೆಯಲ್ಲಿ ಉರಿಸಲಾಗುತ್ತದೆ, ಇನ್ನೊಂದು ಸಾಮ್ರಾಟರುಗಳ ಕಿರೀಟಕ್ಕೆ ಮೆರುಗು ನೀಡುತ್ತದೆ. ಪ್ರವಾದಿಗಳನ್ನು ಸಾಮಾನ್ಯ ಜನರಿಗೆ ಹೋಲಿಸಿ ನೋಡಬೇಡಿರಿ.

ಕಂದಕ ಯುದ್ಧದಲ್ಲಿಯೂ ಕುರೈಶ್ ಸತ್ಯನಿಷೇಧಿಗಳಿಗೆ ಸೋಲನುಭವಿಸಬೇಕಾಗಿ ಬಂತು. ಅವರ ಕುತಂತ್ರಗಳಾವುವೂ ಕೆಲಸಕ್ಕೆ ಬರಲಿಲ್ಲ. ಉಹುದ್ ಯುದ್ಧದ ಬಳಿಕ ಮುಸ್ಲಿಮರ ಧೈರ್ಯ ಉಡುಗಿ ಹೋಗಿರಬಹುದು ಅಥವಾ ಕನಿಷ್ಠ ದಿಗ್ಭ್ರಾಂತಿ ಮತ್ತು ಭೀತಿಯು ಅವರನ್ನು ಆವರಿಸಿರಬಹುದು ಎಂಬ ಕುರೈಶರ ಭಾವನೆಯು ಸುಳ್ಳಾಯಿತು. ಬದಲಾಗಿ ಮುಸ್ಲಿಮರು ಮೊದಲಿಗಿಂತಲೂ ಹೆಚ್ಚು ಪ್ರಬಲರೂ ಸಂಘಟಿತರೂ ಆಗಿದ್ದಾರೆಂಬುದನ್ನು ಅವರು ಕಂಡರು. ಮಾತ್ರವಲ್ಲ ಅನುಭವಿಸಿಯೂ ನೋಡಿದರು. ಪ್ರತಿಯೊಂದು ಘರ್ಷಣೆಯ ಬಳಿಕ ಇಸ್ಲಾಮಿನ ಅಮಲು ಕಡಿಮೆಯಾಗುವುದಿಲ್ಲ, ಹೆಚ್ಚುತ್ತದೆಂಬುದನ್ನು ಅವರು ಕಂಡುಕೊಂಡರು.

ಹಜ್ಜ್ ಯಾತ್ರೆಗೆ ಹೊರಟ ಮರ್ದಿತರು

ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್- ಇವೆಲ್ಲ ಇಸ್ಲಾಮಿನ ಮೂಲಭೂತ ಹಾಗೂ ಪ್ರಮುಖ ಕಡ್ಡಾಯ ಕರ್ಮಗಳಾಗಿವೆಯೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅವುಗಳ ಪೈಕಿ ಯಾವುದಾದರೂ ಒಂದನ್ನು ನಿರಾಕರಿಸಿದರೂ ವ್ಯಕ್ತಿಯು ಇಸ್ಲಾಮಿನ ಪರಿಧಿಯಿಂದ ಹೊರಹೋಗುತ್ತಾನೆ. ಅವುಗಳನ್ನು ತೊರೆಯುವುದೆಂದರೆ ಅಲ್ಲಾಹನಿಗೆ ಕೃತಘ್ನತೆ ತೋರಿದಂತೆ.* ಈ ಕಡ್ಡಾಯ ಕರ್ತವ್ಯಗಳನ್ನು ನಿರಂತರ ಅವಗಣಿಸುತ್ತಿದ್ದರೆ ಮನದಲ್ಲಿ ಈಮಾನ್‌ನ ಲವಲೇಶವೂ ಉಳಿಯದಂತಹ ಸ್ಥಿತಿ ಸಂಜಾತವಾಗುತ್ತದೆ. ಯಾರ ಮನದಲ್ಲಿ ದೇವಭಯ, ಪ್ರವಾದಿ ಪ್ರೀತಿ ಮತ್ತು ಧರ್ಮನಿಷ್ಠೆಯಿರುವುದೋ ಅವರು ಎಂದೂ ಈ ಕರ್ತವ್ಯಗಳನ್ನು ನಿರ್ಲಕ್ಷಿಸಲಾರರು. ಮರೆವು ಬೇರೆ ವಿಷಯ.

ಹಜ್ಜ್‌ನ ಋತು ಆರಂಭವಾಗುತ್ತಿದ್ದಂತೆಯೇ ಅನಾಥಮುತ್ತು(ಸ) ತಮ್ಮ ಸಾವಿರದ ನಾನ್ನೂರು ಮಂದಿ ಅನುಚರರೊಡಗೂಡಿ ಹಜ್ಜ್ ಕರ್ಮ ನಿರ್ವಹಿಸುವುದಕ್ಕಾಗಿ ಮಕ್ಕಾದೆಡೆಗೆ ಹೊರಟರು. ಆದರೆ ದುರ್ದೈವಿಗಳಾದ ಸತ್ಯನಿಷೇಧಿಗಳು ಸದಾ ಈ ಏಕ ದೇವೋಪಾಸಕರ ವಿರುದ್ಧ ಕತ್ತಿಮಸೆಯುವುದರಲ್ಲೇ ಮಗ್ನರಾಗಿರುತ್ತಿದ್ದರು. ಯಾರ ಮನದಲ್ಲಿ ದೋಷವಿರುತ್ತದೋ ಅಂತಹವರು ಇತರರನ್ನೂ ತಮ್ಮಂತೆಯೇ ಎಂದು ಭಾವಿಸುತ್ತಾರೆ. ಆದ್ದರಿಂದ ಕುರೈಶರು ತಪ್ಪುಗ್ರಹಿಕೆಗೊಳಗಾಗಿ ಪ್ರವಾದಿವರ್ಯರು(ಸ) ಮಕ್ಕಾ ನಗರದ ಮೇಲೆ ಆಕ್ರಮಣ ನಡೆಸಲು ಬಂದಿದ್ದಾರೆಂದು ಭಾವಿಸದಿರಲಿ ಎಂದು ಮುಸ್ಲಿಮರು ಬಲಿ ಒಂಟೆಗಳ ಕೊರಳಿಗೆ ಪಟ್ಟಿ ಕಟ್ಟಿದ್ದರು ಮತ್ತು ಇಹ್ರಾಮ್ (ಹಜ್ಜ್‌ನ ವಸ್ತ್ರ) ಧರಿಸಿದರು. ಹಾಗೆಯೇ ಹಜ್ಜ್‌ಗೆ ಹೊರಡ ಬಯಸುವವರು ತಮ್ಮೊಡನೆ ಒಂದು ಖಡ್ಗದ ಹೊರತು ಬೇರಾವ ಆಯುಧವನ್ನೂ ಇರಿಸ ಬಾರದು ಮತ್ತು ಖಡ್ಗವೂ ಒರೆಯೊಳಗೇ ಇರಬೇಕು ಎಂದು ಜನರಿಗೆ ತಾಕೀತು ಮಾಡಲಾಗಿತ್ತು.

ಇದು ಹಾಜಿಗಳ ಯಾತ್ರಾ ತಂಡವಾಗಿತ್ತು. ಪ್ರವಾದಿವರ್ಯರು(ಸ) ಅದರ ನಾಯಕ ರಾಗಿದ್ದರು. ಉದ್ದೇಶ ಕೇವಲ ಹಜ್ಜ್ ಕರ್ಮ ನಿರ್ವಹಿಸುವುದಾಗಿತ್ತು. ಬಲಿ ಪ್ರಾಣಿಗಳ ದಂಡು... ದೇಹದಲ್ಲಿ ಇಹ್ರಾಮಿನ ಎರಡು ತುಂಡು ಬಿಳಿ ವಸ್ತ್ರ... ನಾಲಗೆಯಲ್ಲಿ

* ನಮಾಝ್‌ಗೆ ಯಾವ ಸ್ಥಿತಿಯಲ್ಲಿಯೂ ವಿನಾಯಿತಿ ಇಲ್ಲ. ಉಪವಾಸಕ್ಕೆ ಅನಾರೋಗ್ಯ ಮತ್ತು ಯಾತ್ರೆಯ ವೇಳೆ ವಿನಾಯಿತಿ ಇದೆಯಾದರೂ ನಂತರ ಅದನ್ನು ಕಝಾ ನಿರ್ವಹಿಸಬೇಕು. ಝಕಾತ್ ಮತ್ತು ಹಜ್ಜ್‌ಗೆ ಆರ್ಥಿಕ ಶಕ್ತಿಯ ಶರ್ತವಿದೆ.

'ಲಬ್ಬೈಕಲ್ಲಾಹುಮ್ಮ ಲಬ್ಬೈಕ್' ಎಂಬ ಮನಮೋಹಕ ಕೀರ್ತನೆ! ಒರೆಯಲ್ಲಿ ಖಡ್ಗ ಪೊಂದಿತ್ತು... ಆ ಕಾಲದಲ್ಲಿ ನೀರಿನ ಪಾತ್ರೆ, ಖರ್ಜೂರ, ಹುರಿದ ಧಾನ್ಯದ ಚೀಲ ಮತ್ತು ನೆರಳಿನಾಶ್ರಯಕ್ಕಾಗಿ ಚದ್ದರ ಹಾಗೂ ಡೇರೆಗಳಂತೆಯೇ ಖಡ್ಗವನ್ನೂ ಕೊಂಡೊಯ್ಯುವುದು ಅಗತ್ಯವಿತ್ತು. ಅರಬರು ತಮ್ಮ ಆಪ್ತ ಬಂಧುಗಳ ನಿಧನಕ್ಕೆ ಸಂತಾಪ ಸೂಚಿಸಲು ಹೋಗುವಾಗಲೂ ಖಡ್ಗ ಜತೆಯಲ್ಲಿರಿಸುವುದು ರೂಢಿ.

ಮದೀನದಿಂದ ಕೆಲವಾರು ಮೈಲುಗಳ ಅಂತರದಲ್ಲಿ ದುಲ್ ಹಲೀಫಾ ಎಂಬ ಪ್ರದೇಶವಿದೆ. ಅಲ್ಲಿ ಈ ಹಾಜಿಗಳ ಕಾರವಾನವು ಡೇರೆ ಹಾಕಿತು. ಹಜ್ಜ್‌ನ ಆರಂಭಿಕ ಕರ್ಮಗಳನ್ನು ಇಲ್ಲಿಂದ ಪ್ರಾರಂಭಿಸಲಾಯಿತು. ಮದೀನಕ್ಕೆ ವಲಸೆ ಹೋದ ಬಳಿಕ ಇದು ಪ್ರವಾದಿವರ್ಯರ(ಸ) ಪ್ರಥಮ ಮಕ್ಕಾ ಯಾತ್ರೆಯಾಗಿತ್ತು. ಮುಂಜಾಗ್ರತಾ ನೆಲೆಯಲ್ಲಿ ಹಾಜಿಗಳ ಪೈಕಿ ಒಬ್ಬ ವ್ಯಕ್ತಿಯನ್ನು ಮುಂದಕ್ಕೆ ಕಳುಹಿಸಲಾಯಿತು- ಕುರೈಶರ ಸ್ಥಿತಿಗತಿ ಮತ್ತು ಇಂಗಿತವನ್ನು ತಿಳಿಯಲು. ದುಲ್ ಹಲೀಫದಿಂದ ಮುಂದುವರಿದು ಏಕ ದೇವೋಪಾಸಕರ ತಂಡವು ಉಫಾನ್‌ಗೆ ತಲುಪುವಷ್ಟರಲ್ಲಿ, "ಕುರೈಶರೆಲ್ಲ ನಿಮ್ಮ ಆಗಮನದ ಸುದ್ದಿ ತಿಳಿದು ಉದ್ರಿಕ್ತರಾಗಿದ್ದಾರೆ" ಎಂಬ ವಾರ್ತೆಯು ದೂತನಿಂದ ಬಂತು.

ಕುರೈಶ್ ಯುವಕರು ರೊಚ್ಚಿಗೆದ್ದಿದ್ದಾರೆ. ಮುಹಮ್ಮದ್ ಮತ್ತವರ ಸಹಚರರಲ್ಲಿ ಮದೀನದಿಂದ ಇಲ್ಲಿಗೆ ಹಜ್ಜ್ ನಿರ್ವಹಿಸಲು ಬರುವಷ್ಟು ಧೈರ್ಯ ಹುಟ್ಟಿತೇ? ಅವರೇನು, ನಮ್ಮ ಸೋದರರಲ್ಲಿ ಮತ್ತು ಪರಿಸರದವರಲ್ಲಿ ಇಸ್ಲಾಮಿನ ಆಸಕ್ತಿ ಹುಟ್ಟಿಸಿ, ಅವರನ್ನೂ ನಮ್ಮಿಂದ ಮತ್ತು ನಮ್ಮ ಪೂರ್ವಿಕ ಧರ್ಮದಿಂದ ದೂರ ಮಾಡಬಯಸುತ್ತಿದ್ದಾರೇನು? ಸರಿ... ಒಂದು ವೇಳೆ ಅಬ್ದುಲ್ಲಾರ ಪುತ್ರ(ಸ) ಮತ್ತು ಅವರ ಸಂಗಡಿಗರು ತೆಪ್ಪಗೆ ಹಜ್ಜ್ ಕರ್ಮ ನಿರ್ವಹಿಸಿ ಹೋಗುತ್ತಾರೆ ಮತ್ತು ಅವರ ಖಡ್ಗಗಳು ಒರೆಯಿಂದ ಹೊರಬರಲಾರವು ಎಂದು ಭಾವಿಸಿದರೂ ಕೂಡಾ ಅವರ ಈ ಮೌನ ಆಗಮನ-ನಿರ್ಗಮನವು ಕಡಿಮೆ ಅಪಾಯಕಾರಿಯೇನು? ಮುಹಮ್ಮದ್(ಸ) ಮಕ್ಕಾದಲ್ಲಿದ್ದಾಗಲೇ ಅವರ ನಮಾಝನ್ನು ನೋಡಿ ನಮ್ಮ ಪ್ರಜ್ಞಾವಂತರೇ ಮುಸ್ಲಿಮರಾಗಿದ್ದರಲ್ಲ! ಅವರ ಮೌನವೂ ಧರ್ಮ ಪ್ರಚಾರ ಕೆಲಸ ಮಾಡುತ್ತದೆ... ನಾವು ಮದೀನದ ಈ ಕಾರವಾನವನ್ನು ಯಾವ ಕಾರಣಕ್ಕೂ ಮಕ್ಕಾ ಪ್ರವೇಶಿಸು ವುದನ್ನು ಸಹಿಸಲಾರೆವು. ಅದಕ್ಕಾಗಿ ಹರಮ್ ಪರಿಸರವನ್ನು ರಕ್ತದಿಂದ ತೋಯಿಸಿದರೂ ಸರಿಯೇ... ತನ್ನ ಮನೆಯಲ್ಲಿ ಇಲಿಯೂ ಹುಲಿಯಾಗಿರುತ್ತದೆ... ನಾವಾದರೋ ಸನ್ಮಾನ್ಯ ಕುರೈಶ್ ಕುಟುಂಬದ ಧೀರ ಸಂತಾನವಾಗಿದ್ದೇವೆ... ನಮ್ಮ ಮನೆಯಲ್ಲೇ ಈ ರೀತಿಯ ಅವಮಾನವನ್ನು ಸಹಿಸುವುದೇ!? ಇದು ಒಂದು ರೀತಿಯಲ್ಲಿ ಸೋಲೇ ಸರಿ! ಮದೀನಕ್ಕೆ ಹೋಗಿಯೂ ಮುಹಮ್ಮದ್(ಸ) ಮತ್ತವರ ಸಂಗಡಿಗರು ಮಕ್ಕಾವನ್ನು ಮರೆತಿಲ್ಲ... ಬದ್ರ್- ಉಹುದ್‌ಗಳಲ್ಲಿ ಝಳಪಿಸಿದ ಅವರ ಖಡ್ಗವು ಮಕ್ಕಾದಲ್ಲಿ ಒರೆಯೊಳಗೇ ಇದ್ದು ಬಿಟ್ಟೀತೆನ್ನಲಾದೀತೇ?

ಮದೀನದ ಮೇಲೆ ಎರಡೆರಡು ಬಾರಿ ದಂಡೆತ್ತಿ ಹೋಗಿದ್ದ ಸತ್ಯನಿಷೇಧಿಗಳು, ಮಕ್ಕಾದಿಂದ ಸ್ವಲ್ಪವೇ ಅಂತರದಲ್ಲಿ ಬೀಡುಬಿಟ್ಟಿರುವ ಮುಸ್ಲಿಮರನ್ನು ಕಂಡು ಹೇಗೆ ತಾನೇ ಸಹಿಸಿಯಾರು? ಅವರಲ್ಲಿ ಪ್ರತೀಕಾರ ಮತ್ತು ದ್ವೇಷದ ಜ್ವಾಲಾಮುಖಿಯೇ ಭುಗಿಲೆದ್ದಿತು. ಸಿದ್ಧತೆ ನಡೆಯಿತು... ಅದು, ಉಕಾಝ್ ಮತ್ತು ಮಿನಾದ ಸಂತೆಗೆ ಹೋಗಲಿಕ್ಕಲ್ಲ, ಬದಲಾಗಿ ಮುಹಮ್ಮದರ್‌ರಸೂಲುಲ್ಲಾಹ್(ಸ) ಮತ್ತು ಅವರ ಅನುಚರರ ವಿರುದ್ಧ ಯುದ್ಧಕ್ಕೆ! ಖಾಲಿದ್ ಬಿನ್ ವಲೀದ್‌ರ ಸೌಭಾಗ್ಯದ ತಾರೆಯು ಅದುವರೆಗೂ ನಿಷೇಧದ ಅಂಧಕಾರದಲ್ಲಿ ಮರೆಯಾಗಿ ಉಳಿದಿತ್ತು. ಅವರ ನೇತೃತ್ವದಲ್ಲಿ ಇನ್ನೂರು ಮಂದಿ ಸಶಸ್ತ್ರ ಯೋಧರ ಪಡೆಯು ಅಸ್ಫಾನ್ ನೆಡೆಗೆ ತೆರಳಿತು. ಆದರೆ ಇದು ಸೈನ್ಯದ ಮುಂಚೂಣಿಯ ತುಕಡಿ ಮಾತ್ರವಾಗಿತ್ತು... ನಿಜವಾದ ಸೇನೆಯು ಅದರ ಹಿಂದೆ ತೀವ್ರ ಸಿದ್ಧತೆಯಲ್ಲಿತ್ತು! ಕುರೈಶ್ ಸತ್ಯನಿಷೇಧಿಗಳ ಮುಖಭಾವದಲ್ಲೇ ರೋಷದ ಕಿಡಿ ಹಾರುತ್ತಿರುವಂತೆ ತೋರುತ್ತಿತ್ತು. ಆದರೆ ಪ್ರಕೃತಿಯು ಮುಗುಳ್ನಗು ಸೂಸುತ್ತಿತ್ತು... ಓ ತಿಳಿಗೇಡಿಗಳೇ! ಸತ್ಯನಿಷೇಧದ ಪರವಾಗಿ ಒರೆಯಿಂದ ಖಡ್ಗವನ್ನು ಹೊರತೆಗೆದು ಧಾವಿಸುತ್ತಿರುವ ಈ ನಿಮ್ಮ ಸೇನಾಧಿಪತಿ ಇದ್ದಾರಲ್ಲ, ಒಂದು ದಿನ ಅವರ ಅದೇ ಖಡ್ಗವು ಇಸ್ಲಾಮಿನ ಪರವಾಗಿ ಝಳಪಿಸಲಿದೆ!

'ಬೈಅತ್ ರಿಝ್ವಾನ್'

ಪ್ರವಾದಿವರ್ಯರಿಗೆ(ಸ) ಕುರೈಶ್ ಸತ್ಯನಿಷೇಧಿಗಳ ಚಲನ ವಲನ ಮತ್ತು ಉದ್ದೇಶಗಳ ಬಗ್ಗೆ ಮಾಹಿತಿ ದೊರೆಯುತ್ತಲಿತ್ತು. ಅತ್ತ ಕುರೈಶರ ಪೈಕಿಯೂ ಒಬ್ಬ ವ್ಯಕ್ತಿ ಇಲ್ಲಿನ ವಿವರ ಗಳನ್ನು ಪಡೆದು ಹೋಗಿ ಅವರಿಗೆ ತಿಳಿಸುತ್ತಿದ್ದನು. ಕುರೈಶರು ಉರ್ವಾ ಬಿನ್ ಮಸ್‌ಊದ್ ಸಕಫಿಯನ್ನು ಪ್ರವಾದಿವರ್ಯರೊಡನೆ(ಸ) ಮಾತುಕತೆ ನಡೆಸಲು ಕಳುಹಿಸಿದರು. ಉರ್ವಾ ಒಪ್ಪಂದದ ಕುರಿತು ಪ್ರವಾದಿವರ್ಯರಲ್ಲಿ(ಸ) ಚರ್ಚಿಸಿದ ಬಳಿಕ ಕುರೈಶ್ ಸತ್ಯನಿಷೇಧಿಗಳೆಡೆಗೆ ಮರಳಿ ಬಂದು ಹೇಳಿದ, "ಸಹೋದರರರೇ! ನಾಯಕರು ಮತ್ತು ಧನಿಕರ ವಿಷಯ ಬಿಡಿ, ನಾನು ನಜ್ಜಾಶಿಯ ರಾಜ ಸಭೆಯನ್ನು ಕಂಡಿದ್ದೇನೆ. ಕೈಸರ್-ಕಿಸ್ರಾರ ದರಬಾರುಗಳ ವೈಭವಗಳನ್ನು ನೋಡಿದ್ದೇನೆ. ಆದರೆ ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ(ಸ) ಮೇಲೆ ಅವರ ಅನುಯಾಯಿಗಳು ಎಷ್ಟು ವಿಶ್ವಾಸ ಮತ್ತು ನಿರ್ಭರತೆಯನ್ನು ಹೊಂದಿದ್ದಾರೋ ಅದನ್ನು ಬೇರೆಲ್ಲಿಯೂ ನಾನು ಕಂಡದ್ದಿಲ್ಲ. ಮುಹಮ್ಮದ್‌ರ(ಸ) ಸರಳ ಸಭೆಯಲ್ಲಿ ಕಾಣುವ ಘನತೆಯೇ ಸಾಟಿಯಿಲ್ಲದ್ದು!"

ಉರ್ವಾನೊಂದಿಗೆ ಚರ್ಚೆ ನಡೆಯಿತಾದರೂ ಯಾವುದೇ ಫಲಿತಾಂಶಕ್ಕೆ ಬರಲಾಗಲಿಲ್ಲ. ಹಾಗಾಗಿ ಪ್ರವಾದಿವರ್ಯರು(ಸ) ಹರಾಶ್(ರ) ಬಿನ್ ಉಮಯ್ಯರನ್ನು ಕುರೈಶರೊಡನೆ ಮಾತನಾಡಲು ಕಳುಹಿಸಿದರು. ಆದರೆ ಕುರೈಶರು ವಾಗ್ದಾನೋಲ್ಲಂಘಕರೂ ಅಲ್ಪಮತಿಗಳೂ ಒಪ್ಪಂದ ಮುರಿಯುವವರೂ ಆಗಿದ್ದರು. ರಾಯಭಾರಿಗಳು ಮತ್ತು ದೂತರನ್ನು ಆ ಅಜ್ಞಾನ ಕಾಲದಲ್ಲಿಯೂ ಗೌರವಿಸಲಾಗುತ್ತಿತ್ತು. ಆದರೆ ಇವರು ಲಾತ್ ಮತ್ತು ಹುಬಲ್‌ಗಳ ಪೂಜಕ ರಾಗಿದ್ದರು. ಜತೆಗೆ ದೇವದ್ರೋಹಿಗಳು, ಅನ್ಯಾಯಿಗಳು, ಅಕ್ರಮಿಗಳು ಮತ್ತು ನೀಚರೂ

ಆಗಿದ್ದರು. ಅವರು ಮೊದಲು ಪ್ರವಾದಿವರ್ಯರ(ಸ) ದೂತನು ಸವಾರನಾಗಿದ್ದ ಒಂಟೆಯನ್ನು ಕೊಂದರು. ಬಳಿಕ ಸ್ವಯಂ ದೂತನನ್ನೇ ಕೊಲ್ಲಲು ಹವಣಿಸಿದರು. ಆದರೆ ಪರಿಸರದ ನಿವಾಸಿಗಳು ಮಧ್ಯ ಪ್ರವೇಶಿಸಿ, ಬಹುತೇಕ ಜಗಳವಾಡಿಯೇ ಅವರನ್ನು ರಕ್ಷಿಸಿದರು. ಅನ್ಯಥಾ ಹರಾಶ್‌ರ(ರ) ಪ್ರಾಣಹರಣವಾಗುವುದರಲ್ಲಿ ಹೆಚ್ಚು ಸಮಯವಿದ್ದಿರಲಿಲ್ಲ.

ಈ ಮಾತುಕತೆಯ ಸರಣಿಯು ಇನ್ನೂ ಮುಗಿದಿರಲಿಲ್ಲ. ಆದರೆ ಕುರೈಶರಿಂದ ಸಹನೆ ವಹಿಸಲಾಗಲಿಲ್ಲ. ಅವರು ಒಂದು ಸೇನಾ ತುಕಡಿಯನ್ನು ಸಂಘಟಿಸಿ, ಮುಸ್ಲಿಮರ ಕಾರವಾನದ ಮೇಲೆ ಆಕ್ರಮಣ ಮಾಡಲು ರವಾನಿಸಿದರು. ಇತ್ತ ಮುಸ್ಲಿಮರೂ ಅಲಕ್ಷ್ಯರಾಗಿದ್ದಿರಲಿಲ್ಲ. ಈ ಕುರೈಶರು ಕಿಡಿಗೇಡಿತನವನ್ನು ತೊರೆಯುವವರಲ್ಲ, ಅವರು ಏನಾದರೂ ನೆಪ ಹುಡುಕಲು ಹವಣಿಸುತ್ತಿರಬಹುದು ಎಂದು ಅವರಿಗೆ ಚೆನ್ನಾಗಿ ತಿಳಿದಿತ್ತು. ಹೀಗಾಗಿ ಮುಸ್ಲಿಮರು ಕುರೈಶ್ ಆಕ್ರಮಣಕೋರರಿಗೆ ಹಲ್ಲೆ ನಡೆಸಲು ಅವಕಾಶವನ್ನೇ ನೀಡಲಿಲ್ಲ. ಕುರೈಶರಾದರೋ ಸಮರ ಸನ್ನದ್ಧರಾಗಿಯೇ ಬಂದಿದ್ದರು. ಆದರೆ ಮುಸ್ಲಿಮರೂ ಖಡ್ಗಕ್ಕೆ ಖಡ್ಗದಿಂದಲೇ ಇದಿರೇಟು ನೀಡಲು ಸಿದ್ಧರಾಗಿರುವುದನ್ನು ಕಂಡು ಹೌಹಾರಿದರು. ಇನ್ನು ನೇರ ಹಣಾಹಣಿ ಪ್ರಾರಂಭ ವಾದರೆ!? ಪರಿಸ್ಥಿತಿ ಈಗ ಅನುಕೂಲವಾಗಿಲ್ಲ... ಹೆಚ್ಚು ಬುದ್ಧಿವಂತಿಕೆ ತೋರಿಸಲು ಹೋದರೆ ಜೀವ ತೆರಬೇಕಾದೀತು... ತೆಪ್ಪಗೆ ತಮ್ಮನ್ನು ಮುಸ್ಲಿಮರಿಗೆ ಒಪ್ಪಿಸಿ ಬಿಡುವುದೇ ಲೇಸು... ಹಾವು ಎಲ್ಲೆಡೆ ಅಡ್ಡಾದಿಡ್ಡಿ ಹರಿಯುತ್ತದೇನೋ ಸರಿ, ಆದರೆ ನೀರಿನಲ್ಲಿ ನೇರವಾಗಿ ತೇಲಿ ಹೋಗಬೇಕಷ್ಟೇ... ಎಲ್ಲ ಕಡೆಯೂ ಕಠೋರತೆಯು ತರವಲ್ಲ... ಯುಕ್ತಾಯುಕ್ತತೆಯ ಅನುಸಾರ ಕೆಲವೆಡೆ ಮೆತ್ತಗಾಗಬೇಕಾಗುತ್ತದೆ...

ಕುರೈಶರ ಈ ಸೇನಾ ತುಕಡಿಯನ್ನು ಬಂಧಿಸಿದ ಸಹಾಬಿಗಳು ಅವರನ್ನು ಪ್ರವಾದಿ ವರ್ಯರ(ಸ) ಸನ್ನಿಧಿಯಲ್ಲಿ ಹಾಜರುಪಡಿಸಿದರು. ಇನ್ನು ನಮಗೆ ಉಳಿಗಾಲವಿಲ್ಲ... ಇಲ್ಲಿಯೇ ನಮ್ಮ ಕತೆ ಮುಗಿಯಬಹುದು... ಆಕ್ರಮಣಕೋರ ಶತ್ರುಸೇನೆಯ ಅಂತಿಮ ಅವಸ್ಥೆ ಅದುವೇ ಆಗಿದೆ ಎಂದೆಲ್ಲ ಭಾವಿಸಿ ಕುರೈಶ್ ಯೋಧರು ಕಂಪಿಸಿದರು. ಆದರೆ ಲೋಕಾನುಗ್ರಹಿಯಾದ ಅನಾಥಮುತ್ತು(ಸ) ಆ ಬಂಧಿತರನ್ನು ಕ್ಷಮಿಸಿದರಲ್ಲದೆ, ಬಿಡುಗಡೆ ಗೊಳಿಸಲು ಆದೇಶಿಸಿದರು.

ಅನಾಥಮುತ್ತು(ಸ) ಮತ್ತು ಅವರ ಅನುಯಾಯಿಗಳು ಹಜ್ಜ್‌ನ ಸಂಕಲ್ಪದೊಂದಿಗೆ ಮಕ್ಕಾಗೆ ಹೊರಟಿದ್ದರಷ್ಟೇ. ಕಿಡಿಗೇಡಿತನ, ಜಗಳ ಮತ್ತು ಯಾವುದೇ ರೀತಿಯ ಘರ್ಷಣೆ ಅವರ ಉದ್ದೇಶವೇ ಆಗಿರಲಿಲ್ಲ. ಅವರಂತೂ ಶಾಂತಿ-ಸಮಾಧಾನವನ್ನು ಬಯಸುತ್ತಿದ್ದರು. ಇದೇ ಕಾರಣ ಕ್ಕಾಗಿ ಅನಾಥಮುತ್ತು(ಸ) ಕುರೈಶರೊಡನೆ ಒಪ್ಪಂದದ ಮಾತುಕತೆಯಾಡಲು ಹ. ಉಸ್ಮಾನ್ ರನ್ನು(ರ) ಕಳುಹಿಸಿದರು. ಸಈದ್‌ರ ಪುತ್ರ ಅಬಾನ್ ಮಕ್ಕಾದಲ್ಲೇ ಇದ್ದರು. ಉಸ್ಮಾನ್‌ರಿಗೆ(ರ) ಅವರೊಡನೆ ನಿಕಟ ಬಾಂಧವ್ಯವಿತ್ತು. ಅವರ ಬೆಂಬಲ ಮತ್ತು ಆಶ್ರಯದಲ್ಲಿ ಉಸ್ಮಾನ್(ರ) ಮಕ್ಕಾ ನಗರಕ್ಕೆ ತಲುಪಿ ಕುರೈಶರಿಗೆ ರಸೂಲುಲ್ಲಾಹ್‌ರ(ಸ) ಸಂದೇಶವನ್ನು ತಿಳಿಸಿದರು.

ಇಸ್ಲಾಮಿನ ರಾಯಭಾರಿಯು ಸ್ಪಷ್ಟವಾದ ಸಂದೇಶವನ್ನು ಕುರೈಶರಿಗೆ ತಲುಪಿಸಿದಾಗ, ಅದಕ್ಕೆ ಉತ್ತರಿಸಬೇಕಾದುದೂ ಅನಿವಾರ್ಯವಾಯಿತು. ಹಾಗಾಗಿ ಸಮಸ್ಯೆ ಏನೆಂದು ಸ್ಪಷ್ಟ

ಪಡಿಸಲು ಅವರೊಂದಿಗೆ ಚರ್ಚೆ ನಡೆಸಬೇಕಿತ್ತು. ಆದರೆ ಕುರೈಶರು ಹಾಗೆ ಮಾಡುವುದನ್ನು ಬಿಟ್ಟು ಉಸ್ಮಾನ್‌ರನ್ನೇ(ರ) ದಿಗ್ಬಂಧನದಲ್ಲಿರಿಸಿದರು... ಈ ಜಗತ್ತು ಎಷ್ಟು ವಿಚಿತ್ರ! ಒಂದೆಡೆ ಒಂದು ಘಟನೆ ಸಂಭವಿಸುತ್ತದೆ. ಅದರ ಸುದ್ದಿಯು ಇನ್ನೊಂದೆಡೆಗೆ ತಲುಪುವಾಗ ಏನಕ್ಕೇನೋ ಆಗಿ ಬಿಟ್ಟಿರುತ್ತದೆ. ಜನರು ಸಂಗತಿಗಳನ್ನು ಸುಂದರವಾಗಿ ವರ್ಣಿಸಲು ತಮ್ಮಲ್ಲಿಂದಲೂ ಕೆಲವು ಪದಗಳನ್ನು ಸೇರಿಸಿಬಿಡುತ್ತಾರೆ. ಸುದ್ದಿಯ ವಾಸ್ತವಿಕತೆ ಮತ್ತು ಘಟನೆಯ ವರ್ಣನೆ ಈ ಅತಿರಿಕ್ತ ಸೇರ್ಪಡೆಗಳು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿತು.

ಉಸ್ಮಾನ್‌ರ(ರ) ದಿಗ್ಬಂಧನದ ಸುದ್ದಿಯೂ ಪ್ರವಾದಿವರ್ಯರಿಗೆ(ಸ) ತಲಪುವಾಗ ಅವರ(ರ) ಹತ್ಯೆಯಾಯಿತೆಂದು ಪರಿವರ್ತನೆಗೊಂಡಿತು. ಈ ಸುದ್ದಿ ಕಿವಿಗೆ ಬೀಳುತ್ತಲೇ ಪ್ರವಾದಿವರ್ಯರು(ಸ) ಉಸ್ಮಾನ್‌ರ(ರ) ಹತ್ಯೆಗೆ ಪ್ರತೀಕಾರ ಪಡೆಯುವುದು ನಮ್ಮ ಕರ್ತವ್ಯ ವಾಗಿದೆ ಎಂದು ಉದ್ಗರಿಸಿದರು. ತರುವಾಯ ಅವರು ಸಹಾಬಿಗಳನ್ನು ಹತ್ತಿರ ಕರೆದರು. ಆ ಒಂದು ಕರೆಗೆ, ದೀಪದ ಸುತ್ತ ಪತಂಗಗಳು ಸೇರುವಂತೆ ಸಹಾಬಿಗಳೆಲ್ಲ ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಬಂದು ನೆರೆದರು. ಉಸ್ಮಾನ್‌ರ(ರ) ಹುತಾತ್ಮತೆಯ ಸುದ್ದಿಯಿಂದ ಪ್ರವಾದಿ ವರ್ಯರು(ಸ) ಬಹಳ ನೊಂದುಕೊಂಡಿದ್ದರು. ಅನಾಥಮುತ್ತು(ಸ) ವಿಶ್ರಮಿಸುತ್ತಿದ್ದ ಅದೇ ಜಾಲಿಮರದ ಕೆಳಗೆ, ಅನುಯಾಯಿಗಳಿಂದ, ದೇವಮಾರ್ಗದಲ್ಲಿ ಹೋರಾಡಲು ಮಾಡು ಇಲ್ಲವೇ ಮಡಿಯೆಂಬ ಬೈಅತ್ ಪಡೆದರು.

ಅದೊಂದು ವಿಚಿತ್ರವಾದ ಸನ್ನಿವೇಶವಾಗಿತ್ತು. ಸುತ್ತಲೂ ಬಟಾ ಬಯಲು... ಅಲ್ಲಲ್ಲಿ ಖರ್ಜೂರದ ಒಣಗಿಡ ಮತ್ತು ಬೆರಳೆಣಿಯ ಜಾಲಿಮರಗಳು ಕಾಣುತ್ತಿದ್ದುವು... ಒಂದು ರೀತಿಯಲ್ಲಿ ಭೀತಿಕಾರಕವಾದ ಪರಿಸರವಾಗಿತ್ತದು. ಆ ಸ್ಥಿತಿಯಲ್ಲಿಯೂ ಅಲ್ಲಾಹನ ಸಂದೇಶ ವಾಹಕರು(ಸ) ತಮ್ಮ ಅನುಯಾಯಿಗಳಿಂದ ಬೈಅತ್ ಪಡೆಯುತ್ತಿದ್ದಾರೆ. ಸ್ತ್ರೀ-ಪುರುಷ ಅನುಯಾಯಿಗಳೆಲ್ಲ ಆವೇಶಭರಿತರಾಗಿ ಹೇಳುತ್ತಿದ್ದಾರೆ, "ಅಲ್ಲಾಹನ ಮಾರ್ಗದಲ್ಲಿ ನಮ್ಮ ಜೀವ ಉಪಯೋಗಕ್ಕೆ ಬಂದರೆ ಅದುವೇ ನಮ್ಮ ಸೌಭಾಗ್ಯ." ಇದು ನಾಲಗೆಯಿಂದ ಹೊರಟ ಮಾತಾಗಿತ್ತು. ಮನಸ್ಸು ಮಾತ್ರ ಹೇಳುತ್ತಿತ್ತು... ಉಸ್ಮಾನ್ ಬಿನ್ ಅಫ್ಫಾನ್‌ರ(ರ) ರಕ್ತದ ಪ್ರತಿಯೊಂದು ಹನಿಯ ಪ್ರತೀಕಾರ ಪಡೆಯುವೆವು... ನಾವು ಪರದೇಶದಲ್ಲಿದ್ದೇವೆಂದೂ ಮದೀನಾ ಇಲ್ಲಿಂದ ಬಹಳ ದೂರವಿದೆಯೆಂದೂ ಈ ಕುರೈಶ್ ಸತ್ಯನಿಷೇಧಿಗಳು ಅಹಂಕಾರ ಪಡುತ್ತಿದ್ದಾರಲ್ಲ... ಅಲ್ಲಾಹನಾಣೆ! ನಾವು ಬದ್ರ್, ಉಹುದ್‌ಗಿಂತಲೂ ಹೆಚ್ಚು ಪರಾಕ್ರಮ ದಿಂದ ಮತ್ತು ಜೀವದ ಹಂಗು ತೊರೆದು ಹೋರಾಡುವೆವು... ಈ ನಮ್ಮ ಜೀವ ಇರುವುದಾದರೂ ಯಾತಕ್ಕೆ!? ದೇವಮಾರ್ಗದಲ್ಲಿ ಉಪಯೋಗವಾಗುವುದೇ ಜೀವನದ ಸೋಪಾನವಾಗಿದೆ...

ಇತಿಹಾಸದಲ್ಲಿ ಈ ಕರಾರು 'ಬೈಅತ್ ರಿಝ್ವಾನ್' ಎಂಬ ಹೆಸರಲ್ಲಿ ಪ್ರಖ್ಯಾತವಾಗಿದೆ. ಆದರೆ ಆ ಬಳಿಕ ಸುದ್ದಿ ತಲಪುವಲ್ಲಿ ಪ್ರಮಾದವಾಗಿದ್ದು, ಉಸ್ಮಾನ್ ಹುತಾತ್ಮರಾಗಿಲ್ಲ. ಬದಲಾಗಿ ಕುರೈಶರ ಬಳಿ ದಿಗ್ಬಂಧನದಲ್ಲಿದ್ದಾರೆ ಎಂದು ತಿಳಿದುಬಂತು.

ಹುದೈಬಿಯಾ ಒಪ್ಪಂದ

ತರುವಾಯ ಕುರೈಶರು ಒಪ್ಪಂದಕ್ಕೆ ಮುಂದಾದರು. ಸುಹೈಲ್ ಬಿನ್ ಅಮ್ರ್ ವಾಕ್ಚಾತುರ್ಯ ಮತ್ತು ಭಾಷಣದಲ್ಲಿ ಎತ್ತಿದ ಕೈ. ಸಾಮಾನ್ಯ ಕುರೈಶರಂತೆ ಅವರಲ್ಲಿ ಮುಂಗೋಪವಿದ್ದಿರಲಿಲ್ಲ. ಸ್ವಭಾವದಲ್ಲಿ ಸ್ಥಿರಚಿತ್ತತೆ ಮತ್ತು ಗಾಂಭೀರ್ಯವಿತ್ತು. ರಾಯಭಾರ ಕಾರ್ಯಕ್ಕೆ ಇಂತಹ ವ್ಯಕ್ತಿಯೇ ಸೂಕ್ತವಾಗಿದ್ದರು. 'ಖತೀಬುಲ್ ಕುರೈಶ್' ಎಂದೇ ಖ್ಯಾತರಾಗಿರುವ ಸುಹೈಲ್ ಮಕ್ಕಾದಿಂದ ಹೊರಟು ಹುದೈಬಿಯಾ ತಲುಪಿದರು. ಮಕ್ಕಾದಿಂದ ಕೆಲವು ಗಜ ದೂರದಲ್ಲಿ ಹುದೈಬಿಯಾ ಎಂಬ ಹೆಸರಿನ ಬಾವಿ ಇದೆ. ಅದರ ಬಳಿ ವಾಸವಾಗಿರುವ ಸಣ್ಣ ಜನವಸತಿಯೂ ಅದೇ ಹೆಸರಿನಿಂದ ಕರೆಯಲ್ಪಡುತ್ತದೆ. ಇದೇ ಸಂಬಂಧವಾಗಿ ಪ್ರಸ್ತುತ ಕರಾರನ್ನೂ ಹುದೈಬಿಯಾ ಒಪ್ಪಂದವೆಂದೇ ಹೇಳಲಾಯಿತು.

ಸುಹೈಲ್ ಹುದೈಬಿಯಾ ತಲುಪಿ, ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದರು. ಒಪ್ಪಂದದ ಶರತ್ತುಗಳ ಬಗ್ಗೆ ಬಹಳ ಹೊತ್ತು ಚರ್ಚೆ ನಡೆಯಿತು. ಸುಹೈಲ್‌ರ ಪ್ರಯತ್ನ ಒಂದೇ ಆಗಿತ್ತು- ಕುರೈಶರ ಮಾತು ನಡೆಯಲಿಲ್ಲವೆಂಬಂತಾಗಬಾರದು... ಎಲ್ಲಾದರೂ ಈ ಮುಸ್ಲಿಮರ ಶರತ್ತನ್ನು ನಾನು ಒತ್ತಡದಿಂದ ಒಪ್ಪಿಬಿಟ್ಟೆನೋ, ಮರಳಿ ಮಕ್ಕಾದ ಸರದಾರರಿಗೆ ಮುಖ ತೋರಿಸಲೂ ನನ್ನಿಂದಾಗದು... ಹಾಗಾಗಬಾರದು! ಜನರು ನನ್ನನ್ನು ನಂಬಿಗಸ್ಥನೆಂದು ಭಾವಿಸಿಯೇ ತಾನೇ ಇಲ್ಲಿಗೆ ಕಳುಹಿಸಿರುವುದು... ಅದೂ ಅಲ್ಲದೆ, ನನ್ನನ್ನಿಲ್ಲಿಗೆ ಕಳುಹಿಸುವಾಗ ಕುರೈಶ್ ಸರದಾರರು, "ನಮ್ಮ ಪೂರ್ವಿಕರ ಮರ್ಯಾದೆಯ ಕಡತಗಳಿಗೆ ಸಹಿ ಹಾಕಲು ನೀವು ಹೋಗುತ್ತಾ ಇದ್ದೀರಾ! ಬಹಳ ದೊಡ್ಡ ಜವಾಬ್ದಾರಿಯ ಕೆಲಸ ಇದು" ಎಂದಿದ್ದರು.

ತುಂಬಾ ಚರ್ಚಿಸಿದ ಬಳಿಕ, ಕೆಲವು ಶರತ್ತುಗಳಿಗೆ ಉಭಯತ್ರರೂ ಒಪ್ಪಿಗೆ ಸೂಚಿಸಿದರು. ಒಪ್ಪಂದದ ಶರತ್ತುಗಳನ್ನು ಬರೆಯಲು ಪ್ರವಾದಿವರ್ಯರು(ಸ) ಅಲಿಯವರಿಗೆ ಹೇಳಿದರು. ಹೀಗೆ ಅಲಿ(ರ) ಒಪ್ಪಂದವನ್ನು ಬರೆಯತೊಡಗಿದರು. ಅದರ ಪ್ರಾರಂಭದಲ್ಲಿ ಹೀಗೆ ಬರೆದರು,

هٰذا ماقاضیٰ علیه محمد رسول اللّٰهِ۔

ಅಂದರೆ, "ಇದು ಅಲ್ಲಾಹನ ಸಂದೇಶವಾಹಕ ಮುಹಮ್ಮದ್(ಸ) ಒಪ್ಪಿದ ಕರಾರು."

ಅದನ್ನೋದಿದ ಕುರೈಶಿ ರಾಯಭಾರಿ ಹೇಳಿದರು, "ಇದೇನು ಬರೆದಿರಿ? ನಮ್ಮ-ನಿಮ್ಮ ಕಲಹ ಇರುವುದೇ ಈ ವಿಷಯದಲ್ಲಿ... ನಾವು ನಿಮ್ಮನ್ನು ಅಲ್ಲಾಹನ ಸಂದೇಶವಾಹಕ ರೆಂದು ಒಪ್ಪುವುದಿಲ್ಲವಲ್ಲ. ಒಂದು ವೇಳೆ ನಾವು ನಿಮ್ಮನ್ನು ಸಂದೇಶ ವಾಹಕರು ಎಂದು ಒಪ್ಪಿದರೆ, ನಮ್ಮ-ನಿಮ್ಮ ಮಧ್ಯೆ ಯಾವುದೇ ತಕರಾರು ಇರಲಿಕ್ಕೇ ಸಾಧ್ಯವಿಲ್ಲ. ಒಪ್ಪಂದದಲ್ಲಿ 'ರಸೂಲುಲ್ಲಾಹ್' ಎಂಬ ಪದವೇ ಬರಬಾರದು. ಮುಹಮ್ಮದ್ ಬಿನ್ ಅಬ್ದುಲ್ಲಾ ಸಾಕು."

ಅದಕ್ಕುತ್ತರವಾಗಿ ಪ್ರವಾದಿವರ್ಯರು(ಸ) ಇಂತೆಂದರು, "ನೀವು ನನ್ನನ್ನು ಸುಳ್ಳಾಗಿಸು ತ್ತೀರಾ. ಆದರೆ ಅಲ್ಲಾಹನಾಣೆ! ನಾನು ದೇವ ಸಂದೇಶವಾಹಕನಾಗಿದ್ದೇನೆಂಬುದು ನಿಜ." ತರುವಾಯ ಅವರು ಅಲಿಯವರೊಡನೆ 'ರಸೂಲ್' ಪದವನ್ನು ತೆಗೆದು ಹಾಕಲು ತಿಳಿಸಿದರು. ಅಲಿಯವರ ಹೃದಯ ಕಂಪಿಸಿತು. "ಯಾ ರಸೂಲುಲ್ಲಾಹ್! ತಮ್ಮ ಆದೇಶಗಳಿಗೆ ನಾನು ಬದ್ಧ. ಆದರೆ ರಸೂಲ್ ಪದವನ್ನು ಈ ವಾಕ್ಯದಿಂದ ಅಳಿಸಲು ನನ್ನಿಂದಾಗದು."

"ಸರಿ ಹಾಗಾದರೆ, ಈ ವಾಕ್ಯದಲ್ಲಿ ನನ್ನ ಹೆಸರೆಲ್ಲಿದೆ ಹೇಳು" ಎಂದು ಅನಾಥಮುತ್ತು ಶಾಂತವಾಗಿ ಕೇಳಿದರು. ಅಲಿ ಮುರ್ತಝಾ ಆ ವಾಕ್ಯದಲ್ಲಿ ಬೆರಳು ತೋರಿಸಿದರು. ಪ್ರವಾದಿವರ್ಯರು(ಸ) 'ರಸೂಲುಲ್ಲಾಹ್' ಪದವನ್ನು ಸ್ವತಃ ಅಳಿಸಿ ಹಾಕಿದರು.

ತರುವಾಯ ಒಪ್ಪಂದದ ಶರತ್ತುಗಳನ್ನು ಬರೆಯಲಾಯಿತು:

1. ಮುಸ್ಲಿಮರು ಈ ಬಾರಿ ಹಜ್ಜ್ ನಿರ್ವಹಿಸದೆ ಮರಳಬೇಕು.

2. ಮುಂದಿನ ವರುಷ ಹಜ್ಜ್‌ಗೆ ಬಂದರೆ, ಮೂರು ದಿನಗಳಿಗಿಂತ ಹೆಚ್ಚು ಹೊತ್ತು ಮಕ್ಕಾದಲ್ಲಿ ಇರಕೂಡದು.

3. ಆಯುಧ ತರಬಾರದು. ಹೆಚ್ಚೆಂದರೆ ಒಂದು ಖಡ್ಗ ಇರಿಸಬಹುದು. ಅದನ್ನೂ ಒರೆಯಿಂದ ಹೊರಗೆಳೆಯಬಾರದು.

4. ಮಕ್ಕಾದಲ್ಲೇ ನೆಲೆಸಿರುವ ಮುಸ್ಲಿಮರನ್ನು ಮದೀನಕ್ಕೆ ಕರೆದುಕೊಂಡು ಹೋಗಬಾರದು. ಅವರಿಗೆ ಮದೀನದಲ್ಲಿ ಆಶ್ರಯ ನೀಡಬಾರದು. ಅದೇ ವೇಳೆ ಮದೀನ ದಿಂದ ಯಾರಾದರೂ ಮಕ್ಕಾಗೆ ಬಂದರೆ ಅವರನ್ನು ಮರಳಿಸಲಾಗದು. ಅಂತಹವರನ್ನು ಮಕ್ಕಾಗೆ ಬರುವುದರಿಂದ ತಡೆಯಲೂ ಬಾರದು.

5. ಮುಂದಿನ ಹತ್ತು ವರ್ಷಗಳ ತನಕ ಉಭಯ ಬಣಗಳ ನಡುವೆ ಯುದ್ಧ ವಿರಾಮವಿರುವುದು ಮತ್ತು ಯಾವುದೇ ಗೋತ್ರಕ್ಕೂ ಈ ಎರಡು ಬಣಗಳ ಪೈಕಿ ಒಂದ ರೊಡನೆ ಮೈತ್ರಿ ಮಾಡಿಕೊಳ್ಳಬಹುದು.

ಒಪ್ಪಂದ ಇನ್ನೂ ಬರೆದು ಮುಗಿದಿರಲಿಲ್ಲ. ಉಭಯತ್ರರು ಸಹಿ ಹಾಕಿಯೂ ಇಲ್ಲ... ಬರವಣಿಗೆ ಇನ್ನೂ ಉಳಿದಿತ್ತು. ಅಷ್ಟರಲ್ಲಿ ಸುಹೈಲ್‌ರ ಮಗ ಅಬೂಜಂದಲ್ ಎದ್ದು-ಬಿದ್ದು ಓಡೋಡಿ ಅಲ್ಲಿಗೆ ತಲುಪಿದರು. ಅವರ ಕಾಲುಗಳಿಗೆ ಬೇಡಿ ಹಾಕಲಾಗಿತ್ತು. ಬರುತ್ತಲೇ ಹೇಳಿದರು,

"ಯಾ ರಸೂಲುಲ್ಲಾಹ್! ಇಸ್ಲಾಮ್ ಸ್ವೀಕರಿಸಿದಕ್ಕಾಗಿ ಸತ್ಯನಿಷೇಧಿಗಳು ನನ್ನನ್ನು ಬಂಧನದಲ್ಲಿರಿಸಿ ತರತರವಾಗಿ ಪೀಡಿಸಿದರು. ಇಲ್ಲಿ ನೋಡಿ, ನನ್ನ ಬೆನ್ನಲ್ಲಿ... ಕೊರಡೆಯೇಟು ಗಳ ಕಲೆಗೆ ಲೆಕ್ಕಮಿತಿಯಿಲ್ಲ... ನನ್ನೆದೆಯ ಮೇಲೆ ಸುಡುವ ಕಲ್ಲುಗಳನ್ನಿಟ್ಟು ಹಿಂಸಿಸಿದರು... ನಾನು ಇಸ್ಲಾಮ್ ತೊರೆದಿದ್ದೇನೆಂದು ಘೋಷಿಸುವವರೆಗೂ ಇದೇ ರೀತಿ ನನ್ನನ್ನು ಸತಾಯಿಸ ಲಾಗುವುದೆಂದರು. ನಾನೆಂದೆ, 'ತಿಳಿಗೇಡಿಗಳೇ... ಮುಹಮ್ಮದರ್‌ರಸೂಲುಲ್ಲಾಹ್‌ರಿಂದ ಮುಖ ತಿರುಗಿಸುವುದಕ್ಕಿಂತ ಮರಣವೇ ಲೇಸು. ಅವರ ಪ್ರೀತಿಗೆ ನನ್ನಂಥ ಸಾವಿರಾರು ಜೀವ ಅರ್ಪಿತ! ನೀವು ನನ್ನ ದೇಹದ ಒಂದೊಂದೇ ಅಂಗವನ್ನು ಕಿತ್ತರೂ ನಾನಂತೂ ಮುಹಮ್ಮದ್‌ರ(ಸ) ಮೇಲಿನ ವಿಶ್ವಾಸವನ್ನು ಘೋಷಿಸುತ್ತಲೇ ಇರುವೆನು.' ಯಾ ರಸೂಲುಲ್ಲಾಹ್! ಬಹಳ ಪ್ರಯಾಸಪಟ್ಟೇ ನಾನು ಈ ಅಕ್ರಮಿಗಳ ಕೈಯಿಂದ ತಪ್ಪಿಸಿ ಬಂದಿದ್ದೇನೆ. ಕಾಲಿನ ಬೇಡಿ ಗಳನ್ನು ಕತ್ತರಿಸಲೂ ನನಗೆ ವ್ಯವಧಾನವಿರಲಿಲ್ಲ. ಇನ್ನು ನಾನು ಮರಳಿ ಹೋಗುವವನಲ್ಲ... ತಮ್ಮ ಬಳಿಯೇ ಇರುವೆನು."

ಅಬೂಜಂದಲ್‌ರ ಹೃದಯಾರ್ದ್ರ ಮಾತು ಕೇಳಿ ಸಹಾಬಿಗಳ ಹೃದಯ ಕಂಪಿಸಿತು. ಸ್ವತಃ ಪ್ರವಾದಿವರ್ಯರೂ(ಸ) ಮರುಕಪಟ್ಟರು.

"ಮುಹಮ್ಮದ್! ಒಪ್ಪಂದದ ಶರತ್ತನ್ನು ಕಾರ್ಯರೂಪಕ್ಕೆ ತರಲು ಇದುವೇ ಮೊದಲ ಅವಕಾಶ. ಶರತ್ತು ಪ್ರಕಾರ ಈ ವ್ಯಕ್ತಿಯನ್ನು (ಅಬೂಜಂದಲ್) ನನ್ನೊಡನೆ ಮಕ್ಕಾಗೆ ಮರಳಿಸಬೇಕು..." ಸುಹೈಲ್ ಉದ್ಗರಿಸಿದರು.

"ಆದರೆ ಒಪ್ಪಂದವಿನ್ನೂ ಬರೆದು ಮುಗಿದಿಲ್ಲವಲ್ಲ!" ಪ್ರವಾದಿವರ್ಯರು(ಸ) ಮರು ನುಡಿದರು.

"ಹಾಗಾದರೆ ನಮಗೆ ಒಪ್ಪಂದವೇ ಬೇಡ" ಸುಹೈಲ್ ನಿರ್ಲಕ್ಷ್ಯದಿಂದ ಉತ್ತರಿಸಿದರು.

"ಸರಿ. ಇವರನ್ನು (ಅಬೂಜಂದಲ್‌ರನ್ನು) ಇಲ್ಲೇ ಇರಲು ಬಿಡಿ..." ಅನಾಥಮುತ್ತು(ಸ) ಹಲವು ಬಾರಿ ಒತ್ತಾಯಿಸಿದರು. ಆದರೆ ಸುಹೈಲ್ ಯಾವ ಕಾರಣಕ್ಕೂ ಒಪ್ಪಲು ಸಿದ್ಧರಿರ ಲಿಲ್ಲ. ಅವರದು ಒಂದೇ ಹಟವಾಗಿತ್ತು, "ಅಬೂಜಂದಲ್‌ನನ್ನು ನಿಮ್ಮ ಬಳಿ ಬಿಡಲಾಗದು!" ಕೊನೆಗೂ ಅಬೂಜಂದಲ್ ಬಂದ ದಾರಿಯಲ್ಲೇ ಮಕ್ಕಾಗೆ ಮರಳಬೇಕಾಯಿತು.

ಅಬೂಜಂದಲ್- ಮರ್ದಿತ ಮತ್ತು ಬಂಧಿತ ಅಬೂಜಂದಲ್‌ರ ಕಣ್ಣಂಚಿನಲ್ಲಿ ಬಿನ್ನಹದ ಜತೆಗೆ ದುಃಖಾಶ್ರುಗಳು ಹನಿಗೂಡಿದ್ದುವು... ಕಂಬನಿಯೇ ಬಾಯ್ದೆರೆದು ಹೇಳಿ ದಂತಾಯಿತು, "ಯಾ ರಸೂಲುಲ್ಲಾಹ್! ದಯವಿಟ್ಟು ನನ್ನನ್ನು ಆ ಅಕ್ರಮಿ ಮರ್ದಕರ ಬಳಿಗೆ ಮರಳಿಸಬೇಡಿರಿ." ಪ್ರವಾದಿವರ್ಯರ(ಸ) ಅನುಕಂಪಭರಿತ ನೋಟವು ಅದಕ್ಕುತ್ತರವಾಗಿ ಅಂದಿತು, "ಅಬೂಜಂದಲ್! ಸಹನೆ ವಹಿಸು. ಈ ಮರ್ದಿತಾವಸ್ಥೆಯು ಹೆಚ್ಚು ಕಾಲವಿರ ಲಾರದು. ಅಲ್ಲಾಹ್ ನಿನ್ನ ಸಂರಕ್ಷಣೆಯನ್ನು ಮಾಡುವನು. ಸಹನೆ ವಹಿಸುವವರಿಗೆ ಮಹತ್ತರ ಸ್ಥಾನವಿದೆ."

ಸಹಾಬಿಗಳೆಲ್ಲರಿಗೂ ಈ ಘಟನೆಯಿಂದ ಅತೀವ ದುಃಖವಾಯಿತು. ಕೆಲವರ ಕಣ್ಣಂಚಿ

ನಲ್ಲಿ ಕಂಬನಿ ಜಿನುಗಿತು. ಅವರಂತೂ ಅಬೂಜಂದಲ್‌ರನ್ನು ತಡೆಯಲು ಬಯಸಿದರು. ಹೋಗಗೊಡಲು ಅವರಿಗೆ ಎಳ್ಳಷ್ಟೂ ಇಷ್ಟವಿರಲಿಲ್ಲ. ಆದರೆ ಪ್ರವಾದಿವರ್ಯರ(ಸ) ಆದೇಶದ ಮುಂದೆ ಯಾರಿಗೂ ಸೊಲ್ಲೆತ್ತುವ ಧೈರ್ಯವಿರಲಿಲ್ಲ. ಸಂಧಾನದ ಶರತ್ತುಗಳ ಬಗ್ಗೆಯೂ ಅವರಿಗೆ ಅಸಮಾಧಾನವಿತ್ತು. ಮೇಲ್ನೋಟಕ್ಕೆ ಮುಸ್ಲಿಮರಿಗೆ ಅದರಲ್ಲಿ ಸೋಲು ಕಾಣುತ್ತಿತ್ತು, ಪ್ರತಿಯೊಂದು ಶರತ್ತೂ ಮಕ್ಕಾದ ಸತ್ಯನಿಷೇಧಿಗಳ ಒಲವಿಗೆ ತಕ್ಕಂತೆಯೇ ತೋರುತ್ತಿತ್ತು. ಆದರೆ ಅಲ್ಲಾಹನು ಅದನ್ನು 'ಸುಸ್ಪಷ್ಟ ವಿಜಯ' ಎಂದು ಸಾರಿದ್ದಾನೆ. ಆ ಸಂದರ್ಭದಲ್ಲಿ ದೇವವಾಣಿ ಅವತೀರ್ಣವಾಯಿತು,

"ನಾವು ನಿಮಗೆ ಸುಸ್ಪಷ್ಟ ವಿಜಯವನ್ನು ದಯಪಾಲಿಸಿದೆವು." **(48:1)**

ಹುದೈಬಿಯಾ ಒಪ್ಪಂದಕ್ಕೆ ಮುಂಚೆ ಸತ್ಯನಿಷೇಧಿಗಳು ಮತ್ತು ಮುಸ್ಲಿಮರು ಪರಸ್ಪರರಿಂದ ದೂರವಿರುತ್ತಿದ್ದರು. ಮಕ್ಕಾದವರು ಮಕ್ಕಾದಲ್ಲೂ ಮದೀನದವರು ಮದೀನದಲ್ಲೂ! ಯುದ್ಧ ಮತ್ತು ಘರ್ಷಣೆಯು ಪರಸ್ಪರರ ನಡುವೆ ಅಪರಿಚಿತತೆಯ ಗೋಡೆಯನ್ನು ನಿರ್ಮಿಸಿಬಿಟ್ಟಿತ್ತು. ಉಭಯತ್ರರಲ್ಲೂ ಜೀವಹಾನಿಯ ಆತಂಕ ಇದ್ದೇ ಇತ್ತು. ಹುದೈಬಿಯಾ ಒಪ್ಪಂದದ ಬಳಿಕ ಮುಸ್ಲಿಮರು ಮತ್ತು ಸತ್ಯನಿಷೇಧಿಗಳು ಪರಸ್ಪರ ಭೇಟಿಯಾಗ ಲಾರಂಭಿಸಿದರು. ಕ್ರಮೇಣ ಉಭಯ ನಗರಗಳಲ್ಲಿ ಸೌಹಾರ್ದ ಸಂಬಂಧ ಬೆಳೆಯಿತು.

ಸಹಾಬಿಗಳ ಸದಾಚಾರ, ಸಚ್ಚಾರಿತ್ರ್ಯ, ಹವ್ಯಾಸ, ವ್ಯವಹಾರ ನೀತಿ, ನೈತಿಕತೆ, ಸತ್ಯಸಂಧತೆ, ಸತ್ಕರ್ಮ ಮತ್ತು ಪರಿಶುದ್ಧತೆಯು ನೋಡನೋಡುತ್ತಿದ್ದಂತೆಯೇ ಸತ್ಯನಿಷೇಧಿಗಳ ಮೇಲೆ ಗಾಢ ಪ್ರಭಾವವನ್ನು ಬೀರತೊಡಗಿತು. ಈ ಪ್ರಭಾವವು ಜನಮನಗಳನ್ನು ಇಸ್ಲಾಮಿನೆಡೆಗೆ ಎಳೆದೆಳೆದು ತಂದಿತು. ಈ ಒಪ್ಪಂದ ಕಾಲದಲ್ಲಿ ಗಣನೀಯ ಸಂಖ್ಯೆಯಲ್ಲಿ ಜನರು ಇಸ್ಲಾಮೀ ಪರಿಧಿಯೊಳಗೆ ಬಂದರು.

ಯಾರ ಖಡ್ಗದಿಂದ ಉಹುದ್‌ನಲ್ಲಿ ಮುಸ್ಲಿಮರಿಗೆ ಅಪಾರವಾದ ನಾಶ ನಷ್ಟವಾಗಿತ್ತೋ, ಆ ಖಾಲಿದ್ ಮತ್ತು ಇಸ್ಲಾಮೀ ಇತಿಹಾಸದ ಪುಟಗಳಲ್ಲಿ ಈಜಿಪ್ಟ್ ವಿಜಯಿ ಎಂದು ಗುರುತಿಸಲ್ಪಟ್ಟ ಅಮ್ರ್ ಬಿನ್ ಆಸ್ ಅದೇ ಕಾಲದಲ್ಲಿ ಇಸ್ಲಾಮಿನ ಅನುಗ್ರಹವನ್ನು ಹೊಂದಿದರು. ನಂತರದ ಖಾಲಿದ್ ಸಿರಿಯವನ್ನು ಜಯಿಸಿ 'ಸೈಫುಲ್ಲಾಹ್'(ಅಲ್ಲಾಹನ ಖಡ್ಗ) ಎಂಬ ಬಿರುದಿಗೆ ಭಾಜನರಾದರು. ಯಾವ ಒಪ್ಪಂದದ ಶರತ್ತುಗಳನ್ನು ಕಂಡು ಉಮರ್‌ರಂತಹ ದೃಢಮನಸ್ಕ ಮತ್ತು ಪರಾಕ್ರಮಿ ವ್ಯಕ್ತಿಯೂ ತನ್ನ ದುಃಖಕ್ಕೀಡಾಗಿದ್ದರೋ ಅದೇ ಹುದೈಬಿಯಾ ಒಪ್ಪಂದವು ನಿಜಾರ್ಥದಲ್ಲಿ ಸುಸ್ಪಷ್ಟ ವಿಜಯವಾಗಿ ಸಾಬೀತುಗೊಂಡಿತು. ಮಕ್ಕಾದಲ್ಲಿ ಇಸ್ಲಾಮಿನ ಕುರಿತ ಚರ್ಚೆಯು ಹಿಂದೆಂದಿಗಿಂತಲೂ ಹೆಚ್ಚು ಆಗತೊಡಗಿತು. ಅದು ವರೆಗೂ ಇಸ್ಲಾಮ್ ಸ್ವೀಕರಿಸದೆ ಇದ್ದಂತಹ ಮಂದಿಯ ಮನಸ್ಸು ಗಳು ನುಡಿಯತೊಡಗಿದುವು- ಮುಹಮ್ಮದ್ ಬಿನ್ ಅಬ್ದುಲ್ಲಾರ ಸಂಗಡಿಗರೇನು ದೇವಚರರೇ! ಭೂಮಿಯಲ್ಲಿ ನಡೆದಾಡುವ ಒಳಿತುಗಳೇ! ಮಾತುಗಳಲ್ಲೇನು ಸಭ್ಯತೆ! ಈ ಜನ ಸತ್ಯಸಂಧರು, ಪ್ರಾಮಾಣಿಕರು,

ವಚನ ಪಾಲಕರು, ಸಚ್ಚಾರಿತ್ರ್ಯವಂತರು, ತ್ಯಾಗ-ಬಲಿದಾನ ಮತ್ತು ಪ್ರೀತಿಯ ಪುತ್ಥಳಿಗಳು! ಯಾವ ಧರ್ಮವು ಎಂತೆಂತಹ ಕೆಟ್ಟ ಜನರನ್ನು ಸಜ್ಜನರನ್ನಾಗಿ ಮಾಡಿತ್ತೋ ಆ ಧರ್ಮವು ಖಂಡಿತವಾಗಿಯೂ ಸತ್ಯಧರ್ಮವಾಗಿರಲೇ ಬೇಕು...

ಮನದಾಳದ ಮಾತು ನಾಲಗೆಯ ವರೆಗೆ ಬರಲು ಹೆಚ್ಚು ಸಮಯ ತಗಲಲಿಲ್ಲ... ಜನರು ಪರಸ್ಪರ ಚರ್ಚಿಸತೊಡಗಿದರು. ದಾರುನ್ನದ್ವದಲ್ಲಿಯೂ ಇದೇ ರೀತಿಯ ಚರ್ಚೆ ಆಗತೊಡಗಿತು. ಸತ್ಯಸಂಧತೆಯು ಪುಷ್ಪ ಪರಿಮಳದಂತೆ ವಾತಾವರಣದಲ್ಲಿಡೀ ಹರಡಿತು. ಅದನ್ನು ತಡೆಯಲು ಯಾರಿಂದ ತಾನೇ ಸಾಧ್ಯವಿತ್ತು!? ಹೂವನ್ನು ದ್ವೇಷಿಸಬಲ್ಲ ಎಂತಹ ದುಷ್ಟ ವ್ಯಕ್ತಿಯೂ ಅದರ ಸುವಾಸೆಯನ್ನು ಆಘ್ರಾಣಿಸದೆ ಅದರಿಂದ ಆನಂದಪಡದೇ ಇರಲಾರ.

ಖೈಬರ್ ಯುದ್ಧ

ಮದೀನದಲ್ಲಿ ಎರಡು ಇಸ್ಲಾಮ್ ವಿರೋಧಿ ಗುಂಪುಗಳಿದ್ದುವು. ಯಹೂದಿಗಳು ಮತ್ತು ಮುನಾಫಿಕರು. ಈ ಎರಡೂ ಗುಂಪುಗಳು ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬಿಗಳ ವಿರುದ್ಧ ತರತರವಾಗಿ ಸಂಚು ನಡೆಸುತ್ತಿದ್ದರು. ಈ ಸಂಚು ಕೂಡ ಬಹಳ ಭೀಕರವಾಗಿರುತ್ತಿತ್ತು... ಆ ಜನರು ಮುಸ್ಲಿಮರ ಮಧ್ಯೆ ಒಡಕು ಹುಟ್ಟಿಸಲು ಪ್ರಯತ್ನಿಸು ತ್ತಿದ್ದರು... ಪ್ರವಾದಿವರ್ಯರನ್ನು(ಸ) ಭೇಟಿಯಾಗಿ ಇಸ್ಲಾಮಿನ ಬಗ್ಗೆ ಅರಿಯಲೆಂದು ಅರೇಬಿಯದ ಗಡಿನಾಡುಗಳಿಂದ ಕೆಲವು ಗೋತ್ರಗಳ ಜನರು ಬರುತ್ತಿದ್ದರು. ಅವರನ್ನು ತರತರವಾಗಿ ಅಡ್ಡದಾರಿಗೆ ಎಳೆಯುತ್ತಿದ್ದರು... ಮಕ್ಕಾದ ಸತ್ಯನಿಷೇಧಿಗಳು ಮುಸ್ಲಿಮರ ವಿರುದ್ಧ ಹೂಡಿದ ಎಲ್ಲ ಯುದ್ಧಗಳಲ್ಲಿ ಈ ಎರಡು ಗುಂಪುಗಳ ಸಲಹೆಗಳು ಸೇರಿದ್ದುವು. ಯಹೂದಿ ಯರಂತೂ ಮುಸ್ಲಿಮರ ಹಿತ ಶತ್ರುಗಳಾಗಿ ಮಾರ್ಪಟ್ಟಿದ್ದರು. ಪ್ರವಾದಿವರ್ಯರ(ಸ) ದಯೆ-ಕ್ಷಮೆಯ ಗುಣದಿಂದ ಯಹೂದಿಯರು ಸದಾ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಿದ್ದರು. ಈ ಯಹೂದಿಯರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಔದಾರ್ಯದ ಋಣಭಾರದಿಂದ ತಲೆಯೇ ಎತ್ತುತ್ತಿರಲಿಲ್ಲ ಮತ್ತು ಪ್ರವಾದಿವರ್ಯರ(ಸ) ಸದ್ವರ್ತನೆಯನ್ನು ಗೌರವಿಸುತ್ತಿದ್ದರು. ಆದರೆ ಅವರು ಯಹೂದಿಯರಾಗಿದ್ದಾರಷ್ಟೇ. ಪ್ರವಾದಿ ಈಸಾರವರು(ಅ) ಹಾವಿನ ಮರಿಗಳಿಗೆ ಹೋಲಿಸಿದ್ದು ಅವರನ್ನೇ ತಾನೇ. ಉಪಕಾರಗೇಡಿತನ ಅವರ ಹುಟ್ಟುಗುಣವಾಗಿತ್ತು... ಇಸ್ಲಾಮ್ ವಿರೋಧ ಅವರ ಚಾರಿತ್ರ್ಯವಾಗಿತ್ತು.

ಕ್ರಮೇಣ ಯಹೂದಿಯರ ಸಂಚು, ದುರುದ್ದೇಶ ಮತ್ತು ಅವರ ಗೂಢ ಯೋಜನೆ ಗಳೆಲ್ಲವೂ ಒಂದೊಂದಾಗಿ ಬಹಿರಂಗವಾಗತೊಡಗಿದುವು. ಹೀಗೆ ಅವರ ಯಾವ ಮಾತೂ ರಹಸ್ಯವಾಗಿ ಉಳಿಯಲಿಲ್ಲ. ಅವರ ವರ್ತನೆಯು ಮೊದಲಿನಿಂದಲೇ ಹಗೆತನದಿಂದ ಕೂಡಿತ್ತು. ಮಕ್ಕಾದ ಸತ್ಯನಿಷೇಧಿಗಳ ಆಕ್ರಮಣ ಭೀತಿಯಾದರೋ ಬದ್ರ್ ಮತ್ತು ಉಹುದ್ ಯುದ್ಧದ ವರೆಗೆ ಮಾತ್ರವಿತ್ತು. ಆ ವಿಪತ್ತು ದೂರದಿಂದಲೇ ಬಹುತೇಕ ನಿವಾರಣೆಗೊಂಡಿತ್ತು. ಇನ್ನು ಎಂದಾದರೂ ಕುರೈಶರು ಮದೀನದ ಮೇಲೆ ಆಕ್ರಮಣ ಮಾಡುತ್ತಿದ್ದರೆ, ಯಹೂದಿಯರು ಅವರಿಗೆ ಖಂಡಿತ ಸಹಕಾರ ನೀಡುತ್ತಿದ್ದರು. ಮುಸ್ಲಿಮರ ವಿರುದ್ಧ ಖಡ್ಗ ಹಿಡಿದು ಧಾವಿಸುತ್ತಿದ್ದರು. ಅವರಿಗೆ ಮುಸ್ಲಿಮರ ಪ್ರಗತಿ ನೋಡುವಾಗ ಒಳಗೊಳಗೇ ಅಸೂಯೆಯ

ದಾವಾಗ್ನಿ ಕುದಿಯುತ್ತಿತ್ತು. ಅವರು ಅದರಲ್ಲೇ ಬೇಯುತ್ತಿದ್ದರು.

ಇಂತಹ ಹಿತಶತ್ರುಗಳನ್ನು ತಮ್ಮ ಹತ್ತಿರ ಇರಗೊಡದಿರುವುದೇ ಯುಕ್ತಿ ಮತ್ತು ನ್ಯಾಯದ ಬೇಡಿಕೆಯಾಗಿದೆ. ಈ ಬೆಂಕಿಯುಂಡೆಗಳನ್ನು ಇನ್ನು ಬಗಲಲ್ಲಿರಿಸುವುದು ಅಪಾಯಕಾರಿಯೆಂದು ಸಾಬೀತಾಯಿತು. ಹಾಗಾಗಿ ಅಲ್ಲಾಹನ ಅಣತಿಯ ಮೇರೆಗೆ ಪ್ರವಾದಿ ವರ್ಯರು(ಸ) ಬನೂ ನಝೀರ್ ಎಂಬ ಯಹೂದಿ ಗೋತ್ರವನ್ನು ನಾಡಿನಿಂದ ಹೊರ ಗಟ್ಟಿದರು. ಆ ಜನರು ಖೈಬರ್ ಎಂಬಲ್ಲಿ ಆಶ್ರಯ ಪಡೆದುಕೊಂಡರು. ಈ ಗಡೀಪಾರು ಶಿಕ್ಷೆಯು ಆ ಸಂಚುಕೋರರ ಕುಕೃತ್ಯಗಳಿಗೆ ಬಹಳ ಕಡಿಮೆಯೇ ಆಗಿತ್ತು. ಆದರೆ ಯಹೂದಿಯರು ಯಾರ ಉಪಕಾರವನ್ನು ಗಣಿಸುತ್ತಿದ್ದರು? ಅವರ ಹೃದಯಗಳಲ್ಲಿ ಪಾಪ, ಕಾಪಟ್ಯ ಮತ್ತು ಲೋಭವೇ ತುಂಬಿ ಹೋಗಿತ್ತು. ನ್ಯಾಯ ಮತ್ತು ಮಾನವೀಯತೆಯು ಕಿಂಚಿತ್ತೂ ಅವರ ಹೃದಯದಲ್ಲಿ ಉಳಿದಿರಲಿಲ್ಲ.

ಖೈಬರ್ ತಲುಪಿದ ಬಳಿಕವೂ ಯಹೂದಿಯರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಅವರ ಮನದಲ್ಲಿದ್ದ ಇಸ್ಲಾಮ್ ದ್ವೇಷವು ಅಲ್ಲಿಗೆ ಹೋದ ಬಳಿಕ ಇನ್ನೂ ಹೆಚ್ಚಾಯಿತು. ಅವರ ನಿಯೋಗಗಳು ಮತ್ತು ಉದ್ರೇಕಕಾರಿ ಭಾಷಣಗಾರರು ಅರೇಬಿಯದ ವಿವಿಧೆಡೆಗಳಿಗೆ ತೆರಳಿ, ಗಲ್ಲಿ-ಕೇರಿಗಳಲ್ಲಿ ಸಂಚರಿಸಿ ಇಸ್ಲಾಮಿನ ವಿರುದ್ಧ ಜನರನ್ನು ಉದ್ರೇಕಿಸಲು ಪ್ರಯತ್ನಿಸು ತ್ತಿದ್ದರು. ಅಹ್‌ಝಾಬ್ ಯುದ್ಧವು ಯಹೂದಿಯರ ಇದೇ ಸಂಚಿನ ಫಲಶ್ರುತಿಯಾಗಿತ್ತು.

ಯಹೂದಿಯರು ಸಂಚು ಹೂಡುವುದರಲ್ಲಿ ಮತ್ತು ಮಾತುಗಾರಿಕೆಯಲ್ಲಿ ಎತ್ತಿದ ಕೈಯಾಗಿದ್ದರು. ಅವರ ಸಂಚುಗಳು ನಿಗೂಢವೂ ಸೂಕ್ಷ್ಮವೂ ಆಗಿರುತ್ತಿತ್ತು. ಒಂದು ಉದಾಹರಣೆ ಮತ್ತು ಒಂದು ದೃಶ್ಯ...

ಕಡು ಬೇಸಿಗೆ ಕಾಲ. ಆಕಾಶದಿಂದ ಬಿಸಿಲ ರೂಪದಲ್ಲಿ ಬೆಂಕಿಯ ಮಳೆ ಸುರಿಯುತ್ತಿದೆ. ಗಾಳಿಯಲ್ಲಿ ಬೆಂಕಿಯ ಕಿಡಿಗಳಿವೆಯೋ ಎಂಬಷ್ಟು ತಾಪ... ಒಂದರ್ಥದಲ್ಲಿ ಸೂರ್ಯ ತಲೆಯ ಮೇಲೆ ಒಂದು ಗೇಣಿನಷ್ಟು ಹತ್ತಿರವಿರುವಂತಿತ್ತು. ಮರಳ ಕಣಗಳು ಸೂರ್ಯನ ಶಾಖ ಪಡೆದು ಕೆಂಡದ ರೂಪ ತಾಳುತ್ತಿವೆ ಮತ್ತು ಹರಳು ಕಲ್ಲುಗಳೆಲ್ಲ ಕಿಡಿಕಾರುವಂತಿದೆ. ಖರ್ಜೂರದ ಮರಗಳು, ಹಲವು ವರ್ಷಗಳಿಂದ ನೀರೇ ಕಾಣದಂತೆ ಒಣಗಿಬಿಟ್ಟಿವೆ.

ಇಂತಹ ಸ್ಥಿತಿಯಲ್ಲಿ ಓರ್ವ ಯಹೂದಿಯು ಖೈಬರ್‌ನಿಂದ ಹೊರಟು ಗತ್‌ಫಾನ್ ಗೋತ್ರದ ಒಂದು ಗ್ರಾಮೀಣ ಪ್ರದೇಶಕ್ಕೆ ತಲುಪುತ್ತಾನೆ. ಈ ಯಹೂದಿ- ಮೋಸ, ಕಪಟದ ಮೂರ್ತರೂಪ ಮತ್ತು ಒಳಸಂಚು, ಕುಟಿಲತೆಯ ಪುತ್ಥಳಿಯಾಗಿದ್ದ! ಮಧ್ಯಮ ಎತ್ತರದ ಈತನ ನೀಳಗಡ್ಡ ಮಾತ್ರ ನಾಭಿಗಿಂತಲೂ ಕೆಳಗಿರುವಷ್ಟಿತ್ತು... ತಲೆಗೂದಲು ಕೆದರಿತ್ತು... ಧರಿಸಿದ್ದ ಜುಬ್ಬದ ಕೈ ಮಾತ್ರ ಅಗತ್ಯಕ್ಕಿಂತ ದೊಗಳೆಯೆಂಬಂತೆ ಕಾಣುತ್ತಿತ್ತು. ಹಣೆಯಲ್ಲಿನ ನೆರಿಗೆಗಳು ಯಾವುದೋ ಬಟ್ಟೆಯನ್ನು ನೀರಲ್ಲದ್ದಿ ಝಾಡಿಸದೆ ಹಾಗೆಯೇ ಒಣಗಿಸಿಟ್ಟಂತೆ ತೋರುತ್ತಿತ್ತು. ಹಲ್ಲುಗಳೆಲ್ಲ ಹಳದಿ ಬಣ್ಣಕ್ಕೆ ತಿರುಗಿದ್ದುವು... ಕಣ್ಣುಗಳಲ್ಲಿ ಹೊಳಪಿತ್ತು. ಆದರೆ ಕಾಪಟ್ಯದ ಹೊಳಪು!

ಖರ್ಜೂರ ಮರಗಳೆಡೆಯಲ್ಲಿ ಗ್ರಾಮೀಣ ಅರಬರ ಹುಲ್ಲು ಛಾವಣಿಯ ಗುಡಿಸಲು ಗಳಿದ್ದುವು. ಇಡೀ ಹಳ್ಳಿಗೆ ಒಂದೇ ಬಾವಿಯಿತ್ತು. ಅದರ ಸುತ್ತಲೂ ಮಹಿಳೆಯರು, ಪುರುಷರು ಮತ್ತು ಮಕ್ಕಳು ಗುಂಪು ಸೇರಿದ್ದರು... ಬಾವಿಯಿಂದ ನೀರು ಸೇದಲಾಗುತ್ತಿತ್ತು... ನೀರು ಎಲ್ಲ ಸಮಯ ಮತ್ತು ಕಾಲದಲ್ಲೂ ಅಗತ್ಯವೇ... ಆದರೆ ಬೇಸಿಗೆ ಕಾಲದಲ್ಲಿ ಒಂದೊಂದು ನೀರಹನಿಯೂ ಅಮೃತಕ್ಕೆ ಸಮಾನವಾಗಿ ಮಾರ್ಪಡುತ್ತದೆ... ಅರೇಬಿಯಾದ ಮರುಭೂಮಿ ಯಲ್ಲಿ ಬಾಯಾರಿದ ಯಾತ್ರಿಕರು ವಜ್ರ ವೈಢೂರ್ಯಗಳ ಥೈಲಿಯನ್ನಲ್ಲ, ಬದಲಾಗಿ ಒಂದು ಗುಟುಕು ನೀರನ್ನು ಬಯಸುತ್ತಾರೆ. ಬಾಯಾರಿಕೆಯ ಮರಣವು ಅತಿ ವೇದನಾಜನಕ ಮರಣವಾಗಿರುತ್ತದೆ.

ಆ ಯಹೂದಿಯು ಏದುಸಿರು ಬಿಡುತ್ತಿರುವ ಒಂಟೆಯನ್ನು ಒಂದೆಡೆ ಕೂರಿಸಿದ. ಹಳ್ಳಿಯ ಜನ ಅವನ ಸುತ್ತಲೂ ನೆರೆದರು. ಈ ಕಡು ಬೇಸಿಗೆ ಕಾಲದ ಈ ಮಟಮಟ ಮಧ್ಯಾಹ್ನದ ಹೊತ್ತಿನಲ್ಲಿ ಓರ್ವ ಅಪರಿಚಿತ ವ್ಯಕ್ತಿ ಆಗಮಿಸುವುದೆಂದರೆ, ಅದು ಕಡಿಮೆ ಆಶ್ಚರ್ಯದ ವಿಷಯವೇನಲ್ಲ. ಅತಿಥಿ ಸತ್ಕಾರಿಗಳಾದ ಅರಬರು ಆಗಂತುಕನನ್ನು ಸ್ವಾಗತಿ ಸಿದರು. ಅವನನ್ನು ತಮ್ಮ ಗುಡಾರದೊಳಗೆ ಕರೆದೊಯ್ದರು. ಖರ್ಜೂರ, ಗಿಣ್ಣು ಮತ್ತು ಹುರಿದ ಧಾನ್ಯವನ್ನು ಅವನ ಮುಂದಿರಿಸಿದರು... ಜತೆಗೆ ಆಡಿನ ಹಾಲನ್ನೂ ಕೂಡ! ಯಹೂದಿಯು ನೀರು ಕೇಳಿದ. ತಕ್ಷಣವೇ ನೀರು ಹಾಜರ್! ಆತ ಇಡೀ ತಂಬಿಗೆ ನೀರನ್ನು ಗಟಗಟನೆ ಕುಡಿದ. ಬಳಿಕ ನೀರಿನಿಂದ ತೋಯ್ದಿದ್ದ ತನ್ನ ನೀಳಗಡ್ಡವನ್ನು ಹಿಂಡಿದ. ಬಾಯಾರಿದ ವ್ಯಕ್ತಿ ಹೆಚ್ಚಿನಂಶ ಗಾಬರಿಗೊಂಡಿರುತ್ತಾನೆ.

"ಯಾ ಶೈಖ್! ಈ ಕಡೆ ಬಂದದ್ದೇನು? ಮತ್ತೆ... ನೀವು ಸಂಗಡಿಗರಿಲ್ಲದೆ, ಸಹ ಯಾತ್ರಿಕರಿಲ್ಲದೆ, ಯಾತ್ರಾ ತಂಡವಿಲ್ಲದೆ ಒಬ್ಬಂಟಿಯಾಗಿಯೇ ಪ್ರಯಾಣಿಸಲು ಕಾರಣವೇನು? ಅದೂ ಅಲ್ಲದೇ..." ಗ್ರಾಮದ ಓರ್ವ ವೃದ್ಧ ವಿಚಾರಿಸತೊಡಗಿ, ಅವರ ಮಾತು ಪೂರ್ತಿ ಗೊಳಿಸುವುದಕ್ಕೆ ಮುಂಚೆಯೇ ಇನ್ನೋರ್ವ ಮಧ್ಯವಯಸ್ಕ ವ್ಯಕ್ತಿ ಹೇಳಿದ,

"ಇತ್ತ ಕಡೆಯ ಅರಣ್ಯವು ಬಹಳ ಅಪಾಯಕಾರಿಯಾಗಿದೆ. ನಿತ್ಯವೂ ವ್ಯಾಪಾರಿ ತಂಡಗಳನ್ನು ಆ ಹಾದಿಯಲ್ಲಿ ದೋಚಲಾಗುತ್ತದೆ... ಒಬ್ಬಂಟಿಯಾಗಿ ಪ್ರಯಾಣ ಹೊರಡುವುದು ಬಹುತೇಕ ಅಸಾಧ್ಯದ ಮಾತು! ನೀವು ಬಹಳ ಧೈರ್ಯದಿಂದ... ಆದರೆ ಕ್ಷಮಿಸಬೇಕು, ಒಬ್ಬಂಟಿಯಾಗಿ ಪ್ರಯಾಣಿಸಿದ್ದು ಬಹಳ ತಪ್ಪಾಯಿತು ಎಂದೇ ಅನ್ನಿಸುತ್ತದೆ..."

"ಆದರೆ ಮರಣಕ್ಕಿಂತಲೂ ಭೀಕರವಾದ ಅಪಾಯ ಕಣ್ಣ ಮುಂದಿರುವಾಗ ಮಾನವನು ಏನು ತಾನೇ ಮಾಡಿಯಾನು?" ಯಹೂದಿ ಈಗ ಬಾಯಿ ತೆರೆದ.

"ನಮಗೆ ಅರ್ಥವಾಗಲಿಲ್ಲ. ನಿಮ್ಮ ಮಾತುಗಳು ಗಾಬರಿಯಿಂದ ಕೂಡಿರುವಂತಿದೆ. ಇನ್ನು ಸ್ವಲ್ಪ ನೀರು ಕುಡಿಯಿರಿ. ನೀವು ಈ ಸುಡು ಬಿಸಿಲಲ್ಲಿ ಬಹಳ ದೂರದಿಂದ ಬಂದಿದ್ದೀರಿ... ಮರಣಕ್ಕಿಂತ ಭೀಕರ ವಸ್ತು ಬೇರೇನಿದ್ದೀತು? ಆಶ್ಚರ್ಯ! ಹಣೆಯ ಮೇಲಿನ ಬೆವರನ್ನಾದರೂ

ಒರೆಸಿರಿ... ಗಡ್ಡಕ್ಕೆ ಮೆತ್ತಿರುವ ಧೂಳನ್ನು ಝಾಡಿಸಿರಿ... ದಣಿವಾರಿಸಿಕೊಳ್ಳಿ ಕೊಂಚ!" ಹಲವರು ಒಕ್ಕೊರಲಿನಿಂದ ಹೇಳಿದರು. ಹೀಗೆ ಒಬ್ಬ ಒಂದು ಮಾತು ಹೇಳಿದ... ಇನ್ನೊಬ್ಬ ಅದಕ್ಕೆ ಇನ್ನಷ್ಟು ಸೇರಿಸಿದ... ಮತ್ತೊಬ್ಬ ಮತ್ತಷ್ಟು ಸೇರಿಸಿದ.

ತರುವಾಯ ಆ ಯಹೂದಿಯು ತನ್ನ ಭಾಷಣವನ್ನಾರಂಭಿಸಿದ,

"ಸಹೋದರರರೇ! ಈ ಕಡು ಬೇಸಿಗೆಯ ಸುಡು ಬಿಸಿಲಲ್ಲಿ ಓರ್ವನು ಅರೇಬಿಯದ ಕೆಂಡದಂಥ ಮರಳುಗಾಡಿನಲ್ಲಿ ಒಬ್ಬಂಟಿಯಾಗಿ ಪ್ರಯಾಣಿಸುವುದೆಂದರೆ ಖಂಡಿತವಾಗಿಯೂ ಮೂರ್ಖತನವಾಗಿದೆ. ಮಾತ್ರವಲ್ಲ, ಸ್ವಯಂ ತನ್ನೊಂದಿಗೆ ವೈರ ಕಟ್ಟಿಕೊಂಡಂತೆಯೇ ಸರಿ. ಜೀವ ನನಗೂ ಪ್ರಿಯವಾಗಿದೆ ಮತ್ತು ನಾನು ಜೀವನವನ್ನು ಅತ್ಯಂತ ಹೆಚ್ಚು ಪ್ರೀತಿಸುವವ ನಾಗಿದ್ದೇನೆ. ಆದರೆ ನಾನು ನಿಮಗೆ ಹೇಳಲಿಕ್ಕೆಂದೇ ಬಂದಿರುವ ಈ ಮಾತು ಅದಕ್ಕಿಂತಲೂ ಹೆಚ್ಚು ಮಹತ್ವಪೂರ್ಣವಾದುದು..."

(ಗ್ರಾಮೀಣರೆಲ್ಲರೂ ಮೈಯೆಲ್ಲ ಕಿವಿಯಾಗಿಸಿ ಅವನ ಮಾತುಗಳನ್ನು ಆಲಿಸುತ್ತಿದ್ದರು.)

"ಕೇಳಿರಿ! ಖುರೈಶ್ ಜನಾಂಗದ ಬನೂ ಹಾಶಿಮ್ ಗೋತ್ರಕ್ಕೆ ಸೇರಿದ ಮುಹಮ್ಮದ್ ಎಂಬ ವ್ಯಕ್ತಿಯು ಪ್ರವಾದಿತ್ವವನ್ನು ಸಾರಿದ್ದಾನೆ ಎಂಬುದು ನಿಮಗೆ ತಿಳಿದಿರಬೇಕಲ್ಲವೇ? ಈಚೆಗೆ... ಕೆಲವು ವರ್ಷಗಳಾದುವು... ಕುರೈಶ್ ಸರದಾರರು ಆತನನ್ನು ತಡೆದಾಗ ಆತನು ತನ್ನ ಸಹಚರರೊಡಗೂಡಿ ಯಸ್ರಿಬ್‌ಗೆ ಹೊರಟು ಹೋದ. ಈಗ ಅಬ್ದುಲ್ಲಾರ ಪುತ್ರ ಮುಹಮ್ಮದ್ ಮತ್ತು ಆತನ ಸಹಚರರ ಮಟ್ಟಿಗೆ ಆ ನಗರವೇ ಕೇಂದ್ರ ಸ್ಥಾನವಾಗಿದೆ. ಇಬ್ನು ಅಬ್ದುಲ್ಲಾ ಏನು ಹೇಳುತ್ತಾನೆ ಗೊತ್ತೇನು?"

"ಬಹಳ ಕಡಿಮೆ... ಅಲ್ಲ, ಇಲ್ಲವೆನ್ನುವಷ್ಟು ಕಡಿಮೆ ತಿಳಿದಿದ್ದೇವೆ" ಎಂದು ಮೂರ್ನಾಲ್ಕು ಮಂದಿ ಗ್ರಾಮೀಣ ಅರಬರು ತಲೆಯಲ್ಲಾಡಿಸುತ್ತಾ ಹೇಳಿದರು.

"ಹಾಗಾದರೆ ಕೇಳಿರಿ, ನಾನು ಹೇಳುತ್ತೇನೆ... ಬನೂ ಹಾಶಿಮ್ ಮನೆತನದ ಈ ಪ್ರವಾದಿಯು ಅರಬರ ಪೂರ್ವಿಕ ಧರ್ಮದ ಪ್ರತಿಷ್ಠೆ ಮತ್ತು ಕೌಟುಂಬಿಕ ಸಭ್ಯತೆಯನ್ನು ವಿರೋಧಿಸುತ್ತಾನೆ. ಮಾನವರೆಲ್ಲರೂ ಪರಸ್ಪರ ಸಮಾನರು ಎಂದು ಆತ ಹೇಳುತ್ತಾನೆ. ಇದಂತೂ ಅರೇಬಿಯಾದ ಘನತೆಗೆ ಒಡ್ಡಿರುವ ಸವಾಲಾಗಿದೆ... ಅಂದರೆ ಇನ್ನು ಒಡೆಯ ಮತ್ತು ಗುಲಾಮ ಒಂದೇ ತಟ್ಟೆಯಲ್ಲಿ ಊಟ ಮಾಡುವರು..."

"ಇಲ್ಲ... ಅದು ಸಾಧ್ಯವಿಲ್ಲ. ಗುಲಾಮ ಮತ್ತು ಸ್ವತಂತ್ರ ಇಬ್ಬರೂ ಸಮಾನರಾಗ ಲಾರರು. ಅರೇಬಿಯಾದ ಘನತೆಯು ಇದನ್ನು ಖಂಡಿತ ಸಹಿಸಲಾರದು!" ಗ್ರಾಮೀಣರು ಮಧ್ಯದಲ್ಲಿ ಚೀರಿ ಬಿಟ್ಟರು.

"ಆದರೆ ಸಹೋದರರರೇ! ನೀವು ಹೀಗೆಯೇ ತೆಪ್ಪಗಿದ್ದು ಬಿಟ್ಟರೆ ಮತ್ತು ಈ ವಿಪತ್ತನ್ನು ಬಲಪ್ರಯೋಗದೊಂದಿಗೆ ಎದುರಿಸದಿದ್ದರೆ... ನಿಮಗೂ ಈ ಅವಮಾನವನ್ನು ಸಹಿಸಬೇಕಾಗಿ ಬಂದೀತು. ನಿಮ್ಮ ಆರಾಧ್ಯ ದೈವಗಳನ್ನು ಆರಾಧ್ಯ ಮೂರ್ತಿಗಳನ್ನು ಒಡೆದು ಬೆಂಕಿಗೆಸೆಯ

ಲಾಗುವುದು... (ಗ್ರಾಮೀಣ ಅರಬರ ಮುಖಗಳು ಕೋಪದಿಂದ ಕೆಂಪೇರಿದುವು.) ಈಗ ಮದೀನದಿಂದ ಬಂದ ವರದಿಯಂತೆ, ಮುಸ್ಲಿಮರು ಗತ್‌ಫಾನಿಯರಾದ ನಿಮ್ಮ ಮೇಲೆ ಆಕ್ರಮಣ ಮಾಡುವ ಸಿದ್ಧತೆಯಲ್ಲಿದ್ದಾರೆ... ಗತ್‌ಫಾನಿಯರ ಬಲ ಮುರಿದರೆ ಮತ್ತು ಆ ಗೋತ್ರದವರನ್ನು ಅಧೀನಗೊಳಿಸಿದರೆ ಉಳಿದ ಎಲ್ಲ ಗಡಿ ಪ್ರದೇಶಗಳನ್ನು ವಶಪಡಿಸು ವುದು ಸುಲಭ ಎಂದೆಲ್ಲ ಅವರಾಡಿಕೊಳ್ಳುತ್ತಿದ್ದಾರೆ..." ಯಹೂದಿ ತನ್ನ ಮಾತು ಮುಗಿಸಿದ.

"ಅಂದರೆ ನಮ್ಮ ಖಡ್ಗಗಳೆಲ್ಲ ಬಡ್ಡಾಗಿ ಬಿಟ್ಟಿವೆಯೇನು? ನಮ್ಮ ರಟ್ಟೆಗಳು ಬಲಹೀನವಾಗಿ ಬಿಟ್ಟಿವೆಯೇನು? ಖಡ್ಗಕ್ಕೆ ಖಡ್ಗದಿಂದಲೇ ಉತ್ತರಿಸುವೆವು... ಈಟಿಗೆ ಈಟಿಯಿಂದ! ಗತ್‌ಫಾನಿಯರೊಂದಿಗೆ ಸರಸವಾಡಿದರೆ, ಮುಸ್ಲಿಮರಿಗೆ ನಷ್ಟವೇ ನಷ್ಟ! ಯುದ್ಧವು ಅವರಿಗೆ ಬಹಳ ದುಬಾರಿಯಾಗಲಿದೆ! ಗತ್‌ಫಾನಿಯರು ಇದುವರೆಗೂ ಯಾರಿಂದಲೂ ಯಾವ ಯುದ್ಧದಲ್ಲೂ ಸೋಲು ಕಂಡವರಲ್ಲ! ಸಿರಿಯದ ಯುದ್ಧಪ್ರಿಯ ದರೋಡೆಕೋರರನ್ನು ನಾವು ಎಷ್ಟು ಬಾರಿ ಮಣಿಸಿಲ್ಲ!? ನಜ್ದ್‌ನ ದಾರಿಗಳಲ್ಲಿ ಖರ್ಜೂರ, ಜಾಲಿಮರಗಳಲ್ಲಿ ಮತ್ತು ಗುಡ್ಡ-ಮೇಡುಗಳಲ್ಲಿ ನಮ್ಮ ವಿಜಯ ಪತಾಕೆಗಳು ಈಗಲೂ ಹಾರುತ್ತಿವೆ..." ಓರ್ವ ಬದವಿಯು ಖಡ್ಗ ಝಳಪಿಸುತ್ತಾ ಗರ್ಜಿಸಿದ.

ಆ ಯಹೂದಿಯು ಗತ್‌ಫಾನ್ ಗೋತ್ರದಂತೆಯೇ ಅರೇಬಿಯಾದ ಇತರ ಗೋತ್ರ ಗಳಲ್ಲಿಯೂ ಮುಸ್ಲಿಮರ ವಿರುದ್ಧ ದ್ವೇಷದ ಕಿಡಿ ಹೊತ್ತಿಸಿದ. ಗತ್‌ಫಾನ್ ಗೋತ್ರದವರಿಗೆ ಖೈಬರ್‌ನ ಯಹೂದಿಯರ ಜತೆಯಲ್ಲಿ ಮೊದಲೇ ಒಪ್ಪಂದವೇರ್ಪಟ್ಟಿತ್ತು. ಅವೆರಡೂ ಪರಸ್ಪರ ಮಿತ್ರ ಗೋತ್ರಗಳಾಗಿದ್ದುವು. ಹೀಗೆ ಹಿಜ್ರತ್‌ನ ಆರನೆಯ ವರ್ಷ ಗತ್‌ಫಾನ್ ನವರು ಮದೀನದ ಮೇಲೆ ಆಕ್ರಮಣ ನಡೆಸಲು ಬೃಹತ್ ಪ್ರಮಾಣದಲ್ಲಿ ಸಿದ್ಧತೆ ನಡೆಸಿದರು.

ಕಮೂಸ್ ಕೋಟೆಯ ಸುತ್ತ

ಖೈಬರ್ ಯಹೂದಿಗಳ ಷಡ್ಯಂತ್ರವು ಬಹಳ ಅಪಾಯಕಾರಿ ಹಂತಕ್ಕೆ ತಲುಪುತ್ತಿತ್ತು. ಮದೀನದ ಮುನಾಫಿಕರೊಡನೆಯೂ ಅವರಿಗೆ ನಿಕಟ ಬಾಂಧವ್ಯವಿತ್ತು. ಆ ಮುನಾಫಿಕರ ಮೂಲಕ ಅವರು ಮುಸ್ಲಿಮರ ಸ್ಥಿತಿಗತಿ, ಚಲನವಲನಗಳನ್ನು ಅರಿತುಕೊಳ್ಳುತ್ತಿದ್ದರು. ಈ ಯಹೂದಿಗಳ ಇಸ್ಲಾಮ್ ದ್ವೇಷದಿಂದ ಮದೀನದ ಮುನಾಫಿಕರ ಸರದಾರ ಅಬ್ದುಲ್ಲಾ ಬಿನ್ ಉಬೈ ತನ್ನ ಬೇಳೆ ಬೇಯಿಸಲು ಸಾಧ್ಯಂತ ಶ್ರಮಿಸುತ್ತಿದ್ದ. ಆ ಅವಿವೇಕಿಯು ಮುಸ್ಲಿಮರ ಬಗ್ಗೆ ಇಲ್ಲಸಲ್ಲದ ವರದಿಗಳನ್ನೂ ಯಹೂದಿಗಳಿಗೆ ತಲುಪಿಸುತ್ತಿದ್ದ. ಒಮ್ಮೆ ಅವನು ತನ್ನ ದೂತನನ್ನು ಖೈಬರ್‌ಗೆ ಕಳುಹಿಸಿದ. ಆತ ಅಲ್ಲಿ ಹೋಗಿ ಹೇಳಿದ, "ಅಬ್ದುಲ್ಲಾರ ಪುತ್ರ ಮುಹಮ್ಮದ್ ನಿಮ್ಮ ಮೇಲೆ ಆಕ್ರಮಣ ಮಾಡಲು ಸಿದ್ಧತೆ ನಡೆಸುತ್ತಿದ್ದಾರೆ. ದಿನನಿತ್ಯ ಯುದ್ಧ ಸಿದ್ಧತೆಯ ಬಗ್ಗೆಯೇ ಚರ್ಚೆಗಳು ನಡೆಯುತ್ತಿರುತ್ತವೆ. ಮುಸ್ಲಿಮ್ ಭಾಷಣಗಾರರು ಜನರನ್ನು ಯುದ್ಧಕ್ಕೆ ಪ್ರಚೋದಿಸುತ್ತಿದ್ದಾರೆ. ಒಂದೆಡೆ ಖಡ್ಗಗಳ ಹರಿತಕ್ಕೆ ಸಾಣೆ ಹಾಕಲಾಗುತ್ತಿದ್ದರೆ, ಇನ್ನೊಂದೆಡೆ ಈಟಿಗಳ ಮೊನೆಯನ್ನು ಇನ್ನಷ್ಟು ಚೂಪುಗೊಳಿಸಲಾಗುತ್ತಿದೆ.

ಆದರೆ ನೀವು ಭಯಪಡಬೇಕಾಗಿಲ್ಲ. ಮುಸ್ಲಿಮರ ಭಾರೀ ಸೇನೆಯು-ಆಕ್ರಮಿಸಬಹುದೆಂದು ಹತಾಶರಾಗಬೇಕಾಗಿಯೂ ಇಲ್ಲ. ಅವರು ಕೆಲವೇ ಮಂದಿ ಅಂದರೆ ಬೆರಳೆಣಿಕೆಯಷ್ಟಿದ್ದಾರೆ. ಸಾಕಷ್ಟು ಯುದ್ಧ ಸಾಮಗ್ರಿಗಳೂ ಅವರ ಬಳಿಯಿಲ್ಲ. ಅವರು ನಿಮ್ಮ ಕೂದಲನ್ನೂ ಕೊಂಕಿಸಲಾರರು. ಆದರೂ ಶತ್ರುಗಳನ್ನು ತುಚ್ಛರೆಂದು ಭಾವಿಸಿ ಅಲಕ್ಷ್ಯರಾಗಿದ್ದು ಬಿಡ ಬಾರದು. ನೀವು ನಿಮ್ಮ ರಣತಂತ್ರವನ್ನು ರೂಪಿಸಿಕೊಳ್ಳಿರಿ ಮತ್ತು ಕ್ಷೋಭೆಯನ್ನು ತಲೆಯೆತ್ತು ವುದಕ್ಕೆ ಮುನ್ನವೇ ಹೊಸಕಿ ಹಾಕಿರಿ. ನಮ್ಮ ಹೃದಯಗಳು ನಿಮ್ಮ ಜತೆಗಿರುತ್ತವೆ. ಹೃದಯವೇನು ಖಡ್ಗವೂ ಕೂಡ!"

ಖೈಬರ್‌ನ ಯಹೂದಿಗಳು ಈ ಸುದ್ದಿ ತಿಳಿಯುತ್ತಲೇ ಆಸುಪಾಸಿನ ಗೋತ್ರಗಳನ್ನು ಸಂಧಿಸಿದರು. "ಮುಸ್ಲಿಮರು ನಮ್ಮ ಮೇಲೆ ಆಕ್ರಮಣ ಮಾಡುವುದಕ್ಕಿಂತ ಮುಂಚೆಯೇ ನಾವೇ ಮುಂದುವರಿದು ಮದೀನಕ್ಕೆ ಮುತ್ತಿಗೆ ಹಾಕಬೇಕು" ಎಂದು ಅವರನ್ನು ಹುರಿದುಂಬಿ ಸಿದರು ಮಾತ್ರವಲ್ಲ, "ನೀವೆಲ್ಲ ನಮಗೆ ಸಹಕಾರ ನೀಡಿದರೆ ಖೈಬರ್‌ನ ಖರ್ಜೂರ ಇಳುವರಿ ಯಿಂದ ಅರ್ಧಪಾಲನ್ನು ನಿಮಗೆ ನೀಡುವೆವು" ಎಂದೂ ಆಮಿಷವೊಡ್ಡಿದರು. ಕಿನಾನ, ಯಹೂದ ಬಿನ್ ಕೈಸ್ ಮತ್ತು ಗತ್‌ಫಾನ್ ಗೋತ್ರಗಳು ಅದಕ್ಕೆ ಅಂಗೀಕಾರ ಸೂಚಿಸಿದುವು. ಯುವಕರು ಟೊಂಕ ಕಟ್ಟಿ ಹೇಳಿದರು, "ಮದೀನದ ನೆಲವನ್ನು ಮುಸ್ಲಿಮರ ಪಾಲಿಗೆ ಕಬರಸ್ತಾನವನ್ನಾಗಿ ಮಾಡುವೆವು. ಬದ್ರ್, ಉಹುದ್ ಮತ್ತು ಖಂದಕ್ ಯುದ್ಧ ಗಳಿಗೆ ಈ ಒಂದೇ ಯುದ್ಧದಿಂದ ಪ್ರತೀಕಾರ ಪಡೆಯುವೆವು."

ಯಹೂದಿಗಳ ಮತ್ತು ಗತ್‌ಫಾನಿಯರ ಯುದ್ಧಸಿದ್ಧತೆಯ ಸುದ್ದಿ ತಿಳಿಯುತ್ತಲೇ ಪ್ರವಾದಿವರ್ಯರು(ಸ) ಮುಸ್ಲಿಮರ ಸೇನೆಯೊಡಗೂಡಿ ಖೈಬರ್‌ನೆಡೆಗೆ ಹೊರಟರು. ಸಹಾಬಿಗಳ ಬಳಿ ಯುದ್ಧ ಸಾಮಗ್ರಿಗಳ ಕೊರತೆಯಿತ್ತು. ಆದರೆ ದೇವನ ಮೇಲಿನ ಅದಮ್ಯ ವಿಶ್ವಾಸವು ಆ ಕೊರತೆಯನ್ನು ನೀಗಿಸಿತ್ತು. ಹುತಾತ್ಮತೆಯ ಹುಮ್ಮಸ್ಸು ಅವರ ಪಾವನ ನೇತ್ರಗಳಿಂದ ಪ್ರತಿಫಲಿಸುತ್ತಿತ್ತು. ಅವರ ನಡೆಯು ಸಾರಿ ಸಾರಿ ಹೇಳುತ್ತಿತ್ತು... ಪ್ರವಾದಿ ಮೂಸಾ ಕಲೀಮುಲ್ಲಾಹ್‌ರನ್ನು(ಅ) ಧಿಕ್ಕರಿಸಿದ ಜನಾಂಗವನ್ನು ನಾಮಾವಶೇಷಗೊಳಿಸಿಯೇ ಮದೀನಕ್ಕೆ ಮರಳುವೆವು. ತಮ್ಮ ಶೌರ್ಯದ ಬಗ್ಗೆ ಬಹಳ ಜಂಭ ಕೊಚ್ಚಿಕೊಳ್ಳುತ್ತಿರುವ ಈ ಗತ್‌ಫಾನಿಯರು, ಅಲ್ಲಾಹನ ಮಾರ್ಗದಲ್ಲಿ ಹೋರಾಡುವವರನ್ನು ಕೆಣಕುವುದೆಂದರೆ ಆಟದ ವಿಷಯವಲ್ಲ ಎಂಬುದನ್ನು ಬಹುಬೇಗನೇ ಕಂಡುಕೊಳ್ಳುವರು.

ಅನಾಥಮುತ್ತು(ಸ) ಈ ಯುದ್ಧದಲ್ಲಿ ಪ್ರಥಮವಾಗಿ ಇಸ್ಲಾಮಿ ಸೇನೆಗಾಗಿ ಧ್ವಜವನ್ನು ನಿಶ್ಚಯಿಸಿದರು. ಅದನ್ನು ಹಬ್ಬಾಬ್ ಬಿನ್ ಮುಂಝಿರ್‌ರಿಗೂ ಎರಡನೆಯ ಧ್ವಜವನ್ನು ಸಅದ್ ಬಿನ್ ಉಬಾದರಿಗೂ ನೀಡಿದರು. ಮೂರನೆಯ ಧ್ವಜವನ್ನು ಅಲಿಯವರಿಗೆ ನೀಡಿದರು. ಈ ಮೂರನೆಯ ಧ್ವಜವನ್ನು ಆಯಿಶಾರ(ರ) ಚದ್ದರದಿಂದ ಮಾಡಿಸಲಾಗಿತ್ತು.

ಖೈಬರ್‌ನ ಆಸುಪಾಸಿನಲ್ಲಿ ಖರ್ಜೂರದ ತೋಪುಗಳಿದ್ದುವು. ಜನವಸತಿಯಿರುವೆಡೆ

ಗುಡ್ಡಗಾಡುಗಳು. ಅಲ್ಲಿ ಆರು ಕೋಟೆಗಳಿದ್ದುವು. ಐದನ್ನು ಮುಸ್ಲಿಮರು ಬಹುಬೇಗನೇ ಜಯಿಸಿದರು. 'ಕಮೂಸ್' ಎಂಬ ಹೆಸರಿನ ಆರನೆಯ ಕೋಟೆಯು ಇತರೆಲ್ಲವುಗಳಿಗಿಂತ ಬಲಿಷ್ಠವಾಗಿತ್ತು. ಬಹಳ ಪ್ರಯತ್ನ ಪಡಲಾಯಿತಾದರೂ ಅದನ್ನು ವಶಪಡಿಸಲು ಆಗಿರಲಿಲ್ಲ. ಆ ಕೋಟೆಯ ವಿನ್ಯಾಸ ಮತ್ತು ಇರುವ ಸ್ಥಳವು ಮುತ್ತಿಗೆ ಹಾಕಿದವರಿಗೆ ಕ್ಲಿಷ್ಟಕರವೂ ಪ್ರತಿರೋಧಿಸುವವರಿಗೆ ಸುಲಭವೂ ಆಗಿತ್ತು. ಮರ್ಹಬ್ ಎಂಬವನು ಕಮೂಸ್ ಕೋಟೆಯ ಪಾಳೆಯಗಾರನಾಗಿದ್ದನು. ಆತನ ಶೌರ್ಯ ಮತ್ತು ದೈಹಿಕ ಶಕ್ತಿಯು ಇಡೀ ಅರೇಬಿಯಾದಲ್ಲಿ ಜನಜನಿತವಾಗಿತ್ತು. ಆತನ ಬಗ್ಗೆ, 'ಮರ್ಹಬ್ ಒಬ್ಬನೇ ಸಾವಿರ ಮಂದಿಗೆ ಸಮ' ಎಂಬ ಮಾತು ಪ್ರಚಲಿತವಿತ್ತು. ಇಂತಹ ಪರಾಕ್ರಮಿ, ಬಲಾಢ್ಯನ ಸುಪುರ್ದಿಯಲ್ಲಿರುವ ಕೋಟೆಯು ಬಲಿಷ್ಠವಾಗಿರುವುದು ಸಹಜವೇ.

ಸಂಜೆಯ ಹೊತ್ತು. ಸೂರ್ಯ ಇನ್ನೂ ಅಸ್ತಮಿಸಿರಲಿಲ್ಲ. ಖರ್ಜೂರ ತೋಪಿನ ಕಡೆ ಮುಸ್ಸಂಜೆಯಾಗುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿದ್ದುವು. ಸಹಾಬಿಗಳೆಲ್ಲ ಮುತ್ತಿಗೆ ಹಾಕಿಕೊಂಡಿದ್ದರು. ಪ್ರವಾದಿವರ್ಯರ(ಸ) ಸುತ್ತಲೂ ರಕ್ಷಣೆಗಾಗಿ ಕೆಲವು ಮಂದಿ ನೆರೆದಿದ್ದರು. ಅಷ್ಟು ಹೊತ್ತಿಗೆ ಪ್ರವಾದಿವರ್ಯರ(ಸ) ಬಾಯಿಯಿಂದ ಈ ಮಾತುಗಳು ಹೊರಟವು, "ನಾನು ನಾಳೆ ವಿಜಯಿಯಾಗಬಲ್ಲ ವ್ಯಕ್ತಿಯ ಕೈಯಲ್ಲಿ ಧ್ವಜವನ್ನು ನೀಡುವೆನು. ಯಾರು ಅಲ್ಲಾಹ್ ಮತ್ತು ಆತನ ಸಂದೇಶವಾಹಕನನ್ನು ಪ್ರೀತಿಸುತ್ತಾನೋ ಅವನನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕನೂ ಪ್ರೀತಿಸುತ್ತಾರೆ."

ಸಹಾಬಿಗಳ ಪೈಕಿ ಪ್ರತಿಯೊಬ್ಬರೂ ನನಗೆ ಆ ಧ್ವಜವನ್ನು ದೊರೆಯುವಂತಾಗಲಿ ಎಂದು ಆಗ್ರಹಿಸುತ್ತಿದ್ದರು. ನಿರೀಕ್ಷೆಯ ಬೀಜ ಮೊಳೆತಾಗ ಅದು ಬಹುಬೇಗನೇ ರೆಂಬೆ ಕೊಂಬೆಗಳಾಗಿ ಹರಡುತ್ತದೆ. ರಾತ್ರಿ ಕಳೆಯಿತು. ಪ್ರಭಾತದ ಬೆಳ್ಳಿರೇಖೆ ಮೂಡಿತು. ನಿರೀಕ್ಷೆಯ ಕ್ಷಣಗಳು ಕೊನೆಗೊಳ್ಳುವ ಹಂತ... ರಸೂಲುಲ್ಲಾಹ್‌ರು ಯಾರಿಗೆ ಇಂದು ಧ್ವಜವನ್ನು ನೀಡುವರು ಎಂದು ಎಲ್ಲರೂ ಕಾತರಿಸಿದರು... ಆಗ್ರಹವು ಒಂದು ರೀತಿಯಲ್ಲಿ ತಳಮಳದ ಸ್ಥಿತಿಯನ್ನುಂಟು ಮಾಡಿತ್ತು... ಅಷ್ಟರಲ್ಲಿ ಅಬೂತಾಲಿಬ್‌ರ ಪುತ್ರ ಅಲಿಯವರ(ರ) ಅದೃಷ್ಟ ತಾರೆ ಮಿನುಗಿತು. ಆ ವಿಶೇಷ ಅನುಗ್ರಹವು ಅಲಿಗೆ ಲಭಿಸಿತು... ಅನಾಥಮುತ್ತು(ಸ) ತಮ್ಮ ಕೈಯಲ್ಲಿದ್ದ ಧ್ವಜವನ್ನು ಅಲಿಗೆ(ರ) ನೀಡಿದರು. ಅಲಿಯವರ(ರ) ಮುಖಾರವಿಂದವು ಆನಂದಾತಿರೇಕದಿಂದ ಚೆಂಗುಲಾಬಿಯಂತೆ ಕೆಂಪೇರಿತು. ಆದರೆ ಆ ರಂಗೇರುವಿಕೆಯಲ್ಲಿ ತನಗೆ ವಹಿಸಿಕೊಟ್ಟಿರುವ ಜವಾಬ್ದಾರಿಕೆಯಲ್ಲಿ ಎಳ್ಳಷ್ಟೂ ಕೊರತೆಯುಂಟಾಗಬಾರದಷ್ಟೇ.

ಮರ್ಹಬ್‌ನನ್ನು ಹರಿದು ಮುಕ್ಕಿದ 'ಸಿಂಹ'!

ಕಮೂಸ್ ಕೋಟೆಯ ಪಾಳೆಯಗಾರ, ಬಲಾಢ್ಯ ಪಹಿಲ್ವಾನ ಮರ್ಹಬ್, ಆ ರಾತ್ರಿ ಒಂದು ಸಿಂಹವು ತನ್ನನ್ನು ಹರಿದು ಮುಕ್ಕುತ್ತಿರುವಂತೆ ಕನಸು ಕಾಣುತ್ತಾನೆ. ಆತ ಆ ಕನಸಿನ ಬಗ್ಗೆ ತನ್ನ ಪತ್ನಿಯಲ್ಲಿ ಪ್ರಸ್ತಾಪಿಸುತ್ತಾನೆ. ಆಗ ಆಕೆ ಹೇಳುತ್ತಾಳೆ, "ನೀವು ಬಲು ಧೈರ್ಯ

ಶಾಲಿಯಾಗಿರುತ್ತೀರಿ... ಆದರೆ ಇವತ್ತೇನಾಗಿದೆ ನಿಮಗೆ? ಒಂದು ಕನಸಿಗೆ ಬೆಚ್ಚಿ ಬೀಳುತ್ತಿದ್ದೀರಲ್ಲ! ಕನಸುಗಳ ಬಗ್ಗೆ ಹೆಚ್ಚು ತಲೆಕೆಡಿಸುವುದು ಸರಿಯಲ್ಲ." ಮರ್ಹಬ್ ಹತಾಶ ಸ್ವರದಲ್ಲಿ ಹೇಳಿದ, "ನನ್ನ ಹೃದಯವನ್ನೇನು ಮಾಡಲಿ? ಈ ಕನಸು ಕಂಡಾಗಿ ನಿಂದ ಭೀತಿಗೊಳಗಾಗಿದೆ. ನನ್ನ ಭವಿಷ್ಯ ಹೇಗಿರುತ್ತದೋ... ಎಂತಹ ಘಟನೆ ಸಂಭವಿಸಲಿದೆಯೋ..."

ಬೆಳಗ್ಗೆ ಹ. ಅಲಿ(ರ) ಯುದ್ಧರಂಗಕ್ಕೆ ಕಾಲಿಟ್ಟಾಗ, ಮರ್ಹಬ್ ಕೂಡಾ ಸಮರಗೀತೆ ಹಾಡುತ್ತಾ ಕೋಟೆಯಿಂದ ಹೊರಗಡಿಯಿಟ್ಟ. ಆತ ಕಬ್ಬಿಣದ ಯುದ್ಧ ಕವಚ ಧರಿಸಿದ್ದ. ಒಂದು ಕೈಯಲ್ಲಿ ಗುರಾಣಿಯಿತ್ತು. ಇನ್ನೊಂದು ಕೈಯಲ್ಲಿ ಮಿರಮಿರ ಮಿನುಗುವ ಖಡ್ಗ! ಈಟಿಯನ್ನು ಬೆನ್ನಿಗೆ ಕಟ್ಟಿಕೊಂಡಿದ್ದ. ಆತನ ಮುಖದಲ್ಲಿ ಕ್ರೋಧವು ಇದೀಗ ಹರಿದು ಹೊರಬರುತ್ತಿದೆಯೋ ಎಂಬಂತಿತ್ತು. ಗಾಯಗೊಂಡ ತೋಳದಂತಿತ್ತು ಆತನ ನಡೆ... ಮತ್ತು ಸಮರಗೀತೆಯು ಊಳಿಡುವಂತಿತ್ತು!! ಆತ ಹೇಳಿದ,

"ನಾನು ಮರ್ಹಬ್ ಎಂಬುದನ್ನು ಖೈಬರ್‌ನ ಕಣಿವೆಗಳು ಚೆನ್ನಾಗಿ ಅರಿತಿವೆ. ನಾನು ಪರಾಕ್ರಮಿ, ಅನುಭವಿ, ಲೋಕಜ್ಞಾನಿ ಮತ್ತು ಶಸ್ತ್ರಸಜ್ಜಿತ..."

ಉತ್ತರವಾಗಿ ಹ. ಅಲಿ(ರ) ಶಾಂತವಾಗಿ ಹೀಗೆಂದರು,

"ನಾನು ಯಾರು? ನನ್ನ ಅಮ್ಮ ನನಗೆ ಹೈದರ್ (ಸಿಂಹ) ಎಂದು ಹೆಸರಿಟ್ಟಿದ್ದಾಳೆ ಅಷ್ಟೇ... ನಾನು ಕೇವಲ ಅರಣ್ಯದ ಸಿಂಹದಷ್ಟು ಭಯಂಕರ ಮಾತ್ರವಾಗಿದ್ದೇನೆ."

ಸಿಂಹದ ಹೆಸರು ಕೇಳುತ್ತಲೇ ಮರ್ಹಬ್‌ಗೆ ರಾತ್ರಿ ಕಂಡ ಕನಸು ನೆನಪಾಗಿ ಕೈ-ಕಾಲುಗಳು ಥರಗುಟ್ಟಿದುವು. ಆದರೂ ಆತ ಧೈರ್ಯಶಾಲಿ ಮತ್ತು ಅನುಭವಿ ಯೋಧ ನಾಗಿದ್ದ. ತನ್ನನ್ನು ಸಂಭಾಳಿಸಿಕೊಂಡ. ಕಾಳಗ ಪ್ರಾರಂಭವಾಯಿತು. ಮರ್ಹಬ್ ತನ್ನ ಧೈರ್ಯ-ಶೌರ್ಯ ಮತ್ತು ಶಕ್ತಿಯನ್ನು ಪ್ರದರ್ಶಿಸುತ್ತಾ ಮೆರೆಯತೊಡಗಿದ. ಆತ ಕುದುರೆ ಯನ್ನು ವೃತ್ತಾಕಾರದಲ್ಲಿ ಓಡಿಸುತ್ತಾ ಅಲಿಯವರ(ರ) ಮೇಲೆ ಮುಗಿ ಬೀಳುವಾಗ, ಕೋಟೆಯ ಗೋಡೆಗಳ ಮೇಲೆ ನಿಂತಿದ್ದ ಯಹೂದಿಗಳು ಕೇಕೆ ಹಾಕುತ್ತಿದ್ದರು. ಈ ಗದ್ದಲದಲ್ಲಿ ತಮ್ಮ ಯೋಧನನ್ನು ಹುರಿದುಂಬಿಸುವ ಒಂದು ವಿಧಾನವೂ ಇತ್ತು. ಆದರೇನು... ಮರ್ಹಬ್ ಎದುರಿಸುತ್ತಿರುವುದು ಆಕ್ರಮಣಕಾರಿ ಸಿಂಹವನ್ನು! 'ಅಲಿಯಿಲ್ಲದೆ ಯೌವನವಿಲ್ಲ, ಝುಲ್ಫಿಕಾರ್ ಇಲ್ಲದೆ ಖಡ್ಗವಿಲ್ಲ' ಎಂಬ ವಿಶೇಷಣಕ್ಕೆ ಭಾಜನರಾದ ಧೀರ ಪರಾಕ್ರಮಿಯನ್ನಲ್ಲವೇ ಮರ್ಹಬ್ ಎದುರಿಸುತ್ತಿರುವುದು!? ಯಶಸ್ಸು ಮತ್ತು ದೇವ ಸಹಾಯಕ್ಕೆ ಅರ್ಹರಾಗಿದ್ದವರೊಂದಿಗಾಗಿತ್ತು ಆತನ ಯುದ್ಧ! ಇವತ್ತು ಓರ್ವ ಮರ್ಹಬ್ ಯಾಕೆ, ಇಡೀ ಜಗತ್ತು ಅಲಿಯವರ ವಿರುದ್ಧ ನಿಂತರೂ ಸೋಲಲೇ ಬೇಕಿತ್ತು. ಏಕೆಂದರೆ ಯಶಸ್ಸು ಅದಾಗಲೇ ಬರೆಯಲ್ಪಟ್ಟಿತ್ತು. ಮರ್ಹಬ್ ತನಗೆ ತಿಳಿದಿರುವ ಎಲ್ಲ ಪಟ್ಟುಗಳನ್ನೂ ಉಪಯೋಗಿಸಿದ. ಆದರೆ ದೇವನ ಸಿಂಹದ ಮುಂದೆ ಖೈಬರ್‌ನ ತೋಳದ ಪರಾಕ್ರಮ ನಡೆಯಲಿಲ್ಲ. ಝುಲ್ಫಿಕಾರ್ ಅಲಿಯವರು(ರ) ಆ ಪರಾಕ್ರಮಿ ಮತ್ತು ಜನಪ್ರಿಯ ಯೋಧನನ್ನು ನೆಲ ಕಚ್ಚಿಸಿದರು. ಆತನ ದೇಹವು ಹರಳು ಕಲ್ಲುಗಳು

ತುಂಬಿದ ನೆಲದಲ್ಲಿ ಚಡಪಡಿಸಿತು. ಹ. ಅಲೀ(ರ) ಖೈಬರ್‌ನ ಆ ಬಲಿಷ್ಠ ಕೋಟೆಯ ಬಾಗಿಲನ್ನು ಒಡೆದು ಒಳಗಡಿಯಿಟ್ಟರು. ತರುವಾಯ ಮುಸ್ಲಿಮರ ತಕ್ಬೀರ್ ಘೋಷಣೆಯು ಖೈಬರ್‌ನ ಆ ರಣಾಂಗಣದಲ್ಲಿ ಮಾರ್ದನಿಸಿತು.

ಕಮೂಸ್ ಕೋಟೆಯನ್ನು ಜಯಿಸಿದ ಮೇಲೆ ಸ್ವಾಭಾವಿಕವಾಗಿಯೇ ಖೈಬರ್‌ನ ಇಡೀ ನೆಲ-ಸಂಪತ್ತು ಮುಸ್ಲಿಮರ ವಶವಾಯಿತು. ಹೀಗೆ ಖೈಬರ್ ಪ್ರದೇಶವು ಪ್ರವಾದಿವರ್ಯರ(ಸ) ಅಧೀನ ಪ್ರದೇಶವಾಯಿತು. ಖೈಬರ್‌ನ ಯಹೂದಿಯರು ಪ್ರವಾದಿವರ್ಯರ(ಸ) ಸನ್ನಿಧಿ ಯಲ್ಲಿ ಹಾಜರಾಗಿ ಹೇಳಿದರು, "ಖೈಬರ್ ಭೂಮಿಯನ್ನು ನಮ್ಮ ವಶದಲ್ಲಿಯೇ ಬಿಟ್ಟು ಬಿಡಿರಿ. ಪ್ರತಿಯಾಗಿ ನಾವು ಇಲ್ಲಿನ ಉತ್ಪಾದನೆಯ ಅರ್ಧಪಾಲನ್ನು ನಿಮಗೆ ಕೊಡುತ್ತಿರುತ್ತೇವೆ."

ಯಹೂದಿಯರ ಈ ಬೇಡಿಕೆಯನ್ನು ಪ್ರವಾದಿವರ್ಯರು(ಸ) ಅಂಗೀಕರಿಸಿದರು.

ಬೆಳೆ ಕೊಯ್ಲಿನ ಸಮಯವಾದಾಗಲೆಲ್ಲಾ ಅನಾಥಮುತ್ತು(ಸ) ಅಬ್ದುಲ್ಲಾಹ್ ಬಿನ್ ರವಾಹರನ್ನು ಖೈಬರ್‌ಗೆ ಕಳುಹಿಸುತ್ತಿದ್ದರು. ಅಬ್ದುಲ್ಲಾ(ರ) ಇಡೀ ಬೆಳೆಯನ್ನು ಒಂದೆಡೆ ಕಲೆ ಹಾಕಿಸಿ, ಆ ಬಳಿಕ ಅದನ್ನು ಸಮಪಾಲಿನಲ್ಲಿ ವಿಂಗಡಿಸಿ, "ಇದರಲ್ಲಿ ಯಾವ ಭಾಗ ಬೇಕಿದ್ದರೂ ತೆಗೆದುಕೊಳ್ಳಿ" ಎಂದು ಹೇಳುತ್ತಿದ್ದರು... ಅದಕ್ಕೆ ಪ್ರತಿಯಾಗಿ ಯಹೂದಿಗಳು ಹೀಗೆ ಹೇಳುತ್ತಿದ್ದರು, ಅಲ್ಲ ಹೇಳಲು ನಿರ್ಬಂಧಿತರಾಗುತ್ತಿದ್ದರು,

"ಭೂಮಿ-ಆಕಾಶಗಳು ಇದೇ ನ್ಯಾಯ ಸಮಾನತೆಯಿಂದ ಸ್ಥಿರವಾಗಿವೆ!"

ಏಕೆಂದರೆ ಹಾಗೆ ಅವರ ಮನಸ್ಸಿನಾಳದಿಂದ ಬಂದ ಧ್ವನಿಯು ಪ್ರತಿಧ್ವನಿಸುತ್ತಿತ್ತು.

ೱ◆◆◆ೲ

ಸಿರಿಯಾದ ನೆಲದಲ್ಲಿ

ಆ ಕಾಲದಲ್ಲಿ ರಾಜ-ಮಹಾರಾಜರುಗಳ ಅಧೀನದಲ್ಲಿ ಸರದಾರರು ಮತ್ತು ಜನನಾಯಕರಿರುತ್ತಿದ್ದರು. ಆ ಸರದಾರರು ಮತ್ತು ನಾಯಕರುಗಳ ಸ್ಥಾನಮಾನವು ಅರೆಸ್ವತಂತ್ರ ಆಡಳಿತಾ ಧಿಕಾರಿಯಂತಿರುತ್ತಿತ್ತು. (ಇನ್ನೊಂದರ್ಥದಲ್ಲಿ ಸಾಮಂತರು ಅನ್ನಬಹುದು) ತಮ್ಮ ಪ್ರದೇಶದಲ್ಲಿ ಇವರು ಸಣ್ಣಪುಟ್ಟ ರಾಜರಂತಿದ್ದರು. ಅವರಲ್ಲಿಯೂ ಮಹಲು ಕೋಟೆಗಳಿರುತ್ತಿದ್ದುವು. ರಾಜ ದರಬಾರು ಕೂಡ ನಡೆಯುತ್ತಿತ್ತು. ಭೋಗ ವಿಲಾಸದ ಸಭೆಗಳೂ ಸಂತೋಷ ಕೂಟಗಳೂ ಜರುಗುತ್ತಿದ್ದುವು.

ರೋಮ್‌ನ ಕೈಸರ್(ಸೀಝರ್)ನ ಅಧೀನದಲ್ಲಿ ಅಂತಹ ಅನೇಕ ಸರದಾರರಿದ್ದರು. ಸಿರಿಯದ ಗಡಿಪ್ರಾಂತ್ಯದ ಶುರ್ಜೈಲ್ ಬಿನ್ ಉಮರ್ ಎಂಬ ಸರದಾರ ಆ ಪೈಕಿ ಒಬ್ಬನಾಗಿದ್ದ. ಪ್ರವಾದಿವರ್ಯರು(ಸ) ರಾಜರುಗಳಿಗೆ ಮತ್ತು ಆಡಳಿತಗಾರರಿಗೆ ದೇವ ಸಂದೇಶ ಹೊತ್ತ ಪತ್ರಗಳನ್ನು ರವಾನಿಸುವಾಗ, ಒಂದು ಪತ್ರವನ್ನು ಶುರ್ಜೈಲ್‌ನ ಹೆಸರಿಗೂ ಬರೆಸಿದ್ದರು. ಅದನ್ನು ಹಾರಿಸ್ ಬಿನ್ ಉಮೈರ್‌ರವರ(ಸ) ಮೂಲಕ ಕಳುಹಿಸಿದರು. ಶುರ್ಜೈಲ್, ಪ್ರವಾದಿವರ್ಯರ(ಸ) ಸಂದೇಶವನ್ನು ಓದಿ ಕೆಂಡಾಮಂಡಲವಾದ. ಆತ ರಾಯಭಾರಿಯನ್ನು (ಹಾರಿಸ್‌ರನ್ನು) ವಧಿಸಿದನು. ಪ್ರವಾದಿವರ್ಯರಿಗೆ(ಸ) ಈ ವಿಷಯ ತಿಳಿದಾಗ ಅವರು ಹಾರಿಸ್‌ರ ರಕ್ತ ಪ್ರತೀಕಾರ ಪಡೆಯಲು ಮೂರು ಸಾವಿರ ಯೋಧರ ಪಡೆಯನ್ನು ಝೈದ್ ಬಿನ್ ಹಾರಿಸರ ನೇತೃತ್ವದಲ್ಲಿ ಬಲ್ಕಾದೆಡೆಗೆ ಕಳುಹಿಸಿದರು. ಝೈದ್(ರ) ಓರ್ವ ಗುಲಾಮರಾಗಿದ್ದರು. ಪ್ರವಾದಿವರ್ಯರು(ಸ) ಅವರನ್ನು ಸ್ವತಂತ್ರಗೊಳಿಸಿದ್ದರು. ಅಂತಹವರ ನೇತೃತ್ವದಲ್ಲಿಯೇ ಅನ್ಸಾರ್-ಮುಹಾಜಿರ್‌ಗಳ ನೇತಾರರುಗಳು ಸಾಮಾನ್ಯ ಯೋಧರಂತೆ ದೇವಮಾರ್ಗದಲ್ಲಿ ಹೋರಾಡಲು ಸಸಂತೋಷ ತಯಾರಾಗಿದ್ದರು.

ಸೇನೆಯನ್ನು ಕಳುಹಿಸುವಾಗ ಅನಾಥಮುತ್ತು(ಸ) ಹೀಗೆ ಆದೇಶಿಸಿದರು, "ಒಂದು ವೇಳೆ ಝೈದ್ ಹುತಾತ್ಮರಾದರೆ, ಜಅ್‌ಫರ್ ತಯ್ಯಾರ್(ರ) ಸೇನೆಯ ಕಮಾನನ್ನು ವಹಿಸಬೇಕು. ಅವರೂ ಹುತಾತ್ಮರಾದರೆ ಅಬ್ದುಲ್ಲಾಹ್ ಬಿನ್ ರವಾಹ(ರ) ಸೇನಾ

ನಾಯಕನ ಹೊಣೆ ವಹಿಸಬೇಕು. ಅಬ್ದುಲ್ಲಾ ಬಿನ್ ರವಾಹ(ರ) ಧೀರ ಸಹಾಬಿಯಾಗಿದ್ದರು. ಖೈಬರ್‌ನ ಬೆಳೆ ಕೊಯ್ಲನ್ನು ಸಮಪಾಲಿನಲ್ಲಿ ವಿಂಗಡಿಸಲು ಪ್ರತಿವರ್ಷ ಅವರೇ ಹೋಗುತ್ತಿದ್ದರು. ಅತ್ಯುತ್ತಮ ಕವಿಯೂ ಆಗಿದ್ದರು.

ಇತ್ತ ಇಸ್ಲಾಮಿೂ ಸೇನೆಯು ಮದೀನದಿಂದ ಹೊರಟಾಗ, ಅತ್ತ ಗೂಢಚರರು ಶುರ್ಜೈಲ್‌ನಿಗೆ ಸುದ್ದಿ ಮುಟ್ಟಿಸಿದರು. "ಹಾರಿಸ್‌ರ ರಕ್ತ ಪ್ರತೀಕಾರ ಪಡೆಯಲು ಮುಸ್ಲಿಮರು ನಿಮ್ಮ ಪ್ರದೇಶದೆಡೆಗೆ ಧಾವಿಸುತ್ತಿದ್ದಾರೆ" ಎಂದರು. ಶುರ್ಜೈಲ್ ಯುದ್ಧಕ್ಕೆ ಸಿದ್ಧತೆ ನಡೆಸ ತೊಡಗಿದನು. ಅಲ್ಪ ಸಮಯದಲ್ಲಿಯೇ ಒಂದು ಲಕ್ಷ ಯೋಧರ ಶಸ್ತ್ರಸಜ್ಜಿತ ಸೇನೆಯನ್ನು ಅಣಿಗೊಳಿಸಿದನು. ಇನ್ನೊಂದೆಡೆ ರೋಮ್‌ನ ಸೀಝರನೂ ಬೃಹತ್ ಸೇನೆಯನ್ನು ಗಡಿಯ ಆಯಕಟ್ಟಿನ ಪ್ರದೇಶದಲ್ಲಿ ತಂದು ನಿಲ್ಲಿಸಿದನು.

ನಿಷೇಧಿಗಳ ಸೇನೆಯು ಅಸಂಖ್ಯವಾಗಿತ್ತು. ಸೇನಾ ಸಲಕರಣೆಗಳೂ ಅಪಾರವಾಗಿದ್ದುವು. ಮರುಭೂಮಿಯ ಅಲೆಮಾರಿಗಳು ಈ ರಾಜ-ಮಹಾರಾಜರುಗಳನ್ನು ಎದುರಿಸಲು ಹೊರಟಿದ್ದಾರೆ. ಮೇಲಾಗಿ ಪರದೇಶ. ಅಲ್ಲಿನ ಕಾನನ, ಕಣಿವೆ, ಖರ್ಜೂರ ತೋಪು, ಗುಡ್ಡ-ಬೆಟ್ಟ ಹಾಗೂ ಹಾದಿಗಳ ಬಗ್ಗೆ ಸ್ವಲ್ಪವೂ ಮಾಹಿತಿ ಉಳ್ಳವರಲ್ಲ. ಆದರೆ ಮುಸ್ಲಿಮರು ಅಲ್ಲಾಹನ ಹೆಸರೆತ್ತಿ ಮಿಥ್ಯಾರಾಧಕರನ್ನು ಎದುರಿಸಿದರು. ಘನಘೋರ ಯುದ್ಧ ನಡೆಯಿತು. ಮುಸ್ಲಿಮರು ವೀರಾವೇಶದಿಂದ ಹೋರಾಡಿದರು.

ಇಸ್ಲಾಮಿೂ ಸೇನೆಯ ಕಮಾಂಡರ್ ಝೈದ್ ಬಿನ್ ಹಾರಿಸ್(ರ) ಹಲವು ಈಟಿಯೇಟುಗಳನ್ನು ತಿಂದು ಹುತಾತ್ಮರಾದರು. ಬಳಿಕ ಪ್ರವಾದಿವರ್ಯರ(ಸ) ಆದೇಶ ಪ್ರಕಾರ ಜಅ್‌ಫರ್ ತಯ್ಯಾರ್‌ರವರು(ರ) ಸೇನೆಯ ನೇತೃತ್ವ ವಹಿಸಿದರು ಮತ್ತು ಇಸ್ಲಾಮಿನ ಧ್ವಜವನ್ನು ಕೈಗೆತ್ತಿಗೊಂಡು ಶತ್ರು ಸೇನೆಯನ್ನು ಭೇದಿಸುತ್ತಾ ಸಾಗಿದರು. ಸ್ವಲ್ಪ ಹೊತ್ತಿನ ತನಕ ಅಶ್ವಾರೂಢರಾಗಿ ಹೋರಾಡಿದರು. ಬಳಿಕ ಕುದುರೆಯಿಂದ ಜಿಗಿದು ನೆಲದಲ್ಲೇ ಸೆಣಸಾಡಿದರು. ಅವರ ಪರಾಕ್ರಮದೆದುರು ಶತ್ರುಗಳು ಹೌಹಾರಿ ಹೋದರು. ಜಅ್‌ಫರ್(ರ) ತಿರುಗಿದ ಕಡೆಯೆಲ್ಲ ಶತ್ರು ಸೇನೆ ಚದುರಿ ಹೋಗುತ್ತಿತ್ತು. ಕೊನೆಗೆ ತೀವ್ರ ಗಾಯಗೊಂಡು ಹುತಾತ್ಮರಾದರು. ಅಬ್ದುಲ್ಲಾ ಬಿನ್ ಉಮರ್(ರ) ಜಅ್‌ಫರ್‌ರವರ(ರ) ಮೃತದೇಹ ನೋಡಿದಾಗ ಅವರ ದೇಹದಲ್ಲಿ ಖಡ್ಗ, ಈಟಿಗಳ ಸುಮಾರು ನೂರರಷ್ಟು ಗಾಯಗಳಿದ್ದುವು. ಆದರೆ ಆ ಗಾಯಗಳೆಲ್ಲವೂ ದೇಹದ ಮುಂಭಾಗದಲ್ಲಿತ್ತು. ಬೆನ್ನಿನಲ್ಲಿ ಒಂದೇ ಒಂದು ಗಾಯವಿದ್ದಿರಲಿಲ್ಲ.

ಜಅ್‌ಫರ್ ತಯ್ಯಾರ್(ರ) ಹುತಾತ್ಮರಾದ ಬಳಿಕ ಅವರ ಜಾಗದಲ್ಲಿ ಅಬ್ದುಲ್ಲಾ ಬಿನ್ ರವಾಹ(ರ) ಸೇನಾ ದಂಡನಾಯಕತ್ವವನ್ನು ವಹಿಸಿದರು. ಅವರೂ ವೀರಾವೇಶದಿಂದ ಹೋರಾಡಿ ಹುತಾತ್ಮತೆಯ ಅನುಗ್ರಹಕ್ಕೆ ಪಾತ್ರರಾದರು.

ಇಸ್ಲಾಮಿೂ ಸೇನೆಯ ಮೂವರು ಸೇನಾ ನಾಯಕರು ಒಬ್ಬೊಬ್ಬರಾಗಿ ಹುತಾತ್ಮ

ರಾದರು. ಕೊನೆಗೆ ಖಾಲಿದ್‌ರವರು ಸೇನಾ ನಾಯಕತ್ವ ವಹಿಸಿದರು. ಅವರು ಪರಾಕ್ರಮ, ಶೌರ್ಯದ ಒಂದು ಅಧ್ಯಾಯವನ್ನೇ ಬರೆದರು. ಅಂದು ಖಾಲಿದ್‌ರ ಖಡ್ಗದೇಟಿಗೆ ಒಂದೆರಡಲ್ಲ, ಶತ್ರುಗಳ ಎಂಟು ಖಡ್ಗಗಳು ತುಂಡಾಗಿ ಬಿಟ್ಟವು. ಮುಸ್ಲಿಮರ ಸೇನೆಯು ಹೆಚ್ಚೆಂದರೆ ಮೂರು ಸಾವಿರ ಯೋಧರನ್ನು ಹೊಂದಿತ್ತು. ಅದೇ ವೇಳೆ ಶತ್ರು ಸೇನೆಯಲ್ಲಿ ಕನಿಷ್ಠ ಒಂದು ಲಕ್ಷ ಯೋಧರಿದ್ದರು! ಖಾಲಿದ್(ರ) ಸಂದರ್ಭದ ಸೂಕ್ಷ್ಮತೆಯನ್ನು ಅವಲೋಕಿಸಿದರು. ತರುವಾಯ ಆ ಬೃಹತ್ ಸೇನೆಯ ಹಿಡಿತದಿಂದ ಮುಸ್ಲಿಮ್ ಸೇನೆಯನ್ನು ಹೊರತಂದರು. ಸಾಹಸ, ಪರಾಕ್ರಮ, ಧೀಮಂತಿಕೆಯನ್ನು ಅಪ್ರಾಸಂಗಿಕವಾಗಿ ಬಳಸಿದರೆ ಕೆಲವೊಮ್ಮೆ ಅಪಾಯಕಾರಿಯೆನಿಸುತ್ತದೆ. ರಣಾಂಗಣದಲ್ಲಿ ಯುದ್ಧದ ನರನಾಡಿಯನ್ನು ಅರಿಯುವವನೇ ಅತ್ಯುತ್ತಮ ದಂಡನಾಯಕನಾಗಿದ್ದಾನೆ.

ಮಕ್ಕಾ ವಿಜಯ

ಹಿಜ್ರತ್‌ನ 8ನೇ ವರ್ಷ. ಪ್ರವಾದಿವರ್ಯರು(ಸ) ಮಸ್ಜಿದುನ್ನಬವಿಯಲ್ಲಿ ಕುಳಿತಿದ್ದರು. ಅಷ್ಟರಲ್ಲಿ ಓರ್ವ ವ್ಯಕ್ತಿ ಮಸೀದಿಗೆ ಆಗಮಿಸಿ, ಅತ್ಯಂತ ದುಃಖ-ನೋವಿನ ಸ್ವರದಲ್ಲಿ ಗೋಳಿಡತೊಡಗಿದ,

"ಓ ಅಲ್ಲಾಹ್! ನಾನು ಮುಹಮ್ಮದ್‌ರಿಗೆ(ಸ) ಅವರ ಮತ್ತು ನಮ್ಮ ನಡುವೆ ಏರ್ಪಟ್ಟಿರುವ ಒಪ್ಪಂದವನ್ನು ನೆನಪಿಸಬಯಸುತ್ತೇನೆ. ಓ ಅಲ್ಲಾಹನ ಸಂದೇಶ ವಾಹಕರೇ(ಸ)! ನಮಗೆ ಸಹಾಯ ಮಾಡಿರಿ. ಅಲ್ಲಾಹನ ದಾಸರನ್ನು ಕರೆಯಿರಿ."

ಪ್ರವಾದಿವರ್ಯರು(ಸ) ಸಂಗತಿಯೇನೆಂದು ವಿಚಾರಿಸಿದಾಗ ತಿಳಿದು ಬಂದದ್ದಿಷ್ಟು-ಬನೂಬಕರ್ ಗೋತ್ರದವರು ಬನೂ ಖುಝಾಆದವರನ್ನು ಹರಮ್ ಪರಿಸರದಲ್ಲಿ ಹತ್ಯೆಗೈದರು. ಇದಕ್ಕೆ ಕುರೈಶ್ ಸರದಾರರ ಸಂಪೂರ್ಣ ಸಹಕಾರವಿತ್ತು. ಇದು ಹುದೈಬಿಯಾ ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿತ್ತು. ಹುದೈಬಿಯಾದ ಪ್ರಕಾರ, ಬನೂ ಖುಝಾಆ ಗೋತ್ರವು ಮುಸ್ಲಿಮರೊಂದಿಗೆ ಮೈತ್ರಿ ಸಂಬಂಧ ಹೊಂದಿತ್ತು. ಈ ಮುಸ್ಲಿಮರ ಮಿತ್ರ ಗೋತ್ರದವರನ್ನು ಹರಮ್ ಪರಿಸರದಲ್ಲಿ ಆಡು-ಕುರಿಗಳನ್ನು ತರಿದಂತೆ ತರಿದು ಹಾಕಲಾಗಿತ್ತು.

ಬನೂ ಖುಝಾಆದ ಪರವಾಗಿ ಅಮ್ರ್ ಬಿನ್ ಸಾಲಿಮ್‌ರವರು ಮದೀನಕ್ಕೆ ಬಂದಿದ್ದರು. ಘಟನೆಯ ಸಂಪೂರ್ಣ ವಿವರವನ್ನು ಆಲಿಸಿದ ಪ್ರವಾದಿವರ್ಯರು(ಸ) ಕುರೈಶರಿಗೆ ಮೂರು ಶರತ್ತುಗಳನ್ನು ಸೂಚಿಸುವ ಪತ್ರ ಬರೆಸಿ ಮಕ್ಕಾ ನಗರಕ್ಕೆ ದೂತನನ್ನು ಕಳುಹಿಸಿದರು. ಬನೂ ಖುಝಾಆದ ಮಂದಿಯ ಹತ್ಯೆಗೆ ಪರಿಹಾರ ಧನ ನೀಡಬೇಕು ಅಥವಾ ಬನೂಬಕರ್‌ಗೆ ನೀಡುವ ಬೆಂಬಲವನ್ನು ವಾಪಸು ಪಡೆಯಬೇಕು ಅಥವಾ ಹುದೈಬಿಯಾ ಒಪ್ಪಂದವನ್ನು ಅನೂರ್ಜಿತಗೊಳಿಸಿರುವುದಾಗಿ ಘೋಷಿಸಬೇಕು ಎಂಬುದು ಆ ಶರತ್ತುಗಳಾಗಿದ್ದುವು.

ಕುರೈಶ್ ಸರದಾರರು, ಪ್ರವಾದಿವರ್ಯರ(ಸ) ರಾಯಭಾರಿಯೊಡನೆ, "ನಮಗೆ ಮೊದಲೆರಡು ಶರತ್ತುಗಳು ಒಪ್ಪಿಗೆಯಿಲ್ಲ. ಮೂರನೆಯ ಶರತ್ತನ್ನು ಅಂಗೀಕರಿಸುತ್ತೇವೆ"

ಎಂದುಬಿಟ್ಟರು. ಆದರೆ ರಾಯಭಾರಿಯು ಮದೀನಕ್ಕೆ ಮರಳಿ ಹೋದ ಬಳಿಕ, ಕುರೈಶರಿಗೆ ತಮ್ಮಿಂದಾದ ಪ್ರಮಾದದ ಅರಿವಾಯಿತು. ಅಷ್ಟು ಬೇಗ ಥಟ್ಟನೆ ಉತ್ತರ ನೀಡಿದ್ದು ತಪ್ಪಾಯಿತೆಂದು ಅವರು ಕಳವಳಗೊಂಡರು. ಅವರೆಲ್ಲ ಸೇರಿ ಅಬೂ ಸುಫ್‌ಯಾನ್‌ರನ್ನು ಮದೀನಕ್ಕೆ ಕಳುಹಿಸಿದರು. ಅಬೂಸುಫ್‌ಯಾನ್, ಮದೀನಕ್ಕೆ ಬಂದು ಹುದೈಬಿಯಾ ಒಪ್ಪಂದವನ್ನು ಪುನರೂರ್ಜಿತಗೊಳಿಸಲು ಪ್ರಯತ್ನಿಸಿದರು. ಆದರೆ ಪರಿಸ್ಥಿತಿಯು ಒಪ್ಪಂದ ಅಥವಾ ಒಪ್ಪಂದ ನವೀಕರಣಕ್ಕೆ ಅವಕಾಶವಿಲ್ಲ ಎಂಬಷ್ಟರ ಮಟ್ಟಿಗೆ ಕೈ ಜಾರಿತ್ತು. ಕುರೈಶ್ ಸತ್ಯನಿಷೇಧಿಗಳ ನಿರಂತರ ವಚನಭ್ರಷ್ಟತೆ, ಸಂಚುಗಳು ಮತ್ತು ಇಸ್ಲಾಮ್ ದ್ವೇಷವು ಯಾವುದೇ ರಾಜಿ ಅಥವಾ ಒಪ್ಪಂದಕ್ಕೆ ಅರ್ಹವಾದು ದಾಗಿರಲಿಲ್ಲ. ಅಬೂಸುಫ್‌ಯಾನ್‌ರ ಎಲ್ಲ ಪ್ರಯತ್ನಗಳೂ ವಿಫಲವಾದುವು. ಇತಿಹಾಸವು ತನ್ನ ಪುಟವನ್ನು ತಿರುಗಿಸಿಯಾಗಿತ್ತು... ಸತ್ಯವು ಯಶಸ್ಸಿನ ಬಾನಿನಲ್ಲಿ ಇಣುಕಿ ನೋಡುತ್ತಿತ್ತು... ಮಿಥ್ಯವು ತಣ್ಣಗೆ ಬೆವರತೊಡಗಿತ್ತು...

ಪ್ರವಾದಿವರ್ಯರು(ಸ) ಮಕ್ಕಾದೆಡೆಗೆ ಹೊರಡುವುದಾಗಿ ಘೋಷಿಸಿದರು. ಕೆಲವೇ ದಿನಗಳಲ್ಲಿ ಸಿದ್ಧತೆ ಪೂರ್ಣಗೊಂಡಿತು. ಹಿಜರಿ 8 ರಮಝಾನ್ 10ರಂದು ಪ್ರವಾದಿ ವರ್ಯರು(ಸ) ಹತ್ತು ಸಾವಿರ ಧೀರಶೂರ ಯೋಧರೊಡಗೂಡಿ ಮದೀನದಿಂದ ಮಕ್ಕಾ ದೆಡೆಗೆ ಹೊರಟರು. ಒಂದೊಂದೇ ಹಂತವನ್ನು ದಾಟುತ್ತಾ, ಈ ಪಾವನ ಸೇನೆಯು ಮಕ್ಕಾ ನಗರದ ಸಮೀಪ ಬೀಡು ಬಿಟ್ಟಿತು. ತರುವಾಯ ಪ್ರವಾದಿವರ್ಯರು(ಸ) ಅಬ್ಬಾಸ್ ರೊಡನೆ, ಅಬೂಸುಫ್‌ಯಾನ್‌ರನ್ನು ಮಕ್ಕಾದ ಹೊರವಲಯದ ಗುಡ್ಡಗಳ ಬಳಿ ಕರೆದುಕೊಂಡು ಬರಲು ಸೂಚಿಸಿದರು. ಈ ಮೂಲಕ ಅಬೂಸುಫ್‌ಯಾನ್, ಇಸ್ಲಾಮೀ ಸೇನೆಯ ವೈಭವವನ್ನು ಕಣ್ಣಾರೆ ಕಾಣಲಿ ಎಂಬುದು ಪ್ರವಾದಿವರ್ಯರ(ಸ) ಇಂಗಿತವಾಗಿತ್ತು.

ಹೀಗೆ ಬೀಡು ಬಿಟ್ಟ ಕಡೆ ಮೊದಲು ಅರಬ್ ಗೋತ್ರಗಳು ಮೂಂಚೂಣಿಯಲ್ಲಿ ಬಂದು ನಿಂತವು. ಗಫ್ಫಾರ್ ಗೋತ್ರದ ಧ್ವಜವು ಎಲ್ಲರಿಗಿಂತ ಮುಂದೆ ಹಾರಾಡಿತು. ತರುವಾಯ ಇತರ ಗೋತ್ರಗಳ ಯೋಧರು ಶಸ್ತ್ರಸಜ್ಜಿತರಾಗಿ, ತಕ್ಬೀರ್ ಘೋಷಣೆ ಮೊಳಗಿಸುತ್ತಾ ಮುಂದೆ ಬಂದರು. ಈ ದೃಶ್ಯವನ್ನು ಕಂಡು ಅಬೂಸುಫ್‌ಯಾನ್ ತೀವ್ರ ಭೀತಿಗೊಳಗಾದರು. ತಕ್ಬೀರ್ ಘೋಷಣೆಯು ಗುಡ್ಡಬೆಟ್ಟಗಳೆಡೆಯಲ್ಲಿ ಪ್ರತಿಧ್ವನಿಸುವಾಗ, ಅವರು ರೋಮಾಂಚನಗೊಳ್ಳುತ್ತಿದ್ದರು. ಅವರ ಸ್ಮೃತಿಪಟಲದಲ್ಲಿ ಎಂಟು ಸಂವತ್ಸರಗಳ ಹಿಂದಿನ ವರೆಗಿನ ಘಟನೆಗಳೆಲ್ಲ ಮೂಡಿಬಂದವು... ಆ ಕಾಲದಲ್ಲಿ ಮಕ್ಕಾ ನಗರವು ಮುಸ್ಲಿಮರ ಪಾಲಿಗೆ ತೀರಾ ಸಂಕೀರ್ಣವಾಗಿತ್ತು, ಏಕ ದೇವೋಪಾಸಕರು ಅತ್ಯಂತ ದೀನ ಮತ್ತು ವಿವಶ ಜೀವನ ನಡೆಸಲು ನಿರ್ಬಂಧಿತರಾಗಿದ್ದರು... ಎಲ್ಲಿಯ ವರೆಗೆಂದರೆ ಸ್ವತಃ ಅವರ ನಾಯಕ ಮಕ್ಕಾನಗರ ತೊರೆಯಬೇಕಾಯಿತು. ಆದರೆ ಈಗ? ಮಕ್ಕಾ ನಗರದ

ಹತ್ತಿರವೇ ಇಸ್ಲಾಮಿನ ಧ್ವಜ ಹಾರುತ್ತಿದೆ... ವಿವಶತೆಯು ವಿಜಯವಾಗಿ, ದೈನ್ಯತೆಯು ಪ್ರಾಬಲ್ಯವಾಗಿ ಪರಿವರ್ತನೆಗೊಂಡಿದೆ... ಹೌದು, ಸತ್ಯನಿಷೇಧವು ಅಡಗಿಕೊಳ್ಳಲು ಆಶ್ರಯ ಹುಡುಕುತ್ತಿದೆ! ಮಿಥ್ಯವು ಅಡಿಯಿಂದ ಮುಡಿ ತನಕ ಧೂಳು ಮುಕ್ಕಲು ಸಿದ್ಧವಾಗಿ ನಿಂತಿದೆ!!

ಎಲ್ಲಾ ಗೋತ್ರಗಳ ಸೇನಾ ತುಕಡಿಗಳ ಬಳಿಕ ಅನ್ಸಾರರು ಮುಂದೆ ಬಂದರು. ಖಡ್ಗ, ಈಟಿ, ಬಿಲ್ಲು-ಬಾಣ, ಯುದ್ಧ ಕವಚಗಳು, ಧ್ವಜ... ಎಲ್ಲಕ್ಕಿಂತ ಮಿಗಿಲಾಗಿ ಅವರಲ್ಲಿ ಏಳಲು ಹವಣಿಸುತ್ತಿರುವ ಸಂತೋಷದ ಅಲೆ, ನಿಷ್ಕಳಂಕ ವಿಶ್ವಾಸದ ಉಬ್ಬರ ಮತ್ತು ದೇವನಿಗೆ ಅರ್ಪಿತವಾಗಲು ಸಿದ್ಧವಾಗಿರುವ ಆತ್ಮಗಳು! ಕುರೈಶ್ ಸರದಾರ, ಈ ವ್ಯವಸ್ಥೆಯನ್ನು ಕಂಡು ಕಂಪಿಸಿಹೋದರು. ಅನ್ಸಾರರಾದರೋ ಪ್ರವಾದಿ ಮತ್ತು ಅವರ ಸಂಗಾತಿಗಳಿಗೆ ಸರ್ವಸಹಾಯಕ್ಕೆ ಸಿದ್ಧರಾದವರು... ಅವರೇ ತಾನೇ ಮುಹಾಜಿರರೊಡನೆ ಸ್ವಂತ ಸಹೋದರರಂತೆ ವ್ಯವಹರಿಸಿದವರು! ಇಸ್ಲಾಮಿನ ಪರವಾಗಿ ಸದಾ ಅಪಾಯಕ್ಕೆ ಎದೆಯೊಡ್ಡಲು ಟೊಂಕ ಕಟ್ಟಿ ನಿಂತವರು... ಇಸ್ಲಾಮಿನ ಪ್ರಮುಖ ಯುದ್ಧಗಳಲ್ಲಿ ಅವರು ತೋರಿದ ಆತ್ಮಾರ್ಪಣಾ ಹುಮ್ಮಸ್ಸು ಇತಿಹಾಸದ ಪುಟಗಳಲ್ಲಿ ಈಗಲೂ ಅಚ್ಚಳಿಯದ ವೃತ್ತಾಂತಗಳಿವೆ.

ಎಲ್ಲಾ ಗೋತ್ರಗಳ ಸೇನಾ ತುಕಡಿಗಳು ದಾಟಿ ಹೋದ ಬಳಿಕ ಕೊನೆಯಲ್ಲಿ ಪ್ರವಾದಿ ಮುಹಮ್ಮದ್‌ರವರ(ಸ) ಸವಾರಿಯು ಅಲ್ಲಿನ ಧೂಳ ಕಣಗಳನ್ನು ಚಂದಿರನಂತೆ ಹೊಳೆಯಿಸುತ್ತಿರುವುದಾಗಿ ಕಂಡಿತು. ಝುಬೈರ್ ಬಿನ್ ಅವ್ವಾಮ್‌ರ(ರ) ಕೈಯಲ್ಲಿ ಪ್ರವಾದಿವರ್ಯರ(ಸ) ಧ್ವಜವಿತ್ತು. ಸ್ವತಃ ಪ್ರವಾದಿವರ್ಯರು(ಸ) ವಿನಯ ಮತ್ತು ಕೃತಜ್ಞತಾಭಾವದಿಂದ ಶಿರ ಬಾಗಿದ್ದಾರೆ... ಹಣೆಯು ಒಂಟೆಯ ಜೀನಿಗೆ ತಾಗುವಷ್ಟು ಬಾಗಿದ್ದಾರೆನ್ನಬಹುದು! ಅನ್ಸಾರರ ಸೇನೆಯು ಮಕ್ಕಾ ನಗರದೊಳಗೆ ಪ್ರವೇಶಿಸುವಾಗ, ಅದರ ಧ್ವಜವಾಹಕರಾದ ಸಅದ್ ಬಿನ್ ಉಬಾದಃರವರ ಬಾಯಿಯಿಂದ, "ಇವತ್ತು ಘನಘೋರ ಯುದ್ಧದ ದಿನವಾಗಿದೆ. ಇವತ್ತು ನಮಗೆ ಕಅಬಾವನ್ನು ಧರ್ಮಸಮ್ಮತ ಗೊಳಿಸಲಾಗುವುದು" ಎಂಬ ಉದ್ಗಾರ ಹೊರಟಿತು.

ಈ ಮಾತನ್ನು ಆಲಿಸಿದ ಕುರೈಶರು ಕಂಪಿಸಿ ಹೋದರು. ಪ್ರವಾದಿವರ್ಯರೆಡೆಗೆ(ಸ) ದೃಷ್ಟಿ ಹಾಯಿಸಿದ ಅಬೂಸುಫ್‌ಯಾನ್(ರ) ಹೆದರುತ್ತಲೇ ಆಕ್ಷೇಪವೆತ್ತಿದರು.

"ಉಬಾದರ ಪುತ್ರ ಹೇಳುತ್ತಿರುವುದೇನೆಂದು ಕೇಳಿದಿರಾ?"

ಅನಾಥಮುತ್ತು(ಸ) ಇಂತೆಂದರು, "ಸಅದ್ ಹೇಳಿದ್ದು ಸರಿಯಲ್ಲ. ಇವತ್ತಂತೂ ಕಅಬಾದ ಘನತೆಯ ದಿನವಾಗಿದೆ."

ತರುವಾಯ ಪ್ರವಾದಿವರ್ಯರು(ಸ) ಅನ್ಸಾರ ಸೇನೆಯ ಮುಂದಾಳುತ್ವವನ್ನು ಸಅದ್‌ರಿಂದ ಹಿಂಪಡೆದು ಅವರ ಪುತ್ರನಿಗೆ ವರ್ಗಾಯಿಸಲು ಆದೇಶಿಸಿದರು.

ಕಾಲವು ಮಗ್ಗುಲು ಬದಲಿಸುತ್ತಿದೆ...

ಇತ್ತ ಹರಮ್ ಪರಿಸರದಲ್ಲಿ ಮುಗ್ಧ ಪಾರಿವಾಳಗಳು ಇವತ್ತು ಕಲಬಾಲಯದ ಶುದ್ಧೀಕರಣದ ದಿನವಾಗಿದೆಯೆಂದು ಆನಂದದಿಂದ ಹಾರಾಡುತ್ತಿದ್ದುವು. ಹಿಜ್ರತ್‌ನಿಂದ ಇಂದಿನ ವರೆಗೂ ಹರಮ್ ಪರಿಸರದ ಕಣಕಣವೂ ದುಃಖತಪ್ತವಾಗಿತ್ತು. ಈಗ ಇತಿಹಾಸದ ಪುಟ ಹೊರಳುತ್ತಿದೆ. ನಿರ್ಜೀವ ಕಣಗಳೆಲ್ಲ ಒಕ್ಕೊರಳಿನಿಂದ ಹೇಳುತ್ತಿವೆ,

"ಒಡೆಯಾ! ತಾವು ಇಲ್ಲಿಂದ ಹೋದಾಗಿನಿಂದ, ನಮ್ಮ ಪಾಲಿಗೆ ಆನಂದದ ಒಂದು ಮುಂಜಾವು ಮೂಡಿದ್ದಿಲ್ಲ. ಆ ದಿನಂದಿಂದಲೇ ನಾವು ತಮ್ಮ ದಾರಿ ಕಾಯುತ್ತಿದ್ದೇವೆ. ನಮ್ಮ ಮೇಲೆ ಎಂತೆಂತಹ ಕಠಿಣ ದಿನಗಳು ಹಾದುಹೋದುವು ಮತ್ತು ಎಂತೆಂತಹ ಭಯಾನಕ ಸುದ್ದಿಗಳೂ ಬಂದು ಮುಟ್ಟಿದ್ದುವು. ಒಮ್ಮೆ ಉಹುದ್ ಯುದ್ಧದಲ್ಲಿ ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಹುತಾತ್ಮರಾದರೆನ್ನಲಾಯಿತು, ಮುಸ್ಲಿಮರನ್ನೆಲ್ಲ ಕೊಚ್ಚಿ ಕೊಲ್ಲಲಾಯಿತೆಂಬ ಸುದ್ದಿಯೂ ಬಂತು.

ಇನ್ನೊಮ್ಮೆ ಮದೀನದ ಯಹೂದಿಗಳು ಕಪಟವಿಶ್ವಾಸಿಗಳೊಡಗೂಡಿ ಮುಸ್ಲಿಮರನ್ನು ತರಕಾರಿ ಕೊಚ್ಚಿ ದಂತೆ ಕೊಚ್ಚಿ ಹಾಕಿದರು ಎನ್ನಲಾಯಿತು. ಮತ್ತೊಮ್ಮೆ ಸ್ವತಃ ಅಬ್ದುಲ್ ಮುತ್ತಲಿಬರ ವಂಶದ ಕುಡಿ ಮುರುಟಿ ಹೋಯಿತೆಂಬ ವದಂತಿ ಹಬ್ಬಿತು. ಒಡೆಯಾ! ತಮ್ಮೊಡನೆ ಯುದ್ಧ ಮಾಡಲು ಸತ್ಯನಿಷೇಧಿ ಕುರೈಶರು ಇಲ್ಲಿಂದ ಹಾದು ಹೋಗುವಾಗ, ಅವರಲ್ಲಿದ್ದ ಹುಮ್ಮಸ್ಸು ಕಂಡು ನಾವು ಗಾಬರಿ ಗೊಳಗಾಗುತ್ತಿದ್ದೆವು. ಆಗೆಲ್ಲ ನಾವು ಅಲ್ಲಾಹನಲ್ಲಿ, ತನ್ನ ಸಂದೇಶವಾಹಕರೂ ದುಃಖಿತರ ಮಸೀಹರೂ ಆದ ಅನಾಥ ಮುತ್ತು(ಸ) ಹಾಗೂ ಅವರ ಸಂಗಡಿಗರಿಗೆ ಸಹಾಯ ಮಾಡೆಂದು ಪ್ರಾರ್ಥಿಸುತ್ತಿದ್ದೆವು. ಅಲ್ಲಾಹ್ ನಮ್ಮಂತಹ ಧೂಳಿನ ಕಣಗಳ ಮೊರೆಯನ್ನು ಆಲಿಸಿದನು. ನೋಡಿ, ತಾವಿದೋ ಮರಳಿ ಬಂದಿರಿ! ಕುರೈಶರ ಜಂಭ, ಅಹಂಕಾರದ ಧ್ವಜಗಳು ತನ್ನಿಂತಾನೇ ನೆಲಕಚ್ಚಿದುವು."

ಮಕ್ಕಾ ಪ್ರವೇಶಿಸುತ್ತಿರುವ ಮುಸ್ಲಿಮ್ ಸೇನೆಯನ್ನು ನೋಡಿ ಕುರೈಶರು ತಲ್ಲಣ ಗೊಂಡರು, ಗಾಬರಿಗೊಂಡರು... ಎದುರಿಸುವ ಛಾತಿ ಯಾರಲ್ಲೂ ಇದ್ದಿರಲಿಲ್ಲ... ಅವರ ಪರಾಕ್ರಮವೆಲ್ಲ ಇಂದು ಮರಗಟ್ಟಿ ಹೋದುವು... ಖಡ್ಗಗಳ ಹೊಳಪು ತನ್ನಿಂತಾನೇ ಕುಂದಿ ಹೋಯಿತು... ಅವರ ಧೈರ್ಯ ಉಡುಗಿ ಹೋಯಿತು... ಅರೇಬಿಯದ ಕುಲ ಗೌರವಕ್ಕೆ ಮಂಜು ಕವಿಯಿತು... ಆದರೆ ಈ ಸ್ಥಿತಿಯಲ್ಲೂ ಸತ್ಯನಿಷೇಧಿ ಕುರೈಶರ ಪೈಕಿ ಒಂದು ಗುಂಪು, ಧೈರ್ಯ ವಹಿಸಿ ಮುಸ್ಲಿಮರ ಮೇಲೆ ಆಕ್ರಮಣ ಮಾಡಿತು. ಅದರಿಂದಾಗಿ ಕರಝ್ ಬಿನ್ ಜಾಬಿರ್ ಫಹ್ರೀ ಮತ್ತು ಹಬಶ್ ಬಿನ್ ಅಶ್‌ಅರ್ ಎಂಬೀರ್ವರು ಸಹಾಬಿಗಳು ಶಹೀದಾದರು. ಖಾಲಿದ್ ಬಿನ್ ವಲೀದ್‌ರವರು ಖಡ್ಗ ಎತ್ತಲು ಬಯಸಿರಲಿಲ್ಲ. ಏಕೆಂದರೆ ಸಅದ್ ಬಿನ್ ಉಬಾದರ ಉದ್ಗಾರವು ಪ್ರವಾದಿವರ್ಯರಿಗೆ(ಸ) ರುಚಿಸಿರಲಿಲ್ಲವೆಂಬುದನ್ನು ಅವರು ಆಗಷ್ಟೇ ಕಂಡಿದ್ದರು. ಆದರೆ

ಎದಿರು ಬಣದಿಂದ ಆಕ್ರಮಣ ವಾಗುವಾಗ ಸುಮ್ಮನಿರುವುದು ಎಳ್ಳಷ್ಟೂ ಸರಿಯಲ್ಲ ಎಂದು ಭಾವಿಸಿದ ಖಾಲಿದ್‌ರವರು ಖಡ್ಗಕ್ಕೆ ಖಡ್ಗದಿಂದಲೇ ಉತ್ತರಿಸಿದರು. ಕೊನೆಗೆ ಸತ್ಯನಿಷೇಧಿಗಳು ಕಾಲ್ಕಿತ್ತರು. ಹತರಾ ದವರ ಕಳೇಬರವನ್ನೂ ಬಿಟ್ಟೋಡಿದರು.

ಖಾಲಿದ್ ರೋಷಾಕುಲರಾಗಿದ್ದರು. ಕೈಯಲ್ಲಿದ್ದ ಖಡ್ಗಕ್ಕೆ ಸತ್ಯನಿಷೇಧಿಗಳ ರಕ್ತ ಮೆತ್ತಿ ಕೊಂಡಿತ್ತು. ಅನಾಥಮುತ್ತು(ಸ) ಖಾಲಿದ್‌ರಿಂದ(ರ) ವಿವರಣೆ ಕೇಳಿದರು. ಖಾಲಿದ್ ಮತ್ತು ಇತರ ಸಹಾಬಿಗಳು ಘಟನೆಯನ್ನು ಚಾಚೂತಪ್ಪದೆ ಅರುಹಿದರು. ಯುದ್ಧವನ್ನು ಸತ್ಯ ನಿಷೇಧಿ ಕುರೈಶರೇ ಆರಂಭಿಸಿದ್ದರು. ಅವರೇ ಮೊದಲು ಆಕ್ರಮಿಸಿ ಇಬ್ಬರು ಮುಸ್ಲಿಮರನ್ನು ಕೊಂದರು. ಮುಸ್ಲಿಮರಂತೂ ಅಂತಿಮ ಅಸ್ತ್ರವೆಂಬಂತೆ ಪ್ರತಿರೋಧಕ್ಕಿಳಿದಿದ್ದರು. ಒಂದು ವೇಳೆ ಮುಸ್ಲಿಮರು ಸುಮ್ಮನಿರುತ್ತಿದ್ದರೆ, ಹರಮ್ ಪರಿಸರದಲ್ಲೇ ಬದ್ರ್, ಉಹುದ್‌ಗಳ ಇತಿಹಾಸ ಮರುಕಳಿಸುತ್ತಿತ್ತು. ಅಷ್ಟು ಕೇಳಿದ ಮೇಲೆ ಅನಾಥಮುತ್ತು(ಸ) ಹೇಳಿದರು, "ಅಲ್ಲಾಹನ ಇಂಗಿತವೂ ಅದೇ ಆಗಿತ್ತು."

ಮಕ್ಕಾದಲ್ಲಿ ಖೈಫ್ ಎಂಬಲ್ಲಿ ಪ್ರವಾದಿವರ್ಯರು(ಸ) ತಂಗಿದರು. ಹಾಶಿಮ್ ಮನೆತನದ ಮರ್ದಿತಾವಸ್ಥೆ ಮತ್ತು ಅಸಹಾಯಕತೆಯ ವೃತ್ತಾಂತಗಳನ್ನು ತನ್ನೊಡಲಲ್ಲಿ ಹೊತ್ತ ಕಣಿವೆಯಾಗಿತ್ತು ಖೈಫ್. ಕೆಲವು ವರ್ಷಗಳ ಹಿಂದೆ ಕುರೈಶರು ಹಾಶಿಮ್ ಮನೆತನದ ಮೇಲೆ ಸಾಮೂಹಿಕ ಬಹಿಷ್ಕಾರ ಹೇರಿದ್ದಾಗ, ಈ ಕುಟುಂಬವು ಅನಾಥ ಮುತ್ತು(ಸ) ಸಮೇತ ಆಶ್ರಯ ಪಡೆದಿದ್ದ ಸ್ಥಳವೇ ಖೈಫ್. ನಿನ್ನೆಯ ಬಹಿಷ್ಕೃತ ಮತ್ತು ಬಂಧಿ ಇಂದು ವಿಜಯಿಯಾಗಿ ನಿಂತಿದ್ದಾರೆ. ಅವರನ್ನು ಬಹಿಷ್ಕರಿಸಿದ ಮತ್ತು ಬಂಧಿಸಿ ಟ್ಟಿದ್ದ ಮಂದಿ, ಇಂದು ಅಂದೇ ವ್ಯಕ್ತಿಯ ಕೃಪಾಕಟಾಕ್ಷವನ್ನು ಅಪೇಕ್ಷಿಸುತ್ತಿದ್ದಾರೆ.

ಕಾಲವು ಮಗ್ಗುಲು ಬದಲಿಸುತ್ತಿದೆ... ಅರೇಬಿಯದ ಇತಿಹಾಸದ ಹೊಸ ಅಧ್ಯಾಯ ಆರಂಭವಾಗುತ್ತಿದೆ... ಕುರೈಶ್ ಸತ್ಯನಿಷೇಧಿಗಳ ಘನತೆಯ ನಕ್ಷತ್ರ ಮಂದಗೊಳ್ಳುತ್ತಿದೆ... ಅಲ್ಲ, ಅಸ್ತಮಿಸುತ್ತಿದೆ! ಸತ್ಯವು ಬಹಳ ದಿನ ಮರ್ದಿತಾವಸ್ಥೆಯಲ್ಲಿ ಬಿದ್ದಿರಲಾರದು. ಅಕ್ರಮದ ಹಡಗು ಸದಾ ಒಂದೇ ದಿಕ್ಕಿಗೆ ತೇಲುತ್ತದೆನ್ನಲಾಗದು... ಮಿಥ್ಯಾರಾಧಕರಿಗೆ ಒಂದು ನಿರ್ದಿಷ್ಟ ಕಾಲದ ತನಕ ಸಡಿಲ ಬಿಡಲಾಗುತ್ತದೇನೋ ಸರಿ. ಆದರೆ ಪಾಪದ ಕೊಡ ತುಂಬಿದಾಗ, ಒಂದು ಸಣ್ಣ ತೆರೆಯೂ ಅದನ್ನು ಕೊಚ್ಚಿಕೊಂಡು ಹೋಗುತ್ತದೆ. ಇದು ಲೋಕಾರಂಭದಿಂದಲೂ ನಡೆಯುತ್ತಿರುವ ಪ್ರಕ್ರಿಯೆ. ಇದು ಅಲ್ಲಾಹನ ಕಾನೂನಾಗಿದೆ. ಇದರಲ್ಲಿ ಎಂದೂ ಬದಲಾವಣೆಯಾಗಲಾರದು.

❖ ❖ ❖ ❖

ಹೋಗಿ, ನೀವೆಲ್ಲರೂ ಸ್ವತಂತ್ರರು!

ರಸೂಲುಲ್ಲಾಹ್(ಸ) ಕಅಬಾ ಭವನದ ಬಳಿ ಬಂದರು. ಹರಮ್‌ನ ಗೋಡೆಗಳು ಅವರಿಗೆ ಸ್ವಾಗತ ಕೋರಿದವು.

"ಓ ತಾಯಿಫ್ ಮತ್ತು ಮಕ್ಕಾಗಳಿಂದ ಮರ್ದಿಸಲ್ಪಟ್ಟ ಪ್ರವಾದಿವರ್ಯರೇ, ತಮ್ಮ ಮೇಲೆ ಇದೋ ಸಲಾಮ್! ಸಲಾಮ್, ಓ ಉಹುದ್‌ನಲ್ಲಿ ಗಾಯಗೊಂಡವರೇ ತಮಗೆ ಸಲಾಮ್!! ಸ್ವತಃ ಹಸಿದಿದ್ದು ಅನ್ಯರಿಗೆ ಉಣಬಡಿಸುವ ಓ ದಾನಶ್ರೇಷ್ಠರೇ ಸುಸ್ವಾಗತ!!! ಕಂದಕದ ಪಾವನ ಕಾರ್ಮಿಕರೇ ಸ್ವಾಗತ, ತಮಗಿದೋ ಸ್ವಾಗತ!!! ಮಾನವ ಕುಲದ ವಿಮೋಚಕರೇ, ಸಲಾಮ್! ಅಸಹಾಯಕರಾಗಿ ಮಕ್ಕಾದಿಂದ ವಲಸೆ ಹೋದ ಓ ಸರ್ವ ಲೋಕಗಳ ಸರದಾರರೇ, ಅಭಿವಂದನೆಗಳು!!"

ಕಅಬಾಲಯದ ಗೋಡೆಗಳನ್ನು, ಪ್ರವಾದಿ ಇಬ್ರಾಹೀಮರು(ಅ) ತಮ್ಮ ಪುತ್ರ ಪ್ರವಾದಿ ಇಸ್ಮಾಈಲರ(ಅ) ಜತೆಗೂಡಿ ಎತ್ತರಿಸಿದ ಆ ಕಅಬಾ... ಕೇವಲ ಜಗತ್ತಿನ ಏಕೈಕ ಪ್ರಭುವಿನ ಆರಾಧನೆಗಾಗಿ ಕಟ್ಟಿದ ಆ ಗೋಡೆಗಳನ್ನು ಅಜ್ಞಾನಿಗಳಾದ ಕುರೈಶರು ಮೂರ್ತಿ ಪೂಜೆಯ ತಾಣವನ್ನಾಗಿ ಮಾಡಿದ್ದರು. ಅಲ್ಲಲ್ಲಿ ಕಲ್ಲು, ಕಟ್ಟಿಗೆಗಳಿಂದ ರಚಿಸಿದ ವಿಗ್ರಹ ಗಳನ್ನು ಪ್ರತಿಷ್ಠಾಪಿಸಿದ್ದರು. ಗೋಡೆಗಳಲ್ಲಿ ಭಾವಚಿತ್ರಗಳಿದ್ದುವು. ಅನಾಥಮುತ್ತು(ಸ) ಕಅಬಾ ಪ್ರವೇಶಿಸಿ, ಕೈಯಲ್ಲಿದ್ದ ಬೆತ್ತದಿಂದ ಒಂದೊಂದು ವಿಗ್ರಹದ ಮೇಲೆ ಹೊಡೆದರು ಮತ್ತು ಈ ಕುರ್‌ಆನ್ ವಚನವನ್ನು ಪಠಿಸುತ್ತಲಿದ್ದರು,

"ಸತ್ಯವು ಬಂದು ಬಿಟ್ಟಿತ್ತು. ಮಿಥ್ಯ ಅಳಿದು ಹೋಯಿತು. ಮಿಥ್ಯವು ಅಳಿದು ಹೋಗಲೇಬೇಕಾಗಿದೆ." (ಪವಿತ್ರ ಕುರ್‌ಆನ್, **17:81**)

ವಿಗ್ರಹಗಳು ಒಡೆದೊಡೆದು ನೆಲಕ್ಕೆ ಬೀಳತೊಡಗಿದವು. ಯಾವ ಕಲ್ಲು ಮಣ್ಣುಗಳ ಮುಂದೆ ನೂರಾರು ವರ್ಷಗಳಿಂದ ಕುರೈಶರು ತಲೆ ಬಾಗುತ್ತಿದ್ದರೋ ಅವುಗಳೆಲ್ಲ ನೆಲ ಕಚ್ಚುತ್ತಿವೆ. ಈ ದೃಶ್ಯವನ್ನು ಕಂಡು ಹಜರುಲ್ ಅಸ್ವದ್ ಮುಗುಳ್ನಕ್ಕಿತು. ಝಮ್ ಝಮ್ ಬಾವಿಯು ಆನಂದಾತಿರೇಕದಿಂದ ಉಬ್ಬರಿಸಿತು. ಹತೀಮ್* ಸಂತೋಷದಿಂದ ತೇಲಾಡಿತು. ಮಕ್ಕಾದ ಸತ್ಯನಿಷೇಧಿಗಳು ಊಹೆಯಾಧಾರದಲ್ಲಿ ದೇವ ಪ್ರವಾದಿಗಳ ಮತ್ತು ದೇವಚರರ ಚಿತ್ರಗಳನ್ನು ಕಅಬಾದ ಗೋಡೆಗಳಲ್ಲಿ ಬಿಡಿಸಿದ್ದರು. ಅವುಗಳ ಪೈಕಿ ಪ್ರವಾದಿ ಇಬ್ರಾಹೀಮ್(ಅ) ಮತ್ತು ಪ್ರವಾದಿ ಇಸ್ಮಾಈಲ್‌ರ(ಅ) ಚಿತ್ರಗಳೂ ಇದ್ದುವು. ಅವರ ಕೈಯಲ್ಲಿ ಜೂಜಿನ ಬಾಣಗಳು ಇರುವಂತೆ ಚಿತ್ರಿಸಲಾಗಿತ್ತು. ಅನಾಥಮುತ್ತು(ಸ) ಆ ಚಿತ್ರಗಳನ್ನು ಅಳಿಸುತ್ತಾ ಹೇಳಿದರು, "ಪ್ರವಾದಿಗಳು ಎಂದಿಗೂ ಜೂಜಾಡಲಾರರು ಎಂಬುದು ಈ ಜನಾಂಗಕ್ಕೆ ತಿಳಿದಿಲ್ಲ."

ಮಕ್ಕಾದೊಳಗೆ ಪ್ರವೇಶಿಸುವಾಗಲೇ ಅನಾಥಮುತ್ತು(ಸ) ಹೀಗೆ ಘೋಷಣೆ ಮಾಡಿಸಿದ್ದರು,

1. ಶಸ್ತ್ರಾಸ್ತ್ರ ಕೆಳಗಿರಿಸಿದ ವ್ಯಕ್ತಿಗೆ ಅಭಯವಿದೆ.

* ಕಅಬಾ ಭವನದ ಪಶ್ಚಿಮ ಭಾಗದ ಗೋಡೆಗೆ ತಾಗಿಕೊಂಡಿರುವ ಅರ್ಧ ವೃತ್ತಾಕಾರದ ಅರೆಗೋಡೆಯ ಒಳ ಭಾಗಕ್ಕೆ ಹತೀಮ್ ಎನ್ನಲಾಗುತ್ತದೆ. (ಅನು)

2. ತನ್ನ ಮನೆಯ ಬಾಗಿಲು ಮುಚ್ಚಿದವನಿಗೆ ಅಭಯವಿದೆ ಮತ್ತು

3. ಅಬೂಸುಫಿಯಾನರ(ರ) ಮನೆಯಲ್ಲಿ ಆಶ್ರಯ ಪಡೆದವರಿಗೂ ಅಭಯವಿದೆ.

ಸತ್ಯನಿಷೇಧಿಗಳಾಗಿದ್ದ ಕುರೈಶರು ದೇವ ಸಂದೇಶವಾಹಕರ(ಸ) ಮುಂದೆ ನಾಚಿಕೆಯಿಂದ ತಲೆತಗ್ಗಿಸಿ, ಭಯ ಮತ್ತು ದುಗುಡ ಮಿಶ್ರಿತ ಮುಖ ಹೊತ್ತು ಜಮಾಯಿಸಿದರು. ಇವತ್ತು ನಮಗೆ ಉಳಿಗಾಲವಿಲ್ಲ ಎಂದು ಅವರ ಮನ ನುಡಿಯುತ್ತಿತ್ತು... ನಮ್ಮ ಒಂದೊಂದು ಅಕ್ರಮಕ್ಕೂ ಪ್ರತೀಕಾರ ಪಡೆಯಲಾಗುವುದು, ಪ್ರತಿಯೊಬ್ಬ ಹುತಾತ್ಮ ಮುಸ್ಲಿಮನ ರಕ್ತ ಪ್ರತೀಕಾರವನ್ನು ನಮ್ಮಿಂದ... ಅಯ್ಯೋ! ನಮ್ಮೆಲ್ಲ ಕುಕೃತ್ಯಗಳಿಗೂ ಇಂದು ಶಿಕ್ಷೆ ಪಡೆಯಬೇಕಾದೀತು... ಅಬೂಜಂದಲ್‌ರ(ರ) ಬೆನ್ನಿನಿಂದ ಹಿಡಿದು ಬಿಲಾಲ್ ಹಬಶಿಯ(ರ) ಎದೆಯ ವರೆಗೆ ನಾವು ಎಷ್ಟೆಲ್ಲ ದೇಹಗಳಿಗೆ ಗಾಯವನ್ನುಂಟು ಮಾಡಿದ್ದೆವು ಮತ್ತು ಉರಿಸಿದ್ದೆವು!! ನಮ್ಮ ದೌರ್ಜನ್ಯಗಳಿಂದಾಗಿಯಲ್ಲವೇ ಅಬ್ದುಲ್ಲಾರ ಪುತ್ರ ಮುಹಮ್ಮದ್(ಸ) ಮನೆ ತೊರೆಯಬೇಕಾದದ್ದು! ಅವರು ಮದೀನ ತಲುಪಿದ ಬಳಿಕವೂ ನಾವು ಅವರನ್ನು ಒಂದು ದಿನವಾದರೂ ಸಮಾಧಾನದಿಂದಿರಲು ಬಿಟ್ಟಿದ್ದೆವಾ!? ನಮ್ಮ ಸರದಾರ ಅಬೂಸುಫ್‌ಯಾನ್‌ರ(ರ) ಪತ್ನಿಯು ಮುಹಮ್ಮದ್‌ರ(ಸ) ಚಿಕ್ಕಪ್ಪ ಹಮ್‌ಝರ(ರ) ಕರುಳು ಕಿತ್ತು ಜಗಿದುಗುಳಿದ್ದರು! ಅಬ್ದುಲ್ಲಾರ ಪುತ್ರ ಅನಾಥಮುತ್ತು(ಸ) ಗಾಯಗೊಂಡದ್ದು ನಮ್ಮದೇ ವ್ಯಕ್ತಿ ಇಬ್ನು ಕುಮಿಯ್ಯನ ಏಟಿನಿಂದಲ್ಲವೇ!?

ಆದರೆ ಲೋಕಾನುಗ್ರಹಿ(ಸ) ಹೇಳಿದರು,

"ನಿಮ್ಮ ಬಗ್ಗೆ ಯಾವುದೇ ವಿಚಾರಣೆಯಿಲ್ಲ. ಹೋಗಿ, ನೀವೆಲ್ಲ ಸ್ವತಂತ್ರರು."

ಕೊಲೆಗಾರರನ್ನು ನೇಣುಗಂಬಕ್ಕೇರಿಸಿ, ಕೆಳಗಿಳಿಸಿದಂತಾಯಿತು; ಖಡ್ಗಗಳನ್ನು ಕೊರಳಿನ ಹತ್ತಿರಕ್ಕೆ ತಂದು ಹಿಂದಕ್ಕೆಳೆದಂತಾಯಿತು; ಮರಣದ ದೇವಚರ ಶ್ವಾಸನಾಳದ ವರೆಗೆ ಕೈ ತಂದ ಬಳಿಕ ಅವರನ್ನು ತಡೆದಂತಾಯಿತು! ಮಾನವ ಇತಿಹಾಸದಾದ್ಯಂತ ಇಂತಹ ಕ್ಷಮೆಯ ಬೇರೆ ಉದಾಹರಣೆಯನ್ನು ಕಾಣಲು ಸಾಧ್ಯವಿಲ್ಲ. ಇದು ಲೋಕಾನುಗ್ರಹಿಯ(ಸ) ಹೊರತು ಬೇರೆ ಯಾರಿಂದಲೂ ಸಾಧ್ಯವಾಗುವಂತಹದ್ದಲ್ಲ, ಈ ಗುಣ ವಿಶೇಷತೆಯು ಅವರಿಗಷ್ಟೇ ಸೀಮಿತವಾಗಿತ್ತು.

ರಕ್ತದಾಹಿಗಳಿಗೆ ಶಾಂತಿಮಂತ್ರ ಬೋಧಿಸಿದವರಿಗೆ ಸಲಾಮ್
ಬಯ್ಗುಳ ತಿಂದು ಕ್ಷಮಿಸಿ ಪ್ರಾರ್ಥಿಸಿದವರಿಗೆ ಸಲಾಮ್
ಶತ್ರುಗಳಿಗೆ ಜೀವನದ ಧ್ಯೇಯ ಕಲಿಸಿದವರಿಗೆ ಸಲಾಮ್
ಅಬೂಸುಫ್‌ಯಾನ್‌ರಂಥವರಿಗೆ ಅಭಯ ನೀಡಿದವರಿಗೆ ಸಲಾಮ್
ಪ್ರೀತಿ-ಅನುರಾಗ, ಅನುಕಂಪದ ವ್ಯಾಖ್ಯಾನಕ್ಕೆ ಸಲಾಮ್
ಖಡ್ಗ ಪ್ರಹಾರಕ್ಕೆ ಪ್ರತಿಯಾಗಿ ಪುಷ್ಪ ವರ್ಷಿಸಿದವರಿಗೆ ಸಲಾಮ್

ಸ್ವರ್ಣ-ಬೆಳ್ಳಿಗಳ ಭಂಡಾರ ಶೇಖರಿಸದ ನಾಯಕರಿಗೆ ಸಲಾಮ್
ತೇಪೆಯ ಚದ್ದರವನ್ನೇ ಹಾಸಿಗೆಯಾಗಿಸಿದವರಿಗೆ ಸಲಾಮ್
ಯಾರ ಹೆಸರು ಮನಶ್ಶಾಂತಿಗೆ ಹೇತುವೋ ಅವರಿಗೆ ಸಲಾಮ್
ಯಾರ ಗುಣದ ವ್ಯಾಖ್ಯಾನ ಕುರ್‌ಆನೋ ಅವರಿಗೆ ಸಲಾಮ್

ಒಂದು ಸುದೀರ್ಘ ಕಾಲದ ಬಳಿಕ 'ಸಫಾ'ದ ಅದೃಷ್ಟ ಖುಲಾಯಿಸಿತು. ಅನಾಥ ಮುತ್ತು(ಸ) ಸಫಾ ಬೆಟ್ಟದ ಶಿಖರಕ್ಕೇರಿದರು ಮತ್ತು ಮಕ್ಕಾವಾಸಿಗಳಿಂದ ಇಸ್ಲಾಮಿನ ಬೈಅತ್ (ಅನುಸರಣೆಯ ಕರಾರು) ಪಡೆಯತೊಡಗಿದರು. ಇಸ್ಲಾಮ್ ಸ್ವೀಕಾರ ಮತ್ತು ಕರಾರಿನ ಈ ಪ್ರಕ್ರಿಯೆಯು ಬಹಳ ಹೊತ್ತಿನ ತನಕ ಜಾರಿಯಲ್ಲಿತ್ತು. ಮನಮಲಿನರಾಗಿದ್ದವರ ಆತ್ಮಸಂಸ್ಕರಣೆಯಾಗುತ್ತಿತ್ತು... ಹೃದಯಗಳ ಕಲ್ಮಷವು ವಿಶ್ವಾಸದ ಅಮೃತದಿಂದ ತೊಲಗಿ ಬೆಳಗಿತು... ಚಾರಿತ್ರ್ಯ-ನಡತೆಗಳೆಲ್ಲ ಬದಲಾಗುತ್ತಿವೆ... ಅಜ್ಞಾನಜನ್ಯ ಅಹಂಕಾರ-ಕುಲ ಮಹಿಮೆಗಳೆಲ್ಲ ಅಳಿದು ಹೋಗುತ್ತಿವೆ... ಈ ಸತ್ಯ ಸ್ವೀಕಾರ ಮತ್ತು ಕರಾರುಗಳಲ್ಲಿ ಸ್ತ್ರೀಯರೂ ಪುರುಷರಿಗೆ ಸಮಾನರಾಗಿ ಭಾಗಿಯಾದರು. ಇಂದು ಅವರ ಗುಲಾಮಗಿರಿಯ ಸಂಕೋಲೆಗಳೂ ಕಳಚಿ ಬೀಳುತ್ತಿವೆ. ಅವರ ಅದೃಷ್ಟ ತಾರೆಯು ಗೌರವ, ಸ್ಥಾನಮಾನ ಮತ್ತು ಆದರದ ಆಗಸದಲ್ಲಿ ಮಿನುಗಲಾರಂಭಿಸಿದೆ... ಇದೆಲ್ಲವೂ ಒಳಿತುಗಳಲ್ಲಿ ಸಾಟಿ ಯಿಲ್ಲದ, ಸಚ್ಚಾರಿತ್ರ್ಯದಲ್ಲಿ ಅದ್ವಿತೀಯರಾದ ಮುಹಮ್ಮದರ್ರಸೂಲುಲ್ಲಾಹ್‌ರ(ಸ) ಕಾರಣ ದಿಂದಾಗಿತ್ತು. ಪ್ರವಾದಿವರ್ಯರ(ಸ) ಜೀವನ ಚರಿತ್ರೆಯಲ್ಲಿ, ಅವರೆಂದೂ ವಿವಾಹ ನಿಷಿದ್ಧರಲ್ಲದ ಸ್ತ್ರೀಯರ ಕೈ ಮುಟ್ಟಿದ ಉದಾಹರಣೆಯಿಲ್ಲ. ಆದ್ದರಿಂದ ಮಕ್ಕಾ ವಿಜಯದ ದಿನ ಸ್ತ್ರೀಯರು ಅನುಸರಣಾ ಕರಾರು ಮಾಡಲು ಮುಂಬಂದಾಗ, ಪ್ರವಾದಿವರ್ಯರು(ಸ) ಒಂದು ಬಟ್ಟಲಿನಲ್ಲಿ ನೀರಿಗೆ ಕೈ ಮುಳುಗಿಸಿ ತೆಗೆಯುತ್ತಿದ್ದರು. ಸ್ತ್ರೀಯರು ಬಳಿಕ ಅದರಲ್ಲಿ ಬೆರಳು ಮುಳುಗಿಸುತ್ತಿದ್ದರು. ಇದು ಸ್ತ್ರೀಯರ ಬೈಅತ್‌ನ ವಿಧಾನವಾಗಿತ್ತು.

ಮಕ್ಕಾದಲ್ಲಿ

ಮಕ್ಕಾದಲ್ಲಿ ಕೆಲವು ಮಂದಿ ಸತ್ಯನಿಷೇಧಿಗಳ ಹೃದಯಗಳು ಶುದ್ಧವಾಗಲು ಇನ್ನೂ ಉಳಿದಿತ್ತು. ಅಂದರೆ ಕೆಲವರ ಮನಸ್ಸುಗಳಲ್ಲಿ ಇನ್ನೂ ದೋಷಗಳಿದ್ದುವು. ಮಕ್ಕಾ ವಿಜಯದ ಮರುದಿನ ನಡೆದ ಘಟನೆಯಿದು- ಅನಾಥಮುತ್ತು(ಸ) ಕಅಬಾದ ತವಾಫ್ ಮಾಡುತ್ತಿದ್ದರು. ಉಮೈರ್‌ರ ಕಿಡಿಗೇಡಿ ಮಗ ಫಝಾಲ ಹೊಂಚು ಹಾಕಿ ಕುಳಿತಿದ್ದರು. ಹರಮ್‌ನಲ್ಲಿ ಅಷ್ಟೇನೂ ಜನಜಂಗುಳಿ ಇಲ್ಲದಿರುವುದನ್ನು ಆತ ತಿಳಿದುಕೊಂಡಿದ್ದನು. ಅಲ್ಲೊಬ್ಬ, ಇಲ್ಲೊಬ್ಬ ನಡೆದಾಡುತ್ತಿದ್ದರು. ದೇವಸಂದೇಶವಾಹಕರ(ಸ) ಬಳಿ ಯಾವುದೇ ಆಯುಧವೂ ಇದ್ದಿರಲಿಲ್ಲ. ಅವರು ಈಗ ಸಂಪೂರ್ಣ ನಿರಾಯುಧರಾಗಿದ್ದಾರೆ. ಇಂತಹ ಅವಕಾಶ ಇನ್ನೆಂದೂ ದೊರಕಲಾರದು... ಈಗಲೇ ಅವರ ಮೇಲೆ ಮುಗಿಬಿದ್ದು, ಅವರ ಕತೆ ಮುಗಿಸುತ್ತೇನೆ... ಈ ಇಸ್ಲಾಮ್ ಮತ್ತು ಮುಸ್ಲಿಮರ ಉತ್ಸಾಹವೆಲ್ಲ ಇವರನ್ನೇ ನೆಚ್ಚಿ ಕೊಂಡಿದೆಯಲ್ಲ... ಮದುಮಗನೇ ಇಲ್ಲದಿದ್ದರೆ, ಮದುವೆಯ ದಿಬ್ಬಣ ದಿಕ್ಕಾಪಾಲಾಗಿ ಬಿಡುತ್ತದೆ... ಈ ವ್ಯಕ್ತಿ ನಮ್ಮ ಪೂರ್ವಿಕ ಘನತೆಯ ಕುರುಹುಗಳನ್ನೆಲ್ಲ ನುಚ್ಚುನೂರು ಮಾಡಿ ಬಿಟ್ಟಿದ್ದಾರಲ್ಲ. ಆಹ್! ಕುರೈಶರ ಘನತೆ ಕುಂದಿ ಹೋಯಿತೆಂದು ಕುಸೈ ಮತ್ತು ಅದ್‌ನಾನ್‌ರ ಆತ್ಮಗಳು ಚಡಪಡಿಸುತ್ತಿರಬಹುದು...

ಖಡ್ಗವನ್ನು ತನ್ನ ಜುಬ್ಬದಲ್ಲಿ ಅಡಗಿಸಿಟ್ಟಿದ್ದ ಫಝಾಲ, ಪ್ರವಾದಿವರ್ಯರನ್ನು ಸಮೀಪಿಸಿದಾಗ, "ಇದು ಯಾರು ಫಝಾಲ ಬರುತ್ತಿರುವುದಾ?" ಎಂದು ಅನಾಥಮುತ್ತು(ಸ) ಕೇಳಿಬಿಟ್ಟರು. "ಹೌದು, ನಾನು ಫಝಾಲ" ಅನಾಯಾಸವಾಗಿ ಫಝಾಲರ ಬಾಯಿಯಿಂದ ಹೊರಟಿತು.

"ಈಗಷ್ಟೇ... ನೀನು ಮನದಲ್ಲಿ ಏನೆಂದು ಹಂಚಿಕೆ ಹಾಕುತ್ತಿದ್ದೆ?" ಅನಾಥಮುತ್ತು(ಸ) ನಿರ್ವಿಕಾರವಾಗಿ ಕೇಳಿದರು.

"ಏನೂ ಇಲ್ಲ" ಕಂಪಿಸುತ್ತಿರುವ ಸ್ವರದಲ್ಲಿ ಫಝಾಲ ಅಂದರು, "ನಾನಂತೂ ಅಲ್ಲಾಹನನ್ನು ಸ್ಮರಿಸುತ್ತಿದ್ದೆ."

ಫಝಾಲರ ಈ ಉತ್ತರದಿಂದ ಪ್ರವಾದಿವರ್ಯರಿಗೆ(ಸ) ನಗು ಬಂತು. ಅವರೆಂದರು, "ಅಲ್ಲಾಹನಲ್ಲಿ ಕ್ಷಮೆ ಯಾಚಿಸು."

ತರುವಾಯ ಅವರು ಫರ್ಝಾಲರ ಎದೆಯ ಮೇಲೆ ತಮ್ಮ ಅಮೃತ ಹಸ್ತವನ್ನಿಟ್ಟರು. ಫರ್ಝಾಲ ಹೇಳುತ್ತಾರೆ, "ಅದಕ್ಕೆ ಮುಂಚೆ ನನ್ನ ಮನಸ್ಸಿನಲ್ಲಿ ಪ್ರವಾದಿಯವರ(ಸ) ಬಗ್ಗೆ ದ್ವೇಷವಿತ್ತು. ಅವರ ಕಾರಣದಿಂದಾಗಿಯೇ ಖುರೈಶರ ಪಾರಂಪರಿಕ ಘನತೆಗೆ ಕುಂದುಂಟಾಗಿತ್ತೆಂದು ನನಗೆ ಅಸಮಾಧಾನವಿತ್ತು. ಆದರೆ ಅವರು ತಮ್ಮ ಅಮೃತ ಹಸ್ತವನ್ನು ನನ್ನೆದೆಯ ಮೇಲಿಟ್ಟಾಗ ನನ್ನ ಹೃದಯವು ಶಾಂತಿ-ಸಮಾಧಾನದ ಖಜಾನೆಯಾಗಿ ಮಾರ್ಪಟ್ಟಿತು. ಅವರ ಮೇಲಿನ ಪ್ರೀತಿ-ವಿಶ್ವಾಸದ ಸಂಚಾರವು ನನ್ನ ರಕ್ತನಾಳಗಳಲ್ಲಿ ಹರಿಯಿತು.

ಮಕ್ಕಾದ ಯುವಕ ಫರ್ಝಾಲರ ರಾತ್ರಿಗಳು ಮದಿರೆ-ಮಾನಿನಿಯರ ಮಧ್ಯೆಯೇ ಕಳೆಯುತ್ತಿತ್ತು. ಮದ್ಯಪಾನಗೈದು, ನಶೆಯೇರಿದಾಗ ವಿಷಯಲಂಪಟತನಕ್ಕಿಯುತ್ತಿದ್ದ ಚಿತ್ತವು, ಪರಿಶುದ್ಧತೆಯಿಂದ ಹರದಾರಿ ದೂರವುಳಿದಿತ್ತು. ನೃತ್ಯ-ಗಾಯನ, ಪಾನಪಾತ್ರೆ, ಅನ್ಯಸ್ತ್ರೀಯರ ಸಂಗ, ಜೂಜಾಟ, ಅಶ್ಲೀಲ ಮಾತು ಒಟ್ಟಿನಲ್ಲಿ,.

'ಬಾಳಲಿಕ್ಕಿದೆ ಇನ್ನೂ ಜಗದಲ್ಲಿ
ಮುಳುಗೇಳೋಣ ಮದ್ಯದ ಕಡಲಲ್ಲಿ'
ಎಂಬಂತಾಗಿತ್ತು ಅವರ ಜೀವನ.

ಫರ್ಝಾಲ, ಪ್ರವಾದಿವರ್ಯರ(ಸ) ಸನ್ನಿಧಿಯಿಂದ ಮನೆಗೆ ಮರಳುವಾಗ, ದಾರಿಯಲ್ಲಿ ಅವರ ಪ್ರೇಯಸಿಯ ಮನೆ ಸಿಗುತ್ತದೆ. ಆಕೆ ದೂರದಿಂದಲೇ ಫರ್ಝಾಲರ ಮುಖಭಾವ ಬದಲಾಗಿರುವುದನ್ನು ಕಂಡಳು. ವಿಷಯಲಂಪಟ ದೃಷ್ಟಿಯು ಕೆಳಗಿಳಿದಿತ್ತು... ನಾಚಿಕೆಯ ಭಾರ ಹೊತ್ತು! ನೆಲಕ್ಕೆ ಬಿದ್ದರೆ ಏಳಲಾರೆನೆಂಬಂತೆ! ಫರ್ಝಾಲ ತನ್ನನ್ನು ಕಣ್ಣೆತ್ತಿಯೂ ನೋಡುತ್ತಿಲ್ಲವೆಂಬುದನ್ನು ಗ್ರಹಿಸಿದ ಆಕೆಗೆ ಪಿಚ್ಚೆನಿಸಿತು. ತನ್ನನ್ನು ದಾಟಿ ಹೋಗುವಾಗ ಫರ್ಝಾಲರನ್ನು ಸ್ವಯಂ ತಡೆದು ಅಂದಳು,

"ಫರ್ಝಾಲ, ನನ್ನೊಂದು ಮಾತು ಆಲಿಸಿ ಹೋಗು."

ಫರ್ಝಾಲ ದೃಷ್ಟಿ ತಗ್ಗಿಸಿಯೇ ಹೇಳಿದರು, "ಇಲ್ಲ! ಇಲ್ಲ... ಅಲ್ಲಾಹ್ ಮತ್ತು ಸಂದೇಶವಾಹಕರು(ಸ) ನನ್ನನ್ನು ಅದರಿಂದ ತಡೆದಿದ್ದಾರೆ." ಅಲ್ಲಾಹು ಅಕ್ಬರ್! ಆ ವಿಷಯಾಸಕ್ತಿಯ ದೃಷ್ಟಿಯೆಲ್ಲಿ, ಈ ಸ್ವಚ್ಛ ನಿರ್ಮಲ, ಲಜ್ಜಾಭರಿತ ದೃಷ್ಟಿಯೆಲ್ಲಿ!

ಪ್ರವಾದಿವರ್ಯರು(ಸ) ಮಕ್ಕಾದಲ್ಲಿ ತಂಗಿದ್ದ ಅದೇ ಸಂದರ್ಭದಲ್ಲಿ, ಅಲ್ಲಿ ಇನ್ನೊಂದು ಘಟನೆ ಸಂಭವಿಸಿತು. ಅಸ್ವದ್ ಬಿನ್ ಅಬ್ದುಲ್ಲಾ ಎಂಬ ಕುಲೀನ ವ್ಯಕ್ತಿಯ ಮಗಳು ಫಾತಿಮಾ ಒಂದು ಭಾನಗಡಿ ಮಾಡಿಬಿಟ್ಟಳು. ಆಕೆ ಕೆಲವು ಮನೆಗಳಿಗೆ ತೆರಳಿ ತನ್ನ ಬಂಧುಮಿತ್ರರ ಹೆಸರು ಹೇಳಿ ಕೆಲವು ಆಭರಣಗಳನ್ನು ಸಂಗ್ರಹಿಸಿದಳು. ಬಳಿಕ ಅದನ್ನು ಮಾರಿದಳು. ಈ ಪ್ರಕರಣವು ಪ್ರವಾದಿವರ್ಯರ(ಸ) ಬಳಿಗೆ ಬಂತು. ಜನರು ಸಮಾಲೋಚಿಸಿ, ಉಸಾಮಾ ಬಿನ್ ಝೈದ್‌ರೊಡನೆ(ರ) ಹೀಗೆ ಅರಿಕೆ ಮಾಡಿಕೊಂಡರು, "ಫಾತಿಮಾ ಬಿಂತಿ ಅಸ್ವದ್‌ರನ್ನು ದೋಷಮುಕ್ತಗೊಳಿಸಲು ನೀವು ದೇವಸಂದೇಶವಾಹಕರಲ್ಲಿ ಶಿಫಾರಸು

ಮಾಡಿರಿ. ಆ ಮುಗ್ಧೆಯಿಂದ ತಪ್ಪು ಸಂಭವಿಸಿತು. ಮಕ್ಕಾದ ಪರಿಸರವು ಹಾಗೆಯೇ ಆಗಿದೆಯಷ್ಟೇ." ಉಸಾಮ(ರ) ಅದಕ್ಕೊಪ್ಪಿದರಲ್ಲದೆ, ಪ್ರವಾದಿವರ್ಯರಲ್ಲಿ(ಸ) ಶಿಫಾರಸನ್ನೂ ಮಾಡಿದರು. ಅದನ್ನು ಕೇಳುತ್ತಲೇ ಪ್ರವಾದಿವರ್ಯರ(ಸ) ಮುಖಾರವಿಂದವು ಕೋಪದಿಂದ ಕೆಂಪೇರಿತು. "ನೀನು ದೇವನ ವಿಧಿಗಳ ಬಗ್ಗೆ ಶಿಫಾರಸನ್ನು ಮಾಡಲು ಬಂದಿರುವೆಯಾ?" ಎಂದು ಖಾರವಾಗಿಯೇ ಕೇಳಿದರು.

ತಮ್ಮ ಈ ಕೃತ್ಯಕ್ಕೆ ಉಸಾಮ(ರ) ತೀರಾ ಲಜ್ಜಿತರಾದರು. ತಕ್ಷಣವೇ ಅವರು ಪಶ್ಚಾತ್ತಾಪ ಪಡುತ್ತಾ ಹೇಳಿದರು, "ಯಾ ರಸೂಲುಲ್ಲಾಹ್! ನನ್ನ ಕ್ಷಮೆಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿರಿ. ನನ್ನ ಪಶ್ಚಾತ್ತಾಪ ಸ್ವೀಕರಿಸಿರಿ."

ಅಂದೇ ಸಂಜೆ ಹೊತ್ತಲ್ಲಿ ಪ್ರವಾದಿವರ್ಯರು(ಸ) ಜನರನ್ನು ಸೇರಿಸಿ ಹೀಗೆಂದರು,

"ಗತ ಸಮುದಾಯಗಳ ಅಧಃಪತನಕ್ಕೆ ಒಂದು ಕಾರಣ, ಅವರ ಪೈಕಿ ಕುಲೀನರು ಕಳ್ಳತನ ಮಾಡಿದರೆ ಅವರನ್ನು ಬಿಟ್ಟು ಬಿಡುತ್ತಿದ್ದರು ಹಾಗೂ ಬಡ ಜನರಾದರೆ ಕಠಿಣವಾಗಿ ಶಿಕ್ಷಿಸುತ್ತಿದ್ದರು ಎಂಬುದಾಗಿತ್ತು. ಯಾರ ವಶದಲ್ಲಿ ನನ್ನ ಪ್ರಾಣವಿದೆಯೋ ಆ ಅಲ್ಲಾಹನಾಣೆ! ನನ್ನ ಮಗಳು ಫಾತಿಮಾ ಒಂದು ವೇಳೆ ಕಳ್ಳತನ ಮಾಡಿದರೂ ಆಕೆಯ ಕೈಯನ್ನು ಕಡಿಯಲಾಗುವುದು!"

ಮಕ್ಕಾ ವಿಜಯದ ನಂತರ

ಮಕ್ಕಾವನ್ನು ಜಯಿಸಲಾಗಿತ್ತಾದರೂ ಸುತ್ತಮುತ್ತಲ ಅರೇಬಿಯದ ಇತರ ಅನೇಕ ಗೋತ್ರಗಳು ಇನ್ನೂ ಇಸ್ಲಾಮ್ ದ್ವೇಷದ ಬೆಂಕಿಯಲ್ಲಿ ಬೇಯುತ್ತಿದ್ದುವು. ಸತ್ಯ ನಿಷೇಧದ ಅಜ್ಞಾನಜನ್ಯ ಮನಸ್ಥಿತಿಯು ಆಗಾಗ ಉದ್ರೇಕಗೊಳ್ಳುತ್ತಿತ್ತು... ಮಕ್ಕಾ ವಾಸಿಗಳಂತೆ ನಾವು ಶಸ್ತ್ರ ತ್ಯಾಗ ಮಾಡಬಾರದು... ಅರೇಬಿಯಾದ ಸ್ವಾಭಿಮಾನವು ಇಂತಹ ಸೋಲನ್ನು ಸ್ವೀಕರಿಸಲಾರದು.

ಮಕ್ಕಾ ನಗರಕ್ಕೆ ಅನತಿ ದೂರದಲ್ಲಿರುವ ಜನವಸತಿಯೊಂದರಲ್ಲಿ ಯಾವುದೋ ಗೂಢ ಸಂಚು ನಡೆಯುತ್ತಿದೆ. ಜನರು ಡೇರೆಗಳಿಗೆ ಮತ್ತು ಗುಡಿಸಲುಗಳಿಗೆ ಬಂದು ಹೋಗುತ್ತಿದ್ದಾರೆ. ಪ್ರತಿಯೋರ್ವನೂ ಯಾವುದೋ ಒಂದು ಸಿದ್ಧತೆಯಲ್ಲಿದ್ದಾನೆ... ಬತ್ತಳಿಕೆಗಳಲ್ಲಿ ಬಾಣ ತುಂಬಿಸಲಾಗುತ್ತಿದೆ... ಬಿಲ್ಲುಗಳನ್ನು ಪರಿಶೀಲಿಸಲಾಗುತ್ತಿದೆ... ಖಡ್ಗಗಳನ್ನು ಕಲೆ ಹಾಕಲಾಗುತ್ತಿದೆ...

"ಇನ್ನು ಜೀವಿಸುವುದೇ ಅಸಹ್ಯ! ಅವಮಾನಕರ ಜೀವನಕ್ಕಿಂತ ಮರಣವೇ ಲೇಸು!!" ಓರ್ವ ವಯೋವೃದ್ಧ ಅರಬಿ ಹೇಳಿದ.

"ನೀವು ನನ್ನ ಮನದ ಮಾತನ್ನೇ ಆಡಿದಿರಿ. ಅವರು ಹುಬಲನ್ನು ಒಡೆದರು. ಲಾತ್ ಮತ್ತು ಉಝ್ಝಾಗಳನ್ನು ನುಚ್ಚು ನೂರು ಮಾಡಿದರು. ನಮ್ಮ ಆರಾಧ್ಯರುಗಳ ಈ ಅವಹೇಳನಕ್ಕೆ ನಾವು ಮುಸ್ಲಿಮರಿಂದ ಖಂಡಿತವಾಗಿಯೂ ಪ್ರತೀಕಾರ ಪಡೆಯು ವೆವು. ಹೌದು... ವಿಜಯ ಅಥವಾ ಮರಣ! ಇದುವೇ ನಮ್ಮ ಈಗಿನ ಘೋಷಣೆ!! ನಾವು ಹೋರಾಡುವೆವು! ಜೀವ ಇರುವವರೆಗೂ ಹೋರಾಡುವೆವು! ನಮ್ಮ ಖಡ್ಗಗಳ ಹರಿತವು ಮಕ್ಕಾ ವಿಜಯದ ಅಮಲನ್ನು ಸಂಪೂರ್ಣ ಇಳಿಸಲಿದೆ..." ಇನ್ನೊಬ್ಬ ವ್ಯಕ್ತಿ ಹಲ್ಲು ಕಡಿದ.

"ಹವಾಝಿನ್ ಗೋತ್ರದ ಕಡೆಯಿಂದ ಸುದ್ದಿಗಾರ ಬಂದಿದ್ದಾನೆ. ಅಲ್ಲಿ ಎಲ್ಲ ತರದ ಸಿದ್ಧತೆಯೂ ಪೂರ್ಣಗೊಂಡಿದೆಯಂತೆ. ಅವರು ಖೈಬರ್‌ನವರ ಸಂಜ್ಞೆಯನ್ನು ನಿರೀಕ್ಷಿಸುತ್ತಿದ್ದಾರಂತೆ. ಹ್ಞಾಂ... ಅವರು ಯುದ್ಧರಂಗಕ್ಕೆ ಬಂದು ಮುಟ್ಟಿದ್ದಾರೆಂದೇ

ಭಾವಿಸಿರಿ. ಮಾತ್ರವಲ್ಲ, ತಾಯಿಫ್ ಮತ್ತು ಮಕ್ಕಾ ನಗರಗಳ ಖರ್ಜೂರ ತೋಪು ಹಾಗೂ ಇತರ ತೋಟಗಳು ಉಭಯ ಗೋತ್ರಗಳಲ್ಲಿ ಸಮಾನವಾಗಿ ಹಂಚಲಾಗು ವುದಂತೆ. ನೋಡಿ- ಮುಸ್ಲಿಮರು ಸೋಲುವುದು ಕಂಡ ಮೇಲೆ ಮಕ್ಕಾವಾಸಿಗಳೂ ನಮ್ಮೊಡನೆ ಸೇರಿ ಬಿಡುವರು. ಅವರ ಮನಸ್ಸಿಗಾದ ಗಾಯ ಇನ್ನೂ ಹಸಿಯಾಗಿಯೇ ಇದೆ. ಈ ಸೂಕ್ಷ್ಮ ಸಂದರ್ಭದಿಂದ ನಾವು ಲಾಭ ಪಡೆಯಬೇಕು..." ಓರ್ವ ಗ್ರಾಮೀಣ ಅರಬ ಸರದಾರ ತನ್ನ ಖಡ್ಗವನ್ನು ನೆಲಕ್ಕೆ ಬಡಿದು ಹೇಳಿದ.

ಹೀಗೆ ಅಕ್ಕಪಕ್ಕದ ಗೋತ್ರಗಳನ್ನು ಮತ್ತೊಮ್ಮೆ ಮುಸ್ಲಿಮರ ವಿರುದ್ಧ ಕೆರಳಿಸ ಲಾಯಿತು. ಉದ್ರೇಕಕಾರಿ ಭಾಷಣಕಾರರು ಗಲ್ಲಿಗಲ್ಲಿಗಳಿಗೆ ಹೋಗಿ ಭಾಷಣ ಬಿಗಿದರು... ನಮ್ಮ ಆರಾಧ್ಯರುಗಳ ಅವಹೇಳನಕ್ಕೆ ಮುಸ್ಲಿಮರಿಂದ ಪ್ರತೀಕಾರ ಪಡೆದೇ ತೀರುವೆವು. ಮುಸ್ಲಿಮರು ಮಕ್ಕಾದಲ್ಲಿ ನಮ್ಮ ಆರಾಧ್ಯರುಗಳನ್ನು ಅವಮಾನಿಸಿ, ಮದೀನಕ್ಕೆ ಮರ್ಯಾದೆಯಿಂದ ಮರಳಲಾರರು. ಈ ನಮ್ಮ ಖಡ್ಗಗಳು ಬಳಕೆಯಾಗುವುದು ಈಗಲ್ಲದೆ ಮತ್ತೆ ಯಾವಾಗ? ಬನೀ ಮಿರ್ಝ್ರಾ ಮತ್ತು ಬನೀ ಹಿಲಾಲ್ ಗೋತ್ರಗಳೂ ಹವಾಝಿನ್ ಗೋತ್ರದ ಯುದ್ಧ ಘೋಷಣೆಗೆ ದನಿಗೂಡಿಸಿದುವು. ಈ ಯುದ್ಧದಲ್ಲಿ ಮಹಿಳೆಯರನ್ನೂ ಮಕ್ಕಳನ್ನೂ ಸಂಪತ್ತನ್ನೂ ಒಟ್ಟಿಗೇ ಕೊಂಡೊಯ್ಯಲಾಗುವುದು. ಎಲ್ಲಿಯ ವರೆಗೆಂದರೆ ಒಂಟೆ, ಆಡುಗಳನ್ನೂ ಜತೆಯಲ್ಲಿರಿಸಲಾಗುವುದು. ಏಕೆಂದರೆ ಯುದ್ಧ ಮಾಡುವಾಗ ನಮ್ಮ ಮಹಿಳೆಯರು, ಮಕ್ಕಳು ಹಾಗೂ ಸಂಪತ್ತಿನ ರಕ್ಷಣೆಗಾಗಿ ವಸತಿಗಳೆಡೆಗೆ ಮುಖ ಮಾಡುವ ಅಗತ್ಯ ತಲೆದೋರಬಾರದು."

ಪ್ರವಾದಿವರ್ಯರಿಗೆ(ಸ) ಈ ಯುದ್ಧ ಸನ್ನಾಹದ ಬಗ್ಗೆ ತಿಳಿದಾಗ, ಅವರು ಕೆಲವು ಮಂದಿ ಯೋಧರೊಡಗೂಡಿ ಮಕ್ಕಾದಿಂದ ಹೊರಟರು. ಹರಮ್ ಪರಿಸರದಲ್ಲಿ ಯುದ್ಧ ಮಾಡುವುದು ಪ್ರವಾದಿವರ್ಯರಿಗೆ(ಸ) ಇಷ್ಟವಿರಲಿಲ್ಲ. ಈ ಸೇನೆ ಮುಂದೆ ಮುಂದೆ ಹೋದಂತೆ ಯೋಧರ ಸಂಖ್ಯೆಯು ಕೂಡುತ್ತಲೇ ಹೋಯಿತು. ಸ್ವತಃ ಮಕ್ಕಾದ ಎರಡು ಸಾವಿರ ಮಂದಿ ಇಸ್ಲಾಮೀ ಸೇನೆಯೊಂದಿಗೆ ಸೇರಿದರು. ಅವರಲ್ಲಿ ಆಗಷ್ಟೇ ಇಸ್ಲಾಮ್ ಸ್ವೀಕರಿಸಿದವರೂ ಇದ್ದರು. ಈ ನವ ಮುಸ್ಲಿಮರಲ್ಲದೆ, ಮುಸ್ಲಿಮ ರೊಡನೆ ಒಪ್ಪಂದ ಮಾಡಿ ಕೊಂಡಿರುವ ವಿಗ್ರಹಾರಾಧಕರಿಂದಲೂ ಕೆಲವು ಮಂದಿ ಇಸ್ಲಾಮೀ ಸೇನೆಯೊಡಗೂಡಿದರು. ಹೀಗೆ ಯೋಧರ ಸಂಖ್ಯೆಯು ಕೂಡುತ್ತಾ ಹನ್ನೆರಡು ಸಾವಿರಕ್ಕೆ ತಲುಪಿತು. ಜತೆಗೆ ಸೇನೆಯ ಹೆಚ್ಚಳ ಕಂಡು ಹೃದಯಗಳಲ್ಲಿ ಒಂದು ರೀತಿಯ ಅಹಂಕಾರವೂ ಹುಟ್ಟಿಕೊಳ್ಳತೊಡಗಿತು.

ಹೀಗೆ ಉಭಯ ಸೇನೆಗಳು ಎದುರು ಬದುರಾದುವು. ಆಕ್ರಮಣಕಾರಿ ಗೋತ್ರಗಳು, ಮುಸ್ಲಿಮರ ಮೇಲೆ ಸುಲಭದಲ್ಲಿ ಬಾಣ ಬಿಡಲು ಸಾಧ್ಯವಾಗುವ ರೀತಿಯಲ್ಲಿ ಸೇನೆಯನ್ನು ಸಜ್ಜುಗೊಳಿಸಿದ್ದುವು. ಯುದ್ಧ ಆರಂಭವಾಗುತ್ತಲೇ ಸತ್ಯನಿಷೇಧಿಗಳು ಮುಸ್ಲಿಮ್ ಸೇನೆಯ

ಮೇಲೆ ಬಾಣಗಳ ಸುರಿಮಳೆಗೆರೆಯಲಾರಂಭಿಸಿದರು. ಮುಂಚೂಣಿಯಲ್ಲಿದ್ದ ಸೇನಾ ತುಕಡಿಯು ಈ ಶರದಾಳಿಗೆ ನೇರವಾಗಿ ತುತ್ತಾಯಿತು. ಗಾಯಾಳುಗಳು ನೆಲಕ್ಕುರುಳ ತೊಡಗಿದರು. ಬಾಣಗಳೂ ಸಾಲುಸಾಲಾಗಿ ಮಳೆನೀರಿನಂತೆ ಸುರಿಯುತ್ತಿದ್ದುವು. ಮುಸ್ಲಿಮರಿಗೆ ತಲೆ ಎತ್ತಲು, ಆಲೋಚಿಸಲು ಮತ್ತು ಈ ಸೂಕ್ಷ್ಮ ಸ್ಥಿತಿಯಲ್ಲಿ ಪ್ರತಿತಂತ್ರ ರೂಪಿಸಲೂ ಅವಕಾಶ ನೀಡಲಿಲ್ಲ. ನಾಲ್ದೆಸೆಗಳಿಂದಲೂ ಮರಣವೇ ತಲೆ ಎತ್ತಿ ನಿಂತಂತೆ ಗೋಚರಿಸುತ್ತಿತ್ತು. ಜನರು ಕಂಗೆಟ್ಟು ಓಡತೊಡಗಿದರು. ದೊಡ್ಡ ದೊಡ್ಡ ಶೂರ-ಧೀರರೂ ಧೈರ್ಯಗೆಟ್ಟರು. ಆದರೆ ಇಂತಹ ಸೂಕ್ಷ್ಮ ಸ್ಥಿತಿಯಲ್ಲಿಯೂ ಪ್ರವಾದಿವರ್ಯರು(ಸ) ಸಾವಧಾನವಾಗಿ ಸವಾರಿಯಿಂದ ಇಳಿದು ಹೇಳಿದರು,

"ನಾನು ಪ್ರವಾದಿ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಮತ್ತು ನಾನು ಅಬ್ದುಲ್ ಮುತ್ತಲಿಬ್‌ರ ಸಂತಾನವಾಗಿದ್ದೇನೆ."

ಪ್ರವಾದಿವರ್ಯರ(ಸ) ಆ ಮಾತಿನ ಇಂಗಿತ ಏನಾಗಿತ್ತೆಂದರೆ, ಈ ಸೇನೆ, ಸಂಘಟನೆ ಇತ್ಯಾದಿಗಳ ಜಯಾಪಜಯಗಳು ನನ್ನ ಪ್ರವಾದಿತ್ವದ ಮೇಲೆ ಯಾವುದೇ ಪರಿಣಾಮ ಬೀರಲಾರವು. ನನ್ನ ಅಸ್ತಿತ್ವವೇ ಪ್ರವಾದಿತ್ವ ಮತ್ತು ಸತ್ಯದ ಮಾನದಂಡವಾಗಿದೆ.

ತಬೂಕ್ ಯುದ್ಧ

ಸಿರಿಯ- ಆ ಕಾಲದ ಬಹುದೊಡ್ಡ ವ್ಯಾಪಾರಿ ಕೇಂದ್ರವಾಗಿತ್ತು. ಮಕ್ಕಾ ಮತ್ತು ಮದೀನಾಗಳಿಂದ ಸಾಮಾನ್ಯವಾಗಿ ವ್ಯಾಪಾರಿ ತಂಡಗಳು ಅಲ್ಲಿಗೆ ಹೋಗುತ್ತಲೂ ಬರುತ್ತಲೂ ಇದ್ದುವು. ಅದು ಹಿಜ್ರತ್‌ನ 9ನೇ ವರ್ಷ. ವ್ಯಾಪಾರಿ ತಂಡವೊಂದು ಸಿರಿಯದಿಂದ ಮದೀನಕ್ಕೆ ಆಗಮಿಸಿತು. ಆ ಮಂದಿ ಮದೀನದವರಿಗೆ, ಇತರೆಲ್ಲ ವಿಷಯಗಳೊಂದಿಗೆ ಪ್ರಮುಖ ವಾದೊಂದು ಸುದ್ದಿಯನ್ನೂ ಮುಟ್ಟಿಸಿದರು,

"ನಾವು ಸಿರಿಯದಿಂದ ಬರುತ್ತಿದ್ದೇವೆ. ಈ ವರ್ಷ ಬಟ್ಟೆಯ ಬೆಲೆ ತೀರಾ ಕುಸಿದಿದೆ. ಯಮನಿ ಚದ್ದರಗಳು ತಲಾ ನಾಲ್ಕು ದಿರ್ಹಮ್‌ಗಳಿಗೆ ಬಿಕರಿಯಾಗುತ್ತಿವೆ!"

"ವ್ಯಾಪಾರದಲ್ಲಿ ಏರಿಳಿತ ಸಾಮಾನ್ಯ."

"ಆದರೆ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯ ಅಲ್ಲದೆ, ಇನ್ನೂ ಪ್ರಮುಖವಾದೊಂದು ವಿಷಯವಿದೆ."

"ಹೌದಾ? ಹೇಳಿ! ಮೊದಲು ಆ ವಿಷಯವನ್ನು ಹೇಳಬೇಕಿತ್ತಲ್ಲ..."

"ಕೈಸರ್ (ಸೀಝರ್) ರಾಜನು ಡಂಗುರ ಸಾರಿದ್ದಾನೆ- ಮೂತಾ ಯುದ್ಧದಲ್ಲಿ ಆದ ಸೋಲಿಗೆ ಮುಸ್ಲಿಮರಿಂದ ಪ್ರತೀಕಾರ ಪಡೆಯಲಾಗುವುದು. ಇಂದು ಆ ಮರಳುಗಾಡಿನ ಅಲೆಮಾರಿಗಳು ನಮ್ಮ ಸಾಮಂತ ರಾಜನನ್ನು ಸೋಲಿಸಿದರು. ನಾಳೆ ನನ್ನ ಮೇಲೆಯೇ ಆಕ್ರಮಣ ಮಾಡಿಯಾರು. ಅವರ ಧೈರ್ಯ ದಿನೇದಿನೇ ಹೆಚ್ಚುತ್ತಲಿದೆ. ಈಗಲೇ ಅವರನ್ನು ತುಳಿದು ಬಿಡಬೇಕು."

"ಓಹ್! ಈ ವಿಷಯವಂತೂ ಬಹಳ ಕಳವಳಕಾರಿಯಾದುದು. ಕೈಸರ್ ಎಂದರೆ ಯಮಾಮಾ ಅಥವಾ ಗಸ್ಸಾನಿನ ರಾಜರಂಥಲ್ಲ. ಕೈಸರ್ ಒಬ್ಬ ಸಾಮ್ರಾಟ! ಕಿಸ್ರಾ(ಖುಸ್ರೋ)ನಿಗೆ ಸರಿಸಾಟಿಯಾಗಿರುವಂಥವನು!!"

"ಅಷ್ಟೇ ಅಲ್ಲ, ಎಲ್ಲ ಕ್ರೈಸ್ತ ಗೋತ್ರಗಳೂ ಅವನೊಡನೆ ಸೇರಿವೆ. ಜನರು ಶಿಲುಬೆ ಹಿಡಿದು, ಮದೀನವನ್ನು ಜಯಿಸಿಯೇ ತೀರುತ್ತೇವೆ ಎಂದು ಕರಾರು ಮಾಡುತ್ತಿದ್ದಾರೆ. ಜನರಲ್ಲಿ ವಿಚಿತ್ರವಾದ ಹುಮ್ಮಸ್ಸು ಬೆಳೆಯುತ್ತಿದೆ. ಕುದುರೆ, ಖಡ್ಗ, ಈಟಿ, ಬಿಲ್ಲು-ಬಾಣ, ಶಿರಸ್ತ್ರಾಣ,

ಯುದ್ಧ ಕವಚ ಎಲ್ಲ ಸಿದ್ಧವಾಗುತ್ತಿದೆ."

"ಹಾಗಾದರೆ ಮುಂದೇನು?"

"ಅರೆ! ಇಂಥ ದೌರ್ಬಲ್ಯದ ಮಾತನ್ನೇಕೆ ಆಡುತ್ತೀರಿ ಫುರ್ಖೈಲ್? ನೀವು ಕುರೈಶರ ದೊಡ್ಡ ದೊಡ್ಡ ಸೇನೆಗಳನ್ನು ಸೋಲಿಸಿದವರು. ಅದೂ ಸಾಕಷ್ಟು ಯುದ್ಧ ಸಲಕರಣೆ ಇಲ್ಲದ ಸ್ಥಿತಿಯಲ್ಲಿ! ನಮಗೆ ಭರವಸೆ ಕೇವಲ ಅಲ್ಲಾಹನ ಮೇಲಿದೆ. ಕೈಸರ್‌ನಿಗೆ ತಾನು ಸಾಮ್ರಾಟ ನೆಂಬ ಅಹಂಕಾರವಿದೆ. ಆದರೆ ಮುಸ್ಲಿಮರು ಎಂಥವರೆಂದು ಆತನ ಸಂತಾನಕ್ಕೆ ಯುದ್ಧ ರಂಗದಲ್ಲಿಯೇ ತಿಳಿಯಬಲ್ಲುದು. ಸತ್ಯವು ಸುಳ್ಳಿನ ಮೂಲಕ ಅಣಗಿಸಲ್ಪಡಲಾರದು."

ಈ ಸಂಗತಿ ಪ್ರವಾದಿವರ್ಯರಿಗೆ(ಸ) ತಿಳಿದಾಗ, ಅವರು ಯುದ್ಧಕ್ಕೆ ಸಿದ್ಧರಾಗಲು ಆದೇಶಿಸಿದರು... ಇದು ರೋಮ್‌ನ ಕೈಸರ್ ವಿರುದ್ಧದ ಯುದ್ಧವಾಗಿದೆ. ಈ ವರೆಗಿನ ಎಲ್ಲ ಸಮರಗಳಿಗಿಂತಲೂ ಭಿನ್ನವಾದ ಪ್ರಮುಖ ಯುದ್ಧ! ಆದ್ದರಿಂದ ತುಸು ಹೆಚ್ಚೇ ಸಾಮಾನು ಸರಂಜಾಮುಗಳ ಅಗತ್ಯವಿದೆ. ಉಸ್ಮಾನ್ ಗನಿ(ರ) ಸಾಲು ಸಾಲು ಒಂಟೆ ಮತ್ತು ಕುದುರೆಗಳನ್ನೂ ಒಂದು ಸಾವಿರ ದಿನಾರುಗಳನ್ನೂ ತಂದು ದೇವ ಸಂದೇಶವಾಹಕರ(ಸ) ಮುಂದೆ ಸಮರ್ಪಿಸಿದರು. ಅಬ್ದುರ್ರಹ್ಮಾನ್ ಬಿನ್ ಔಫ್(ರ) ನಲ್ವತ್ತು ಸಾವಿರ ದಿರ್ಹಮ್ ಗಳೊಂದಿಗೆ ಬಂದರು. ಉಮರುಲ್ ಫಾರೂಕ್(ರ) ಮನೆಯ ಸಕಲ ವಸ್ತುಗಳನ್ನು ಸಮಪಾಲು ಮಾಡಿ ತಂದರು. ಅಷ್ಟರಲ್ಲಿ...

ಅರೆ! ಇದು ಯಾರು ಬರುತ್ತಿರುವುದು? ದಾಪುಗಾಲಿಡುತ್ತಾ... ಲುಂಗಿಯು ಜಾರಿ ನೆಲಕ್ಕೆ ತಾಗುತ್ತಿದೆ.

ಇದೋ! ಅಬೂಕುಹಾಫರ ಜನಪ್ರಿಯ ಪುತ್ರ ಅಬೂಬಕರ್ ಸಿದ್ದೀಕ್(ರ)!

ಅವರಂತೂ ತಮ್ಮೊಂದಿಗೆ ಒಂಟೆ, ಆಡು, ಖಡ್ಗ, ಶಿರಸ್ತ್ರಾಣ, ಕವಚ, ಉಡುವ ವಸ್ತ್ರ ಮಾತ್ರವಲ್ಲ ನೀರು ಕುಡಿಯುವ ಪಾತ್ರೆ(ಲೋಟೆ)ಯನ್ನೂ ಹೊತ್ತು ಬಂದಿದ್ದಾರೆ!!

ಇಷ್ಟಕ್ಕೂ ಸಿದ್ದೀಕ್ ಅಂದರೆ ಯಾರು? ದೇವಸಂದೇಶವಾಹಕರ(ಸ) ಗುಹೆಯ ಸಂಗಾತಿ, ಆಪ್ತಮಿತ್ರ! ಅವರ ತ್ಯಾಗ-ಬಲಿದಾನಕ್ಕೆ ಇನ್ನಾರು ಸಾಟಿ? ಅದುವರೆಗೂ ಉಮರ್(ರ) ಮೊದಲ ಸ್ಥಾನದಲ್ಲಿದ್ದರು. ಸಂಪತ್ತಿನ ಅರ್ಧಪಾಲನ್ನು ತಂದಿದ್ದರು. ಆದರೆ ಸಿದ್ದೀಕುಲ್ ಅಕ್ಬರ್‌ರ(ರ) ತ್ಯಾಗವು ಇತರೆಲ್ಲವುಗಳಿಗಿಂತ ಹಿರಿದಾಗಿತ್ತು.

ಓ ಸತ್ಯವಿಶ್ವಾಸಿಗಳೇ, ನಿಮ್ಮಲ್ಲಾರಾದರೂ ಧರ್ಮದಿಂದ ವಿಮುಖನಾಗುತ್ತಿದ್ದರೆ (ಆಗಲಿ.) ಅಲ್ಲಾಹನ ಪ್ರೀತಿಗೆ ಪಾತ್ರರಾದ ಹಾಗೂ ಅಲ್ಲಾಹನನ್ನು ಪ್ರೀತಿಸುವ ಇನ್ನೊಂದು ಜನವಿಭಾಗವನ್ನು ಅಲ್ಲಾಹನು ಸೃಷ್ಟಿಸುವನು. ಅವರು ಸತ್ಯವಿಶ್ವಾಸಿಗಳೊಂದಿಗೆ ವಿನಮ್ರರೂ ಸತ್ಯನಿಷೇಧಿಗಳೊಂದಿಗೆ ಕಠೋರರೂ ಆಗಿರುವರು. ಅವರು ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವರು. ಯಾವನೇ ಖಂಡಿಸುವವನ ಖಂಡನೆಗೆ ಭಯಪಡಲಾರರು. ಇದು ಅಲ್ಲಾಹನ ಮಹಾ ಅನುಗ್ರಹ. ಇದನ್ನು ಅವನು ತನಗಿಷ್ಟ ಬಂದವರಿಗೆ ಪ್ರದಾನ ಮಾಡುತ್ತಾನೆ. ಅಲ್ಲಾಹನು

ಅತಿ ವಿಶಾಲ ಸಾಧನಾನುಕೂಲತೆಗಳ ಮಾಲಕನೂ, ಸರ್ವಜ್ಞನೂ ಆಗಿರುತ್ತಾನೆ.

(ಪವಿತ್ರ ಕುರ್‌ಆನ್, 5:54)

ಸಹೋದರರರೇ! ಮನೆಯ ಒಂದೊಂದು ವಸ್ತುವನ್ನೂ ಹೆಕ್ಕಿ ತಂದ ಅಬೂಬಕರ್(ರ) ಯಾವ ರೀತಿ ತಲೆಬಾಗಿ ನಿಂತಿದ್ದಾರೆ ನೋಡಿ... ತನ್ನಿಂದ ಹೆಚ್ಚಿನದ್ದೇನೂ ಆಗಲಿಲ್ಲ ಎಂಬಂತೆ! ಇಂತಹ ಉನ್ನತ ಚಾರಿತ್ರ್ಯ, ತ್ಯಾಗ-ಸಮರ್ಪಣೆ, ವಿಶ್ವಾಸಪರವಾದ ಹುಮ್ಮಸ್ಸು... ಮುಂದಿನ ಪೀಳಿಗೆ ಖಂಡಿತ ಇವರಿಂದ ಹೆಮ್ಮೆಪಟ್ಟುಕೊಳ್ಳುವುದು.

ಅಬೂ ಅಕೀಲ್ ಓರ್ವ ಬಡ ಅನ್ಸಾರಿಯಾಗಿದ್ದರು. ಕೂಲಿ ನಾಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ಕೆಲಸ ಸಿಗದ ದಿನ ಮನೆಯಲ್ಲಿ ಉಪವಾಸ. ಪ್ರವಾದಿವರ್ಯರ(ಸ) ಘೋಷಣೆ ಕೇಳಿದಾಗ ಅವರಿಂದ ತಡೆಯಲಾಗಲಿಲ್ಲ. ಓರ್ವ ವ್ಯಕ್ತಿಯ ಖರ್ಜೂರ ತೋಟಕ್ಕೆ ಹೋದರು. ರಾತ್ರಿಯಿಡೀ ಕೂಲಿಗಾಗಿ ಬಾವಿಯ ನೀರು ಸೇದಿ ಖರ್ಜೂರ ಗಿಡಗಳಿಗೆ ಹೊಯ್ದರು. ಮಜೂರಿಯ ರೂಪದಲ್ಲಿ ಅವರಿಗೆ ನಾಲ್ಕು ಸೇರು ಖರ್ಜೂರ ಸಿಕ್ಕಿತು. ಎರಡು ಸೇರು ಖರ್ಜೂರವನ್ನು ತಮ್ಮ ಮಕ್ಕಳಿಗೆ ನೀಡಿ. ಉಳಿದೆರಡು ಸೇರನ್ನು ಪ್ರವಾದಿವರ್ಯರ(ಸ) ಮುಂದೆ ತಂದಿಟ್ಟರು. ಮನಸ್ಸು ಒಳಗೊಳಗೇ ಅಳುಕುತ್ತಿತ್ತು. ತನ್ನ ಬಡತನಕ್ಕೆ ಖೇದ ಪಡುತ್ತಿದ್ದರು. ಇತರರೆಲ್ಲರೂ ದಿರ್ಹಮ್, ದಿನಾರ್‌ಗಳ ರಾಶಿಯನ್ನೇ ಸುರಿದಿರಬಹುದು. ನನ್ನ ಈ ಎರಡು ಸೇರು ಖರ್ಜೂರ ಅವುಗಳ ಮುಂದೆ ಯಾವ ಲೆಕ್ಕಕ್ಕೆ? ಜನರು ನನ್ನ ಈ ಅಲ್ಪ ಕೊಡುಗೆಯನ್ನು ನೋಡಿ ನಕ್ಕಾರು... ಈ ತುಚ್ಛ ಕಾಣಿಕೆ ತರುವುದಕ್ಕಿಂತ ಮನೆಯಲ್ಲಿ ಕುಳಿತುಕೊಳ್ಳುವುದೇ ಒಳ್ಳೆಯದಿತ್ತು ಎಂದಾರು. ಆದರೆ ಬಡವರ ಬಂಧು(ಸ) ಆ ಕಾಣಿಕೆಯನ್ನು ಎಲ್ಲ ಬೆಲೆಬಾಳುವ ಸಂಪತ್ತಿನ ಮೇಲೆ ಸುರಿದು, ಆ ಕಾಣಿಕೆಯ ಹಿಂದಿದ್ದ ನಿಷ್ಕಳಂಕ ವಿಶ್ವಾಸವನ್ನು ಎಲ್ಲಕ್ಕಿಂತ ಮಿಗಿಲು ಎಂದು ಪರೋಕ್ಷವಾಗಿ ತೋರಿಸಿಕೊಟ್ಟರು. ಅದರಿಂದ ಅನ್ಸಾರಿಯ ಎದೆಯು ಆನಂದದಿಂದ ಉಬ್ಬಿ ಹೋಯಿತು. ಮನದೊಳಗಿದ್ದ ಅಳುಕು, ನಾಚಿಕೆಯು ಆವಿಯಾಗಿ ಆ ಜಾಗದಲ್ಲಿ ಹೆಮ್ಮೆಯು ಆವರಿಸಿತು.

ಅತೀವ ಸೆಖೆಯ ಕಾಲವದು. ಆಕಾಶದಿಂದ ಬೆಂಕಿಯ ಮಳೆಯಾಗುತ್ತಿದೆಯೋ ಎಂಬಂತಹ ತಾಪ ವಾತಾವರಣ. ನೆಲವೂ ಕೆಂಡದುಂಡೆಯಂತೆ ಸುಡುತ್ತಿತ್ತು. ಚರ್ಮವನ್ನು ಕರಟಿಸಿ ಬಿಡುವಂತಹ ಬಿಸಿಗಾಳಿ. ಅದು ಮನೆಯೊಳಗೆ ಕೂತು ವಿಶ್ರಾಂತಿ ಪಡೆಯಬೇಕಾಗಿದ್ದಂತಹ ರಣ ಬೇಸಿಗೆಯ ಕಾಲವಾಗಿತ್ತು. ಇಂತಹ ಸ್ಥಿತಿಯಲಿ ಯುದ್ಧಕ್ಕೆ ಹೊರಟಿತು ಇಸ್ಲಾಮಿ ಸೇನೆ. ಇದು ಒಂದೆರಡು ರಹದಾರಿಯ ಅಂತರವಾಗಿರಲಿಲ್ಲ. ಬದಲಾಗಿ ನೂರಾರು ಮೈಲುಗಳ ಯಾತ್ರೆಯಾಗಿತ್ತು. ಸುಡುವ ಬೇಸಿಗೆ ಕಾಲ, ದಾರಿಯಲ್ಲಿ ದೂರ ದೂರದ ವರೆಗೆ ಎಲ್ಲೂ ನೀರು ಅಥವಾ ನೆರಳಿನಾಶ್ರಯವಿರುವ ಮರಗಳ ಸುಳಿವಿಲ್ಲ. ಸವಾರಿ ಜನಾವಾರುಗಳ ಕೊರತೆ. ಮೇಲಾಗಿ ಜನರ ಸೇರ್ಪಡೆ... ಒಂದೊಂದು ಒಂಟೆಯ ಮೇಲೆ ಹಲವರು ಸವಾರ ರಾಗುವಂತಹ ಪರಿಸ್ಥಿತಿ. ಬಹಳಷ್ಟು ಮಂದಿ ಪಾದಚಾರಿ ಗಳಾಗಿದ್ದರು! ತೀವ್ರ ಸಂಕಷ್ಟ ಗಳನ್ನು ಎದುರಿಸಬೇಕಾಗಿ

ಬಂತು. ಆದರೆ ಸಹಾಬಿಗಳು ಎಲ್ಲ ಸಂಕಷ್ಟಗಳನ್ನು ನಗುನಗುತ್ತಾ ಸಹಿಸಿದರು.

ತಬೂಕ್ ಸೇರುವಾಗ ಈ ಸೇನೆಯಲ್ಲಿ ಯೋಧರ ಸಂಖ್ಯೆಯು ಮೂವತ್ತು ಸಾವಿರಕ್ಕೆ ತಲುಪಿತು. ಅಲ್ಲಿಯೇ ಝಂಡಾ ಊರಲಾಯಿತು. ಮುಂದೆ ಸಿರಿಯದ ಪ್ರದೇಶ ಬರುತ್ತದೆ. ಒಂದು ತಿಂಗಳ ವರೆಗೆ ಪ್ರವಾದಿವರ್ಯರು(ಸ) ಮುಸ್ಲಿಮ್ ಸೇನೆಯೊಂದಿಗೆ ತಬೂಕ್‌ನಲ್ಲಿ ತಂಗಿದ್ದರು. ಮದೀನದ ಮೇಲೆ ಆಕ್ರಮಣ ಮಾಡಲು ಹೊರಡುವುದಕ್ಕೆ ಮುನ್ನವೇ ಮುಸ್ಲಿಮರು ಸ್ವತಃ ಶಸ್ತ್ರಸಜ್ಜಿತರಾಗಿ ಸಿರಿಯದ ಗಡಿಯಲ್ಲಿ ತಳವೂರಿದ್ದಾರೆ ಎಂಬ ಸುದ್ದಿಯು ಸಿರಿಯನ್ನರಲ್ಲಿ ಭೀತಿಯನ್ನುಂಟು ಮಾಡಿತು. ಕೈಸರ್‌ನ ಪ್ರತೀಕಾರ ದಾವಾಗ್ನಿಯು ತಣ್ಣಗಾಗಿ ಬಿಟ್ಟಿತು. ಮುಸ್ಲಿಮರನ್ನು ಮಣ್ಣು ಮುಕ್ಕಿಸುವ ಪಣ ತೊಟ್ಟಿದ್ದ ಕ್ರೈಸ್ತ ಯುವಕರು ಥರಗುಟ್ಟಿದರು. ಮುಸ್ಲಿಮರ ಈ ಧೀಮಂತ ನಡೆಯು ರೋಮ್ ಮತ್ತು ಸಿರಿಯ ಮಾತ್ರವಲ್ಲ, ಈಜಿಪ್ಟ್ ಮತ್ತು ಇರಾನ್‌ಗಳನ್ನೂ ಅಲುಗಾಡಿಸಿಬಿಟ್ಟಿತು. ಈ ಘಟನೆಯ ಸುದ್ದಿಯು ಎಲ್ಲಿಗೆಲ್ಲ ತಲುಪಿತೋ, ಅಲ್ಲೆಲ್ಲ ಜನರು ಒಂದು ಹೊಸ ಕ್ರಾಂತಿಯ ಆರಂಭವಾಗಲಿದೆ ಯೆಂದು ಭಾವಿಸಿದರು.

ಓರ್ವ ಕರ್ಮಯೋಗಿ

ಓರ್ವ ಸಹಾಬಿಯಿದ್ದರು. ಹೆಸರು ಅಬ್ದುಲ್ಲಾಹ್ ಮತ್ತು ಬಿರುದು ದುಲ್‌ಬಜಾದೀನ್ ಎಂದಾಗಿತ್ತು. ಅವರು ಬಾಲಕರಾಗಿದ್ದಾಗಲೇ ತಂದೆಯನ್ನು ಕಳಕೊಂಡರು. ಅವರ ಚಿಕ್ಕಪ್ಪನೇ ಅವರನ್ನು ಸಾಕಿ ಸಲಹಿದರು. ಅವರಿಗೆ ಬಾಲ್ಯದಲ್ಲಿಯೇ ಇಸ್ಲಾಮಿನ ಕರ್ಣಾನಂದ ಕರೆ ಕೇಳಿಸಿತ್ತು. ಆ ಬಗೆಗಿನ ಆಸಕ್ತಿಯು ಅವರಲ್ಲಿ ಹೆಚ್ಚುತ್ತಲೇ ಇತ್ತು. ಅವರ ಮೇಲೆ ಚಿಕ್ಕಪ್ಪನ ಉಪಕಾರ ಭಾರವಿತ್ತು. ಅಬ್ದುಲ್ಲಾ ಬೆಳೆದು ತಾರುಣ್ಯಕ್ಕೆ ಕಾಲಿಟ್ಟಾಗ, ಅವರಿಗೆ ಚಿಕ್ಕಪ್ಪನಿಂದ ಕೆಲವು ಆಡು-ಕುರಿಗಳು ಮತ್ತು ಒಂದಿಷ್ಟು ಸಂಪತ್ತು ಲಭಿಸಿತ್ತು.

ಚಿಕ್ಕಪ್ಪ ಮೂರ್ತಿ ಪೂಜಕನಾಗಿದ್ದ. ಮಾತ್ರವಲ್ಲ, ಇಸ್ಲಾಮಿನ ಬಗ್ಗೆ ವೈರತ್ವ ಕಟ್ಟಿಕೊಂಡಿದ್ದ, ಮುಸ್ಲಿಮರ ಪ್ರಗತಿ ಕಂಡು ಅಸೂಯೆ ಪಡುತ್ತಿದ್ದ. ಈ ಚಿಕ್ಕಪ್ಪನ ಮೇಲಿನ ಭೀತಿಯಿಂದಾಗಿಯೇ ಅಬ್ದುಲ್ಲಾರ ಇಸ್ಲಾಮಿನೆಡೆಗಿನ ಆಕರ್ಷಣೆಯು ತಡೆ ಹಿಡಿಯಲ್ಪಟ್ಟಿತ್ತು. ಮನದಾಳದ ಮಾತನ್ನು ಬಾಯಿ ಬಿಚ್ಚಿ ಹೇಳಲು ಅವರಿಂದಾಗಿರಲಿಲ್ಲ. ಆದರೆ ಈಮಾನಿನ ಆಸಕ್ತಿಯನ್ನು ಹೆಚ್ಚು ಹೊತ್ತು ಒತ್ತಿ ಹಿಡಿಯಲಾಗದಷ್ಟೇ. ಒಂದು ದಿನ ಅವರು ಧೈರ್ಯ ವಹಿಸಿ ಚಿಕ್ಕಪ್ಪನೊಡನೆ ಹೇಳಿಯೇ ಬಿಟ್ಟರು, "ಚಿಕ್ಕಪ್ಪಾ! ನೀವು ಈಗ ಇಸ್ಲಾಮ್ ಸ್ವೀಕರಿಸುವಿರಿ, ಆಗ ಸ್ವೀಕರಿಸುವಿರಿ ಎಂದು ನಾನು ಹಲವು ವರ್ಷಗಳಿಂದ ನಿರೀಕ್ಷಿಸುತ್ತಿದ್ದೆ. ಆದರೆ ನೀವು ಅದೇ ಸ್ಥಿತಿಯಲ್ಲಿದ್ದೀರಿ. ಜೀವನದ ಬಗ್ಗೆ ಯಾವುದೇ ಭರವಸೆಯಿಲ್ಲ. ಯಾವಾಗ ಮರಣ ಆವರಿಸಿ ಬಿಡುವುದೋ ಹೇಳಲಿಕ್ಕಾಗದು. ನನಗೆ ಮುಸ್ಲಿಮನಾಗಲು ನೀವು ಅನುಮತಿ ನೀಡಿ ಬಿಡಿ. ಈ ಒಂದು ಅನುಗ್ರಹದಿಂದ ನಾನು ಎಷ್ಟೊಂತ ವಂಚಿತನಾಗಿರಲಿ?"

ಸೋದರ ಪುತ್ರನ ಈ ಮಾತು ಕೇಳಿ ಚಿಕ್ಕಪ್ಪ ಕೆಂಡಾಮಂಡಲನಾದ. ಕೋಪದಿಂದ ಕಣ್ಣುಗುಡ್ಡೆಗಳು ಕೆಂಪೇರಿದುವು. ರೋಷದಿಂದ ಹಲ್ಲು ಕಡಿದು ಹೇಳಿದ,

"ಕಿವಿಗೊಟ್ಟು ಕೇಳು ಅಬ್ದುಲ್ ಉಝ್ಝಾ! (ಅಬ್ದುಲ್ಲಾರ ಅಜ್ಞಾನ ಕಾಲದ ಹೆಸರು) ಒಂದು ವೇಳೆ ನೀನು ಅಬ್ದುಲ್ಲಾರ ಪುತ್ರ ಮುಹಮ್ಮದನ ಧರ್ಮವನ್ನು ಸ್ವೀಕರಿಸಿದರೆ, ನಿನ್ನ ಸಕಲ ಸಂಪತ್ತನ್ನು ನಾನು ವಶಪಡಿಸುವೆ. ಎಲ್ಲಿಯ ವರೆಗೆಂದರೆ, ನಿನ್ನ ದೇಹದಲ್ಲಿ ಒಂದು ನೂಲೂ ಇರಲು ಬಿಡಲಾರೆನು!"

ಅಬ್ದುಲ್ಲಾರ ಮನದಲ್ಲಿ ಇಸ್ಲಾಮ್ ಮನೆ ಮಾಡಿಯಾಗಿತ್ತು. ಜಗತ್ತಿನ ಯಾವುದೇ ಸಂಪತ್ತು ಅವರನ್ನು ತನ್ನತ್ತ ಸೆಳೆಯಲಾರದು. ಅವರು ಚಿಕ್ಕಪ್ಪನೊಡನೆ ಹೇಳಿದರು,

"ವಿಗ್ರಹ ಪೂಜೆ ಮತ್ತು ಬಹುದೇವ ವಿಶ್ವಾಸದಿಂದ ನನ್ನ ಮನಸ್ಸು ರೋಸಿ ಹೋಗಿದೆ. ನಾನಿನ್ನು ಖಂಡಿತವಾಗಿಯೂ ದೇವಸಂದೇಶವಾಹಕರ(ಸ) ಅನುಸರಣೆಯನ್ನೇ ಮಾಡುವೆನು. ಇನ್ನು ಈ ಜಗತ್ತು ಮತ್ತು ಇಲ್ಲಿನ ಸಂಪತ್ತು... ಇದರ ಬಗ್ಗೆ ಯಾವುದೇ ನಿಖರತೆಯಿಲ್ಲ. ಈ ವಸ್ತುಗಳನ್ನು ಇಲ್ಲೇ ಬಿಟ್ಟು ಹೋಗಬೇಕಲ್ಲವೇ. ಆದ್ದರಿಂದ ಇಂಥ ವಸ್ತುಗಳಿಗಾಗಿ ನಾನು ಸತ್ಯಧರ್ಮವನ್ನು ಬಿಡುವುದೆಂದರೆ ಎಷ್ಟೊಂದು ನಷ್ಟದಾಯಕ ವ್ಯಾಪಾರವಾದೀತು! ನೀವು ಅವಶ್ಯವಾಗಿ ನನ್ನ ಒಂದೊಂದು ವಸ್ತುವನ್ನು ಕಿತ್ತುಕೊಳ್ಳಿ..."

ಅಬ್ದುಲ್ಲಾ ದುಲ್‌ಬಜಾದೀನ್‌ರ ಚಿಕ್ಕಪ್ಪ ನಿಜವಾಗಿಯೂ ಕಟುಕನಾಗಿದ್ದ. ಇಸ್ಲಾಮಿನ ಹೆಸರು ಕೇಳುತ್ತಲೇ ಆತ ಅಡಿಯಿಂದ ಮುಡಿತನಕ, ಮನದಿಂದ ದೃಷ್ಟಿತನಕ ಬದಲಾಗಿ ಬಿಟ್ಟ. ಕಣ್ಣುಗಳಲ್ಲಿದ್ದ ಪ್ರೀತಿ-ಅನುಕಂಪ ಹೊರಟು ಹೋಗಿ ನಿರ್ದಯೆಯು ಸಿಡಿದು ಬಂತು. ಆತ ಚಿಕ್ಕಪ್ಪನೂ ಅಲ್ಲ, ಅಬ್ದುಲ್ಲಾ ಸೋದರ ಪುತ್ರನೂ ಅಲ್ಲ ಎಂಬಷ್ಟು ಬದಲಾಗಿ ಬಿಟ್ಟ. ರಕ್ತಸಂಬಂಧವೇ ಇಲ್ಲವೇನೋ ಎಂಬಷ್ಟರ ಮಟ್ಟಿಗೆ ಪ್ರೀತಿ ಹೊರಟು ಹೋಯಿತು. ಆ ಕಟುಕನು ಅಬ್ದುಲ್ಲಾರಿಂದ ಒಂದೊಂದೇ ವಸ್ತುವನ್ನು ಕಸಿದುಕೊಂಡ. ಎಲ್ಲಿಯ ವರೆಗೆಂದರೆ ಉಟ್ಟಿದ್ದ ಬಟ್ಟೆಯನ್ನೂ ಕಳಚಿ ಬಿಟ್ಟ.

ಅದೇ ಸ್ಥಿತಿಯಲ್ಲಿ ಅಬ್ದುಲ್ಲಾ ತನ್ನ ವೃದ್ಧ ತಾಯಿಯ ಮುಂದೆ ಹೋದರು. ಮಗನ ಸ್ಥಿತಿ ಕಂಡು ಮರುಗಿದ ತಾಯಿ ಕೇಳಿದರು, "ಮಗೂ! ಏನಾಯಿತು? ನಿನ್ನ ಈ ಬಟ್ಟೆಗಳನ್ನು ಯಾರು ಕಿತ್ತರು?"

ಅಬ್ದುಲ್ಲಾ ಅಂದರು, "ಅಮ್ಮಾ! ನಾನು ಇಸ್ಲಾಮ್ ಸ್ವೀಕರಿಸಿದ್ದೇನೆ. ದೇವ ಸಂದೇಶವಾಹಕರ(ಸ) ಸನ್ನಿಧಿಯಲ್ಲಿ ಹೋಗಿ ಸೇರುವ ಹಂಬಲ ಹೊಂದಿದ್ದೇನೆ. ನಾನು ಮದೀನಕ್ಕೆ ಹೋಗಿಯೇ ತೀರುವೆನು. ನಿಮ್ಮಿಂದ ಸಾಧ್ಯವಿದ್ದರೆ, ನನಗೆ ಮೈ ಮುಚ್ಚಲು ಏನಾದರೂ ದೊರಕಿಸಿ ಕೊಡಿ." ಆ ತಾಯಿಯು ಮಗನಿಗೆ ಒಂದು ಕಂಬಳಿಯನ್ನು ಕೊಟ್ಟರು. ಅಬ್ದುಲ್ಲಾ ಅದನ್ನು ಎರಡು ತುಂಡು ಮಾಡಿದರು. ಒಂದನ್ನು ಲುಂಗಿಯಂತೆ ಸೊಂಟಕ್ಕೆ ಸುತ್ತಿದರು ಮತ್ತು ಇನ್ನೊಂದನ್ನು ಚದ್ದರ ಮಾಡಿ ಹೆಗಲಿಗೇರಿಸಿಕೊಂಡರು. ತರುವಾಯ ಮದೀನದೆಡೆಗೆ ಪಾದ ಬೆಳೆಸಿದರು.

ಅಬ್ದುಲ್ಲಾರಿಗೆ, ತನ್ನ ಸಂಪತ್ತು ಕಿತ್ತು ಹೋಯಿತೆಂಬ ಚಿಂತೆ ಎಳ್ಳಷ್ಟೂ ಆಗಲಿಲ್ಲ. ಅವರಂತೂ ಮದೀನಕ್ಕೆ ಹೋಗಿ ಪ್ರವಾದಿವರ್ಯರ(ಸ) ದರ್ಶನ ಭಾಗ್ಯವನ್ನು ನೆನೆದು ಮನದಲ್ಲೇ ಆನಂದಪಡುತ್ತಿದ್ದರು. ದೇವಸಂದೇಶವಾಹಕರ(ಸ) ಕೃಪಾಕಟಾಕ್ಷ ಒಂದೆಡೆ ಯಾದರೆ, ಜಗತ್ತಿನ ಸಕಲೈಶ್ವರ್ಯಗಳು ಇನ್ನೊಂದೆಡೆ! ನಾನಂತೂ ಈ ವ್ಯಾಪಾರದಲ್ಲಿ ಅಪಾರ ಲಾಭ ಗಳಿಸಿದೆ, ಯಾವುದನ್ನೂ ಕಳೆದುಕೊಳ್ಳಲಿಲ್ಲ, ಸದ್ಧರ್ಮಕ್ಕೆ ಲೋಕದ ಮುಂದೆ ಪ್ರಾಮುಖ್ಯತೆ ನೀಡಿದೆ...

ಶಾಶ್ವತವೇನಿದ್ದರೂ ಪರಲೋಕವಾಗಿದೆ.

ಮಿನುಗುವ ನಕ್ಷತ್ರಗಳ ರಾತ್ರಿಯಲ್ಲಿ ಅಬ್ದುಲ್ಲಾ ಮಸ್ಜಿದುನ್ನಬವಿ ತಲುಪಿದರು. ತರುವಾಯ ಗೋಡೆಗೆ ಒರಗಿ ಕುಳಿತುಕೊಂಡರು. ಈ ನಿರೀಕ್ಷೆಯ ಕ್ಷಣಗಳು ಬಹಳ ತ್ರಾಸದಾಯಕವಾಗಿರುತ್ತವೆ. ಒಂದೊಂದು ಕ್ಷಣವೂ ಒಂದೊಂದು ಯುಗದಂತೆ ಭಾಸ ವಾಗುತ್ತಿದೆ... ಸ್ವಲ್ಪ ಹೊತ್ತಿಗೆ ಅಂತ್ಯ ಪ್ರವಾದಿ(ಸ) ಆಗಮಿಸಿದರು. ಅಬ್ದುಲ್ಲಾರ ಕಂಗಳಲ್ಲಿ ಪ್ರೀತಿ-ವಿಶ್ವಾಸದ ಮಿಂಚು ಹರಿಯಿತು. ಆಗ್ರಹಾಭಿಲಾಷೆಗಳು ಆನಂದೋಲ್ಲಾಸದಿಂದ ಓಲಾಡತೊಡಗಿದವು.

"ನೀವು ಯಾರು?" ಲೋಕಾನುಗ್ರಹಿ(ಸ) ಪ್ರೀತಿಪೂರ್ವಕ ಕೇಳಿದರು.

"ಯಾ ರಸೂಲುಲ್ಲಾಹ್! ನನ್ನ ಹೆಸರು ಅಬ್ದುಲ್ ಉಝ್ಝಾ ಎಂದಾಗಿದೆ. ಬರಿಗೈಯಲ್ಲಿ ಹುಟ್ಟೂರು ತೊರೆದು ಬಂದಿದ್ದೇನೆ. ತಮ್ಮ ದರ್ಶನಾಭಿಲಾಷೆಯು ನನ್ನನ್ನು ಇಲ್ಲಿಯವರೆಗೆ ಎಳೆದು ತಂದಿತು. ಮಾರ್ಗದರ್ಶನವನ್ನು ಆಶಿಸುತ್ತಿದ್ದೇನೆ..." ಅಬ್ದುಲ್ಲಾ ಉತ್ತರಿಸಿದರು.

"ನೋಡು, ನಿನ್ನ ಹೆಸರು ಇನ್ನು ಮುಂದೆ ಅಬ್ದುಲ್ಲಾ ಎಂದಾಗಿರುವುದು ಮತ್ತು ಬಿರುದು ದುಲ್‌ಬಜಾದೀನ್ ಎಂದು! ನೀನು ನಮ್ಮ ಬಳಿಯೇ ಇರು ಮತ್ತು ಈ ಮಸೀದಿ ಯಲ್ಲಿಯೇ ವಾಸ್ತವ್ಯ ಹೂಡು." ದೇವಸಂದೇಶವಾಹಕರ(ಸ) ಈ ಮಾತು ಕೇಳಿ ಅಬ್ದುಲ್ಲಾರ ಮುಖ ಸಂತೋಷದಿಂದ ಅರಳಿತು. ಅವರು ಆಶಿಸಿದ್ದಕ್ಕಿಂತ ಹೆಚ್ಚಿನದ್ದೇ ಅವರಿಗೆ ಲಭಿಸಿತು.

ಅಹ್ಲುಸ್ಸುಫ್ಫ ಎನ್ನುವುದು ಬಡ-ನಿರ್ಗತಿಕ ಸಹಾಬಿಗಳ ಸಂಘಟನೆಯಾಗಿತ್ತು. ಅವರೆಲ್ಲ ತಮ್ಮ ದಿನದ ಬಹುತೇಕ ಭಾಗವನ್ನು ಪ್ರವಾದಿವರ್ಯರ(ಸ) ಸೇವೆಯಲ್ಲಿ ಕಳೆಯುತ್ತಿದ್ದರು. ಅವರು ಅಲ್ಲಿ ಕುರ್‌ಆನ್ ಕಲಿಯುತ್ತಾರೆ, ಹದೀಸ್ ಆಲಿಸುತ್ತಾರೆ ಮತ್ತು ದೇವಾರಾಧನೆ ಯಲ್ಲಿ ಮಗ್ನರಾಗಿರುತ್ತಾರೆ. ಅಬ್ದುಲ್ಲಾರವರೂ ಆ ಜನರೊಡನೆ ಸೇರಿಕೊಂಡರು.

ಅಬ್ದುಲ್ಲಾ ದುಲ್‌ಬಜಾದೀನ್‌ರಿಗೆ ಪವಿತ್ರ ಕುರ್‌ಆನಿನೊಂದಿಗೆ ವಿಶೇಷ ಒಲವು ಇತ್ತು. ಹೆಚ್ಚಿನ ಸಮಯವನ್ನು ಅವರು ಕುರ್‌ಆನ್ ಕಲಿಯುವುದರಲ್ಲಿ ಮತ್ತು ಪಠಿಸುವುದರಲ್ಲಿ ಕಳೆಯುತ್ತಿದ್ದರು. ಒಮ್ಮೆ ಸಹಾಬಿಗಳೆಲ್ಲ ಮಸ್ಜಿದುನ್ನಬವಿಯಲ್ಲಿ ನಮಾಝ್ ಮಾಡುತ್ತಿದ್ದರು ಮತ್ತು ಅಬ್ದುಲ್ಲಾ ಕುರ್‌ಆನ್ ಪಠಣದಲ್ಲಿ ಮಗ್ನರಾಗಿದ್ದರು. ಅಷ್ಟರಲ್ಲಿ ಉಮರ್‌ರವರು(ರ) ಪ್ರವಾದಿವರ್ಯರಲ್ಲಿ(ಸ) ಬಂದು ಹೀಗೆ ದೂರಿಕೊಂಡರು, "ಈ ಹಳ್ಳಿಗ ಬಹಳ ಜೋರಾಗಿ ಕುರ್‌ಆನ್ ಓದುತ್ತಾನೆ. ನಮಾಝ್ ಮಾಡುವವರಿಗೆ ತೊಂದರೆಯಾಗುತ್ತದೆ." ಆದರೆ ಅನಾಥಮುತ್ತು(ಸ) ಬಹಳ ಪ್ರೀತಿಪೂರ್ವಕವಾಗಿ ಹೇಳಿದರು,

"ಉಮರ್! ಆ ವ್ಯಕ್ತಿಯೊಡನೆ ಏನೂ ಹೇಳಬೇಡಿರಿ. ಆತನಾದರೋ ಅಲ್ಲಾಹ್ ಮತ್ತು ಅಲ್ಲಾಹನ ಸಂದೇಶವಾಹಕರಿಗಾಗಿ ತನ್ನ ಸರ್ವಸ್ವವನ್ನೂ ತ್ಯಜಿಸಿ ಬಂದಿದ್ದಾನೆ."

ಅಬ್ದುಲ್ಲಾ ದುಲ್‌ಬಜಾದೀನ್, ತಬೂಕ್ ಯುದ್ಧದಲ್ಲಿ ಪ್ರವಾದಿವರ್ಯರ(ಸ)

ಜತೆಯಲ್ಲಿದ್ದರು. ಸಖೆಯ ತೀವ್ರತೆ ಹೇಗಿತ್ತೆಂದರೆ, ಅಲ್ಲಾಹನೇ ಕಾಪಾಡಬೇಕು. ದೂರ ಪ್ರಯಾಣ, ಎಲ್ಲ ತರದ ಸಂಕಷ್ಟ ಮತ್ತು ತೊಂದರೆಗಳು. ಮೇಲಾಗಿ ಅಬ್ದುಲ್ಲಾರನ್ನು ಜ್ವರ ಬಾಧಿಸಿತು. ಎಲ್ಲ ರೋಗಗಳೂ ಮೊದಮೊದಲು ಸಾಮಾನ್ಯವಾಗಿ ಕಾಣುತ್ತವೆ ಮತ್ತು ಪ್ರತಿಯೋರ್ವ ರೋಗಿಯೂ ತಾನು ಗುಣಮುಖನಾಗುವೆನು ಎಂದು ಭಾವಿಸುತ್ತಾನೆ. ಕೊನೆಯ ಉಸಿರಿನ ವರೆಗೂ ಆಶಾಭಾವನೆ ಇರುತ್ತದೆ. ಆದರೆ ಅಬ್ದುಲ್ಲಾರ ಅಂತ್ಯ ಸಮೀಪಿಸಿತ್ತು. ಜ್ವರವು ತೀವ್ರವಾಗುತ್ತಲೇ ಇತ್ತು. ದೇಹತಾಪ ಹೆಚ್ಚುತ್ತಲೇ ಇತ್ತು. ಮರಳುಗಾಡಿನ ಸುಡು ಬಿಸಿಲು ಜ್ವರವನ್ನು ಇನ್ನೂ ಹೆಚ್ಚಿಸಿತು. ಎಲ್ಲಿಯ ವರೆಗೆಂದರೆ, ತಾಪ ತಾಳಲಾರದೆ, ಅಬ್ದುಲ್ಲಾರ ಪ್ರಾಣಪಕ್ಷಿಯು ಹಾರಿಹೋಯಿತು. ಅಲ್ಲಾಹನ ನೈಜ ದಾಸ, ಅಲ್ಲಾಹನ ಬಳಿಗೆ ತಲುಪಿದರು.

ಗೋರಿ ತೋಡಲಾಯಿತು. ಅಷ್ಟರಲ್ಲಿ ರಾತ್ರಿಯಾಯಿತು. ಎಲ್ಲೆಡೆ ಘನಘೋರ ಅಂಧಕಾರ. ಬಿಲಾಲ್(ರ) ದೀಪವನ್ನು ಹಿಡಿದುಕೊಂಡರು. ಅಬೂಬಕರ್(ರ), ಉಮರ್‌ರವರೊಡನೆ(ರ) ಪ್ರವಾದಿವರ್ಯರೂ(ಸ) ಗೋರಿಗೆ ಇಳಿದರು. ಸಿದ್ದೀಕ್ ಮತ್ತು ಫಾರೂಕ್ ರವರು ಮೃತದೇಹವನ್ನು ಗೋರಿಗೆ ಇಳಿಸುವಾಗ ಅನಾಥಮುತ್ತು ಇಂತೆಂದರು,

"ನಿಮ್ಮ ಸಹೋದರರನ ಗೌರವ-ಘನತೆಯನ್ನು ಗಮನದಲ್ಲಿರಿಸಿರಿ."

ಗೋರಿಯೊಳಗೆ ದೇಹವನ್ನಿರಿಸಿದ ಬಳಿಕ ಗೋರಿ ಮುಚ್ಚಲಾಯಿತು. ಪ್ರವಾದಿ ವರ್ಯರು(ಸ) ಸ್ವಯಂ ಇಟ್ಟಿಗೆಗಳನ್ನು ಇರಿಸಿದರು. ತರುವಾಯ ಹೀಗೆ ಪ್ರಾರ್ಥಿಸಿದರು,

"ಓ ಪ್ರಭೂ! ಇವತ್ತು ಸಂಜೆಯ ತನಕ ನಾನು ಈ ವ್ಯಕ್ತಿಯೊಡನೆ ಸಂತುಷ್ಟನಾಗಿದ್ದೆ. ನೀನೂ ಈತನಿಂದ ಸಂಪ್ರೀತನಾಗು." ಇಂತಹ ಮರಣಕ್ಕೆ ಸಾವಿರಾರು ಜೀವಗಳು ಅರ್ಪಿತ! ಆದ್ದರಿಂದಲೇ ದುಲ್‌ಬಜಾದೀನ್‌ರ ಗೋರಿಯಲ್ಲಿ ನಾನೇ ದಫನವಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಅಬ್ದುಲ್ಲಾ ಬಿನ್ ಮಸ್‌ಊದ್‌ರಂತಹ(ರ) ಖ್ಯಾತ ಸಹಾಬಿಗಳೂ ಆಶಿಸಿದ್ದರು.

ಸತ್ವ ಪರೀಕ್ಷೆ

ಹ. ಕಅಬ್(ರ) ಓರ್ವ ಮಹಾನ್ ಸಹಾಬಿಯಾಗಿದ್ದರು. ತಬೂಕ್ ಯುದ್ಧಕ್ಕೆಂದೇ ಅವರು ವಿಶೇಷವಾಗಿ ಇನ್ನೂರು ಒಂಟೆಗಳನ್ನು ಖರೀದಿಸಿದ್ದರು. ಅಲ್ಲಾಹನ ಮಾರ್ಗದಲ್ಲಿ ಆ ಸವಾರಿಗಳು ಬಿರು ಹೆಜ್ಜೆ ಹಾಕಬೇಕು ಎಂದು ಅವುಗಳಿಗೆ ಚೆನ್ನಾಗಿ ಮೇವು ತಿನ್ನಿಸಿ ದಷ್ಟಪುಷ್ಟಗೊಳಿಸಿದ್ದರು. ಅತ್ತ ಪ್ರವಾದಿವರ್ಯರು(ಸ) ಸಹಾಬಿಗಳೊಡಗೂಡಿ ಮದೀನದಿಂದ ತಬೂಕ್‌ನೆಡೆಗೆ ಹೊರಟಾಗ, ಇತ್ತ ಕಅಬ್(ರ), ನನ್ನ ಒಂಟೆಗಳು ತೀವ್ರಗಾಮಿಗಳಾಗಿವೆ. ಸ್ವಲ್ಪ ಸಮಯ ಕಳೆದು ಹೊರಟರೂ ಇಸ್ಲಾಮೀ ಸೇನೆಯನ್ನು ಕೂಡಿಕೊಳ್ಳಬಲ್ಲೆನು ಎಂದು ಭಾವಿಸಿದರು.

ತೀವ್ರ ಸೆಖೆ ಕಾಲವಾಗಿತ್ತು. ವಾತಾವರಣವಿಡೀ ಕುಲುಮೆಯಂತಾಗಿತ್ತು. ಖರ್ಜೂರದ ಫಸಲು ಕೊಯ್ಲಿಗೆ ಸಿದ್ಧವಾಗಿತ್ತು... ಕಅಬ್‌ರವರು(ರ), ಈಗ ಹೊರಡುತ್ತೇನೆ, ಮತ್ತೆ ಹೊರಡುತ್ತೇನೆ ಎಂದು ಆಲೋಚಿಸುತ್ತಲೇ ಇದ್ದರು. ದಿನ ಕಳೆಯುತ್ತಿತ್ತು. ಇಸ್ಲಾಮೀ ಸೇನೆಯು ಬಹಳ ದೂರ ಸಾಗಿಯಾಗಿತ್ತು. ಇನ್ನು, ಅತಿ ವೇಗದಿಂದ ಒಂಟೆಯನ್ನು ಓಡಿಸಿದರೂ ಕಅಬ್‌ರಿಗೆ ತಲುಪಲು ಸಾಧ್ಯವಿಲ್ಲದಷ್ಟು ವಿಳಂಬವಾಗಿ ಬಿಟ್ಟಿತು. ಎಲ್ಲಿಯ ವರೆಗೆಂದರೆ ತಬೂಕ್‌ನಲ್ಲಿ ಬೀಡು ಬಿಟ್ಟಿದ್ದ ಇಸ್ಲಾಮೀ ಸೇನೆಯು ಮದೀನಕ್ಕೆ ಮರಳಿಯೂ ಆಗಿತ್ತು.

ಈಗ ಕಅಬ್(ರ) ಆಲೋಚನೆಗೆ ಬಿದ್ದರು... ಅಯ್ಯೋ! ಇದೇನು ಮಾಡಿದೆ ನಾನು? ದೇವ ಸಂದೇಶವಾಹಕರ(ಸ) ಸನ್ನಿಧಿಯಲ್ಲಿ ಹಾಜರಾಗಬೇಕಾದುದಂತೂ ಖಂಡಿತ. ಆಗ ಅವರು, ತಬೂಕ್‌ಗೆ ಬಾರದ್ದಕ್ಕೆ ಕಾರಣ ಕೇಳದಿರಲಾರರು. ಆಗ ನಾನೇನೆಂದು ಉತ್ತರಿಸಲಿ? ಅಯ್ಯೋ! ನನ್ನಿಂದ ಬಹಳ ದೊಡ್ಡ ಪ್ರಮಾದವಾಯಿತು. ಇನ್ನು ಅದನ್ನು ತಿದ್ದುವುದು ಸಾಧ್ಯವಿಲ್ಲದ ಮಾತು. ಏನು ಮಾಡಲಿ, ನಾನು ಏನು ಮಾಡಲಿ... ಪಾಪ ಪ್ರಜ್ಞೆಯು ಅವರ ಹೃದಯವನ್ನು ನಿರಂತರ ಹಿಂಡತೊಡಗಿತು. ಕಅಬ್ ಇದೆಂಥ ಅನರ್ಥ ಮಾಡಿಬಿಟ್ಟೆ, ಎಂದು ಆತ್ಮಸಾಕ್ಷಿ ಹಳಿಯುತ್ತಿತ್ತು.

ಪ್ರವಾದಿವರ್ಯರು(ಸ) ಕಾರಣ ಕೇಳಿದರೆ ಏನು ಹೇಳಲಿ? ಏನಾದರೂ ನೆಪ ಹುಡುಕಲೇ? ಹಾಗೇ ನೋಡಿದರೆ ಸಾವಿರಾರು ನೆಪಗಳಿವೆ ಮಾನವುಳಿಸಲು... ಅಂದರೆ, ನನ್ನ

ಆರೋಗ್ಯ ಕೆಟ್ಟಿತ್ತೆನ್ನಲೇ? ಪತ್ನಿಗೆ ಜ್ವರ ಕಾಡಿತ್ತೆನ್ನಲೇ? ಸಹೋದರ ಒಂಟೆಯಿಂದ ಬಿದ್ದು ಗಾಯ ಗೊಂಡಿದ್ದನೆಂದೂ ಅವನ ಆರೈಕೆ ಮತ್ತು ಚಿಕಿತ್ಸೆಗಾಗಿ ಮನೆಯಲ್ಲಿ ನನ್ನ ಹೊರತು ಬೇರಾರೂ ಇದ್ದಿರಲಿಲ್ಲವೆಂದೂ ಹೇಳಿಬಿಡಲೇ? ಬಂಧುಮಿತ್ರರೂ ಅವರ ಮನೋಗತಕ್ಕೆ ಪೂರಕ ವೆಂಬಂತೆಯೇ ಮಾತನಾಡಿದರು. ನಿನ್ನ ನಿಯತ್ತು ಕೆಟ್ಟಿರಲಿಲ್ಲವಲ್ಲ? ತಬೂಕ್‌ಗೆ ನೀನು ಹೋಗಲು ಬಯಸಿದ್ದಿ ತಾನೇ? ಒಂದು ಸಣ್ಣ ಪ್ರಮಾದ ಮಾತ್ರವಲ್ಲವೇ ನಿನ್ನಿಂದ ಸಂಭವಿಸಿದ್ದು? ಪ್ರವಾದಿವರ್ಯರು(ಸ) ವಿಚಾರಿಸಿದರೆ ಏನಾದರೂ ನೆಪ ಹೇಳಿದರಾಯಿತು! ಪ್ರವಾದಿವರ್ಯರು(ಸ) ಸಾಧು ಸ್ವಭಾವದವರು... ನೀನು ಏನೇ ಹೇಳಿದರೂ ನಂಬಿ ಬಿಡುವರು. ಹೃದ್ಗತವನ್ನು ಅಲ್ಲಾಹನೇ ಬಲ್ಲನಷ್ಟೇ. ಇನ್ನು ತಪ್ಪು-ಒಪ್ಪು... ಜಗತ್ತಿನಲ್ಲಿ ಯಾವ ವ್ಯಕ್ತಿಯಿಂದ ತಪ್ಪು ಸಂಭವಿಸಿಲ್ಲ ಹೇಳು!? ನಿನ್ನ ಆಲಸ್ಯತನಕ್ಕೆ ಅಲ್ಲಾಹನಲ್ಲಿ ಪಶ್ಚಾತ್ತಾಪಪಟ್ಟು ಕ್ಷಮೆ ಯಾಚಿಸು. ಅಲ್ಲಾಹ್ ಮಹಾ ಕರುಣಾಳುವಾಗಿರುವನು. ಸನ್ಮನಸ್ಸಿನಿಂದ ಯಾಚಿಸಿದ ಪ್ರಾರ್ಥನೆಯನ್ನು ಖಂಡಿತ ಸ್ವೀಕರಿಸುವನು.

ಹ. ಕಅಬ್‌ರಿಗಂತೂ(ರ) ಸತ್ವಪರೀಕ್ಷೆ ಎದುರಾಗಿತ್ತು. ಭ್ರಷ್ಟಚಿತ್ತದ ಮೋಸದ ಮಾತು ಮತ್ತು ಬಂಧು ಬಳಗದ ಪುಕ್ಕಟೆ ಸಲಹೆಗಳು... ಆದರೆ ಕಅಬ್‌ರ(ರ) ಆತ್ಮಸಾಕ್ಷಿಯು ಬೇರೆಯೇ ನುಡಿಯಿತು. ಪ್ರವಾದಿವರ್ಯರೊಡನೆ(ಸ) ಸುಳ್ಳು ಹೇಳುವ ಮೂಲಕ ತನ್ನ ತಪ್ಪನ್ನು ಮುಚ್ಚಿ ಹಾಕುವುದು ಎಲ್ಲಕ್ಕಿಂತ ದೊಡ್ಡ ಪಾಪವೆನಿಸೀತು. ಇಲ್ಲ! ಸಾಧ್ಯವಿಲ್ಲ! ಕಅಬ್ ಭ್ರಷ್ಟಚಿತ್ತದ ಮೋಸಕ್ಕೆ ಬಲಿಯಾಗಲಾರೆ. ಬಂಧು-ಮಿತ್ರರ ಹಿತನುಡಿಗಳೂ ನನ್ನ ಸತ್ಪಥ ದೆಡೆಗಿನ ಹೆಜ್ಜೆಗಳನ್ನು ಕದಲಿಸಲಾರವು. ಪ್ರವಾದಿವರ್ಯರು(ಸ) ನಮ್ಮಿಂದ ಸತ್ಯ ವಚನದ ವಾಗ್ದಾನ ಪಡೆದಿದ್ದರಷ್ಟೇ. ಹಾಗಿರುತ್ತಾ ನಾನು ಸುಳ್ಳು ನೆಪವೊಡ್ಡಿ ತೋರಿಕೆಯ ಪಶ್ಚಾತ್ತಾಪವನ್ನು ಯಾಕೆ ಪ್ರದರ್ಶಿಸಬೇಕು? ಜೀವನ ಸತ್ಯವಂತಿಕೆಯಲ್ಲಿದೆ!

"ಇನ್‌ಶಾ ಅಲ್ಲಾಹ್! ಸತ್ಯವಂತಿಕೆಯೊಂದೇ ನನಗೆ ಮುಕ್ತಿ ನೀಡಬಹುದು." ಕಅಬ್ ನಿರ್ಧರಿಸಿಯಾಗಿತ್ತು.

ಭಯಮಿಶ್ರಿತ ಲಜ್ಜೆಯೊಂದಿಗೆ ಕಅಬ್(ರ), ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾಗುತ್ತಾರೆ. ಅಡಿಯಿಂದ ಮುಡಿ ತನಕ ಪಶ್ಚಾತ್ತಾಪದಿಂದ ಬೆಂದು ಹೋಗಿದ್ದ ಅವರ ದೃಷ್ಟಿಯು ಕ್ಷಮೆ ಯಾಚಿಸುತ್ತಿತ್ತು. ದೇವಸಂದೇಶವಾಹಕರು(ಸ) ಕಅಬ್‌ರೆಡೆಗೆ(ರ) ನೋಡಿ ಮುಗುಳ್ನಕ್ಕರು. ಆದರೆ ಈ ಮುಗುಳ್ನಗುವಿನಲ್ಲಿ ಕೋಪ ತುಳುಕುತ್ತಿತ್ತು. ಎಲ್ಲ ನಗು ಒಂದೇ ತೆರನಾಗಿರುವುದಿಲ್ಲವಷ್ಟೇ. ಇದನ್ನು ನೋಡಿಯೇ ಕಅಬ್‌ರ(ರ) ಜಂಘಾಬಲ ಉಡುಗಿ ಹೋಗಿತ್ತು. ಪ್ರವಾದಿವರ್ಯರು(ಸ) ತಬೂಕ್‌ಗೆ ಬಾರದಿದ್ದುದರ ಕಾರಣ ಕೇಳಿದರು. ಕಅಬ್ ಹೀಗೆ ಅರುಹಿದರು,

"ಯಾ ರಸೂಲುಲ್ಲಾಹ್! ನನ್ನ ಭ್ರಷ್ಟ ಚಿತ್ತವು ನನ್ನನ್ನು ಅನಾಸ್ಥೆಯಲ್ಲಿ ಬೀಳಿಸಿತು, ನನ್ನ ಮೇಲೆ ಆಲಸ್ಯ ಆವರಿಸಿತು ಮತ್ತು ಶೈತಾನನು ನನ್ನನ್ನು ಮಾರ್ಗಭ್ರಷ್ಟನನ್ನಾಗಿಸಿದನು."

ದೇವ ಸಂದೇಶವಾಹಕರು(ಸ) ಕಅಬ್‌ರೆಡೆಗೆ(ರ) ಕೆಂಗಣ್ಣು ಬೀರಿ ಹೇಳಿದರು,

"ಕಅಬ್! ನೀನು ಇಲ್ಲಿಂದ ಹೊರಟು ಹೋಗು. ಅಲ್ಲಾಹನು ನಿನ್ನ ಬಗ್ಗೆ ಯಾವುದಾದರೂ ಆದೇಶ ಇಳಿಸುವ ವರೆಗೆ (ನನ್ನ ಮುಂದೆ ಬರಬೇಡ.)"

ಪ್ರವಾದಿವರ್ಯರ(ಸ) ಸನ್ನಿಧಿಯಿಂದ ಕಅಬ್(ರ) ಎದ್ದು ಹೊರಟರು. ಮುಖ ಕಳಾಹೀನವಾಗಿದೆ, ಮನಸ್ಸು ಭಾರವಾಗಿದೆ ಮತ್ತು ಕಾಲು ಬಲ ಕಳಕೊಂಡಂತೆ ಹೆಜ್ಜೆಯಿಕ್ಕು ವುದೂ ದುಸ್ತರವಾಗುತ್ತಿದೆ. ಇದು ಯಾರೋ ರಾಜನ ಅಥವಾ ಸಾಮ್ರಾಟನ ಕೋಪ ಆಗಿರಲಿಲ್ಲ. ಸರ್ವಲೋಕಗಳ ಒಡೆಯನಾಗಿರುವ ಅಲ್ಲಾಹನ ಸಂದೇಶವಾಹಕರ(ಸ) ಕೋಪ ವಾಗಿತ್ತು. ಆದ್ದರಿಂದಲೇ ಕಅಬ್‌ರಲ್ಲಿ ಈ ಬದಲಾವಣೆ. ಅವರ ಬಂಧು-ಮಿತ್ರರೆಲ್ಲ ಹೇಳಿದರು, "ಕಅಬ್! ನೀನು ಸತ್ಯ ಹೇಳಿ ಸಮಸ್ಯೆಯನ್ನು ಮೈಮೇಲೆ ಎಳೆದುಕೊಂಡಿದ್ದೀಯ! ಅಯ್ಯೋ ಮೂರ್ಖ! ನೀನೂ ಇತರರಂತೆ ಪೊಳ್ಳು ನೆಪ ಹೇಳಿರುತ್ತಿದ್ದರೆ ಈ ಅವಮಾನವನ್ನು ಸಹಿಸಬೇಕಾಗುತ್ತಿತ್ತಾ?"

ಕಅಬ್ ಹೇಳಿದರು, "ಸಹೋದರರೇ! ಯಾರೋ ಲೌಕಿಕವಾದಿಯೊಂದಿಗಾಗಿದ್ದರೆ ಬಹುಶಃ ನಾನು ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ಆದರೆ ಈ ವಿಷಯ ದೇವಸಂದೇಶ ವಾಹಕರಿಗೆ(ಸ) ಸಂಬಂಧಿಸಿದ್ದು. ಅಲ್ಲಾಹ್ ದಿವ್ಯವಾಣಿ (ವಹೀ) ಅವತೀರ್ಣಗೊಳಿಸಿ ನನ್ನ ಸುಳ್ಳನ್ನು ಬಯಲಿಗೆಳೆದರೆ, ನಾನು ಬದುಕಿಯೂ ಸತ್ತಂತೆ... ಅದಿರಲಿ ಸಹೋದರರೇ! ನನ್ನೊಂದಿಗಾಗಿರುವಂತೆ ಇನ್ನಾರಿಗಾದರೂ ಈ ಅವಸ್ಥೆ ಸಂಭವಿಸಿದೆಯೇ?"

"ಹೌದು! ಹಿಲಾಲ್ ಬಿನ್ ಉಮಯ್ಯ ಮತ್ತು ಮುರಾರಃ ಬಿನ್ ರಬೀಅ್ ರೊಂದಿಗೂ ಇದೇ ಸಂಭವಿಸಿದೆ" ಬಂಧುಗಳು ಒಕ್ಕೊರಲಿನಿಂದ ಹೇಳಿದರು.

ಅನಂತರದ ಅವಸ್ಥೆಯು ಇನ್ನೂ ಕಠಿಣವಾಗಿತ್ತು. "ಮುಸ್ಲಿಮರಾರೂ ಕಅಬ್, ಮುರಾರಃ ಮತ್ತು ಹಿಲಾಲ್‌ರೊಡನೆ ಮಾತನಾಡಬಾರದು" ಎಂದು ಪ್ರವಾದಿವರ್ಯರು(ಸ) ಆದೇಶಿಸಿದರು. ಒಂದರ್ಥದಲ್ಲಿ ಆ ಮೂವರ ಮೇಲೆ ಸಾಮಾಜಿಕ ಬಹಿಷ್ಕಾರ ಹೇರ ಲಾಯಿತು. ನಾಲ್ಕೈದು ದಿನಗಳಲ್ಲ, ಒಟ್ಟು ಐವತ್ತು ದಿನಗಳು ಅದೇ ಅವಸ್ಥೆಯಲ್ಲಿ ಕಳೆದು ಹೋದುವು. ಮಾನವ ನೊಡನೆ ಜೀವನದ ನೂರಾರು ಅಗತ್ಯಗಳೂ ಜೋಡಿಕೊಂಡಿರುತ್ತವೆ. ಕಅಬ್‌ರಿಗೂ ಕೆಲಸ(ಉದ್ಯೋಗ)ಕ್ಕಾಗಿ ಮನೆಯಿಂದ ಹೊರ ಹೋಗ ಬೇಕಾಗುತ್ತಿತ್ತು... ಗಲ್ಲಿ, ಕೇರಿ, ಮಾರುಕಟ್ಟೆ, ತೋಟ, ಖರ್ಜೂರ ತೋಪುಗಳಿಗೆ... ಆದರೆ ಯಾವೊಬ್ಬ ಮುಸ್ಲಿಮನೂ ಅವರೊಡನೆ ಮಾತನಾಡುತ್ತಿರಲಿಲ್ಲ. ವಿಚಿತ್ರ ತೊಳಲಾಟವಾಗಿತ್ತು ಆ ಮೂವರದ್ದು. ಸಹಾಬಿಗಳ ವರ್ತನೆಯು ಇವರು ಯಾರೋ ಅಪರಿಚಿತರು ಎಂಬಷ್ಟರ ಮಟ್ಟಿಗೆ ಬದಲಾಗಿ ಬಿಟ್ಟಿತ್ತು.

ಒಮ್ಮೆ ಕಅಬ್(ರ) ಮದೀನದಿಂದ ಹೊರಹೋದರು. ಅವರ ಚಿಕ್ಕಪ್ಪನ ಮಗ ಅಬೂಕತಾದರವರ ತೋಟ ನಗರದ ಹೊರವಲಯದಲ್ಲಿತ್ತು. ಅಲ್ಲಿ ಅಬೂಕತಾದರು

ಕಟ್ಟಡವೊಂದನ್ನು ನಿರ್ಮಿಸುತ್ತಿದ್ದರು. ಕಲಬ್(ರ) ತನ್ನ ದಾಯಾದಿಗೆ ಸಲಾಮ್ ಹೇಳಿದರು. ಆದರೆ ಅಬೂಕತಾದ(ರ) ಉತ್ತರಿಸಲೂ ಇಲ್ಲ; ಮಾತ್ರವಲ್ಲ, ಮುಖ ತಿರುಗಿಸಿ ಬಿಟ್ಟರು.

ಕಲಬ್(ರ) ಮನನೊಂದು ಹೇಳಿದರು, "ಅಬೂಕತಾದಃ! ನಾನು ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು(ಸ) ಅಪಾರವಾಗಿ ಹಚ್ಚಿಕೊಂಡಿದ್ದೇನೆ ಹಾಗೂ ನನ್ನ ಹೃದಯವೂ ಶಿರ್ಕ್ ಮತ್ತು ಕಾಪಟ್ಯದಿಂದ ಮುಕ್ತವಾಗಿದೆ ಎಂಬುದು ನಿನಗೆ ತಿಳಿದೇ ಇದೆ. ಹಾಗಿದ್ದರೂ ನೀನು ನನ್ನೊಡನೆ ಮಾತನಾಡುತ್ತಿಲ್ಲವೇಕೆ?"

ಅಬೂಕತಾದರವರು(ರ) ಕಲಬ್‌ರ ಮಾತಿಗೆ ಪ್ರತಿಕ್ರಿಯಿಸಲಿಲ್ಲ. ಯಾವುದೇ ಅಕ್ಷರ ಅವರ ಬಾಯಿಯಿಂದ ಹೊರಡಲಿಲ್ಲ. ಕಲಬ್ ಎದುರು ಬಂದು ನಿಲ್ಲುವಾಗಲೆಲ್ಲ ಇವರು ಮುಖ ತಿರುಗಿಸುತ್ತಿದ್ದರು. ಹೀಗೆ ಕಲಬ್‌ರವರು, ಅಬೂಕತಾದರೊಡನೆ ಮೂರು ಬಾರಿ ಮಾತನಾಡಲು ಪ್ರಯತ್ನಿಸಿದರು. ಆದರೆ ಅವರಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ.

ಕಲಬ್‌ರವರು ನಮಾಝ್ ನಿರ್ವಹಿಸಲು ಮಸೀದಿಗೆ ಹೋಗುವಾಗಲೂ ಯಾರೂ ಅವರೊಡನೆ ಮಾತನಾಡುತ್ತಿರಲಿಲ್ಲ. ಇವರು ತೆಪ್ಪಗೆ ನಮಾಝ್ ಮುಗಿಸಿ ಹೊರಟು ಹೋಗುತ್ತಿದ್ದರು. ಕೆಲವೊಮ್ಮೆ ಮಸೀದಿಯ ಒಂದು ಮೂಲೆಯಲ್ಲಿ ಮೌನವಾಗಿ ಕುಳಿತು, ಪ್ರವಾದಿವರ್ಯರು(ಸ) ನನ್ನೆಡೆಗೆ ಯಾವ ದೃಷ್ಟಿಯಿಂದ ನೋಡುತ್ತಾರೆ ಎಂದು ಅಂದಾಜಿಸು ತ್ತಿದ್ದರು. ಹಲವೊಮ್ಮೆ ಪ್ರವಾದಿವರ್ಯರು(ಸ) ತನ್ನೆಡೆಗೆ ವಾರೆಗಣ್ಣಿನಿಂದ ದಿಟ್ಟಿಸುತ್ತಿರು ವುದನ್ನು ಕಲಬ್ ಕಂಡಿರುತ್ತಾರೆ... ನನ್ನ ದೀನ ಅವಸ್ಥೆ ಕಂಡು ಪ್ರವಾದಿವರ್ಯರಿಗೆ(ಸ) ಕನಿಕರವಾಗುತ್ತದೆ ಎಂದು ಅವರು ಭಾವಿಸುವಷ್ಟರಲ್ಲಿ ಪ್ರವಾದಿವರ್ಯರು(ಸ) ಮುಖ ತಿರುಗಿಸುತ್ತಿದ್ದರು.

ಒಬ್ಬನೊಡನೆ ಮನೆಮಂದಿ ಮಾತು ನಿಲ್ಲಿಸಿದರೆ ಆತನ ಅವಸ್ಥೆ ಹುಚ್ಚನಂತಾಗಿ ಬಿಡುತ್ತದೆ. ಆದರೆ ಇಲ್ಲಿಯಂತೂ ಇಡೀ ನಗರವೇ ಬಹಿಷ್ಕಾರ ಹೇರಿ ಬಿಟ್ಟಿತ್ತು. ಜನರು ಸಲಾಮ್‌ಗೆ ಉತ್ತರಿಸುತ್ತಲೂ ಇರಲಿಲ್ಲ. ಕಲಬ್‌ರ ಅವಸ್ಥೆ ಹೇಳತೀರದು. ಅವರು ಏಕಾಂತದಲ್ಲಿ ಕಣ್ಣೀರಿಳಿಸುತ್ತಿದ್ದರು. ಅವರ ಪಾಲಿಗೆ ಇಡೀ ಜಗತ್ತು ಅಂಧಕಾರಮಯವಾಗಿ ಬಿಟ್ಟಿತ್ತು. ನಿರೀಕ್ಷೆಯ ಯಾವೊಂದು ಕಿರಣವೂ ಕಾಣಲೊಲ್ಲದು.

ಲೋಕನಾಯಕರೇ ಮುಖ ತಿರುಗಿಸಿದ ಮೇಲೆ ಮಾನವನ ಸ್ಥಿತಿಯೇನಾಗಬೇಡ!

ದೃಷ್ಟಿ ಖಾಲಿ, ಹೃದಯ ಬಂಜರು, ಮನಸ್ಸಿನ ಅವಸ್ಥೆ ಹೇಳುವುದೇ ಬೇಡ!

ಅಂದು ಸಂಜೆಯ ಹೊತ್ತು. ಸೂರ್ಯ ಇನ್ನೂ ಅಸ್ತಮಿಸಿರಲಿಲ್ಲ. ಖರ್ಜೂರದ ತೋಪಿನೆಡೆಯಿಂದ ಮುಸ್ಸಂಜೆಯ ಮಂದ ಬೆಳಕು ಮಂಜು ಕವಿದಂತೆ ತೋರುತ್ತಿತ್ತು. ಜನರೆಲ್ಲರೂ ಕೆಲಸ ಕಾರ್ಯಗಳಿಂದ ದಣಿದು ಮನೆಗಳಿಗೆ ಮರಳುತ್ತಿದ್ದರು. ದಾರಿಯಲ್ಲಿ ಆಡು, ಒಂಟೆಗಳ ಸಾಲು ಹಟ್ಟಿಯೆಡೆಗೆ ಕಾಲೆಳೆಯುತ್ತಿದ್ದುವು. ಹಕ್ಕಿ-ಪಿಕ್ಕಿಗಳು ಧಾನ್ಯ ಹೆಕ್ಕಿ ಗೂಡಿಗೆ ಮರಳುತ್ತಿದ್ದುವು. ಒಂಟೆಗಳ ಕೊರಳ ಗಂಟೆಗಳ ನಿನಾದವು ಮುಸ್ಸಂಜೆಯ ನಿಶ್ಶಬ್ದತೆಯು ಪಿಸು ನುಡಿಯುತ್ತಿರುವಂತೆ ಕೇಳಿಸುತ್ತಿತ್ತು. ಅಷ್ಟರಲ್ಲಿ ಕ್ರೈಸ್ತ ವ್ಯಕ್ತಿಯೋರ್ವನು

ಹೆಣ್ಣೊಂಟೆಯೊಂದರಲ್ಲಿ ಸವಾರನಾಗಿ ವೇಗದಿಂದ ಧಾವಿಸುತ್ತಾ ಬಂದ.

"ಕಅಬ್ ಎಲ್ಲಿ? ಕಅಬ್, ಕಅಬ್! ನೀವು, ಮುಸ್ಲಿಮರಿಂದ ಬಹಿಷ್ಕರಿಸಲ್ಪಟ್ಟ ಕಅಬ್! ನಿಮ್ಮ ಪ್ರವಾದಿಯ ಕೋಪಕ್ಕೀಡಾದ ಕಅಬ್ ಎಲ್ಲಿ?" ಆತ ಅವಸರಿಸುತ್ತಾ ಕೇಳಿದ.

"ನೀವು ಶೀಘ್ರಗಾಹಿ ಒಂಟೆಯ ಮೇಲೆ ಸವಾರರಾಗಿದ್ದೀರಿ. ಕೊಂಚ ಸಾವಧಾನ! ನೋಡಿ, ಆ ಎದುರಲ್ಲಿ ಕಾಣುವ ತೋಟದಲ್ಲಿ ತಲೆ ತಗ್ಗಿಸಿ ಕುಳಿತಿರುವ ವ್ಯಕ್ತಿಯೇ ಕಅಬ್! ನೀವು ಯಾತ್ರಿಕರಾಗಿದ್ದರಿಂದ ನಿಮಗೆ ಕಅಬ್‌ರನ್ನು ತೋರಿಸುತ್ತಿದ್ದೇವೆ. ನಮ್ಮ ಮದೀನದ ಯಾರಾದರೂ ಕೇಳುತ್ತಿದ್ದರೆ ನಾವು ಖಂಡಿತ ತೋರಿಸುತ್ತಿರಲಿಲ್ಲ..." ಓರ್ವ ವೃದ್ಧ ಅರಬನು ಉತ್ತರಿಸಿದ.

ಆ ಕ್ರೈಸ್ತನು ಕಅಬ್‌ರ ಹತ್ತಿರಕ್ಕೆ ಧಾವಿಸಿದವನೇ ಬಹಳ ಸಂತೋಷದಿಂದ ಹೇಳ ತೊಡಗಿದ, "ಕಅಬ್ ಸಂತೋಷ ಪಡು! ನಿನ್ನ ಅದೃಷ್ಟ ಖುಲಾಯಿಸುತ್ತಿದೆ! ನಿನ್ನನ್ನು ನಮ್ಮ ಮಹಾರಾಜ ಬರಹೇಳಿದ್ದಾರೆ. ಇಂತಹ ಗೌರವ ಅದೃಷ್ಟವಂತರಿಗೆ ಮಾತ್ರ ಲಭಿಸು ವಂತಹದ್ದು!"

ತರುವಾಯ ಆತ ಗಸ್ಸಾನಿನ ಅರಸನ ಪತ್ರವನ್ನು ಕಅಬ್‌ರಿಗೆ ನೀಡಿದ. ಅದರಲ್ಲಿ ಹೀಗೆ ಬರೆದಿತ್ತು:

"ಓ ಕಅಬ್ ಬಿನ್ ಮಾಲಿಕ್! ನಿನ್ನ ಪ್ರಭು (ಪ್ರವಾದಿವರ್ಯರು) ನಿನ್ನಿಂದ ಕೋಪಗೊಂಡಿದ್ದಾರೆ ಮತ್ತು ಅವರು ನಿನ್ನನ್ನು ದೂರ ಮಾಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಇತರ ಮುಸ್ಲಿಮರೂ ನಿನ್ನಿಂದ ದೂರ ಹೋಗುತ್ತಿದ್ದಾರೆ ಎಂಬುದೂ ಗೊತ್ತು. ಇನ್ನು ನಿನ್ನನ್ನು ಬಹಿಷ್ಕರಿಸಿದ ನಾಡಿನಲ್ಲಿ ನೀನು ಇರುವುದು ಎಳ್ಳಷ್ಟೂ ಸಮಂಜಸವಲ್ಲ. ಈ ಪತ್ರವನ್ನು ಓದುತ್ತಲೇ ನಮ್ಮ ಬಳಿಗೆ ಬಾ. ನಾವು ನಿನ್ನ ದಾರಿ ಕಾಯುತ್ತಿದ್ದೇವೆ."

ಕಅಬ್‌ರ ಜಾಗದಲ್ಲಿ ಯಾರೋ ಲೌಕಿಕವಾದಿ ಇರುತ್ತಿದ್ದರೆ, ಖಂಡಿತವಾಗಿಯೂ ಸಂತೋಷಗೊಳ್ಳುತ್ತಿದ್ದ. ಇದು ಅರಸನೋರ್ವನಿಂದ ಬಂದ ಆಹ್ವಾನವಾಗಿತ್ತು. ಲೌಕಿಕ ಸಂಪನ್ಮೂಲ ಮತ್ತು ಗೌರವಾದರದ ಭರವಸೆ ಆ ಪತ್ರದಲ್ಲಿತ್ತು. ಆದರೆ ಕಅಬ್(ರ) ಆ ರಾಜಪತ್ರವನ್ನು ಕಂಡು ರೋಷಾಕುಲರಾದರು. ಜತೆಗೆ ಚಿಂತೆಯೂ ಅವರನ್ನು ಆವರಿಸಿತು. ಚಿಂತೆ, ನನ್ನ ಅವಸ್ಥೆ ನೋಡಿ ಅರಸನೋರ್ವ ನನ್ನನ್ನು ಸತ್ಯನಿಷೇಧದೆಡೆಗೆ ಆಹ್ವಾನಿಸುತ್ತಾ ಇದ್ದಾನಲ್ಲಾ ಎಂದಾಗಿತ್ತು. ಕಅಬ್ 'ಮದೀನತುನ್ನಬಿ'ಯನ್ನು (ಪ್ರವಾದಿಯ ನಗರವನ್ನು) ಬಿಟ್ಟು, ಅವನ ರಾಜಧಾನಿಗೆ ಹೊರಡುತ್ತಾನೆಂದು ಆತ ಹೇಗೆ ಆಲೋಚಿಸಿದ!?

ಕ್ರೈಸ್ತ ರಾಯಭಾರಿಯು ಮೌನವಾಗಿ ನಿಂತು ಕಅಬ್‌ರ ಉತ್ತರಕ್ಕಾಗಿ ಕಾಯುತ್ತಿದ್ದ. ಈಗ ಕಅಬ್ ಹೇಳಬಹುದು... ನನ್ನನ್ನು ನಿನ್ನ ಜತೆ ಒಂಟೆಯಲ್ಲಿ ಕೂರಿಸಿ ಮಹಾರಾಜನ ಬಳಿಗೆ ಕರಕೊಂಡು ಹೋಗು. ನಾನು ಈಗ ಮನೆಗೂ ಹೋಗಲು ಬಯಸುವುದಿಲ್ಲ. ಮನೆಗೆ ಹೋಗುವುದಾದರೂ ಯಾಕೆ? ಯಾರ ಬಳಿಗೆ? ಬಂಧು-ಬಳಗದವರೆಲ್ಲರೂ ನನ್ನಿಂದ ದೂರವಾಗಿದ್ದಾರೆ... ಆದರೆ ಕ್ರೈಸ್ತನ ನಿರೀಕ್ಷೆಗಳನ್ನೆಲ್ಲ ಹುಸಿಗೊಳಿಸುತ್ತಾ, ಕಅಬ್‌ರವರು

ಅತ್ಯಂತ ತಿರಸ್ಕಾರದೊಂದಿಗೆ ರಾಜನ ಪತ್ರವನ್ನು ಬೆಂಕಿಗೆಸೆದು ಬಿಟ್ಟರು.

"ನಿನ್ನ ಮಹಾರಾಜನ ಸಕಲ ರಾಜ ಮರ್ಯಾದೆಗಿಂತ, ನನ್ನ ನಾಯಕನ ಕೋಪವೇ ಉತ್ತಮ" ಕಅಬ್‌ರವರು ಕ್ರೈಸ್ತ ದೂತನಿಗೆ ಹೇಳಿದರು. ರಾಜಪತ್ರವು ಸುಟ್ಟು ಕರಕ ಲಾಗಿತ್ತು. ಅದರಿಂದ ಎದ್ದ ಹೊಗೆಯು ಮುಸ್ಸಂಜೆಯ ಮಬ್ಬುಗತ್ತಲಿನಲ್ಲಿ ಸೇರಿ, ಇನ್ನಷ್ಟು ದಟ್ಟವಾಯಿತು. ಕ್ರೈಸ್ತ ದೂತನು ತನ್ನ ನೀಳ ಗಡ್ಡವನ್ನು ನೀವುತ್ತಾ ಮರಳಿ ಹೋದ. ಬಹಳ ವೇಗವಾಗಿ ಬಂದಿದ್ದವನ ಹೆಜ್ಜೆಯು, ಈ ವೈಫಲ್ಯದ ಬಳಿಕ ಬಹಳ ನಿಧಾನವಾಗಿ ಬಿಟ್ಟಿದೆ. ಕಅಬ್‌ರಿಗೆ ಅದು ಕಠಿಣ ಸತ್ವಪರೀಕ್ಷೆಯಾಗಿತ್ತು. ಆದರೆ ಅಲ್ಲಾಹನು ತನ್ನ ಕೃಪೆಯನ್ನು ಧಾರೆಯೆರೆದನು ಮತ್ತು ಕಅಬ್‌ರ ದೃಢವಿಶ್ವಾಸ ಹಾಗೂ ದೃಢ ನಿಶ್ಚಯದಲ್ಲಿ ಎಳ್ಳಷ್ಟೂ ಕೊರತೆಯುಂಟಾಗಲು ಬಿಡಲಿಲ್ಲ.

ಸತ್ವಪರೀಕ್ಷೆಯಿಂದ ಜಯಿಸಿ ಬಂದವರ ಜೀವನವೇ ನಿಜ ಜೀವನ...

ಈ ಹಂತವನ್ನು ದಾಟಿ, ಸತ್ವಪರೀಕ್ಷೆಯನ್ನು ಸಹಿಸಿ ಕಅಬ್(ರ) ಮನೆಗೆ ಮರಳಿದಾಗ ಓರ್ವ ವ್ಯಕ್ತಿ ಪ್ರವಾದಿವರ್ಯರ(ಸ) ಸಂದೇಶ ಹೊತ್ತು ಬಂದಿರುವುದು ತಿಳಿಯುತ್ತದೆ. "ಕಅಬ್! ನಿಮ್ಮ ಪತ್ನಿಯಿಂದ ನೀವು ದೂರವಿರಬೇಕೆಂದು ದೇವ ಸಂದೇಶವಾಹಕರ(ಸ) ಆಜ್ಞೆಯಾಗಿದೆ." ದೂತ ನೀಡಿದ ಸಂದೇಶಕ್ಕೆ ಕಅಬ್(ರ) ತತ್ತರಿಸಿ ಕೇಳುತ್ತಾರೆ, "ಅಂದರೆ ನಾನು ಪತ್ನಿಗೆ ತಲಾಕ್ ನೀಡಬೇಕೇ?" ಉತ್ತರ ಬಂತು, "ಇಲ್ಲ! ಆಕೆಯ ಮಂಚದಿಂದ ದೂರವಿರಿ."

ಕಅಬ್‌ರವರು ತಮ್ಮ ಪ್ರಿಯಪತ್ನಿಯನ್ನು ಆಕೆಯ ತವರಿಗೆ ಕಳುಹಿಸಿ ಕೊಡುತ್ತಾರೆ.

ಇದೇ ಸ್ಥಿತಿಯಲ್ಲಿ ದಿನಗಳುರುಳಿದುವು. ಹೀಗೆ ಒಟ್ಟು 50 ದಿವಸಗಳು ಕಳೆದು ಹೋಗುತ್ತವೆ. ಕಅಬ್‌ರ(ರ) ಮನಸ್ಸಿನ ಮೇಲೆ ದುಃಖದ ಕಾರ್ಮೋಡ ಕವಿದಿದೆ. ಲೌಕಿಕವಾದ ದುಃಖ-ದುಮ್ಮಾನ, ವ್ಯಾಪಾರದಲ್ಲಿ ನಷ್ಟ, ಬಂಧುಗಳ ವಿರಹ ಎಲ್ಲವನ್ನೂ ಸಹಿಸಬಹುದಿತ್ತು. ಆದರೆ ಇದು ದೇವ ಮತ್ತು ದೇವಸಂದೇಶವಾಹಕರ(ಸ) ಕೋಪವಾಗಿತ್ತು. ಇಲ್ಲಿ ಪ್ರತಿಕ್ಷಣವೂ ಈಮಾನ್ ಕಳಕೊಳ್ಳುವ ಮತ್ತು ಪರಲೋಕ ನಷ್ಟವಾಗುವ ಆತಂಕ ಇದ್ದೇ ಇರುತ್ತದೆ. ಇದು ಕಅಬ್‌ರ ದುಃಖ, ವೇದನೆಯನ್ನು ಇನ್ನಷ್ಟು ಹೆಚ್ಚಿಸಿತು. ಈ ಅವಸ್ಥೆಯು ಯಾರಿಗೆ ಎದುರಾಯಿತೋ ಅವರು ಮಾತ್ರವೇ ಅದರ ಕಷ್ಟ ಬಲ್ಲರು. ಕಅಬ್‌ರವರ ಹೆಚ್ಚಿನ ಸಮಯವು ಪಶ್ಚಾತ್ತಾಪ ಮತ್ತು ಕ್ಷಮಾಯಾಚನೆಯಲ್ಲಿಯೇ ಕಳೆದು ಹೋಗುತ್ತಿತ್ತು.

ಅಂದು ರಾತ್ರಿ... ಕಅಬ್(ರ) ತಮ್ಮ ಮನೆಯ ಮಹಡಿಯಲ್ಲಿ ಕುಳಿತಿದ್ದರು. ಕುಳಿತಿರುವುದೇನು? ದುಃಖ-ವೇದನೆಯಿಂದ ಬಿದ್ದುಕೊಂಡಿದ್ದರು ಅನ್ನಬಹುದು. ತೀರಾ ದಣಿವು, ಕಳವಳ, ಚಿಂತೆ, ಮನಸ್ಸು ಭಾರ... ಜೀವನವೇ ಅವರ ಮಟ್ಟಿಗೆ ಹೊರೆಯಾಗಿ ಬಿಟ್ಟಂತಿತ್ತು. ಅಷ್ಟರಲ್ಲಿ ಓರ್ವ ವ್ಯಕ್ತಿ ಹತ್ತಿರದ ದಿಣ್ಣೆಯೊಂದರ ಮೇಲೇರಿ ನಿಂತು ಕಅಬ್‌ರನ್ನು ಕೂಗಿ ಕರೆದು ಹೇಳಿದ,

"ಓ ಕಅಬ್! ನಿನಗೆ ಶುಭವಾಗಲಿ!! ಅಲ್ಲಾಹ್ ನಿನ್ನ ಪಶ್ಚಾತ್ತಾಪವನ್ನು ಮನ್ನಿಸಿದನು."

ಈ ಶುಭವಾರ್ತೆಯು ಕಅಬ್‌ರ(ರ) ನಿರೀಕ್ಷೆಗಳಿಗೆ ಹೊಸ ಜೀವ ತಂದುಕೊಟ್ಟಿತು. ದುಃಖಾಶ್ರು ತುಂಬಿದ್ದ ಕಂಗಳಲ್ಲಿ ಆನಂದಭಾಷ್ಪ ಹರಿಯಿತು. ಹಳದಿ ಮಿಶ್ರಿತ ಗೌರವರ್ಣದ ಅವರ ಮುಖ ಕೆಂಪೇರಿತು. ಅವರು ಮಹಡಿಯಿಂದ ಕೆಳಗಿಳಿದು ಬರುವಷ್ಟರಲ್ಲಿ ಜನರು ಅವರ ಬಳಿಗೆ ಓಡೋಡಿ ಬಂದರು... ತಬೂಕ್ ಯುದ್ಧದಲ್ಲಿ ಭಾಗವಹಿಸಲಾಗದ ಮುಸ್ಲಿಮರೆಲ್ಲರ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸಿದನೆಂಬ ಶುಭವಾರ್ತೆ ತಿಳಿಸಿದನು.

ಈಗ ಸುದ್ದಿಯು ಸತ್ಯವೆಂದು ದೃಢವಾಯಿತು. ಕಅಬ್ ನಿಂತಲ್ಲಿಂದಲೇ ದೇವನಿಗೆ ಸಾಷ್ಟಾಂಗವೆರಗಿದರು. ಇದು ಕೃತಜ್ಞತೆಯ ಸಾಷ್ಟಾಂಗವಾಗಿತ್ತು. ದೇಹದ ಕಣಕಣವೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿತ್ತು. ತರುವಾಯ ಅವರು ಪ್ರವಾದಿವರ್ಯರ(ಸ) ಸನ್ನಿಧಿಗೆ ಧಾವಿಸಿದರು. ಅಲ್ಲಿ ಅನ್ಸಾರ್ ಮತ್ತು ಮುಹಾಜಿರರು ಕುಳಿತಿದ್ದರು. ಕಅಬ್(ರ) ಸಲಾಮ್ ಹೇಳಿದರು. ಪ್ರವಾದಿವರ್ಯರ(ಸ) ಮುಖಾರವಿಂದವು ಸಂತೋಷದಿಂದ ಹುಣ್ಣಿಮೆಯ ಚಂದ್ರನಂತೆ ಬೆಳಗಿತು. ಆದರೆ ಅದು ಸಂಪೂರ್ಣ ಹೋಲಿಕೆಯಲ್ಲ. ಪ್ರವಾದಿವರ್ಯರು(ಸ) ತಮಗೆ ತಾವೇ ಸಾಟಿ!

ಪ್ರವಾದಿವರ್ಯರು(ಸ) ಸಂತೋಷಾತಿರೇಕದಿಂದ ನಡುಗುವ ಸ್ವರದಲ್ಲಿ ಹೇಳಿದರು,

"ಓ ಕಅಬ್! ನಿನಗೆ ಸುವಾರ್ತೆಯಿದೆ! ನಿನ್ನ ಪಶ್ಚಾತ್ತಾಪವು ದೇವಸನ್ನಿಧಿಯಲ್ಲಿ ಸ್ವೀಕೃತವಾಯಿತು. ನೀನು ಹುಟ್ಟಿದಂದಿನಿಂದ ಇದುವರೆಗೆ ಇಂತಹ ಒಂದು ಶುಭ ಘಳಿಗೆ ನಿನ್ನ ಪಾಲಿಗೆ ಬಂದಿರಲಿಕ್ಕಿಲ್ಲ."

ಕಅಬ್ ಬಿನ್ ಮಾಲಿಕ್‌ರ ಅಂಧಕಾರಮಯವಾಗಿದ್ದ ಜೀವನದಲ್ಲಿ ಏಕಾಏಕಿ ಆನಂದದ ಪ್ರಕಾಶ ಕಿರಣಗಳು ಜಗಮಗಿಸಿದುವು. ಈಗ ಸ್ವಲ್ಪ ಮುಂಚೆ ಕಣ್ಣಲ್ಲಿ ಕಂಬನಿ ಮತ್ತು ನಾಲಗೆಯಲ್ಲಿ ನೋವಿನ ಅರಿಕೆಯಿತ್ತು... ಆದರೆ ಕ್ಷಣ ಮಾತ್ರದಲ್ಲಿ ಸಂತೋಷದ ಅಲೆ ತೇಲಿ ಬಂತು...

ರಾಜಂದಿರಿಗೆ ಪತ್ರ

ಹುದೈಬಿಯಾ ಒಪ್ಪಂದದ ಕರಾರನ್ನು ಬರೆಯುವಾಗ, ಕುರೈಶ್ ರಾಯಭಾರಿ ಸುಹೈಲ್ ಬಿನ್ ಅಮ್ರ್‌ರವರು 'ರಸೂಲುಲ್ಲಾಹ್' ಎಂಬ ಪದವನ್ನು ವಿರೋಧಿಸಿದ್ದರು. ಆದ ಕಾರಣ ಒಪ್ಪಂದ ಪತ್ರದಲ್ಲಿ ಬರೆದಿದ್ದ ಆ ಪದವನ್ನು ಅಳಿಸಿ ಹಾಕಲಾಗಿತ್ತು. ಆದರೆ ಇಂದು ಸತ್ಯವು ವಿವಶಾವಸ್ಥೆ ಮತ್ತು ಮರ್ದಿತಾವಸ್ಥೆಯನ್ನು ದಾಟಿ ಹೊರಬಂದಿದೆ. ಮಾತ್ರವಲ್ಲ, ಸತ್ಯವು ಅಧಿಕಾರ ಪಡೆಯುವ ಮತ್ತು ಜಗತ್ತಿನಾದ್ಯಂತ ಹರಡುವ ಕಾಲವೀಗ ಪಕ್ವವಾಗಿದೆ. ಸತ್ಯದ ಈ ಪುಟಿಯುತ್ತಿರುವ ಕಾರಂಜಿಯ ಒಸರು ಇನ್ನು ಯಾವುದೇ ತಡೆಗೆ ನಿಲ್ಲಲೊಲ್ಲದು.

ಅದೋ ನೋಡಿ, ಅಮ್ರ್ ಬಿನ್ ಉಮಯ್ಯ ಅಲ್ ಝುಮ್ರಿಯವರು ಶೀಘ್ರಗಾಹಿ ಒಂಟೆಯಲ್ಲಿ ಸವಾರರಾಗಿ ದೂರದೂರಿಗೆ ಹೊರಟಿದ್ದಾರೆ. ಒಂಟೆಯ ಜೀನಿನ ಒಂದು ಭಾಗದಲ್ಲಿ ನೀರಿನ ಚೀಲವಿದೆ. ಇನ್ನೊಂದು ಭಾಗದಲ್ಲಿ ಹುರಿದ ಧಾನ್ಯದ ಚೀಲ ಮತ್ತು ಖರ್ಜೂರದ ಕಟ್ಟು ನೇತಾಡುತ್ತಿದೆ. ಅವರ ಒಂದು ಕೈಯಲ್ಲಿ ಲಗಾಮು, ಇನ್ನೊಂದು ಕೈಯಲ್ಲಿ ಪತ್ರವಿದೆ. ಹೌದು! ರಸೂಲುಲ್ಲಾಹ್‌ರ(ಸ) ಫರಮಾನು ಹೊತ್ತ ಪತ್ರವದು. ಅಬಿಸೀನಿಯದ ನಜ್ಜಾಶಿ (Negas) ಎಂಬ ಬಿರುದಾಂಕಿತ ರಾಜ ಅಲ್‌ಸಹ್ಮ್‌ರ ಹೆಸರಿಗೆ ಆ ಪತ್ರ. ಅದರಲ್ಲಿ ಅವರನ್ನು ಇಸ್ಲಾಮಿನೆಡೆಗೆ ಆಹ್ವಾನಿಸುವ ಸಂದೇಶವಿದೆ.

ನೋಡಿ! ರಸೂಲುಲ್ಲಾಹ್‌ರ(ಸ) ದೂತ ಅಬಿಸೀನಿಯಕ್ಕೆ ತಲುಪಿಯೂ ಬಿಟ್ಟರು. ಪಾಪ ಬಹಳ ಸುಸ್ತಾದಂತೆ ಕಾಣುತ್ತಿದ್ದಾರೆ. ಯಾತ್ರೆಯೂ ಒಂದೆರಡು ದಿನದ್ದಲ್ಲ, ತಿಂಗಳುಗಟ್ಟಲೆ ಸಂಚರಿಸಬೇಕಾಗಿತ್ತು. ಅಬಿಸೀನಿಯ(ಇತಿಯೋಪಿಯ)ದ ರಾಜ ಪ್ರವಾದಿ ವರ್ಯರ(ಸ) ಪತ್ರವನ್ನು ಓದಿದರು, ಅದಕ್ಕೆ ಮುತ್ತಿಕ್ಕಿದರು, ಅದನ್ನು ಕಣ್ಣಿಗೊತ್ತಿದರು ಮತ್ತು ಮುಸ್ಲಿಮರಾದರು. ಆ ಸಚ್ಚಾರಿತ್ರ್ಯವಂತ ವ್ಯಕ್ತಿ ಯಾವುದೇ ಆಧಾರ-ಪ್ರಮಾಣ ಗಳನ್ನು ಕೇಳಲಿಲ್ಲ, ಯಾವ ದೃಷ್ಟಾಂತವನ್ನೂ ಆಗ್ರಹಿಸಲಿಲ್ಲ. ರಸೂಲುಲ್ಲಾಹ್ ಪದವನ್ನು ಓದಿಯೇ ಅಲ್ಲಾಹನ ಏಕತ್ವ ಮತ್ತು ಅಬ್ದುಲ್ಲಾರ ಪುತ್ರ ಮುಹಮ್ಮದ್‌ರ ಪ್ರವಾದಿತ್ವವನ್ನು ಅಂಗೀಕರಿಸಿದರು. ಆಗ ಶಿಲುಬೆಗಳು ಭಯವಿಹ್ವಲಗೊಂಡು ಕಳಚ ತೊಡಗಿದವು ಮತ್ತು ಇಗರ್ಜಿಗಳ ಗೋಡೆ-ಬಾಗಿಲುಗಳು ವಿವಶವಾದುವು. ಸತ್ಯವು ಬಂದು

ಬಿಟ್ಟಿತು, ಮಿಥ್ಯ ಅಳಿಯಿತು... ಮಿಥ್ಯವು ಅಳಿಯಲೇಬೇಕಿತ್ತು.

ಈ ಹಿರಿಯ ವ್ಯಕ್ತಿ ಯಾರು? ಹಸನ್ಮುಖಿ, ಸೂಕ್ಷ್ಮಗ್ರಾಹಿ ಮತ್ತು ಹೊಣೆಗಾರಿಕೆಯ ಪ್ರಜ್ಞೆಯು ಅವರ ನೋಟದಲ್ಲೇ ಕಾಣುತ್ತಿದೆ... ಇವರು ಅಲಾ ಬಿನ್ ಹಝ್ರುಮಿ. ಪ್ರವಾದಿ ಸಂದೇಶವನ್ನು ಹೊತ್ತು ಬಹ್ರೈನಿನ ರಾಜನ ಬಳಿಗೆ ತೆರಳಿದ್ದಾರೆ. ಈ ಬಹ್ರೈನಿನ ರಾಜ ಫಾರಸ್(ಇರಾನ್)ನ ಅರಸನಿಗೆ ಕಪ್ಪ ಕೊಡುತ್ತಿದ್ದರಾದರೂ ತಮ್ಮ ಪ್ರದೇಶದಲ್ಲಿ ಅವರು ಓರ್ವ ಸ್ವಾಯತ್ತ ಆಡಳಿತಗಾರನಂತಿದ್ದರು. ಪ್ರವಾದಿವರ್ಯರ(ಸ) ಫರ್ಮಾನು ಓದಿದ ಅವರಿಗೂ ಸತ್ಯವಿಶ್ವಾಸದ ಅನುಗ್ರಹ ಪ್ರಾಪ್ತವಾಯಿತು. ಅವರೊಬ್ಬರೇ ಇಸ್ಲಾಮ್ ಸ್ವೀಕರಿಸಿದುದಲ್ಲ, ಅವರ ಪ್ರಾಂತ್ಯದ ಹೆಚ್ಚಿನ ಮಂದಿ ಇಸ್ಲಾಮಿನ ಪರಿಧಿಯೊಳಗೆ ಬಂದರು. ಈಮಾನಿನ ಚಂದ್ರಮ ಉದಯಿಸಿದಾಗ ಅದರ ಪ್ರಕಾಶವು ಸುತ್ತಲೂ ಹಬ್ಬಿತು.

ಅಲೆಕ್ಸಾಂಡ್ರಿಯದ (ಈಜಿಪ್ಟ್) ರಾಜ ಮತ್ತು ಇರಾನಿನ ಅರಸ ಖುಸ್ರೂ ಪರ್ವೇಝ್‌ನ ಬಳಿಯೂ ದೇವಸಂದೇಶವಾಹಕರ(ಸ) ದೂತರು ಇಸ್ಲಾಮಿನ ಸಂದೇಶ ಹಾಗೂ ಸನ್ಮಾರ್ಗ ದರ್ಶನದ ಪ್ರಣಾಳಿಕೆಯನ್ನು ಹೊತ್ತು ತಲುಪಿದರು. ಖುಸ್ರೂ ಅದನ್ನು ಓದುತ್ತಲೇ ಕೋಪಾ ವಿಷ್ಟನಾಗಿ ಬಿಟ್ಟ. ತುಂಬಿದ ಸಭೆಯಲ್ಲಿ ಆತ ರಸೂಲುಲ್ಲಾಹ್‌ರ(ಸ) ಫರ್ಮಾನನ್ನು ಹರಿದು ಚಿಂದಿ ಚಿಂದಿ ಮಾಡಿದ್ದಲ್ಲದೆ, ಪ್ರವಾದಿ ವರ್ಯರ(ಸ) ಬಗ್ಗೆ ನಿಂದನಾತ್ಮಕ ಪದಗಳನ್ನೂ ಆಡಿದನು. ದೂತನು ಇರಾನಿನಿಂದ ಮರಳಿ ಬಂದ ಮೇಲೆ ಪ್ರವಾದಿವರ್ಯರ(ಸ) ಮುಂದೆ ಎಲ್ಲ ವಿಷಯವನ್ನು ಅರುಹಿದರು. ಆಗ ಪ್ರವಾದಿವರ್ಯರು(ಸ) ಇಂತೆಂದರು,

"ಅವನು ಸ್ವಯಂ ತನ್ನ ಸಾಮ್ರಾಜ್ಯದ ಪ್ರಣಾಳಿಕೆಯನ್ನು ಚಿಂದಿ ಮಾಡಿದ್ದಾನೆ." ಇದು ಬಂತು, ಹೋಯಿತು, ಮುಗಿಯಿತು ಎನ್ನುವಂತಹ ಕಾಲ್ಪನಿಕ ಕತೆಯಲ್ಲ. ಇದು ದೇವ ಸಂದೇಶವಾಹಕರಾದ ಮುಹಮ್ಮದ್‌ರ(ಸ) ಮಾತಾಗಿತ್ತು. ಕೆಲವೇ ದಿನಗಳ ಬಳಿಕ ಆ ಅಸಭ್ಯ, ಒರಟನಾದ ಖುಸ್ರೂನನ್ನು ಸ್ವಯಂ ಅವನ ಮಗನೇ ಕೊಂದುಬಿಟ್ಟ. ಉಮರ್‌ರ(ರ) ಖಿಲಾಫತ್ ಕಾಲದಲ್ಲಿ ಕಿಸ್ರಾನ ಆಡಳಿತವನ್ನು ಇಸ್ಲಾಮೀ ಸೇನೆಯು ಚಿಂದಿ ಚಿಂದಿ ಮಾಡಿ ಬಿಟ್ಟಿತು. ಅಬಿಸೀನಿಯದ ರಾಜನಿಗೆ ದೊರೆತ ಸೌಭಾಗ್ಯ ಖುಸ್ರೂ ಪರ್ವೇಝುನಿಗೆ ದೊರೆಯಲಿಲ್ಲ. ಅಜ್ಞಾನ ಮತ್ತು ಅಧಃಪತನವೇ ಅವನ ಹಣೆಯಲ್ಲಿ ಬರೆಯಲ್ಪಟ್ಟಿತು. ಅಸತ್ಯದ ಅಜ್ಞಾನವು ಸತ್ಯದ ಹಾದಿಯಲ್ಲಿ ಬಹುದೊಡ್ಡ ತೊಡಕಾಯಿತು. ಅದೇ ಸ್ಥಿತಿಯಲ್ಲಿ ಖುಸ್ರೂನ ಜೀವ ಕೊನೆಗೊಂಡಿತು.

ಹೀಗೆ ಪ್ರವಾದಿವರ್ಯರ(ಸ) ಸನ್ನಿಧಿಯಿಂದ ಫರಮಾನು ಹೊರಡುತ್ತಲಿದೆ. ದೂತರು ಅದನ್ನು ಬೇರೆ ಬೇರೆ ರಾಜ, ಮಹಾರಾಜರುಗಳ ಮತ್ತು ಸರದಾರರುಗಳ ದರಬಾರುಗಳಲ್ಲಿ ಹೋಗಿ ತಲುಪಿಸುತ್ತಿದ್ದಾರೆ. ದೂಮತ್ತುಲ್ ಜಂದಲ್‌ನ ಆಡಳಿತಗಾರ ಅಕೀದರ್,

ಗಸ್ಸಾನಿನ ಅರಸ ಜಬ್ಲ ಮತ್ತು ನಜ್ದ್‌ನ ರಾಜ ಸಮಾಮರ ಅದೃಷ್ಟ ತಾರೆಗಳು ಕುಫ್ರ್ ಮತ್ತು ಅಜ್ಞಾನದ ಅಂಧಕಾರದಿಂದ ಹೊಬಂದುವು ಮತ್ತು ಅವರಿಗೆ ಸತ್ಯವಿಶ್ವಾಸದ ಪ್ರಕಾಶಮಯ ಅನುಗ್ರಹ ಲಭಿಸಿತು. ದುರಹಂಕಾರಿಗಳು, ನತದೃಷ್ಟರು ಮತ್ತು ಅಧಿಕಾರದ ಮದವೇರಿದವರು ಈ ಅನುಗ್ರಹದಿಂದ ವಂಚಿತರಾದರು. ಸತ್ಯದ ಧ್ವನಿಯು ಅಂತಹವರ ಕಿವಿ ತಮಟೆಗೆ ತಾಗಿ ಮರಳಿ ಬಿಟ್ಟಿತು. ಅವರ ಮನಸ್ಸಿನಾಳಕ್ಕೆ ಇಳಿಯಲಿಲ್ಲ. ಮೇಲಾಗಿ ಪೂರ್ವಿಕ ಧರ್ಮವನ್ನು ಬಿಡಬಾರದೆಂದೂ ಬಿಟ್ಟರೆ ಪೂರ್ವಜರ ಆತ್ಮಕ್ಕೆ ಶಾಂತಿ ಸಿಗಲಾರದೆಂದೂ ಅವರ ಚಿತ್ತವು ಎಚ್ಚರಿಸಿತು. ಜೊತೆಗೆ ಶೈತಾನನೂ ಉದ್ರೇಕಿಸಿದ 'ನೀವಾದರೋ ಸ್ವಯಂ ಲಕ್ಷಾಂತರ ಮಂದಿಯ ಒಡೆಯರು. ನಿಮ್ಮ ಮಾತೇ ಕಾನೂನಾಗಿದೆ. ನಿಮಗೆ ಯಾವುದೇ ಸಲಹೆ ಅಥವಾ ಸಂದೇಶದ ಅಗತ್ಯವೇನು? ಯಾರೋ ಕಳುಹಿಸಿದ ಪತ್ರವನ್ನು ಓದಿ ನಿಮ್ಮ ವಿಶ್ವಾಸ, ಶ್ರದ್ಧೆಯು ಒಮ್ಮೆಲೆ ಪರಿವರ್ತನೆಗೊಳ್ಳುವುದೆಂದರೆ ಅದೆಂತಹ ಅವಮಾನ ಮತ್ತು ಸೋಲು ಆದೀತು.' ಹೀಗೆ ಚಿತ್ತದ ವಂಚನೆಯು ಸತ್ಯದರ್ಶನದಿಂದ ತಡೆಯಿತು. ಅದು ಅವರವರ ಅದೃಷ್ಟ ಮತ್ತು ಅವರವರ ಹಣೆಯ ಬರಹವಾಗಿತ್ತು.

ಅರೆ ಇದು ಯಾರು? ಯಮನ್ ಮತ್ತು ತಾಯಿಫ್‌ನ ಗಡಿಪ್ರದೇಶದ ಆಡಳಿತಗಾರನಲ್ಲವೇ? ಹುಮ್ಮೈರ್‌ನ ರಾಜ ವಂಶದ ಕುಡಿ... ದಿಲ್ ಕಲಾಲ್ ಹುಮ್ಮೈರಿ. ಆತನ ದರಬಾರು ರೇಶ್ಮೆ ಪರದೆ, ಇರಾನಿ ಹಾಸು, ಆನೆದಂತದಿಂದ ರಚಿಸಿದ ಬಾಗಿಲುಗಳು, ಅದರ ಮೇಲೆ ಸ್ವರ್ಣದ ಕುಸುರಿ, ರತ್ನ ಖಚಿತ ಪೀಠಗಳಿಂದ ಕಂಗೊಳಿಸುತ್ತಿತ್ತು. ಆಸ್ಥಾನಿಕರಂತೂ ದೊಡ್ಡ ದೊಡ್ಡ ಸ್ಥಾನಮಾನ ಹೊಂದಿದವರಾಗಿದ್ದರು. ಅಧಿಕಾರಿಗಳು, ನೌಕರರು, ಗುಲಾಮರು ಧರಿಸುವ ವಸ್ತ್ರವನ್ನು ನೋಡಿದವರು ಕಣ್ಣು ಬಾಯಿ ಬಿಟ್ಟು ನೋಡುವರು. ಬೆಳ್ಳಿಯ ಅಗ್ಗಿಷ್ಟಿಕೆಗಳಲ್ಲಿ ಊದು ಮತ್ತು ಸುಗಂಧ ದ್ರವ್ಯವು ಪರಿಮಳ ಸೂಸುತ್ತಿದ್ದುವು.

"ನಮ್ಮ ಪ್ರಭು ದರಬಾರಿಗೆ ಸಾಕ್ಷಾತ್ ದರ್ಶನ ನೀಡಲಿದ್ದಾರೆ. ದಾಸರು ಸಾಷ್ಟಾಂಗಕ್ಕೆ ಸಿದ್ಧರಾಗಿರಿ" ದ್ವಾರಪಾಲಕ ಗುಡುಗಿದ. ಅವನ ಧ್ವನಿಯೂ ಅಷ್ಟೇ, ಸಿಡಿಲು ಅಬ್ಬರಿಸುವಂತೆ ಇತ್ತು. ಅಷ್ಟರಲ್ಲಿ ದಿಲ್ ಕಲಾಲ್ ಆಗಮಿಸಿದ. ತಲೆಯಲ್ಲಿ ಕಿರೀಟ ಜಗಮಗಿಸುತ್ತಿತ್ತು. ಯಮನಿನ ಸುಂದರ ಹುಡುಗರು, ಅವನ ನಿಲುವಂಗಿಯ ತುದಿಯನ್ನು ಚಿನ್ನದ ಹರಿವಾಣಗಳಲ್ಲಿ ಎತ್ತಿ ಹಿಡಿದಿದ್ದರು. ಆತನ ಆಗಮನವಾಗುತ್ತಲೇ ಆಸ್ಥಾನಿಕರೆಲ್ಲ ಸಾಷ್ಟಾಂಗವೆರಗಿದರು. ದಿಲ್ ಕಲಾಲ್ ಮುಗುಳ್ನಕ್ಕ. (ಆತ ಜೋರಾಗಿ ನಗುತ್ತಿದ್ದರೆ ದೇವ ಘನತೆಗೆ ಕುಂದುಂಟಾಗುತ್ತಿತ್ತು.) ತನ್ನನ್ನು 'ದೇವ'ನೆಂದು ಕರೆಯಲು ಜನರಿಗೆ ಆತ ಆದೇಶಿಸಿದ್ದ. ಸಾಮ್ರಾಟ, ರಾಜ, ಮಹಾರಾಜ, ರಾಜಾಧಿರಾಜ ಇತ್ಯಾದಿ ಪದಗಳೆಲ್ಲ ಹಳೆಯ ಕಾಲದು ಹಾಗೂ ಇರಾನಿ ಸಂಪ್ರದಾಯವೆಂದು ಆತ ಭಾವಿಸಿದ್ದ.

ತಾಯಿಫ್-ಯಮನಿನ ಈ 'ಮಹಾದೇವ'ನ ಬಳಿಗೂ ದೇವ ಸಂದೇಶವಾಹಕರ(ಸ) ಫರಮಾನು ತಲುಪಿತು. ಅಲ್ಲಾಹನ ಮಹಿಮೆ ನೋಡಿ! ಫರಮಾನು ಓದುತ್ತಲೇ ಸತ್ಯವು ಅನಾವರಣಗೊಂಡಿತು. ದಿಲ್ ಕಲಾಅ್ ಆಗಲೇ ಸತ್ಯವಿಶ್ವಾಸ ಸ್ವೀಕರಿಸಿ ಮುಸ್ಲಿಮನಾದ. ಇಸ್ಲಾಮ್ ಸ್ವೀಕರಿಸಿದ ಬಳಿಕ ಮನದಲ್ಲಿ ಹುಟ್ಟಿದ ದೇವಭಯ ಮತ್ತು ತ್ಯಾಗಶೀಲತೆಯ ಪ್ರಭಾವವು ಒಂದೇ ದಿನದಲ್ಲಿ ಗೋಚರಿಸಿತು. ಅಂದು ಹತ್ತಿಪ್ಪತ್ತಲ್ಲ, ಹದಿನೆಂಟು ಸಾವಿರ ಮಂದಿ ಗುಲಾಮರು ಸ್ವತಂತ್ರರಾದರು.

ಮುಸ್ಲಿಮನಾದ ಬಳಿಕ ಕೆಲವು ಕಾಲ ಅರಸೊತ್ತಿಗೆಯಲ್ಲಿ ಕಳೆಯಿತು. ಆದರೆ ದೇವಾರಾಧನೆಯ ಹಾದಿಯಲ್ಲಿ ಅರಸೊತ್ತಿಗೆಯು ತೊಡಕಿನ ಕಲ್ಲಾಗಿ ಭಾಸವಾಗ ತೊಡಗಿತು. ಅವರು ಕೊನೆಗೆ ರಾಜಾಧಿಕಾರವನ್ನು ತ್ಯಜಿಸಿ, ಐಷಾರಾಮದ ಜೀವನವನ್ನು ತೊರೆದು ಮದೀನಕ್ಕೆ ಬಂದು ನೆಲೆಸಿದರು. ಬಹಳ ಮುದ್ದಿನಿಂದ ಐಷಾರಾಮಿಯಾಗಿ ಬೆಳೆದಿದ್ದ ಆ ದೇಹಕ್ಕೀಗ ಒಣ ರೊಟ್ಟಿ ಮತ್ತು ದೊರಗು ಬಟ್ಟೆಗಳೇ ಅನುಗ್ರಹ ಗಳಾದುವು. ಅವರ ಹೆಚ್ಚಿನ ಸಮಯ ದೇವಾರಾಧನೆಯಲ್ಲಿ ಕಳೆಯತೊಡಗಿತು.

೩೦♦♦♦೧೪

ಆತ್ಮಗಳ ಪಾಪದ ಕೊಳೆ ತೊಳೆಯುತ್ತ...

ರೋಮ್‌ನ ಕೈಸರ್ ಸಾಮ್ರಾಜ್ಯವು ದೂರದೂರದವರೆಗೂ ಹಬ್ಬಿತ್ತು. ಹಲವೆಡೆ ರಾಜ್ಯಪಾಲರುಗಳನ್ನು ನೇಮಿಸಲಾಗಿತ್ತು. ಕೆಲವು ಪ್ರಾಂತ್ಯಗಳು ಮಹಾರಾಜನಿಗೆ ಕಪ್ಪ ನೀಡುವ ಸಾಮಂತ ರಾಜರುಗಳ ಅಧೀನದಲ್ಲಿದ್ದುವು. ಸಿರಿಯದ ಆಡಳಿತಾಧಿಕಾರವು ಫರ್ದ ಬಿನ್ ಅಮ್ರ್ ಖಿರ್ಝಾಈಯವರ ಹೊಣೆಯಲ್ಲಿತ್ತು. ಆ ಕಾಲದ ರಾಜ್ಯಪಾಲ ಕೂಡ ಇಂದಿನ ಸರ್ವಾಧಿಕಾರಿ ರಾಜನಿಗಿಂತ ಹೆಚ್ಚಿನ ಅಧಿಕಾರ ಹೊಂದಿರುತ್ತಿದ್ದ.

ಈ ಸಿರಿಯನ್ ರಾಜ್ಯಪಾಲ ಫರ್ದ ಇಸ್ಲಾಮ್‌ನ ತೆಕ್ಕೆಯೊಳಗೆ ಬಂದರು. ಸತ್ಯವಿಶ್ವಾಸ ಸ್ವೀಕರಿಸಿ, ಏಕದೇವಾರಾಧಕರ ಸಾಲಿನಲ್ಲಿ ಗುರುತಿಸಿಕೊಂಡರು. ಇಂತಹ ವಿಷಯಗಳು ಎಂದೂ ಗೌಪ್ಯವಾಗಿರುವುದಿಲ್ಲ. ಫರ್ದ ಇಸ್ಲಾಮ್ ಸ್ವೀಕರಿಸಿದ ವಿಷಯ ರೋಮ್‌ನ ಕೈಸರನಿಗೂ ತಿಳಿಯಿತು. ಮಾತ್ರವಲ್ಲ, ಇತರ ಜನರೂ ಫರ್ದರ ಹೆಜ್ಜೆ ಗುರುತುಗಳಲ್ಲಿಯೇ ಕಾಲಿಡುವ ಉತ್ಸಾಹ ಹೊಂದಿದ್ದಾರಲ್ಲದೆ, ಫರ್ದರ ಧರ್ಮಾಂತರವು ಜನತೆಯ ಮೇಲೆ ಗಾಢ ಪ್ರಭಾವ ಬೀರುತ್ತಿದೆಯೆಂದೂ ತಿಳಿದ ಕೈಸರ್ ಕೆಂಡಾ ಮಂಡಲನಾದ.

ಹೆಚ್ಚು ತಡಮಾಡದೆ ಫರ್ದರನ್ನು ತನ್ನ ದರಬಾರಿಗೆ ಹಾಜರುಪಡಿಸಬೇಕೆಂದು ಆದೇಶಿಸಿದ ಕೈಸರ್, "ಫರ್ದನಿಗೆ ಕೊಂಚವೂ ಕಾಲಾವಕಾಶ ನೀಡದೆ ತಕ್ಷಣ ನನ್ನ ಬಳಿಗೆ ಕರಕೊಂಡು ಬರಬೇಕು. ಜೀವವುಳಿಸಲು ಆತ ಅರೇಬಿಯಾಕ್ಕೆ ಓಡಿ ಹೋಗಲೂ ಬಹುದು. ಒಂದು ವೇಳೆ ಆತ ಪರಾರಿಯಾದರೆ ನಮ್ಮ ಪಾಲಿಗೆ ಬಹುದೊಡ್ಡ ಕ್ಷೋಭೆ ಯಾಗಿ ಮಾರ್ಪಟ್ಟಾನು" ಎಂದು ಸೈನಿಕರಿಗೆ ತಾಕೀತು ಮಾಡಿದ. ಹೀಗೆ ಫರ್ದರನ್ನು ಕೈಸರನ ದರಬಾರಿನಲ್ಲಿ ಹಾಜರುಪಡಿಸಲಾಯಿತು.

"ನೀನು ಕ್ರೈಸ್ತ ಧರ್ಮವನ್ನು ತೊರೆದು ಮುಸ್ಲಿಮನಾಗಿದ್ದೀಯೆಂದು ಕೇಳಿದೆ?" ಕೈಸರ್ ವಿಚಾರಿಸಿದ.

"ಹೌದು, ನೀವು ತಿಳಿದದ್ದು ಸರಿಯಾಗಿದೆ. ನಾನು ಅಂಧಕಾರದಲ್ಲಿದ್ದೆ. ಅಲ್ಲಾಹನು ನನಗೆ ಪ್ರಕಾಶವನ್ನು ದಯಪಾಲಿಸಿದನು. ನಾನು ಈಗ ಏಕದೇವನನ್ನು ಆರಾಧಿಸುತ್ತಿದ್ದೇನೆ.

ನಿಮ್ಮ ಈ ತ್ರಿಏಕತ್ವ ಅನ್ನುವುದು ಮಾನವ ನಿರ್ಮಿತ ವಿಶ್ವಾಸವಾಗಿದೆ..." ಫರ್ದರಿಂದ ಧೀಮಂತ ಉತ್ತರ ಬಂತು.

"ನನ್ನ ದರಬಾರಿನಲ್ಲಿ ಕ್ರೈಸ್ತ ಧರ್ಮವನ್ನು ನಿಂದಿಸುವಷ್ಟು ಧೈರ್ಯ ಬಂತೇ ನಿನಗೆ? ನೀನೇನು ಕೈಸರನ ದರಬಾರಿನಲ್ಲಿದ್ದೀಯೋ ಅಥವಾ ಬಚ್ಚಲ ಕೋಣೆಯಲ್ಲೋ?" ಕೈಸರ್ ರೋಷಾಕುಲನಾಗಿ ಚೀರಿದ.

"ಸತ್ಯವಾದ ಮಾತನ್ನು ಹೆದರಿಕೊಂಡು ಹೇಳಬೇಕಾಗಿಲ್ಲ ಮಹಾರಾಜ! ಮನಸ್ಸಿನಲ್ಲಿ ಒಂದು, ನಾಲಗೆಯಲ್ಲಿ ಇನ್ನೊಂದು ಮಾತು ಕಾಪಟ್ಯ ಮತ್ತು ಮೋಸದ ಮಾತಾಗಿದೆ" ಫರ್ದಾ ತನ್ನ ನಿಲುವಂಗಿಯ ಗುಂಡಿಯನ್ನು ಮುಟ್ಟುತ್ತಾ ಹೇಳಿದರು.

"ಒಂದು ವೇಳೆ ನೀನು ಈ ಹೊಸ ಧರ್ಮವನ್ನು ತೊರೆಯದೆ ಇದ್ದರೆ, ರಾಜ್ಯಪಾಲ ಹುದ್ದೆಯಿಂದ ವಜಾಗೊಳಿಸಲ್ಪಡುವೆ!" ಎಂದು ಕೈಸರ್ ಕಣ್ಣು ಕೆಕ್ಕರಿಸಿದ.

"ನನಗೆ ಒಪ್ಪಿಗೆಯಿದೆ. ಸತ್ಯವಿಶ್ವಾಸಕ್ಕೆ ಯಾವ ವಸ್ತುವೂ ಸಾಟಿಯಾಗಲಾರದು" ಫರ್ದರಿಂದ ನಿರ್ಲಿಪ್ತ ಉತ್ತರ ಬಂತು.

"ನೋಡು! ಈಗಲೂ ಕಾಲ ಮಿಂಚಿಲ್ಲ. ನಾನು ನಿನ್ನನ್ನು ಗೌರವಯುತವಾಗಿ, ಉಡುಗೊರೆಗಳೊಂದಿಗೆ ಸಿರಿಯಕ್ಕೆ ಮರಳಿಸುವೆನು. ಮೂರ್ಖರಂತಾಡಬೇಡ. ಕೈಗೆ ಬಂದ ಸಂಪತ್ತನ್ನು ಕಳೆದುಕೊಳ್ಳಬೇಡ!" ಈಗ ಕೈಸರ್ ತೀರಾ ಹಿತಚಿಂತನೆಯ ಧ್ವನಿಯಲ್ಲಿ ಹೇಳಿದ.

"ಇಸ್ಲಾಮ್ ಮತ್ತು ಈಮಾನಿಗೆ ಪ್ರತಿಯಾಗಿ ಬೇರೆ ಯಾವುದೇ ಗೌರವ-ಆದರದ ಅಗತ್ಯ ನನಗಿಲ್ಲ. ನನ್ನ ತೀರ್ಮಾನ ದೃಢ ಮತ್ತು ಅಚಲವಾಗಿದೆ. ಇಡೀ ಜಗತ್ತಿನ ಅರಸೊತ್ತಿಗೆಯೂ ನನ್ನ ವಿಶ್ವಾಸಕ್ಕೆ ಬೆಲೆ ಕಟ್ಟಲಾರದು. ಮಾತ್ರವಲ್ಲ..." ಕೈಸರನ ಕಣ್ಣುಗಳು ಕಿಡಿಕಾರಿದುವು. ಆತ ಫರ್ದರ ಮಾತನ್ನು ಪೂರ್ತಿಗೊಳಿಸಲೂ ಬಿಡದೆ ಗರ್ಜಿಸಿದ, "ಈ ಮೂರ್ಖನನ್ನು ನನ್ನ ಎದುರಿನಿಂದ ಕೊಂಡು ಹೋಗಿ! ಇವನನ್ನು ಬಂಧನದಲ್ಲಿಡಿರಿ! ಇವನಿಗೆ ಬೇಡಿ ತೊಡಿಸಿರಿ... ಇವನ ಬುದ್ಧಿ ನೆಟ್ಟಗಾಗುವ ವರೆಗೆ..."

ಫರ್ದರನ್ನು ಬಂದೀಖಾನೆಯಲ್ಲಿರಿಸಲಾಯಿತು ಹಾಗೂ ತರತರವಾಗಿ ಹಿಂಸಿಸಲಾಯಿತು. ಕೆಲವು ದಿನಗಳ ಬಳಿಕ ಕೈಸರ್, ಪುನಃ ಅವರನ್ನು ತನ್ನ ದರಬಾರಿಗೆ ಕರೆಸಿ ಹೇಳಿದ, "ಈಗಲೂ ನೀನು ಹೊಸ ಧರ್ಮವನ್ನು ತೊರೆದರೆ, ನಿನಗೆ ಮತ್ತೆ ರಾಜ್ಯಪಾಲ ಹುದ್ದೆ ನೀಡುವೆನು."

"ಅದು ಸರ್ವಥಾ ಸಾಧ್ಯವಿಲ್ಲ" ಎಂದು ಫರ್ದ ಉತ್ತರಿಸಿದರು.

ಅವರಿಗೆ ಕೊಲೆ ಬೆದರಿಕೆ ಒಡ್ಡಲಾಯಿತು. ಅದಂತೂ ತೀರಾ ಕಠಿಣ ಪರೀಕ್ಷೆಯಾಗಿತ್ತು. ಜೀವಕ್ಕೆ ಕುತ್ತು ಎಂದು ಅರಿವಾದಾಗ ಫರ್ದರ ನಿಶ್ಚಯದಾರ್ಢ್ಯವು ಅಲುಗಾಡತೊಡಗುವುದೆಂದು ಕೈಸರ್ ಭಾವಿಸಿದ. ಆದರೆ ಫರ್ದರಿಂದ ಬಂದ ಉತ್ತರವು

ಆತನನ್ನು ದಂಗುಬಡಿಸಿತು.

"ಜೀವ? ಅದಂತೂ ಒಂದಲ್ಲ ಒಂದು ದಿನ ಹೋಗಲೇ ಬೇಕಲ್ಲ. ಅದು ರಾಜಪೀಠದಲ್ಲಿ ಹೋದರೇನು, ನೇಣುಗಂಬದಲ್ಲಿ ಹೋದರೇನು? ಆದರೆ ಸತ್ಯದ ಮಾರ್ಗದಲ್ಲಿ ಜೀವ ಹೋಯಿತೆಂದರೆ, ಅಂತಹ ಪ್ರಾಣವೇ ಯಶಸ್ವಿಯಾಗುವುದು. ಸುವಾರ್ತೆ ಸಿಗುವುದೂ ಆ ಪ್ರಾಣಕ್ಕೇ."

ಫರ್ದ! ಅಕಟ!! ಫರ್ದರನ್ನು ವಧಾಗಾರಕ್ಕೆ ತರಲಾಯಿತು. ಕೈಗಳೆರಡನ್ನೂ ಹಿಂದಕ್ಕೆ ಕಟ್ಟಲಾಗಿತ್ತು. ಕಾಲುಗಳಿಗೆ ಬೇಡಿ ತೊಡಿಸಲಾಗಿತ್ತು. ಕೈಸರ್ ಹೇಳಿದ,

"ನೋಡು, ನಿನಗೆ ಇನ್ನೂ ಅವಕಾಶವಿದೆ. ನನ್ನ ಒಂದು ಸಂಜ್ಞೆಯು ನಿನಗೆ ಜೀವದಾನ ನೀಡುತ್ತದೆ..." ಕೈಸರ್ ಎಚ್ಚರಿಸಿದ.

ಉತ್ತರವಾಗಿ ಫರ್ದ, "ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್, ವಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್" ಎಂದು ಘೋಷಿಸಿದರು. ಅವರು ಕೊನೆಯ ಪದ 'ರಸೂಲುಲ್ಲಾಹ್'ನ 'ಹ್' ಉಚ್ಚಾರಕ್ಕೆ ತಲುಪಿದ್ದಷ್ಟೇ... ಕಟುಕನು ಅವರ ರುಂಡವನ್ನು ಮುಂಡದಿಂದ ಬೇರ್ಪಡಿಸಿ ಬಿಟ್ಟ.

❖ ❖ ❖ ❖

ಇತ್ತ ಪ್ರವಾದಿವರ್ಯರ(ಸ) ವತಿಯಿಂದ ರಾಜ ಮಹಾರಾಜರುಗಳಿಗೆ ಮತ್ತು ಆಡಳಿತಗಾರರಿಗೆ ಸತ್ಯಸಂದೇಶದ ಫರಮಾನು ಹೊರಡುತ್ತಿತ್ತು. ಅತ್ತ ಅರೇಬಿಯದ ದೂರದೂರದ ಗೋತ್ರಗಳ ಮಂದಿ ತಂಡೋಪತಂಡಗಳಾಗಿ ಬಂದು ಪ್ರವಾದಿ ವರ್ಯರ(ಸ) ಸನ್ನಿಧಿಯಲ್ಲಿ ಹಾಜರಾಗುತ್ತಿದ್ದರು. ಇಸ್ಲಾಮಿನ ಧ್ವನಿಯು ದೂರದೂರದ ವರೆಗೂ ಪ್ರತಿಧ್ವನಿಸುತ್ತಿತ್ತು. ತಕ್ಬೀರಿನ ಸದ್ದು ಖರ್ಜೂರದ ತೋಪುಗಳನ್ನು ದಾಟಿ ಕಣಿವೆ, ಗುಡ್ಡ, ಬೆಟ್ಟ, ಪರ್ವತಗಳಲ್ಲೂ ಮೊಳಗತೊಡಗಿತು. ಜನಮನವು ಇಸ್ಲಾಮಿ ನಡೆಗೆ ಆಕರ್ಷಿತವಾಗುತ್ತಲಿತ್ತು. ಯಾರು ಈ ಅಮೃತವನ್ನು ಗಂಟಲಿಗಿಳಿಸಿದನೋ ಆತನ ದಾಹವು ಜೀವನಾಂತ್ಯದ ವರೆಗೂ ತಣಿದಂತೆ. ಯಾವುದಾದರೂ ಗೋತ್ರದ ಮೂರ್ನಾಲ್ಕು ಮಂದಿ ಇಸ್ಲಾಮ್ ಸ್ವೀಕರಿಸಿದರೆ ಕೂಡ ಅವರ ವರ್ತನೆ, ನಡೆ-ನುಡಿ, ಚಾರಿತ್ರ್ಯ ಇತ್ಯಾದಿಗಳಿಂದ ಇತರರೂ ಪ್ರಭಾವಿತರಾಗಿಬಿಡುತ್ತಿದ್ದರು. ಇಸ್ಲಾಮ್ ಸ್ವೀಕರಿಸಿದ ಬಳಿಕ ಹೃದಯ ಮಾತ್ರವಲ್ಲ, ಮುಖ ಲಕ್ಷಣವೂ ಪರಿವರ್ತನೆಗೊಳ್ಳುತ್ತದೆ ಎಂದು ಜನರಿಗೆ ಅರಿವಾಗ ತೊಡಗಿತು. ಈ ಆಕರ್ಷಣೆಯೇ ಅರೇಬಿಯದ ಮರಳುಗಾಡಿನ ಹಳ್ಳಿಗರನ್ನೂ ತನ್ನೆಡೆಗೆ ಸೆಳೆಯುತ್ತಿತ್ತು. ಮಾತ್ರವಲ್ಲ, ಪ್ರತಿಯೋರ್ವ ಮುಸ್ಲಿಮನೂ ಸ್ವಯಂ ಸಂದೇಶ ಪ್ರಚಾರಕನಾಗಿಯೂ ಅಲ್ಲದೆ, ನಡೆದಾಡುವ ಕುರ್‌ಆನ್ ಆಗಿಯೂ ಬದಲಾಗುತ್ತಿದ್ದ.

ಇದು ಯಾರು? ಪ್ರಕಾಶಮಾನ ಮುಖಾರವಿಂದ, ಹೊಳೆಯುವ ಹಣೆಗಳು,

ಗೌರವರ್ಣ, ಎತ್ತರದ ನಿಲುವು, ಉದ್ದ ಜುಬ್ಬ ಮತ್ತು ವಿಶ್ವಾಸವು ಅವರ ನಡೆಯಲ್ಲಿ ಎದ್ದು ಕಾಣುತ್ತಿದೆ. ಇವರು ನಜೀಬ್ ಗೋತ್ರದ ಪ್ರತಿನಿಧಿಗಳು. ಇಡೀ ಗೋತ್ರವು ಇಸ್ಲಾಮ್ ಸ್ವೀಕರಿಸಿದೆ. ಈ ಹದಿಮೂರು ಮಂದಿಯ ನಿಯೋಗವನ್ನು ಪ್ರವಾದಿ ವರ್ಯರ(ಸ) ಸನ್ನಿಧಿಗೆ ಕಳುಹಿಸಲಾಗಿದೆ.

ಇವರು ವ್ಯಾಪಾರ ನಿಮಿತ್ತ ಮದೀನಕ್ಕೆ ಆಗಮಿಸಿರುವರೇ? ಒಂಟೆ, ಆಡುಗಳ ಹಿಂಡೇ ಅವರೊಂದಿಗಿದೆ. ಜತೆಗೆ ಆಹಾರಧಾನ್ಯ, ಖರ್ಜೂರ ಮತ್ತು ದಿರ್ಹಮ್-ದಿನಾರು ಗಳಿವೆ. ವಸ್ತುತಃ ಅವರ ಗೋತ್ರದ ಜನರು ತಮ್ಮ ಸಂಪತ್ತಿನ ಝಕಾತನ್ನು ಕೊಟ್ಟು ಆ ನಿಯೋಗವನ್ನು ಕಳುಹಿಸಿದ್ದಾರೆ.

"ನಿಮ್ಮ ಝಕಾತನ್ನು ಮರಳಿಕೊಂಡು ಹೋಗಿರಿ ಮತ್ತು ನಿಮ್ಮ ಪ್ರದೇಶದ ಬಡಬಗ್ಗರಲ್ಲಿ ವಿತರಿಸಿರಿ..." ಎನ್ನುತ್ತಾ ಪ್ರವಾದಿವರ್ಯರು(ಸ) ಹೇಳಿದರು, "ಅಲ್ಲಾಹನು ಯಾರಿಗಾದರೂ ಒಳಿತನ್ನು ಬಯಸಿದರೆ ಅವರ ಹೃದಯಗಳನ್ನು ಈಮಾನಿಗಾಗಿ ತೆರೆದು ಬಿಡುತ್ತಾನೆ."

ನಜೀಬ್ ಗೋತ್ರದ ಈ ಪ್ರತಿನಿಧಿಗಳು ಕುರ್‌ಆನ್, ಸುನ್ನತ್ ಕಲಿಯುವ ಅತ್ಯಾಸಕ್ತಿ ಹೊಂದಿದ್ದರು. ರಸೂಲುಲ್ಲಾಹ್‌ರು(ಸ) ಆ ನಿಯೋಗದ ಸೇವೆಗೆ ಬಿಲಾಲ್ ರನ್ನು(ರ) ನೇಮಿಸಿದರು. ಆ ಪ್ರತಿನಿಧಿಗಳು ಹೆಚ್ಚಿನ ಸಮಯವನ್ನು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಕಳೆಯಲು ಇಚ್ಛಿಸುತ್ತಿದ್ದರು. ಜತೆಗೆ ಸಹಾಬಿಗಳೊಂದಿಗೂ ಕುರ್‌ಆನ್, ಸುನ್ನತ್‌ನ ಬಗ್ಗೆ ಚರ್ಚಿಸುತ್ತಿದ್ದರು. ಇನ್ನೊಂದೆಡೆ ಅವರಲ್ಲಿ ತಮ್ಮ ನಾಡಿಗೆ ಹೊರಡುವ ಆತುರವೂ ಇತ್ತು. "ನಾವು ತಾಯ್ನಾಡಿಗೆ ಮರಳಲು ಇಚ್ಛಿಸುತ್ತಿದ್ದೇವೆ ಎಂದು ಪ್ರವಾದಿ ವರ್ಯರಲ್ಲಿ(ಸ) ಹೇಳಿ, ಅವರ ಅನುಮತಿಯನ್ನು ಕಾಯುತ್ತಿದ್ದೇವೆ" ಎಂದು ಅವರು ಸಹಾಬಿಗಳೊಡನೆ ಹೇಳುತ್ತಲೂ ಇದ್ದರು.

ಸಹಾಬಿಗಳು ಕೇಳುತ್ತಾರೆ, "ನಿಮಗೆ ಊರಿಗೆ ಮರಳಲು ಅಷ್ಟು ಆತುರವೇಕೆ? ಇಷ್ಟೊಂದು ಪಾವನವಾದ ಸಾಂಗತ್ಯ ಜಗತ್ತಿನ ಬೇರೆಲ್ಲಿ ಸಿಗಲು ಸಾಧ್ಯ?"

ಹೌದು! ಅಪರೂಪಕ್ಕಷ್ಟೇ ಇಂತಹ ಸುವರ್ಣಾವಕಾಶ ಲಭಿಸುವುದು.

ಅತಿಥಿಗಳು ಉತ್ತರಿಸಿದರು, "ಇಲ್ಲಿಂದ ಹೋಗಲು ನಮ್ಮ ಮನಸ್ಸು ಕೇಳು ವುದಿಲ್ಲ. ಆದರೆ ಪ್ರವಾದಿವರ್ಯರಲ್ಲಿ(ಸ) ನಾವು ಕಲಿತುದನ್ನು ನಮ್ಮ ಜನಾಂಗದವರಿಗೂ ಆದಷ್ಟು ಬೇಗ ತಿಳಿಸಿಕೊಡುವ ಅತೀವ ಹಂಬಲವಿದೆಯಲ್ಲ... ನಮ್ಮ ಊರವರೂ ಅದನ್ನು ಕಲಿತರೆ ಒಳ್ಳೆಯದಲ್ಲವೇ..."

ಈ ನಜೀಬ್ ನಿಯೋಗವು ಮರಳುವಾಗ, ಪ್ರವಾದಿವರ್ಯರು(ಸ) ಅವರಿಗೆ ಕೆಲವು ಉಡುಗೊರೆಗಳನ್ನು ನೀಡಿದರು. ತರುವಾಯ ಕೇಳಿದರು,

"ನಿಮ್ಮ ಪೈಕಿ ಯಾರಾದರೂ ಉಳಿದಿದ್ದಾರೆಯೇ?"

ಜನರು ಓರ್ವ ಸ್ಫುರದ್ರೂಪಿ ಯುವಕನೆಡೆಗೆ ಸೂಚಿಸುತ್ತ ಹೇಳಿದರು,

"ಓ... ಆ ಯುವಕ ಉಳಿದು ಬಿಟ್ಟಿದ್ದಾನೆ."

"ಅಲ್ಲಾಹನ ಸಂದೇಶವಾಹಕರೇ(ಸ)! ನನ್ನ ಗೋತ್ರದವರ ಮೇಲೆ ಅನುಗ್ರಹದ ವರ್ಷಧಾರೆ ಸುರಿದಿದೆ... ನನ್ನ ಮೇಲೂ ಇನ್ನೊಂದಿಷ್ಟು ಹನಿ ಬೀಳದೇ?" ಆ ಯುವಕ ಅರಿಕೆ ಮಾಡಿದ.

"ನಿನಗೇನು ಬೇಕು ಹೇಳು" ಅನಾಥಮುತ್ತು(ಸ) ಅನುನಯದಿಂದ ಕೇಳಿದರು.

"ನಾನು... ನನ್ನ ಬಯಕೆ ಇತರರಿಗಿಂತ ವಿಶಿಷ್ಟವಾದುದಾಗಿದೆ... ಯಾ ರಹ್ಮತುಲ್ಲಿಲ್ ಆಲಮೀನ್(ಸ)" ಯುವಕ ವಿನೀತನಾಗಿ ಹೇಳಿದ.

"ಆ ಬಯಕೆ ಯಾವುದು?" ಅನಾಥಮುತ್ತು(ಸ) ಮತ್ತೆ ವಿಚಾರಿಸಿದರು.

"ನಾನು ಮನೆಯಿಂದ ಹೊರಡುವಾಗ, ತಮ್ಮಿಂದ ನನಗಾಗಿ ಪ್ರಾರ್ಥನೆ ಮಾಡಿಸುವೆನು ಎಂದು ಬಯಸಿದ್ದೆ. ತಮ್ಮ ಪ್ರಾರ್ಥನೆಯಿಂದ ಅಲ್ಲಾಹ್ ನನಗೆ ಮೋಕ್ಷ ನೀಡುವನು, ನನ್ನ ಮೇಲೆ ಕೃಪೆ ತೋರುವನು ಮತ್ತು ನನ್ನ ಹೃದಯವನ್ನು ಶ್ರೀಮಂತಗೊಳಿಸುವನು ಎಂದು ಆಶಿಸುತ್ತೇನೆ."

ಯುವಕನ ಉತ್ತರ ಕೇಳಿದ ಅನಾಥಮುತ್ತು(ಸ) ಮುಗುಳ್ನಕ್ಕು ಆತನಿಗಾಗಿ ಪ್ರಾರ್ಥಿಸಿದರು.

ಹಿಜ್ರತ್‌ನ ಹತ್ತನೇ ವರ್ಷ ಪ್ರವಾದಿವರ್ಯರು(ಸ) ಹಜ್ಜ್‌ಗೆ ಹೋಗಿದ್ದಾಗ, ನಜೀಬ್ ಗೋತ್ರದ ಜನರೂ ಮಕ್ಕಾಗೆ ಬಂದಿದ್ದರು. ಅವರು ಪ್ರವಾದಿವರ್ಯರ(ಸ) ಸನ್ನಿಧಿಗೆ ಬಂದಾಗ, ಪ್ರವಾದಿವರ್ಯರು(ಸ) ಅವರೊಡನೆ ಆ ಯುವಕನ ಕುರಿತು ವಿಚಾರಿಸಿದರು. ಜನರೆಂದರು,

"ಯಾ ರಸೂಲುಲ್ಲಾಹ್! ಅಂತಹ ಬೇರೊಬ್ಬ ವ್ಯಕ್ತಿಯನ್ನು ನಾವು ಕಂಡದ್ದಿಲ್ಲ. ಅವನ ನಿರಪೇಕ್ಷತೆ ಮತ್ತು ಹೃದಯ ಶ್ರೀಮಂತಿಕೆಯು ಎಷ್ಟಿದೆಯೆಂದರೆ, ಜಗತ್ತಿನೆಲ್ಲ ಸಂಪತ್ತು ತಂದು ರಾಶಿ ಹಾಕಿದರೂ ಆತ ಅದರತ್ತ ಕಣ್ಣೆತ್ತಿಯೂ ನೋಡಲಾರ!"

❖ ❖ ❖ ❖

ನಿಯೋಗಗಳು ಬರುವುದು ಮತ್ತು ಪ್ರವಾದಿವರ್ಯರ(ಸ) ದರ್ಶನ ಪಡೆಯುವುದು ಒಂದರ ಹಿಂದೊಂದರಂತೆ ನಡೆಯುತ್ತಲೇ ಇತ್ತು. ಪ್ರವಾದಿವರ್ಯರ(ಸ) ಡೇರೆಯ ಹೊರಗೆ ನಿಯೋಗಗಳ ಸಾಲು ಸಾಲೇ ನೆರೆದಿರುತ್ತಿತ್ತು. ಹಮದಾನ್, ಸಕೀಫ್, ತ್ವೈ, ಗಸ್ಸಾನ್, ಅಝ್ದ್, ಗಾಮಿದ್, ಮಹಾರಿಬ್, ವದಸ್, ಸಲಾಮಾನ್, ನಜೀಲ್ ಇತ್ಯಾದಿ ಗೋತ್ರಗಳ ನಿಯೋಗಗಳು ಅವುಗಳಲ್ಲಿ ಪ್ರಮುಖವಾಗಿದ್ದುವು. ಬಂದ ನಿಯೋಗಗಳೆಲ್ಲವೂ ಈಮಾನಿನ ಅನುಗ್ರಹದಿಂದ ಮನತುಂಬಿ ಮರಳುತ್ತಿದ್ದುವು.

ತಾಯಿಫ್... ಅಂದೊಮ್ಮೆ ಅಲ್ಲಿನ ಪೇಟೆಗಳಲ್ಲಿ ಅಲ್ಲಿನ ಜನರು ಪ್ರವಾದಿವರ್ಯರ(ಸ) ಮೇಲೆ ಕಲ್ಲಿನ ಸುರಿಮಳೆಗೆರೆದು ಅವರ(ಸ) ಪಾದಗಳನ್ನು ರಕ್ತದಿಂದ ತೋಯ್ಸಿದ್ದರು. ಅಲ್ಲಿನ ಮಕ್ಕಳು ಅವರ ಹಿಂದೆ ಚಪ್ಪಾಳೆ ತಟ್ಟುತ್ತಾ ಕೇಕೆ ಹಾಕಿ ನಗುತ್ತಿದ್ದರು. ಈಗ ಅದೇ ತಾಯಿಫ್ ನಿವಾಸಿಗಳು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾಗಿದ್ದಾರೆ. ಕುಫ್ರ್ ಮತ್ತು ಅಜ್ಞಾನದ ಅಂಧಕಾರವು ಅಳಿದು ಹೋಗಿದೆ. ಮೌಢ್ಯ ಮತ್ತು ಅಲಕ್ಷ್ಯದ ಪರದೆಗಳು ಕಣ್ಣ ಮುಂದಿನಿಂದ ಹರಿದು ಹೋಗಿವೆ. ಹೃದಯಗಳ ಲೋಕವೇ ಬದಲಾಗಿದೆ. ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಮಾತನ್ನು ಆಲಿಸಲೂ ನಿರಾಕರಿಸುತ್ತಿದ್ದಂತಹ ಆ ಜನರು ಈಗ ಅವರ(ಸ) ಅನುಸರಣೆಯ ಕಂಠಕಡಗಕ್ಕೆ ಸ್ವಯಂ ಕೊರಳೊಡ್ಡುತ್ತಿದ್ದಾರೆ.

ಸಕೀಫ್ ಗೋತ್ರದ ನಿಯೋಗಕ್ಕೆ ಪ್ರವಾದಿವರ್ಯರು(ಸ) ವಿಶೇಷ ಮಹತ್ವ ನೀಡಿದ್ದರು. ಅವರಿಗಾಗಿ ಮಸೀದಿಯ ಆವರಣದೊಳಗೇ ಡೇರೆ ಕಟ್ಟಿಸಿದರು. ಸಹಾಬಿಗಳು ನಮಾಝ್ ನಿರ್ವಹಿಸುವುದನ್ನು ಮತ್ತು ಕುರ್‌ಆನ್ ಪಠಿಸುವುದನ್ನು ಆ ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಈ ಆರಾಧನೆ, ದಾಸ್ಯತನದ ಅವಸ್ಥೆಯನ್ನು ನೋಡುತ್ತಲೇ ಅವರ ಹೃದಯಗಳು ಇಸ್ಲಾಮಿಗಾಗಿ ತೆರೆದುಕೊಂಡವು.

ವಿಗ್ರಹ ನಿರ್ಮೂಲನ

ಅರೇಬಿಯಾದ ಪ್ರತಿಯೊಂದು ಗೋತ್ರಕ್ಕೂ ಕುಲದೇವರೆಂಬ ಪ್ರತ್ಯಪ್ರತ್ಯೇಕ ವಿಗ್ರಹಗಳಿದ್ದುವು. ಸಕೀಫ್ ಗೋತ್ರದವರು 'ಲಾತ್' ಎಂಬ ವಿಗ್ರಹವನ್ನು ಪೂಜಿಸುತ್ತಿದ್ದರು. ಅರಬರಲ್ಲಿ ವಿಗ್ರಹಗಳಿಗೆ ಯಾವುದೇ ಲೆಕ್ಕಮಿತಿಯಿರಲಿಲ್ಲ. ಒಂದು ಮನೆಯಲ್ಲಿ ಹತ್ತು ಮಂದಿ ಇದ್ದರೆ ಆ ಹತ್ತೂ ಮಂದಿಗೆ ಪ್ರತ್ಯಪ್ರತ್ಯೇಕ ಆರಾಧ್ಯರು ಗಳು! ಯಾವುದಾದರೂ ಆಕಾರದ ಕಲ್ಲು ಅಥವಾ ಮರದ ತುಂಡು ಸಿಕ್ಕಿ ಬಿಟ್ಟರೆ, ಅಲ್ಲಿ ಇಲ್ಲಿಂದ ಕಥೆಗಳನ್ನು ಹೆಣೆದು ಅವುಗಳನ್ನು ಆರಾಧ್ಯವನ್ನಾಗಿ ಮಾಡಿ ಬಿಡುತ್ತಿದ್ದರು. ಆದರೆ 'ಲಾತ್' ಅರೇಬಿಯದ ಸಾಮೂಹಿಕ ಆರಾಧ್ಯ ದೈವವಾಗಿತ್ತು. ಹುಬಲ್ ಮತ್ತು ಉಝ್ಝಾಗಳಷ್ಟೇ ಮಾನ್ಯತೆ ಅದಕ್ಕಿತ್ತು.

ಸಕೀಫ್‌ನ ನಿಯೋಗವು ನಾಡಿಗೆ ಮರಳುವಾಗ ಅವರೊಂದಿಗೆ ಖಾಲಿದ್ ಬಿನ್ ವಲೀದ್* ತಮ್ಮ ಕೆಲವು ಸಹಾಬಿಗಳೊಡಗೂಡಿ ಹೊರಟಿದ್ದರು. ಅವರ ನಾಡು ತಲುಪಿದಾಗ ಅಲ್ಲಿ ಪ್ರತಿಷ್ಠಾಪಿಸಲಾಗಿದ್ದ 'ಲಾತ್'ನ ವಿಗ್ರಹಗಳನ್ನು ಒಡೆಯತೊಡಗಿದರು. ಈ ಸುದ್ದಿಯು ಅಕ್ಕಪಕ್ಕದ ಪ್ರದೇಶಗಳಲ್ಲೆಲ್ಲ ಕಾಡ್ಗಿಚ್ಚಿನಂತೆ ಹರಡಿತು. 'ಲಾತ್' ನೂರಾರು ವರ್ಷಗಳಿಂದ ಅವರ ಆರಾಧ್ಯವಾಗಿತ್ತು. ಅದರ ಮೇಲಿನ ಭಕ್ತಿಯು ಅವರ ಪೈಕಿ ಹೆಚ್ಚಿನವರ ಹೃದಯಗಳಲ್ಲಿ ಆಳವಾಗಿ ಬೇರೂರಿತ್ತು. ಅದನ್ನು ಒಡೆಯುವ ದೃಶ್ಯ ನೋಡಲು ಜನಸಂದಣಿಯೇ ನೆರೆದಿತ್ತು. ಪುರುಷರು ಮಾತ್ರವಲ್ಲ, ಪರ್ದಾಧಾರಿಣಿ ಮಹಿಳೆಯರೂ ತಮ್ಮ ಮನೆಗಳಿಂದ ಹೊರಬಂದು ಜಮಾಯಿಸಿದ್ದರು! ಸತ್ಯವಿಶ್ವಾಸವು ಆಗ ಅವರ ಹೃದಯಗಳಲ್ಲಿ ಸಂಪೂರ್ಣ ಸ್ಥಾಪಿತವಾಗಿರಲಿಲ್ಲ. 'ಲಾತ'ನ್ನು ಕೆಡಹಿದವನು ಸ್ವಯಂ ನಾಶವಾಗಿ ಹೋಗುವನು ಎಂದು ಕೆಲವರು ಪರಸ್ಪರ ಆಡಿಕೊಂಡರು. ಒಂದು ಗೋತ್ರದ ಆರಾಧ್ಯ ವಿಗ್ರಹವನ್ನು ಹೀಗೆ ಭಂಜಿಸುವುದೆಂದರೆ ಸಣ್ಣ ವಿಷಯವೇ? ಎಲ್ಲರ ದೃಷ್ಟಿಯೂ 'ಲಾತ್'ನ ಮೇಲೆಯೇ ನೆಟ್ಟಿತ್ತು.

* ಉಹುದ್ ಯುದ್ಧದಲ್ಲಿ ಸತ್ಯನಿಷೇಧಿಗಳ ಪಾಳಯದಲ್ಲಿದ್ದ ಖಾಲಿದ್ ಬಿನ್ ವಲೀದ್ – ಮುಸ್ಲಿಮ್ ಸೇನೆಗೆ ಅಪಾರ ನಾಶನಷ್ಟಗಳನ್ನುಂಟು ಮಾಡಿದ್ದರು. ಖುರೈಶ್ ಸೇನೆಯು ಯುದ್ಧರಂಗ ಬಿಟ್ಟೋಡುವಾಗ, ಕಣಿವೆಯ ದಾರಿಯಲ್ಲಿ ಮರಳಿ ಬಂದು ಹಿಂದಿನಿಂದ ದಾಳಿ ನಡೆಸಿದ್ದೂ ಅವರೇ. ಬಳಿಕ ಅವರು ಹುದೈಬಿಯಾ ಸಂಧಿಯ ನಂತರ ಸ್ವಯಂ ಪ್ರೇರಿತರಾಗಿ ಸತ್ಯವಿಶ್ವಾಸ ಸ್ವೀಕರಿಸಿದರು. (ಅನು)

ಮುಗೀರ ಬಿನ್ ಶುಅ್‌ಬ(ರ) ಕೂಡ ಖಾಲಿದ್ ಬಿನ್ ವಲೀದ್‌ರೊಂದಿಗಿದ್ದರು. ಅವರು ಒಂದು ದಿಣ್ಣೆಯ ಮೇಲೇರಿ 'ಲಾತ್'ಗೆ ಬಾಣ ಬಿಟ್ಟಾಗ ಆಯ ತಪ್ಪಿ ಬಿದ್ದು ಬಿಟ್ಟರು. ಕೆಲವರು ಸಂತೋಷದಿಂದ, "ನಮ್ಮ ಆರಾಧ್ಯ ಮೂರ್ತಿಯು ಮುಗೀರರನ್ನು ಕೆಡಹಿತು" ಎಂದು ಕೇಕೆ ಹಾಕಿದರು. ಮುಗೀರರಿಗೆ ಅದರಿಂದ ಅತೀವ ಕೋಪವುಕ್ಕಿತು. ಅವರು ಖಾರವಾಗಿಯೇ ಪ್ರತಿಕ್ರಿಯಿಸಿದರು,

"ಓ ಸಕೀಫ್ ಜನರೇ! ನೀವಂತೂ ತೀರಾ ಮೂರ್ಖತನದ ಮಾತನ್ನಾಡುತ್ತಿದ್ದೀರಿ. ಈ ಕಲ್ಲಿನ ತುಚ್ಛ ತುಂಡು ಏನು ಮಾಡಲು ಶಕ್ತ? ಜನರೇ! ನಿರಾಕಾರನಾದ ಏಕದೇವನನ್ನು ಆರಾಧಿಸಿರಿ ಮತ್ತು ಅವನಲ್ಲಿಯೇ ಆಶ್ರಯ ಪಡೆಯಿರಿ!"

ಮುಗೀರ ಮೊದಲು ಆ ಮಿಥ್ಯಾರಾಧ್ಯವನ್ನು ಒಡೆದು ಹಾಕಿದರು. ಬಳಿಕ ಎಲ್ಲರೂ ಸೇರಿ ಆರಾಧನಾಲಯವನ್ನು ಸಂಪೂರ್ಣ ನೆಲಸಮ ಮಾಡಿದರು. ಮಾತ್ರವಲ್ಲ, ಅದರ ಪಂಚಾಂಗವನ್ನೇ ಅಗೆದುಬಿಟ್ಟರು. ಸಕೀಫ್ ಗೋತ್ರದವರ ಪೈಕಿ ಇನ್ನು ಯಾರೆಲ್ಲರ ಹೃದಯಗಳಲ್ಲಿ 'ಲಾತ್'ನ ಬಗ್ಗೆ ಪ್ರೀತಿ ಇತ್ತೋ ಅದನ್ನು ಸಂಪೂರ್ಣ ಅಳಿಸಿ ಬಿಡುವುದೇ ಉದ್ದೇಶವಾಗಿತ್ತು. ಏಕೆಂದರೆ ಆ ಪ್ರೀತಿಯು ಪುನಃ ಬಹುದೇವಾರಾಧನೆ ಯೆಡೆಗೆ ಅವರನ್ನು ಕೊಂಡೊಯ್ಯುವ ಸಾಧ್ಯತೆ ಇತ್ತು. ಆ ಒಂದು ದಿನ... ಬಳಿಕ ಇಂದಿನ ವರೆಗೂ ಸಕೀಫ್ ಗೋತ್ರಜರು ಎಂದೂ ಅಲ್ಲಾಹೇತರರ ಮುಂದೆ ತಲೆ ಬಾಗಿದ್ದಿಲ್ಲ.

ರುಗ್ಣಶಯ್ಯೆಯಲ್ಲಿ

ಇಸ್ಲಾಮಿನಲ್ಲಿ ದೇವಾರಾಧನೆಯ ಹೊರತು ಬೇರೆ ಯಾವುದೇ ರೀತಿಯ ಆರಾಧನೆಗೆ ಅವಕಾಶವಿಲ್ಲ. ಪ್ರವಾದಿವರ್ಯರು(ಸ) ತಮ್ಮನ್ನು ಆಗಾಗ 'ಅಲ್ಲಾಹನ ದಾಸ' ಎಂದು ಹೇಳುತ್ತಿದ್ದರು. ಯಾಕೆಂದರೆ ತಮ್ಮ ಸಮುದಾಯವು ಪ್ರೀತಿ-ವಿಶ್ವಾಸಾಧಿಕ್ಯದ ಕಾರಣವಾಗಿ ಇತರ ಸಮುದಾಯಗಳಂತೆ ತಮ್ಮನ್ನೂ ದೇವಸಹಭಾಗಿಯೋ ಅವತಾರವೋ ಆಗಿ ಕಲ್ಪಿಸಬಾರದು ಎಂಬುದು ಅವರ ಉದ್ದೇಶವಾಗಿತ್ತು.

ಸಮೃದ್ಧಿಯ ಆಗ್ರಹ, ಪ್ರಾರ್ಥನೆ, ಫಿರ್ಯಾದಿ ಮತ್ತು ಸಹಾಯ ಯಾಚನೆ ಇವು ಕೇವಲ ಅಲ್ಲಾಹನಿಗೆ ಮಾತ್ರ ಸೀಮಿತಗೊಳ್ಳುವಂತಹುದು. ಸಂಕಷ್ಟ ನೀಗಿಸುವುದು, ದುಃಖ ದೂರ ಮಾಡುವುದು, ಆರೋಗ್ಯ ಭಾಗ್ಯ ಕರುಣಿಸುವುದು, ಒಟ್ಟಿನಲ್ಲಿ ಈ ರೀತಿಯ ಎಲ್ಲ ಗುಣ ವಿಶೇಷತೆಗಳು ಮತ್ತು ಕಾರ್ಯಗಳು ಅಲ್ಲಾಹನಿಂದ ಮಾತ್ರ ಸಾಧ್ಯ.

ಇಸ್ಲಾಮಿನಲ್ಲಿ ಗೋರಿ ಸಂದರ್ಶನಕ್ಕೆ ನೀಡಿರುವ ಅನುಮತಿಯ ಹಿಂದೆಯೂ ಇದೇ ತತ್ವ ಅಡಗಿದೆ. ಅಂದರೆ ಗೋರಿ ಸಂದರ್ಶನಕ್ಕೆ ಹೋಗುವವರು ಗೋರಿಯಲ್ಲಿ ದಫನ ವಾಗಿರುವವರಿಗಾಗಿ ಅಲ್ಲಾಹನಲ್ಲಿ ಕ್ಷಮೆಯ ಪ್ರಾರ್ಥನೆ ಮಾಡಬೇಕು. ಜತೆಗೇ ಪಾಠವನ್ನೂ ಕಲಿಯಬೇಕು. ಅದೇನೆಂದರೆ, ಇಂದು ಈ ಮಣ್ಣಿನಡಿಯಲ್ಲಿ ನಿದ್ರಿಸುತ್ತಿರುವ ದೇಹಗಳು, ನಿನ್ನೆ ನಮ್ಮಂತೆಯೇ ನಡೆದಾಡುತ್ತಿದ್ದರು, ಉಣ್ಣುತ್ತಿದ್ದರು, ಕುಡಿಯುತ್ತಿದ್ದರು. ಆದರೆ ಅಲ್ಲಾಹನ ಆಜ್ಞೆ ಬಂದ ಮೇಲೆ ಅವರಿಗೆ ಒಂದಿನಿತೂ ಶ್ವಾಸ ತೆಗೆಯುವ ಅವಕಾಶವೂ ದೊರೆಯಲಿಲ್ಲ. ನಾಳೆ ನಮ್ಮೊಂದಿಗೂ ಅದು ನಡೆಯಲಿದೆ. ಜಗತ್ತಿನ ಜೀವನ ಮತ್ತು ಸಂಪದೈಶ್ವರ್ಯಗಳು ಯಾವುದೂ ಶಾಶ್ವತವಲ್ಲ. ಅದು ಬಿಸಿಲು-ನೆರಳಿನಂತೆ. ವಾಸ್ತವ ಜೀವನವು ಪರಲೋಕದ್ದಾಗಿದೆ. ಅಲ್ಲೇ ಸದಾ ನೆಲೆಸಿರಬೇಕಾಗಿದೆ. ಅಲ್ಲಿಗಾಗಿಯೇ ನಾವು ಇಹಲೋಕದಲ್ಲಿ ಪರಿಶ್ರಮ ಪಡಬೇಕಾಗಿದೆ.

ಪ್ರವಾದಿವರ್ಯರೂ(ಸ) 'ಬಕೀಅ್' ಕಬರಸ್ತಾನಕ್ಕೆ ಆಗಾಗ ಹೋಗಿ ಮೃತರಿಗಾಗಿ ಪ್ರಾರ್ಥಿಸುತ್ತಿದ್ದರು. ಒಂದು ದಿನ ಎಂದಿನಂತೆ 'ಬಕೀಅ್' ಸಂದರ್ಶಿಸಿದರು. ಅಲ್ಲಿಂದ ಮರಳುವಾಗ ಯಾಕೋ ಬಳಲಿದಂತೆ ಕಂಡರು. ಕೆಲವು ದಿನಗಳ ತನಕ ಜ್ವರ ಏರುತ್ತಲೇ

ಹೋಯಿತು. ಅಬೂ ಸಈದ್ ಖುದ್ರಿ(ರ) ಹೇಳುವ ಪ್ರಕಾರ, ಪ್ರವಾದಿ ವರ್ಯರ(ಸ) ತಲೆಗೆ ರುಮಾಲನ್ನು ಕಟ್ಟಲಾಯಿತು. ನಾನು ಅವರ ಹಣೆಯನ್ನು ಮುಟ್ಟುವಾಗ, ಸುಡುವ ಕೆಂಡವನ್ನು ಮುಟ್ಟುವಂತೆ ಭಾಸವಾಗುತ್ತಿತ್ತು.

ದೇವಾದೇಶದ ಮುಂದೆ ಎಲ್ಲರೂ ವಿವಶರು. ಪ್ರವಾದಿಗಳು, ಸಂದೇಶವಾಹಕರು ಸಹ ದೇವೇಚ್ಛೆಯ ಮುಂದೆ ಅಸಹಾಯಕರು. ಮಾತ್ರವಲ್ಲ, ಅವರಂತೂ ಸಾಮಾನ್ಯ ಜನರಿಗಿಂತ ಹೆಚ್ಚು ದೇವಾಜ್ಞಾಪಾಲನೆಗೆ ಬಾಧ್ಯಸ್ಥರಾಗಿರುತ್ತಿದ್ದರು. ಯಾವ ಪಾವನ ವ್ಯಕ್ತಿತ್ವವು ಇತರರ ರೋಗ ಶಮನಕ್ಕಾಗಿ ಪ್ರಾರ್ಥಿಸುತ್ತಿದ್ದರೋ, ಅವರೇ ಇಂದು ರುಗ್ಣಶಯ್ಯೆಯಲ್ಲಿದ್ದಾರೆ. ಆದರೆ ರೋಗ ಉಲ್ಬಣಾವಸ್ಥೆಯ ಆ ಹನ್ನೊಂದು ದಿನ ಗಳಲ್ಲಿಯೂ ಪ್ರವಾದಿವರ್ಯರು(ಸ) ನಮಾಝ್‌ಗಳ ನೇತೃತ್ವ ವಹಿಸಿದರು. ಒಂದು ದಿನ ಇಶಾ ನಮಾಝ್‌ಗಾಗಿ ವುಝೂ ಮಾಡಿದರು. ತರುವಾಯ ಮಸೀದಿಗೆ ಹೊರಡಲು ಅನುವಾದಾಗ ಪ್ರಜ್ಞೆ ತಪ್ಪಿದರು. ಇದು ಮೂರು ಬಾರಿ ಆವರ್ತಿಸಿದಾಗ, ಕೊನೆಗೆ ಅವರು ಅಬೂಬಕರ್‌ರೊಡನೆ ನಮಾಝ್‌ಗೆ ನೇತೃತ್ವ ವಹಿಸಲು ಸೂಚಿಸಿದರು.

ಪಂಕ್ತಿಗಳನ್ನು ಸರಿಪಡಿಸಲಾಯಿತು. (ಇಕಾಮತ್‌ನ) ತಕ್ಬೀರ್ ಹೇಳಲಾಯಿತು. ಅಬೂಬಕರ್(ರ) ನಮಾಝ್‌ನ ಸಂಕಲ್ಪ ಮಾಡಿ 'ಅಲ್ಲಾಹು ಅಕ್ಬರ್' ಅನ್ನುತ್ತಾ ಕೈ ಕಟ್ಟಿದರು. ಸಹಾಬಿಗಳು ಎಂದಿನಂತೆ ಇಂದೂ ಮುಕ್ತದಿ(ಅನುಯಾಯಿ)ಯಾಗಿದ್ದರು. ಆದರೆ ಅಬೂಬಕರ್ ಮುಕ್ತದಿಯಿಂದ ಇಮಾಮತ್‌ಗೆ ಭಡ್ತಿ ಹೊಂದಿದರು. ಅದಂತೂ ಅತಿ ದೊಡ್ಡ ಸ್ಥಾನವಾಗಿತ್ತು. ಸೂಕ್ಷ್ಮಗ್ರಾಹಿ ಮನಸ್ಸುಗಳು, ಅಂದೇ ಅದರ ಮರ್ಮವನ್ನು ಅರಿತುಕೊಂಡರು. ದೇವಸಂದೇಶವಾಹಕರ(ಸ) ಬಳಿಕ ಮೊತ್ತಮೊದಲು ಸಮುದಾಯದ ನಾಯಕತ್ವದ ಹೊಣೆಯು ಅಬೂಬಕರ್‌ರ(ರ) ಮೇಲೆಯೇ ಇರುವುದು. ಕೆಲವೊಮ್ಮೆ ವರ್ತಮಾನದ ದರ್ಪಣದಲ್ಲಿ ಭವಿಷ್ಯದ ಘಟನೆಗಳು ಮಿಂಚಿ ಹೋಗುವುದಿದೆ.

ಸಹಾಬಿಗಳಿಂದ ತಡೆಯಲಾಗಲಿಲ್ಲ. ಅವರ ಕಂಗಳಿಂದ ಅಶ್ರುಧಾರೆ ಹರಿಯ ತೊಡಗಿತು. ಕೆಲವರಂತೂ ಶಬ್ದಸಹಿತವಾಗಿಯೇ ಅತ್ತುಬಿಟ್ಟರು. ಅಳುವ ಶಬ್ದ ಕೇಳಿ ಪ್ರವಾದಿವರ್ಯರು(ಸ) ಕಷ್ಟಪಟ್ಟೇ ಮಸೀದಿಗೆ ಹೊರಟರು ಮತ್ತು ಅಬೂಬಕರ್‌ರ(ರ) ಬಳಿ ನಿಂತು ನಮಾಝ್ ಮಾಡಿಸಿದರು... ನಿಧನಕ್ಕೆ ಐದು ದಿನ ಮುಂಚೆ ಪ್ರವಾದಿವರ್ಯರು(ಸ) ಹೇಳಿದರು,

"ನಮಗಿಂತ ಮುಂಚೆ ಗತಿಸಿದ ಸಮುದಾಯಗಳ ಜನರು, ತಮ್ಮ ಪ್ರವಾದಿಗಳ ಮತ್ತು ಸಜ್ಜನರ ಗೋರಿಗಳನ್ನು ಆರಾಧನಾಲಯವನ್ನಾಗಿ ಮಾಡಿದರು. ನೀವು ಹಾಗೆ ಮಾಡಲೇ ಬಾರದು. ತಮ್ಮ ಪ್ರವಾದಿಗಳ ಗೋರಿಗಳನ್ನು ಆರಾಧನಾಲಯವನ್ನಾಗಿ ಮಾಡಿದ ಯಹೂದಿ ಮತ್ತು ಕ್ರೈಸ್ತ ಸಮುದಾಯಗಳನ್ನು ಅಲ್ಲಾಹ್ ಶಪಿಸಲಿ."

ತರುವಾಯ ಹೀಗೆ ಹೇಳಿದರು,

"ಓ ಅಲ್ಲಾಹ್! ನನ್ನ ಬಳಿಕ ನನ್ನ ಗೋರಿಯನ್ನು ಆರಾಧನಾಲಯವನ್ನಾಗಿ ಮಾರ್ಪಡಿಸಬೇಡ. ತಮ್ಮ ಪ್ರವಾದಿಗಳ ಗೋರಿಗಳನ್ನು ಆರಾಧನಾಲಯವನ್ನಾಗಿ ಮಾರ್ಪಡಿಸಿದ ಜನಾಂಗಗಳ ಮೇಲೆ ಅಲ್ಲಾಹನ ವಿಪತ್ತೆರಗಿದೆ. ನೋಡಿ! ನಿಮ್ಮನ್ನು ಹಾಗೆ ಮಾಡುವುದರಿಂದ ನಾನು ತಡೆಯುತ್ತಿದ್ದೇನೆ... ನಾನು ನನ್ನ ದೌತ್ಯವನ್ನು ನಿರ್ವಹಿಸಿದೆನು... ಓ ಅಲ್ಲಾಹ್ ನೀನು ಇದಕ್ಕೆ ಸಾಕ್ಷಿಯಾಗಿರು... ನೀನು ಇದಕ್ಕೆ ಸಾಕ್ಷಿಯಾಗಿರು..."

ಕೊನೆಯ ಕ್ಷಣಗಳು

ಉದಾರತೆಗೆ ಮುಹಮ್ಮದರ್‍ರಸೂಲುಲ್ಲಾಹ್‌ರ(ಸ) ವಿಶಾಲ ಹಸ್ತದ ಬಗ್ಗೆ ಹೆಮ್ಮೆ ಇತ್ತು. ಇತ್ತ ಹಣದ ಗಂಟು ಬಂತು, ಅತ್ತ ಅದು ಬಿಚ್ಚಿ ಬಡ-ನಿರ್ಗತಿಕರಲ್ಲೂ ಬೇಡಿ ಬಂದವರಲ್ಲೂ ಹಂಚಿಹೋಯಿತು. ಇಂಥ ಕೊಡುಗೈ ದಾನಿಯ ಬಳಿ ಅಲ್ಲಾಹನ ಹೆಸರಿನ ಹೊರತು ಬೇರೇನು ತಾನೇ ಇದ್ದೀತು? ಇಂದು ಲೌಕಿಕ ಜೀವನದ ಕೊನೆಯ ರಾತ್ರಿಯಾಗಿದೆ. ಪ್ರವಾದಿವರ್ಯರ(ಸ) ಮನೆಯಲ್ಲಿ ದೀಪ ಹಚ್ಚಲು ಎಣ್ಣೆಯೂ ಇಲ್ಲ. ಅನಾರೋಗ್ಯಪೀಡಿತರ ಮನೆಯಲ್ಲಿ ಅಂಧಕಾರವು ಸಂಕಟವನ್ನು ಇನ್ನೂ ಹೆಚ್ಚಿಸುತ್ತದೆ. ಆಯಿಶಾ(ರ) ನೆರೆಮನೆಯ ಮಹಿಳೆಯಿಂದ ಎಣ್ಣೆಯನ್ನು ಸಾಲ ಪಡೆದು ದೀಪ ಹಚ್ಚಿದರು.

ಅದು ಪ್ರಭಾತದ ಸಮಯ. ಆಗಿನ್ನೂ ಕತ್ತಲು ಕರಗಿರಲಿಲ್ಲ. ಸಹಾಬಿಗಳು ಮಸ್ಜಿದುನ್ನಬವಿಯಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಪ್ರವಾದಿವರ್ಯರು(ಸ) ಕೋಣೆಯ ಪರದೆಯನ್ನು ಸರಿಸಿ ನೋಡಿದಾಗ, ಸಹಾಬಿಗಳನ್ನು ನಮಾಝ್‌ನಲ್ಲಿ ತಲ್ಲೀನರಾಗಿರುವುದು ಕಂಡು ಮುಗುಳ್ನಕ್ಕರು. ಅದು ಲೋಕಾನುಗ್ರಹಿಯ(ಸ) ಈ ನಶ್ವರ ಲೋಕದಲ್ಲಿನ ಕೊನೆಯ ಹೂನಗುವಾಗಿತ್ತು. ಪ್ರಭಾತದ ಬೆಳ್ಳಿ ರೇಖೆಯು ರಸೂಲುಲ್ಲಾಹ್‌ರ(ಸ) ಮುಗುಳ್ನಗುವಿಗೆ ಗೌರವಪೂರ್ಣ ನಮನ ಸಲ್ಲಿಸಿತು. ಸೂರ್ಯೋದಯದ ತಂಪುಕಿರಣಗಳು ಅವರಿಗೆ ಸ್ವಸ್ತಿ ವಚನ ಸಲ್ಲಿಸಿದುವು.

ಜ್ವರವು ತನ್ನ ತೀವ್ರತೆಯಲ್ಲಿತ್ತು. ಪ್ರವಾದಿವರ್ಯರು(ಸ) ಆಗಾಗ ನೀರಿನ ಬಟ್ಟಲಿಗೆ ಕೈ ಅದ್ದಿ ಮುಖಕ್ಕೆ ಒರೆಸುತ್ತಿದ್ದರು. ಫಾತಿಮ(ರ) ತಮ್ಮ ಪ್ರೀತಿಪಾತ್ರ ತಂದೆಯ ಈ ಸಂಕಷ್ಟ ಕಂಡು ಸಹಿಸಲಾಗದೆ ದುಃಖದಿಂದ ಅಳತೊಡಗಿದರು. ಪ್ರವಾದಿವರ್ಯರು(ಸ) ತಮ್ಮ ಕೈಗಳಿಂದ ಫಾತಿಮಾರ ಕಣ್ಣೀರೊರೆಸಿದರು. ಬಳಿಕ ಮುದ್ದಿನ ಮೊಮ್ಮಕ್ಕಳನ್ನು ಬಳಿ ಕರೆದರು. ಹಸನ್(ರ) ಮತ್ತು ಹುಸೈನ್(ರ) ತಮ್ಮ ತಾತ ಸಂಕಟಪಡುತ್ತಿರುವುದನ್ನು ಕಂಡು ಅತ್ತು ಬಿಟ್ಟರು. ಪ್ರವಾದಿವರ್ಯರು(ಸ) ಆ ಎರಡು ಸ್ವರ್ಗದ ಪುಷ್ಪಗಳನ್ನು ಮುತ್ತಿಕ್ಕಿದರು ಹಾಗೂ ಅವರ ಗೌರವಾದರಕ್ಕಾಗಿ ಪ್ರಾರ್ಥಿಸಿದರು. ತರುವಾಯ ಅಲಿಯವರನ್ನು(ರ) ಬಳಿಗೆ ಬರುವಂತೆ ಸೂಚಿಸಿದರು. ಅಲಿ(ರ) ಹತ್ತಿರ ಬಂದರು... ತೀರಾ ಕಳವಳ, ಚಿಂತೆ, ದುಃಖ ತುಂಬಿಕೊಂಡು!

ಲೋಕಾನುಗ್ರಹಿ(ಸ) ತೀರಾ ಬಳಲಿದ್ದರು. ಅವರ ತಲೆಯನ್ನು ಅಲಿ(ರ) ತಮ್ಮ ಮಡಿಲಲ್ಲಿರಿಸಿದರು. ತರುವಾಯ ಅಲಿಯವರಿಗೆ(ರ) ಉಪದೇಶ ನೀಡಲಾಯಿತು. ಅಲಿ(ರ) ಪ್ರವಾದಿವರ್ಯರ(ಸ) ಕೋಣೆಯಿಂದ ಹೊರನಡೆದಾಗ, ಆಯಿಶಾ(ರ) ಬಂದು ತಮ್ಮ ಜೀವನ ಸಂಗಾತಿಯ ತಲೆಯನ್ನು ಎತ್ತಿ ತಮ್ಮ ಮಡಿಲಲ್ಲಿರಿಸಿದರು. ಅಷ್ಟು ಹೊತ್ತಿಗೆ ಅಬೂಬಕರ್‌ರ(ರ) ಪುತ್ರ ಅಬ್ದುರ್ರಹ್ಮಾನ್(ರ) ಮಿಸ್ವಾಕ್ ಹಿಡಿದುಕೊಂಡು ಬಂದರು. ತಾಜಾ ಮತ್ತು ಮೆತ್ತನೆಯ ಮಿಸ್ವಾಕ್. ಪ್ರವಾದಿವರ್ಯರು(ಸ) ಆ ಸ್ಥಿತಿಯಲ್ಲೂ ಅದರಿಂದ ಹಲ್ಲುಜ್ಜಿದರು. ತರುವಾಯ ಹೇಳಿದರು,

"ಅಸ್ಸಲಾತ್, ಅಸ್ಸಲಾತ್... ವಮಾಮಲಕ್ತ ಐಮಾನುಕುಂ..."

(ನಮಾಝ್, ನಮಾಝ್... ಮತ್ತು ಗುಲಾಮರ ಹಕ್ಕುಗಳು...)

ಬಳಿಕ ಅಂತಿಮ ವಾಕ್ಯವಾಗಿ ಹೇಳಿದರು,

"ಅಲ್ಲಾಹುಮ್ಮ ಬಿರ್ರಫೀಕಿಲ್ ಅಲ್‌ಲಾ"

ಆ ಬಳಿಕ ಯಾವುದೇ ಶಬ್ದ ಅವರ(ಸ) ಬಾಯಿಯಿಂದ ಹೊರಡಲಿಲ್ಲ. ಆಯಿಶಾರ(ರ) ಮಡಿಲಲ್ಲಿ ಲೋಕಾನುಗ್ರಹಿಯ(ಸ) ಶಿರವು ಪ್ರಶಾಂತವಾಗಿ ಮಲಗಿತು. ಪ್ರಕಾಶಮಾನ ವದನ ಇಂದು ಇನ್ನಷ್ಟು ಕಳೆ ತುಂಬಿಕೊಂಡಿತು. ಗಾಢ ನಿದ್ರೆಯಲ್ಲಿದ್ದಂತೆ ಕಂಡಿತು. ಅದು ಬೆಳಗ್ಗಿನ ಉಪಾಹಾರದ ಸಮಯವಾಗಿತ್ತು. ಸೋಮವಾರ... ಹಿಜ್ರತ್‌ನ ಹನ್ನೊಂದನೆಯ ವರ್ಷ... ಪ್ರವಾದಿವರ್ಯರಿಗೆ(ಸ) ಅರುವತ್ತ ಮೂರು ವರ್ಷವಾಗಿ ನಾಲ್ಕನೆಯ ದಿನ... ಅವರನ್ನು ಈ ಲೋಕಕ್ಕೆ ಮಾರ್ಗದರ್ಶಕರನ್ನಾಗಿ ಕಳುಹಿಸಿದ ಪ್ರಭು, ಅವರನ್ನು ಮರಳಿ ತನ್ನ ಬಳಿಗೇ ಕರೆಸಿಕೊಂಡನು. ಲೋಕಾನುಗ್ರಹಿಯ(ಸ) ಆತ್ಮವು ಬಂದಲ್ಲಿಗೇ ಮರಳಿ ಹೋಗಿ ಪ್ರಭುವನ್ನು ಸೇರಿಕೊಂಡಿತು... ಅಲ್ಲಾಹನ ಅಸ್ತಿತ್ವವೇ ಶಾಶ್ವತ!

ಸತ್ಯವಿಶ್ವಾಸಿಗಳ ಮಾತೆಯಂದಿರು, ಕುಟುಂಬಸ್ಥರು ಮತ್ತು ಸಹಾಬಿಗಳೆಲ್ಲರಲ್ಲೂ ದುಃಖದ ಕಾರ್ಮೋಡ ಕವಿಯಿತು. ಪ್ರವಾದಿವರ್ಯರ(ಸ) ನಿಧನ ವಾರ್ತೆ ಕೇಳಿ ಹಲವು ಮಂದಿ ಸಹಾಬಿಗಳು ಗರಬಡಿದಂತಾಗಿ ಬಿಟ್ಟರು... ಅವರ ದೇಹದಲ್ಲಿ ಜೀವವೇ ಇಲ್ಲವೇನೋ ಎಂಬಂತೆ! ದುಃಖಾತಿರೇಕವು ಅವರ ದೇಹವನ್ನು ಸ್ವಲ್ಪ ಹೊತ್ತಿನವರೆಗೆ ನಿರ್ಜೀವ ವಿಗ್ರಹಗಳಂತೆ ಮಾಡಿ ಬಿಟ್ಟಿತ್ತು. ಮಸ್ಜಿದುನ್ನಬವಿಯ ಗೋಡೆ-ಬಾಗಿಲುಗಳು ಲೋಕನಾಯಕನಿಗೆ(ಸ) ವಿದಾಯ ಕೋರಿದುವು. ಸಯ್ಯಿದಾ ಫಾತಿಮಾರ(ರ) ಹೃದಯವು ಚೀರಿ ಹೇಳಿತು,

ಸುಬ್ಬತ್ ಅಲಯ್ಯ ಮಸಾಯಿಬುನ್ ಲೌಅನ್ನಹಾ

ಸುಬ್ಬತ್ ಅಲಲ್ ಅಯ್ಯಾಮಿ ಸಿರ್‌ನ ಲಯಾ ಲಯಾ

(ನನ್ನ ಮೇಲೆ ಸಂಕಷ್ಟವೆರಗಿತು. ಅದು ಹಗಲಿನ ಮೇಲೆರಗುತ್ತಿದ್ದರೆ ರಾತ್ರಿಯಾಗುತ್ತಿತ್ತು)

ಹ. ಉಮರ್‌ರ(ರ) ದುಃಖವು ನಿಯಂತ್ರಣ ಕಳಕೊಳ್ಳುವಂತೆ ಮಾಡಿತ್ತು. ಖಡ್ಗ

ಹಿಡಿದು ಗರ್ಜರಿಸಿದರು, "ಪ್ರವಾದಿವರ್ಯರು(ಸ) ನಿಧನರಾದರೆಂದು ಯಾರಾದರೂ ಹೇಳಿದರೆ ಅವರ ತಲೆ ಕಡಿಯುವೆನು!"

ಒಂದು ವಿಚಿತ್ರ ದಿಗ್ಭ್ರಾಂತಿಯ ಅವಸ್ಥೆಯಾಗಿತ್ತದು.

ಸಿದ್ದೀಕುಲ್ ಅಕ್ಬರ್(ರ) ಪ್ರವಾದಿವರ್ಯರ(ಸ) ಕೋಣೆಯೊಳಗಡಿಯಿಟ್ಟರು. ಅವರ ಹಣೆಗೆ ಮುತ್ತಿಕ್ಕಿದರು. ತರುವಾಯ ಮಸ್ಜಿದುನ್ನಬವಿಗೆ ಬಂದು ಹೀಗೆ ಘೋಷಿಸಿದರು,

"ಯಾರಾದರೂ ಮುಹಮ್ಮದ್‌ರನ್ನು(ಸ) ಆರಾಧಿಸುತ್ತಿದ್ದರೆ, ಕೇಳಿರಿ! ಮುಹಮ್ಮದ್(ಸ) ಇದೋ ನಿಧನರಾಗಿದ್ದಾರೆ. ಯಾರಾದರೂ ಅಲ್ಲಾಹನನ್ನು ಆರಾಧಿಸುತ್ತಿದ್ದರೆ, ಕೇಳಿರಿ! ಅಲ್ಲಾಹನಾದರೋ ಚಿರಂತನನೂ ಸ್ವಯಂ ಜೀವಂತನೂ ಆಗಿದ್ದಾನೆ."

ಅಲ್ಲಾಹನೂ ಹೇಳಿದ್ದಾನೆ,

"ಮುಹಮ್ಮದ್‌ರು ಓರ್ವ ಸಂದೇಶವಾಹಕರೇ ವಿನಾ ಇನ್ನೇನೂ ಆಗಿರುವುದಿಲ್ಲ. ಅವರಿಗಿಂತ ಮುಂಚೆ ಇತರ ಸಂದೇಶವಾಹಕರೂ ಗತಿಸಿ ಹೋಗಿದ್ದಾರೆ. ಹಾಗಿರುವಾಗ ಅವರು ಮರಣ ಹೊಂದಿದರೆ ಅಥವಾ ವಧಿಸಲ್ಪಟ್ಟರೆ ನೀವು ಮರಳಿ ಹೋಗುವಿರಾ? ನೆನಪಿಡಿರಿ! ಹಿಂದಕ್ಕೆ ಮರಳುವವನು ಅಲ್ಲಾಹನಿಗೇನೂ ನಷ್ಟವುಂಟು ಮಾಡಲಾರ. ಅಲ್ಲಾಹನ ಕೃತಜ್ಞ ದಾಸರಾಗಿರುವವರಿಗೆ ಅವನು ಅದರ ಪ್ರತಿಫಲ ನೀಡುವನು."

(ಪವಿತ್ರ ಕುರ್‌ಆನ್: 3:144)

ಜೀವಂತ ಸಂದೇಶ

ಸಾಮಾನ್ಯವಾಗಿ, ಕಾದಂಬರಿಯ 'ನಾಯಕ' ಕೊನೆಯುಸಿರೆಳೆದ ಮೇಲೆ ಕಾದಂಬರಿಕಾರನ ಲೇಖನಿಯೂ ನಿಂತು ಹೋಗುವುದು ವಾಡಿಕೆ. ಕಾದಂಬರಿಯೂ ಕೊನೆಗೊಳ್ಳುತ್ತದೆ... ಮುಕ್ತಾಯ - THE END! ನಾಯಕನ ಜೀವನಾಂತ್ಯವಾದ ಮೇಲೆ ಆ ನಾಯಕನಿಗೆ ಸಂಬಂಧಿಸಿದ ಕಾದಂಬರಿ ಹೇಗೆ ತಾನೇ ಮುಂದುವರಿದೀತು!? ಅದೂ ಕೂಡ ಮುಕ್ತಾಯ ಗೊಳ್ಳಲೇ ಬೇಕಲ್ಲವೇ? ಪ್ರತಿಯೊಂದು ಆರಂಭಕ್ಕೂ ಒಂದು ಅಂತ್ಯ ಅನ್ನುವುದು ಇದ್ದೇ ಇದೆ. ಆದರೆ 'ಅನಾಥಮುತ್ತು' ಕೇವಲ ಕಾದಂಬರಿಯಲ್ಲ, ಜೀವನ ಚರಿತ್ರೆಯಾಗಿದೆ. ಇದರ ನಾಯಕ ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಜೀವನ ಮತ್ತು ಮರಣವನ್ನು ಇತರರ ಜೀವನ-ಮರಣಕ್ಕೆ ಖಂಡಿತವಾಗಿಯೂ ಹೋಲಿಸಲು ಸಾಧ್ಯವಿಲ್ಲ. ಪ್ರವಾದಿ ಮುಹಮ್ಮದ್‌ರ(ಸ) ಫರ್ಮಾನು, ಸಂದೇಶ, ಮಾದರಿ, ಚಾರಿತ್ರ್ಯ ಮತ್ತು ಜೀವನದ ಒಂದೊಂದು ನಿಧಿಯು ಹಾಗೆಯೇ ಜೀವಂತವಿದೆ. ಮಕ್ಕಾ, ಮದೀನಾ, ತಾಯಿಫ್, ಬದ್ರ್, ಹುನೈನ್, ಖಂದಕ್, ಖೈಬರ್ ಮತ್ತು ತಬೂಕ್‌ಗಳಲ್ಲಿ ಜೀವಂತ, ಅನುಸರಣಾರ್ಹ, ಅನುಕರಣಾರ್ಹವಾದ ಮಾದರಿಯು ಜಾರಿಯಲ್ಲಿರುವಂತೆ.

ನಿಶ್ಚಯವಾಗಿಯೂ ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಸಂದೇಶ ಮತ್ತು ಜೀವನ ಮಾದರಿಯು ಅಧಃಪತನ ಮತ್ತು ನಾಶಗಳಿಂದ ಸಂಪೂರ್ಣ ಮುಕ್ತವಾಗಿದೆ. ನಕ್ಷತ್ರಗಳ ದೀಪ, ಸೂರ್ಯ-ಚಂದ್ರರ ಕಂದೀಲುಗಳು ಆರಿಹೋಗಬಹುದು, ಆದರೆ ದೇವ ಸಂದೇಶ ವಾಹಕರು(ಸ) ಯಾವ ಸನ್ಮಾರ್ಗದರ್ಶನದ ಪ್ರಕಾಶ ದೀಪ ಹೊತ್ತು ತಂದಿದ್ದರೋ ಅದಂತೂ ಎಂದೆಂದಿಗೂ ಆರಿ ಹೋಗುವಂಥದ್ದಲ್ಲ. ಎಂತೆಂತಹ ಶಿಲುಬೆ ಯುದ್ಧಗಳಿಗೆ ಮತ್ತು ಮಹಾ ಯಜ್ಞಗಳಿಗೆ ಅದನ್ನು ಆರಿಸಲು ಸಾಧ್ಯವಾಗಿಲ್ಲ. ಜನರು ಪ್ರಯತ್ನಿಸಿ ನೋಡಿದ್ದರು. ಆದರೆ ಯಶಸ್ಸು ಕಂಡಿಲ್ಲ. ಈ ಪ್ರಕಾಶ ದೀಪವು ಚಂಡಮಾರುತಗಳ ಗಾಢಾಂಧಕಾರಮಯ ಗರ್ಭದಲ್ಲಿಯೇ ಜ್ಞಾನದ ಬೆಳಕು ಹರಿಸಿದೆ. ಅದೆಷ್ಟೋ ವಿರೋಧಗಳು ಒಡ್ಡಲ್ಪಟ್ಟುವಾದರೂ ಈ ಜ್ಞಾನದ ಬೆಳಕು ಒಂದಿನಿತೂ ಮಾಸಿಲ್ಲ. ಅಲ್ಲಾಹನೊಂದಿಗೆ ಸೆಣಸಲು ಯಾರಿಗೆ ಸಾಧ್ಯ? ಮುಹಮ್ಮದ್(ಸ) ಮತ್ತು ಅವರ ಸಂದೇಶವನ್ನು ವಿರೋಧಿಸುವುದೆಂದರೆ, ವಾಸ್ತವದಲ್ಲಿ

ಅಲ್ಲಾಹನ ವಿರುದ್ಧ ಹೋರಾಟಕ್ಕಿಳಿದಂತೆ.

ಖಡ್ಗಗಳು ಮಾತ್ರವಲ್ಲ, ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಸಂದೇಶದ ವಿರುದ್ಧ ಲೇಖನಿ, ಪುಸ್ತಕ ಮತ್ತು ನಾಲಗೆಗಳೂ ಯುದ್ಧ ಸಾರಿದುವು. ಶೈತಾನನು ಸುಳ್ಳು ಮತ್ತು ಕಪಟ ಪ್ರವಾದಿಯ ರೂಪದಲ್ಲಿ ಬಂದ. ಆದರೆ ಮಿಥ್ಯಕ್ಕೆಂದೂ ಯಶಸ್ಸು ಲಭಿಸಿದ್ದಿಲ್ಲ. ಸುಳ್ಳು ಯಾವಾಗಲೂ ಸುಳ್ಳೆಂದೇ ಸಾಬೀತಾಗಿ ಬಿಡುತ್ತದೆ. ಅಂತಃಚಕ್ಷುಗಳು ಮತ್ತು ಸೂಕ್ಷ್ಮಗ್ರಾಹಿಗಳಾದ ಸುಜ್ಞಾನಿಗಳ ಕಣ್ಣಿಗೆ ಮಣ್ಣೆರಚಲು ಅವುಗಳಿಂದ ಸಾಧ್ಯವಾಗಿಲ್ಲ. ಮುಗ್ಧರು, ದೌರ್ಭಾಗ್ಯವಂತರು ಮತ್ತು ಮತ್ಸರಿಗಳು ಈ ಮೋಸದ ಜಾಲದಲ್ಲಿ ಸಿಲುಕಿ ಬಿಟ್ಟರು. ಅದು ಸ್ವಾಭಾವಿಕವೇ. ಶೈತಾನನಿಗೆ ಇಹಲೋಕದಲ್ಲಿ ತನ್ನ ಕಾರ್ಯ ಸಾಧಿಸಲು ಸಹಾಯಕರು ಮತ್ತು ಸೇವಕರ ಅಗತ್ಯ ಇದ್ದೇ ಇದೆ. ಪ್ರವಾದಿ ವಚನಗಳ ಮುಂದೆ ಶೈತಾನಿ ವಚನಗಳು ಸದಾ ಕಾಲು ಕೆರೆದು ಜಗಳ ಕಾಯುವುದು ಇದ್ದೇ ಇದೆ. ಇದರಲ್ಲಿ ಪ್ರಕೃತಿಯ ಅಪಾರ ಯುಕ್ತಿಯು ಅಡಗಿದೆ. ಆದರೆ ಸತ್ಯದ ಪ್ರತಿಪಾದಕರು ಈ ಮಿಥ್ಯ ಮತ್ತು ಕುಫ್ರ್‌ನ ಆಟೋಪ ಅಥವಾ ಕೀಟಲೆಗಳಿಂದ ಕಳವಳಗೊಳ್ಳುವುದಿಲ್ಲ. ಈ ಫಿತ್ನಃ (ಕ್ಷೋಭೆ) ಮತ್ತು ಅಕ್ರಮಗಳನ್ನು ನೋಡಿ ಅವರ ಈಮಾನ್ ಇನ್ನಷ್ಟು ಗಟ್ಟಿಗೊಳ್ಳುತ್ತದೆ ಮಾತ್ರವಲ್ಲ, ಅವರು ಹೆಚ್ಚೆಚ್ಚು ಕ್ರಿಯಾಶೀಲರಾಗಿ ಮಾರ್ಪಡುತ್ತಾರೆ.

ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಸಂದೇಶವು ಶಾಶ್ವತವಾದುದು. ಅವರ ಕಾರ್ಯವು ಸದಾ ಜೀವಂತವಿರುವಂತಹದ್ದು. ಅವರ ಬಾಯಿಯಿಂದ ಹೊರಟ ಒಂದೊಂದು ಶಬ್ದವೂ ಜೀವಂತವಿದೆ. ಪಾವನ ಜೀವನದ ಒಂದೊಂದು ಘಟನೆಯೂ ಜೀವಂತ ಮತ್ತು ಶಾಶ್ವತ ಮಾದರಿಯಾಗುಳಿದಿದೆ. ಹಾಗಿದ್ದ ಮೇಲೆ ನಿಧನ, ಅಂತ್ಯ ಅನ್ನುವುದಕ್ಕೆ ಏನರ್ಥ!? ಮುಹಮ್ಮದರ್‌ರಸೂಲುಲ್ಲಾಹ್(ಸ) ಹದಿನಾಲ್ಕು ಶತಮಾನಗಳ ಹಿಂದೆ ಇದ್ದಂತೆ, ಇಂದೂ ಪ್ರವಾದಿಯಾಗಿದ್ದಾರೆ. ಸಕಲ ಉತ್ತಮ ನಾಯಕತ್ವದ ಕೇಂದ್ರ ಬಿಂದು ಈಗಲೂ ಮುಹಮ್ಮದ್‌ರ(ಸ) ವ್ಯಕ್ತಿತ್ವವಾಗಿದೆ. ಇನ್ನು ನಾಯಕತ್ವ ಮತ್ತು ಕೇಂದ್ರವು ಸತ್ಯ-ನ್ಯಾಯ ದಿಂದ ವ್ಯತಿಚಲಿಸಿದರೆ, ಅದು ಖಂಡಿತವಾಗಿಯೂ ಅಜ್ಞಾನದ ಅಂಧಕಾರದಲ್ಲಿ ಮುಳುಗಿ ಬಿಡುತ್ತದೆ. ಸಮುದಾಯದಲ್ಲಿ ಲಕ್ಷಾಂತರ 'ಕಮಾಲ್ ಅತಾತುರ್ಕ'ರು ಹುಟ್ಟಿ ಬಂದರೂ ಸರಿಯೇ.

ಅದಿಯ್ಯ್ ಕಂಡದ್ದೇನು?

ಮುಹಮ್ಮದರ್‌ರಸೂಲುಲ್ಲಾಹ್(ಸ) ನಿಸ್ಸಂಶಯವಾಗಿಯೂ ಅಲ್ಲಾಹನ ದಾಸ ಮತ್ತು ಸೃಷ್ಟಿಶ್ರೇಷ್ಠರಾಗಿದ್ದರು. ಈ ದೇವದಾಸ್ಯವೇ ಅವರ ಗುಣವಿಶೇಷತೆಗೆ ಸಾಕ್ಷ್ಯ ವಾಗಿದೆ. ಆದರೆ ಎಂತಹ ದಾಸ? ಸ್ವರ್ಗದ ಸುವಾರ್ತೆಯನ್ನು ಹೊಂದಿದ್ದವರು. ಸ್ವರ್ಗವು ಅವರಿಗೆ ಬರೆಯಲ್ಪಟ್ಟಿತ್ತು. ಅವರು(ಸ) ಕಂದಕ ಯುದ್ಧದ ವೇಳೆ ಭಾರೀ ಬಂಡೆ ಯೊಂದನ್ನು ಗುದ್ದಲಿಯಿಂದ ಒಡೆಯುವಾಗ, ಅದರಿಂದೆದ್ದ ಕಿಡಿಯ ಪ್ರಕಾಶದಲ್ಲಿ ಸಲ್ಮಾನುಲ್ ಫಾರ್ಸಿಯವರು(ರ) ಸಿರಿಯ, ಈಜಿಪ್ಟ್, ಇರಾನ್‌ಗಳ ಕೆಲವು ಪ್ರದೇಶ ಗಳನ್ನು ಕಂಡಿದ್ದರು. ಮುಂದೆ ಇಸ್ಲಾಮಿನ ಧ್ವಜವು ಅಲ್ಲೆಲ್ಲ ಹಾರಾಡಿದುವು.

ಹಾತಿಮ್ ತಾಯಿಯವರನ್ನು ತಿಳಿಯದವರು ಯಾರೂ ಇರಲಿಕ್ಕಿಲ್ಲ. ಉದಾರ ಶೀಲತೆ ಮತ್ತು ದಾನ-ಧರ್ಮವು ಅವರ ಶಿರಕ್ಕೆ ಶಾಶ್ವತ ಖ್ಯಾತಿಯ ಕಿರೀಟವನ್ನು ತೊಡಿಸಿತ್ತು. ಆ ಹಾತಿಮ್‌ರ ಪುತ್ರ ಅದಿಯ್ಯ್... ತ್ವೈ ಗೋತ್ರದ ಹೆಸರಾಂತ ಸರದಾರ! ಅದಿಯ್ಯ್ ಬಿನ್ ಹಾತಿಮ್‌ರಿಗೂ ಇಸ್ಲಾಮಿನ ಅನುಗ್ರಹ ಮತ್ತು ಈಮಾನಿನ ಸಮೃದ್ಧಿ ಪ್ರಾಪ್ತವಾಗಿತ್ತು. ಪ್ರವಾದಿವರ್ಯರು(ಸ) ಅದಿಯ್ಯ್ ಬಿನ್ ಹಾತಿಮ್‌ರೊಡನೆ ಹೀಗೆ ಹೇಳಿದ್ದರು,

"ಅದೊಂದು ಕಾಲ ಬರಲಿದೆ. ಅಂದು ಕಾದಿಸಿಯ್ಯದಿಂದ ಓರ್ವ ಮಹಿಳೆ ಒಬ್ಬಂಟಿಯಾಗಿ ಹೊರಡುವುದನ್ನು ನೀವು ಕಾಣುವಿರಿ. ಆಕೆ ಮಕ್ಕಾಗೆ ಬಂದು ಹಜ್ಜ್ ನಿರ್ವಹಿಸುವಳು. ಆಕೆಗೆ ಯಾವುದೇ ರೀತಿಯ ಭಯ ಇರಲಾರದು. ಬ್ಯಾಬಿಲೋನಿಯದ ಶ್ವೇತ ಮಹಲು ಕೂಡ ಮುಸ್ಲಿಮರ ವಶವಾಗಲಿದೆ."

ಅದಿಯ್ಯ್‌ರವರು(ರ) ಆ ಭವಿಷ್ಯವಾಣಿಯ ಒಂದೊಂದು ಮಾತು ಸಾಕಾರಗೊಳ್ಳು ವುದನ್ನು ಕಣ್ಣಾರೆ ಕಂಡರು. ಕಾದಿಸಿಯ್ಯದಿಂದ ಓರ್ವ ಮಹಿಳೆ ಒಬ್ಬಂಟಿಯಾಗಿ ಮಕ್ಕಾಗೆ ಹಜ್ಜ್ ನಿರ್ವಹಿಸಲು ಬರುವುದನ್ನೂ ಅವರು ಕಂಡರು.

ಮುಹಮ್ಮದ್(ಸ), ಅಲ್ಲಾಹನ ಸಂದೇಶವಾಹಕರೂ ವಿನೀತ ದಾಸರೂ ಆಗಿದ್ದರು. ಅಂತೆಯೇ ಒಳಿತುಗಳ ಭಂಡಾರವಾಗಿದ್ದರು. ಹಲವೊಮ್ಮೆ ಮನೆಯಲ್ಲಿ ಒಲೆ ಉರಿಸ

ಲಾಗದ ಸ್ಥಿತಿಯೂ ಎದುರಾದದ್ದಿದೆ. ನಿರಂತರ ಹಸಿದದ್ದಿದೆ. ಅದೇ ವೇಳೆ, ಸ್ವಲ್ಪ ಆಹಾರದ ಮೇಲೆ ಪ್ರವಾದಿವರ್ಯರ(ಸ) ಪಾವನ ಹಸ್ತ ಸ್ಪರ್ಶವಾದದ್ದೇ ಒಂದಿಡೀ ತಂಡವು ಹಸಿವಿಂಗಿಸಿ ಕೊಂಡದ್ದಿದೆ. ಅಲ್ಪ ನೀರಿದ್ದ ಚೀಲದಲ್ಲಿ ಕೈಯದ್ದಿ ತೆಗೆದ ಮೇಲೆ ಬೆರಳ ತುದಿಗಳಿಂದ ಹರಿದು ಬಂದ ನೀರ ಚಿಲುಮೆಯಿಂದ ಇಡೀ ಯಾತ್ರಾ ತಂಡವೇ ದಾಹ ತಣಿಸಿದ್ದಿದೆ. ಹೀಗೆ ಹಲವು ಸಂದರ್ಭದಲ್ಲಿ ಅಲ್ಲಾಹನು ತನ್ನ ಸಂದೇಶವಾಹಕರ(ಸ) ಮೂಲಕ ಪವಾಡಗಳನ್ನು ಕಾಣಿಸಿದ್ದಿದೆ. ಈ ಸಂಗತಿಗಳನ್ನು ನಂಬಿದವರಿಗೆ ಶುಭ ಕಾಮನೆಗಳು, ನಂಬದವರ ಮೇಲೇನೂ ದೋಷವಿಲ್ಲ. ಆದರೆ ಸಂಶಯ ಪಿಶಾಚಿಗಳು ಮತ್ತು ಗೊಂದಲಕಾರಿಗಳಿಗೆ ಮಾತ್ರ ದೇವಕ್ರೋಧವೇ ಇನಾಮು.

ಎಲ್ಲರ ಪ್ರವಾದಿ(ಸ)

ಮುಹಮ್ಮದರ್‌ರಸೂಲುಲ್ಲಾಹ್‌ರಂತಹ(ಸ) ಪರಿಪೂರ್ಣ ವ್ಯಕ್ತಿತ್ವ ಇತಿಹಾಸದ ಬೇರಾವುದೇ ಪುಟದಲ್ಲಿ ಕಾಣಲು ಸಾಧ್ಯವಿಲ್ಲ ಎಂಬುದು ಅತಿಶಯೋಕ್ತಿಯಲ್ಲ. ಈ ಮಾತನ್ನು ಸಂಪೂರ್ಣ ಪ್ರಾಮಾಣಿಕತೆ ಮತ್ತು ಹೊಣೆಗಾರಿಕಾ ಪ್ರಜ್ಞೆಯೊಂದಿಗೆ ಹೇಳಬಲ್ಲೆ. ಕೆಲವರಲ್ಲಿ ಕೇವಲ ಕೃಪೆ ಮತ್ತು ಕ್ಷಮೆ ಇದ್ದರೆ, ಇನ್ನು ಕೆಲವರಲ್ಲಿ ಪ್ರಾಬಲ್ಯ ಮತ್ತು ಕ್ರೋಧ ಪ್ರದರ್ಶಿತವಾಗಿದೆ. ಕೆಲವರ ಜೀವನದಲ್ಲಿ ಲೌಕಿಕ ಆಧಿಪತ್ಯದ ಥಳಕು ಬಳಕು ಕಂಡರೆ, ಇನ್ನು ಕೆಲವರಲ್ಲಿ ಹಸಿವು ಮತ್ತು ವೈರಾಗ್ಯದ ಸಾಧನೆಯಿದೆ. ಅಷ್ಟು ಮಾತ್ರವಲ್ಲ, ಕೆಲವರು ಕೇವಲ ಕಲವಾನಿಗಳಿಗೆ ಸನ್ಮಾರ್ಗದರ್ಶನ ನೀಡಿದರೆ, ಇನ್ನು ಕೆಲವರ ಅಭಿಸಂಬೋಧಿತರು ಬನೀ ಇಸ್ರಾಈಲರಾಗಿದ್ದರು. ಕೆಲವರು ಬಾಲ್ಬಕ್ ಮತ್ತು ನೈನವಾದ ಪಥಭ್ರಷ್ಟರಿಗೆ ಮಾತ್ರ ಮಾರ್ಗದರ್ಶನ ನೀಡಿದರು. ಒಬ್ಬರು ಚೀನದ ಮಹಾ ಗೋಡೆಯಿಂದಾಚೆ ಹೆಜ್ಜೆ ಹಾಕಿದ್ದಿಲ್ಲ. ಇನ್ನೊಬ್ಬರ ಸಂದೇಶವು ಇರಾನಿನ ಪರಿಸರದಲ್ಲಿ ಪ್ರತಿಧ್ವನಿಸಿ ಕಾಲಗರ್ಭದಲ್ಲಿ ಸೇರಿ ಹೋಯಿತು. ಮತ್ತೊಬ್ಬರ ಕೊಳಲ ನಾದವು ವೃಂದಾವನದ ಸುತ್ತಮುತ್ತಲ ಕಿವಿಗಳಿಗೆ ಮುದ ನೀಡಿತು. ಆದರೆ ಅರೇಬಿಯದ ಆ ಪ್ರವಾದಿಯ(ಸ) ಸಂದೇಶವು ದೇಶ, ಭಾಷೆಗಳ ಗಡಿಗೆ ಸೀಮಿತವಾಗಲಿಲ್ಲ. ಮೆಡಿಟರೇನಿಯನ್ ಸಮುದ್ರ ತೀರದಲ್ಲಿ, ಹಿಂದೂ ಮಹಾಸಾಗರ ಮತ್ತು ರೋಮ್‌ಗಳ ದ್ವೀಪ-ಪರ್ಯಾಯ ದ್ವೀಪಗಳಲ್ಲಿ, ಯೂಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ದಂಡೆಯಲ್ಲಿ, ಸಿಂಧ್‌ನ ಮರುಭೂಮಿಯಲ್ಲಿ, ಬೆಸ್ತೂನಿನ ಕಣಿವೆಗಳಲ್ಲಿ, ಲೆಬನಾನ್ ಮತ್ತು ಅಲ್‌ಬರ್ಝ್‌ಗಳ ದಿಣ್ಣೆಗಳಲ್ಲಿ, ನೈಲ್ ನದಿ ಪರಿಸರದ ಹುಲ್ಲುಗಾವಲಿನಲ್ಲಿ, ಪ್ರೇನೀಝ್ ಪರ್ವತಗಳ ಶೃಂಗಗಳಲ್ಲಿ, ಇರಾನಿನ ಅಗ್ನಿಕುಂಡಗಳಲ್ಲಿ, ಭಾರತದ ಪುಣ್ಯ ಸ್ಥಳಗಳಲ್ಲಿ, ಇಗರ್ಜಿಗಳ ಮಿನಾರಗಳಲ್ಲಿ ಮತ್ತು ವಿಗ್ರಹಾಲಯಗಳ ಗೋಡೆ ಬಾಗಿಲು ಗಳಲ್ಲಿ ಆ ಸಂದೇಶವು ಪ್ರತಿಧ್ವನಿಸಿತು. ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಸಂದೇಶವು ಜನಾಂಗಗಳ ಅದೃಷ್ಟವನ್ನೇ ಬದಲಾಯಿಸಿ ಬಿಟ್ಟಿತು. ಬಿಳಿಯ, ಕರಿಯ, ಗೋಧಿ ವರ್ಣೀಯ, ಕೆಂಪುವರ್ಣೀಯ, ನೀಲವರ್ಣೀಯ, ಪೀತವರ್ಣೀಯ; ಹಿರಿಯ-ಕಿರಿಯ, ಪಂಡಿತ-ಪಾಮರ, ಸ್ತ್ರೀ-ಪುರುಷ, ಬಡವ-ಬಲ್ಲಿದ ಎಲ್ಲರೂ ತಂತಮ್ಮ ಶಕ್ತ್ಯಾನುಸಾರ ಈ

ಸಂದೇಶದಿಂದ ಪುನೀತರಾದರು. ಈ ಸಂದೇಶದ ಅನುಗ್ರಹದಿಂದಾಗಿಯೇ ಗುಲಾಮನು ಏಕಾಏಕಿ ದಲಿತಾವಸ್ಥೆಯಿಂದ ಜಿಗಿದು ನಾಯಕತ್ವ ಮತ್ತು ಆಡಳಿತಾಧಿಕಾರದ ಪೀಠದಲ್ಲಿ ಆಸೀನನಾದ. ಈ ಕ್ರಾಂತಿಯು ಮುಖ ಮತ್ತು ಭಾವದಲ್ಲಿ ಮಾತ್ರವಾಗಿರಲಿಲ್ಲ; ಬದಲಾಗಿ ದೃಷ್ಟಿ, ದೃಷ್ಟಿಕೋನ, ಚಿಂತನೆ, ಚಿತ್ತ ಮತ್ತು ಆಂತರ್ಯದ ಕ್ರಾಂತಿಯಾಗಿತ್ತು. ಈ ಕ್ರಾಂತಿಯು ಕಳ್ಳಕಾಕರನ್ನು, ಲೂಟಿಕೋರರನ್ನು ಅತ್ಯಂತ ಪ್ರಾಮಾಣಿಕರನ್ನಾಗಿಯೂ ಶಾಂತಿಪ್ರಿಯರನ್ನಾಗಿಯೂ ಮಾರ್ಪಡಿಸಿತ್ತು. ಕರ್ಮಭ್ರಷ್ಟರಲ್ಲಿ ಮತ್ತು ದುರಾಚಾರಿಗಳಲ್ಲಿ ಸಚ್ಚಾರಿತ್ರ್ಯ ಮತ್ತು ಪರಿಶುದ್ಧತೆಯ ಅದಮ್ಯ ಗುಣವೈಶಾಲ್ಯವನ್ನು ತುಂಬಿತು. ಈ ಕ್ರಾಂತಿಯು ಸದಾಚಾರಿ ನಾಗರಿಕತೆ ಮತ್ತು ಪರಿಶುದ್ಧ ಸಂಸ್ಕೃತಿಗೆ ಬುನಾದಿಯನ್ನು ಹಾಕಿತು. ಬುನಾದಿ ಮಾತ್ರವಲ್ಲ, ಇಡೀ ಕಟ್ಟಡವನ್ನೇ ನಿರ್ಮಿಸಿ ಬಿಟ್ಟಿತು. ಅದರ ಒಂದೊಂದು ಇಟ್ಟಿಗೆಯೂ ಉತ್ತಮ ಆಧಾರ-ಪ್ರಮಾಣ ಮತ್ತು ಚಾರಿತ್ರ್ಯ ನಿರ್ಮಾಣದ ಅನುಪಮ ಉದಾಹರಣೆಯಾಗಿದೆ.

ಪಕ್ಷಿನೋಟ

ಆರಾಧನೆ ಮತ್ತು ದಾಸ್ಯತನದ ಅವಸ್ಥೆ ನೋಡಿ- ರಾತ್ರಿಯಿಡೀ ಅಲ್ಲಾಹನ ಸನ್ನಿಧಿಯಲ್ಲಿ (ನಮಾಝ್‌ನಲ್ಲಿ) ನಿಂತುಕೊಂಡಿರುತ್ತಿದ್ದರು. ಅದರಿಂದಾಗಿ ಅವರ ಪಾದಗಳು ಬಾತು ಕೊಳ್ಳುತ್ತಿದ್ದುವು. ಸಂಗಾತಿಗಳು ವಿಚಾರಿಸುತ್ತಾರೆ, "ಯಾ ರಸೂಲುಲ್ಲಾಹ್(ಸ)! ಇಂತಹ ಸಂಕಷ್ಟ ಯಾಕೆ ಸಹಿಸುತ್ತೀರಾ? ಅಲ್ಲಾಹನು ತಮ್ಮ ಹಿಂದಿನ ಮತ್ತು ಮುಂದಿನ ಪಾಪ ಗಳನ್ನೆಲ್ಲ ಕ್ಷಮಿಸಿರುವನಲ್ಲವೇ?" ಸಹಾಬಿಗಳ ಈ ಪ್ರಶ್ನೆಗೆ ಮುಗುಳ್ನಕ್ಕು ನುಡಿಯುತ್ತಾರೆ, "ನಾನು ಅಲ್ಲಾಹನ ಕೃತಜ್ಞ ದಾಸನಾಗಬೇಡವೇ?"

ಧೀಮಂತಿಕೆಯ ಅವಸ್ಥೆ ನೋಡಿ- ಘನಘೋರ ಯುದ್ಧಗಳಲ್ಲಿ ರಕ್ತಪಾತದಿಂದ ಎಂತೆಂತಹ ಧೀರ-ಶೂರರೂ ಗಾಬರಿಗೊಳ್ಳುವಾಗ ಇವರು(ಸ) ರಣಾಂಗಣದಲ್ಲಿ ದೃಢವಾಗಿ ರುತ್ತಾರೆ... ಏನೂ ಸಂಭವಿಸಿಲ್ಲವೆಂಬಂತೆ. ಶಾಂತಿ, ಸಮಾಧಾನ, ನಿರ್ಭಯ ಮತ್ತು ದೇವಧ್ಯಾನದಲ್ಲಿ... ಖೈಬರ್ ವಿಜಯಿ, ಅಲ್ಲಾಹನ ಹುಲಿ ಹ. ಅಲಿ(ರ) ಹೇಳುತ್ತಾರೆ, "ಯುದ್ಧವು ತೀರಾ ಸಂಕಷ್ಟಮಯವಾಗತೊಡಗುವಾಗ ನಾವು ರಸೂಲುಲ್ಲಾಹ್‌ರ(ಸ) ಆಶ್ರಯ ಹುಡುಕುತ್ತಿದ್ದೆವು." ಹುನೈನ್ ಯುದ್ಧದಲ್ಲಿ ಸಹಾಬಿಗಳು ಅಸ್ಥಿರರಾಗಿ ಬಿಟ್ಟಾಗ, ಎಲ್ಲೆಡೆ ತಲ್ಲಣ ಮತ್ತು ಗಾಬರಿ ಆವರಿಸಿತ್ತು. ಆದರೆ ರಸೂಲುಲ್ಲಾಹ್(ಸ) ತಮ್ಮ ಜಾಗದಲ್ಲಿ ಅಚಲರಾಗಿದ್ದರು.

ಒಂದು ದಿನ ಮದೀನದ ಮೇಲೆ ಲೂಟಿಕೋರರ ಆಕ್ರಮಣವಾಗುತ್ತಿದೆ ಎಂಬ ಗುಲ್ಲು ಹಬ್ಬಿತು. ನಗರವಿಡೀ ಕೋಲಾಹಲವೆದ್ದಿತು. ತಾಯಂದಿರು ತಮ್ಮ ಮಕ್ಕಳನ್ನು ಎದೆಗವುಚಿ ಕೊಂಡರು. ಪ್ರತಿಯೋರ್ವ ವ್ಯಕ್ತಿಯೂ ಭೀತಿಗೊಳಗಾಗಿದ್ದ... ಎಂತಹ ಆಪತ್ತು ಎರಗೀತೋ... ಡಕಾಯಿತರು ಸಕಲ ಸಿದ್ಧತೆಯೊಂದಿಗೆ ಬಂದಿರಬಹುದು... ಇನ್ನು ಯಾರ ಹೆಂಡತಿ ವಿಧವೆಯಾಗುವಳೋ, ಯಾರ ಮಗು ಅನಾಥವಾಗುವುದೋ... ಏನು ಮಾಡುವುದು ಮತ್ತು ಏನು ಮಾಡಬಾರದು ಎಂದು ಜನ ಆಲೋಚಿಸ ಹತ್ತಿದರು. ಪ್ರವಾದಿ ವರ್ಯರು(ಸ) ಖಡ್ಗ ಹಿಡಿದು, ಅಶ್ವಾರೂಢರಾಗಿ ನಗರದ ಹೊರ ವಲಯಕ್ಕೆ ಹೊರಟರು. ಒಂದು ಸುತ್ತು ಹೊಡೆದು ಮರಳಿದರು. ತರುವಾಯ ಸಾಂತ್ವನದ ಧ್ವನಿಯಲ್ಲಿ ಅಂದರು. "ಜನರೇ! ಏನೂ

ಆಗಿಲ್ಲ... ಏನೂ ಇಲ್ಲ..."

ವಿನಮ್ರತೆಯ ಅವಸ್ಥೆ ನೋಡಿ- ಪ್ರವಾದಿವರ್ಯರು(ಸ) ಯಾರಲ್ಲಿಗಾದರೂ ಹೋದರೆ ಎತ್ತರದ ಅಥವಾ ಪ್ರಮುಖ ಸ್ಥಳದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಬದಲಾಗಿ ಸಾಮಾನ್ಯ ವ್ಯಕ್ತಿಯಂತೆ ಜನಸಾಮಾನ್ಯರ ನಡುವೆ ಅವರಿಗೆ ಸರಿ ಸಮಾನವಾಗಿ ಕುಳಿತು ಕೊಳ್ಳುತ್ತಿದ್ದರು.

ಶೈಮಾ, ಪ್ರವಾದಿವರ್ಯರ(ಸ) ಸ್ತನಪಾನ ಸಂಬಂಧಿ ಸೋದರಿಯಾಗಿದ್ದರು. ಹವಾಝಿನ್ ಗೋತ್ರದ ಜನರು ಬಂಧಿತರಾದಾಗ, ಶೈಮಾ ಕೂಡ ಅವರ ನಡುವೆ ಇದ್ದರು. ಅವರನ್ನು ಕಾಣುತ್ತಲೇ ಪ್ರವಾದಿವರ್ಯರು(ಸ) ತಮ್ಮ ಚದ್ದರವನ್ನು ನೆಲದ ಮೇಲೆ ಹರಡಿದರು. ಶೈಮಾರ ಪಾದಗಳು, ಮುಹಮ್ಮದರ್‌ರಸೂಲುಲ್ಲಾಹ್‌ರ(ಸ) ಚದ್ದರದ ಮೇಲೆ! ಏನಾಶ್ಚರ್ಯ!! ಆದರಿದರಲ್ಲಿ ಆಶ್ಚರ್ಯಪಡುವಂತಹದ್ದೇನಿದೆ!? ಪ್ರವಾದಿವರ್ಯರ(ಸ) ಕರುಣೆಯ ಸಾಗರವು ಇದೇ ರೀತಿ ಉಕ್ಕೇರುತ್ತದೆ.

ಒಮ್ಮೆ ನಡೆದ ಘಟನೆ: ಓರ್ವ ವ್ಯಕ್ತಿ ವಿಶ್ವಾಸಾಧಿಕ್ಯದಿಂದ ಪ್ರವಾದಿವರ್ಯರ(ಸ) ಪಾವನ ಹಸ್ತವನ್ನು ಚುಂಬಿಸಲು ಬಗ್ಗಿದರು. ಆದರೆ ಪ್ರವಾದಿವರ್ಯರು(ಸ) ತಮ್ಮ ಕೈಯನ್ನು ಹಿಂದಕ್ಕೆಳೆದು ಅಂದರು, "ಇದು ಅರಬೇತರರ ಸಂಪ್ರದಾಯವಾಗಿದೆ."

ಅಬಿಸೀನಿಯ(ಇತಿಯೋಪಿಯ)ದ ರಾಜ ನಜ್ಜಾಶಿಯು, ತನ್ನ ಕೆಲವು ರಾಯಭಾರಿಗಳನ್ನು ಪ್ರವಾದಿವರ್ಯರ(ಸ) ಸನ್ನಿಧಿಗೆ ಕಳುಹಿಸಿದರು. ಆ ಜನರ ಆತಿಥ್ಯದಲ್ಲಿ ರಸೂಲುಲ್ಲಾಹ್‌ರು(ಸ) ಸ್ವಯಂ ತೊಡಗಿಕೊಂಡರು. ಸಹಾಬಿಗಳೆಂದರು, "ಓ ಅಲ್ಲಾಹನ ಸಂದೇಶವಾಹಕರೇ(ಸ)! ತಾವೇಕೆ ಕಷ್ಟಪಡುತ್ತೀರಿ? ಈ ಕೆಲಸವನ್ನು ನಮಗೆ ಬಿಡಿ." ಪ್ರವಾದಿವರ್ಯರೆಂದರು(ಸ), "ಅವರು ನನ್ನ ಸಂಗಾತಿಗಳನ್ನು ಸತ್ಕರಿಸಿದ್ದರಲ್ಲವೇ? ನಾನು ಅವರ ಆ ಔದಾರ್ಯಕ್ಕೆ ಪ್ರತಿಫಲ ನೀಡಬೇಡವೇ?"

ವೈರಾಗ್ಯದ ಅವಸ್ಥೆ ನೋಡಿ- ತಮ್ಮ ಕುಟುಂಬದ ಜನರಿಗೆ ಝಕಾತ್ ಪಡೆಯು ವುದನ್ನು ಪ್ರವಾದಿವರ್ಯರು(ಸ) ನಿಷಿದ್ಧಗೊಳಿಸಿರುವರು. ಮಾತ್ರವಲ್ಲ, "ಯಾರಾದರೂ ಮುಸ್ಲಿಮನು ಮರಣ ಹೊಂದಿದರೆ, ಅವನ ಸಾಲವನ್ನು ನಾನು ತೀರಿಸುವೆನು ಮತ್ತು ಅವನ ಕುಟುಂಬಿಕರೇ ಅವನ ಸಂಪತ್ತಿನ ವಾರೀಸುದಾರರಾಗಿರುವರು" ಎಂದು ಸಾರಿದ್ದಾರೆ.

ಪ್ರಿಯ ಪುತ್ರಿ ಫಾತಿಮರ(ರ) ಬಳಿ ತಲೆ ಮರೆಸಲು ಸರಿಯಾದ ಬಟ್ಟೆ ಇದ್ದಿರಲಿಲ್ಲ. ಇತ್ತ ಪ್ರವಾದಿವರ್ಯರು(ಸ) ಜನರಲ್ಲಿ ಧನ ವಿತರಣೆ ಮಾಡುತ್ತಿದ್ದರು. ಹಲವೊಮ್ಮೆ ಬೇಡುವವರು ಬಂದಾಗ ಆಡಿನ ಹಾಲು ಅಥವಾ ಹಿಟ್ಟನ್ನು ಕೊಟ್ಟು ಬಿಡುತ್ತಿದ್ದರು ಮತ್ತು ಮನೆ ಮಂದಿ ಅಂದು ಹಸಿದಿರಬೇಕಾಗುತ್ತಿತ್ತು.

ಪ್ರವಾದಿವರ್ಯರು(ಸ) ಯಾರಿಗಾದರೂ ಜಿನಸು ತೂಗಿ ಕೊಡುವಾಗ ತಟ್ಟೆಯು ತೀರಾ ಕೆಳಮುಖವಾಗುವಂತೆ ತೂಗುತ್ತಿದ್ದರು. ಆದರೆ ಯಾರಿಂದಲಾದರೂ ಪಡೆಯುವಾಗ ಅದರ

ಬಗ್ಗೆ ಗಮನ ಕೊಡುತ್ತಿರಲಿಲ್ಲ. ತೂಗುವವ ಕಡಿಮೆ ತೂಗಿದರೂ ಪ್ರವಾದಿವರ್ಯರ(ಸ) ಮುಖಭಾವದಲ್ಲಿ ಒಂದಿನಿತೂ ಅಸಮಾಧಾನ ಗೋಚರಿಸುವುದಿಲ್ಲ. ಎಂದೂ ಸಂಪತ್ತನ್ನು ಶೇಖರಿಸಿದವರಲ್ಲ. ತಮ್ಮ ಬಳಿಗೆ ಬಂದದ್ದನ್ನೆಲ್ಲ ನಿಂತಲ್ಲಿಯೇ ಅವಶ್ಯಾರ್ಥಿಗಳಲ್ಲಿ ವಿತರಿಸಿ ಬಿಡುತ್ತಿದ್ದರು.

ಓರ್ವ ಅವಶ್ಯಾರ್ಥಿಯು ಪ್ರವಾದಿವರ್ಯರ(ಸ) ಸನ್ನಿಧಿಗೆ ಬಂದು ತನ್ನ ಅಹವಾಲನ್ನು ತೋಡಿಕೊಂಡ. ಪ್ರವಾದಿವರ್ಯರೆಂದರು(ಸ), "ಈಗ ನನ್ನ ಬಳಿ ಏನೂ ಇಲ್ಲ, ನೀನು ನನ್ನ ಹೆಸರಲ್ಲಿ ಯಾರಿಂದಲಾದರೂ ಸಾಲ ಪಡೆದುಕೋ, ನಿನ್ನ ಸಾಲವನ್ನು ನಾನು ತೀರಿಸುವೆನು." ಹ. ಉಮರುಲ್ ಫಾರೂಕ್(ರ) ಅಲ್ಲೇ ಕುಳಿತಿದ್ದರು. ಅವರೆಂದರು,

"ಅಲ್ಲಾಹನು ತಮ್ಮ ಮೇಲೆ ತಮ್ಮ ಶಕ್ತಿ-ಸಾಮರ್ಥ್ಯಕ್ಕಿಂತ ಹೆಚ್ಚು ಪರಿಶ್ರಮಪಡುವ ಕಷ್ಟವನ್ನು ಕೊಟ್ಟಿಲ್ಲ."

ಈ ಮಾತುಗಳನ್ನು ಕೇಳಿ ಪ್ರವಾದಿವರ್ಯರು(ಸ) ಮೌನ ತಾಳಿದರು. ಓರ್ವ ಅನ್ಸಾರಿಯು ಭಾವಪರವಶರಾಗಿ ಹೇಳಿದರು,

"ಯಾ ರಸೂಲುಲ್ಲಾಹ್(ಸ)! ಮನಸಾರೆ ನೀಡಿರಿ! ಅರ್ಶ್‌ನ ಪ್ರಭು ನಮ್ಮೊಡೆಯ ನಾಗಿದ್ದಾನೆ. ಹಾಗಿರುತ್ತಾ ದಾರಿದ್ರ್ಯದ ಭಯವೇತಕೆ?"

ಅನ್ಸಾರಿಯ ಮಾತು ಕೇಳಿ ಪ್ರವಾದಿವರ್ಯರಿಗೆ(ಸ) ನಗು ಬಂತು. ಅವರ ಮುಖಾರ ವಿಂದವು ಸಂತೋಷದಿಂದ ಅರಳಿತು. ತರುವಾಯ ಹೇಳಿದರು, "ಹೌದು, ನನಗೆ ಅದನ್ನೇ ಆದೇಶಿಸಲಾಗಿದೆ."

❖ ❖ ❖ ❖

ಮದೀನದಲ್ಲಿ ಓರ್ವ ಶುದ್ಧ ಮನಸ್ಸಿನ ಸಚ್ಚಾರಿತ್ರ್ಯವಂತ ಯಹೂದಿಯಿದ್ದ. ಇಸ್ಲಾಮಿನ ಬಗ್ಗೆ ಆತ ಬಹಳಷ್ಟನ್ನು ಕೇಳಿದ್ದ. ಆದರೆ ಆ ಇದ್ದಲ ತುಂಡಿಗೆ ಅಪರಂಜಿ ಯಾಗಲು ಒಂದಿಷ್ಟು ಕುಲುಮೆಯ ಬಿಸಿ ತಾಗಲು ಬಾಕಿಯುಳಿದಿತ್ತು.

ಪ್ರವಾದಿಗಳು ಧೀಮಂತರೂ ಸಹನಾಶೀಲರೂ ಆಗಿರುತ್ತಾರೆ ಎಂಬುದನ್ನು ಆ ಯಹೂದಿಯು ತನ್ನ ಧರ್ಮ ಗ್ರಂಥಗಳಲ್ಲಿ ಓದಿ ತಿಳಿದಿದ್ದ. ಹಾಗಾಗಿ ಆತ ಪ್ರವಾದಿ ಮುಹಮ್ಮದ್‌ರನ್ನು(ಸ) ಪರೀಕ್ಷಿಸಬಯಸಿದ. ಒಮ್ಮೆ ಆತ ಅವಕಾಶ ಕಾದು ಪ್ರವಾದಿ ವರ್ಯರಿಗೆ(ಸ) ಒಂದಿಷ್ಟು ಖರ್ಜೂರಗಳನ್ನು ಸಾಲವಾಗಿ ನೀಡಿದ. ಆದರೆ ಸಾಲ ಸಂದಾಯಕ್ಕೆ ನಿಗದಿಪಡಿಸಲಾಗಿದ್ದ ದಿನಕ್ಕಿಂತ ಮೊದಲೇ ಬಂದ ಆತ ಪ್ರವಾದಿವರ್ಯರ(ಸ) ಬಳಿ ಬಂದು, ಅವರ ಚದ್ದರವನ್ನು ಹಿಡಿದು ಜೋರಾಗಿ ಎಳೆದು ಹೇಳಿದ,

"ಮುಹಮ್ಮದ್! ಪಡೆದ ಸಾಲವನ್ನು ಮರಳಿಸುವುದಿಲ್ಲವೇಕೆ? ದೇವನಾಣೆ! ನೀವು ಅಬ್ದುಲ್ ಮುತ್ತಲಿಬ್‌ರ ಸಂತಾನವು ಸಾಲ ತೀರಿಸದ ಜನರಾಗಿದ್ದೀರಿ!"

ಅದನ್ನು ಕೇಳಿ ಹ. ಉಮರ್(ರ) ರೋಷಾಕುಲರಾಗಿ ಗರ್ಜಿಸಿದರು,

"ಹೇ ಅಲ್ಲಾಹನ ವೈರಿಯೇ! ಪ್ರವಾದಿವರ್ಯರ(ಸ) ಆಜ್ಞೋಲ್ಲಂಘನೆಯ ಭಯ ಇಲ್ಲದಿರುತ್ತಿದ್ದರೆ, ನಿನ್ನ ಈ ದುರ್ವರ್ತನೆಗೆ ಪ್ರತಿಯಾಗಿ ನಿನ್ನ ತಲೆ ಕಡಿಯುತ್ತಿದ್ದೆ."

ಪ್ರವಾದಿವರ್ಯರು(ಸ) ಉಮರ್‌ರೆಡೆಗೆ(ರ) ಮುಗುಳ್ನಗುತ್ತಾ ನೋಡಿದರು ಮತ್ತು ಶಾಂತವಾಗಿ ಹೇಳಿದರು,

"ಉಮರ್! ನೀವು ನನ್ನೊಡನೆ ಸಾಲ ಮರುಪಾವತಿಸಲು ಹೇಳಬೇಕಿತ್ತು. ಈಗ ಹೋಗಿ, ಆತನ ಸಾಲ ಸಂದಾಯ ಮಾಡಿರಿ. ಜತೆಗೆ ಆತನನ್ನು ಗದರಿಸಿದ್ದಕ್ಕೆ ಮತ್ತು ಬೆದರಿಸಿದ್ದಕ್ಕೆ ಪ್ರತಿಯಾಗಿ ಇಪ್ಪತ್ತು ಸಾಅ್ (ಬೊಗಸೆ) ಖರ್ಜೂರ ಹೆಚ್ಚುವರಿಯಾಗಿ ನೀಡಿರಿ."

ಈಗ ಯಹೂದಿ ಯುವಕನ ಮುಂದೆ ಸತ್ಯವು ಸಂಪೂರ್ಣ ಸಾಕ್ಷಾತ್ಕಾರದೊಂದಿಗೆ ಅನಾವರಣಗೊಂಡಿತು. ಚಿಂತನೆ ನಡೆಸುವ ಅಗತ್ಯ ಇನ್ನು ಇಲ್ಲವಾಯಿತು. ಆ ಕೂಡಲೇ ಆತ ಸತ್ಯವಿಶ್ವಾಸ ಸ್ವೀಕರಿಸಿದ ಮತ್ತು ದೇವಕ್ರೋಧಕ್ಕೆ ಪಾತ್ರವಾದ ಜನಾಂಗದಿಂದ ದೇವಕೃಪೆಗೆ ಅರ್ಹವಾದ ಗುಂಪಿನಲ್ಲಿ ಸೇರಿಕೊಂಡ.

❖ ❖ ❖ ❖

ರಸೂಲುಲ್ಲಾಹ್(ಸ) ತಮ್ಮ ಕೆಲಸವನ್ನು ತಾವೇ ಮಾಡುತ್ತಿದ್ದರು. ಬಟ್ಟೆ ಒಗೆಯುತ್ತಿದ್ದರು, ಚಪ್ಪಲಿಯನ್ನು ಹೊಲಿಯುತ್ತಿದ್ದರು, ಜಾನುವಾರುಗಳಿಗೆ ಮೇವು ತಿನ್ನಿಸುತ್ತಿದ್ದರು, ಸೇವಕರೊಂದಿಗೆ ಒಂದೇ ಊಟದ ಹಾಸಿನಲ್ಲಿ ಕುಳಿತು ಆಹಾರ ಸೇವಿಸುತ್ತಿದ್ದರು, ಹಿರಿಯ-ಕಿರಿಯರೆಲ್ಲರಿಗೂ ಸಲಾಮ್ ಹೇಳುತ್ತಿದ್ದರು, ಸಲಾಮ್ ಹೇಳಲು ಮೊದಲು ಮುಂದಾಗುತ್ತಿದ್ದರು ಮತ್ತು ಜನರು ಸಲಾಮ್ ಹೇಳಲಿ ಎಂದು ಕಾಯುತ್ತಿರಲಿಲ್ಲ; ತೀರಾ ಸರಳವಾದ ವಸ್ತ್ರ ತೊಡುತ್ತಿದ್ದರು ಮತ್ತು ಸರಳ ಭೋಜನ- ಏನು ಸಿಕ್ಕಿತೋ ಅದನ್ನು- ಸೇವಿಸುತ್ತಿದ್ದರು, ಎಂದೂ ಆಹಾರದಲ್ಲಿ ಕೊರತೆಯನ್ನು ಎತ್ತಿ ಹೇಳುತ್ತಿರಲಿಲ್ಲ.

ಅನಸ್ ಬಿನ್ ಮಾಲಿಕ್(ರ) ಹಲವು ವರ್ಷಗಳ ಕಾಲ ಪ್ರವಾದಿವರ್ಯರ(ಸ) ಸೇವೆಗೈಯುತ್ತಿದ್ದರು. ಆದರೆ ಪ್ರವಾದಿವರ್ಯರು(ಸ) ಎಂದೂ ಅವರ ಯಾವುದೇ ಕೆಲಸದ ಬಗ್ಗೆ ಗದರಿಸಿದವರಲ್ಲ. ಹಾಗೆಯೇ ಸ್ವಂತಕ್ಕಾಗಿ ಯಾರ ಮೇಲೂ ಸೇಡು ತೀರಿಸಿದವರಲ್ಲ, ಯಾರೊಂದಿಗೂ ಜಗಳಾಡಿದವರಲ್ಲ ಮತ್ತು ಯಾರದೇ ಅತಿರೇಕದ ಮಾತಿಗೆ ಕೋಪಗೊಂಡವರಲ್ಲ. ಆದರೆ ಧರ್ಮದ ವಿಷಯದಲ್ಲಿ ಅವರು ಮಹಾ ಪ್ರತಾಪಿಯಾಗಿ ಬಿಡುತ್ತಿದ್ದರು. ಓರ್ವ ಯಹೂದಿ ಬಾಲಕ ಅವರ ಸೇವೆಗೈಯುತ್ತಿದ್ದ. ಒಮ್ಮೆ ಆತ ಅನಾರೋಗ್ಯಕ್ಕೀಡಾದಾಗ ಪ್ರವಾದಿವರ್ಯರು(ಸ) ಅವನನ್ನು ಕಾಣಲು ನಡೆದುಕೊಂಡೇ ಹೋಗಿದ್ದರು.

ಅಗತ್ಯ ಮತ್ತು ಕಾರಣವಿಲ್ಲದೆ ಅವರು ಮಾತನಾಡುತ್ತಿರಲಿಲ್ಲ. ಹೆಚ್ಚಾಗಿ ಮೌನಿಯಾಗಿರುತ್ತಿದ್ದರು. ಅಗತ್ಯ ಬಿದ್ದಾಗ 'ವಹೀ' (ದಿವ್ಯವಾಣಿ)ಯ ಮಾತನ್ನು ಹೆಚ್ಚು ಹೊತ್ತು

ಉಲ್ಲೇಖಿಸುತ್ತಿದ್ದರು. ಮಾತನ್ನು ತಡೆತಡೆದು ಉಚ್ಚರಿಸುತ್ತಿದ್ದರು. ಆಗ ಯಾರಾದರೂ ಅವರಾಡುವ ಪದಗಳನ್ನು ಎಣಿಕೆ ಮಾಡಲಿಚ್ಛಿಸಿದರೆ, ಸುಲಭದಲ್ಲಿ ಎಣಿಸಬಹುದಿತ್ತು. ಯಾರಾದರೂ ವ್ಯಕ್ತಿಗೆ ಉಪದೇಶ ನೀಡಲಿಕ್ಕಿದ್ದರೆ, ತುಂಬಿದ ಸಭೆಯಲ್ಲಿ ಆ ವ್ಯಕ್ತಿಯ ಹೆಸರೆತ್ತದೆ ಹೀಗೆ ಹೇಳುತ್ತಿದರು,

"ಇತ್ತೀಚೆಗೆ ಜನರು ಹೀಗೆ ಹೀಗೆ ಮಾಡತೊಡಗಿದ್ದಾರೆ."

ಯಾರಾದರೊಬ್ಬ ವ್ಯಕ್ತಿ, ತನ್ನಿಂದಾದ ತಪ್ಪಿಗೆ ಲಜ್ಜಿತನಾಗಿ ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದರೆ, ಅವರು(ಸ) ಸ್ವಯಂ ಲಜ್ಜೆಯಿಂದ ತಲೆ ತಗ್ಗಿಸುತ್ತಿದ್ದರು. ಯೊಹಾನರ ಸುವಾರ್ತೆಯಲ್ಲಿ ಪ್ರವಾದಿವರ್ಯರು(ಸ) ಮಕ್ಕಾ ನಗರಕ್ಕೆ ವಿಜಯಿಯಾಗಿ ಪ್ರವೇಶಿಸುವುದರ ಬಗ್ಗೆ ಹೀಗೆ ಬರೆಯಲಾಗಿದೆ,

"ಅವರ ವಸ್ತ್ರದಲ್ಲಿ ರಾಜಾಧಿರಾಜ ಮತ್ತು ಮಹಾದೇವ ಎಂದು ಬರೆಯಲಾಗಿರುವುದು."

ಭೇದಗಳನ್ನು ಅರಿಯುವವರು ನೂರಾರು ವರ್ಷಗಳ ಹಿಂದೆಯೇ ಪ್ರವಾದಿವರ್ಯರ(ಸ) ಹಿಂದೆ ಶಿಸ್ತುಬದ್ಧರಾಗಿ ನಡೆಯುವ ಸೇನೆಯನ್ನೂ ತಮ್ಮ ಅಂತಃದೃಷ್ಟಿಯಲ್ಲಿ ಕಂಡಿದ್ದಾರೆ. ಯೋಹಾನರ ಇದೇ 'ರಾಜಾಧಿರಾಜ' ಮಕ್ಕಾ ನಗರ ಪ್ರವೇಶಿಸುವಾಗ ತಲೆ ಎಷ್ಟು ತಗ್ಗಿಸಿದ್ದರೆಂದರೆ ಹಣೆಯು ಜೀನಿಗೆ ತಾಗುತ್ತಿತ್ತು!

❖ ❖ ❖ ❖

ಹ. ಉಮರ್(ರ) ವರದಿ ಮಾಡಿರುವರು: ಒಮ್ಮೆ ನಾನು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದೆ. ಅವರು(ಸ) ಲುಂಗಿ ಉಟ್ಟುಕೊಂಡು ಚಾಪೆಯಲ್ಲಿ ಮಲಗಿ ವಿಶ್ರಾಂತಿ ಪಡೆಯುತ್ತಿದ್ದರು. ಅವರ ಬೆನ್ನ ಮೇಲೆ ಚಾಪೆಯ ಅಚ್ಚು ಚೆನ್ನಾಗಿ ಕಾಣುತ್ತಿತ್ತು. ಮನೆಯ ಒಂದು ಮೂಲೆಯಲ್ಲಿ ಒಂದೆರಡು ಸೇರು ಜೋಳವಿತ್ತು ಹಾಗೂ ಗೋಡೆಯ ಮೇಲೆ ಚರ್ಮವು ನೇತಾಡುತ್ತಿತ್ತು. ಈ ದಟ್ಟದಾರಿದ್ರ್ಯ ಕಂಡು ನನ್ನ ಕಣ್ಣಾಲಿಗಳು ತುಂಬಿ ಬಂದುವು. ಪ್ರವಾದಿವರ್ಯರು(ಸ) ನನ್ನ ಕಂಗಳ ಆರ್ದ್ರತೆಯನ್ನು ಕಂಡು ವಿಚಾರಿಸಿದರು,

"ಓ ಇಬ್ನು ಖತ್ತಾಬ್! ನೀವೇಕೆ ಅಳುತ್ತಿದ್ದೀರಿ?"

ನಾನು ಹೇಳಿದೆ,

"ಯಾ ರಸೂಲುಲ್ಲಾಹ್(ಸ)! ನಾನು ಅಳದೆ ಇನ್ನೇನು ಮಾಡಲಿ? ಕೈಸರ್, ಕಿಸ್ರಾರುಗಳು ಸ್ವರ್ಣ ಪೀಠ ಮತ್ತು ಮೆತ್ತನೆಯ ರೇಶ್ಮೆಯ ಹಾಸುಗಳಲ್ಲಿ ಆನಂದ ಪಡುತ್ತಿದ್ದರೆ, ತಾವು ಅಲ್ಲಾಹನ ಸಂದೇಶವಾಹಕರಾಗಿರುತ್ತಾ ಅತ್ಯುನ್ನತ ಸ್ಥಾನ ಹೊಂದಿದ್ದೂ ಈ ಸ್ಥಿತಿಯಲ್ಲಿ ಚಾಪೆಯಲ್ಲಿ..."

ನನ್ನ ಉತ್ತರ ಕೇಳಿ ಇತೆಂದರು,

"ಇಬ್ನು ಖತ್ತಾಬ್! ಅವರಿಗೆ ಇಹಲೋಕ ಮತ್ತು ನಮಗೆ ಪರಲೋಕ ವಿಧಿಸಲಾಗಿರುವುದು

ನಿಮಗೆ ಒಪ್ಪಿಗೆಯಿಲ್ಲವೇ?"

...ಅಲ್ಲಿದೆ ನಮ್ಮನೆ, ಇಲ್ಲಿರುವುದು ಸುಮ್ಮನೆ...

ನನ್ನೀ ಲೇಖನಿಯು ಕಾಗದದ ಸಾವಿರಾರು ಗೆರೆಗಳನ್ನು ದಾಟಿ ಬಂದಿದೆ... ಆದರೆ ಅಂತ್ಯ ಪ್ರವಾದಿ ಮುಹಮ್ಮದ್‌ರವರ(ಸ) ಒಂದೇ ಒಂದು ಗುಣ ವಿಶೇಷತೆಯ ಬಗ್ಗೆ ಸಂಪೂರ್ಣ ಚಿತ್ರಣವನ್ನು ಉಲ್ಲೇಖಿಸಲು ಇದು ಸಫಲವಾಗಿಲ್ಲ... ಜ್ಞಾನಚಕ್ಷುಗಳು ಮತ್ತು ಸಾಹಿತ್ಯಾಸಕ್ತರ ಮಟ್ಟಿಗೆ ಈ ಅಪೂರ್ಣ ವಾಕ್ಯಗಳಲ್ಲಿಯೇ ಬಹಳಷ್ಟು ಪಾಠಗಳು ಸಿಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಚಿತ್ತದಲ್ಲಿ ಸಂವೇದನೆ ಮತ್ತು ಮನದಲ್ಲಿ ನಿಷ್ಕಳಂಕತೆ ಇದ್ದರೆ ಎಲೆ-ಪುಷ್ಪಗಳಲ್ಲಿಯೂ ಪಾಠವನ್ನು ಪಡೆಯಲಿಕ್ಕೆ ಸಾಧ್ಯ. ಜ್ಞಾನಚಕ್ಷುಗಳಿಗಂತೂ ಹುಲ್ಲಿನ ಒಂದು ಎಸಳು ಕೂಡ ಪ್ರಕೃತಿಯ ಮಹಾನ್ ಗ್ರಂಥ(ರಹಸ್ಯ)ವಾಗಿ ಕಾಣ ತೊಡಗುತ್ತದೆ. ಈ ಕೃತಿಯಲ್ಲಿಯಂತೂ ಸತ್ಯಸಂಗತಿಗಳನ್ನು ಉಲ್ಲೇಖಿಸಲಾಗಿದೆ. ಈ ಸಂಗತಿಗಳಲ್ಲಿ ಸತ್ಯವಿದೆ... ಜೀವನವಿದೆ... ಜೀವಂತಿಕೆಯಿದೆ...

ಇನ್ನು ಯಾರದಾದರೂ ಅಂತಃದೃಷ್ಟಿಗೆ ಅಂಧಕಾರ ಕವಿದಿದ್ದರೆ, ಅದಕ್ಕೆ ಯಾವುದೇ ಚಿಕಿತ್ಸೆಯಿಲ್ಲ. ಆದರೆ ಜ್ಞಾನದ ದೃಷ್ಟಿಯಲ್ಲಿ ಕೊಂಚವಾದರೂ ಪ್ರಕಾಶವಿದ್ದರೆ, 'ಅನಾಥ ಮುತ್ತು' ಓದಿ ಖಂಡಿತ ಹೀಗೆ ಹೇಳಲು ನಿರ್ಬಂಧಿತವಾದಾರು, "ಇದುವೇ ಜೀವನ! ಸತ್ಯ ಮತ್ತು ಪ್ರಾಮಾಣಿಕತೆಯ ಅಂತಿಮ ಮಾನದಂಡ!"

ರಮಝಾನಿನ 28ನೇ ಮುಂಜಾವು (ಹಿ.ಶ. 1368) ಮೂಡುವ ಹಂತದಲ್ಲಿದೆ... ಮುಂಜಾನೆಯ ತಂಗಾಳಿಯು ಮೈ-ಮನಗಳಿಗೆ ಮುದ ನೀಡುತ್ತಿದೆ... ಅಕ್ಕಪಕ್ಕದಲ್ಲಿ ಪವಿತ್ರ ಕುರ್‌ಆನ್ ಪಠಣದ ಮನಸೂರೆಗೊಳ್ಳುವ ಶಬ್ದವು ಕರ್ಣಗಳಿಗೆ ಇಂಪು ನೀಡುತ್ತಿದೆ. ಈ ಕಾದಂಬರಿಕಾರನು ಪವಿತ್ರ ಕುರ್‌ಆನಿನ ವಾಹಕರಿಗೆ ಸಲಾಮ್ ಅರ್ಪಿಸುತ್ತಿದ್ದಾನೆ.

ಲೋಕಾನುಗ್ರಹಿಗೆ ಸಲಾಮ್
ಅಂತ್ಯ ಪ್ರವಾದಿಗೆ ಸಲಾಮ್
ಮಾನವತೆಯ ಮಹಾನ್
ಉಪಕಾರಿಗೆ ಸಲಾಮ್
ಅಬ್ದುಲ್ಲಾರ ಅನಾಥಮುತ್ತಿಗೆ
ಸಲಾಮ್, ಸದಾ ಸಲಾಮ್

ಶಿಫಾರಸ್ಸಿನಾಕಾಂಕ್ಷಿ
ಮಾಹಿರುಲ್ ಕಾದ್ರಿ

ಣ•ಙ